
ಪಕ್ಷಿಗಳು

ಗ್ರಂಥಭಂಡಾರ
1850



K598
NAI

ಜಿ. ವಿ. ಬಿ. ನಾಯ್ಡು
ಚಂದ್ರಾ ಬಿ. ನಾಯ್ಡು

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಭಂಡಾರ
ಬೆಂಗಳೂರು-೧೯

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಇತರ ಪ್ರಕಟಣೆಗಳು – ೨೩

ಪ್ರಧಾನ ಸಂಪಾದಕರು
ಡಾ. ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಪ ಕ್ಷಿ ಗ ಳು

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಭಂಡಾರ
ಬೆಂಗಳೂರು-೧೯



ಇತರ ಪ್ರಕಟಣೆಗಳು – ೨೩

ಪಕ್ಷಿಗಳು

ಗ್ರಂಥಭಂಡಾರ
ಬೆಂಗಳೂರು-೧೯

ಜಿ. ವಿ. ಬಿ. ನಾಯ್ಡು
ಚಂದ್ರಾ ಬಿ. ನಾಯ್ಡು

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೦

PAKSHIGALU (Birds) by Sri G. V. B. Naidu & Smt. Chandra B. Naidu, published by the Director, Prasaranga, University of Mysore, Mysore 6 ; First Published 1970; Demy Octao xvi + 272 ; *Price :* Ordinary : Rs. 9=00 ; Special : Rs. 11=00

ಮೊದಲನೆಯ ಮುದ್ರಣ ೧೯೭೦

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಎಲ್ಲ ಹಕ್ಕುಗಳನ್ನೂ ಕಾದಿಡಲಾಗಿದೆ
ಕ್ರಮ ಸಂಖ್ಯೆ 1850
ವರ್ಗ
ವರ್ಗ ಸಂಖ್ಯೆ
ಬಂದ ತಾ|| 19-8-85
ಸಾಧಾರಣ ಪ್ರತಿ : ೯.೦೦
ಉತ್ತಮ ಪ್ರತಿ : ೧೧.೦೦

K598
NAI
29/12070

ಪ್ರಕಾಶಕರು :
ಡೈರೆಕ್ಟರ್, ಪ್ರಸಾರಾಂಗ
ಮಾನಸ ಗಂಗೋತ್ರಿ
ಮೈಸೂರು - ೬

ಮುದ್ರಕರು :
ವಿದ್ಯಾ ಮುದ್ರಣ
ನೂರಡಿ ರಸ್ತೆ
ಮೈಸೂರು - ೪

ಮುನ್ನುಡಿ

ಪ್ರಾಚ್ಯ ಪಾಶ್ಚಾತ್ಯ ಶಿಕ್ಷಣ ತಜ್ಞರು ಕೂಲಂಕಷವಾಗಿ ವಿಚಾರ ನಡೆಸಿ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂದು ಒಮ್ಮತದ ತೀರ್ಮಾನ ನೀಡಿರುವುದು ಸರ್ವವಿದಿತವಾಗಿದೆ. ಈ ನಿರ್ಧಾರವನ್ನು ಕೈಗೊಳ್ಳುವುದರಿಂದ ಮಾತ್ರವೇ ವಿದ್ಯಾಭ್ಯಾಸಕ್ಕೆ ಉಜ್ವಲವಾದ ಭವಿಷ್ಯವಿದೆ ಎಂಬುದನ್ನು ಮನಗಂಡ ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ದಿಟ್ಟತನದಿಂದ ಹೆಜ್ಜೆಯಿಡುತ್ತಿವೆ. ಕೇಂದ್ರ ಸರಕಾರವು ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯಪುಸ್ತಕಗಳು, ಸಹಾಯಕ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿತವಾಗಲಿ ಎಂಬ ಆಶಯದಿಂದ ಪ್ರತಿಯೊಂದು ರಾಜ್ಯ ಸರಕಾರದ ಮೂಲಕವೂ ಅಲ್ಲಿನ ವಿಶ್ವವಿದ್ಯಾನಿಲಯಗಳಿಗೆ ಒಂದು ಕೋಟಿ ರೂಪಾಯಿಗಳ ಸಹಾಯ ಧನವನ್ನು ನೀಡುವ ತೀರ್ಮಾನವನ್ನು ಕೈಗೊಂಡಾಗಿದೆ. ಆ ಹಣದ ವಿತರಣ ಕಾರ್ಯವೂ ಪ್ರಾರಂಭವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ ಕಳೆದ ಅನೇಕ ದಶಕಗಳಿಂದಲೂ ಈ ದಿಕ್ಕಿನಲ್ಲಿ ಗಣನೀಯವಾದ ಸಾಧನೆ ನಡೆಸಿದೆ. ಇಲ್ಲಿನ ಅನೇಕ ಕಾಲೇಜುಗಳಲ್ಲಿ ಅನೇಕ ವರ್ಷಗಳ ಹಿಂದೆಯೇ ಕನ್ನಡ ಮಾಧ್ಯಮ ತೆರೆಯಲಾಯಿತು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಮಾಧ್ಯಮ ಆರಿಸಿಕೊಂಡು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗಿಂತ ಉನ್ನತ ಮಟ್ಟದ ಪರಿಣತಿ ಪಡೆಯುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಮೈಸೂರಿನ ಒಂದು ಕಾಲೇಜಿನಲ್ಲಿ ಕನ್ನಡ ಮಾಧ್ಯಮವನ್ನು ಪ್ರಾರಂಭಿಸಿದ ವರ್ಷವೇ

ಅದನ್ನು ಆರಿಸಿಕೊಂಡವರಲ್ಲಿ ನೂರಕ್ಕೆ ನೂರು ಜನ ತೇರ್ಗಡೆ ಹೊಂದಿದರು ಎಂಬುದನ್ನು ನೆನೆಯುವುದರಲ್ಲಿ ಹೆಚ್ಚಿನ ವಿವೇಕವಿದೆ. ಅದರ ಮರುವರ್ಷದಿಂದಲೂ ಆ ಕಾಲೇಜಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇಕಡಾ 98ಕ್ಕೆ ಕಡಮೆಯಿಲ್ಲದಂತೆ ತೇರ್ಗಡೆ ಹೊಂದುತ್ತಲೆ ಬಂದಿದ್ದಾರೆ. ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮ ಆರಿಸಿ ಕೊಂಡವರು ಶೇ. ಮೂವತ್ತು ಮೂವತ್ತೈದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆ ಹೊಂದುತ್ತಿಲ್ಲ ಎಂಬುದೂ ಗಮನಿಸಬೇಕಾದ ವಿಷಯ.

ಈಗಂತೂ ವಿಶ್ವವಿದ್ಯಾನಿಲಯದ ಮೊದಲನೆಯ ತರಗತಿಯಿಂದ ಹಿಡಿದು ಎಂ. ಎ., ಎಂ. ಎಸ್‌ಸಿ., ಮುಂತಾದ ಸ್ನಾತಕೋತ್ತರ ತರಗತಿಯವರೆಗೂ ಪರೀಕ್ಷೆ ಗಳಲ್ಲಿ ವಿದ್ಯಾರ್ಥಿಗಳು, ಅವರು ಯಾವುದೇ ಭಾಷೆಯ ಮೂಲಕ ಶಿಕ್ಷಣ ಪಡೆದಿದ್ದರೂ, ಕನ್ನಡದಲ್ಲಿ ಉತ್ತರ ಬರೆಯಬಹುದು ಎಂದು ವಿಶ್ವವಿದ್ಯಾನಿಲಯ ಅಪ್ಪಣೆ ಹೊರಡಿಸಿದೆ, ಅದರ ಪ್ರಕಾರ ಕೆಲವು ವಿದ್ಯಾರ್ಥಿಗಳು ಸ್ನಾತಕೋತ್ತರ ಪರೀಕ್ಷೆಗಳಲ್ಲೂ ಕನ್ನಡದಲ್ಲೇ ಉತ್ತರ ಬರೆದು ಪ್ರಶಂಸನೀಯವಾದ ಫಲಿತಾಂಶಗಳನ್ನು ತೋರಿಸುತ್ತಿದ್ದಾರೆ.

ಪಠ್ಯಪುಸ್ತಕಗಳ ಅಭಾವ ಎಂಬುದು ಹಳಸಿದ ಮಾತಾಗಿ ಪರಿಣಮಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ತನ್ನ ಪ್ರಸಾರಾಂಗದ ಮೂಲಕ ಅನೇಕ ಪಠ್ಯಪುಸ್ತಕ ಗಳನ್ನು ವಿದ್ವಾಂಸರಿಂದ ಬರೆಸಿ ಪ್ರಕಟಿಸಿದೆ. ಈ ಮಹೋನ್ನತ ಕಾರ್ಯದಲ್ಲಿ ಮೈಸೂರು, ಬೆಂಗಳೂರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳು ಹಿಂದೆಂದೂ ಕಾಣದ ಭವ್ಯ ಪ್ರಮಾಣದಲ್ಲಿ ಕಾರ್ಯೋನ್ಮುಖವಾಗಿವೆ. ಮೈಸೂರು ವಿಶ್ವವಿದ್ಯಾ ನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈಗಾಗಲೇ ನೂರಾರು ಸ್ನಾತಕ ಮತ್ತು ಸ್ನಾತ ಕೋತ್ತರ ಮಟ್ಟದ ಪಠ್ಯಪುಸ್ತಕಗಳನ್ನೂ ಸಹಾಯಕ ಗ್ರಂಥಗಳನ್ನೂ ನೂರಾರು ಜನ ಘನ ವಿದ್ವಾಂಸರ ನೆರವಿನಿಂದ ಸೃಷ್ಟಿಸುತ್ತಿದೆ. ಇತರ ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳೂ ಇಂತಹ ಒಂದು ಶ್ಲಾಘನೀಯವಾದ ಉದ್ಯಮದಲ್ಲಿ ತೊಡಗಿವೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವೂ ಈ ನಿಟ್ಟಿನಲ್ಲಿ ಕಾರ್ಯವನ್ನು ಪ್ರಾರಂಭಿ ಸಿರುವುದು ಸ್ವಾಗತಾರ್ಹವಾಗಿದೆ.

ಮಹಾತ್ಮಾ ಗಾಂಧೀಜಿಯವರು— ಭಾರತದ ಜನಕೋಟಿಯೊಂದಿಗೆ ಮತ್ತು ಅವರ ಸಮಸ್ಯೆಗಳೊಂದಿಗೆ ಅವರಷ್ಟು ನಿಕಟವಾದ ಪರಿಚಯವನ್ನು ಹೊಂದಿ, ಅವರಿಗಾಗಿಯೇ ಬಾಳಿದ ಶಿಕ್ಷಣ ತಜ್ಞರು ಮತ್ತೊಬ್ಬರಿರಲಾರರು — ತಮ್ಮ ಖಡ್ಗ ತೀಕ್ಷ್ಣವೂ ತರ್ಕ ಬದ್ಧವೂ ಆದ ವಾಣಿಯಲ್ಲಿ ಸಾರಿ ಸಾರಿ ಹೇಳಿದರು, ದೇಶ ಭಾಷೆಗಳು ಶಿಕ್ಷಣ ಮಾಧ್ಯಮ ವಾದಾಗಲೇ ಭಾರತದಲ್ಲಿ ವಿದ್ಯಾಭ್ಯಾಸ ಅರ್ಥಪೂರ್ಣವಾಗುತ್ತದೆ ಎಂದು. ಅವರ ಈ ಕೆಲವು ಮಾತುಗಳನ್ನು ಪರಿಭಾವಿಸಬೇಕು :

" ... ಗಣಿತ, ರೇಖಾಗಣಿತ, ಬೀಜರೇಖಾಗಣಿತ, ರಸಾಯನ ಶಾಸ್ತ್ರ, ಖಗೋಳ ಶಾಸ್ತ್ರ ಈ ವಿಷಯಗಳಲ್ಲಿ ಎಷ್ಟನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತೆನೋ ಅಷ್ಟನ್ನೂ ಒಂದು ವರ್ಷದಲ್ಲಿ ಕಲಿಯಬಹುದಾಗಿತ್ತು, ಇಂಗ್ಲಿಷಿನ ಮೂಲಕವಾಗಿಯೇ ಕಲಿಯದೆ

ಗುಜರಾತಿಯ ಮೂಲಕ ಕಲಿತಿದ್ದರೆ, ಎಂದು ನಾನು ಈಗ ತಿಳಿದುಕೊಂಡಿದ್ದೇನೆ. ನಾನು ಆ ವಿಷಯಗಳನ್ನು ಗ್ರಹಿಸುವುದು ಇನ್ನೂ ಸುಲಭವಾಗಿರುತ್ತಿತ್ತು, ವಿಶದವಾಗಿರುತ್ತಿತ್ತು. ನನ್ನ ಗುಜರಾತಿ ಶಬ್ದ ಭಂಡಾರ ಇನ್ನೂ ವಿಪುಲವಾಗಿರುತ್ತಿತ್ತು. ನಾನು ಆ ಜ್ಞಾನವನ್ನು ಮನೆಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಈ ಇಂಗ್ಲಿಷ್ ಮಾಧ್ಯಮ ನನಗೂ ಇಂಗ್ಲಿಷ್ ಶಾಲೆಗಳಲ್ಲಿ ಓದದೆ ಇದ್ದ ನನ್ನ ಮನೆಯವರಿಗೂ ನಡುವೆ ದಾಟಲಾಗದ ಅಡ್ಡಗೋಡೆಯನ್ನು ಹಾಕಿತು......ನನ್ನ ಮನೆಯಲ್ಲಿಯೇ ನಾನು ಬಲು ಬೇಗನೆ ' ಪರಕೀಯ 'ನಾಗುತ್ತಲಿದ್ದೆ ".

"......ಶಿಕ್ಷಣ ಮಾಧ್ಯಮವನ್ನು ಕೂಡಲೇ, ಎಷ್ಟೇ ವೆಚ್ಚವಾಗಲಿ, ಬದಲಾಯಿಸಿ ಪ್ರಾಂತೀಯ ಭಾಷೆಗಳಿಗೆ ಸರಿಯಾದ ಸ್ಥಾನವನ್ನು ಕೊಡಬೇಕು. ಇದರಿಂದ ಉನ್ನತಶಿಕ್ಷಣದಲ್ಲಿ ಸಂಭವಿಸುತ್ತದೆ ಎಂದು ಹೇಳಲಾಗುತ್ತಿರುವ ತಾತ್ಕಾಲಿಕ ಗೊಂದಲವನ್ನು ಕೂಡ,ಪ್ರತಿದಿನವೂ ಅಧಿಕವಾಗುತ್ತಿರುವ ದೋಷಯುಕ್ತ ಅಪವ್ಯಯಕ್ಕೆ ಬದಲಾಗಿ ಸ್ವಾಗತಿಸುತ್ತೇನೆ."

ಮಹಾತ್ಮಾ ಗಾಂಧೀಯವರ ಅನೇಕ ರಾಷ್ಟ್ರಹಿತ ಯೋಜನೆಗಳನ್ನು ಮೂಲೆಗುಂಪು ಮಾಡಿ ದೇಶಕ್ಕೆ ಹಾನಿಯನ್ನು ತರುತ್ತಿರುವ ವಿದ್ರೋಹಿಗಳಾದ ಅನೇಕರು ಅವರ ಈ ದೇಶಭಾಷಾ ಮಾಧ್ಯಮದ ಯೋಜನೆಯನ್ನೂ ಮೂಲೆಗೊತ್ತರಿಸಿದ್ದಾರೆ. ಅದಕ್ಕೆ ಅವರು ಒಡ್ಡುವ ವಾದಗಳು ಹಾಸ್ಯಾಸ್ಪದವಾಗಿವೆ. " ದೇಶಭಾಷೆಗಳಲ್ಲೇ ಶಿಕ್ಷಣ ದೊರಕಿದರೆ ನಮಗೆ ಪರ ಪ್ರಾಂತಗಳಲ್ಲಿ ಕೆಲಸ ಸಿಕ್ಕುವುದು ಹೇಗೆ ? " ಇದು ಅಂಥವರ ಪ್ರಶ್ನೆಗಳಲ್ಲಿ ಒಂದು. ಇಲ್ಲಿಂದ ಪರಪ್ರಾಂತಗಳಿಗೆ ಹೋಗಿಯೋ, ಪರಪ್ರಾಂತಗಳಿಂದ ಇಲ್ಲಿಗೆ ಬಂದೋ ಹಿಂದೆ ಉದ್ಯೋಗ ದೊರಕಿಸಿಕೊಂಡವರು ಹಲವರು. ಆದರೆ ಅವರಿಗೆ ಉದ್ಯೋಗ ಸಿಕ್ಕಿದ್ದು ಅವರ ಇಂಗ್ಲಿಷ್ ಜ್ಞಾನಕ್ಕಾಗಿಯಲ್ಲ, ಅವರಿಗಿದ್ದ ತಾಂತ್ರಿಕ ಮತ್ತಿತರ ವಿಶೇಷ ಜ್ಞಾನಕ್ಕಾಗಿ ಎಂಬುದನ್ನು ಅಂಥವರು ಮರೆಯುತ್ತಾರೆ. ಆಗಲೂ ಇವರು ತಮ್ಮ ಮೇಲಧಿಕಾರಿಗಳೊಂದಿಗೂ, ಕೈಕೆಳಗಿನ ಅಧಿಕಾರಿಗಳೊಂದಿಗೂ ವ್ಯವಹಾರಕ್ಕಾಗಿ ಬಳಸುತ್ತಿದ್ದ ಭಾಷೆ ಇಂಗ್ಲಿಷ್ ಅಲ್ಲ ಎಂಬುದನ್ನು ಮರೆಯಬಾರದು. ಯಾವ ಪ್ರಾಂತದಲ್ಲಿ ಇವರು ಕೆಲಸ ಮಾಡುತ್ತಿದ್ದರೋ ಆ ಪ್ರಾಂತ ಭಾಷೆಯನ್ನು ಮಾತಾಡುವಮಟ್ಟಿಗಾದರೂ ಇವರು ಕಲಿಯಲೇಬೇಕಾಗಿತ್ತು. ಹಾಗೆ ಅವರು ಕಲಿತ ಭಾಷೆಗಳಿಂದಲೇ ಅವರ ದಿನನಿತ್ಯದ ವ್ಯವಹಾರ ಸಾಗುತ್ತಿರುವುದು, ಮತ್ತು ಅವರ ತಾಂತ್ರಿಕ ಜ್ಞಾನದ ಸರಿಯಾದ ವಿನಿಯೋಗವೂ ನಡೆಯುತ್ತಿರುವುದು. ಇಷ್ಟಾದರೂ ಹೀಗೆ ಹೊರಗೆ ಹೋದ ಜನ ದೇಶಭಾಷಾ ಮಾಧ್ಯಮದ ವಿರುದ್ಧವಾಗಿ ಮಾತನಾಡುತ್ತಿರುವುದು ಅತ್ಯಂತ ಆಶ್ಚರ್ಯಕರವಾಗಿದೆ.

ಇಷ್ಟಕ್ಕೂ ಹೀಗೆ ಹೊರಗೆ ಹೋಗುತ್ತಿರುವ ತಜ್ಞರ ಸಂಖ್ಯೆಯಾದರೂ ಎಷ್ಟು ? ಬಹುಶಃ ಶೇಕಡಾ ಒಂದಕ್ಕಿಂತಲೂ ಕಡಮೆ. ಹೀಗೆ ನೂರರಲ್ಲಿ ಒಬ್ಬ " ಪ್ರತಿಭಾವಂತ "ನ ಸಲುವಾಗಿ ತೊಂಬತ್ತೊಂಬತ್ತು ಜನರಿಗೆ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕು ಎಂಬುದು ಖಂಡನಾರ್ಹ,

ಈ ಸಂದರ್ಭದಲ್ಲಿಯೆ ಇನ್ನೂ ಕೆಲವು ಸಂದೇಹಗಳನ್ನು ನಿವಾರಿಸುವುದು ಆಗತ್ಯ. ತ್ರಿಭಾಷಾ ಸೂತ್ರ ಎಂಬುದು, ನಾನು ಹಿಂದೆಯೇ ಅನೇಕ ಕಡೆ ಹೇಳಿರುವಂತೆ, ಭಾರತೀಯರಿಗೆ ತ್ರಿಶೂಲಪ್ರಾಯವಾಗುತ್ತದೆ. ಎಲ್ಲರಿಗೂ ಎಲ್ಲ ಭಾಷೆಗಳೂ ಬೇಕಾಗಿಲ್ಲ. ಎಂದರೆ, ಎಲ್ಲರೂ ಇಂಗ್ಲಿಷನ್ನಾಗಲೀ ಹಿಂದಿಯನ್ನಾಗಲೀ ಕಲಿಯಬೇಕಾದದ್ದು ಏಕೆ ? ಯಾರಿಗೆ ಆಗತ್ಯವಿದೆಯೋ ಅಂಥವರು ಅವರಿಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಇಂತಹ ಭಾಷೆಗಳನ್ನು ಶೀಘ್ರವಾಗಿ ಸಾಹಿತ್ಯದೃಷ್ಟಿಯಿಂದಲ್ಲದೆ ಭಾಷಾದೃಷ್ಟಿಯಿಂದ ಬೋಧಿಸುವ ಕಾರ್ಯಕ್ಕಾಗಿ ಭಾಷಾ ಸಂಸ್ಥೆಗಳ ಸ್ಥಾಪನೆಯಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಗಲಿದೆ. ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ ? ಭರತಖಂಡಕ್ಕೀಗ ಬೇಕಾಗಿರುವುದು ಬಹುಭಾಷಾಸೂತ್ರ. ನಮ್ಮ ಜನ ಕಲಿಯಬೇಕಾದದ್ದು ಇಂಗ್ಲಿಷ್ ಭಾಷೆಯೊಂದನ್ನು ಮಾತ್ರವಲ್ಲ. ರಷ್ಯನ್, ಜಪಾನೀ, ಜರ್ಮನ್, ಫ್ರೆಂಚ್ ಮುಂತಾದ ಅನೇಕ ಪ್ರೌಢಭಾಷೆಗಳನ್ನು ವೈಜ್ಞಾನಿಕ ಆವಶ್ಯಕತೆಗಳಿಗಾಗಿ ಕಲಿಯಬೇಕಾಗಿದೆ.

ತ್ರಿಭಾಷಾ ಸೂತ್ರದ ಅಪಾಯ ಇಷ್ಟಕ್ಕೇ ಸೀಮಿತವಾಗಿಲ್ಲ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಕಾರಣಗಳಿಗಾಗಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ವೈಭವವನ್ನು ಏನೂ ಅರಿಯದ ನಮ್ಮ ಹಸುಳೆಗಳ ಮುಂದೆ ವರ್ಣಿಸಿ ಅವರ ಮನಸ್ಸನ್ನು ಅವುಗಳ ಕಡೆಗೇ ಎಳೆದು ದೇಶಭಾಷೆಗಳ ಅಧ್ಯಯನವನ್ನು ಹಿಂದಕ್ಕೊತ್ತರಿಸುವ ಪ್ರಯತ್ನವನ್ನೂ ಮಾಡುತ್ತಿರುವವರು ಅನೇಕರಿದ್ದಾರೆ.

ನನ್ನ ವಾದ ಇದು. ತ್ರಿಭಾಷಾ ಸೂತ್ರ ಎಂಬುದು ಭರತಖಂಡಕ್ಕೆ ಅತ್ಯಂತ ಅಪಾಯಕಾರಿಯಾದದ್ದು. ಅದರ ಸ್ಥಾನದಲ್ಲಿ ಬರಬೇಕಾದದ್ದು ದ್ವಿಭಾಷಾ ಸೂತ್ರ. ಭರತಖಂಡದ ಯಾವ ವಿದ್ಯಾರ್ಥಿಯ ಮೇಲೂ ಯಾವ ಭಾಷೆಯನ್ನೂ ಬಲವಂತವಾಗಿ ಹೇರಬಾರದು ಎಂಬುದು ನನ್ನ ವಾದದ ಸಾರಾಂಶ. ಮೇಲೆ ಸೂಚಿಸಿದಂತೆ ಪ್ರಪಂಚದಲ್ಲಿ ನಡೆಯುತ್ತಿರುವ ವಿಜ್ಞಾನ ಮತ್ತು ತಾಂತ್ರಿಕ ಪ್ರಗತಿಯ ಅರಿವಿಗೆ ಇಂಗ್ಲಿಷ್ ಭಾಷೆಯ ಜ್ಞಾನವೊಂದೇ ಸಾಲದು. ಜರ್ಮನ್, ರಷ್ಯನ್ ಮುಂತಾದ ಭಾಷೆಗಳನ್ನೂ ನಮ್ಮ ವಿದ್ಯಾರ್ಥಿಗಳು ಕಲಿಯಬೇಕಾದದ್ದು ಅಗತ್ಯ. ಆದ್ದರಿಂದ ಅನೇಕ ಭಾಷೆಗಳನ್ನು ವಿದ್ಯಾರ್ಥಿಗಳ ಮುಂದೆ ಇಟ್ಟು, ಅವರು ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಅವಕಾಶವನ್ನು ಅವರಿಗೆ ನೀಡಬೇಕು.

ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯವಾಗಿಯೂ ದ್ವಿಭಾಷಾ ಸೂತ್ರವು ತ್ರಿಭಾಷಾ ಸೂತ್ರಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಪ್ರದೇಶ ಪ್ರದೇಶಗಳ ನಡುವಣ ಸ್ವಭಾಷಾಭಿಮಾನಜನ್ಯವಾದ ಭಾಷಾ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸಹಾಯವಾಗುತ್ತದೆ. ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳಬಹುದು ಎನ್ನುವುದರಿಂದ ಹಿಂದಿ ಬೇಡ ಎನ್ನುವವರಿಗೆ, ಇಂಗ್ಲಿಷ್ ಬೇಡ ಎನ್ನುವವರಿಗೆ, ಅವುಗಳನ್ನು ಬಲಾತ್ಕಾರವಾಗಿ ಹೇರಿದಂತಾಗುವುದಿಲ್ಲ ; ನಿಷೇಧಿಸಿದಂತೆಯೂ ಆಗುವುದಿಲ್ಲ. ಮಹಾಜನರೇ ಕಾಲಕ್ರಮೇಣ, ತಮ್ಮ ತಮ್ಮ ಅಭಿರುಚಿ ಆವಶ್ಯಕತೆಗಳಿಗೆ ತಕ್ಕಂತೆ, ಹಿಂದಿ

ಇಂಗ್ಲಿಷ್ ರಷ್ಯನ್ ಸಂಸ್ಕೃತ ಮೊದಲಾದ ಭಾಷೆಗಳನ್ನು ಯಾವ ಶೇಕಡಾವಾರು ಪ್ರಮಾಣದಲ್ಲಿ ಕಲಿಯಬೇಕೆಂಬುದನ್ನು ತಮಗೆ ತಾವೇ ಗೊತ್ತು ಮಾಡಿಕೊಳ್ಳುತ್ತಾರೆ.

ಹಿಂದಿಯನ್ನಾದರೂ ಐವತ್ತು ಕೋಟಿ ಭಾರತೀಯರೂ ಕಲಿಯಬೇಕು ಎನ್ನುವ ವಾದದಲ್ಲಿ, ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯ ಮಹೋದ್ದೇಶವೊಂದನ್ನು ಬಿಟ್ಟರೆ, ಬೇರೆ ಅರ್ಥವಿಲ್ಲ. ಶೇಕಡಾ ಒಂದರಷ್ಟು ಜನಕ್ಕೆ ಅರ್ಧಂಬರ್ಧ ಇಂಗ್ಲಿಷ್ ಕಲಿಸಿ ಬ್ರಿಟಿಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೇ ?

ಆದ್ದರಿಂದ “ ಬಹುಭಾಷೆಗಳಲ್ಲಿ ದ್ವಿಭಾಷಾ ” ಎಂಬುದೇ ನಮಗಿಂದು ಕ್ಷೇಮಕರ ಸೂತ್ರವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವು ದ್ವಿಭಾಷಾ ಸೂತ್ರವನ್ನು ಅಂಗೀಕರಿಸಿ, ಇಡೀ ಭಾರತಕ್ಕೆ ಮಾರ್ಗದರ್ಶನ ನೀಡಿ, ಅಗ್ರೇಸರ ಸ್ಥಾನದಲ್ಲಿ ನಿಂತಿರುವುದು ನಮಗೆಲ್ಲ ಅಭಿಮಾನದ ಸಂಗತಿ.

ಅಧಿಕೃತ ರಾಷ್ಟ್ರಭಾಷೆಯ ಪ್ರಶ್ನೆ ಬರುತ್ತದೆ. ಅಖಂಡ ಭಾರತಕ್ಕೆ ಒಂದು ರಾಷ್ಟ್ರಭಾಷೆ ಅಗತ್ಯ. ಬಹುಜನರು ಯಾವುದು ರಾಷ್ಟ್ರಭಾಷೆಯೆಂದು ತೀರ್ಮಾನಿಸುತ್ತಾರೋ ಅದನ್ನು ವ್ಯವಹಾರದವರೆಗೆ, ಎಲ್ಲರೂ ಅಲ್ಲ, ಅವಶ್ಯವಿದ್ದಷ್ಟು ಜನರು ಅವರೇ ನಿರ್ಣಯಿಸಿಕೊಂಡಂತೆ, ಕಲಿಯುವುದು ಸೂಕ್ತ. ಆದರೆ ಅದನ್ನು ಕೂಡ ವಿದ್ಯಾರ್ಥಿಗಳ ಆಯ್ಕೆಗೆ ಬಿಡಬೇಕೆಂದು ನನ್ನ ಅಭಿಪ್ರಾಯ.

ಇನ್ನೊಂದು ವಾದವನ್ನು ಮುಂದೊಡ್ಡುವ ಜ್ಞಾನಿಗಳ ಒಂದು ಗುಂಪಿದೆ. ಅದು ಒಂದು ಪ್ರಾಂತದ ವಿಶ್ವವಿದ್ಯಾನಿಲಯ ಮತ್ತೊಂದು ಪ್ರಾಂತದ ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನು ನೇಮಕಮಾಡಿಕೊಳ್ಳುವ ವಿಷಯ. ನನ್ನ ವಿಶ್ವವಿದ್ಯಾನಿಲಯದ ಸೇವೆಯ ದೀರ್ಘ ಇತಿಹಾಸದಲ್ಲಿ ಹೊರಗಿನ ವಿಶ್ವವಿದ್ಯಾನಿಲಯಗಳಿಂದ ಇಲ್ಲಿಗೆ ಆಹ್ವಾನಿಸಿದ ಪ್ರತಿಭಾಪುರುಷರ ಸಂಖ್ಯೆ ಕೈ ಬೆರಳುಗಳಲ್ಲಿ ಎಣಿಸಬಹುದಾದಷ್ಟು. ಇಲ್ಲಿಂದ ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋದವರ ಸಂಖ್ಯೆಯೂ ಇದಕ್ಕಿಂತ ಹೆಚ್ಚಿನದಾಗಿರಲಾರದು. ಈಗಂತೂ ಪ್ರತಿಯೊಂದು ಪ್ರಾಂತವೂ ತನ್ನಲ್ಲಿಯ ಪ್ರತಿಭಾಶಾಲಿಗಳಿಗೇ ಉದ್ಯೋಗ ಒದಗಿಸಲು ಅಸಮರ್ಥವಾಗಿರುವಾಗ ಇನ್ನು ಹೊರ ಪ್ರಾಂತಗಳಿಂದ ಪ್ರತಿಭಾವಂತರನ್ನು ಸ್ವಾಗತಿಸಿ ಅವರನ್ನು ಪೀಠಗಳಲ್ಲಿ ಪ್ರತಿಷ್ಠಾಪಿಸುವ ಮಾತು ಎಲ್ಲಿಂದ ಬಂತು ? ಒಂದು ವೇಳೆ ಅಂತಹ ಪ್ರಸಂಗ ಒದಗಿದರೆ ಹೀಗೆ ತಮ್ಮ ತಮ್ಮ ವಿಷಯಗಳಲ್ಲಿ ‘ ವಿಶೇಷ ಪ್ರತಿಭಾವಂತ ’ರಾಗಿರುವರು ಬೇರೆ ಪ್ರಾಂತದ ಭಾಷೆಯನ್ನು ವ್ಯವಹಾರದ ಮಟ್ಟಿಗಾದರೂ ಶೀಘ್ರವಾಗಿ ಕಲಿತುಕೊಳ್ಳುವ ಶಕ್ತಿಯನ್ನೂ ಪಡೆದೇ ಇರುತ್ತಾರೆ. ಆದುದರಿಂದ ಇಂತಹ ಅಪೂರ್ವ ಪ್ರಸಂಗಗಳನ್ನು ಎದುರಿಸಲು, ಅಂದರೆ ಲಕ್ಷದಲ್ಲಿ ಒಬ್ಬರಿಗೆ ಅನುಕೂಲ ಮಾಡಿಕೊಡಲು, ಲಕ್ಷಾಂತರ ಜನರನ್ನು ಇಂಗ್ಲಿಷಿನ ಬಲಿಪೀಠದ ಮೇಲೆ ವಧೆ ಮಾಡುವುದು ಸರಿಯಲ್ಲವೆಂಬುದು ಸ್ಪಷ್ಟ.

ಅಲ್ಲದೆ ಈಗ ವಾದಮಾಡುತ್ತಿರುವವರಲ್ಲಿ ಅನೇಕರದು ಅರ್ಧ ಶತಮಾನದ ಹಿಂದಿನ ಜ್ಞಾನ. ಐವತ್ತು ವರ್ಷಗಳ ಹಿಂದೆ ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ ಕೂಡ ಜ್ಞಾನದ ಪ್ರಮುಖ ಶಾಖೆಗಳಿಗೆಲ್ಲ ಪ್ರವೇಶವಿದ್ದುದು ಇಂಗ್ಲಿಷ್ ಭಾಷೆಯ ಮೂಲಕವೇ. ಈಗ ಹಾಗಲ್ಲ. ನನಗೆ ತಿಳಿದಂತೆ ಕನ್ನಡದ ಮೂಲಕವಾಗಿ ಜ್ಞಾನದ ಯಾವ ಶಾಖೆಯನ್ನಾದರೂ ಪರಿಚಯ ಮಾಡಿಕೊಳ್ಳುವಂತೆ ಗ್ರಂಥರಚನೆ ಕನ್ನಡದಲ್ಲಿ ನಡೆದಿದೆ. ಮೈಸೂರು ವಿಶ್ವವಿದ್ಯಾನಿಲಯ ತನ್ನ ಪ್ರಸಾರಾಂಗದ ಮೂಲಕ ಪ್ರಕಟಿಸಲಿರುವ "ಮುದ್ರಿತ ಕನ್ನಡ ಕೃತಿಗಳ ವಿವರಣಾತ್ಮಕ ಗ್ರಂಥಸೂಚಿ" ಹೊರಬಂದಾಗ ಈ ಮಾತಿನ ಅರ್ಥ ಮನದಟ್ಟಾದೀತು.

ಮಹಾತ್ಮಾ ಗಾಂಧೀಜಿಯವರು ಸಾರಿ ಸಾರಿ ಹೇಳಿದಂತೆ, ಇತರ ಶಿಕ್ಷಣತಜ್ಞರು ತರ್ಕಬದ್ಧವಾಗಿ ಮಂಡಿಸಿ ಪ್ರತಿಪಾದಿಸಿದಂತೆ, ದೇಶಭಾಷೆಗಳಲ್ಲಿ ಶಿಕ್ಷಣ ದೊರೆಯದಿದ್ದರೆ, ಈಗಾಗುತ್ತಿರುವಂತೆ, ವಿದ್ಯಾಭ್ಯಾಸ ಮರಳಿನ ಮೇಲೆ ಕಟ್ಟಿದ ಸೌಧವಾಗುತ್ತದೆ. ವಿಜ್ಞಾನವನ್ನೂ ತಾಂತ್ರಿಕ ಜ್ಞಾನವನ್ನೂ ಕನ್ನಡದಲ್ಲಿ ಹೇಳಲಾಗುವುದಿಲ್ಲ ಎಂಬುದು ಮಂದಮತಿಗಳ, ಅಲಸ ದುರ್ಬಲರ ಮತ್ತು ವಿದ್ಯಾದ್ರೋಹಿಗಳ ಕನವರಿಕೆ ಮತ್ತು ಅತ್ಯಂತ ಹಾಸ್ಯಾಸ್ಪದವಾದ ತಲೆಹರಟೆ ಎಂಬುದನ್ನು ನಮ್ಮ ವಿದ್ವಾಂಸರು ತಮ್ಮ ಕನ್ನಡ ವೈಜ್ಞಾನಿಕ ಮತ್ತು ಮಾನವಿಕ ಗ್ರಂಥಗಳ ಮೂಲಕ ಸಾರಿ ಹೇಳಿದ್ದಾಗಿದೆ. ಪಾರಿಭಾಷಿಕ ಪದಗಳ ಅಭಾವವೇ ಪಠ್ಯಪುಸ್ತಕ ರಚನೆಗೆ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವಿದ್ಯೆಯನ್ನು ಬೋಧಿಸುವುದಕ್ಕೆ ಇರುವ ದೊಡ್ಡ ಅಡ್ಡಿ ಎಂಬ ಪೇಲವಾದ ಹೇಳಿಕೆಗಳನ್ನು ಇನ್ನು ಮುಂದೆ ಗಮನಕ್ಕೆ ತೆಗೆದುಕೊಳ್ಳಬೇಕಾದದ್ದೇ ಇಲ್ಲ. ಆದಷ್ಟುಮಟ್ಟಿಗೆ ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನು ಹಾಗೆಯೇ ಉಳಿಸಿಕೊಳ್ಳುವುದು ಸಾಧ್ಯ ಎಂಬುದನ್ನೂ, ಅವಕ್ಕೆ ತದ್ಭವ–ತತ್ಸಮಗಳನ್ನು ಸ್ವಲ್ಪ ಶ್ರಮದಿಂದ ಸೃಷ್ಟಿಸುವುದು ಸಾಧ್ಯ ಎಂಬುದನ್ನೂ ನಮ್ಮ ವಿಜ್ಞಾನ ಲೇಖಕರು ತೋರಿಸಿಕೊಟ್ಟಿದ್ದಾರೆ. ಪ್ರಬುದ್ಧ ಕರ್ಣಾಟಕವು ತನ್ನ ಚಿನ್ನದ ಹಬ್ಬದ ಸಂದರ್ಭದಲ್ಲಿ ಪ್ರಕಟಿಸಿರುವ ೧೬೦೦ ಪುಟಗಳ ವಿಜ್ಞಾನ ವಿಶೇಷಾಂಕ ಇಂತಹ ಎಲ್ಲ ಸಮಸ್ಯೆಗಳಿಗೂ ಸಶಕ್ತವೂ ಸಚಿತ್ರವೂ ಆದ ಪರಿಹಾರ ರೂಪವಾಗಿ ನಿಂತಿದೆ.

ತನ್ನ ಅನೇಕ ಮಾಲಿಕೆಗಳ ಮೂಲಕ ಪ್ರಸಾರಾಂಗ ವಿಶ್ವವಿದ್ಯಾನಿಲಯದ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅನೇಕ ಸಹಾಯಕ ಗ್ರಂಥಗಳನ್ನು ಒದಗಿಸುವುದರ ಜೊತೆಗೆ ಜನಸಾಮಾನ್ಯರ ಜ್ಞಾನತೃಷೆಯನ್ನು ಪೂರೈಸುವುದಕ್ಕಾಗಿ ಕೂಡ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಿದೆ.

ಈಗ ಹೊರಬರುತ್ತಿರುವ ಶ್ರೀ ಜಿ. ವಿ. ಬಿ. ನಾಯ್ಡು ಮತ್ತು ಶ್ರೀಮತಿ ಚಂದ್ರಾ ಬಿ. ನಾಯ್ಡು ಅವರ 'ಪಕ್ಷಿಗಳು' ಓದುಗರಿಗೆ ಪ್ರಿಯವಾಗುತ್ತದೆಂದು ಆಶಿಸುತ್ತೇನೆ.

ಕೆ. ವಿ. ಪುಟ್ಟಪ್ಪ
ಪ್ರಧಾನ ಸಂಪಾದಕ

ಅರಿಕೆ

ಪ್ರಕೃತಿ ಸೌಂದರ್ಯವನ್ನು ಮೀರಿಸುವ ಸುಂದರ ವಸ್ತು ಪ್ರಪಂಚದಲ್ಲಿ ಬೇರೊಂದಿಲ್ಲ. ಈ ಸೌಂದರ್ಯದ ಹೆಚ್ಚಳಕ್ಕೆ ವಿವಿಧ ಗಾತ್ರದ, ವಿವಿಧ ಇಂಚರದ ನಯನ ಮೋಹಕ ಪಕ್ಷಿಕುಲ ಬಹಳವಾಗಿ ಸಹಾಯಕ. ಪಕ್ಷಿಗಳಿಲ್ಲದ ನಿಸರ್ಗ ನೀರಸ.

ಈಗ ಒಟ್ಟು ೮೫೮೦ ಪಕ್ಷಿ ಪ್ರಭೇದಗಳನ್ನು ವಿವರಿಸಲಾಗಿದೆ. ಅಸಂಖ್ಯಾತ ಸಂಖ್ಯೆಯಲ್ಲಿದ್ದ ಪ್ರಭೇದಗಳಲ್ಲೂ ಹಲವು ನಾಶವಾಗಿ ಈಗ ಸ್ವಲ್ಪ ಮಾತ್ರ ಉಳಿದಿವೆ. ಅವುಗಳ ವೃದ್ಧಿಗೆ ಆವಶ್ಯಕವಾದ ನೈಸರ್ಗಿಕ ವಾತಾವರಣಗಳ ಅನುಕೂಲತೆ ಮಾನವರಿಂದ ನಾಶವಾಗಿ ಈ ದುರ್ದೆಶೆ ಉಂಟಾಗಿದೆ. ೨೦೦ ವರ್ಷಗಳಿಂದೀಚೆಗೆ ಅನೇಕ ಪಕ್ಷಿ ಪ್ರಭೇದಗಳು ಪೂರ್ಣ ನಾಶ ಹೊಂದಿ ಇನ್ನೂ ಹಲವು ನಿರ್ನಾಮವಾಗುವಂತಿದೆ.

ಪಕ್ಷಿಗಳ ಸಂಖ್ಯೆಯ ಕ್ಷೀಣತೆಗೆ ಅರಣ್ಯ ನಿರ್ಮೂಲನ, ಬೇಟೆ, ಮತ್ತು ಆಹಾರ ಬೆಳೆಗಳಿಗೆ ವಿಷಪೂರಿತ ಔಷಧಗಳ ಸಿಂಪರಣೆ — ಇವೆಲ್ಲವೂ ಕಾರಣವಾಗಿವೆ. ಇವುಗಳನ್ನು ನಿಯಂತ್ರಿಸದಿದ್ದಲ್ಲಿ ಬಹುಬೇಗ ಅನೇಕ ಜೀವಂತ ಪ್ರಭೇದಗಳು ನಾಶವಾಗುತ್ತವೆ.

ಈ ಪುಸ್ತಕದಲ್ಲಿ ಪಕ್ಷಿ ಕುಲದಲ್ಲಿನ ಪೂರ್ಣ ಪ್ರಭೇದಗಳ ಸೂಕ್ಷ್ಮ ಪರಿಚಯ ಮಾಡಿಕೊಡಲು ಪ್ರಯತ್ನಿಸಿದೆ. ಓದುಗರಿಗೆ ಅವುಗಳನ್ನು ಗುರುತಿಸಲು, ಅವುಗಳನ್ನು ರಕ್ಷಿಸಲು, ಅನುಕೂಲವಾಗಬೇಕೆಂಬುದು ಇದರ ಗುರಿ.

ಈ ಪುಸ್ತಕವನ್ನು ಬರೆಯಲು ಸಹಾಯಕವಾಗಿ ಅನೇಕ ಸಲಹೆಗಳನ್ನಿತ್ತು, ಪ್ರೋತ್ಸಾಹಿಸಿದ ರಾಷ್ಟ್ರಕವಿ ಕುವೆಂಪುರವರಿಗೆ ನಾವು ಚಿರಋಣಿಗಳು. ಇದನ್ನು ಪ್ರಕಟಿಸುತ್ತಿರುವ ಪ್ರಸಾರಾಂಗದ ಅಧಿಕಾರಿಗಳಿಗೆ ಕೃತಜ್ಞತೆಗಳು. ಅತಿ ಶೀಘ್ರವಾಗಿ ಆಕರ್ಷಕವಾಗಿ ಮುದ್ರಿಸಿಕೊಟ್ಟ ವಿದ್ಯಾ ಮುದ್ರಣದ ಮಾಲೀಕರಾದ ಶ್ರೀ ಶಿವರಾಂ ರವರಿಗೂ, ಚಿತ್ರಗಳನ್ನು ಸುಂದರವಾಗಿ ಬರೆದುಕೊಟ್ಟು ಸಹಾಯಮಾಡಿರುವ ಮೈಸೂರ್ ಟಾಯ್ಸ್ ಕಂಪೆನಿಯ ಮಾಲೀಕರುಗಳಾದ ಶ್ರೀ ಶಿವಣ್ಣ ಮತ್ತು ಶ್ರೀ ಓಂ ಪ್ರಕಾಶ್ ರವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಮೈಸೂರು.
ದಿನಾಂಕ ೧೪ – ೧೧ – '೭೦

ಜಿ. ವಿ. ಬಿ. ನಾಯ್ಡು
ಚಂದ್ರಾ ಬಿ. ನಾಯ್ಡು.

ಗ್ರಂಥಭಂಡಾರ

ಅರ್ಪಣೆ

ನಮ್ಮ ಜೀವನ ಸುಗಮವಾಗಿ ಸಾಗಲು ಸಹಾಯಕರಾದ

ಶ್ರೀ ಜಿ. ವಿ. ಕೃಷ್ಣಸ್ವಾಮಿ ನಾಯ್ಡು

(ಮಾಲೀಕರು, ಪದ್ಮ ಎಸ್ಟೇಟ್, ಸಿದ್ಧಾಪುರ, ಕೊಡಗು ಜಿಲ್ಲೆ)

ಇವರಿಗೆ ಭಕ್ತಿಯಿಂದ ಅರ್ಪಿತ.

ಭಂಡಾರ
೮-೮

ವಿಷಯಾನುಕ್ರಮಣಿಕೆ

ವಿ. ವಿ. ... ಗ್ರಂಥಭಂಡಾರ ಬೆಂಗಳೂರು-೧೮

ಪಕ್ಷಿಗಳು

ಭಾಗ ಒಂದು

ಸಾಮಾನ್ಯ ವಿವರಣೆ

ಪಕ್ಷಿಗಳು

— ೧ —

ಕಶೇರುಕ ಪ್ರಾಣಿವರ್ಗಗಳಲ್ಲಿ ಮೀನುಗಳನ್ನು ಬಿಟ್ಟರೆ ಪಕ್ಷಿಗಳಷ್ಟು ವೈವಿಧ್ಯ ಇರುವ ಪ್ರಾಣಿವರ್ಗ ಇನ್ನೊಂದಿಲ್ಲ. ವಿವಿಧ ಗಾತ್ರದ ವಿವಿಧ ಇಂಚರದ, ಈ ನಯನ ಮೋಹಕ ಪ್ರಾಣಿಗಳು ನಿಸರ್ಗಕ್ಕೆ ಒಂದು ಹೆಚ್ಚಿನ ಸೊಬಗನ್ನು ಒದಗಿಸಿವೆ. ಅವುಗಳಿಲ್ಲದ ವಾತಾವರಣವನ್ನು ಊಹಿಸಲೂ ಸಾಧ್ಯವಿಲ್ಲ. ಪಕ್ಷಿಗಳಿಲ್ಲದ ಸ್ವರ್ಗವೂ ಸಾಮಾನ್ಯವಾಗಿ ಕಾಣುವುದೇನೋ! ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಪಕ್ಷಿಗಳ ಪಾತ್ರ ಪ್ರಮುಖವಾಗಿ ಹೆಣೆದುಕೊಂಡಿದೆ. ಗರುಡನಿಲ್ಲದ ವಿಷ್ಣು, ನವಿಲಿಲ್ಲದ ಷಣ್ಮುಖ ಬಹುಶಃ ಅಸಹಾಯಕರು! ನಮ್ಮ ಪುರಾಣೇತಿಹಾಸಗಳಲ್ಲಿಯೂ ಅವುಗಳ ಪಾತ್ರ ಮುಖ್ಯವಾದದ್ದು. ರಾಮಾಯಣದ ಜಟಾಯು, ಶಿಬಿ ಚಕ್ರವರ್ತಿ ಕಥೆಯ ಪಾರಿವಾಳ ಮತ್ತು ಗಿಡಗ, ನಳಚರಿತ್ರೆಯ ಹಂಸ ಇವೆಲ್ಲ ಎಲ್ಲರಿಗೂ ತಿಳಿದುದೇ ಆಗಿವೆ.

ಪಕ್ಷಿಗಳಲ್ಲಿರುವ ದೇಹ ರಚನಾ ವೈಶಿಷ್ಟ್ಯ ಬೇರೆ ಯಾವ ಪ್ರಾಣಿವರ್ಗದಲ್ಲೂ ಕಂಡುಬರುವುದಿಲ್ಲ. ಗಾತ್ರದಲ್ಲಿ, ವರ್ಣವಿನ್ಯಾಸದಲ್ಲಿ ಮತ್ತು ಮೋಹಕ ಧ್ವನಿಯಲ್ಲಿ ಇನ್ನಾವ ಪ್ರಾಣಿಕುಲವೂ ಅವುಗಳನ್ನು ಮೀರಿಸಲಾರದು. ಒಟ್ಟು ಸಂಖ್ಯೆಯಲ್ಲಿಯೂ ಮೀನುಗಳನ್ನು ಬಿಟ್ಟರೆ ಇವೇ ಬಹಳ ಅಧಿಕ ಸಂಖ್ಯೆಯಲ್ಲಿರುವುದು. ದಕ್ಷಿಣ ಧ್ರುವ ಪ್ರದೇಶದ ಮಧ್ಯ ಭಾಗವನ್ನುಳಿದು ಪ್ರಪಂಚದ ಇತರ ಕಡೆಗಳಲ್ಲೆಲ್ಲಾ ಪಕ್ಷಿಗಳು

ವಾಸಿಸುತ್ತವೆ. ಕಗ್ಗತ್ತಲೆಯ ಗುಹೆಗಳಲ್ಲಿಯೂ, ನೀರಿನಲ್ಲಿಯೂ ಮಿಾನುಗಳಂತೆ ಮುಳುಗಿದ್ದು ವಾಸಿಸಲು ಕೂಡ ಹಲವು ಪಕ್ಷಿಗಳು ಕಲಿತಿವೆ !

ಪ್ರಾಣಿವಿಕಾಸಶಾಸ್ತ್ರದ ಆಧಾರದಿಂದ ಭೂಗ್ರಹದಲ್ಲಿ ಜೀವನ ಸುಮಾರು ೩೦೦ ಕೋಟಿ ವರ್ಷಗಳ ಹಿಂದೆಯೇ ಪ್ರಾರಂಭವಾಗಿರಬೇಕೆಂದು ಊಹಿಸಲಾಗಿದೆ. ಪಕ್ಷಿ ಕುಲದ ಪ್ರಾರಂಭವಾದರೋ ಯಾವುದೋ ಅನಿರ್ದಿಷ್ಟ ಸರೀಸೃಪ ಜಾತಿಯ ಪ್ರಾಣಿ ಗಳಿಂದ ಸುಮಾರು ೧೫ ಕೋಟಿ ವರ್ಷಗಳ ಹಿಂದೆ ಪ್ರಾರಂಭವಾಗಿರಬಹುದು. ಬಹುಶಃ ಸಸ್ತನಿಗಳು ಪ್ರಾರಂಭವಾದ ಸಮಯದಲ್ಲೇ ಪಕ್ಷಿಗಳೂ ಮಾರ್ಪಾಟು ಹೊಂದಿರಬೇಕು, ಇದಕ್ಕೆ ಇಲ್ಲಿಯವರೆಗೆ ದೊರೆತಿರುವ ಪಳೆಯುಳಿಕೆಗಳು ಸಾಕಷ್ಟು ಸಾಕ್ಷ್ಯವಿತ್ತಿವೆ.

ಮಧ್ಯ ಜೀವ ಕಲ್ಪದ ಜುರಾಸಿಕ್ (Jurassic) ಯುಗ ೧೮–೧೪ ಕೋಟಿ ವರ್ಷ ಗಳಷ್ಟು ಹಿಂದಿನದು. ಆ ಯುಗದಲ್ಲೇ ಪಕ್ಷಿಕುಲದ ಪ್ರಾರಂಭವಾಗಿತ್ತು, ಬಹುಶಃ ಅದಕ್ಕೆ ಹಿಂದೆಯೇ ಹಲವು ಪಕ್ಷಿಜಾತಿಗಳು ಉತ್ಪನ್ನವಾಗಿದ್ದವೇನೋ ! ಆದರೆ ಅವುಗಳ ವಿಚಾರವಾಗಿ ನಮಗೆ ಇದುವರೆಗೆ ಯಾವ ಪುರಾವೆಯೂ ದೊರೆತಿಲ್ಲ. ಈಗ ದೊರೆತಿರುವ ಅತಿ ಪುರಾತನ ಆಧಾರ ೧೮೬೧ರಲ್ಲಿ ಬವೇರಿಯಾ ರಾಜ್ಯದ ಲಾಂಗನಾಲ್ ತೀಮ್ ಪ್ರದೇಶದಲ್ಲಿನ ಸ್ಲೇಟ್ ಗಣಿಯೊಂದರಲ್ಲಿನ ಪದರ ಶಿಲೆಗಳಲ್ಲಿ ದೊರೆತಿರುವ ಪಳೆಯುಳಿಕೆಯ ಅಚ್ಚೊಂದು. ಅಂಗರಚನೆಯೆಲ್ಲಾ ಸರೀಸೃಪಗಳನ್ನೇ ಹೋಲುತ್ತಿದ್ದರೂ ಅದಕ್ಕೆ ಗರಿಗಳಿದ್ದುದು ಕಂಡುಬಂದಿದೆ. ಅಂದರೆ ಅದಕ್ಕೆ ಹಾರಾಡುವ ಸಾಧನವಿತ್ತು ! ಇದಕ್ಕೆ 'ಆರ್ಕಿಯಾಪ್ಟರಿಕ್ಸ್' (Archaeopterix), ಪುರಾತನ ರೆಕ್ಕೆಯುಳ್ಳದ್ದು ಎಂದು ಹೆಸರಿಡ ಲಾಯಿತು. ೧೮೭೭ರಲ್ಲಿ ಅದೇ ಪ್ರದೇಶದಲ್ಲಿ ಇನ್ನೊಂದು ಅಂತಹುದೇ ಪಳೆಯುಳಿಕೆ ದೊರಕಿದೆ.

'ಆರ್ಕಿಯಾಪ್ಟರಿಕ್ಸ್' (Archaeopterix) ಬಹುಭಾಗ ಸರೀಸೃಪವೇ ! ಅದರ ಮೂತಿ ಓತಿಯಹಾಗಿತ್ತು. ದವಡೆಯಲ್ಲಿ ಹಲ್ಲುಗಳಿದ್ದುವು. ಬಾಲ ನೀಳವಾಗಿ ಸಡಿಲ ವಾಗಿತ್ತು. ಬೆನ್ನು ಹುರಿ ಇತ್ತು. ಮೂಳೆಗಳೂ ಹಗುರವಾಗಿರದೆ ದೃಢವಾಗಿದ್ದವು. ಅಲ್ಲದೆ ಅದರ ರೆಕ್ಕೆಗಳ ಮೂಳೆಗಳ ತುದಿಯಲ್ಲಿ ಮೂರು ಮೊನೆಯುಗುರುಳ್ಳ ಬೆರಳು ಗಳಿದ್ದವು. ಆದರೆ ಅದಕ್ಕೆ ಮೈತುಂಬಾ ಗರಿಯಿತ್ತು ! ಬಹುಶಃ ಇದಕ್ಕೆ ಇಂದಿನ ಪಕ್ಷಿಗಳಂತೆ ಹಾರಾಡಲಾಗುತ್ತಿರಲಿಲ್ಲ. ಗಟ್ಟಿ ಕಾಲುಗಳಿಂದಲೂ ಉಗುರಿನಿಂದ ಕೂಡಿದ ಬೆರಳುಗಳಿಂದಲೂ ಬಹುಶಃ ಅದು ಹೆಚ್ಚಾಗಿ ನೆಲದ ಮೇಲೆಯೇ ಓಡಾಡುವ ಪ್ರಾಣಿ ಯಾಗಿತ್ತು. ಆದರೆ ಎತ್ತರದ ದಿಣ್ಣೆ ಅಥವಾ ಮರದಿಂದ ಹಾರಿ ತೇಲಿ ಭೂಮಿಗೆ ಇಳಿಯಲು ಈ ಗರಿಗಳು ಸಹಾಯಕವಾಗಿರಬೇಕು. ಸಾಮಾನ್ಯ ಕಾಗೆಯಷ್ಟು ಗಾತ್ರದ ಈ ಪ್ರಾಣಿಯ ರಚನೆಯಲ್ಲಿ ಸರೀಸೃಪಗಳ ಮತ್ತು ಪಕ್ಷಿಗಳ ಹಲವು ಲಕ್ಷಣಗಳು ಕಂಡು ಬಂದಿರುವುದರಿಂದ ಬಹುಶಃ ಅದು ಹೊಸತಾಗಿ ಸಂಕೀರ್ಣ ರಚನೆ ಹೊಂದಿದ್ದಿರಬೇಕು. ಪಕ್ಷಿವರ್ಗದ ಪೂರ್ವಜಗಳು ಸರೀಸೃಪಗಳೆಂಬ ವಾದಕ್ಕೆ ಶರೀರಶಾಸ್ತ್ರ, ಭ್ರೂಣಶಾಸ್ತ್ರ ಮತ್ತು ಲುಪ್ತ ಜೀವಿಶಾಸ್ತ್ರಗಳು ಸಾಕಷ್ಟು ನಿದರ್ಶನಗಳನ್ನು ಒದಗಿಸುತ್ತವೆ. ಆದರೆ

ಸರೀಸೃಪಗಳ ಯಾವ ಗುಂಪಿನಿಂದ ಪಕ್ಷಿಗಳು ಉತ್ಪತ್ತಿಯಾದುವೆಂದು ಖಚಿತವಾಗಿ ನಿರ್ಧರಿಸುವುದು ಸುಲಭವಲ್ಲ. ಭೂಮಿಯ ಇತಿಹಾಸದ ಮಧ್ಯ ಜೀವಕಲ್ಪವನ್ನು ಸರೀಸೃಪಗಳ ಸುವರ್ಣ ಯುಗವೆಂದು ಕರೆಯಬಹುದು. ಈ ಕಲ್ಪದಲ್ಲಿ ಸರೀಸೃಪಗಳ ಪ್ರಾಬಲ್ಯವು ಅಪಾರವಾಗಿತ್ತು. ಜೀವನ ಪ್ರಗತಿಯಲ್ಲಿ ಈ ಸರೀಸೃಪಗಳು ಇಂದಿನ ಸಸ್ತನಿಗಳಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಯೋಗಗಳನ್ನು ನಡೆಸಿದ್ದುವು. ಕೆಲವು ಭೂಮಿಯಮೇಲೆ ನಡೆದು ಓಡಲಾರಂಭಿಸಿದುವು. ಹಲವು ನೀರಿನಲ್ಲಿ ವಾಸಮಾಡಿ ಈಜುವ ಪ್ರಾಣಿಗಳಾದುವು. ಗಿಡಗಳನ್ನು ಹತ್ತಿ ಜೀವಿಸಲು ಪ್ರಯತ್ನಪಟ್ಟವು ಕೆಲವು; ಮತ್ತು ಇಂದಿನ ಪಕ್ಷಿಗಳಂತೆ ಅಂತರಿಕ್ಷದಲ್ಲಿ ಹಾರಲು ಪ್ರಯತ್ನಿಸಿದವು ಮತ್ತೆ ಕೆಲವು.

ಹೀಗೆ ಹಾರಲು ಪ್ರಯತ್ನಿಸಿ ಯಶಸ್ವಿಯಾದ ಪ್ರಾಣಿಗಳಲ್ಲಿ 'ಟೀರೋಡ್ಯಾಕ್ಟೈಲ್' (Pterodactyl) ಪ್ರಾಣಿ ಮುಖ್ಯವಾದದ್ದು. ಟೀರೋಡ್ಯಾಕ್ಟೈಲ್ ಎಂದರೆ ಬೆರಳುಗಳು ರೆಕ್ಕೆಯ ರಚನೆಯಲ್ಲಿ ಸೇರಿರುವುವು ಎಂದರ್ಥ. ಇದು ಇಂದಿನ ಗುಬ್ಬಚ್ಚಿಗಿಂತಲೂ ಸ್ವಲ್ಪ ದೊಡ್ಡದು. ಇದಕ್ಕೆ ಸಮುದ್ರದ ಮೀನೇ ಆಹಾರ. ಆದರೆ ಇದಕ್ಕೆ ಗರಿಗಳಿರಲಿಲ್ಲ. ಹಾರಾಡಲು ಸಹಾಯಕವಾಗುವಂತೆ, ಮುಂಡವನ್ನೂ, ಬೆರಳುಗಳನ್ನೂ ಸೇರಿಸಿ ಬಿಗಿಯಾಗಿ ಹಿಗ್ಗಿಸಿರುವ ಚರ್ಮ ಬಾವಲಿಗಳ ರೆಕ್ಕೆಯಂತೆ ಹರಡಿತ್ತು. ಆದರೆ ಇದಕ್ಕೆ ಪಕ್ಷಿಗಳಿಗಿರುವಂತೆ ಹಲವು ಮುಖ್ಯ ರಚನಾವೈಶಿಷ್ಟ್ಯವೇರ್ಪಟ್ಟಿತ್ತು. ಉದ್ದನೆಯ ಮೊನಚಾದ ಕೊಕ್ಕು, ಹಗುರವಾದ ಮೂಳೆಗಳು, ಪಕ್ಷಿಗಳಂತೆ ಹಿಂಗಾಲುಗಳ ಮೇಲೆ ನಿಲ್ಲುವ ಶಕ್ತಿ, ಇದರಲ್ಲಿ ಮೂಡಿತ್ತು. ಆದರೆ ಇದು ಬಹುಕಾಲ ಉಳಿಯಲಿಲ್ಲ. ಕ್ರಿಟೇಷಿಯಸ್ ಯುಗದಲ್ಲೇ ಉತ್ಪನ್ನವಾಗಿ, ಹೆಚ್ಚಿ ಪೂರ್ಣ ನಶಿಸಿದುವು. ಆ ಯುಗದ ಅಂತ್ಯದಲ್ಲೇ ನಿಜವಾಗಿ ಪಕ್ಷಿಗಳ ಪೂರ್ವಿಕರ ಉಗಮವಾದದ್ದು!

ಪಕ್ಷಿಗಳ ವಿಚಾರದಲ್ಲಿ ಪೂರ್ಣ ಸಂಶೋಧನೆ ನಡೆಸಿರುವ ಡೀಲ್‌ಮನ್ ಅವುಗಳ ಉತ್ಪತ್ತಿ ಟ್ರಯಾಸಿಕ್ ಯುಗದಲ್ಲಿ ಜೀವಿಸಿದ್ದ ಸ್ಯೂಡೋ ಸೂಕಿಯನ್ ಗುಂಪಿನ ಸರೀಸೃಪಗಳಿಂದಾಗಿರಬೇಕೆಂದು ವಾದಿಸಿರುವನು. ಅವು ಅತಿ ಪುರಾತನವಾದವು, ಅವುಗಳ ಮೈ ಹೊದಿಕೆಯಲ್ಲಿ ಹುರುಪೆಗಳಿದ್ದವು. ಹಿಂಗಾಲುಗಳ ಮೇಲೆ ನಿಲ್ಲಲು ಅವಕ್ಕೆ ಸಾಧ್ಯವಿತ್ತು. ಹಗುರ ದೇಹ, ಚಟುವಟಿಕೆ ಪಕ್ಷಿಯಂತಿರುವ ಉದ್ದವಾದ ಹಗುರ ತಲೆ, ಮತ್ತು ತೆಳ್ಳನೆಯ ನಡುಕಟ್ಟುಗಳು. ಆದರೆ ಸರೀಸೃಪಗಳ ಶೀತರಕ್ತ ಮತ್ತು ಜಡತ್ವ ಅಷ್ಟು ಸುಲಭವಾಗಿ ಮಾರ್ಪಟ್ಟಿತೇ ಎಂಬುದೇ ಸಂದೇಹಾಸ್ಪದವಾದ ವಿಚಾರ.

ಆದರೂ ಪಕ್ಷಿಗಳಿಗೂ ಸರೀಸೃಪಗಳಿಗೂ ಅನೇಕ ಹೋಲಿಕೆಗಳಿವೆ. ಬೆನ್ನುಮೂಳೆ ರುಂಡದ ಮೂಳೆಗಳೊಡನೆ ಸೇರಿರುವ ರೀತಿ, ಮತ್ತು ರಕ್ತಕಣಗಳಲ್ಲಿ ಬೀಜಾಂಕುರಗಳಿರುವುದು ಎರಡು ವರ್ಗದಲ್ಲೂ ಒಂದೇ ರೀತಿಯಾಗಿದೆ. ಎರಡೂ ಅಂಡಜಗಳು. ಮೊಟ್ಟೆಯ ರಚನೆಯಲ್ಲಿ ಹೋಲಿಕೆಯಿದ್ದು, ಅವುಗಳ ಬೆಳವಣಿಗೆಯಾಗುವಾಗ ಸ್ವಲ್ಪಕಾಲ ಒಂದೇ ರೀತಿಯಾಗಿದೆ. ಅನೇಕ ಪಕ್ಷಿಗಳ ಮುಂಗೈ ಮತ್ತು ಬೆರಳುಗಳ ಮೇಲೆ ಸರೀಸೃಪಗಳಿಗಿರುವಂತಹ ಹುರುಪೆಗಳಿವೆ. ಈ ಹುರುಪೆಗಳು ಹಲವು ಪಕ್ಷಿಗಳಲ್ಲಿ ಅಂದರೆ ಹದ್ದು,

ಗೂಬೆಗಳಲ್ಲಿ ಸಣ್ಣ ಗರಿಗಳಾಗಿ ಮಾರ್ಪಟ್ಟಿರುವುವು. ಪಕ್ಷಿಗಳ ಗರಿಗಳು ಸರೀಸೃಪಗಳ ಮಾರ್ಪಾಟುಗಳಾದ ಹುರುಪೆಗಳೆಂಬ ವಾದವನ್ನು ಸಮರ್ಥಿಸುತ್ತದೆ. ಹಲವು ಪಕ್ಷಿ ಪ್ರಭೇಧಗಳ ಕೊಕ್ಕಿನ ಹೊರ ಹೊದಿಕೆ ವರ್ಷಕ್ಕೊಮ್ಮೆ ಕಳಚಿ ಬೀಳುತ್ತವೆ. ಇದು ಸರೀಸೃಪಗಳ ಚರ್ಮ ಬಿಡುವಿಕೆಯನ್ನು ಸೂಚಿಸುತ್ತದೆ.

ಪಕ್ಷಿಗಳ ಉಗಮ ಯಾವ ಪ್ರಾಣಿಯಿಂದಲೇ ಆಗಿರಲಿ, ಅವು ಸರೀಸೃಪಗಳಿಂದಾದ ವೆಂಬುದು ಮಾತ್ರ ನಿರ್ವಿವಾದ. ಸರೀಸೃಪ ಬುಡದಿಂದ ಕವಲಾದ ಮೇಲೆ ಈ ಪ್ರಾಣಿ ವರ್ಗದ ರಚನೆಯಲ್ಲಿ ಅವುಗಳ ವಾಯು ಸಂಚಾರಕ್ಕೆ ಹೊಂದಿದಂತಹ ಮಾರ್ಪಾಟು ಏರ್ಪಡಲಾರಂಭಿಸಿತು. ಅವುಗಳ ಮೂಳೆ ಹಗುರವಾಗಲು ಟೊಳ್ಳಾಯಿತು. ಆದರೆ ಗಟ್ಟಿಯಾಗಿರಲು ದೊಡ್ಡ ಮೂಳೆಗಳ ಮಧ್ಯದಲ್ಲಿ ಅಡ್ಡ ಕಟ್ಟೆಗಳು ಉತ್ಪನ್ನವಾದವು. ಎದೆಯ ಎಲುಬುಗಳೆಲ್ಲಾ ಒಂದಾಗಿ ಸೇರಿ ಬೆನ್ನುಮೂಳೆ ಅಂಟಿ ಅಲುಗಾಡದಂತಾಯಿತು. ಹಾರಾಡಲು ಬೇಕಾದ ಹೆಚ್ಚಿನ ಮಾಂಸಖಂಡಗಳ ಜೋಡಣೆಗೆ ಅನುಕೂಲವಾಗುವಂತೆ ಎದೆ ಎಲುಬುಗಳ ತಳಭಾಗ ಅಗಲವಾಗಿ ದೋಣಿಯ ತಳದಂತಾಯಿತು. ಕತ್ತು ಮತ್ತು ಬಾಲದ ಮೂಳೆಗಳು ಮಾತ್ರ ಅಲುಗಾಡುವಂತೆ ಸಡಿಲವಾದುವು. ಹಾರಾಟದ ಸ್ನಾಯುಗಳೂ ಮಾಂಸಖಂಡವೂ ಅತಿ ಹೆಚ್ಚಾಗಿ ವೃದ್ಧಿಗೊಂಡವು. ಸಾಮಾನ್ಯವಾಗಿ ಈ ಎದೆಯ ಮಾಂಸಖಂಡವು ಪಕ್ಷಿದೇಹದ ಒಟ್ಟು ತೂಕದಲ್ಲಿನ ಶೇಕಡ ೨೫–೩೬ ಭಾಗದಷ್ಟಿರುತ್ತದೆ. ಹಲವು ಸಣ್ಣ ಪಕ್ಷಿಗಳಿಗೆ ಶೇ. ೩೦ರಷ್ಟಿರಬಹುದು. ಮಾನವನ ಎದೆಯ ಮಾಂಸ ಶೇಕಡ ೧ ಭಾಗಕ್ಕಿಂತ ಕಡಮೆ !

ಜೀವ ವಿಕಾಸದ ಪ್ರಗತಿಯಲ್ಲಿ ಬಹುಕಾಲದವರೆಗೂ ಸರೀಸೃಪ ಹಾಗೂ ಪಕ್ಷಿಗಳು ಒಂದೇ ಮಾರ್ಗದಲ್ಲಿ ಮುಂದುವರಿದಿರಬೇಕು. ಇಂದಿಗೂ ಈ ಎರಡು ಪಂಗಡಗಳ ನಡುವೆ ಹಲವು ಸಾದೃಶ್ಯಗಳು ಎದ್ದು ಕಾಣುತ್ತವೆ. ಹೊರ ರೂಪದಲ್ಲಿಯೂ, ಒಳರಚನೆಯಲ್ಲಿಯೂ ಬಾತು ಕೋಳಿಯ ಮೊಟ್ಟೆ ಎಲ್ಲಾ ವಿಧದಲ್ಲೂ ಮೊಸಳೆಯ ಮೊಟ್ಟೆಯನ್ನೇ ಹೋಲುತ್ತದೆ! ಎರಡರಲ್ಲಿಯೂ ಈಗಲೂ ಆಮ್ನಿಯನ್ ಮತ್ತು ಅಲಂಟಾಯಿಸ್ ಗರ್ಭಾವರಣಗಳಿವೆ.

ಆದರೆ ವ್ಯತ್ಯಾಸ ಬಹಳ ಉಂಟು. ಪ್ರಾಣಿಜೀವ ವಿಕಾಸದ ಅರಿವಿಲ್ಲದವರಿಗೆ ಈ ಎರಡು ಜಾತಿಗಳ ನೆಂಟಸ್ತಿಕೆ ಬಹುಶಃ ನಂಬಲಾರದಂತಿರಬೇಕು. ಸರೀಸೃಪಗಳಿಗೆ ಉದ್ದನೆಯ ಬೆನ್ನೆಲುಬು ಹುರಿಯೂ, ನೀಳ ಬಾಲವೂ ಇದೆ. ಅದರ ಮೂಳೆಗಳು ಭಾರವಾಗಿರುತ್ತವೆ. ಕಾಲುಗಳು ಗಿಡ್ಡವಾಗಿವೆ. ಈ ರಚನೆ ನಾಲ್ಕು ಕಾಲುಗಳ ಮೇಲೆ ಓಡಾಡಲು ಅನುಕೂಲವಾದದ್ದು. ಅದರ ಭುಜದ ಗೂಡು ಮೂರು ಗಟ್ಟಿ ಮೂಳೆ ಗಳಿಂದಾದವು. ಆದರೆ ಎದೆಯ ಮೂಳೆಗಳು ಚಪ್ಪಟೆಯಾಗಿ ಹಗುರ. ಕಾಲುಗಳು ಗಿಡ್ಡವಾಗಿದ್ದರೂ ಮಣಿಕಟ್ಟು ಸಡಿಲ. ಐದು ಬೆರಳುಗಳಿರುವುದರಿಂದ ವೇಗವಾಗಿ ಚಲಿಸಲು ಸಹಾಯಕವಾಗುತ್ತವೆ. ಪ್ರಾಣಿ ದೇಹಕ್ಕೆ ಮುಖ್ಯವಾದ ಸಮತೋಲನ ಅದರ ವಸ್ತಿ ಕುಹರದಿಂದಲೇ (Pelvis). ಎಲ್ಲದಕ್ಕಿಂತಲೂ ಮುಖ್ಯವಾಗಿ ಈ ವರ್ಗದ

ಪ್ರಾಣಿಗಳೆಲ್ಲಾ ಶೀತರಕ್ತದ ಪ್ರಾಣಿಗಳೇ. ಈ ಪ್ರಾಣಿಗಳ ದೇಹ ಶಾಖವು ಸುತ್ತಣ ಪರಿಸ್ಥಿತಿಯ ಶಾಖವನ್ನೇ ಅನುಸರಿಸುತ್ತದೆ. ಬಿಸಿಲು ಕಾಯುವ ಪ್ರಾಣಿಯ ರಕ್ತ ಶಾಖವೂ ಹೆಚ್ಚಾಗಿದ್ದರೂ, ಅದೇ ಪ್ರಾಣಿ ಶೈತ್ಯವಾತಾರಣದಲ್ಲಿದ್ದರೆ ದೇಹದ ಶಾಖವೂ ಕೂಡ ಕಡಮೆಯಾಗುತ್ತದೆ.

ಪಕ್ಷಿಗಳಲ್ಲಿ ಇವೆಲ್ಲಕ್ಕೂ ವ್ಯತಿರಿಕ್ತ. ಹಲವೇ ಮೂಳೆ ಭಾಗಗಳುಳ್ಳ ಹಗುರ ಹಾರಾಟಯಂತ್ರವದು! ಬೆನ್ನೆಲಬು ಸಣ್ಣದಾಗಿ ಒಟ್ಟು ಸೇರಿದ್ದು ಅದೇ ರೆಕ್ಕೆಗಳಿಗೆ ಮುಖ್ಯಾಧಾರ. ಭುಜದ ಮೂಳೆ ಒಂದೇ ಹಗುರ ಮೂಳೆಯಾಗಿದೆ. ಎದೆ ಮೂಳೆ ಅಗಲವಾದ ತಳ ಹೊಂದಿರುತ್ತದೆ. ರೆಕ್ಕೆ ನೀಳವಾದ ಮುಂಗಾಲು. ತಳದ ಬೆನ್ನು ಮೂಳೆಗಳು ಸೇರಿ ಗಟ್ಟಿಯಾದ ವಸ್ತಿ ಕುಹರವೇರ್ಪಟ್ಟಿರುತ್ತದೆ. ಬಾಲದ ಮೂಳೆ ಬಹಳ ಕಡಮೆಯಾಗಿ ಬಾಲದ ಗರಿಯನ್ನು ಹೊತ್ತಿರುತ್ತದೆ. ಮೂಳೆಗಳೆಲ್ಲಾ ಮಧ್ಯೆ ಟೊಳ್ಳಾಗಿದ್ದು ಬಹಳ ಹಗುರವಾಗಿರುತ್ತವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಅವು ಉಷ್ಣರಕ್ತದ ಪ್ರಾಣಿಗಳು. ಹೊರ ವಾತಾವರಣ ಏನೇ ಇರಲಿ ದೇಹಶಾಖ ಒಂದೇ ರೀತಿಯಾಗಿರುತ್ತದೆ. ಉಷ್ಣತೆ ಸಾಮಾನ್ಯವಾಗಿ ಸಸ್ತನಿಗಳಿಗಿಂತಲೂ ಹೆಚ್ಚು.



ಫೋರೋರಾಕಸ್

ಡಯಾಟ್ರೀಮಾ

ಪಕ್ಷಿ ಪೂರ್ವಿಕರು

(ಪಳೆಯುಳಿಕೆಗಳಿಂದ ರಚಿತವಾದದ್ದು)



ಹೆಸ್ಪರಾರ್ನಿಸ್

ಕ್ರಿಟೇಷಿಯಸ್ ಯುಗದ ಅಂದರೆ ಸುಮಾರು ೧೩ ಕೋಟಿಯಿಂದ ೬ ಕೋಟಿ ವರ್ಷಗಳ ಹಿಂದಿನ ಸಮಯದಲ್ಲೇ ಜೀವಿಸಿದ್ದ ಹಲವು ಪಕ್ಷಿಜಾತಿಯ ಪಳೆಯುಳಿಕೆ ದೊರೆತಿವೆ. ಈ ಪಂಗಡಕ್ಕೆ 'ನಿಯೋಥಾರ್ನಿಸ್' (Neothornis) ಎಂದು ಹೆಸರು. 'ಹೆಸ್ಪರಾರ್ನಿಸ್' (Hesperornis) ಎಂಬ ಪಕ್ಷಿಗಳು ಸುಮಾರು ೪-೫ ಅಡಿ ಉದ್ದವಿದ್ದು ತಮ್ಮ ನೀಳ ಕೊಕ್ಕಿನಲ್ಲಿ ಉರಗಗಳಂತೆ ಹಲ್ಲುಗಳನ್ನು ಹೊಂದಿದ್ದುವು. ಅವುಗಳ ಜಲಪಾದಗಳು ದೇಹದ ಹಿಂಭಾಗಕ್ಕಿದ್ದು ಈಜಲು ಅನುಕೂಲವಾಗಿತ್ತು. ಅವುಗಳಿಗೆ ಹಾರಾಡಲು ಸಾಧ್ಯವಿಲ್ಲದಂತೆ ರೆಕ್ಕೆಗಳು ಸಣ್ಣವಾಗಿದ್ದವು. ದೇಹವೆಲ್ಲಾ ಗರಿಗಳಿಂದಾವೃತವಾಗಿದ್ದು, ಅವು ಈಜುವುದರಲ್ಲಿ ಪಾಂಡಿತ್ಯ ಹೊಂದಿದ್ದವು. ಮೀನೇ ಮುಖ್ಯಾಹಾರ. 'ಇಕ್ತಿಯಾರ್ನಿಸ್' (Ichthyornis) ಪಾರಿವಾಳದಷ್ಟು ಗಾತ್ರವಿದ್ದು ಸಮುದ್ರಪಕ್ಷಿ 'ಗಲ್'ಗಳನ್ನು ಹೋಲುತ್ತಿತ್ತು. ಅದಕ್ಕೆ ಶಕ್ತಿಯುತ ರೆಕ್ಕೆಗಳಿದ್ದು



ಇಕ್ತಿಯಾರ್ನೀಸ್

ಹಾರಲು ಅನುಕೂಲವಾಗಿತ್ತು. ಸ್ಕಾಂಡಿನೇವಿಯಾದ ಬಳಿ ಫ್ಲೆಮಿಂಗೋ ರೀತಿಯ ಮತ್ತು ನೀರು ಕಾಗೆಯಂತಿರುವ ಪಕ್ಷಿಯ ಪಳೆಯುಳಿಕೆ ದೊರೆತಿದೆ. ಇವುಗಳಲ್ಲದೆ ಅನೇಕ ಹಾರಾಡಲಾರದ ದೊಡ್ಡ ಗಾತ್ರದ ಪಕ್ಷಿಗಳೂ ಕ್ರಿಟೇಷಿಯಸ್ (Cretaceous) ಯುಗದ ಅಂತ್ಯದ ವೇಳೆಗೆ ಪ್ರಬಲಿಸಿದ್ದವೆಂದು ಕಂಡುಬರುತ್ತದೆ. 'ಡಯಾಟ್ರೀಮಾ' (Diatrema) ಹಾರಾಡಲಾರದ ಪಕ್ಷಿ ಸುಮಾರು ೭ ಅಡಿ ಎತ್ತರ. ಅದರ ತಲೆಯು ಇಂದಿನ ಕುದುರೆಯ ತಲೆಯ ಗಾತ್ರ. ಅದರ ಕೊಕ್ಕು ಬಲಿಷ್ಟವಾಗಿ ಮೊನಚಾಗಿತ್ತು. ಗಟ್ಟಿಯಾದ ಕಾಲುಗಳೂ, ಈ ಕೊಕ್ಕೂ, ಇತರ ಸರೀಸೃಪಗಳನ್ನೂ ಸಸ್ತನಿಗಳನ್ನೂ ಹಿಡಿದು ತಿನ್ನಲು ಸಹಾಯಕವಾಗಿದ್ದಿರಬೇಕು. 'ಫೋರೋರೇಕಸ್' (Phororhacus)

ಗ್ರಂಥಭಂಡಾರ

ದಕ್ಷಿಣ ಅಮೇರಿಕಾದಲ್ಲಿ ವಾಸವಾಗಿದ್ದ ಸುಮಾರು ೫ ಅಡಿ ಎತ್ತರದ ಪಕ್ಷಿ. ಕಾಲು ಸಣ್ಣ, ಕೊಕ್ಕು ಮೊನಚಾಗಿದ್ದರೂ ಬಲಿಷ್ಟವಲ್ಲ. ಅದಕ್ಕೆ ಅರ್ಧ ಬಲಿತ ರೆಕ್ಕೆಗಳೂ ಇದ್ದವು. ಪ್ರಾಚೀನ ಜೀವಕಲ್ಪದ ಅಂತ್ಯಕಾಲವಾದ ಪರ್ಮಿಯನ್ (Permian) ಯುಗದಲ್ಲಿ ಪ್ರಾರಂಭವಾದ ಸರೀಸೃಪಗಳ ಕಾಲ ಮಧ್ಯಜೀವಕಲ್ಪದ ಕೊನೆಕಾಲವಾದ ಕ್ರಿಟೇಷಿಯಸ್ ಯುಗದಲ್ಲಿ ಅಂತ್ಯಗೊಂಡಿತು. ಅದೇ ಸಮಯವೇ ಪಕ್ಷಿಗಳ ಪ್ರಾರಂಭ ಕಾಲ. ಮುಂದೆ ೬ರಿಂದ ೩ ಕೋಟಿ ವರ್ಷಗಳ ಹಿಂದಿನ ಸಮಯವಾದ ಪೇಲಿಯೋ ಸೀನ್ (Paleocene) ಮತ್ತು ಇಯೋಸೀನ್ (Eosene) ಯುಗಗಳು ಪಕ್ಷಿಗಳ ಕಾಲ ವೆನ್ನಬಹುದು. ಇಂದಿನ ಅನೇಕ ವರ್ಗದ ಪಕ್ಷಿಗಳ ಉಗಮ ಆ ಸಮಯದಲ್ಲೇ ಆದದ್ದು. ಆಗಿನ ಪಕ್ಷಿಜಾತಿಗೂ ಈಗಿರುವುದಕ್ಕೂ ವ್ಯತ್ಯಾಸವಿದ್ದರೂ ಅದು ಬಹು ಸ್ವಲ್ಪ. ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ವಿಕಾಸ ಹೊಂದಿದ್ದರೂ, ಆಹಾರ, ವಾಯುಗುಣ ಮತ್ತು ವಾತಾವರಣಗಳಿಗನುಗುಣವಾದ ಸಣ್ಣಪುಟ್ಟ ವ್ಯತ್ಯಾಸ ಗಳೇರ್ಪಟ್ಟಿವೆಯೇ ಹೊರತು ಹೆಚ್ಚೇನಿಲ್ಲ. ಆದರೆ ಕಾಲಕ್ರಮೇಣ ಕೋಟ್ಯಾಂತರ ಸಂಖ್ಯೆಯ ಪಕ್ಷಿಕುಲ ಕ್ಷೀಣಿಸಿ ಈಗ ಹಲಕೆಲವು ಮಾತ್ರ ಉಳಿದಿವೆ.

ದೊರೆತಿರುವ ಪಳೆಯುಳಿಕೆಗಳ ಹಾಗೂ ಜೀವಂತ ಪಕ್ಷಿಗಳ ಪುರಾವೆಗಳಿಂದ ಶ್ರೀ ಬ್ರಾಡ್‌ಕಾರ್ಬ್‌ರವರು ಸುಮಾರು ೧೬ ಲಕ್ಷ ೩೪ ಸಾವಿರ ಪಕ್ಷಿ ಪ್ರಭೇಧಗಳನ್ನು ಎಣಿಸಿದ್ದಾರೆ. ಆದರೆ ಅವುಗಳಲ್ಲಿ ಬಹು ಹೆಚ್ಚಿನವು ಪೂರ್ಣ ನಶಿಸಿ, ಈಗ ಉಳಿದಿರು ವುದು ಕೇವಲ ೮೫೦೦ ಮಾತ್ರ ! ಅಂದರೆ ಈಗ ಬದುಕಿರುವ ಪ್ರಭೇದಗಳು ಶೇ. ೧/೨ ಭಾಗದಷ್ಟು ಮಾತ್ರ !

ಪ್ರಾಣಿ ವಿಕಾಸ ನೈಸರ್ಗಿಕವಾಗಿ ನಿರಂತರ ನಡೆಯುತ್ತಿರುತ್ತದೆ. ವಾತಾವರಣಕ್ಕೆ ಹೊಂದಿಕೊಳ್ಳುವಂತಹ ಬದಲಾವಣೆ ಪ್ರಾಣಿಗಳಿಗೆ ಅತ್ಯಗತ್ಯ. ಹೊಂದಿಕೊಳ್ಳಲಾರದಾ ದಲ್ಲಿ ಅವು ನಿರ್ನಾಮವಾಗುವುವು. ಪಕ್ಷಿಗಳೆಲ್ಲಾ ಉರಗ ಬುಡಕಟ್ಟಿನಿಂದಲೇ ಪ್ರಾರಂಭ ವಾದರೂ ಕೋಟ್ಯಾಂತರ ವರ್ಷಗಳ ಮುಂದುವರಿಕೆಯಲ್ಲಿ ಬುಡವೆಲ್ಲಾ ನಾಶವಾಗಿ ಕೊಂಬೆಯಲ್ಲಿನ ಹಲಕೆಲವು ಪ್ರಭೇದಗಳು ಮಾತ್ರ ಇಂದು ಉಳಿದಿವೆ. ಅವುಗಳು ವ್ಯುತ್ಪನ್ನವಾದದ್ದೆಲ್ಲಿ ? ಒಂದೇ ಕೊಂಬೆಯಲ್ಲಿಯೋ ಅಥವಾ ವಿವಿಧ ಕೊಂಬೆಗಳಲ್ಲೋ ತಿಳಿಯುವುದು ಅಸಾಧ್ಯವಾಗಿದೆ. ಈ ವಿಕಾಸದ ಉತ್ತಮ ನಿದರ್ಶನ ಚಾ. ಡಾರ್ವಿನ್ನರು ಈಕ್ವಾಡಾರ್‌ನಿಂದ ೬೦೦ ಮೈಲಿ ದೂರದಲ್ಲಿನ ಗಾಲಪೋಗಸ್ ದ್ವೀಪಕ್ಕೆ ಬೇಟಿ ಕೊಟ್ಟಾಗ ಕಂಡು ವಿವರಿಸಿರುವುದು. ಒಂದು ಸಣ್ಣ ಪಕ್ಷಿಜಾತಿ ಹೇಗೋ ಅಲ್ಲಿಗೆ ಸೇರಿ ವೃದ್ಧಿಯಾಗಿದ್ದವು. ಬೇರೆ ಯಾವ ಪಕ್ಷಿಗಳೂ ಅಲ್ಲಿರಲಿಲ್ಲ. ಸಂಖ್ಯೆ ಹೆಚ್ಚುತ್ತಿದ್ದಂತೆ ಆಹಾರದ ಅಭಾವವೇರ್ಪಟ್ಟು, ಅಲ್ಲಿನ ವಿವಿಧ ಆಹಾರಕ್ಕೆ ತಕ್ಕಂತೆ ಹಲವು ಪರಿವರ್ತನೆ ಹೊಂದಬೇಕಾಯಿತು. ಈ ಪರಿವರ್ತನೆಗೆ ಬಹುಶಃ ಅನೇಕ ಶತಮಾನಗಳೇ ಬೇಕಾಗಿದ್ದಿರ ಬಹುದು. ಒಂದೇ ಜಾತಿಯವಾಗಿದ್ದರೂ ಬೇರೆ ಬೇರೆ ಪಕ್ಷಿಗಳಂತೆ ತೋರುತ್ತಿದ್ದವು. ಕೆಲವು ಕೀಟಾಹಾರಿಗಳು ; ಕೆಲವು ಕಾಳು ತಿನ್ನುವುವು ; ಮತ್ತೆ ಕೆಲವು ಮರ ತೂತು

ಮಾಡಿ ಹುಳುಮಾರಿಸಿ ತಿನ್ನುವಂತಹವು. ಇದಕ್ಕಾಗಿ ಅವುಗಳ ಕೊಕ್ಕಿನಲ್ಲಿ ಆಹಾರಕ್ಕೆ ತಕ್ಕಂತಹ ಮಾರ್ಪಾಟು ಆಗಿದ್ದು, ಸಣ್ಣ, ನೀಳ ಅಥವಾ ಬಲಿಷ್ಟವಾಗಿ ಬೆಳೆದಿದ್ದವು ! ಇಂತಹ ನೈಸರ್ಗಿಕ ವಿಕಾಸಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಮಾರ್ಪಾಟು ನಿಧಾನವಾದ್ದರಿಂದ ನಮಗೆ ಗೋಚರಿಸುವುದಿಲ್ಲ. ಇಂತಹ ಮಾರ್ಪಾಟು ಈ ಕಳೆದ ಹಲವು ಕೋಟಿ ವರ್ಷಗಳಲ್ಲಿ ಎಷ್ಟೋ ಆಗಿರಬೇಕು.

ಈಗ ಉಳಿದಿರುವ ಹಾಗೂ ಗೊತ್ತಿರುವ ಪ್ರಭೇಧಗಳು ೮೫೮೦. ಅವುಗಳನ್ನು ದೇಹರಚನೆ ಮತ್ತು ಆಹಾರ ವೈವಿಧ್ಯತೆಗಳ ಆಧಾರದಿಂದ ೧೫೫ ಕುಟುಂಬಗಳಾಗಿ ಮತ್ತು ೨೭ ವರ್ಗಗಳಾಗಿ ವಿಂಗಡಿಸಲಾಗಿದೆ. ಆದರೆ ಪೂರ್ಣ ಪ್ರಭೇದಗಳನ್ನು ಯಾರೂ ನೋಡಿಲ್ಲ, ಅದು ಸಾಧ್ಯವೂ ಇಲ್ಲ. ಪ್ರಪಂಚದ ವಿವಿಧ ವಾತಾವರಣದಲ್ಲಿ ವಿವಿಧ ಪ್ರಭೇದಗಳು ವಾಸಿಸುತ್ತವೆ. ಅವುಗಳ ಜೀವನ ಚರಿತ್ರೆಯನ್ನೂ ಅನೇಕ ವೈಜ್ಞಾನಿಕರು ಅಭ್ಯಸಿಸಿ ಪ್ರಚುರ ಮಾಡಿದ್ದನ್ನು ಕ್ರೋಢೀಕರಿಸಿ, ಈ ಕಾರ್ಯ ನಿರ್ವಹಿಸಲ್ಪಟ್ಟಿದೆ. ಇನ್ನೂ ಅಧ್ಯಯನವಾಗದ ಪ್ರಭೇದಗಳೂ ಇರಬಹುದು. ಕ್ರಮೇಣ ಅದರ ಅರಿವು ನಮಗಾಗಬಹುದು.

ಹಲವು ಶತಮಾನಗಳಲ್ಲೇ ಅನೇಕ ಜಾತಿಗಳು ಮಾನವನ ದೌರ್ಜನ್ಯಕ್ಕೀಡಾಗಿ ನಿರ್ನಾಮವಾದವು. ಅವುಗಳಲ್ಲಿ ನ್ಯೂಜಿಲೆಂಡಿನ 'ಮೋವಾ' ಮುಖ್ಯವಾದದ್ದು. ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪಕ್ಷಿಯಿದು. ಸುಮಾರು ೧೨ ಅಡಿ ಎತ್ತರ ಬೆಳೆದು ತೂಕ ೫೦೦ ಪೌಂಡಿಗೆ ಮೀರುತ್ತಿತ್ತು. ಲಕ್ಷಾಂತರ ಪಕ್ಷಿಗಳ ಮೂಳೆಗಳ ರಾಶಿ ಅಲ್ಲಲ್ಲಿ ದೊರೆತಿವೆ. ಹಾಗೆ ಅವು ಗುಂಪಾಗಿರಲು ಕಾರಣ ಬಹುಶಃ ಮಾನವ ಅದನ್ನು ಬಳಸಿ, ಮೂಳೆಗಳನ್ನು ರಾಶಿ ಹಾಕಿರಬಹುದು. ಅವುಗಳಲ್ಲಿ ಹಲವು ಸಣ್ಣ ವಿಧಗಳು ಸುಮಾರು



ಗ್ರೆಟ್ ಆಕ್



ಮೋವಾ



ಪ್ರಯಾಣಿಕ ಪಾರಿವಾಳ

೧೦೦೦ ವರ್ಷಗಳ ಹಿಂದೆಯೂ ಹೇರಳವಾಗಿತ್ತೆಂದೂ, ಮೊದಲು ಅಲ್ಲಿಗೆ ವಲಸೆ ಹೋದ ಜನರೂ ಅವುಗಳನ್ನು ಕಂಡಿರುವರೆಂದೂ ವರದಿಯಾಗಿದೆ. ಪಕ್ಕದ ದ್ವೀಪ ಒಂದರಲ್ಲಿ ಈ ಸಂತತಿಯ ಹಲವು ಪಕ್ಷಿಗಳು ೧೮ನೆಯ ಶತಮಾನದ ವರೆಗೂ ಜೀವಿಸಿದ್ದುವು. ಅದ ರಂತೆಯೇ ಮೆಡಗಾಸ್ಕರ್ ದ್ವೀಪ ದಲ್ಲಿನ ' ಆನೆ ಪಕ್ಷಿ 'ಗಳೂ ಕೂಡ. ಅವು ಮೋವಾಗಳಿಗಿಂತ ದಪ್ಪ ವಾಗಿದ್ದು ೫೦೦–೬೦೦ ಪೌಂಡು ತೂಗುತ್ತಿದ್ದವು. ಅದರ ಮೊಟ್ಟೆಯ ಚಿಪ್ಪು ದಪ್ಪವಾಗಿದ್ದು ಅಲ್ಲಿಯ ಮೂಲ ನಿವಾಸಿಗಳು ಅದನ್ನು ನೀರು ತುಂಬಿಡಲು ಉಪಯೋಗಿಸುತ್ತಿದ್ದ ರಂತೆ. ಈಗಲೂ ಅದರಲ್ಲಿ ಹಲವು ಉಳಿದಿವೆ ! ಅವುಗಳಲ್ಲದೆ ಅನೇಕ ಜಾತಿಗಳೂ ಇತ್ತೀಚೆಗೆ ನಿರ್ನಾಮ ವಾದವು. ಅದನ್ನು ಮುಂದೆ ವಿವರಿಸ ಲಾಗಿದೆ.



ಡೋಡೋ

— ೨ —

ಭೂಮಿಯ ಮೇಲೆ ಹರಿದಾಡುತ್ತಿದ್ದ–ಓಡಾಡುತ್ತಿದ್ದ ಸರೀಸೃಪ ಹಾರಬೇಕಾದರೆ ಕೋಟ್ಯಾಂತರ ವರ್ಷಗಳ ಕಾಲಾವಧಿ ಮಾತ್ರವಲ್ಲ, ದೇಹ ರಚನೆಯ ಸಂಪೂರ್ಣ ಮಾರ್ಪಾಟೂ ಬೇಕಾಗಿತ್ತು. ಮೊದಲ ಅಗತ್ಯ ದೇಹದ ಮೂಳೆಗಳ ವಿಕಾಸ. ಸರೀಸೃಪ ಗಳಿಗೆ ಇದ್ದ ದೊಡ್ಡ ಗಟ್ಟಿ ಮೂಳೆಗಳು ಹಾರಾಡಲು ಆತಂಕ. ಹಾರಾಡುವ ಪ್ರಾಣಿ ಹಗುರವಾಗಿರಬೇಕು. ಅಂದರೆ ಅದರ ಎಲ್ಲಾ ಅಂಗಾಂಗಗಳೂ ತೆಳುವಾಗಬೇಕು. ವಿಕಾಸದ ಮೊದಲ ಹೆಜ್ಜೆ ಇದೇ ಆಗಿದ್ದಿರಬೇಕು. ಮೂಳೆ ಹಗುರವಾಗಲು ಟೊಳ್ಳಾಗ ತೊಡಗಿದವು. ಆದರೆ ದೇಹಕ್ಕೆ ತಕ್ಕಂತೆ ಶಕ್ತಿಯೂ ಇರಬೇಕಾದ್ದರಿಂದ ದಪ್ಪ ಮೂಳೆಗಳ

ಮಧ್ಯೆ, ಅಡ್ಡವಾಗಿ ಅಲ್ಲಲ್ಲಿ ಒದೆ ಪಟ್ಟಿಗಳಂತಹ ಮೂಳೆ ಬೆಳೆಯಿತು. ಹಾರಾಡಲು ಅನುಕೂಲವಾಗುವಂತೆ ಪಕ್ಕೆ ಎಲುಬು ಮತ್ತು ಬೆನ್ನು ಮೂಳೆಗಳೂ ಪರಿವರ್ತನೆ ಹೊಂದಿ ಬಾಗದಂತೆ ಬಿರುಸಾದವು. ಅವುಗಳಲ್ಲಿ ಚಲನೆ ಕಡಮೆಯಾಗಿ ಕೆಲವು ಒಟ್ಟುಗೂಡಿ ಧೃಢ ಮೈಕಟ್ಟು ಉಂಟಾಯಿತು. ಸುತ್ತ ನೋಡಲೂ ಹಾರುವಾಗ ದೇಹವನ್ನು ಅತ್ತಿತ್ತ ತಿರುಗಿಸಲೂ ಅನುಕೂಲವಾಗುವಂತೆ ಕತ್ತು ಮತ್ತು ಬಾಲದ ಮೂಳೆಗಳು ಮಾತ್ರ ಪ್ರತ್ಯೇಕವಾಗಿಯೇ ಉಳಿದವು. ರೆಕ್ಕೆಯ ಚಲನೆ ಮುಖ್ಯವಾಯಿತು. ಮುಂಗೈ ಮೂಳೆಗಳು ನೀಳವಾಗಿ ರೆಕ್ಕೆ ಗರಿ ಜೋಡಿಸಲು ಅನುಕೂಲವಾಯ್ತು. ರೆಕ್ಕೆಯ ಚಲನೆಗೆ ಹೆಚ್ಚಿನ ಸ್ನಾಯುಗಳ ಅಗತ್ಯವಿದ್ದುದರಿಂದ ಎವೆ ದೋಣಿ ತಳಭಾಗದಂತೆ ರೂಪಗೊಂಡು ಸ್ನಾಯುಗಳ ಜೋಡಣೆಗೆ ಅನುಕೂಲವಾಯ್ತು. ಇದರಿಂದ ದೇಹ ಬಹಳ ಹಗುರವೂ, ಗಾಳಿಯಲ್ಲಿ ಚಲಿಸಲು ಸಾಧ್ಯವೂ ಆದಂತಾಯಿತು. ಇತರ ಪ್ರಾಣಿಗಳಿಗಿರುವ ಮೂಳೆಗಳಲ್ಲಿ ಬಹು ಭಾಗ ಪಕ್ಷಿಗಳಿಗಿರುವುದಿಲ್ಲ. ದೇಹದ ಹಗುರ ರಚನೆಗಾಗಿ ಅನಾವಶ್ಯಕವಾದುದ್ದೆಲ್ಲವನ್ನೂ ಕ್ರಮೇಣ ವಿಸರ್ಜಿಸಲಾಯಿತು. ಈ ಎಲ್ಲಾ ಮಾರ್ಪಾಟುಗಳಿಂದ ಪಕ್ಷಿಗಳ ಅಸ್ಥಿಪಂಜರ ವಿಸ್ಮಯಕಾರಕ ವಸ್ತುವಾಗಿದೆ. ಅದರ ರಚನೆಯಲ್ಲಿ ಹಗುರತೆ ಹಾಗೂ ದೃಢತೆ ಹೆಣೆದುಕೊಂಡಿದ್ದು ಅನುಸರಣೆ ಸಾಧ್ಯವಾಗುತ್ತಿಲ್ಲ. ೮–೧೦ ಅಡಿ ಅಗಲದ ರೆಕ್ಕೆಯಿರುವ ಸಾಮಾನ್ಯ ಗಾತ್ರದ ಪಕ್ಷಿ ಬಹುಶಃ ೪–೫ ಪೌಂಡು ಭಾರವಿರುತ್ತದೆ. ಆದರೆ ಅದರ ಅಸ್ಥಿಪಂಜರದ ತೂಕ ಕೇವಲ ೪ ಔನ್ಸ್‌ಗಳು ಮಾತ್ರವಿರಬಹುದು. ಅದು ಬಹುಶಃ ಗರಿಗಳ ತೂಕಕ್ಕಿಂತ ಕಡಮೆಯೇ.

ಮೂಳೆಗಳ ಹಗುರತೆ ಮಾತ್ರ ದಪ್ಪ ದೇಹದ ಪಕ್ಷಿಗಳಿಗೆ ಸಾಲದು. ಅವು ಹಾರಾಡುವುದು ಕಷ್ಟವಾಗಬಹುದು. ಅದಕ್ಕಾಗಿಯೇ ಇನ್ನೂ ಹೆಚ್ಚಿನ ಅನುಕೂಲತೆ ಏರ್ಪಟ್ಟಿದೆ. ಪಕ್ಷಿಗಳಿಗೆ ೨ ಶ್ವಾಸಕೋಶಗಳಿವೆ. ಆದರೆ ಅದರ ಜೊತೆಗೆ ಗಾಳಿ ಕೋಶಗಳ ನೆರವು ದೇಹದಲ್ಲಿ ಏರ್ಪಟ್ಟಿವೆ. ಈ ಕೋಶಗಳು ಮಾಂಸಖಂಡಗಳ ಮಧ್ಯದಲ್ಲಿಯೂ, ಅಂಗಾಂಗಗಳ ಮಧ್ಯದಲ್ಲಿಯೂ, ಹಲವು ಸಮಯ ಎಲುಬುಗಳ ಮಧ್ಯದಲ್ಲಿಯೂ ಕೂಡ ಇರುತ್ತವೆ. ಈ ಎಲ್ಲಾ ಕೋಶಗಳಲ್ಲಿಯೂ ಗಾಳಿ ತುಂಬಿದ್ದು ಒಂದಕ್ಕೊಂದು ಪರಸ್ಪರ ಸಂಬಂಧ ಹೊಂದಿರುತ್ತದೆ, ಇದರಿಂದ ಪಕ್ಷಿಯ ದೇಹ ತುಂಬಾ ಹಗುರವಾಗಲು ಸಹಾಯಕವಾಗುತ್ತದೆ. ಈ ಕೋಶಗಳು ದೇಹದ ಉಷ್ಣಾಂಶವನ್ನು ಹತೋಟಿಯಲ್ಲಿಡಲೂ ಸಹ ಸಹಾಯಕವಾಗುತ್ತವೆ. ಪಕ್ಷಿಗಳಿಗೆ ಬೆವರು ಗ್ರಂಥಿಗಳಿಲ್ಲ. ಅವು ವೇಗದಿಂದ ಹಾರಾಡುವಾಗ ಅಧಿಕ ಉಷ್ಣ ಉತ್ಪನ್ನವಾಗಿ ಇಂತಹ ಒಂದು ಅನುಕೂಲವಿಲ್ಲದಿದ್ದಲ್ಲಿ ತೊಂದರೆಯಾಗುತ್ತಿತು.

ವಾಯುಮಂಡಲದಲ್ಲಿ ಹಾರಾಡುವ ಶಕ್ತಿಯನ್ನು ಗಳಿಸಿರುವ ಪ್ರಾಣಿ ತನ್ನ ದೇಹದ ಭಾರವನ್ನು ಅಂತರಿಕ್ಷದಲ್ಲಿ ಸಮದೂಗಿಸುವ ಶಕ್ತಿ ಪಡೆಯಬೇಕು. ಯಾವುದೇ ದೇಹ ತಾನಾಗಿ ವಾಯುಮಂಡಲದಲ್ಲಿ ತೇಲುವುದಿಲ್ಲ. ಅಲ್ಲದೆ ಪ್ರತಿಯೊಂದು ವಸ್ತುವನ್ನು

ತನ್ನ ಕಡೆಗೆ ಎಳೆದುಕೊಳ್ಳುವ ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ತಡೆದು ನಿಲ್ಲಬೇಕು. ಇದಕ್ಕಾಗಿ ಅದರ ದೇಹ ರಚನೆಯಲ್ಲಿ ವಿಶಿಷ್ಟ ಮಾರ್ಪಾಟು ಏರ್ಪಡಬೇಕು. ಆ ಮಾರ್ಪಾಟಿನ ಮುಖ್ಯಾಂಶವೇ ಪಕ್ಷಿಗಳ ರೆಕ್ಕೆ.

ರೆಕ್ಕೆಗಳು ಕೀಟಗಳಿಗೂ, ಹಲವು ಸಸ್ತನಿಗಳಿಗೂ ಇವೆ. ಅವು ಹಾರಾಡುವ ಶಕ್ತಿ ಗಳಿಸಿವೆ ನಿಜ. ಆದರೆ ಅವು ಪಕ್ಷಿಗಳ ಹಾರಾಟದಷ್ಟು ಉನ್ನತಮಟ್ಟವನ್ನು ಹೊಂದಿಲ್ಲ. ಆದ್ದರಿಂದ ಬಹು ದೂರದವರೆಗೆ ಹಾರಾಡಲಾಗುವುದಿಲ್ಲ. ಸ್ವಲ್ಪ ದೂರ ವೇಗವಾಗಿ ಹಾರಬಲ್ಲ ಕೀಟಗಳೂ ಬಹು ಬೇಗ ಆಯಾಸ ಹೊಂದಿ ಬೀಳುತ್ತವೆ. ಹಾರುವುದಕ್ಕೆ ಮುಂಚೆ ಪಕ್ಷಿಗಳು ನೆಲದ ಮೇಲೆ ವೇಗವಾಗಿ ಓಡಾಡಲು ಪ್ರಾರಂಭಿಸಿರಬೇಕು. ಹಾಗೂ ಕುಪ್ಪಳಿಸಿ ನೆಗೆದು ಓಡುತ್ತಿದ್ದಿರಬೇಕು. ಹಾಗೆ ಕುಪ್ಪಳಿಸಿ ನೆಗೆದಾಗ ಬಹುಶಃ ಅದು ಸಣ್ಣಪುಟ್ಟ ಪೊದರು ಗಿಡಗಳ ಮೇಲೆ ಕುಳಿತುಕೊಳ್ಳುವಂತಾಗಿರಬೇಕು. ಹಾಗೆ ಕುಳಿತೆಡೆಯಿಂದ ಕೆಳಗಿಳಿಯಲು ರೆಕ್ಕೆ ಮೊದಲು ಸಹಾಯಕವಾಗಿ, ಪಕ್ಷಿ ನಿಧಾನವಾಗಿ ತೇಲಿ ಇಳಿಯಲು ಅನುಕೂಲವಾಗಿದ್ದಿರಬೇಕು. ಇಲ್ಲಿಂದ ಮುಂದಿನ ಹೆಜ್ಜೆಯೇ ಇಷ್ಟ ಬಂದ ಕಡೆ ಹಾರಿಹೋಗಲು ಅನುಕೂಲವಾದ ರೆಕ್ಕೆಯ ಪೂರ್ಣ ರಚನೆ !


ರೆಕ್ಕೆಗಳು ಮಾರ್ಪಾಟು ಹೊಂದಿದ ಮುಂಗಾಲುಗಳು. ಪಕ್ಷಿಗಳ ಮಾರ್ಪಾಟು ಮುಂಗಾಲುಗಳಲ್ಲಿ, ಇತರ ಕಶೇರುಕಗಳಿಗಿರುವಂತೆ ತೋಳೆಲುಬು, ಮುಂಗೈ ಎಲುಬುಗಳು ಮತ್ತು ಕೈ ಎಲುಬುಗಳು ಇರುವುವು. ಈ ಎಲುಬುಗಳೆಲ್ಲಾ ಚರ್ಮದ ಪೊರೆಯಿಂದ ಆವರಿಸಲ್ಪಟ್ಟಿವೆ. ಬೆರಳುಗಳು ಮೂರು ಮಾತ್ರ. ಪಕ್ಷಿಯು ಕುಳಿತಿರುವಾಗ ರೆಕ್ಕೆಯ ಎಲುಬುಗಳು ಒಂದರಮೇಲೊಂದು ಮಡಚಿ ರೆಕ್ಕೆ ಬೆನ್ನನ್ನು ಮುಚ್ಚಿದಂತಿರುತ್ತದೆ. ಹಾರಲು ತೊಡಗಿದಾಗ ಎಲುಬುಗಳು ನೇರವಾಗಿ ಚಾಚಿ ನಿಲ್ಲುತ್ತವೆ. ಹೀಗೆ ಚಾಚಿ ನಿಂತಾಗ ರೆಕ್ಕೆಯ ನೀಳ ಅಕ್ಷವು ಪಕ್ಷಿಯ ದೇಹ ಅಕ್ಷಕ್ಕೆ ೯೦° ಕೋನದಲ್ಲಿರುತ್ತದೆ.

ಇತರ ಕಶೇರುಕಗಳಿಗಿರುವಂತೆಯೇ ಪಕ್ಷಿಗಳ ಭುಜಕಟ್ಟಿನಲ್ಲಿ ಕೋರೊಕಾಯಿಡ್ (Corocoid), ಸ್ಕ್ಯಾಪುಲ (Scapula) ಮತ್ತು ಕ್ಲಾವಿಕಲ್ (Clavicle) ಎಂಬ ಮೂಳೆಗಳಿವೆ. ಇವುಗಳಲ್ಲಿ ಕೋರೋಕಾಯಿಡ್ ದಪ್ಪವಾಗಿ ಕಂಬದತ್ತಿದ್ದು ಮಿಕ್ಕೆರಡು ಕಡ್ಡಿಗಳಂತೆ ಸಣ್ಣಗಿವೆ. ಎದೆಯ ಮೂಳೆ ಮುಂದುವರೆದು ಅಡಿಭಾಗದಲ್ಲಿ ದೋಣಿಯಾಕಾರವಾಗುತ್ತದೆ. ಈ ದೋಣಿಯಾಕಾರದ ಎಲುಬಿನ ಇಕ್ಕೆಡೆಗಳಲ್ಲೂ ಚಲನಕ್ಕೆ ಸಹಾಯಕವಾದ ಸ್ನಾಯುಗಳು ಜೋಡಿಸಲ್ಪಟ್ಟಿವೆ. ಇವುಗಳಲ್ಲಿ ಮುಖ್ಯವಾದ ಎರಡು ಬಗೆಯ ಸ್ನಾಯುಗಳಲ್ಲಿ ಹಲವು ತೋಳೆಲುಬಿನ ಮೇಲ್ಭಾಗಕ್ಕೂ, ಕೆಲವು ಅದರ ಕೆಳಭಾಗಕ್ಕೂ ಅಂಟಿದ್ದು ಇವುಗಳ ಸಂಕೋಚದಿಂದಲೇ ರೆಕ್ಕೆಗಳು ಮೇಲೆ ಕೆಳಗೆ ಚಲಿಸಲು ಸಾಧ್ಯವಾಗುವುದು.

ಸರಿಯಾಗಿ ಗಮನಿಸದಿದ್ದಲ್ಲಿ ಪಕ್ಷಿಗಳ ಮಂಡಿ ಹಿಂದಕ್ಕೆ ಮಡಚಿದಂತೆ ತೋರುತ್ತದೆ. ಆದರೆ ನಮಗೆ ಕಾಣುವ ಮಂಡಿ ನಿಜವಾದ ಮಂಡಿಯಲ್ಲ. ಅದು 'ಹಿಮ್ಮಡಿ' ಮಾತ್ರ. ಮಂಡಿ ದೇಹದಡಿ ಸೇರಿ, ತೊಡೆಯೊಡನೆ ಪೂರ್ಣವಾಗಿ ಮಾಂಸಖಂಡಗಳಿಂದ ಕೂಡಿ

ದೇಹಕ್ಕೆ ಸಮಾಂತರವಾಗಿರುತ್ತದೆ. ಇದರಿಂದ ಹಾರಾಡುವಾಗ ಪಕ್ಷಿಗಳಿಗೆ ತೊಂದರೆಯಾಗದ ಹಾಗೆ ಭಾರವೆಲ್ಲಾ ದೇಹದ ಮಧ್ಯಭಾಗದಲ್ಲಿ ಕೇಂದ್ರೀಕೃತವಾಗಿರುತ್ತದೆ. ನಮಗೆ ಕಾಲಿನಂತೆ ಕಾಣುವ ಭಾಗ ನಮ್ಮ ಪಾದ ಮೂಳೆಗೆ ಹೋಲುತ್ತದೆ. ಆದ್ದರಿಂದ ನಮಗೆ ಹೋಲಿಸಿಕೊಂಡಲ್ಲಿ ಪಕ್ಷಿಗಳು ಬೆರಳ ತುದಿಯಲ್ಲಿ ನಡೆಯುತ್ತವೆಂದು ವಿವರಿಸಬಹುದು.

ರೆಕ್ಕೆಯ ರಚನೆ ಹಾರಾಟಕ್ಕೆ ಬಹಳ ಅನುಕೂಲವಾದದ್ದು. ಮುಂಭಾಗ ದಪ್ಪ ಹಾಗೂ ದಟ್ಟವಾಗಿದ್ದು ಹಿಂಭಾಗ ಕ್ರಮೇಣ ತೆಳ್ಳಗಾಗಿರುತ್ತದೆ. ಅದರ ತಳಭಾಗ ಚಪ್ಪಟೆ ಅಥವಾ ಒಳ ಬಾಗಿನವಾಗಿದ್ದು, ಹೊರಭಾಗ ಉಬ್ಬು ಹೊಂದಿರುತ್ತದೆ. ದೇಹವನ್ನು ಮೇಲೆತ್ತಲು ರೆಕ್ಕೆಯ ಅಡಿಭಾಗ ಎಂದರೆ ತೋಳು ಭಾಗವೇ ಮುಖ್ಯ. ತುದಿಯಲ್ಲಿನ ಅಂದರೆ ಬೆರಳು ಭಾಗದ ಗರಿಗಳು ಪಕ್ಷಿಯನ್ನು ತೇಲಿಸಲೂ, ಅತ್ತಿತ್ತ ಹೊರಳಲೂ ಅನುಕೂಲವೇರ್ಪಡಿಸುತ್ತವೆ.



ವಿವಿಧಾಕಾರದ ಗರಿಗಳು

೧. ಮೈ ತುಂಬುವ ಕಾಂಟೂರ್ ಗರಿಗಳು. ೨. ತುಪ್ಪಳ ಗರಿ ೩. ಫಿಲೋ ಪ್ಲೂಮ್
೪. ಗೂಬೆ ರೆಕ್ಕೆಯ ಗರಿ


ಹಾರಾಟದ ಗರಿ

ಪಕ್ಷಿಗಳ ಹಾರಾಟಕ್ಕೆ ಮೂಲವಸ್ತು ಗರಿ. ಗರಿ ಪ್ರಕೃತಿಯ ಒಂದು ವಿಚಿತ್ರ ಸೃಷ್ಟಿ. ಹಗುರವಾಗಿದ್ದರೂ ಬಹು ಶಕ್ತಿಯುತವಾದದ್ದು. ಅದು ಹೊರಚರ್ಮದ ಜೀವಕಣಗಳಿಂದ ರಚಿತವಾದುದು. ಗರಿಗೆ ಎರಡು ಭಾಗವಿದೆ : ತಳದ ಟೊಳ್ಳು ಭಾಗ – ಕ್ವಿಲ್ (Quill) ಅದರ ವಿಸ್ತೃತ ಮೇಲ್ಭಾಗ–ವೇನ್ (Vane) ; ವೇನ್ ಮಧ್ಯಭಾಗದಲ್ಲಿರುವ ದಂಡೆ ಟೊಳ್ಳಾದ ಕ್ವಿಲ್ಲಿನ ಮುಂದುವರಿಕೆಯೇ. ಈ ದಂಡೆಗೆ ' ರೇಕಿಸ್ ' (Rachis) ಎಂದು ಹೆಸರು. ದಂಡೆಯ ಎರಡು ಪಕ್ಕಗಳಿಂದಲೂ ಗರಿಯ ಅಡ್ಡ ರೇಖೆಗಳು ಹೊರಡುತ್ತವೆ. ಅವು ಸೂಕ್ಷ್ಮವಾದ ದಾರದಂತಿದ್ದು ಅದರಿಂದಲೂ ಸೂಕ್ಷ್ಮವಾದ ಅಡ್ಡ ಎಳೆಗಳು (Barbules) ಉತ್ಪನ್ನವಾಗುತ್ತವೆ. ಈ ಎಳೆಗಳ ಕೊನೆ ಕೊಂಡಿಗಳ ಹಾಗೆ ಬಗ್ಗಿರುತ್ತದೆ. ಒಂದು ಗರಿಯನ್ನು ಕೈಯಲ್ಲಿ ಹಿಡಿದು ವಿಸ್ತೃತವಾದ ಭಾಗವನ್ನು ಮೇಲಿನ ಕೊನೆಯಿಂದ ಕೆಳಮುಖನಾಗಿ ಚದುರಿಸಿ, ಅನಂತರ ಕೆಳಗಿನಿಂದ ಮೇಲ್ಮುಖವಾಗಿ ಸವರಿದರೆ ಅಡ್ಡ ರೇಖೆಗಳೆಲ್ಲಾ ಪುನಃ ಒಟ್ಟುಗೂಡುತ್ತವೆ. ಅಡ್ಡ ರೇಖೆಗಳಲ್ಲಿನ ಕೊಂಡಿಗಳು ಸುಲಭವಾಗಿ ಒಂದಕ್ಕೊಂದು ಹೆಣೆದು ಹಿಡಿದು ಕೊಳ್ಳುವುದರಿಂದ ಇದು ಸಾಧ್ಯ. ಒಂದೇ ಗರಿಯಲ್ಲಿ ಸಹಸ್ರಾರು ಎಳೆಗಳೂ, ಲಕ್ಷಾಂತರ ಅಡ್ಡ ಎಳೆಗಳೂ. ಕೊಂಡಿಗಳೂ ಇರುತ್ತವೆ ! ವೇನ್‌ನ ಮೇಲುಭಾಗ ಕಿರಿದಾಗಿದ್ದು, ತಳಭಾಗ ಅಂದರೆ ಹಾರುಪಾಗ ಹಿಂಭಾಗ ಅಗಲವಾಗಿರುತ್ತದೆ.

ಮೇಲೆ ವಿವರಿಸಿದ ಗರಿಗಳು ಪಕ್ಷಿಗಳಿಗೆ ಮುಖ್ಯವಾದ ಹಾರಾಟದ ಗರಿಗಳು. ಪಕ್ಷಿಗಳಿಗೆ ಮೂರು ವಿಧದ ಗರಿಗಳಿರುತ್ತವೆ. ಹಾರಾಟದ ಗರಿಗಳು ರೆಕ್ಕೆಗಳ ಮೇಲೂ ಮತ್ತು ' ಬಾಲ 'ದ ಬಳಿಯೂ ಇರುತ್ತವೆ. ಇವಲ್ಲದೆ ದೇಹವನ್ನು ಹೊದಿಕೆಯಂತೆ ಮುಚ್ಚಿ ಅದಕ್ಕೆ ನಿರ್ದಿಷ್ಟ ಆಕಾರ ಕೊಡುವ ' ಕಾಂಟೂರ್ ' ಗರಿಗಳು, ಅವೇ ಅತಿ ಹೆಚ್ಚಾಗಿರುವುದು. ಈ ಗರಿಗಳ ನಡುವೆ ದೇಹಕ್ಕೆ ಅಂಟಿದ ಹಾಗೆ ಮೃದುವಾಗಿರುವ ' ತುಪ್ಪಳ ' ಗರಿ (Downy feathers) ಗಳಿರುತ್ತವೆ. ಪಕ್ಷಿಯ ದೇಹದ ಶಾಖವನ್ನು ಕಾಪಿಡುವುದೇ ಇದರ ಮುಖ್ಯ ಕಾರ್ಯ. ತುಪ್ಪಳ ಗರಿಗಳ ನಡುವೆ ಅಲ್ಲಲ್ಲಿ ಕೆಲವು ಕೂದಲಿನಂತಿದ್ದು, ತುದಿಯಲ್ಲಿ ಹಲವು ಕೊಂಡಿಗಳ ಗುಚ್ಛ ಹೊಂದಿರುವ ' ಫಿಲೋ ಪ್ಲೂಮ್ ' ಕೂದಲು ಗರಿಗಳಿವೆ. ಈ ಮೂರೂ ಸಾಮಾನ್ಯವಾಗಿ ಎಲ್ಲಾ ಪಕ್ಷಿಗಳಲ್ಲೂ ಕಂಡುಬರುತ್ತದೆ. ಆದರೆ ನಾಲ್ಕನೆಯ ಮಾದರಿಯೊಂದು ಹಲವು ಪಕ್ಷಿಗಳಲ್ಲಿ

ಮಾತ್ರ ಇದೆ. ಅದಕ್ಕೆ ' ಧೂಳು ಗರಿ ' ಎನ್ನಬಹುದು. ಅವು ಆಗಾಗ್ಗೆ ಧೂಳಾಗಿ ಕರಗುತ್ತವೆ. ಆ ಧೂಳನ್ನೂ ಹಕ್ಕಿಗಳು ಗರಿಗಳಿಗೆ ಸವರಲು ಉಪಯೋಗಿಸುತ್ತವೆ. ರಾತ್ರಿ ಕಾಲದಲ್ಲಿ ಬೇಟೆಯಾಡಲು ಸಂಚರಿಸುವ ಗೂಬೆಯಂತಹ ಪಕ್ಷಿಗಳ ಹಾರಾಟ ಗರಿಗಳಿಗೆ ಬಾಚಣಿಗೆಯಂತಹ ಜೋಡಣೆ ಅಂಚಿನಲ್ಲಿದ್ದು, ಹಾರುವ ಶಬ್ದ ಕಡಮೆ ಮಾಡುತ್ತದೆ.

ಸಾಮಾನ್ಯವಾಗಿ ಪಕ್ಷಿಗಳ ವರ್ಗಕ್ಕೆ ಚರ್ಮಗ್ರಂಥಿಗಳಿರುವುದಿಲ್ಲ. ಹಿಂಭಾಗದಲ್ಲಿ ಬಾಲದ ಹತ್ತಿರ ಜಿಡ್ಡಾದ ದ್ರವವನ್ನು ಉತ್ಪನ್ನ ಮಾಡುವ ಗ್ರಂಥಿಯಿರುತ್ತದೆ. ಈ ಗ್ರಂಥಿ ನೀರು ಹಕ್ಕಿಗಳಲ್ಲಿ ಹೆಚ್ಚಾಗಿ ಬೆಳೆದಿರುತ್ತದೆ. ಪಕ್ಷಿಗಳು ಬೇಕಾದಾಗ ಕೊಕ್ಕಿನಿಂದ ಆ ಜಿಡ್ಡನ್ನು ಕೊರೆದು ತೆಗೆದು ಗರಿಗಳಿಗೆಲ್ಲಾ ಸವರುತ್ತದೆ. ಇದರಿಂದ ಗರಿಗಳ ಮೇಲೆ ನೀರು ನಿಲ್ಲುವುದಿಲ್ಲ, ಹಲವು ಕೊಕ್ಕರೆ ಜಾತಿಗಳು ಇದಕ್ಕೆ ಬದಲಾಗಿ ' ಧೂಳು ಗರಿಗಳ ' ಧೂಳನ್ನು ಸವರಿಕೊಳ್ಳುತ್ತವೆ.

ಈ ಗರಿಗಳಲ್ಲಿ ನೀಳ ಹಾರು ಗರಿಗಳನ್ನು ರೆಕ್ಕೆಯನ್ನು ಹರಡಿದಾಗ ಚೆನ್ನಾಗಿ ನೋಡಬಹುದು. ತೋಳೆಲುಬಿಗೂ ಗರಿಗಳಿಗೂ ಸಂಬಂಧವಿರುವುದಿಲ್ಲ. ಮಧ್ಯೆ ಅಲ್ಲಾಡಲು, ಕೈ ಎಲುಬಿಗೆ ಮಾತ್ರ ಅವು ಹೊಂದಿಕೊಂಡಿದ್ದು, ಮೇಲ್ಭಾಗದಲ್ಲಿ ಸಾಮಾನ್ಯವಾಗಿ ೨೩ ಗರಿ ಕಂಡುಬರುತ್ತದೆ. ಪಕ್ಷಿಗೆ ಪೂರ್ಣ ಗರಿಗಳ ಸಂಖ್ಯೆಯೆಷ್ಟು ? ಅದು ಸಾಮಾನ್ಯವಾಗಿ ಪಕ್ಷಿಯ ಗಾತ್ರವನ್ನನುಸರಿಸುತ್ತದೆ. ಪಕ್ಷಿ ದಪ್ಪವಾದಷ್ಟೂ ಅದು ಹೆಚ್ಚು. ರೈತನೊಬ್ಬ ತನ್ನಲ್ಲಿದ್ದ ಜಾತಿ ಕೋಳಿಯೊಂದರ ಪೂರ್ಣ ಪುಕ್ಕಗಳನ್ನು ಕಿತ್ತು ಎಣಿಸಿದ. ಅದರಲ್ಲಿ ೮,೩೨೫ ಗರಿಗಳಿದ್ದವಂತೆ ! ಸಿಳ್ಳು ಹಂಸದ ಪೂರ್ಣ ತುಪ್ಪಟ ೨೫,೨೧೬ರಷ್ಟಿದ್ದು ಅದರ ಶೇ. ೮೦ ಭಾಗ ಅದರ ತಲೆ ಮತ್ತು ಬಹು ನೀಳ ಕತ್ತಿನಲ್ಲಿತ್ತು. ಸಣ್ಣ ಹಕ್ಕಿಗಳಿಗೆ ೧,೦೦೦ರಿಂದ ೪,೬೦೦ ಗರಿಗಳಿವೆಯಂತೆ. ಅವುಗಳಿಗೆ ಬೇಸಗೆಯಲ್ಲಿ ತುಪ್ಪಟ ಉದುರಿ ಕಡಮೆ ಇದ್ದು, ಚಳಿಗಾಲದಲ್ಲಿ ಹೆಚ್ಚಾಗಿರಬಹುದು. ಬಹು ಸಣ್ಣ ಹಮ್ಮಿಂಗ್ ಪಕ್ಷಿಗೆ ಕೇವಲ ೯೪೦ ಗರಿ ಮಾತ್ರವಿದೆಯೆಂದು ಎಣಿಸಲಾಗಿದೆ.

ಗರಿಗಳು ಎಷ್ಟೇ ರಚನಾ ವೈಶಿಷ್ಟ್ಯತೆಯನ್ನು ಹೊಂದಿದ್ದರೂ, ಅವು ಅಮರವಲ್ಲ. ವಯಸ್ಸಾದಂತೆ ಉಪಯುಕ್ತತೆಯಿಂದ ಅವು ನಶಿಸುತ್ತವೆ. ಅದು ಆಗ ಹರಿದು ಅಥವಾ ಮುರಿದುಹೋಗುತ್ತದೆ. ಅದರ ಪೂರ್ವಿಕರಾದ ಸರೀಸೃಪಗಳು ಪೊರೆ ಬಿಡುವಂತೆ, ಈ ಗರಿಗಳು ಉದುರಿ ಹೊಸ ಗರಿಗಳು ಹುಟ್ಟುತ್ತವೆ. ಮೊಟ್ಟೆಯಿಟ್ಟು ಬಲಹೀನವಾದಾಗ, ವಲಸೆ ಹೋಗುವುದಕ್ಕೆ ಮುನ್ನ ಹಳೆಯ ಗರಿ ಉದುರಿ ಹೊಸ ಗರಿ ಹುಟ್ಟುತ್ತವೆ. ಪೆಂಗ್ವಿನ್‌ಗಳನ್ನುಳಿದು ಇತರ ಪಕ್ಷಿಗಳಲ್ಲಿ ಗರಿಗಳೆಲ್ಲಾ ಏಕ ಕಾಲದಲ್ಲಿ ಉದುರುವುದಿಲ್ಲ. ಅದರಲ್ಲೂ ಒಂದು ಶಿಸ್ತಿದೆ. ಹಾರಾಟ ಗರಿಗಳು ಮತ್ತು ಬಾಲದ ಗರಿಗಳು ಜೊತೆಜೊತೆಯಾಗಿ ಉದುರುತ್ತವೆ. ಜೊತೆಯಲ್ಲಿ ಒಂದೊಂದು ಪಕ್ಕದವು. ಇದರಿಂದ ಆಹಾರ ಅರಸಲು ಪಕ್ಷಿಗಳಿಗೆ ತೊಂದರೆಯಾಗುವುದಿಲ್ಲ. ಹಲವು ಗರಿಗಳು ಕಡಮೆಯಾಗಬಹುದು – ಅಷ್ಟೇ, ಆದರೆ ತೊಡಕೇನಿಲ್ಲ. ಹಲವು ಬಾತುಗಳು ಮತ್ತು

ನೀರು ಹಕ್ಕಿಗಳಲ್ಲಿ ಮಾತ್ರ ದೂರ ಆಹಾರ ಅರಸಲು ಹೋಗಬೇಕಿಲ್ಲವಾಗಿ ಪೂರ್ಣ ಪುಕ್ಕ ಉದುರಿ ಹುಟ್ಟಬಹುದು.

ಪಕ್ಷಿಗಳ ಜೀವನದಲ್ಲಿ ಗರಿಗಳ ಪಾತ್ರ ಬಹು ಮುಖ್ಯವಾದದ್ದು. ಅವು ಬರಿಯ ಹಾರಾಟದ ಸಾಧನ ಮಾತ್ರವಲ್ಲ. ದೇಹದ ಶಾಖವನ್ನು ಸಮುದೂಗಿಸಿ ವ್ಯವಸ್ಥೆಗೊಳಿಸುವುದು ಅದರ ಎರಡನೆಯ ಕೆಲಸ. ರಕ್ತನಾಳಗಳಿಂದ ತುಂಬಿ ಯಾವಾಗಲೂ ಬೆಚ್ಚಗಿರುವ ಒಳ ಚರ್ಮವನ್ನು, ಹಿಮ, ಮಳೆ, ಗಾಳಿಗಳಿಂದ ಕಾಪಾಡುವುದು ಮೂರನೆಯ ಕರ್ತವ್ಯ. ಅಲ್ಲದೆ ಅವುಗಳ ವರ್ಣವಿನ್ಯಾಸದಿಂದ ಶತ್ರುಗಳ ಹೊಡೆತಕ್ಕೆ ಸಿಲುಕದಂತೆ ಸಹಾಯವೇರ್ಪಡುತ್ತದೆ. ಇದು ನಾಲ್ಕನೆಯ ಕಾರ್ಯ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಸಂತಾನಾಭಿವೃದ್ಧಿ ಕಾರ್ಯದಲ್ಲಿ ಹೆಣ್ಣನ್ನು ಆಕರ್ಶಿಸಲು ಈ ಗರಿಗಳ ವರ್ಣವೈವಿಧ್ಯತೆಯೇ ಮುಖ್ಯವಾದದ್ದು.

ಪಕ್ಷಿಗಳ ವಾಯುಚಲನ ವಿಜ್ಞಾನದ ಬಗ್ಗೆ ಸಹಸ್ರಾರು ಪತ್ರಿಕೆಗಳು ಪ್ರಚುರವಾಗಿದ್ದರೂ, ಯಾವುದೂ ಅದನ್ನು ಪೂರ್ಣವಾಗಿ ವಿವರಿಸಿಲ್ಲ. ಈ ನೈಸರ್ಗಿಕ ವೈಚಿತ್ರ್ಯವನ್ನು ಪೂರ್ಣವಾಗಿ ವಿವರಿಸಲೂ ಸಾಧ್ಯವಿಲ್ಲ. ಹಾರುವಾಗ ರೆಕ್ಕೆಗಳಲ್ಲಿನ ವಿವಿಧ ಭಾಗದ ಗರಿಗಳು ಗಾಳಿಯ ಒತ್ತಡಕ್ಕೆ ಹೊಂದಿಕೊಂಡಂತೆ ಬಾಗಿ, ಮುದುಚಿ, ಪಕ್ಷಿ ತನ್ನ ಗುರಿಯತ್ತ ನಿರಾಯಾಸವಾಗಿ ಸಾಗಲು ಸಹಾಯಕವಾಗುತ್ತದೆ. ವಿಮಾನ ರಚನೆ ಈ ತತ್ವವನ್ನೇ ಅನುಸರಿಸಿದ್ದರೂ, ಆ ನಯ, ಮತ್ತು ಮೃದುತ್ವವನ್ನು ಅದರಲ್ಲಿ ಅಳವಡಿಸಲಾಗುವುದಿಲ್ಲ.

ಪಕ್ಷಿಗಳು ಹಾರಾಡಲು ರೆಕ್ಕೆಗಳ ಬಡಿತದಿಂದ ವಾಯುವಿನ ಪ್ರತಿರೋಧನ ಶಕ್ತಿಯನ್ನು ಗೆಲ್ಲಬೇಕು. ಇದಕ್ಕೆ ಅನುಕೂಲವಾಗುವಂತೆ ಪಕ್ಷಿಗಳು ರೆಕ್ಕೆಗಳನ್ನು ಮೇಲಕ್ಕೂ ಕೆಳಕ್ಕೂ ಬಡಿದು ಗಾಳಿಯನ್ನು ಅದುಮಿ ಮೇಲೇರುತ್ತವೆ. ಹಾರುವುದಕ್ಕೆ ಮುನ್ನ ದೇಹವನ್ನು ಸುತ್ತಿದ್ದ ರೆಕ್ಕೆ, ಮೊದಲು ನೀಳವಾಗಿ ಚಾಚಲ್ಪಟ್ಟು, ನಂತರ ಬೆನ್ನಿನ ಮೇಲೆ ನೇರವಾಗಿ ಎತ್ತಲ್ಪಡುತ್ತದೆ. ಹೀಗೆ ಮೇಲೇರಿಸಿದ ರೆಕ್ಕೆ ಕೆಳಕ್ಕೂ ಮುಂದಕ್ಕೂ ಒತ್ತುವುದರಿಂದ ಪಕ್ಷಿ ಹಾರಲು ಸಾಧ್ಯವಾಗುತ್ತದೆ. ಮೇಲೆತ್ತುವಾಗ ಉಪ ಎಳೆಗಳು ಸಡಿಲವಾಗಿ ಗಾಳಿ ಗರಿ ಮೂಲಕ ತೂರಿಹೋಗಲು ಅನುಕೂಲವಾಗುತ್ತದೆ. ಇದರಿಂದ ರೆಕ್ಕೆ ಮೇಲೆತ್ತಲು ಪಕ್ಷಿಗಳಿಗೆ ಆಯಾಸವಾಗುವುದಿಲ್ಲ. ಆದರೆ ರೆಕ್ಕೆಯನ್ನು ಅದುಮುವುದರಿಂದಲೇ ಚಲನೆ ಸಾಧ್ಯವಾದ್ದರಿಂದ ಅದುಮುವಾಗ ಎಳೆಗಳೆಲ್ಲಾ ಹೆಣೆದುಕೊಂಡು ಬಿಗಿಯಾಗಿ ಗಾಳಿ ಒತ್ತಡವನ್ನು ಎದುರಿಸಿ ದೇಹವನ್ನು ಮೇಲೆತ್ತಿ ಮುಂದೂಡುತ್ತದೆ. ಹೀಗೆ ಸತತವಾಗಿ ರೆಕ್ಕೆಯ ಬಡಿತದಿಂದ ಎಷ್ಟು ದೂರವಾದರೂ ಅವು ಹಾರಾಡಲು ಶಕ್ತವಾಗುತ್ತವೆ. ಬಾಲದಲ್ಲಿನ ಗರಿಗಳು ದೇಹ ಅತ್ತಿತ್ತ ತಿರುಗಲು ಸಹಾಯಕವಾಗುತ್ತವೆ.

ಪಕ್ಷಿಗಳು ಎತ್ತರದಲ್ಲಿ ಹಾರಾಡುವಾಗ ಸಾಮಾನ್ಯವಾಗಿ ರೆಕ್ಕೆಗಳನ್ನು ಹೆಚ್ಚಾಗಿ ಬಡಿಯುವುದಿಲ್ಲ. ಹಾಗೆ ಬಡಿದರೂ ಚಲನೆಗೆ ಸಹಾಯಕವಾಗಲು ಒಂದೆರಡು ಸಲ

ಮಾತ್ರ. ಸಮುದ್ರದ ನೀರಿನಲ್ಲಿ ಹಡಗು ತೇಲುವಂತೆ, ಗಾಳಿಯು ಒತ್ತಡ ಪಕ್ಷಿಯ ದೇಹವನ್ನು ತೇಲಿಸುತ್ತದೆ. ಹಾಗೆ ತೇಲಿಸಲು ಸಹಾಯಕ ಹರಡಿದ ರೆಕ್ಕೆಗಳೇ ! ಇಳಿಯಂ ಬೇಕಾದಲ್ಲಿ ಅವುಗಳಿಗೆ ಬಹು ಸುಲಭ. ರೆಕ್ಕೆ ಮಡಚಿದಲ್ಲಿ ತಾನಾಗಿ ಇಳಿಯು ವಂತಾಗುತ್ತದೆ.

ಸಣ್ಣ ಪಕ್ಷಿಗಳಿಗೆ ರೆಕ್ಕೆಯು ಬಡಿತ ಹೆಚ್ಚು. ಸಣ್ಣ ಹಮ್ಮಿಂಗ್ ಹಕ್ಕಿ ಸೆಕೆಂಡಿಗೆ ೫೦ – ೭೦ ಸಲ ರೆಕ್ಕೆ ಬಡಿಯುತ್ತದೆ ! ಗುಬ್ಬಚ್ಚಿ ಸೆಕೆಂಡಿಗೆ ೧೫ ಸಲ, ಪಾರಿವಾಳ ೫ – ೮ ಸಲ ಹಾಗೂ ದಪ್ಪ ಗಾತ್ರದ ಪೆಲಿಕಾನ್ ಹದ್ದು ಮುಂತಾದುವು ೧ – ೨ ಸಲ ಮಾತ್ರ ರೆಕ್ಕೆ ಬಡಿಯುತ್ತವೆ. ಎಲ್ಲಾ ಪಕ್ಷಿಗಳಿಗೂ ಸಾಮಾನ್ಯವಾಗಿ ಭುಜ ಮೊಳಕೈ ಮತ್ತು ಮಣಿಕಟ್ಟುಗಳು ಸಡಿಲವಾಗಿದ್ದು ರೆಕ್ಕೆಯ ಚಲನದಲ್ಲಿ ಸಹಾಯಕವಾದರೂ 'ಹಮ್ಮಿಂಗ್' ಪಕ್ಷಿಗಳ ಭುಜ ಮಾತ್ರ ಸಡಿಲವಾಗಿರದೆ ರೆಕ್ಕೆ ಗಿಡ್ಡವಾಗಿರುತ್ತವೆ. ಅದರ ಅತೀವ ಚಲನಾಶಕ್ತಿಗೆ ಈ ರಚನೆಯೇ ಮುಖ್ಯ ಕಾರಣ. ಆದ್ದರಿಂದಲೇ ಪಕ್ಷಿಗಳ ಚಲನೆ ವಿಮಾನದಂತಿದ್ದರೆ, ಈ ಪಕ್ಷಿಯ ಚಲನೆ 'ಹೆಲಿಕಾಪ್ಟರ್' ಚಲನೆಯನ್ನು ಹೋಲುತ್ತದೆ. ಅದು ಚಲಿಸದೆ ಮೇಲೆ ಹಾಗೇ ತೇಲುತ್ತಾ ನಿಲ್ಲುವಾಗ ರೆಕ್ಕೆಗಳು ಭೂಮಿಗೆ ಸಮಾಂತರವಾಗಿರುತ್ತವೆ. ಅಲ್ಲದೆ ಈ ಹಕ್ಕಿ ಹಿಮ್ಮೊಗವಾಗಿ ಚಲಿಸಲೂ, ಮತ್ತು ಮುಂದುವರಿಯದೆ ಹಠಾತ್ತಾಗಿ ಮೇಲೇರಲೂ ಶಕ್ತಿ ಹೊಂದಿದೆ.

ಸಾಮಾನ್ಯ ಗಾತ್ರದ ಪಕ್ಷಿಗಳೆಲ್ಲಾ ರೆಕ್ಕೆ ಬಡಿತದಿಂದಲೇ ಚಲಿಸುತ್ತವೆ. ಗಿಡುಗ, ಹದ್ದು ಮುಂತಾದವು ಆಕಾಶದಲ್ಲಿ ತೇಲುತ್ತಿರುತ್ತವೆ. ಈ ರೀತಿ ತೇಲುವ ಹಕ್ಕಿಗಳಲ್ಲಿ ಎರಡು ವಿಧಗಳಿವೆ. ಅಗಲರೆಕ್ಕೆ ಮತ್ತು ಪಂಕದಂತಹ ಬಾಲಗರಿಗಳುಳ್ಳ ಹದ್ದು ಮುಂತಾದುವು ; ಮತ್ತು ಅತ್ಯಂತ ನೀಳವಾದ ಕಿರಿದಾದ ರೆಕ್ಕೆಗಳುಳ್ಳ ಸಮುದ್ರ ಪಕ್ಷಿಗಳು. ಅವು ಒಂದೆರಡು ಸಲ ಮಾತ್ರ ರೆಕ್ಕೆ ಬಡಿದು ಬಹುಕಾಲ ಅನಾಯಾಸವಾಗಿ ತೇಲುತ್ತಾ ಸುತ್ತುವರೆಯುತ್ತವೆ.

ರೆಕ್ಕೆಯ ಬಡಿತದಲ್ಲೂ ಅವರ ಉಪಯುಕ್ತತೆಗೆ ತಕ್ಕಂತೆ ವ್ಯತ್ಯಾಸಗಳಿವೆ. ಪಕ್ಷಿಗಳಲ್ಲಿ ಹಲವು ದೀರ್ಘಾವಧಿಯ ಹಾರಾಟಕ್ಕೆ ಹೊಂದಿಕೊಂಡಿರುವುವು. ಇನ್ನು ಕೆಲವು ಸ್ವಲ್ಪವೇ ದೂರ ಅತಿ ವೇಗವಾಗಿ ಚಲಿಸಬಲ್ಲವು. ಗೀಜಗ ಮತ್ತು ಕವುಜುಗಳು ಇದ್ದಕ್ಕಿದ್ದಂತೆ ಹಾರಿ ಬಹು ವೇಗವಾಗಿ ಸ್ವಲ್ಪ ದೂರ ಚಲಿಸಿ ಕೆಳಗಿಳಿಯುತ್ತವೆ. ಇವುಗಳ ಹಾರಾಟ ಪ್ರಾಣರಕ್ಷಣೆಗಾಗಿ, ತಪ್ಪಿಸಿಕೊಳ್ಳಲು ಮಾತ್ರ. ಹಲವು ಸಲ ಹಾಗೆ ಹಾರಿಸಿ ದಲ್ಲಿ ಅವು ಬಹುಬೇಗ ಸುಸ್ತಾಗಿ ಹಾಗೇ ಕುಳಿತುಬಿಡುತ್ತವೆ. ಈ ಪಕ್ಷಿಗಳ ಎದೆಯ ಸ್ನಾಯುಗಳು ಬೆಳ್ಳಗಿದ್ದು ಹೆಚ್ಚು ರಕ್ತ ಚಲನವಿಲ್ಲದಿರುತ್ತದೆ. ಆದ್ದರಿಂದ ಶ್ರಮ ಹೆಚ್ಚಾದಲ್ಲಿ ಅವಶ್ಯಕ ಆಮ್ಲಜನಕ ಒದಗದೆ ಸ್ನಾಯುಗಳು ಸೋತುಹೋಗುತ್ತವೆ.

ಆದರೆ ಎರಡನೆಯ ಪಂಗಡಕ್ಕೆ ಸೇರಿದ ಕೊಕ್ಕರೆ, ಬಾತುಕೋಳಿ, ಮುಂತಾದ ದೀರ್ಘಕಾಲ ಚಲಿಸಬಲ್ಲ ಪಕ್ಷಿಗಳ ಎದೆಯ ಮಾಂಸಖಂಡಗಳಿಗೆ ಹೆಚ್ಚಿನ ರಕ್ತದ ಚಲನ ವಿದ್ದು ಅದು ಕೆಂಪುಬಣ್ಣ ಹೊಂದಿರುತ್ತದೆ. ರಕ್ತ ಚಲನೆ ಹೆಚ್ಚಾಗಿರುವುದರಿಂದ

ಎಷ್ಟೇ ಶ್ರಮವಾದರೂ ಅವಕ್ಕೆ ಸಾಕಷ್ಟು ಆಮ್ಲಜನಕ ಸರಬರಾಜಿದ್ದು ಅವು ಸೋತು ಹೋಗುವುದಿಲ್ಲ. ಪಕ್ಷಿಗಳಿಗೆ ಎರಡು ಶ್ವಾಸಕೋಶಗಳು ಮಾತ್ರವಿದ್ದಿದ್ದಲ್ಲಿ ಅವು ಇಷ್ಟು ಚಟುವಟಿಕೆಯಾಗಿರಲು ಸಾಧ್ಯವಿರಲಿಲ್ಲ. ಹಾರಾಟದ ಸಮಯದಲ್ಲಿ ಅತಿಯಾದ ಕಾರ್ಯಾಚರಣೆಯಿಂದಾಗಿ ಹೆಚ್ಚಿನ ಉಷ್ಣ ಉತ್ಪನ್ನವಾಗುತ್ತದೆ. ಈ ಉಷ್ಣ ನಿವಾರಣೆ ಯಾಗದಿದ್ದಲ್ಲಿ ಮಾರಕವಾಗುವುದು ನಿಸ್ಸಂದೇಹ. ಆದ್ದರಿಂದಲೇ ಪಕ್ಷಿಗಳಿಗೆ ಕಶೇರುಕ ವರ್ಗದಲ್ಲೇ ಅತ್ಯುನ್ನತ ಉಸಿರಾಟದ ಏರ್ಪಾಟಿರುವುದು. ಶ್ವಾಸಕೋಶಗಳ ಜೊತೆಗೆ ಅವುಗಳಲ್ಲಿ ತೆಳು ಪೊರೆಯ ಕೋಶಗಳು೯ಕ್ಕೆ ಮೇಲ್ಪಟ್ಟಿರುತ್ತವೆ. ಅವೆಲ್ಲ ಒಂದಕ್ಕೊಂದು ಸಂಬಂಧಿಸಿದಂತಿದ್ದು ದೇಹದ ಇತರ ಭಾಗದಲ್ಲಿನ ಎಲ್ಲಾ ಕೋಶಗಳ ಜೋಡಣೆಯೂ ನಿಕಟ ಸಂಬಂದವನ್ನು ಹೊಂದಿರುತ್ತವೆ. ಈ ಕೋಶಗಳಲ್ಲಿ ತುಂಬಿದ ಗಾಳಿಯು ಸ್ನಾಯುಗಳಿಗೆ ಸಾಕಷ್ಟು ಆಮ್ಲಜನಕ ಸರಬರಾಜು ಮಾಡುವುದಲ್ಲದೆ ಹೆಚ್ಚು ನೀರಿನಂಶ ವನ್ನು ಆವಿಯಾಗಿಸಿ ಉಷ್ಣತೆಯನ್ನು ಕಡಮೆ ಮಾಡಲು ಸಹಾಯಕವಾಗುತ್ತದೆ.


— ೩ —

ನೆಲದ ಮೇಲೆ ಓಡಾಡುತ್ತಿದ್ದ ಪ್ರಾಣಿ ಹಾರಾಡಲು ಪ್ರಾರಂಭಿಸಿದಾಗ ಹಾರುವ ಅನುಕೂಲತೆಯ ಜೊತೆಗೆ ಇತರ ಮಾರ್ಪಾಟುಗಳೂ ಅತ್ಯಗತ್ಯ. ಎತ್ತರದಲ್ಲಿ ನಿಧಾನ ವಾಗಿ ಅಥವಾ ವೇಗವಾಗಿ ಸಂಚರಿಸುತ್ತಿರುವಾಗಲೇ ಅದು ತನ್ನ ಆಹಾರವನ್ನು ಪತ್ತೆ ಹಚ್ಚಿ ಇಳಿದು ತಿನ್ನಬೇಕು. ಮಾಂಸಾಹಾರಿ ಪಕ್ಷಿಗಳಂತೂ ತಮ್ಮ ಆಹಾರವನ್ನು ಬಹು ದೂರದಿಂದಲೇ ಕಂಡುಹಿಡಿದು, ಜೀವಂತ ವಸ್ತುವಾಗಿದ್ದಲ್ಲಿ ಅದರ ಮೇಲೆ ಹಠಾತ್ತನೆ ಎರಗಿ ಹಿಡಿಯುವಂತಾಗಬೇಕು. ಇದಕ್ಕೆ ಅತಿ ಸೂಕ್ಷ್ಮ ದೃಷ್ಟಿ ಅತ್ಯಗತ್ಯ. ಉತ್ತಮ ದೃಷ್ಟಿಯಿದ್ದವರನ್ನು 'ಹದ್ದಿನ ಕಣ್ಣಿನವನು' ಎನ್ನುವುದು ವಾಡಿಕೆ.

ಪಕ್ಷಿಗಳಿಗಿರುವಷ್ಟು ಸೂಕ್ಷ್ಮದೃಷ್ಟಿ ಇನ್ನಾವ ಪ್ರಾಣಿಗೂ ಇರುವುದಿಲ್ಲ. ಗಗನದಲ್ಲಿ ತೇಲುತ್ತಿರುವ ರಣಹದ್ದು, ಆಹಾರ ಅರಸುತ್ತಾ ಹಾರಾಡುವ ಗಿಡುಗ, ಅಥವಾ ಹುಳು ಹುಪ್ಪಟೆಗಳನ್ನು ಹುಡುಕುವ ಹಕ್ಕಿ ಇವೆಲ್ಲವುಗಳ ದೃಷ್ಟಿ ಮಾನವನ ದೃಷ್ಟಿಗಿಂತ ೮ – ೧೦ ರಷ್ಟು ಸೂಕ್ಷ್ಮವಾಗಬಲ್ಲದು. ಅಲ್ಲದೆ ಹೊರವಸ್ತುವಿನಿಂದ ಹಠಾತ್ತಾಗಿ ದೃಷ್ಟಿಯನ್ನು ಕೇಂದ್ರೀಕರಿಸಬಲ್ಲವು. ದೂರದಲ್ಲಿರುವ ಗಿಡುಗನನ್ನೇ ನೋಡುತ್ತಿರುವ ಪಕ್ಷಿಗೆ ಹತ್ತಿರ ಹುಳದ ಚಲನೆ ತೋರಿದಲ್ಲಿ ಅದನ್ನು ತಕ್ಷಣ ಕುಕ್ಕಿ ತಪ್ಪದೆ ಹಿಡಿಯ ಬಲ್ಲದು.

ಈ ಶಕ್ತಿಗೆ ಅವುಗಳ ಕಣ್ಣಿನ ರಚನಾ ವೈಶಿಷ್ಟ್ಯವೇ ಕಾರಣ. ಸಸ್ತನಿಗಳಿಗೆ ಹೋಲಿಸಿದಲ್ಲಿ ಅವುಗಳ ಕಣ್ಣಿನ ಗಾತ್ರ ಹೆಚ್ಚು. ತಲೆಬುರುಡೆಯಲ್ಲಿ ಕಣ್ಣು ಗುಂಡಿ ದೊಡ್ಡ ದಾಗಿದ್ದು, ಅದರಲ್ಲಿ ಅಡಕವಾಗಿರುವ ಕಣ್ಣಿನ ಗುಡ್ಡೆ ಅದರ ಗಾತ್ರಕ್ಕೆ ಬಲು ಹೆಚ್ಚು.

ಹಲವು ಹಕ್ಕಿಗಳಿಗೆ ಮೆದುಳಿಗಿಂತಲೂ ಕಣ್ಣೇ ದೊಡ್ಡದು. ನಮಗೆ ಕಾಣಿಸುವ ಭಾಗ ಪಾಪೆ (ಪಾರದರ್ಶಕ ಪಟಲ) ಮಾತ್ರ. ಹದ್ದು ಅಥವಾ ದೊಡ್ಡ ಗೂಬೆಗಳ ಕಣ್ಣು ಮನುಷ್ಯನ ಕಣ್ಣುಗಳ ಗಾತ್ರವಿರುತ್ತದೆ. ಉಷ್ಟ್ರಪಕ್ಷಿಯು ಕಣ್ಣುಗುಡ್ಡೆ ೨ ಅಂಗುಲ ಅಗಲವಿರಬಹುದು.



ಕಣ್ಣಿನ ರಚನೆಯಿಂದಾದ ದೃಷ್ಟಿವೈಶಾಲ್ಯತೆ.
ಗೂಬೆ, ಗುಬ್ಬಚ್ಚಿ, ಕಾಡುಕೋಳಿ

ಈ ಸೂಕ್ಷ್ಮದೃಷ್ಟಿಗೆ ಮುಖ್ಯ ಕಾರಣ, ಅದರ ಅಕ್ಷಿ ಪಟಲದಲ್ಲಿ ಅತಿ ಹೆಚ್ಚಿನ ದೃಶ್ಯ ಕಣಗಳಿರುವುದೇ! ಗಿಡುಗಕ್ಕೆ ಸಾಮಾನ್ಯವಾಗಿ ೧೫ ಲಕ್ಷ ಅಂತಹ ಕಣಗಳಿರುತ್ತವೆ. ಮನುಷ್ಯನಿಗೆ ಅದೇ ಸ್ಥಳದಲ್ಲಿ ೨ ಲಕ್ಷ ಮಾತ್ರ. ಇದರಿಂದ ಹದ್ದಿನ ದೃಷ್ಟಿ ಮಾನವನ ದೃಷ್ಟಿಗಿಂತ ೮ರಷ್ಟು ಪಾಲು ತೀಕ್ಷ್ಣವಾಗಿರುತ್ತದೆ. ಆದ್ದರಿಂದ ದೂರದಿಂದ ನೋಡಿದಾಗ ಬರೇ ಛಾಯೆಯಾಗಿ ನಮಗೆ ಕಂಡ ದೂರದ ವಸ್ತು, ಅದಕ್ಕೆ ಪೂರ್ಣ ಆಕಾರದಿಂದ ಇಂತಹುದೇ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ ಹದ್ದು, ಗಿಡುಗಗಳ ಕಣ್ಣಿಗೆ ಹೆಚ್ಚಾಗಿ ರಕ್ತ ಸರಬರಾಜುಮಾಡುವ ಪೆಕ್‌ಟೆನ್ (Pectin) ಎಂಬ ರಚನಾಂಗವೇರ್ಪಟ್ಟಿರುತ್ತದೆ. ಇದರಿಂದಲೂ ದೃಷ್ಟಿ ತೀಕ್ಷ್ಣತೆ ಹೆಚ್ಚುತ್ತದೆ.

ಕಣ್ಣಿನಲ್ಲಿ ದೂರದರ್ಶಕ ರಚನೆ ಮಾತ್ರವಲ್ಲದೆ, ಒಕ್ಕಣ್ಣಿನ ಅಥವಾ ಎರಡು ಕಣ್ಣಿನ ದೃಷ್ಟಿ ವ್ಯಾಪಕ ಶಕ್ತಿ ಅವುಗಳಲ್ಲನೇಕಕ್ಕಿವೆ. ಗೂಬೆಗಳನ್ನುಳಿದು ಇತರ ಪಕ್ಷಿಗಳಿಗೆ ಕಣ್ಣು ತಲೆಯ ಪಕ್ಕದಲ್ಲಿರುವುದೇ ಇದಕ್ಕೆ ಮುಖ್ಯ ಕಾರಣ. ಗೂಬೆಗಳಿಗೆ ಮಾತ್ರ ಕಣ್ಣು ದಪ್ಪವಾಗಿದ್ದರೂ ಮುಖದ ನೇರ ಮುಂಭಾಗದಲ್ಲಿದ್ದು ಮನುಷ್ಯರ ಕಣ್ಣನ್ನು ಹೋಲುತ್ತದೆ. ಇದಕ್ಕೆ ಎರಡು

ಕಣ್ಣುಗಳ ದೃಷ್ಟಿ ಜೋಡಣೆ ಸ್ಪಷ್ಟವಾಗಿ ಕಾಣಲು ಅಗತ್ಯ. ಆದರೆ ಪಕ್ಕ ಅಥವಾ ಹಿಂದೆ ನೋಡಲು ಅನುಕೂಲವಾಗುವಂತೆ, ಅದರ ಕುತ್ತಿಗೆ ಬಹಳ ಸಡಿಲವಾಗಿದ್ದು ಕತ್ತನ್ನು ಅತ್ತಿತ್ತ ಅರ್ಧಭಾಗ ತಿರುಗಿಸಬಲ್ಲದು. ಇದರಿಂದ ಹಿಂದೆಯೂ ಅದಕ್ಕೆ ಚೆನ್ನಾಗಿ ನೋಡಲು ಸಾಧ್ಯವಾಗುತ್ತದೆ.

ಕಣ್ಣಿನ ದೃಷ್ಟಿ ಜೋಡಣೆ ಅಂತರವನ್ನು ಕಂಡುಹಿಡಿಯಲು ಅತ್ಯಗತ್ಯ. ಮೇಲೆ ಹಾರಾಡುತ್ತಿರುವ ಗಿಡುಗ ಸಿಡಿಲಿನಂತೆರಗಿ ಭೂಮಿಯ ಮೇಲೆ ಓಡಾಡುತ್ತಿರುವ ಓತಿಯನ್ನು ಗುರಿ ತಪ್ಪದೆ ಹಿಡಿಯಬೇಕಾದಲ್ಲಿ, ದೂರದ ಅರಿವೂ ಓತಿಯ ಚಲನೆಯ ವೇಗದ ಅರಿವೂ ಆದಕ್ಕೆ ಬೇಕೇಬೇಕು. ತೀಕ್ಷ್ಣ ದೃಷ್ಟಿಯಿಲ್ಲದಿದ್ದಲ್ಲಿ ಇದು ಸಾಧ್ಯವಿಲ್ಲ. ಆದ್ದರಿಂದ ಕಣ್ಣು ಮುಖದ ಮುಂಭಾಗದಲ್ಲಿರಲಿ, ಪಾರ್ಶ್ವದಲ್ಲಿರಲಿ ಮುನ್ನೋಟದಲ್ಲಿ ಎರಡು ಕಣ್ಣಿನ ದೃಷ್ಟಿ ಜೋಡಣೆಯಿಂದ ಅಂತರದ ಈ ಅರಿವು ಸಾಧ್ಯವಾಗುತ್ತದೆ.

ಅನೇಕ ಪಕ್ಷಿಗಳಿಗೆ ಪಾರ್ಶ್ವದಲ್ಲಿನ ಕಣ್ಣುಗಳು, ಆಹಾರ ಅರಸಲು ಸಾಧ್ಯವಾಗುವಂತಹ ಮುಂದಿನ ದೃಷ್ಟಿಗೆ ಅನುಕೂಲವೇರ್ಪಡಿಸಿ ತಲೆಯ ಪಕ್ಕ ಮತ್ತು ಬಹುಭಾಗ ಹಿಂದೆಯೂ ಕಾಣಿಸುವಂತಿರುತ್ತದೆ. ಅನೇಕ ಶತ್ರುಗಳಿಂದ ತಪ್ಪಿಸಿಕೊಳ್ಳಲು ಯಾವಾಗಲೂ ಜಾಗರೂಕರಾಗಿರಬೇಕಾದ್ದರಿಂದ ಈ ರೀತಿಯ ದೃಷ್ಟಿ ವೈಶಾಲ್ಯವು ಬಹು ಅಗತ್ಯ. ಹೂಪೇ ಮತ್ತು ಇತರ ನೀಳ ಕೊಕ್ಕಿನ ಪಕ್ಷಿಗಳು ಮಣ್ಣಿನಲ್ಲಿ ತೋಡಿ ಹುಳು ಹುಪ್ಪಟೆಗಳನ್ನು ಹುಡುಕಿ ತಿನ್ನುವುದರಿಂದ ಅವುಗಳಿಗೆ ಮುಂದಿನ ದೃಷ್ಟಿ ಮುಖ್ಯವಲ್ಲ. ಆದರೆ ಶತ್ರುಗಳು ಯಾವಾಗಲೂ ಗೋಚರಿಸುವಂತಿರಬೇಕು. ಆದ್ದರಿಂದಲೇ ಅವುಗಳಿಗೆ ಕಣ್ಣು ತಲೆಯ ಪಾರ್ಶ್ವದಲ್ಲಿ ಬಹಳ ಹಿಂದಿದ್ದು ಹಿಂದೆ ಮುಂದೆ ಎಲ್ಲಾ ಚೆನ್ನಾಗಿ ಕಾಣಿಸುವಂತಿರುತ್ತದೆ.

ಪಕ್ಷಿಗಳಲ್ಲೆಲ್ಲಾ ಅತ್ಯಂತ ದೃಷ್ಟಿಹೀನ ಪಕ್ಷಿ ಬಹುಶಃ ಆಸ್ಟ್ರೇಲಿಯಾ ಖಂಡದ 'ಕಿವಿ'. ಅದರ ಮೂಗಿನ ಸೊಳ್ಳೆಗಳು ಕೊಕ್ಕಿನ ತುದಿಯಲ್ಲಿದ್ದು ಅದು ಕತ್ತಲೆಯಲ್ಲೇ ಮಣ್ಣನ್ನು ಕೆದುಕಿ ಆಹಾರ ಹುಡುಕುತ್ತದೆ. ತೀಕ್ಷ್ಣತೆಯಲ್ಲಿ ಹದ್ದು ಗಿಡುಗಗಳನ್ನು ಮೀರಿಸಲಾಗುವುದಿಲ್ಲ. ವರ್ತುಲ ದೃಷ್ಟಿಗೆ ಹೂಪೇ ಮತ್ತು 'ವುಡ್‌ಕಾಕ್' ಪಕ್ಷಿಗಳೇ ಮುಖ್ಯ.

ಎಲ್ಲಾ ಪಕ್ಷಿಗಳೂ ನಿದ್ರಿಸುವಾಗ ಕೆಳರೆಪ್ಪೆ ಮಾತ್ರ ಮೇಲೆ ಸರಿದು ಕಣ್ಣು ಮುಚ್ಚುತ್ತವೆ. ಆದರೆ ಇದು ಗೂಬೆಗಳಲ್ಲಿ ಮಾತ್ರ ವ್ಯತಿರಿಕ್ತ. ಅವು ತಮ್ಮ ಮೇಲು ರೆಪ್ಪೆಯನ್ನು ಕೆಳಸರಿಸಿ ಮನುಷ್ಯರಂತೆ ಕಣ್ಣು ಮಿಟುಕಿಸುತ್ತವೆ. ಎಲ್ಲಾ ಪಕ್ಷಿಗಳಿಗೂ ಕಣ್ಣಿನ ರಕ್ಷಣೆಗಾಗಿ ಇನ್ನೊಂದು ವಿಶಿಷ್ಟ ರಚನೆಯಿದೆ. ಅದೇ ಮೂರನೆಯ ರೆಪ್ಪೆ. ಅದೊಂದು ತೆಳುವಾದ ಪಾರದರ್ಶಕ ಪೊರೆ. ಅದು ಚಲಿಸುತ್ತಾ ಕಣ್ಣನ್ನು ತೇವವಾಗಿರಿಸಿ ರಕ್ಷಿಸುತ್ತದೆ. ಆದರೆ ಅದು ಅಡ್ಡಸರಿಯುವಾಗಲೂ, ಪಾರದರ್ಶಕವಾದ್ದರಿಂದ ದೃಷ್ಟಿಗೆ ಆತಂಕ ಮಾಡುವುದಿಲ್ಲ. ಉಷ್ಟ್ರಪಕ್ಷಿ, ಕೋಗಿಲೆ, ಹೋಯತ್‌ಜಿನ್ ಮತ್ತು ಹದ್ದುಗಳಿಗೆ ಕೂದಲಿರುವ ಮೇಲ್ರೆಪ್ಪೆ ಬೆಳೆದಿರುತ್ತದೆ.

ವಿವಿಧ ಪಕ್ಷಿಗಳ ಕಣ್ಣು ಗುಡ್ಡೆಗಳು ವಿವಿಧ ಬಣ್ಣ ಹೊಂದಿರುತ್ತವೆ. ಪಾಪೆ ಕಪ್ಪಗಿದ್ದರೂ ಗುಡ್ಡೆ ಮಾತ್ರ ಹಳದಿ, ನೀಲಿ, ಹಸಿರು, ಕೆಂಪು ಮುಂತಾದ ವಿವಿಧ ಬಣ್ಣ ಹೊಂದಿರಬಹುದು. ಸಾಮಾನ್ಯವಾಗಿ ಪಕ್ಷಿಗಳಿಗೆ ಗುಡ್ಡೆ ಚಪ್ಪಟೆಯಾಗಿರುತ್ತದೆ. ಮಾಂಸಾಹಾರಿ ಪಕ್ಷಿಗಳಿಗೆ ಮಾತ್ರ ದುಂಡಾದ ಅಥವಾ ಕೊಳವೆಯಾಕಾರದ ಕಣ್ಣುಗಳಿವೆ.

ಪಕ್ಷಿಗಳಿಗೆ ದೃಷ್ಟಿಯ ಜೊತೆಗೆ ಆಘ್ರಾಣ ಶಕ್ತಿಯೂ ಮುಖ್ಯವಾದದ್ದೆಂದು ಹಲವು ವೈಜ್ಞಾನಿಕರು ನಂಬಿದ್ದಾರೆ. 'ಕಿವಿ 'ಯಂತಹ ಪಕ್ಷಿಗಳಿಗೆ ಇದು ಮುಖ್ಯ ನಿಜ. ಆದರೆ ಇತರ ಪಕ್ಷಿ ಜಾತಿಗಳಿಗೆ ಇದು ಮುಖ್ಯವೇ ಎಂಬುದು ಇನ್ನೂ ಸರಿಯಾಗಿ ತಿಳಿದು ಬಂದಿಲ್ಲ. ಕೊಳವೆ ಮೂಗು ಕಡಲು ಪಕ್ಷಿಗಳಿಗೆ ವಾಸನೆ ಸಹಾಯಕ. ಹಾಗೂ ಬಾತುಗಳಿಗೂ ಈ ಶಕ್ತಿ ಹೆಚ್ಚು. ಆದರೆ ರಣಹದ್ದು ಮುಂತಾದ ಮಾಂಸಾಹಾರಿಗಳಿಗೆ ಅದು ಮುಖ್ಯವೋ ಅಲ್ಲವೋ ಸರಿಯಾಗಿ ತಿಳಿದಿಲ್ಲ. ಬಹುಶಃ ಕೊಳೆತ ಮಾಂಸವನ್ನು ಅವು ಸುಲಭವಾಗಿ ಕಂಡುಹಿಡಿಯಬಲ್ಲವಾದ್ದರಿಂದ ಈ ಊಹೆ ಉತ್ಪನ್ನವಾಗಿದ್ದರೂ ಸರಿಯಾದ ಆಧಾರಪೂರ್ಣ ರುಜುವಾತು ಇದುವರೆಗೆ ದೊರೆತಿಲ್ಲ.

— ೪ —

ಪಕ್ಷಿಗಳಿಗೆ ರೆಕ್ಕೆಗಳು ಎಷ್ಟು ಮುಖ್ಯವೋ ಅದರ ಕೊಕ್ಕೂ ಅಷ್ಟೇ ಮುಖ್ಯ. ಕೈ ರೆಕ್ಕೆಯಾಗಿ ಪರಿವರ್ತನೆ ಹೊಂದಿರುವುದರಿಂದ ಕೊಕ್ಕೇ ಅದರ ಕೈ ! ತನಗೆ ಬೇಕಾದ ಸಾಮಾಗ್ರಿಗಳನ್ನು ಹಿಡಿಯಲೂ, ಕೊಂಡೊಯ್ಯಲೂ ಮತ್ತು ಜೋಡಿಸಿಡಲೂ ಅದೇ ಆಧಾರ. ಆಹಾರ ಹೊಂಚಾಣಿಕೆಯಲ್ಲಿ ಅದರ ಪಾತ್ರ ಮುಖ್ಯ. ಕೊಕ್ಕೇ ಮುಖ್ಯ ಆಯುಧ. ಆದರಿಂದ ಪಕ್ಷಿ ಜಾತಿಯಲ್ಲಿ ಕೊಕ್ಕು ಪಕ್ಷಿಯ ಆಹಾರ ಸ್ವಭಾವಕ್ಕೆ ಹೊಂದಿಕೊಂಡಂತೆ ವ್ಯತ್ಯಾಸ ಹೊಂದಿದೆ.

ಪಕ್ಷಿಗಳಿಗೆ ಕೊಕ್ಕು ಅದರ ಕತ್ತರಿ, ಸುತ್ತಿಗೆ, ಉಳಿ, ಅಡ್ಡಕತ್ತರಿ. ಕೊಕ್ಕೇ, ಈಟಿ, ಕತ್ತಿ, ಚಿಮುಟ ಅಥವಾ ಚೀಲವಾಗಿರಬಹುದು ! ಕೊಕ್ಕೇ ಅದರ ಮುಖ್ಯ ಆಯುಧವೂ ಕೂಡ. ಶತ್ರುಗಳೊಡನೆ ಹೋರಾಡಲು, ತಮ್ಮ ಆಹಾರವನ್ನು ಕೊಲ್ಲಲು, ಮಕ್ಕಳನ್ನು ಪೋಷಿಸಲು ಗೂಡು ರಚಿಸಲು ಮತ್ತು ಆತ್ಮರಕ್ಷಣೆಗೆ ಇದೇ ಮೂಲಾಧಾರ. ಗರಿಗಳನ್ನು ಸ್ವಚ್ಛವಾಗಿಟ್ಟಿರುವುದು ಅದರಿಂದಲೇ !

ಕೊಕ್ಕು ಪಕ್ಷಿಗಳ ತುಟಿಯೇ. ನೀಳವಾದ ದವಡೆಯ ಮೇಲೆ ಗಟ್ಟಿ ಪದರವಾಗಿ ಬೆಳೆದಿರುವ ರೂಪಾಂತರ ಹೊಂದಿದ ತುಟಿ. ಆದರೆ ಅದರ ರೂಪಾಂತರ ಅದರ ಅಗತ್ಯಕ್ಕೆ, ಆಹಾರ ಸ್ವಭಾವಕ್ಕೆ ಅನುಗುಣವಾಗಿರುತ್ತವೆ. ಮಾಂಸಾಹಾರಿಗಳಲ್ಲಿ ಬಹಳ ಮೊನಚಾಗಿ ಮುಂದಕ್ಕೆ ಬಾಗಿರುತ್ತದೆ. ಇದರಿಂದ ಪ್ರಾಣಿಗಳನ್ನು ಹಿಡಿಯಲೂ ಹಿಡಿದುದನ್ನು ಹರಿದು ಚೂರುಮಾಡಲೂ ಅನುಕೂಲವಾಗುತ್ತದೆ. ಆದರೆ ಅದೇ



ರೀತಿಯಲ್ಲಿ ಬಾಗಿರುವ ಆದರೆ ದಪ್ಪವಾದ ಗಿಣಿಯ ಕೊಕ್ಕು ಗಟ್ಟಿ ಚಿಪ್ಪುಗಳನ್ನು ಪುಡಿಮಾಡಿ, ಒಳಗಿನ ತಿರುಳು ಆವುಗಳಿಗೆ ಸುಲಭವಾಗಿ ಸಿಗುವುದಕ್ಕೆ ಅನುಕೂಲವಾಗುವುದು. ಹಲವು ನೀರು ಪಕ್ಷಿಗಳಿಗೆ ಚಪ್ಪಟೆಯಾದ ಅಥವಾ ನೀಳಾವಾದ ಕೊಕ್ಕು ಮೀನು ಹಿಡಿಯಲು ಅಥವಾ ಕೆಸರನ್ನು ಕೆದಕಿ ಹುಪ್ಪಟೆ ಆರಿಸಲು ಅನುಕೂಲವಾಗಿ ಏರ್ಪಟ್ಟಿರುತ್ತದೆ. ಹಲವು ಪಕ್ಷಿಗಳಿಗೆ ಮಾತ್ರ ವಿಚಿತ್ರ ಕೊಕ್ಕುಗಳಿವೆ ನಿಜ. ಆದರಿಂದ ಬಹು ಹೆಚ್ಚಿನ ಪ್ರಯೋಜನವೂ ಆ ಪಕ್ಷಿಗಳಿಗಿಲ್ಲ. ನೋಡಲು ಮಾತ್ರ ಅಂದವಾಗಿ ಹಾಗೂ ದಪ್ಪ ಪುಷ್ಟವಾಗಿದ್ದು ವಿವಿಧ ಬಣ್ಣವನ್ನು ಹೊಂದಿರಬಹುದು. ಆದರೆ ಅವು ಮೃದುವಾಗಿ ಒಳಗೆ ಗಾಳಿಕೋಶ ಹೊಂದಿದ್ದು ಹಗುರವಾಗಿರುತ್ತವೆ. ಈಗಲೂ ಅದರ ನಿಜವಾದ ಉಪಯುಕ್ತತೆ ತಿಳಿದು ಬಂದಿಲ್ಲ.



ವಿವಿದಾಕಾರದ ಕೊಕ್ಕುಗಳು.

ಕೊಕ್ಕಿನ ಆಕಾರದಲ್ಲಿ ಸಾಮ್ಯತೆಯಿದ್ದರೂ ಆ ಪಕ್ಷಿಗಳ ಜಾತಿಯಲ್ಲಿ ಸಾಮ್ಯತೆಯಿಲ್ಲದಿರಬಹುದು. ಒಂದೇ ಕುಟುಂಬದ ಅಥವಾ ಜಾತಿಯ ಪಕ್ಷಿಗಳಲ್ಲೂ ಆಹಾರಕ್ಕೆ ಹೊಂದಿಕೊಂಡಂತಹ ಮಾರ್ಪಾಟು ಇದ್ದೇ ಇರುತ್ತದೆ. ನೀರು ಪಕ್ಷಿಗಳಾದ ಮಿಂಚುಳ್ಳಿ, ಕೊಕ್ಕರೆ ಮುಂತಾದುವುಗಳಿಗೆಲ್ಲಾ ಒಂದೇ ತರಹ ನೀಳ ಕೊಕ್ಕಿರುತ್ತದೆ. ಅದು ಅವುಗಳ ಆಹಾರವಾದ ಮೀನು ಹಿಡಿಯಲು ಅನುಕೂಲವಾದದ್ದು ಮಾತ್ರ. ಡಾರ್ವಿನ್

ಗಲಿಫಿಸರಲ್ಲಿ ಗಾಲಿಪೇಗಾಸ್ ದ್ವೀಪಗಳಲ್ಲಿ ಕಂಡ ಒಂದೇ ಜಾತಿಯ ಪಕ್ಷಿಗಳಲ್ಲಿದ್ದ ಕೊಕ್ಕಿನ ವೈವಿಧ್ಯತೆಯೇ ಇದಕ್ಕೆ ಉತ್ತಮ ಉದಾಹರಣೆ.

ಕೊಕ್ಕಿನ ವೈವಿಧ್ಯತೆಗೆ ಹೊಂದಿಕೊಂಡಂತೆ ಕಾಲುಗಳೂ ಮಾರ್ಪಾಟು ಹೊಂದಿರುತ್ತವೆ. ಅವುಗಳು ಆಹಾರವನ್ನು ಓಡಾಡಿ, ಅಲ್ಲಲ್ಲಿ ನಿಂತು, ನೀರಿನಲ್ಲಿ ಈಜಿ ಅಥವಾ



ಪಕ್ಷಿಗಳ ಜೀವನ ವಾತಾವರಣಕ್ಕನುಗುಣವಾದ ಕಾಲಿನ ಮಾರ್ಪಾಟು.

ನೆಲವನ್ನು ಕೆದಕಿ ಪಡೆಯಬೇಕು. ಮಾಂಸಾಹಾರಿಗಳು ಓಡಾಡುತ್ತಿರುವ ಸಜೀವ ಆಹಾರವನ್ನು ಹಿಡಿಯಬೇಕಾದಲ್ಲಿ ಕಾಲೂ ಸಹಾಯಕವಾಗಬೇಕು. ಕಾಲಿನಿಂದ ಓಡಿಹೋಗದಂತೆ ಭದ್ರವಾಗಿ ಒತ್ತಿ ಹಿಡಿಯದಿದ್ದಲ್ಲಿ ಕೊಕ್ಕಿನಿಂದ ಅದನ್ನು ಕುಕ್ಕಿ ಹರಿದು, ತಿನ್ನಲಾಗುವುದಿಲ್ಲ.

ಹೆಚ್ಚಾಗಿ ನಡೆಯುವ ಪಕ್ಷಿಗಳಿಗೆ ಕಾಲು ಗಟ್ಟಿಯಾಗಿ ಬೆರಳುಗಳು ದೃಢವಾಗಿ ಬೆಳೆದಿರುತ್ತವೆ. ಪಕ್ಷಿಗಳಲ್ಲಿ ಬೃಹದಾಕಾರದ ಉಷ್ಟ್ರಪಕ್ಷಿಗೆ ನಡೆಯಲು ಬಲು ಗಟ್ಟಿಯಾದ ಕಾಲು, ಮತ್ತು ಎರಡು ಬೆರಳು ಮಾತ್ರವಿರುತ್ತದೆ. ಕೆಸರಿನಲ್ಲೇ ತಿರುಗಾಡುವ ಸಣ್ಣ ಕೊಕ್ಕರೆಗಳಿಗೆ ಬೆರಳುಗಳು ನೀಳವಾಗಿ ತಳಭಾಗದಲ್ಲಿ ಸಣ್ಣ ಜಾಲವೂ ಇರುತ್ತದೆ. ಇದರಿಂದ ಕೆಸರಿನಲ್ಲಿ ಕಾಲು ಹೆಚ್ಚಾಗಿ ಹೂತುಹೋಗದಂತಾಗುತ್ತದೆ. ಶೀತವಲಯದ ಹಲವು ಗೀಜಗಗಳಿಗೆ ಬೆರಳುಗಳಿಂದ ಹಲವು ಹುರುಪೆಗಳು ಕೂದಲಿನಂತೆ ಅಡ್ಡ ಬೆಳೆದು ಮೃದುವಾದ ಮಂಜಿನಲ್ಲಿ ಇಳಿ ಬೀಳದಂತೆ ತಡೆಯುತ್ತವೆ. ಕಾಗೆ ಮುಂತಾದುವಕ್ಕೆ ಕೆದರಲೂ ಕೊಂಬೆ ಹಿಡಿದಿರಲೂ ಅನುಕೂಲವಾಗುವಂತಹ ಬಾಗಿ ಮೊನಚಾದ ಉಗುರುಗಳೂ, ನೀಳ ಬೆರಳುಗಳೂ ಇರುತ್ತವೆ. ಸಣ್ಣ ಪಕ್ಷಿಗಳು ಗಾಳಿ ಬಂದಾಗ ಬಿದ್ದು ಬಿಡದಂತೆ ಹಿಂಬೆರಳು ದಪ್ಪವಾಗಿ ಕಾಲಿಗೆ ಒತ್ತಾಸೆಯಾಗಿರುತ್ತದೆ.

ಆಹಾರವನ್ನು ಕೊಕ್ಕಿನಿಂದ ಒಂದೇ ಸಲ ಆರಿಸಿ ತಿನ್ನಲಾರದ ಪಕ್ಷಿಗಳಿಗೆ ಅದನ್ನು ಹಿಡಿದಿರಲು ಕಾಲು ಸಹಾಯಕ. ಅಂತಹವುಗಳಿಗೆ ಬೆರಳು ನೀಳವಾಗಿ, ಉಗುರು ಮೊನಚಾಗಿ ಒಳಬಾಗಿರುತ್ತದೆ. ಇದು ಆಹಾರವನ್ನು ತಪ್ಪಿಹೋಗದಂತೆ ಒತ್ತಿ ಹಿಡಿಯಲು ಅನುಕೂಲ.

ನೀರಿನ ಬಳಿಯ ಅಥವಾ ನೀರಿನ ಮೇಲಿರುವ ಪಕ್ಷಿಗಳಿಗೆ ಈಜಲು ಅನುಕೂಲವಾದಂತಹ ಜಾಲಾಂಗುಲಗಳಿರುತ್ತವೆ. ಜಾಲಾಂಗುಲ ಒಂದೇ ರೀತಿಯವಾಗಿರದೆ, ಅವು ಪೂರ್ಣ ನೀರಿನಲ್ಲಿ ಈಜುವಂತಿದ್ದರೆ ಪೂರ್ಣವಾಗಿಯೂ, ಬದಿಯಲ್ಲಿರುವುದಕ್ಕೆ ಬೆರಳುಗಳೂ ಉಗುರುಗಳೂ ಅಗಲವಾಗಿ ಹುಟ್ಟಿನಂತೆ ಪರಿವರ್ತನೆ ಹೊಂದಿರುತ್ತವೆ. ನೀರು ಕೋಳಿಗಳ ಕಾಲು ಹಗುರವಾಗಿ ನೀರಿನ ಪದರದ ಮೇಲೆ, ಅಥವಾ ಬೆಳೆದಿರುವ ಸಸ್ಯಗಳ ಮೇಲೆ ಸ್ವಲ್ಪ ದೂರ ಓಡಾಡಿ ಹಾರಲು ಅನುಕೂಲವಾಗುವಂತೆ ರಚಿತವಾಗಿವೆ. ಕಾಲೇ ಮುಖ್ಯ ಆಯುಧವಾಗಿರುವ ಪಕ್ಷಿಗಳಲ್ಲಿ ಹಿಂಬೆರಳು ಪುಷ್ಟವಾಗಿ ಹಾಗೂ ಬಹಳ ಮೊನಚಾಗಿ ಬೆಳೆದು, ಅದೇ ಅದರ ಮುಖ್ಯ ಆಯುಧವಾಗುತ್ತದೆ. ನವಿಲು, ಗೀಜಗ, ಕೋಳಿ ಮುಂತಾದುವುಗಳಲ್ಲಿ ಕತ್ತಿಯಂತಹ ಉಗುರು ಇರುವುದು ಸಾಮಾನ್ಯ. ನ್ಯೂಜಿಲೆಂಡಿನ ಕಸೋವಾರಿಗಳಲ್ಲಿ ಈ ಉಗುರು ತೀಕ್ಷ್ಣ ಅಲಗಿನಂತಿರುತ್ತದೆ.

ಪಕ್ಷಿಗಳು ಹೆಚ್ಚಾಗಿ ಕಾಲನ್ನು ಉಪಯೋಗಿಸದಿದ್ದಲ್ಲಿ ಅವು ಬಹಳ ಕ್ಷೀಣವಾಗಿರುತ್ತವೆ. ಹೆಚ್ಚಾಗಿ ಹಾರಾಡುವ ' ಸ್ವಾಲೋ ' ಮತ್ತು ಗುಬ್ಬಟ, ಹಮ್ಮಿಂಗ್ ಪಕ್ಷಿಗಳಲ್ಲಿ ಕಾಲು ಬಹಳ ತೆಳ್ಳಗಿದ್ದು ಅವು ನಡೆಯಲು ಸಾಧ್ಯವಿಲ್ಲ.

ಅವುಗಳ ಪಾದ ರಚನೆಯಲ್ಲಿ ಇನ್ನೊಂದು ವಿಶೇಷವಿದೆ. ಅದರಿಂದಲೇ ನಿದ್ರಿಸುವ ಪಕ್ಷಿ ಕೊಂಬೆಯಿಂದ ಕೆಳಗೆ ಬೀಳುವುದಿಲ್ಲ. ಅದು ನಿದ್ರಿಸುವಾಗಲೂ ಕಾಲು ಸಡಿಲ

ಗೊಳ್ಳದೆ ಕೊಂಬೆಯನ್ನು ಗಟ್ಟಿಯಾಗಿ ಹಿಡಿದಿರುವುದು ಅದರಿಂದಲೇ. ಮೊದಲೇ ವಿವರಿಸಿದಂತೆ ನಮಗೆ ಕಾಣುವ ಮಂಡಿ ಹಿಮ್ಮಡಿಯೇ. ತೊಡೆ ಪಕ್ಕದಲ್ಲಿ ಸೇರಿಕೊಂಡು ದೇಹಕ್ಕೆ ಸಮಾನಾಂತರದಲ್ಲಿರುತ್ತದೆ. ಅದರ ನೀಳ ಕಾಲು ನಮ್ಮ ಪಾದಕ್ಕೆ ಸಮ. ಹಿಮ್ಮಡಿಯಿಂದ ಮೇಲಿರುವ ದಟ್ಟ ಸ್ನಾಯುಗಳಿಗೆ ಸಂಬಂಧಿಸಿದಂತೆ ಒಂದು ಹುರಿ ಪಾದದ ಹಿಂಬದಿಯಲ್ಲಿ ಇಳಿದು, ಹಿಂದಿನ ಉಗುರ ಬುಡದ ಮೂಲಕ ಪ್ರತಿ ಬೆರಳ ತುದಿಗೂ ಹಬ್ಬಿರುತ್ತದೆ. ಇದರಿಂದ ಬೆರಳಿನ ತುದಿ ಮುಂಗಾಲಿನ ಸ್ನಾಯುಗಳೊಡನೆ ನಿಕಟ ಸಂಬಂಧ ಹೊಂದಿದಂತಾಗುತ್ತದೆ. ಪಕ್ಷಿ ಕೂರಲು ಪಾದವನ್ನು ಮಡಚಿ ಅದನ್ನು ದೇಹಕ್ಕೆ ಸಮಾಂತರವಾಗಿಸುವಾಗ ದೇಹದ ಭಾರಕ್ಕೆ ಈ ಸ್ನಾಯುಗಳು ಸಂಕುಚಿತವಾಗುತ್ತವೆ. ಆಗ ಬೆರಳುಗಳೆಲ್ಲಾ ಗಟ್ಟಿಯಾಗಿ ಬಿಗಿಹಿಡಿದೆಳೆದಂತಾಗಿ ಅವು ತಾನಾಗಿ ಹಿಡಿದ ಕೊಂಬೆಯನ್ನು ಗಟ್ಟಿಯಾಗಿ ಸುತ್ತುಗಟ್ಟಿಕೊಳ್ಳುತ್ತವೆ. ದೇಹದ ಭಾರ ಪಾದದ ಮೇಲಿರುವವರೆಗೂ ಈ ಅವಸ್ಥೆಯಲ್ಲಿಯೇ ಸ್ನಾಯು ಇರುವುದರಿಂದ ಕಾಲು ಸಡಿಲವಾಗುವ ಅವಕಾಶವಿಲ್ಲದೆ ಪಕ್ಷಿಗೆ ಯಾವ ತೊಂದರೆಯೂ ಆಗುವುದಿಲ್ಲ.

— ೫ —

ಜೀವನಕ್ಕೆ ಮೂಲಾಧಾರ ಆಹಾರ. ಆಹಾರಕ್ಕೆ ಹೊಂದಿದಂತೆಯೇ ಎಲ್ಲಾ ಪರಿವರ್ತನೆ. ಪಕ್ಷಿಗಳ ಆಹಾರದಲ್ಲಿ ಬಹಳ ವೈವಿಧ್ಯತೆಯಿದೆ. ಬಹುಶಃ ಎಲ್ಲಾ ತರಹದ ಸಸ್ಯ ಮತ್ತು ಪ್ರಾಣಿಗಳು ಒಂದಲ್ಲ ಒಂದು ಜಾತಿಯ ಪ್ರಾಣಿಗೆ ಆಹಾರವಾಗುತ್ತದೆ. ಮಾಂಸಾಹಾರಿಗಳು ಆನೆಯಿಂದ ಹಿಡಿದು ಮನುಷ್ಯನ ಮಾಂಸದವರೆಗೂ ದೊರಕಿದಲ್ಲಿ ತಿನ್ನುತ್ತವೆ. ವಿವಿಧ ಹಣ್ಣು ಹಂಪಲು, ಕಾಳು, ಕೀಟ ಎಲ್ಲವೂ ಪಕ್ಷಿಗಳಿಗೆ ಆಹಾರ. ಪ್ಲೆಮಿಂಗೋಗಳಿಗೆ ಕಣ್ಣಿಗೆ ಕಾಣಿಸದ ಸೂಕ್ಷ್ಮ ಆಲ್ಗೇ (Algae) ಸಸ್ಯಗಳೇ ಮುಖ್ಯಾಹಾರ. ಕಲ್ಲುಹೂವು ಮತ್ತು ವಿವಿಧ ನಾಯಿಕೊಡೆಗಳು ಮಾತ್ರ ಪಕ್ಷಿಗಳಿಗೆ ಆಹಾರವಲ್ಲ.

ಕೀಟಗಳನ್ನು ಬಿಟ್ಟು ಇಂದು ಬದುಕಿರುವ ಪ್ರಾಣಿಜೀವಿಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿನ ಪ್ರಾಣಿವರ್ಗ ಪಕ್ಷಿಗಳೇ ಎಂಬುದು ಈಗಾಗಲೇ ಮನವರಿಕೆಯಾಗಿದೆ. ಅಲ್ಲದೆ ವಿವಿಧ ವಾತಾವರಣ ಮತ್ತು ವಿವಿಧ ಆಹಾರಕ್ಕೆ ತಕ್ಕಂತೆ ಪರಿವರ್ತನೆ ಹೊಂದಿ ಅವು ಜೀವಿಸಲು ಕಲಿತಿವೆ. ಪಕ್ಷಿಗಳಿಲ್ಲದಿದ್ದಲ್ಲಿ ಕೀಟಗಳ ಉಪದ್ರವ ಬಹಳವಾಗಿ ಹೆಚ್ಚುತ್ತಿತ್ತು. ಅವುಗಳನ್ನು ಹತೋಟಿಯಲ್ಲಿಡಲು ಈ ವರ್ಗ ಮುಖ್ಯ ಸಹಾಯಕ. ಮರಿಗಳಿಗೆ ಹೆಚ್ಚಿನ ಆಹಾರ ಅಗತ್ಯ. ಸಾಮಾನ್ಯವಾಗಿ ದಿನವೂ ಅವು ತಮ್ಮ ದೇಹದ ತೂಕದಷ್ಟು ಆಹಾರ ಸೇವಿಸುತ್ತವೆ. ಕೀಟ ಮರಿಗಳೇ ಆದಕ್ಕೆ ಮುಖ್ಯವಾದ್ದರಿಂದ ಕೀಟಗಳನ್ನು ಹತೋಟಿಯಲ್ಲಿಡಲು ಅವುಗಳಿಗೆ ಸಾಧ್ಯವಾಗಿದೆ. ಆಹಾರ ಸೇವನೆಯು ವಯಸ್ಕ ಪಕ್ಷಿಗಳಲ್ಲಿ

ಕಡಮೆ. ನೀರು ಹೆಚ್ಚಾಗಿರುವ ಕೀಟಗಳನ್ನು ತಮ್ಮ ದೇಹದ ತೂಕದ ಶೇ. ೪೦ ಭಾಗದಷ್ಟನ್ನೂ, ಕಾಳುಗಳಾದಲ್ಲಿ ಶೇ. ೧೦ ಭಾಗದಷ್ಟನ್ನೂ ಮಾತ್ರ ಸೇವಿಸುತ್ತವೆ.

ಇದರಿಂದಲೇ ಪ್ರತಿ ಕೀಟ ಜಾತಿಯನ್ನು ತಿನ್ನುವ ಪಕ್ಷಿ ಜಾತಿ ಉತ್ಪನ್ನವಾಗಿದೆ. ನೆಲ ಕೊರೆದು, ಮರ ಕೊರೆದು, ತೊಗಟೆ ತೆಗೆದು, ಎಲೆಗಳ ಮಧ್ಯೆ ಆರಿಸಿ ಅವುಗಳನ್ನು ಹಿಡಿಯಲೂ, ತಿನ್ನಲೂ ಬೇಕಾದ ಅನುಕೂಲತೆಗಳನ್ನು ತಮ್ಮ ಕೊಕ್ಕಿನ ವೈವಿಧ್ಯತೆಯಲ್ಲಿ ಅವು ಪಡೆದಿವೆ. ಬಹುಶಃ ಪಕ್ಷಿಗಳು ಮೊದಲು ಪ್ರಾರಂಭವಾದಾಗ ಎಲ್ಲವೂ ಮಾಂಸಾಹಾರಿಗಳಾಗಿದ್ದು, ಇತ್ತೀಚೆಗೆ ಆಹಾರ ಅಭಾವದಿಂದ ಕೀಟಾಹಾರ ಅಥವಾ ಕಾಳು ತಿನ್ನಲು ಕಲಿತಿರಬೇಕು. ಎಲ್ಲಾ ಪಕ್ಷಿ ಮರಿಗಳಿಗೂ ಕೀಟ ಮರಿಗಳೇ ಮುಖ್ಯಾಹಾರ. ಅವು ವಯಸ್ಕರಾದ ನಂತರವೇ ಕಾಳು ತಿನ್ನಲು ಪ್ರಾರಂಭಿಸುವುದು. ಪಾರಿವಾಳದಲ್ಲಿ ಮಾತ್ರ ಕುತ್ತಿಗೆಯಲ್ಲಿ ಹಾಲಿನಂತಹ ದ್ರವದಿಂದ ಮರಿಗಳ ಪೋಷಣೆ ಸುಲಭವಾಗುತ್ತದೆ.

ಪ್ರಪಂಚದಲ್ಲಿನ ಪಕ್ಷಿ ಸಮೂಹದಲ್ಲಿ ಸುಮಾರು ೧/೫ ಭಾಗ ಜೇನು ಕುಡಿದು ಜೀವಿಸುವುವು. ವಿವಿಧ ಹೂವುಗಳ ತಳದಲ್ಲಿನ ಜೇನು ಗ್ರಂಥಿಗಳಲ್ಲಿನ ಜೇನನ್ನು ತಮ್ಮ ನೀಳ ಕೊಕ್ಕಿನಿಂದ ಹೀರಿ ಕುಡಿಯಲು ಬೇಕಾದ ಸೌಲಭ್ಯ ಅವುಗಳಿಗಿವೆ. ಈ ರೀತಿಯ ಸಣ್ಣ ಗಾತ್ರದ ಪಕ್ಷಿಗಳೆಲ್ಲಾ ವಿವಿಧ ಬಣ್ಣ ಹೊಂದಿದ್ದು, ದಕ್ಷಿಣ ವಲಯದ ಕಾಡು ಪ್ರದೇಶದಲ್ಲಿ ಹೆಚ್ಚಿನ ವೈವಿಧ್ಯತೆ ಹೊಂದಿದೆ.

ಇವುಗಳೂ ಕ್ಯೂಬಾದಲ್ಲಿನ ಅತಿ ಸಣ್ಣ ಹಮ್ಮಿಂಗ್ ಪಕ್ಷಿಗಳೂ ಕೇವಲ ೨ ೧/೪ ಅಂಗುಲ ಮಾತ್ರವಿರುತ್ತವೆ. ಅವುಗಳ ರೆಕ್ಕೆ ರಚನೆಯೂ ಆಶ್ಚರ್ಯಕರವಾಗಿದ್ದು ಹೂವಿನ ಮೇಲ್ಭಾಗದಲ್ಲೇ ಇಷ್ಟಬಂದಷ್ಟು ಕಾಲ ತೇಲುತ್ತಿರಲು ಅನುಕೂಲವಾಗುವಂತಿದೆ. ಅದರ ರೆಕ್ಕೆ ಬಡಿತದ ರಚನೆಯನ್ನು 'ಹೆಲಿಕಾಪ್ಟರ್'ಗಳಿಗೆ ಹೋಲಿಸಬಹುದು. ಕೊಕ್ಕೂ ಅಲ್ಲಿನ ಹೂವಿನ ವೈವಿಧ್ಯತೆಗೆ ಅನುಗುಣವಾಗಿ ಬೆಳೆದಿರುತ್ತದೆ. ಅದರಲ್ಲಿ ಸಾಮಾನ್ಯವಾದದ್ದು ದಬ್ಬಳದಂತೆ ಸುಮಾರು ೧/೨ ಅಂಗುಲ ನೀಳವಾದ ನೇರ ಕೊಕ್ಕು. 'ಹಾರನ್ ಬಿಲ್' ಹಮ್ಮಿಂಗ್ ಪಕ್ಷಿಗಳಿಗೆ ಇದರ ೪ರಷ್ಟು ಅಂದರೆ ೧ ೧/೨ ಅಂಗುಲಕ್ಕೆ ಮೀರಿದ ಉದ್ದನೆಯ ಕೊಕ್ಕಿರುತ್ತದೆ. 'ಸ್ವೋರ್ಡ್ ಬಿಲ್'ಗೆ ಸುಮಾರ ೩ – ೪ ಅಂಗುಲ ನೀಳ ಕೊಕ್ಕೂ 'ಕುಡುಗಲು' ಕೊಕ್ಕಿನ ಪಕ್ಷಿಗೆ ಬಾಗಿದ ಕುಡುಗೋಲಿನಂತಹ ಕೊಕ್ಕೂ ಇರುತ್ತವೆ. ಇವು ತಮಗೆ ಅನುಕೂಲವಾದ ಹೂವಿನ ಗಿಡಗಳನ್ನು ಅರಸುತ್ತಾ ಆರಿಸುತ್ತಾ ವಲಸೆ ಹೋಗಬೇಕು. ಒಂದೇ ಸ್ಥಳದಲ್ಲಿದ್ದಲ್ಲಿ ಹೂವಿನ ಅಭಾವವಾದಲ್ಲಿ ಅದಕ್ಕೆ ಮಾರಕವಾಗುತ್ತವೆ.

ಅದೇ ಗಾತ್ರದಿಂದ ದೊಡ್ಡ ಪಕ್ಷಿಗಳವರೆಗೆ ಅಂತರ ಹೊಂದಿರುವ ಗುಂಪು ಕಾಳು ತಿನ್ನುವುವು. ಈ ಗುಂಪಿನಲ್ಲೇ ವೈವಿಧ್ಯತೆ ಹಾಗೂ ಸಂಖ್ಯೆ ಹೆಚ್ಚು. ಮಯೋಸೀನ್ ಯುಗದ ಮಧ್ಯಭಾಗದಲ್ಲಿ ಈ ಗುಂಪಿನ ಪರಿವರ್ತನೆ ಆಗಿದ್ದಿರಬೇಕೆಂದು ಊಹಿಸಲಾಗಿದೆ. ಇವೆಲ್ಲವೂ ಕೊಂಬೆಯಲ್ಲಿ ಕುಳಿತು ವಿಶ್ರಮಿಸುವುವು. ಪ್ರಪಂಚದ ಎಲ್ಲೆಡೆ ಅತಿ ಹೆಚ್ಚಾಗಿ ಕಂಡುಬರುವ ಪಕ್ಷಿಗಳಿವು. ಆದರೆ ಉತ್ತರ ಮತ್ತು ದಕ್ಷಿಣ ಧ್ರುವ

ಪ್ರದೇಶದಲ್ಲಿ ಮತ್ತು ಸಾಗರಗಳಲ್ಲಿ ಮಾತ್ರ ಅವು ಇರಲು ಸಾಧ್ಯವಿಲ್ಲ. ಗಟ್ಟಿ ಕಾಯನ್ನಾದರೂ ಒಡೆದು ಅದರೊಳಗಿನ ಬೀಜವನ್ನು ಅಥವಾ ತಿರುಳನ್ನು ತಿನ್ನಲು ಅನುಕೂಲವಾಗುವಂತಹ ರಚನೆ ಗಿಳಿ ಪಂಗಡಕ್ಕಿದೆ. ಆಸ್ಟ್ರೇಲಿಯಾದ 'ಲೋರಿ ಕೀಟ್' ಗುಂಪು ಗುಂಪಾಗಿ ಹಾರಾಡಿ, ನೀಲಗಿರಿ ತೈಲ ಮರದ ಹೂವುಗಳನ್ನು ಚಪ್ಪರಿಸಿ ನಾಲಿಗೆಯಿಂದ



ಆಹಾರಕ್ಕನುಗುಣವಾದ ಕೊಕ್ಕು ವೈವಿಧ್ಯತೆ. (ಆಧಾರದಿಂದ)

ರಸ ಹೀರುತ್ತವೆ. ಇತರ ಗಿಣಿಗಳು ವಿವಿಧ ಕಾಯಿಗಳನ್ನು ಸುಲಭವಾಗಿ ಒಡೆದು ಒಳಗಿನ ತಿರುಳನ್ನು ತಿನ್ನುತ್ತವೆ. ಕತ್ತರಿಯಂತಹ ಕೊಕ್ಕುಳ್ಳ 'ಕ್ರಾಸ್‌ಬಿಲ್' ಗಟ್ಟಿ ಕಾಯಿಯೊಳಗಿನ ತಿರುಳನ್ನು ಕತ್ತರಿಸಿ ಹೊರತೆಗೆದು ತಿನ್ನುತ್ತದೆ.

ಮರದ ತೊಗಟೆಯಲ್ಲಿನ, ಒಳಗಿನ ಹುಳುಗಳನ್ನೂ ಕಂಡುಹಿಡಿದು ತಿನ್ನುವ ಪಕ್ಷಿಜಾತಿಗಳನೇಕವಿವೆ. ಮರಕುಟುಕನ ವಿವಿಧ ಜಾತಿಗೆ ಇದೇ ಮುಖ್ಯ ಆಹಾರ ಮಾರ್ಗ. ಮರಕುಟುಕನ ತಲೆಬುರುಡೆ ಧೃಢವಾಗಿದ್ದು ನಾಲಗೆ ಒಳಗೆ ಬಹಳ ನೀಳವಾಗಿರುತ್ತದೆ. ನಾಲಗೆ ಪೂರ್ಣವಾಗಿ ಬುರುಡೆಯನ್ನು ಸುತ್ತುಗಟ್ಟಿದ್ದು ನೀಳವಾಗಲೂ ಸಂಕುಚಿತವಾಗಲೂ ಸಾಧ್ಯವಿದೆ. ಅದರ ಕೊಕ್ಕು ದೃಢವಾಗಿದ್ದು ಮರವನ್ನು ಸುತ್ತಿಗೆಯಿಂದ ಹೊಡೆದಂತೆ ಕುಕ್ಕಲು ಅನುಕೂಲವಾಗಿದೆ. ಮರದ ವಿವಿಧ ಭಾಗವನ್ನು ಅದು ಕೊಕ್ಕಿನಿಂದ ಕುಕ್ಕಿ ಒಳಗೆ ಟೊಳ್ಳಾಗಿರುವುದು ಕಂಡುಬಂದಲ್ಲಿ, ಅಲ್ಲೇ ರಂಧ್ರ ಕೊರೆದು, ನೀಳ ನಾಲಿಗೆಯನ್ನು ಒಳಚಾಚಿ, ಒಳಗಿರುವ ಹುಳುವನ್ನು ಹೊರಕ್ಕೆ ಎಳೆದು ತಿನ್ನುತ್ತದೆ. ಮರಕುಟುಕನಂತೆಯೇ ಜೀವಿಸುವ ಇನ್ನೊಂದು ಪಕ್ಷಿ ಗಾಲಿಪೋಗಸ್ ದ್ವೀಪಗಳಲ್ಲಿದೆ. ಅದರ ನಾಲಗೆ ನೀಳದಲ್ಲಿ ರಂಧ್ರ ಕೊರೆದ ನಂತರ ಆಳದಲ್ಲಿರುವ ಹುಳುವನ್ನು ಹೊರತೆಗೆಯಲು ಅದು ಕಳ್ಳಿ ಅಥವಾ ಸಣ್ಣ ಕಡ್ಡಿಯನ್ನೋ ತಂದು, ಅದನ್ನು ರಂಧ್ರದೊಳಗೆ ಚುಚ್ಚಿ, ಹುಳು ತೆಗೆದು ತಿನ್ನುತ್ತದೆ. ಆಹಾರ ಹೊಂಚಲು ಆಯುಧವನ್ನು ಉಪಯೋಗಿಸುವ ಹಕ್ಕಿ ಪ್ರಪಂಚದಲ್ಲಿ ಅದೊಂದೇ!

ಹೀಗೆ ಮರದ ವಿವಿಧ ಭಾಗ ಮತ್ತು ಉತ್ಪನ್ನಗಳನ್ನು ತಿನ್ನಲು ಕಲಿತಿರುವ ವಿವಿಧ ಜಾತಿಗಳಿವೆ. ಗೆಡ್ಡೆಗೆಣಸು, ಹುಲ್ಲು, ಎಲೆ, ಚಿಗುರು, ಹೂವು, ಹಣ್ಣು, ಜೇನು, ಪರಾಗ, ಮುಂತಾದ ಸಸ್ಯಭಾಗಗಳೆಲ್ಲಾ ಪಕ್ಷಿಗಳ ಆಹಾರವಾಗಬಲ್ಲದು.

ಪ್ರಪಂಚದಲ್ಲಿ ಸಮುದ್ರಭಾಗವೇ ಹೆಚ್ಚು. ಪ್ರತಿ ಚದುರಮೈಲಿ ನೆಲಕ್ಕೆ ೨೧/೨ ಚದುರಮೈಲಿಯಷ್ಟು ಸಾಗರವಿದೆ. ಪ್ರಪಂಚದ ೫/೭ ಭಾಗ ಅದರಿಂದಲೇ ಆವರಿಸಲ್ಪಟ್ಟಿದೆ. ಅದರೆ ನೀರು ಹಕ್ಕಿಗಳ ಸಂಖ್ಯೆ ಕಡಮೆ. ಅದರಲ್ಲೂ ಸಮುದ್ರದಲ್ಲೇ ವಾಸಿಸುವ ಪಕ್ಷಿಗಳು ಅತಿ ಸ್ವಲ್ಪ. ಒಟ್ಟು ಪಕ್ಷಿ ಸಮೂಹದ ಶೇ. ೩ ಭಾಗ ಮಾತ್ರ. ಅವುಗಳಲ್ಲಿ ಅನೇಕವು ದಡದಲ್ಲಿ ವಾಸಿಸುವುವು. ಒಟ್ಟು ೨೫೦ರಲ್ಲಿ ೧೫೦ ಪ್ರಭೇದಗಳು ಮಾತ್ರ ನಿಜವಾಗಿ ಸಮುದ್ರವಾಸಿಗಳು. ಸಮುದ್ರದಲ್ಲಿ ಹೆಚ್ಚಿನ ಆಹಾರ ಅಡಕವಾಗಿದೆ. ಮೀನುಗಳೂ, ತೇಲುವ ಬಹು ಸಣ್ಣ ಸಸ್ಯಗಳೂ ಅನೇಕ ಪಕ್ಷಿಗಳಿಗೆ ಮುಖ್ಯಾಹಾರವಾಗಿದೆ.

ಮೀನು ಹೆಚ್ಚಾಗಿದ್ದೆಡೆ ಅವು ಅತಿಯಾಗಿ ಹೆಚ್ಚಿ ಅಲ್ಲಿನ ದ್ವೀಪಗಳನ್ನೆಲ್ಲಾ ಪೂರ್ಣವಾಗಿ ಆವರಿಸುತ್ತವೆ. ಪೆರು ಬಳಿಯ ಅನೇಕ ದ್ವೀಪಗಳಲ್ಲಿ ಮೀನು ತಿನ್ನುವ ಅನೇಕ ಪಕ್ಷಿ ಜಾತಿಗಳು ಲಕ್ಷಾಂತರ ಸಂಖ್ಯೆಯಲ್ಲಿ ತಂಗಿದ್ದು, ಅದರ ಹಿಕ್ಕೆ ಅನೇಕ ಅಡಿಗಳಷ್ಟು ಎತ್ತರವಾಗಿದ್ದು, ಪ್ರತಿವರ್ಷವೂ ಉತ್ತಮ ಗೊಬ್ಬರ ಒದಗಿಸುತ್ತವೆ. ಅವೆಲ್ಲಕ್ಕೂ ಮೀನೇ ಮುಖ್ಯಾಹಾರ. ದಡವಾಸಿಗಳಲ್ಲಿ ಪೆಂಗ್ವಿನ್ ಶೀತವಲಯದಲ್ಲಿ ವಾಸಿಸುತ್ತದೆ.

ಸಮುದ್ರ ಪಕ್ಷಿಗಳ ಜಾತಿ ೨೬೦ ಆದರೆ, ಸಿಹಿನೀರು, ಕೊಳ, ಸರೋವರ ಮತ್ತು ನದಿಗಳಲ್ಲಿ ವಾಸಿಸುವುವು ಇನ್ನೂ ಹೆಚ್ಚು. ಸುಮಾರು ೬೦೦ ಜಾತಿಗಳು ಜೌಗುಪ್ರದೇಶ, ಸರೋವರ ಮುಂತಾದ ಸ್ಥಳಗಳಲ್ಲಿ ವಾಸಿಸುತ್ತವೆ. ಅವುಗಳಲ್ಲಿ ಅನೇಕವು ಆಳವಾಗಿ ಈಜಿ ಮೀನು ಹಿಡಿಯಬಲ್ಲವು. 'ಅನ್‌ಹಿಂಗ್' (Anhinga) ಅಥವಾ ನೀಳಕತ್ತಿನ ನೀರು ಕಾಗೆ, ಮತ್ತು ನೀರು ಕಾಗೆಗಳು ಹಠಾತ್ತಾಗಿ ಬಹಳ ಆಳಕ್ಕೆ ಮುಳುಗಿ ಮೀನು ಹಿಡಿಯುತ್ತವೆ. ಇವುಗಳಿಗೆ ಮತ್ತು ನೀರು ಕೋಳಿಗಳಿಗೆ ಕಾಲ್ಬೆರಳು ಜಾಲಾಂಗುಲ ಅಥವಾ ಹುಟ್ಟುಗಳಂತಿದ್ದು ನೀರಿನಲ್ಲಿ ವಾಸಿಸಲು ಮಾತ್ರ ಯೋಗ್ಯವಾಗಿರುತ್ತವೆ.

ಈ ಗುಂಪಿಗೆ ಸೇರಿದವಾದರೂ ತೀರದಲ್ಲಿರುವ ಪಕ್ಷಿಗಳು ಬಕಪಕ್ಷಿ ಐಬಿಸ್, ಸ್ಪೂನ್ ಬಿಲ್ ಮತ್ತು ವಿವಿಧ ಕೊಕ್ಕರೆಗಳು. ಅವುಗಳಿಗೆ ನೀಳ ಕಾಲುಗಳಿದ್ದು ಆಳ ನೀರಿನಲ್ಲಿ ಹಾಯ್ದು ಮೀನು ಹಿಡಿಯಲು ಸಹಾಯಕವಾಗಿವೆ. ಜೊಂಡು ಹುಲ್ಲುಗಳ ಮಧ್ಯೆ ಇದ್ದು, ಕತ್ತೆತ್ತಿ ಸುತ್ತಲೂ ನೋಡಿ, ಶತ್ರುಗಳ ಸುಳಿವನ್ನು ತಿಳಿಯಲು ಸಹಾಯಕವಾಗಿ ಬಹು ನೀಳ ಕತ್ತು ಏರ್ಪಟ್ಟಿದೆ. ಸಾಮಾನ್ಯವಾಗಿ ಈ ನೀರು ಹಕ್ಕಿಗಳು ವಾಸಿಸುವ ಸ್ಥಳದಿಂದ ಪ್ರವಾಹದ ಮುಂಭಾಗದಲ್ಲಿ ಮೀನು ಚೆನ್ನಾಗಿ ವೃದ್ಧಿಸುತ್ತವೆ. ಅವುಗಳ ಹಿಕ್ಕೆಯು ಮೀನುಗಳಿಗೆ ಮುಖ್ಯಾಹಾರವಾಗಿ ಹಾಗೆ ವೃದ್ಧಿ ಹೊಂದುತ್ತವೆ. ಇತರ ಸಣ್ಣ ಪಕ್ಷಿಗಳು – ಸ್ನೈಪ್, ಪ್ಲೋವರ್ ಮುಂತಾದುವುಗಳು ಬಹುದೂರ ನೀರಿನಲ್ಲಿ ಹಾಯ್ದುಹೋಗಲು ಸಾಧ್ಯವಿಲ್ಲವಾದ್ದರಿಂದ, ನೀರಿನ ಅಂಚಿನಲ್ಲಿರಬಹುದಾದ ಸಣ್ಣ ನಳ್ಳಿ, ಸೊಳ್ಳೆ ಮರಿಗಳು, ಮರಳುಚಿಗಟ, ಮಾತ್ತಿತರ ಕೀಟಗಳನ್ನು ಆರಿಸಿ ತಿನ್ನುತ್ತವೆ.

ಬಾತು ಕೋಳಿಗಳಲ್ಲಿ ಅನೇಕ ವಿಧಗಳಿವೆ. ಅವೆಲ್ಲವೂ ಒಂದೆಡೆ ಸೇರಿ ವಿಶ್ರಮಿಸಿದರೂ ಆಹಾರ ವೈವಿಧ್ಯತೆ ಅವುಗಳಲ್ಲಿ ಹೆಚ್ಚು. ಹಲವು ಪಕ್ಕದ ಹೊಲಗಳಿಗೆ ರಾತ್ರೆ ಹೋಗಿ ಕಾಳು ಹುಲ್ಲುಗಳನ್ನು ಮೇದು ಬರುತ್ತವೆ. ಹಲವು ಮೀನನ್ನು ಹಿಡಿದು ತಿನ್ನುವವು. ಕೆಲವು ವಿಧಗಳಿಗೆ ಕಪ್ಪೆಚಿಪ್ಪು ಮುಖ್ಯಾಹಾರ. ನೀರಿನ ಮೇಲೆ ತೇಲುವ ಸಣ್ಣ ಸಸ್ಯಗಳೂ (ಲೆಮ್ನಾ) ಒಂದು ಜಾತಿಗೆ ಬೇಕಾದ ಆಹಾರ, ಹೀಗೆ ಒಂದೇ ಜಾತಿಗೆ ಸೇರಿದವಾದರೂ ಅವುಗಳ ಆಹಾರಕ್ರಮ ಬೇರೆಬೇರೆಯಾಗಿರುತ್ತದೆ.

ಇವುಗಳಲ್ಲಿ ಅತಿ ವಿಚಿತ್ರವಾದದ್ದು ಫ್ಲೆಮಿಂಗೋ ಪಕ್ಷಿ (Flemingo). ಅವುಗಳ ದಪ್ಪಕೊಕ್ಕು ಬಾಚಿಯಂತೆ ಕೊನೆಯಲ್ಲಿ ಮುಂಬಾಗಿರುತ್ತದೆ. ಕೊಕ್ಕುಗಳ ಪಾರ್ಶ್ವದಲ್ಲಿ ಬಾಚಣಿಗೆಯಂತಿದ್ದು, ಕೊಕ್ಕಿನಿಂದ ಅದು ಮಣ್ಣನ್ನು ಕೆದಕಿ ಹೀರುವಾಗ ಕಲ್ಲು ಮಣ್ಣು ಹೊರನಿಂತು, ನೀರೂ ಅದರಲ್ಲಿನ ಸಾಪಯುವ ಪದಾರ್ಥಗಳು ಮಾತ್ರ ಬಾಯೊಳಗೆ ಬರುವಂತೆ ಏರ್ಪಡಿಸುವ ಜಾಲರಿಯಾಗಿದೆ. ಅದು ಬಹು ದೂರ ನೀರಿನಲ್ಲಿ ಹಾದು ಹೋಗಲು ಬೇಕಾದಂತಹ ನೀಳ ಕಾಲು, ಕತ್ತು ಹೊಂದಿದ್ದರೂ ಅದರ ಮುಖ್ಯಾಹಾರ ಸಾಪಯುವ ಪದಾರ್ಥ ಮತ್ತು ಅತಿ ಸೂಕ್ಷ್ಮ ಸಸ್ಯಗಳೇ. ಅದರಿಂದಲೇ ಅದರ ಕೊಕ್ಕಿನಲ್ಲಿ ಈ ರಚನಾ ವೈಶಿಷ್ಟ್ಯ.

ಮಾಂಸಾಹಾರಿಗಳ ಗುಂಪಿನಲ್ಲಿ ಸುಮಾರು ೪೦೦ ಪ್ರಭೇದಗಳಿವೆ. ಅವುಗಳಲ್ಲಿ ಬಹುಭಾಗ ಹಗಲು ಸಂಚಾರಿಗಳು, ಕೆಲವು ಮಾತ್ರ ನಿಶಾಚರ ಪಕ್ಷಿಗಳು. ಹದ್ದು, ರಣ ಹದ್ದು ಮತ್ತಿತರ ಪಕ್ಷಿಗಳು ಹಗಲೆಲ್ಲಾ ಹಾರಾಡಿ ಆಹಾರ ಹೊಂಚುತ್ತವೆ. ಗೂಬೆ ರಾತ್ರಿ ಸಂಚಾರಿ. ಅದರ ಕಣ್ಣು ಮತ್ತು ಕಿವಿಯ ರಚನೆ ವಿಶೇಷವಾಗಿ ಕತ್ತಲಲ್ಲಿಯೂ ಚನ್ನಾಗಿ ತಮ್ಮ ಆಹಾರವನ್ನು ಕಂಡುಹಿಡಿದು ತಿನ್ನಬಲ್ಲವು. ರಾತ್ರೆ ಶಬ್ದವಿಲ್ಲದೆ ಹಾರಾಡುತ್ತಾ ಬಂದು ಇಲಿ ಮುಂತಾದುವನ್ನು ಗುರಿ ತಪ್ಪದೆ ಹಿಡಿಯಬಲ್ಲವು.

ಸಾಮಾನ್ಯವಾಗಿ ವೇಗದಿಂದ ತಮ್ಮ ಆಹಾರದೆಡೆಗೆ ಎರಗಿ ಮೊನಚಾದ ಉಗುರು ಗಳಿಂದ ಹಿಡಿದು, ಕೊಕ್ಕಿನಿಂದ ಹರಿದು ತಿನ್ನುವುದು ವಾಡಿಕೆ. ಆದರೆ ಹಲವು ರಣ ಹದ್ದು ಜಾತಿಗಳು ಸತ್ತ ಮಾಂಸ ಹರಿದು ತಿನ್ನುತ್ತಿದ್ದು ಪಾದಗಳ ಸಹಾಯ ಹೆಚ್ಚಾಗಿ ಬೇಕಿರುವುದಿಲ್ಲ. ಈ ಜಾತಿಯು, ಗಿಡುಗ ಮತ್ತು ಇತರ ಪಕ್ಷಿಗಳನ್ನೂ ಬೇಟೆಯಾಡಿ ಜೀವಿಸುತ್ತವೆ. ಅದು ಉತ್ತಮ ಬೇಟೆಗಾರನಾಗಲೂ ಬೇಕಾದ ದೇಹರಚನೆ ಏರ್ಪಟ್ಟಿದೆ. ದುಂಡುತಲೆ, ಅಗಲ ಭುಜ, ಬಾಲದೆಡೆಗೆ ಕ್ರಮೇಣ ಕಿರಿದಾಗುವ ದೇಹ, ಮೊನಚಾದ ಉಗುರು, ತೀಕ್ಷ್ಣ ದೃಷ್ಟಿಯಿಂದ ಕೂಡಿರುವ ಈ ಪಕ್ಷಿಗಳು ನಿರಾಯಾಸವಾಗಿ ಬಹು ದೂರ ಹಾರಿ ತಮ್ಮ ಆಹಾರದೆಡೆಗೆ ೧೭೫ ಮೈಲಿ ವೇಗದಲ್ಲಿ ಎರಗಿ ಅದನ್ನು ಹಿಡಿಯ ಬಲ್ಲವು. ಆದರೆ ಹೀಗೆ ವೇಗದಿಂದ ಚಲಿಸಿ ಹಿಡಿಯಲು ಮೈದಾನ ಪ್ರದೇಶದಲ್ಲಿ ಮಾತ್ರ ಸಾಧ್ಯ. ಮರ, ಗಿಡ, ಮುಂತಾದ ಅಡಚಣೆಗಳಿದ್ದಲ್ಲಿ ಸಾಧ್ಯವಿಲ್ಲ. ಅದರಲ್ಲಿ ಸಣ್ಣ ಗಿಡಗಗಳು ಹಾರುವಾಗ ಬೇಕಾದೆಡೆ ತೇಲಿನಿಂತು ಮುಂದುವರೆಯಲು ಶಕ್ತವಾಗಿವೆ.

ಸಣ್ಣ ಗಿಡಗಗಳಲ್ಲಿ ಹಲವು ಪ್ರಭೇದಗಳು ಹಕ್ಕಿಗಳನ್ನೂ ಸಣ್ಣ ಪ್ರಾಣಿಗಳನ್ನೂ ಹಿಡಿದು ತಿನ್ನಲು ನುರಿತಿವೆ. ಅವುಗಳ ರೆಕ್ಕೆಯ ರಚನೆ ದುಂಡಗಿದ್ದು ಗಿಡ ಪೊದರುಗಳ ಮಧ್ಯವೂ ನುಗ್ಗಿ ಚಲಿಸಿ ಆಹಾರ ಹಿಡಿಯಲು ಅನುಕೂಲವಾಗಿದೆ.

ರಣಹದ್ದುಗಳಿಗೆ ಸತ್ತ ಪ್ರಾಣಿಗಳೇ ಆಹಾರ. ಎತ್ತರದಲ್ಲಿ ತೇಲುತ್ತಾ ತನ್ನ ಸೂಕ್ಷ್ಮ ದೃಷ್ಟಿಯಿಂದ ಎಲ್ಲೆಡೆ ಆಹಾರ ಹುಡುಕಾಡುತ್ತಾ ಇದ್ದು, ಕಂಡಲ್ಲಿ ತನ್ನ ಚಲನೆ ಯಿಂದಲೇ ಇತರ ಪಕ್ಷಿಗಳಿಗೆ ಅದರ ಸುಳಿವನ್ನು ಸೂಚಿಸುತ್ತದೆ.

ಇದರಿಂದಾಗಿ ಆ ಸ್ಥಳದಲ್ಲಿನ ಎಲ್ಲಾ ರಣಹದ್ದುಗಳೂ ಅದರೆಡೆ ಕ್ಷಣಮಾತ್ರದಲ್ಲಿ ಧಾವಿಸಿ ಸೇರಲು ಅನುಕೂಲವಾಗುತ್ತದೆ. ಅವು ಪ್ರತ್ಯೇಕವಾಗಿದ್ದರೂ ಆಹಾರ ಉಪಯೋಗದಲ್ಲಿ ಮಾತ್ರ ಸಂಘಜೀವಿಗಳಾಗುತ್ತವೆ.

ಮಾಂಸಾಹಾರಿ ಪಕ್ಷಿಗಳು ವಿವಿಧ ಪ್ರಾಣಿಗಳನ್ನು ಆಹಾರವಾಗಿ ಉಪಯೋಗಿಸು ತ್ತವೆ. ರಣಹದ್ದುಗಳಿಗೆ ಎಲ್ಲಾ ಸತ್ತ ಪ್ರಾಣಿಗಳ ದೇಹ; ಹದ್ದು ಗಿಡುಗಗಳಿಗೆ ಸಣ್ಣ ಪಕ್ಷಿ ಓತಿಗಳು; ಗೂಬೆಗಳಿಗೆ ಮುಖ್ಯವಾಗಿ ಇಲಿ, ಕೆಲವು ಸಲ ಸಣ್ಣ ಹಾವುಗಳು — ಇವು ಸಾಮಾನ್ಯ ಆಹಾರ. ಆದರೆ ಹಲವು ಪ್ರಭೇದಗಳು ನಿರ್ದಿಷ್ಟವಾದ ಆಹಾರ ಮಾತ್ರ ತಿನ್ನುತ್ತವೆ. ಫಿಲಿಪೈನ್ ದ್ವೀಪಗಳಲ್ಲಿನ ದೊಡ್ಡ ಹದ್ದು ಕೋತಿಗಳನ್ನೂ;

ಕಿವಿಯ ಬಳಿ ಪಲವು ಲೇಖಣಿಕೆಗಳಂತಹ ನೀಳಗರಿ ಹೊಂದಿರುವ ' ಸೆಕ್ರೆಟರಿ ' ಪಕ್ಷಿಗಳು ಹಾವುಗಳನ್ನೂ ; ಸಣ್ಣ ಗಿಡಗವೊಂದು ಜೇನು ಮತ್ತು ನೊಣಗಳನ್ನೂ ; ಎವರ್ ಗ್ಲೈಡ್ ಹದ್ದುಗಳು ಬಸವನ ಹುಳುಗಳನ್ನೂ ಮಾತ್ರ ತಿನ್ನುತ್ತವೆ.

ಈ ಮಾಂಸಾಹಾರಿಗಳ ಪಂಗಡದಲ್ಲಿ ಹಲವು ಸಸ್ಯಾಹಾರಿಗಳೂ ಉತ್ಪನ್ನವಾಗಿವೆ. ಬಹುಶಃ ಆಹಾರ ಅಭಾವವಿದ್ದಾಗ ಇತರ ಆಹಾರ ಅರಸಿ ಅದರಲ್ಲಿ ಆಸಕ್ತಿ ಹೊಂದಿ ಅದನ್ನೇ ತಿನ್ನಲು ಏರ್ಪಡಿಸಿಕೊಂಡಿರಬೇಕು. ಎಣ್ಣೆ ಹೆಚ್ಚಾಗಿರುವ ತಾಳೆ ಜಾತಿಯ ಮರದ ಹಣ್ಣನ್ನು ಮಾತ್ರ ತಿನ್ನುವ ಹದ್ದಿನ ಜಾತಿಯೊಂದು ಆಫ್ರಿಕಾದಲ್ಲಿದೆ. ದಕ್ಷಿಣ ಅಮೇರಿಕಾದ "ಗೌಚಾರೋ" (Goucharo) ಹದ್ದು ರಾತ್ರಿಕಾಲ ಮಾತ್ರ ಸಂಚರಿಸಿ ಹಣ್ಣನ್ನು ಹುಡುಕುತ್ತದೆ. ಅದಕ್ಕೆ ಇಷ್ಟವಾದ ಹಣ್ಣು ೫೦ ಮೈಲಿ ದೂರವಿದ್ದರೂ ಒಂದೇ ರಾತ್ರಿಯಲ್ಲಿ ಅಲ್ಲಿಯವರೆಗೂ ಹೋಗಿ ತಿಂದು ಹಿಂತಿರುಗುತ್ತದೆ. ಜೇನು ತೋರ್ಕೆ ಹಕ್ಕಿ ವಿಚಿತ್ರವಾದದ್ದು. ಅದರ ಆಹಾರ ಜೇನುಮೇಣ ಮಾತ್ರ. ಇದಕ್ಕಾಗಿ ಹಕ್ಕಿ ಹಾರಾಡಿ ಜೇನುಗೂಡು ಪತ್ತೆ ಹಚ್ಚಿ, ಜೇನು ತಿನ್ನುವ ಪ್ರಾಣಿಗಳನ್ನು ಅಲ್ಲಿಗೆ ಕರೆದೊಯ್ಯುತ್ತದೆ ! ಅದು ಚಿಲಿಪಿಲಿಗುಟ್ಟುತ್ತಾ ಮನುಷ್ಯ ಅಥವಾ ಕೋತಿಗಳೆದುರು ಹಾರಾಡುವಾಗ ಅದು ಜೇನು ಕಂಡಿದೆಯೆಂದು ಅವುಗಳಿಗೆ ತಿಳಿದು ಅದನ್ನು ಹಿಂಬಾಲಿಸುತ್ತವೆ. ಗೂಡಿಗೆ ಕರೆದೊಯ್ದು ಅವುಗಳು ಜೇನು ತಿಂದು ಮೇಣ ಬಿಸಾಡಿ ಅಥವಾ ಉಗಿದುಬಿಟ್ಟಾಗ ಆ ಮೇಣವನ್ನು ಅದು ತಿನ್ನುತ್ತದೆ. ಬೇರೆ ಪ್ರಾಣಿಗಳಾಗಲೀ, ಪಕ್ಷಿಗಳಾಗಲೀ ಮೇಣವನ್ನು ತಿಂದು ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಆ ಕಾರ್ಯ ಇದಕ್ಕೆ ಮಾತ್ರ ಸಾಧ್ಯ.

ಈ ಪಂಗಡದ ಹಲವು ಪಕ್ಷಿಗಳು ದರೋಡೆಕೋರರು : ಅವು ತಾವೇ ಮಾಡಲಾರದ್ದನ್ನು ಇತರ ಪಕ್ಷಿಗಳು ಸಾಧಿಸುವುದನ್ನು ಕಾಯ್ದು ಅವುಗಳಿಂದ ಆಹಾರ ಕದಿಯುತ್ತವೆ. ದೊಡ್ಡ ಹದ್ದೊಂದು ಸಣ್ಣ ಗಿಡುಗಗಳು ಆಹಾರ ಹಿಡಿಯುವವರೆಗೂ ಕಾದಿದ್ದು ಅವುಗಳನ್ನು ಹೆದರಿಸಿ ಅಟ್ಟಿ ಆ ಆಹಾರವನ್ನು ಕಸಿದುಕೊಳ್ಳುತ್ತವೆ. ಹಲವು ಸಮುದ್ರ ಪಕ್ಷಿಗಳಲ್ಲೂ ಇದೇ ರೀತಿಯ ನಡತೆ ಕಂಡುಬರುತ್ತದೆ. ಪೆಲಿಕನ್ ಪಕ್ಷಿಗಳ ಕೊಕ್ಕಿನಿಂದ ಮೀನು ಕದಿಯುವ ಸಮುದ್ರ ಪಕ್ಷಿಗಳು ಹಲವಿವೆ.

ಹೀಗೆ ವಿವಿಧ ಪಕ್ಷಿಗಳಿಗೆ ವಿವಿಧ ಆಹಾರ ಸಂಗ್ರಹಣ ವೈವಿಧ್ಯತೆಯಿದ್ದರೂ ಕೆಲವು ಸರ್ವ ಭಕ್ಷಕಗಳೂ ಈ ವರ್ಗದಲ್ಲಿ ಸೇರಿವೆ. ಕಾಗೆಗಳು ಇದಕ್ಕೆ ಉತ್ತಮ ಉದಾಹರಣೆ. ಸಣ್ಣ ಪಕ್ಷಿಗಳು, ಇಲಿ, ಕಾಳು, ಹಣ್ಣು, ಕೊಳೆತ ಮಾಂಸ ಮುಂತಾದುವುಗಳನ್ನೆಲ್ಲಾ ಅವು ತಿನ್ನುತ್ತವೆ. ಆದ್ದರಿಂದಲೇ ಪಕ್ಷಿವರ್ಗದ ಜಲಗಾರರೆಂದು ಅದನ್ನು ಪರಿಗಣಿಸಲಾಗಿದೆ.

ಮಾಂಸಾಹಾರಿ ಪಕ್ಷಿಗಳು ಇತರ ಜೀವಿಗಳನ್ನು ತಿಂದು ಜೀವಿಸಿದರೂ ಅವುಗಳನ್ನು ಹಿಂಸಾತ್ಮಕ ಪ್ರಾಣಿಗಳೆಂದು ಪರಿಗಣಿಸಲಾಗದು. ಅದು ನಿಸರ್ಗದ ಒಂದು ಅಪೂರ್ವ ಏರ್ಪಾಡು. ಮುದಿಯಾದ ರೋಗಪೀಡಿತ ಪ್ರಾಣಿಗಳೇ ಅವುಗಳಿಗೆ ಸುಲಭವಾಗಿ ದೊರಕುವುವು. ಅವು ಹೇಗಿದ್ದರೂ ಬೇಗ ಸಾಯುತ್ತವೆ. (ನಿಸರ್ಗದಲ್ಲಿ ಶಕ್ತಿ

ವಂತ ಬಾಳುತ್ತಾನೆ;) ಪ್ರಾಣಿಗಳಲ್ಲಿ ಒಂದುಕ್ಕೊಂದು ಆಹಾರವಾಗಿ ಏರ್ಪಟ್ಟಿದೆ. ಈ ಸಮತೋಲನವಿಲ್ಲದಿದ್ದಲ್ಲಿ ಹಲವು ಪ್ರಭೇದ ಅತಿಯಾಗಿ ಹೆಚ್ಚಿ ತೊಂದರೆಯಾಗುತ್ತಿತ್ತು. ಈ ಆಹಾರ ವೈವಿಧ್ಯತೆ ಸಮತೋಲನವೇರ್ಪಡಿಸಲು ಅತ್ಯಗತ್ಯ ಸಾಧನವಾಗಿದೆ. ಇದು ಪ್ರಕೃತಿಯ ಏರ್ಪಾಟು.

ಪ್ರಪಂಚದ ಪಕ್ಷಿವರ್ಗ ಹೆಚ್ಚಾಗಿ ವೃದ್ಧಿಯಾಗಲು ಅವುಗಳ ಆಹಾರ ಮಾರ್ಪಾಟೇ ಮುಖ್ಯ ಕಾರಣ. ಸುಲಭವಾಗಿ ದೊರಕುವ ಆಹಾರಕ್ಕೆ ಹೊಂದಿಕೊಳ್ಳುವಂತಹ ಪ್ರಕೃತಿ ಅವುಗಳದ್ದು. ಒಂದೇ ವಿಧದ ಆಹಾರ ಸಾಮಾನ್ಯವಾಗಿ ಸೇವಿಸಿದರೂ, ಅಭಾವ ವೇರ್ಪಟ್ಟಲ್ಲಿ ಎಷ್ಟೇ ದೂರ ಬೇಕಾದರೂ ಸಂಚರಿಸಿ ಅಥವಾ ತಮ್ಮ ಆಹಾರವನ್ನು ಬದಲಾಯಿಸಿ ಬದುಕಬಲ್ಲವು. ಬಾಹ್ಯ ಅನುಕೂಲತೆಗಳಿಗೆ ಹೊಂದಿಕೊಂಡಿರುವುದೇ ಅವು ವೃದ್ಧಿಯಾಗಲು ಮುಖ್ಯ ಕಾರಣ.

ಸಸ್ಯಗಳ ವಿವಿಧ ಭಾಗಗಳು, ಕೀಟ, ಸಣ್ಣ ಸಸ್ತನಿಗಳು, ಮೀನು, ಇತರ ಪಕ್ಷಿಗಳು – ಇವು ಮುಖ್ಯ ಆಹಾರವಾಗಿದ್ದು ಅವುಗಳನ್ನು ಸಂಗ್ರಹಿಸಲು ಏರ್ಪಡಿಸಿಕೊಂಡಿರುವ ಮಾರ್ಪಾಟುಗಳೇ ಅವುಗಳ ವಂಶಾಭಿವೃದ್ಧಿಗೆ ಮೂಲಾಧಾರ. ನೀರುಕಾಗೆ, ಕಾನಿಂಗಾ ಮುಂತಾದವು ನೀರಿನಲ್ಲಿ ಮುಳುಗಿ ಮೀನು ಹಿಡಿಯಬಲ್ಲವು. ಅವು ಆಳವಾಗಿ ನೀರಿನಲ್ಲಿ ಮುಳುಗುವಾಗ ನೋವಾಗದಂತೆ ತಲೆ ನೀಳವಾಗಿ ಸಣ್ಣಗಿರುತ್ತದೆ. ಅಲ್ಲದೆ ದೇಹ ತಾನಾಗಿ ತೇಲಲು ಅನುಕೂಲವಾಗುವಂತೆ ಚರ್ಮದಡಿ ಗಾಳಿ ಕೋಶಗಳೇರ್ಪಟ್ಟಿವೆ. ಇವು ಪಕ್ಷಿಗಳನ್ನು ಸುಲಭವಾಗಿ ತೇಲಿಸುತ್ತವೆ.

ಮರದ ಒಳಗಿರುವ ಮತ್ತು ತೊಗಟೆಯಡಿಯ ಹುಳುಗಳನ್ನು ಹೊರತೆಗೆಯಲು ಬೇಕಾದ ಉಳಿಯಂತಹ ಗಟ್ಟಿ ಕೊಕ್ಕು, ನೀಳ ನಾಲಗೆ ಹಲವು ಪಕ್ಷಿಗಳಿಗಿರುವುದು ವಿವರಿಸಲ್ಪಟ್ಟಿದೆ. ನೀಳ ನಾಲಗೆಯನ್ನು ಗೂಡುಗಳಲ್ಲಿ ಒಳಚಾಚಿ ಇರುವೆಗಳನ್ನು ತಿನ್ನಲು ಹಲವು ಪಕ್ಷಿಗಳು ಕಲಿತಿವೆ.

ಹಲವು ಪಕ್ಷಿಗಳು ಇತರ ಪ್ರಾಣಿಗಳೊಡನೆ ಜೊತೆಗೂಡಿ ಜೀವಿಸುತ್ತವೆ. ಇದರಿಂದ ಉಭಯತ್ರರಿಗೂ ಅನುಕೂಲವಾಗುತ್ತದೆ. ಘೇಂಡಾಮೃಗ, ನೀರು ಕುದುರೆ ಮುಂತಾದ ದೊಡ್ಡ ಪ್ರಾಣಿಗಳಿಗೆ ದಪ್ಪ ಚರ್ಮವಿರುತ್ತದೆ. ಅದರಲ್ಲಿ ಗಾಯವಾದಲ್ಲಿ ನೊಣಗಳು ಮೊಟ್ಟೆಯಿಕ್ಕಿ ಹುಳುವಾಗುತ್ತದೆ. ಒಂದು ಜಾತಿಯ ಸಣ್ಣ ಹಕ್ಕಿ ಈ ಪ್ರಾಣಿಗಳ ಜೊತೆಗೇ ಇದ್ದು ಆ ಹುಳುಗಳನ್ನು ಹೆಕ್ಕಿ ತಿನ್ನುತ್ತದೆ. ಪಕ್ಷಿಗಳಿಗೆ ಆಹಾರ ಒದಗಿ, ಗಾಯ ವಾಸಿಯಾಗಲು ಆ ಪ್ರಾಣಿಗೆ ಅನುಕೂಲವಾಗುತ್ತದೆ. ಸಾಮಾನ್ಯವಾಗಿ ದನಗಳು ಮೇಯುವೆಡೆ ಬಿಳಿಯ ಕೊಕ್ಕರೆಗಳು ಹಿಂಡಾಗಿರುತ್ತವೆ. ಅವುಗಳ ಮೈಮೇಲಿನ ಉಣ್ಣೆ ಮತ್ತು ನೊಣಗಳನ್ನೂ, ದನ ನಡೆಯುವಾಗ ಹುಲ್ಲಿನಿಂದ ಹಾರುವ ಹುಳು ಹುಪ್ಪಟೆಗಳನ್ನೂ ತಿನ್ನಲು ಅವುಗಳಿಗೆ ಅನುಕೂಲವಾಗುತ್ತದೆ. ಹಕ್ಕಿಗಳು ಅಪಾಯ ವಿದ್ದಾಗ ಕೂಗಿ ಪ್ರಾಣಿಗಳನ್ನು ಎಚ್ಚರಿಸುತ್ತವೆ. ಮೊಸಳೆ ಕೊಳೆತ ಮಾಂಸ ತಿಂದು ಬಾಯಿ ತೆರೆದು ಮಲಗುತ್ತದೆ. ಆದರೆ ಹಲ್ಲುಗಳ ಸಂದಿಯಲ್ಲಿ ಸಿಕ್ಕಿಕೊಳ್ಳುವ ಮಾಂಸವನ್ನು

ಸಣ್ಣ ಪಕ್ಷಿಯೊಂದು ತಿಂದು ಜೀವಿಸುತ್ತದೆ. ಹಲ್ಲು ಶುಭ್ರವಾಗುವುದರಿಂದ ಮೊಸಳೆ ಅದಕ್ಕೆ ಯಾವ ರೀತಿಯಲ್ಲೂ ತೊಂದರೆ ಮಾಡುವುದಿಲ್ಲ. ಈ ಸೌಹಾರ್ದ ಬಾಳ್ವೆ ಈರ್ವರಿಗೂ ಅನುಕೂಲವಾಗುತ್ತದೆ.

ಆಹಾರ ಸೌಲಭ್ಯವೇ ಪಕ್ಷಿ ಸಮೂಹಕ್ಕೆ ಮುಖ್ಯವಾಗಿದ್ದು, ಉಷ್ಣವಲಯದಲ್ಲಿ ವಿವಿಧ ಆಹಾರವಿರುವುದರಿಂದ ಅನೇಕ ಜಾತಿ, ಪ್ರಭೇದಗಳು ಅಲ್ಲೇ ನಮಗೆ ದೊರಕು ವುದು. ಸೌಲಭ್ಯ ಕಡಮೆಯಾಗಿ ಆಹಾರ ಹೆಚ್ಚಾಗಿಲ್ಲದ ಶೀತವಲಯದಲ್ಲಿ ಪೆಂಗ್ವಿನ್ ಮುಂತಾದ ಜಾತಿಯನ್ನುಳಿದು ಇತರ ಪಕ್ಷಿಗಳಿಲ್ಲ. ಈ ಪಕ್ಷಿಗಳೂ ಪೂರ್ಣವಾಗಿ ಮೀನು ತಿಂದು ಜೀವಿಸುವುಗಳೇ.

— ೬ —

ಲಕ್ಷಾಂತರ ಪಕ್ಷಿಗಳು ಒಂದೆಡೆಯೇ ಇದ್ದಲ್ಲಿ ಆಹಾರ ಸಮಸ್ಯೆ ಕ್ಲಿಷ್ಟವಾಗಿ ತೊಂದರೆ ಯಾಗುತ್ತದೆ. ಇಷ್ಟು ಪಕ್ಷಿ ಸಂಖ್ಯೆ ಕಡಮೆಯಾಗದೆ ವೃದ್ಧಿಯಾಗಬೇಕಾದಲ್ಲಿ ಆಹಾರ ಹಂಚಿಕೆಯಲ್ಲಿ ಒಂದು ನಿರ್ದಿಷ್ಟ ಏರ್ಪಾಟಿರಬೇಕು. ಪಕ್ಷಿಗಳು ಬಹುಮಟ್ಟಿಗೆ ಒಂದ ರೊಡನೊಂದು ಜಗಳವಾಡದೆ ಸೌಹಾರ್ದತೆಯಿಂದ ಇರುವ ಏರ್ಪಾಡು ಮಾಡಿ ಕೊಳ್ಳುತ್ತವೆ. ಇದಕ್ಕೆ ಅವುಗಳ ಆಹಾರ ವೈವಿಧ್ಯತೆ ಸಹಾಯಕ. ಒಂದೇ ಸ್ಥಳ ದಲ್ಲಿರುವ ವಿವಿಧ ಜಾತಿಯ ಪಕ್ಷಿಗಳೆಲ್ಲಾ ಒಂದೇ ವಿಧದ ಆಹಾರ ಸೇವಿಸುವುದಾಗಿದ್ದರೆ ಆಹಾರ ಕೊರತೆಯುಂಟಾಗಿ ತೊಂದರೆಯಾಗುತ್ತಿತ್ತು. ಆದರೆ ಹಲವು ಮಾಂಸಾಹಾರಿ, ಕೆಲವು ಕೀಟಾಹಾರಿ, ಉಳಿದವು ಧಾನ್ಯ, ಹಣ್ಣು, ಜೇನು ಮುಂತಾದುವನ್ನು ಉಪ ಯೋಗಿಸುವುದರಿಂದ ಹೆಚ್ಚಿನ ತಿಕ್ಕಾಟವೇರ್ಪಡುವುದಿಲ್ಲ. ಒಂದೇ ಸ್ಥಳದಲ್ಲಿನ ಒಂದೇ ಜಾತಿಯ ಪಕ್ಷಿ ಸಂಖ್ಯೆ ಅಲ್ಲಿಯ ಆಹಾರ ಹೊಂದಾಣಿಕೆಯನ್ನನುಸರಿಸುತ್ತದೆ. ಸಂಖ್ಯೆ ಹೆಚ್ಚಾದಲ್ಲಿ ಅಲ್ಲಿಂದ ಬೇರೆಡೆ ಹೊರಟುಹೋಗುತ್ತವೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಒತ್ತಾಗಿ ಜೀವಿಸುವುದು ಹೇರಳ ಆಹಾರ ದೊರಕುವ ಸಮುದ್ರ ಮಧ್ಯದ ಹಲವು ದ್ವೀಪ ಹಾಗೂ ತೀರಗಳಲ್ಲಿ ಮಾತ್ರ. ಸಮುದ್ರದಲ್ಲಿ ಮೀನು ಯಥೇಚ್ಛವಾಗಿದ್ದು ಆಹಾರದ ಕೊರತೆಯಿಲ್ಲದೆ ಅವು ಅಲ್ಲಿ ವೃದ್ಧಿಯಾಗುತ್ತವೆ. ಸ್ಥಳಾವಕಾಶವಿದ್ದಷ್ಟೂ ಪಕ್ಷಿ ಸಂಖ್ಯೆ ಹೆಚ್ಚಿರುತ್ತದೆ.

ಮೊದಲು ವಾಯುಗುಣ ಮತ್ತು ಭೂಗುಣಕ್ಕನುಗುಣವಾಗಿ ಪಕ್ಷಿ ಜಾತಿಗಳು ಉತ್ಪನ್ನವಾಗಿರಬೇಕೆಂದು ಊಹಿಸಲಾಗಿದ್ದು ಭೂಪ್ರದೇಶವನ್ನು ೫ ಸ್ವಾಭಾವಿಕ ಭಾಗ ಗಳಾಗಿ ವಿಂಗಡಿಸಲಾಗಿತ್ತು. ಆ ಪ್ರದೇಶಕ್ಕನುಗುಣವಾಗಿಯೇ ವಿವಿಧ ಜಾತಿಗಳು ಉತ್ಪನ್ನವಾದವೆಂದು ನಂಬಲಾಗಿತ್ತು. ಆದರೆ ಡಾರ್ವಿನ್ನರ 'ಪ್ರಭೇದ ಉತ್ಪನ್ನ' ವಾದದಂತೆ ಈ ನಂಬಿಕೆಯನ್ನು ಅಲ್ಲಗಳೆದು ಪಕ್ಷಿಗಳಲ್ಲಿನ ಮಾರ್ಪಾಟು ಮತ್ತು

ವೈವಿಧ್ಯತೆ, ಅಲ್ಲಿನ ಅನುಕೂಲತೆಗಳನ್ನು ಮತ್ತು ಆಹಾರವನ್ನನುಸರಿಸಿ ಏರ್ಪಡುತ್ತದೆ ಎಂದು ತೋರಿಸಿ ಕೊಟ್ಟಿತು.

ವಿವಿಧ ವಾತಾವರಣ ಹಾಗೂ ಸಸ್ಯಸಮೂಹಗಳಿಗೆ ಹೊಂದಿಕೊಂಡಂತಹ ಪಕ್ಷಿ ಜಾತಿಗಳೂ ಅಲ್ಲಲ್ಲಿ ಇರುತ್ತವೆ. ಉಷ್ಣವಲಯದ ಹೆಚ್ಚು ಹೂವಿರುವಲ್ಲಿ ಮಾತ್ರ ಅತಿ ಸಣ್ಣ ಗಾತ್ರದ ಜೇನುಗ್ರಾಹಿ ಹಮ್ಮಿಂಗ್ ಪಕ್ಷಿಗಳು ಇರುವುದು. ಮರಳುಗಾಡಿನ ಪಕ್ಷಿ ಜಾತಿಗಳು ಬೆಟ್ಟದ ತುದಿಯಲ್ಲಿ ಜೀವಿಸಿರಲಾರವು. ಹಾಗೆಯೇ ವಿವಿಧ ಮಟ್ಟದಲ್ಲಿ ವಿವಿಧ ನೈಸರ್ಗಿಕ ಬದಲಾವಣೆಗಳಿಗೆ ಹೊಂದಿಕೊಂಡಂತೆ ಪಕ್ಷಿವೈವಿಧ್ಯತೆ ಕಂಡುಬರುತ್ತದೆ. ಹಲವು ಪಕ್ಷಿಗಳು ಮಾತ್ರ ವಿವಿಧ ಬದಲಾವಣೆಗೆ ಬಹು ಬೇಗ ಹೊಂದಿಕೊಂಡು ಎಲ್ಲೆಲ್ಲೂ ವಾಸಿಸಲು ಶಕ್ತವಾಗಿರುತ್ತವೆ. ಅವು ಬಹಳವಾಗಿ ಸಣ್ಣ ಗಾತ್ರದವು.

ಕಾಡು ಕಡಿದು ಪುನರುಜ್ಜೀವನಗೊಳಿಸುವ ಪ್ರದೇಶದಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಪೂರ್ಣ ಕಾಡು ಹೋಗಿ ಮೈದಾನವಾದಾಗ ಹುಲ್ಲು ಪೊದರುಗಳಿರುವ ಆ ಪ್ರದೇಶದಲ್ಲಿ ಮೊದಲು ಸಾಮಾನ್ಯವಾಗಿ ಬೆಳುವ ಹಕ್ಕಿಗಳು ಕಂಡುಬರುತ್ತವೆ. ಅಲ್ಲಿ ಪೊದರುಗಳು ಬೆಳೆದಂತೆಲ್ಲಾ ಇವು ಮಾಯವಾಗಿ ಗೌಜಗ ಮುಂತಾದುವು ಸೇರುತ್ತವೆ. ಕಾಡಿನ ಮರ ಬೆಳೆಯಲು ಪ್ರಾರಂಭವಾದಾಗ ವಿವಿಧ ಇಂಚರದ ಸಣ್ಣ ಹಕ್ಕಿಗಳು ಅಲ್ಲಿ ಸೇರುತ್ತವೆ. ಕಾಡು ದಟ್ಟವಾಗಿ ಬೆಳೆದಲ್ಲಿ ಮರಕುಟುಕ ಮುಂತಾದ ಪಕ್ಷಿಗಳು ಮಾತ್ರ ಅಲ್ಲಿರುತ್ತವೆ. ಇದರಿಂದ ವಾತಾವರಣ ಸುಲಭವಾಗಿ ಒದಗಿಸುವ ಆಹಾರಕ್ಕೆ ಹೊಂದಿಕೊಳ್ಳುವಂತಹ ಪಕ್ಷಿಜಾತಿಗಳೇ ಅಲ್ಲಿ ವಾಸಿಸುವುದು ಎಂದು ನಿಸ್ಸಂದೇಹವಾಗಿ ತಿಳಿದು ಬರುತ್ತದೆ.

ಪ್ರಪಂಚದಲ್ಲಿ ಒಟ್ಟು ೧೦,೦೦೦ ಕೋಟಿ ಪಕ್ಷಿಗಳಿರುವುದೆಂದು ಅಂದಾಜು ಮಾಡಲಾಗಿದೆ. ಅಮೆರಿಕಾದಲ್ಲಿ ಎಕರೆಗೆ ಸುಮಾರು ೩ – ೪ ಪಕ್ಷಿಗಳೂ, ಪ್ರಾಚ್ಯದಲ್ಲಿ ೪ – ೫ ಪಕ್ಷಿಗಳೂ ಇರಬಹುದೆಂದು ನಿರ್ಧರಿಸಲಾಗಿದೆ. ಇದು ಬರೇ ಅಂದಾಜು. ಆದರೂ ನಿಜಕ್ಕೆ ಬಹುದೂರವಲ್ಲವೆಂದು ತೋರುತ್ತದೆ. ಇವಲ್ಲದೆ ನೀರು ಪಕ್ಷಿಗಳಲ್ಲೂ ಅನೇಕ ಕೋಟಿಯಿರಬಹುದೆಂದೂ ಎಣಿಸಲಾಗಿದೆ. ಭೂಮಿಯ ಮೇಲಣ ಪಕ್ಷಿ ಸಂಖ್ಯೆಯನ್ನು ಎಕರೆ ಪ್ರದೇಶದಲ್ಲಿ ವಾಸಿಸುವ ವಿವಿಧ ಪಕ್ಷಿಗಳ ಕ್ರಮವರಿತ ಎಣಿಕೆಯಿಂದ ನಿರ್ಧರಿಸಲಾಗಿದ್ದರೂ ಸಮುದ್ರವಾಸಿಗಳ ಲೆಕ್ಕಾಚಾರ ಬರಿಯ ಅಂದಾಜು ಮಾತ್ರ. ಬಹುಶಃ ಅವು ಒಟ್ಟು ಸಂಖ್ಯೆಯ ಶೇ. ೫ – ೬ ಭಾಗದಷ್ಟಿರಬಹುದು.

ಸಮುದ್ರತೀರದ ವಾಸಿಗಳೆಲ್ಲವೂ ದೀರ್ಘಾಯುಷಿಗಳು. ಅವುಗಳಿಗೆ ಶತ್ರು ಭಾದೆ ಕಡಮೆ. ಅದರಿಂದಲೇ ಅನೇಕ ಜಾತಿಯ ಸಮುದ್ರತೀರ ಪಕ್ಷಿಗಳು ಒಂದೇ ಮೊಟ್ಟೆಯಿಡುತ್ತವೆ. ಆದರೂ ಅವುಗಳ ಸಂಖ್ಯೆ ಕಡಮೆಯಾಗದಂತೆ ರಕ್ಷಿಸಿ, ವೃದ್ಧಿಸಲು ಒಂದೇ ಸಾಕು. ಅಲ್ಲದೆ ಅವು ಕಷ್ಟಜೀವಿಗಳು. ಆಹಾರ ಸುಲಭವಲ್ಲ. ಆದ್ದರಿಂದಲೇ ಬಾಲ್ಯದ ತರಬೇತಿ ಅವುಗಳಿಗೆ ಮುಖ್ಯ. ಕೆಲಸಮಯ ಅವು ನುರಿತು ತಮ್ಮ ಆಹಾರ ಹೊಂಚಿಕೊಳ್ಳಲು ಸಾಧ್ಯವಾಗಲು ಅನೇಕ ವರ್ಷ ಬೇಕಾಗುತ್ತದೆ. ರಾಜ

ಆಲ್‌ಬಟ್ರಾಸ್ ದೊಡ್ಡ ಗಾತ್ರದ ಪಕ್ಷಿ. ಅದು ಪೊಟ್ಟೆಯಿಡಲು ಸುಮಾರು ೯ ವರ್ಷ ಬೇಕಾಗುತ್ತದೆ. ಈ ಅವಧಿ ಅದರ ಶಿಕ್ಷಣ ಕಾಲವಾಗುತ್ತದೆ.

ಬಹಳ ಹೆಚ್ಚು ಸಂಖ್ಯೆಯಲ್ಲಿ ಸಾಮೂಹಿಕವಾಗಿರುವ ಪಕ್ಷಿ ಜಾತಿಗಳು ಸಮುದ್ರ ವಾಸಿಗಳೇ. ಮೀನನ್ನು ಆಹಾರವಾಗಿ ಹೊಂದಿ, ದ್ವೀಪಗಳಲ್ಲಿ ಅಥವಾ ಜನರಹಿತ ತೀರಪ್ರದೇಶಗಳಲ್ಲಿ ಲಕ್ಷಾಂತರ ಸಂಖ್ಯೆಯ ಗುಂಪಾಗಿ ವಾಸಿಸುತ್ತವೆ. ಶ್ರೀ ಫಿಷರ್‌ರವರು 'ಫುಲ್‌ಮರ್' ಪಕ್ಕಿಗಳ ಸಂಖ್ಯೆಯನ್ನು ಹಲವು ಕೋಟಿಯೆಂದೂ, ಒಮ್ಮೆ ಆಸ್ಟ್ರೇಲಿಯಾದ ನೈರುತ್ಯದಲ್ಲಿ ಹಾದುಹೋದ 'ಷಿಯರ್‌ವಾಟರ್' ಹಕ್ಕಿಗಳ ಸಂಖ್ಯೆ ೧೫ ಕೋಟಿಯೆಂದೂ ವಿವರಿಸಿದ್ದಾರೆ. ಇದು ಊಹೆಯಲ್ಲ. ಹಾರಾಡುವ ಹಕ್ಕಿ ಸಮೂಹದ ಚದುರ ಅಡಿಯಲ್ಲಿ ಎಷ್ಟಿದೆಯೆಂದು ನಿರ್ಧರಿಸಿ, ಎಷ್ಟು ಚದುರ ಅಡಿ ಪಕ್ಷಿ ಹಾದು ಹೋಯಿತೆಂದು ಎಣಿಕೆ ಯಂತ್ರಗಳ ಮೂಲಕ ಆತ ಅವನ್ನು ನಿರ್ಧರಿಸಿದ್ದಾನೆ.

ದಕ್ಷಿಣ ಅಮೆರಿಕಾದ ಪೆರು ರಾಜ್ಯದ ತೀರದಲ್ಲಿನ ಹಲವು ನಿರ್ಜನ ದ್ವೀಪಗಳಲ್ಲಿ ವಾಸಿಸುವ ಗೊಯಾನೋ ಪಕ್ಕಿಗಳು ಸುಮಾರು ೧ – ೧ ೧/೨ ಕೋಟಿಯಷ್ಟಿದೆ. ಆ ಗುಂಪಿನಲ್ಲಿ ನೀರುಕಾಗೆ ಜಾತಿಗೆ ಸೇರಿದ ಹಲವು ಪಕ್ಷಿ ಜಾತಿಗಳಿರುತ್ತವೆ. ಪಕ್ಕದ ಸಮುದ್ರದಲ್ಲಿ ಕೋಟ್ಯಂತರ ರುಚಿಕರ ಸಣ್ಣ ಮೀನು ಮರಿಗಳು ಅವುಗಳಿಗೆ ಸುಲಭ ಆಹಾರವಾಗಿ, ಅವುಗಳ ಹಿಕ್ಕೆ ಉತ್ತಮ ಗೊಬ್ಬರವಾಗಿದೆ. ಹಲವು ಹಾರಾಡಿ ಮೀನುಗಳ ಇರವನ್ನು ಪತ್ತೆಹಚ್ಚಿ ಸೂಚಿಸಿದಕೂಡಲೇ ಲಕ್ಷಾಂತರ ಹಕ್ಕಿಗಳು ನೀರಿನಲ್ಲಿ ಮುಳುಗಿ ಸಾಕಷ್ಟು ಮೀನು ಹಿಡಿದು ತಿಂದು ಹಿಂತಿರುಗುತ್ತವೆ. ಆ ದ್ವೀಪದಲ್ಲಿ ಕಾಲಿಡಲೂ ಎಡೆಯಿಲ್ಲದಂತೆ ಒತ್ತಾಗಿ ಅವು ವಾಸಿಸುತ್ತವೆ. ಚದುರ ಅಡಿಗೆ ೨ ಸಂಸಾರ ವಿರಬಹುದು. ಅವುಗಳ ಗೊಬ್ಬರದ ಹಿರಿಮೆಯನ್ನು ಇಂಕಾಗಳ ಕಾಲದಿಂದಲೂ ತಿಳಿದುಕೊಂಡಿದ್ದು ಅವುಗಳಿಗೆ ರಕ್ಷಣೆ ದೊರಕಿತ್ತು. ಆದರೆ ಗೊಬ್ಬರದ ಲಾಭಕ್ಕಾಗಿ ಮಧ್ಯೆ ಪಕ್ಷಿ ನಾಶ ಪ್ರಾರಂಭವಾಗಿತ್ತು. ಈಗ ವರ್ಷಕ್ಕೆ ಇಷ್ಟೆ ಅಂಗುಲ ಪದರ ಗೊಬ್ಬರವನ್ನು ತೆಗೆಯಬೇಕೆಂದು ಸರ್ಕಾರ ನಿರ್ಧರಿಸಿ ಅವುಗಳಿಗೆ ಪುನಃ ರಕ್ಷಣೆ ಒದಗಿಸಿದೆ. ಹೀಗೆಯೇ ದಕ್ಷಿಣ ಶೀತವಲಯದಲ್ಲಿ 'ಪೆಂಗ್ವಿನ್'ಗಳ ಸಮೂಹವೂ, ಅಟ್ಲಾಂಟಿಕ್ ಕಡಲಿನಲ್ಲಿ 'ಪಫ್ಫಿನ್'ಗಳ ಸಮೂಹವೂ ಕೋಟಿ ಸಂಖ್ಯೆಯನ್ನು ಮೀರುತ್ತವೆ. ಐಸ್‌ಲ್ಯಾಂಡ್, ಗ್ರೀನ್‌ಲ್ಯಾಂಡ್ ಮುಂತಾದ ದ್ವೀಪಗಳ ನಿರ್ಜನ ಭಾಗದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ಪಕ್ಷಿ ಸಮೂಹ ವಾಸಿಸುತ್ತಿವೆಯೆಂದು ತಿಳಿದುಬಂದಿದೆ.

ಉಷ್ಣವಲಯದ ದಟ್ಟ ಕಾಡುಗಳಲ್ಲಿ ಪಕ್ಷಿ ವೈವಿಧ್ಯತೆ ಹೆಚ್ಚು. ಎಕರೆಗೆ ೪೦ರಷ್ಟು ಪಕ್ಷಿಗಳಿರಬಹುದೆಂದು ಅಂದಾಜು ಮಾಡಲಾಗಿದೆ. ಉಳಿದ ಪ್ರದೇಶಗಳಲ್ಲಿ ೨೦ – ೩೦ರ ವರೆಗಿರಬಹುದೆಂದೂ, ಅರಣ್ಯಸಂಪತ್ತು ಕಡಮೆಯಾಗಿ ಒಂದೇ ರೀತಿಯ ಮರಗಳಿರುವ ಸಮಶೀತೋಷ್ಣ ಮತ್ತು ಶೀತವಲಯದೆಡೆಗೆ ಮುನ್ನಡೆಯುತ್ತಿದ್ದಂತೆ ವೈವಿಧ್ಯತೆ ಕಡಮೆಯಾಗುತ್ತಿತ್ತೆಂದೂ ಕಂಡುಬರುತ್ತದೆ. ಭಾರತದಲ್ಲಿ ಎಕರೆ ಪ್ರದೇಶದ ಗಣತಿಯಾಗಿಲ್ಲವಾದರೂ ದಕ್ಷಿಣದಲ್ಲಿ ಎಕರೆಗೆ ಸುಮಾರು ೪ – ೫ ಮಾತ್ರವಿರಬಹುದೆಂದೂ

ಉತ್ತರಕ್ಕೆ ಹೋದಂತೆ ಅವು ಕಡಮೆಯಾಗಿ ೨–೩ ಮಾತ್ರವಿರಬಹುದೆಂದೂ ತಿಳಿಯುತ್ತದೆ.

ಅಮೆರಿಕಾ ಮತ್ತು ಯೂರೋಪ್ ಖಂಡಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ಭೂಪ್ರದೇಶದ ಪಕ್ಷಿಗಳು, ಈಗ ಹಲವು ವರ್ಷಗಳಿಂದ ಬಹುಬೇಗ ಕಡಮೆಯಾಗಿವೆ. ಇದಕ್ಕೆ ಕ್ರಿಮಿನಾಶಕಗಳ ಹೆಚ್ಚಿನ ಬಳಕೆಯೇ ಕಾರಣ. ಒಂದೇ ವರ್ಷದಲ್ಲಿ ಆಬಾದಿನಲ್ಲಿರುವ ಒಟ್ಟು ವಿಸ್ತೀರ್ಣದ ೧/೪ ಭಾಗಕ್ಕೆ ಔಷದವನ್ನು ಕಡ್ಡಾಯವಾಗಿ ಸಿಂಪಡಿಸಲಾಗುತ್ತಿದೆ. ಇದು ಬೆಳೆ ರಕ್ಷಣೆಗೆ ಅವಶ್ಯಕ. ಅಮೆರಿಕಾದಲ್ಲಿ ೩೫ ೧/೨ ಕೋಟಿ ಎಕರೆ ಪ್ರದೇಶದಲ್ಲಿ ಬೆಳೆಸಿದ್ದು ಅದರಲ್ಲಿ ಸಾಮಾನ್ಯವಾಗಿ ೧೦ ಕೋಟಿಯಷ್ಟು ಪ್ರದೇಶಕ್ಕೆ ಔಷಧ ಸಿಂಪಡಿಸಲಾಗುತ್ತದೆ. ಸುಮಾರು ೧೦೦ ಕೋಟಿ ಪೌಂಡುಗಳಷ್ಟು ಔಷಧ ಇದಕ್ಕೆ ಖರ್ಚಾಗುತ್ತದೆ. ಹುಳು ನಾಶವಾದರೂ ಅದನ್ನು ಆಹಾರವಾಗಿ ತಿನ್ನುವ ಪಕ್ಷಿಗಳೂ ಸಾವಿರಾರು ಸಂಖ್ಯೆಯಲ್ಲಿ ಸಾಯುತ್ತವೆ. ಅಲ್ಲದೆ ಡಿ. ಡಿ. ಟಿ ಕರಗದೆ ಕೂಡುತ್ತಾ ಹೋಗಿ ಪಕ್ಷಿ ಮೊಟ್ಟೆಯೆಲ್ಲಾ ಹೆಚ್ಚಿನಾಂಶ ಸೇರಿ ಭ್ರೂಣದ ನಾಶಕ್ಕೆ ಕಾರಣವಾಗುತ್ತದೆ. ಇದರಿಂದ ಪೀಳಿಗೆ ವೃದ್ಧಿಯಾಗಲು ಅವಕಾಶವೇ ಇರುವುದಿಲ್ಲ.

ಭೂಪ್ರದೇಶದ ಪಕ್ಷಿಗಳಲ್ಲಿ ಸಾಮೂಹಿಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪಕ್ಷಿಗಳೂ ಕೆಲವಿವೆ. ' ಫ್ಲೆಮಿಂಗೋ ' ಲಕ್ಷಾಂತರ ಸಂಖ್ಯೆಯಲ್ಲಿ ಕೆನಿಯಾದಲ್ಲಿ ಕಂಡುಬರುತ್ತದೆ. ಕ್ಯಾಲಿಫೋರ್ನಿಯಾ ಕೊಲ್ಲಿಯ ಬಳಿ ಟರ್ನ್ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತವೆ. ಬಹುಶಃ ಒಂದು ಎಕರೆಯಲ್ಲಿ ಸುಮಾರು ೪೦,೦೦೦ ಪಕ್ಷಿಗಳಿರಬಲ್ಲವು. ಆಫ್ರಿಕಾದಿಂದ ವಲಸೆ ಹೋಗುವ ' ನೇಯ್ಗೆ ' ಪಕ್ಷಿ ಕೋಟ್ಯಾಂತರ ಸಂಖ್ಯೆಯಲ್ಲಿ ಮುಂದುವರೆಯುತ್ತವೆ.

ಆಹಾರ ಹೆಚ್ಚಿದಲ್ಲಿ ಪಕ್ಷಿ ಸಂಖ್ಯೆ ವೃದ್ಧಿಸುತ್ತದೆ ಎಂಬುದಕ್ಕೆ ಉತ್ತರ ಶೀತ ವಲಯದ ಉದಾಹರಣೆ ಮುಖ್ಯವಾದದ್ದು. ಅಲ್ಲಿ ಲೆಮ್ಮಿಂಗ್ ಎಂಬ ಸಣ್ಣ ಇಲಿ ಜಾತಿಯ ಪ್ರಾಣಿ ಹೆಚ್ಚಾಗಿ ಮರಿ ಹಾಕುತ್ತದೆ. ೩ – ೪ ವರ್ಷಗಳಿಗೊಮ್ಮೆ ಅವುಗಳ ಸಂಖ್ಯೆ ಮಿತಿಮೀರಿ ಆಹಾರ ಅಭಾವವಾದಾಗ ಅವು ವಲಸೆ ಹೊರಡುತ್ತವೆ. ದಿಕ್ಕು ತೋಚದ ಕುರುಡರಂತೆ ಒಂದೇ ದಿಕ್ಕಿನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಅವು ಮುನ್ನಡೆದು, ಸಮುದ್ರದ ದಡ ಸೇರಿದರೂ ಲಕ್ಷಿಸದೆ ಸಮುದ್ರಕ್ಕೆ ನೆಗೆದು ಪ್ರಾಣಬಿಡುತ್ತವೆ. ಇವುಗಳ ವಲಸೆ ಆತ್ಮಾರ್ಪಣೆಯ ಪ್ರವಾಸ. ದಾರಿಯುದ್ದಕ್ಕೂ ಮೃಗ – ಪಕ್ಷಿಗಳು ಅವುಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ತಿಂದು ಕೊಬ್ಬಿ, ಹೆಚ್ಚಿನ ಸಂತಾನಾಭಿವೃದ್ಧಿ ಮಾಡುತ್ತವೆ. ಅದರಲ್ಲಿ ಮಂಜುಗೂಬೆಯೂ ಒಂದು. ಅವು ಆ ವರ್ಷ ಹೆಚ್ಚಿ ಮುಂದೆ ಆಹಾರ ಅರಸುತ್ತಾ ಬಹುದೂರ ಪ್ರಯಾಣ ಮಾಡುವುದು. ಲೆಮ್ಮಿಂಗ್ ವಲಸೆಯ ಮುಂದಿನ ವರ್ಷ ಸಾಮಾನ್ಯವಾಗಿ ಕಂಡುಬರುತ್ತದೆ.

ಒಂದು ಸ್ಥಳದ ಅಥವಾ ಪ್ರಾಂತ್ಯದ ಪಕ್ಷಭೇದಗಳು ಸ್ಥಿರವಲ್ಲ. ಮಾನವರಿಂದ ತರಿಸಿದವು ಅಥವಾ ಆಕಸ್ಮಿಕವಾಗಿ ಒಂದು ದೇಶದ ಅಥವಾ ಖಂಡದ ಪಕ್ಷಿ ಇನ್ನೊಂದು

ಖಂಡಕ್ಕೆ ವರ್ಗಾವಣೆಯಾದವು. ಅಲ್ಲಿ ವೃದ್ಧಿ ಹೊಂದಬಹುದು. ಇಂಥದು ಅನೇಕ ಕಡೆ ಸಾಮಾನ್ಯವಾಗಿ ಆಗುತ್ತಲೇ ಇರುತ್ತದೆ. ವಲಸೆ ಹೋಗುವ ಪಕ್ಷಿಗಳು ಬಿರುಗಾಳಿ ಹೊಡೆತಕ್ಕೆ ಸಿಲುಕಿ, ದಾರಿತಪ್ಪಿ ಬೇರೆ ಪ್ರದೇಶವನ್ನು ಸೇರಿ ಅಲ್ಲಿ ವಾತಾವರಣ ಸರಿ ಹೋದಲ್ಲಿ ವೃದ್ಧಿಗೊಳ್ಳಬಹುದು, ಇಲ್ಲದಿದ್ದಲ್ಲಿ ನಶಿಸಬಹುದು.

ಗುಬ್ಬಚ್ಚಿ ಅಮೆರಿಕಾಕ್ಕೆ ಹೊಸದಾಗಿ ಹೋದ ಪಕ್ಷಿ. ಅದು ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಈಗ ಹೆಚ್ಚಿನ ಸಂಖ್ಯೆಯಲ್ಲಿದೆ. ಆಫ್ರಿಕಾದಿಂದ ತಪ್ಪಿಬಂದ ಬಿಳೀ ಕೊಕ್ಕರೆಯೂ ಇಂದು ಅಮೆರಿಕಾದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಎಲ್ಲ ಸ್ಥಳಗಳಲ್ಲೂ ಕಂಡುಬರುತ್ತದೆ. ಏಷ್ಯಾದಿಂದ ಕೊಂಡೊಯ್ದು ಬಿಟ್ಟ ' ಪೆಸೆಂಟ್ ' (Pheasant) ಪಕ್ಷಿ ಇದು ಅಮೆರಿಕಾದ ಅಚ್ಚುಮೆಚ್ಚಿನ ಶಿಕಾರಿ ಪಕ್ಷಿಯಾಗಿದೆ. ವಿವಿಧ ಪ್ರಭೇದಗಳ ಸಮ್ಮಿಳನ ಸಾಧ್ಯವಿಲ್ಲದಿದ್ದರೂ ಕೆಲವೊಮ್ಮೆ ಅದು ಏರ್ಪಟ್ಟು ಹೊಸ ವಿಧಗಳ ಉತ್ಪನ್ನವಾಗಲೂ ಸಾಧ್ಯವಿದೆ.

ಸಮುದ್ರ ವಾಸಿಗಳ ಸಾಮೂಹಿಕ ಜೀವನ ಅನೇಕ ಕಾರಣಗಳಿಂದಾಗಿರಬಹುದು. ಶತ್ರುಗಳಿಂದ ರಕ್ಷಣೆ ಹೊಂದಲು, ಆಹಾರ ಸುಲಭವಾಗಿ ದೊರಕುವ ಸ್ಥಳದಲ್ಲಿರಲು, ಚಳಿ ವಾತಾವರಣದಲ್ಲಿ ಪರಸ್ಪರ ಸಂಪರ್ಕದಿಂದ ಶಾಖೋತ್ಪನ್ನ ಮಾಡಿಕೊಳ್ಳಲು ಅಥವಾ ಸಂತಾನಾಭಿವೃದ್ಧಿಗೆ ಅನುಕೂಲವಾದ ಸ್ಥಳಾಭಾವದಿಂದಲೂ ಇಂತಹ ಜೀವನವನ್ನು ಆಶ್ರಯಿಸಿರಬೇಕು.

ಅಂತೂ ಪಕ್ಷಿ ಪ್ರಭೇದಗಳ ಸಾಂದ್ರತೆ ಅನೇಕ ವಾತಾವರಣ ವೈವಿಧ್ಯತೆಗಳನ್ನನುಸರಿಸಿವೆ.

— ೭ —

ಪಕ್ಷಿಗಳ ಜೀವನ ಹಲವು ನಿಯಮಗಳನ್ನನುಸರಿಸುತ್ತವೆ. ಅದರಲ್ಲಿ ಪ್ರತಿ ಪಕ್ಷಿಯ ಭೂ ಪ್ರದೇಶದ ತಿಳುವಳಿಕೆ ಬಹುಮುಖ್ಯ. ಹಲವು ಜಾತಿಯ ಸಸ್ತನಿಗಳಲ್ಲೂ ಗುಂಪಿನ ನಾಯಕ ಅಲ್ಲಲ್ಲಿ ಮೂತ್ರಿಸಿ ತನ್ನ ಆಡಳಿತ ವ್ಯಾಪ್ತಿಯನ್ನು ಗುರುತಿಸುತ್ತಾನೆ. ಇತರ ಗಂಡುಗಳು ಅಲ್ಲಿಗೆ ಪ್ರವೇಶಿಸಲು ಅವಕಾಶವಿಲ್ಲ. ನಾಯಕ ಸೋತರೆ ಅಥವಾ ಸತ್ತರೆ ಮಾತ್ರ ಮತ್ತೊಂದಕ್ಕೆ ಅನುಮತಿ. ಅದೇ ರೀತಿಯಲ್ಲಿ ಪಕ್ಷಿಜಾತಿಯಲ್ಲೂ ಗಂಡು ತನ್ನ ಭೂ ಪ್ರದೇಶವನ್ನು ಗುರುತಿಸಿಡುತ್ತದೆ. ಅವು ಭೂ ಮಾಲೀಕರು. ಅವರ ಸ್ಥಳ ವ್ಯಾಪ್ತಿಯೊಳಗೆ ಇತರ ಗಂಡು ಹಕ್ಕಿಗಳಿಗೆ ಪ್ರವೇಶವಿಲ್ಲ. ಈ ಸ್ಥಳದ ವ್ಯಾಪ್ತಿಯಿಂದ ತನಗೆ ಮತ್ತು ಮುಂದೆ ಮರಿಗಳಾದಾಗ ತನ್ನ ಕುಟುಂಬಕ್ಕೆ ಸಾಕಷ್ಟು ಆಹಾರ ದೊರಕುವಂತಾಗುತ್ತದೆ. ತನ್ನ ಸ್ಥಳವನ್ನು ಕಾಪಾಡಲು ಅದು ಸದಾ ಸಿದ್ಧ. ಯಾವುದಾದರೂ ಬೇರೆ ಗಂಡು ಅಲ್ಲಿಗೆ ಪ್ರವೇಶಿಸಿದಲ್ಲಿ ಹೋರಾಡಿ ಓಡಿಸುತ್ತದೆ. ಅದು ಸತ್ತಲ್ಲಿ ಮಾತ್ರ ಇತರ ಗಂಡುಗಳಿಗೆ ಪ್ರವೇಶಿಸಲು ಅವಕಾಶ. ಆದರೆ ನೈಸರ್ಗಿಕ

ನಿಯಮದಿಂದ ಒಂದು ಗಂಡು ಸತ್ತಲ್ಲಿ ಸ್ಥಳಾವಕಾಶವಿಲ್ಲದೆ ಅಲ್ಲಲ್ಲಿ ಅಲೆದಾಡುತ್ತಿರುವ ಬೇರೆ ಗಂಡು ಹಕ್ಕಿಗಳಲ್ಲೊಂದು ಆ ಜಾಗವನ್ನು ಆಕ್ರಮಿಸಿಕೊಳ್ಳುತ್ತದೆ. ಬಹುಕಾಲ ಸ್ಥಳ ಖಾಲಿಯಿರುವುದಿಲ್ಲ. ಬಹುಶಃ ಹಲವೊಮ್ಮೆ ಕನ್ನಡಿಯಲ್ಲಿ ಕಂಡ ಪ್ರತಿಬಿಂಬ ದೊಡನೆ ಹೊಡೆದಾಡುವುದು ಯಾವುದೋ ಬೇರೆ ಗಂಡು ಬಂದಿರಬೇಕೆಂಬ ನಂಬಿಕೆ ಯಿಂದಿರಬಹುದು ! ಹಾಗೂ ಅವುಗಳ ಇಂಚರ ಸಾಮಾನ್ಯವಾಗಿ ಇತರರಿಗೆ ತನ್ನ ಸ್ಥಳ ದಿಂದ ದೂರವಿರುವ ಸೂಚನೆ. ಸ್ವಾಭಾವಿಕವಾಗಿಯೇ ಅವು ಬಹು ದೂರ ವ್ಯಾಪಿಸಿರಲು ವ್ಯವಸ್ಥೆ ಮಾಡಿಕೊಂಡಿರುತ್ತವೆ. ಇದರಿಂದಲೇ ಅವುಗಳು ವೃದ್ಧಿಯಾಗುತ್ತಿರುವುದು.

ಪಕ್ಷಿಗಳ ಸ್ವಾಭಾವಿಕ ಶತ್ರುಗಳಾದ ಹಲವು ಮೃಗಗಳೂ, ಇತರ ಪಕ್ಷಿಗಳೂ, ಇವುಗಳ ಸಂಖ್ಯೆಯನ್ನು ಕಡಮೆಯಾಗಿಡಲು ಸಾಧ್ಯವಿಲ್ಲ. ಶತ್ರುಗಳಿಲ್ಲದ ಸಮುದ್ರ ಪಕ್ಷಿಗಳಿಗೆ ಸಂತಾನ ಕಡಮೆ ! ಹೆಚ್ಚು ಮೊಟ್ಟೆಯಿಡುವ ಭೂ ಪಕ್ಷಿಗಳಿಗೆ ಶತ್ರುಗಳು ಹೆಚ್ಚು ! ಇದು ದೈವನಿಯಮ. ವಾತಾವರಣ, ಉಪವಾಸ, ಕಾಯಿಲೆ ಮತ್ತು ಈಗ ಕ್ರಿಮಿನಾಶಕಗಳೂ ಅವುಗಳನ್ನು ಹತೋಟಿಯಲ್ಲಿಡಲು ಸಹಾಯಕವಾಗುತ್ತವೆ. ಇಲ್ಲ ದಿದ್ದಲ್ಲಿ ಹಲವು ವರ್ಷಗಳಲ್ಲೇ ಅವು ಅತಿಯಾಗಿ ಹೆಚ್ಚಿ ಉಪದ್ರವಕಾರಿಯಾಗಬಲ್ಲವು. ಉದಾಹರಣೆಗೆ, ಗುಬ್ಬಚ್ಚಿ ವರ್ಷಕ್ಕೆರಡು ಸಲ ಮರಿ ಇಡಬಲ್ಲದು. ಪ್ರತಿ ಸಲವೂ ೩ – ೪ ಮರಿಯಾಗುತ್ತವೆ. ಈ ಎಲ್ಲಾ ತೊಂದರೆಗಳನ್ನೂ ಅವು ತಪ್ಪಿಸಿಕೊಂಡು ಪ್ರತಿಯೊಂದು ಬದುಕಿರುವುದಾದರೆ ಕೇವಲ ೧೦ ವರ್ಷಗಳಲ್ಲಿ ಒಂದು ಜೊತೆ ಸುಮಾರು ೩ ಕೋಟಿ ಪಕ್ಷಿಗಳಾಗಬಲ್ಲವು.

ಅವುಗಳು ಸಾಮಾನ್ಯವಾಗಿ ಸಂಘಜೀವಿಗಳು. ಇತರರೊಡನೆ ಅಥವಾ ತನ್ನ ನಲ್ಲೆ ಯೊಡನೆ ಕಲೆತು ಇರುವುದೇ ಅದಕ್ಕೆ ಇಷ್ಟ. ಕೊಕ್ಕರೆ, ಕೋಗಿಲೆ ಮುಂತಾದ ಜಾತಿಗಳು ಮಾತ್ರ ಒಂಟಿಯಾಗಿರಲು ಇಚ್ಛೆಪಡುತ್ತವೆ. ಪರ್ವಕಾಲದಲ್ಲಿ ಮಾತ್ರ ಅವು ಜೊತೆ ಗೂಡುತ್ತವೆ. ಸಂಘಜೀವಿಗಳಾದಲ್ಲಿ ತಮ್ಮ ಅಭಿಪ್ರಾಯ ಅಭಿರುಚಿಗಳನ್ನೂ ಒಬ್ಬರಿ ಗೊಬ್ಬರು ಸೂಚಿಸಬೇಕು. ಅದನ್ನು ಅವು ರೆಕ್ಕೆ, ನೋಟ, ಧ್ವನಿ, ಮತ್ತು ನಡತೆ ಯಿಂದ ಸೂಚಿಸುತ್ತವೆ.

ಪಕ್ಷಿಗಳ ಇಂಚರ ಬಹುತೇಕವಾಗಿ ಅವುಗಳ ಕಹಳೆಕೂಗು ; ನಮಗೆ ಮನಮೋಹಕ ವಾಗಿ ಕೇಳಿಬಂದರೂ ಅದು ಇತರ ಗಂಡುಗಳಿಗೆ ತನ್ನ ಸ್ಥಳ ವ್ಯಾಪ್ತಿಯ ಬಗ್ಗೆ ಕೊಡುವ ಎಚ್ಚರಿಕೆ. ಇನ್ನೊಂದು ಗಂಡು ಕಂಡುಬಂದಲ್ಲಿ ಕೂಗು ಹೆಚ್ಚಾಗುತ್ತದೆ. ಅಲ್ಲದೆ ಅದೇ ಕೂಗು ತಾನೊಬ್ಬ ಗಂಡು ಅಲ್ಲಿರುವೆನೆಂದೂ ಸ್ಥಳದ ಮಾಲೀಕನಾಗಿದ್ದೇನೆಂದೂ, ತನ್ನ ಪತ್ನಿಯಾಗಲು ಇಚ್ಛೆ ಪಡುವವಳಿಗೆ ಕರೆ. ಪಕ್ಷಿಗಳು ಹಾಡುತ್ತಿರುವುದು ಬೆಳಿಗ್ಗೆ ಹೆಚ್ಚು. ಮಧ್ಯಾಹ್ನದ ವೇಳೆಗೆ ಹಾಡು ಶಬ್ದ ಕಡಮೆಯಾಗಿ ಪುನಃ ಸಂಜೆಯ ವೇಳೆಗೆ ಜಾಸ್ತಿಯಾಗಬಹುದು.

ಇದಕ್ಕೆ ಸಹಾಯಕ ಅವುಗಳ ವಿವಿಧ ಬಣ್ಣದ ಗರಿ. ಗರಿಯೇ ಗಂಡಿನ ಯೋಗ್ಯತಾಪತ್ರ. ಅದೇ ಇತರ ಗಂಡುಗಳನ್ನು ಕೆರಳಿಸುವ ಆಯುಧ ! ಹಾಗೂ

ತನ್ನ ನಲ್ಲೆಯನ್ನು ಮೆಚ್ಚಿಸುವ ಉಡುಪು. ಒಂದು ಗಂಡು ತನ್ನ ಜಾತಿಯ ಗಂಡಿನೊಡನೆ ಮಾತ್ರ ಜಗಳವಾಡುತ್ತದೆ. ಅದಕ್ಕೆ ಗುರುತು ಇತರ ಗಂಡಿನ ವಿವಿಧ ವರ್ಣಗರಿಯೇ ! ಆ ಬಣ್ಣದ ಗರಿ ಕಂಡಲ್ಲಿ ಮಾತ್ರ ಅದು ಮೇಲೆರಗಿ ಕಾದಾಡುತ್ತದೆ. ನವಿಲು ಮುಂತಾದ ಪಕ್ಷಿಗಳು ತಮ್ಮ ಬಾಲ ಪುಕ್ಕಗಳ ಪ್ರದರ್ಶನದಿಂದಲೇ ಹೆಣ್ಣನ್ನು ಆಕರ್ಷಿಸಬಲ್ಲವು.

ಹೆಣ್ಣನ್ನು ಒಲಿಸಿಕೊಳ್ಳಲೂ, ಅದನ್ನು ಗುರುತಿಸಲೂ ಗರಿ ಬಣ್ಣವೇ ಮುಖ್ಯ ಸಾಧನ. ಸತ್ತ ಹಕ್ಕಿಯನ್ನು ಆಕಾರಪಡಿಸಿಟ್ಟಲ್ಲಿ ಅದನ್ನು ಒಲಿಸಿಕೊಳ್ಳಲು ಗಂಡು ಅತೀವ ಪ್ರಯತ್ನಪಡುತ್ತದೆ. ತಲೆ ಕಾಲು ಇಲ್ಲದಿದ್ದಲ್ಲಿ ಸಂಭೋಗಕ್ಕೆ ಪ್ರಯತ್ನಿಸುತ್ತದೆ. ಅದರಿಂದ ಮೈಗರಿ ಬಣ್ಣವೇ ಇದಕ್ಕೆ ಮುಖ್ಯವೆಂದು ತಿಳಿದುಬಂದಿದೆ. ವಿಲಿಯಂ ಪೊಗ್ಸ್ ಎಂಬಾತ ಸತ್ತಿದ್ದ ಹಳದಿ ಕತ್ತಿನ ಹೆಣ್ಣು ಪಕ್ಷಿಯೊಂದಕ್ಕೆ ಕೃತಕವಾಗಿ ಮೊದಲಿನಾಕಾರ ಕೊಟ್ಟು ಗಂಡಿನ ಎದುರು ಇಟ್ಟ. ಅದು ಆಗ್ಗಾಗ್ಗೆ ಅದರ ಪಕ್ಕಕ್ಕೆ ಬಂದು ತಿರುಗಾಡಿ ಒಲಿಸಿಕೊಳ್ಳಲು ಪ್ರಯತ್ನಿಸಿತು. ಅದು ತಿರುಗಿ ಬರುವುದರಲ್ಲಿ ಆತ ಅದರ ಕತ್ತಿಗೆ ಕಪ್ಪುಗರಿ ಕಟ್ಟಿದ. ಅದು ಗಂಡಿನ ಬಣ್ಣ. ಹಿಂತಿರುಗಿದ್ದ ಹಕ್ಕಿ ಆಶ್ಚರ್ಯದಿಂದ ಅದನ್ನು ಸ್ವಲ್ಪ ಕಾಲ ನೋಡಿ ಕೂಡಲೇ ಕಾದಾಡಲಾರಂಭಿಸಿತು !

ಹಲವು ಸಣ್ಣ ಪಕ್ಷಿ ಪ್ರಭೇದಗಳ ಇಂಚರ ಒಂದೇ ರೀತಿಯಾಗಿ ಕೇಳಿಸಬಹುದು. ಆದರೆ ಗರಿ ಬಣ್ಣ ಒಂದೇ ರೀತಿಯಾಗಿರುವುದಿಲ್ಲ. ಸ್ವಲ್ಪವಾದರೂ ವ್ಯತ್ಯಾಸವಿದ್ದೇ ಇರುತ್ತದೆ. ವಿವಿಧ ವರ್ಣರಂಜಿತ ಪಕ್ಷಿಗಳಿಗೆ ಧ್ವನಿ ಮುಖ್ಯವಲ್ಲ. ಅದರ ಗರಿಯೇ ಆಕರ್ಷಕ. ಆದರೆ ಬಣ್ಣದ ಗರಿಗಳಿಲ್ಲದ ಪಕ್ಷಿಜಾತಿಗಳಿಗೆ ಧ್ವನಿ ಮುಖ್ಯ. ಪಕ್ಷಿಗಳಿಗೆ ಅವುಗಳ ಧ್ವನಿ ಸ್ವಾಭಾವಿಕವಾದದ್ದು. ಅದನ್ನು ಕಲಿಯಬೇಕಾದ್ದಿಲ್ಲ. ಹಲವು ಪ್ರಭೇದಗಳು ಮಾತ್ರ ಹೊಸ ವಾತಾವರಣಕ್ಕೆ ವರ್ಗಾಯಿಸಿದರೆ ಅಲ್ಲಿನ ಪಕ್ಷಿಗಳ ನಾದವನ್ನು ಅನುಕರಿಸುತ್ತವೆ. ಆದರೆ ಪುನಃ ತಮ್ಮ ನಿಜ ನಿವಾಸಸ್ಥಳಕ್ಕೆ ಹಿಂತಿರುಗಿದರೆ ತಮ್ಮ ಸ್ವಾಭಾವಿಕ ಧ್ವನಿಯನ್ನೇ ಅನುಕರಿಸುತ್ತವೆ. ಬಹುಶಃ ಒಂದೇ ಜಾತಿ ಪ್ರಭೇದದ ಪಕ್ಷಿಗಳ ಧ್ವನಿಗಳಲ್ಲೂ ನಮಗೆ ಅರ್ಥವಾಗದ ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದು, ತಮ್ಮ ಜಾತಿಯ ಇತರ ಪಕ್ಷಿಗಳಿಗೆ ಗುರುತುಹಿಡಿಯುವಂತಿರಬಹುದು. ಅದು ಇನ್ನೂ ಅರ್ಥವಾಗಿಲ್ಲ.

ಪಕ್ಷಿಗಳ ವಿವಿಧ ಕೂಗುಗಳನ್ನು ೫ ವಿಧವಾಗಿ ವಿಂಗಡಿಸಲಾಗಿದೆ. (i) ಗುಂಪಿನ ಕರೆ. (ii) ಆಹಾರದ ಕರೆ (iii) ಅಪಾಯ ಸೂಚನೆಯ ಕೂಗು (iv) ತಂದೆ ತಾಯಿ, ಮಕ್ಕಳ ಕರೆ ಮತ್ತು (v) ಪ್ರಣಯ ಕರೆ.

ಸಾಮೂಹಿಕವಾಗಿ ನೆಲೆಸಿದ್ದು ವಲಸೆಹೋಗುವ ಪಕ್ಷಿ ಪ್ರಭೇದಗಳಲ್ಲಿ ಒಂದರೊಡನೊಂದು ಸಂಪರ್ಕ ಹೊಂದಿರಲು ಅವುಗಳ ಸೂಚನೆಕರೆ ಮುಖ್ಯ. ಅವು ಸಾಮಾನ್ಯವಾಗಿ ರಾತ್ರಿಕಾಲವೂ ಹಾರಾಡುವುದರಿಂದ ಒಂದಕ್ಕೊಂದು ಕಾಣದಾಗಿದ್ದು ಶಬ್ದದ ಮೂಲಕವೇ ಒಟ್ಟುಗೂಡಬೇಕಾಗುತ್ತದೆ. ಆಹಾರ ದೊರಕಿದಾಗ ಉಳಿದವಕ್ಕೆ ಸೂಚನೆ ಕೊಡಲು ಬೇರೆ ಧ್ವನಿ ಬೇಕು. ಕೋಳಿಗಳು ಮರಿಗಳನ್ನು ಆಹಾರ ದೊರಕಿದಾಗ ಮಣ್ಣು ಕೆರೆದು ಕರೆಯುವುದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರತಕ್ಕದ್ದೇ.

ಮರಿಗಳೆಲ್ಲಾ ಹಸಿವಾದಾಗ ಕೂಗಿ ತಮ್ಮ ಹಸಿವನ್ನು ತಿಳಿಸುತ್ತವೆ. ಸಾಮೂಹಿಕವಾದ ಪಕ್ಷಿ ಪ್ರಭೇದಗಳಲ್ಲಿ ಒಟ್ಟಾಗಿ ಆಹಾರ ಹುಡುಕಿ ಹಂಚಿಕೊಳ್ಳುವುದು ವಾಡಿಕೆಯಾದುದರಿಂದ, ಆಹಾರದ ಸುಳಿವನ್ನು ಒಂದಕ್ಕೊಂದು ತಿಳಿಸುತ್ತವೆ. ಇದರಲ್ಲಿ ಗಿಳಿ ಮುಂತಾದ ಹಣ್ಣು ತಿನ್ನುವ ಪಕ್ಷಿಗಳ ಕೂಗು ಬಹುದೂರ ಕೇಳಿಸುತ್ತದೆ.

ಅಪಾಯಸೂಚನೆ ಕೂಗು ಶತ್ರುವನ್ನವಲಂಬಿಸುತ್ತದೆ. ಕೋಳಿ, ಪಕ್ಷಿ ಮುಂತಾದುವು ಹದ್ದು, ಕೋತಿ ಮೊದಲಾದ ಶತ್ರುಗಳನ್ನು ಕರ್ಕಶವಾಗಿ ಕೂಗುತ್ತವೆ. ಆದರೆ ನಾಯಿ, ಮನುಷ್ಯರಾದಲ್ಲಿ ಶಬ್ದ ಮಾಡುತ್ತವೆ, ಅಷ್ಟೇ. ಅದರಿಂದ ಅವುಗಳ ಕೂಗಿನ ಶಬ್ದವೈಖರಿ ಅಪಾಯ ಎಂತಹುದೆಂಬುದನ್ನೂ ಸೂಚಿಸಬಹುದಾಗಿದೆ. ಅಪಾಯ ಸೂಚನೆಯಿದ್ದಾಗ ಕಾಗೆಗಳ ಕರ್ಕಶ ಕೂಗು ಅಕ್ಕಪಕ್ಕದಲ್ಲಿನ ಎಲ್ಲಾ ಕಾಗೆಗಳನ್ನೂ ಕ್ಷಣಮಾತ್ರದಲ್ಲಿ ಸ್ಥಳಕ್ಕೆ ಆಕರ್ಷಿಸುತ್ತದೆ.

ಗಂಡು; ಹೆಣ್ಣು ಮಕ್ಕಳನ್ನು ಕರೆಯುವ ಧ್ವನಿಯೇ ಬೇರೆ. ಆಹಾರ ದೊರೆತಾಗ, ಅಪಾಯ ಸೂಚನೆಯಿದ್ದಾಗ, ಮರಿಗಳು ತಮ್ಮನ್ನು ಹಿಂಬಾಲಿಸಿ ಬರಬೇಕೆಂದಾಗ ಅವು ಮೃದು ಸ್ವರದಲ್ಲಿ ಸಣ್ಣ ಧ್ವನಿ ಮಾಡುತ್ತವೆ. ಕೂಡಲೇ ಮರಿಗಳು ಅತ್ತ ಧಾವಿಸುತ್ತವೆ. ಮರಿಗಳು ಸಣ್ಣವಾಗಿದ್ದಾಗ ಅವುಗಳ ಕೂಗು ತಂದೆ ತಾಯಿಗಳಿಗೆ ಮುಖ್ಯವಲ್ಲ. ಹಸಿವಾಗುತ್ತಿದ್ದಾಗ ಮರಿ ಕೂಗುತ್ತಿದ್ದರೂ ಅವು ಅಗಲವಾಗಿ ತಮ್ಮ ಬಾಯನ್ನು ತೆರೆದು ತಮ್ಮ ಪಿತೃಗಳಿಗೆ ಆಹಾರ ಕೊಡಲು ಸ್ಥಳ ಸೂಚನೆ ಮಾಡುತ್ತವೆ. ಮರಿಗಳ ಬಾಯಿಯ ಒಳಭಾಗ ಕೆಂಪಗಿದ್ದು ಸುಲಭವಾಗಿ ಗುರುತುಹಚ್ಚುವಂತಿರುತ್ತದೆ. ಆದ್ದರಿಂದ ಮರಿ ಸ್ವಲ್ಪ ಬೆಳೆದ ನಂತರವೇ ಈ ಕೂಗು ಮುಖ್ಯವಾಗುವುದು. ಹಲವು ಪಕ್ಷಿಗಳಿಗೆ ಕೊಕ್ಕುಗಳ ಬಳಿ ಬಣ್ಣವಾಗಿದ್ದು ಮರಿ ಹಸಿವಾದಾಗ ಆ ಸ್ಥಳವನ್ನು ಕುಕ್ಕುತ್ತದೆ. ಈ ಚರ್ಯೆ ಹಸಿವು ಸೂಚಕವಾದ್ದರಿಂದ ಗಂಡು, ಹೆಣ್ಣು ತಮ್ಮ ಹೊಟ್ಟೆಯಲ್ಲಿನ ಆಹಾರದ ಸ್ವಲ್ಪ ಭಾಗವನ್ನು ಕಕ್ಕಿ ಅವಕ್ಕೆ ತಿನ್ನಿಸುತ್ತವೆ.

ಪಕ್ಷಿಗಳಲ್ಲಿ ಪ್ರಣಯ ಕೂಗೇ ಮುಖ್ಯ. ಸಾಮಾನ್ಯವಾಗಿ ವಸಂತ ಕಾಲದಲ್ಲೂ, ಇತರ ಸಮಯದಲ್ಲೂ ಹೆಚ್ಚಾಗಿ ಕೇಳಿಬರುವುದು ಪ್ರಣಯದ ಕೂಗೇ. ಕೂಗಿನೊಡನೆ ಅವುಗಳ ವಿವಿಧ ವರ್ತನೆ ಪ್ರಣಯ ಸೂಚಕವಾಗಿರುತ್ತದೆ. ಹಲವು ಪಕ್ಷಿ ಪ್ರಭೇದಗಳಲ್ಲಿ ಗಂಡು ಹೆಣ್ಣಿಗೆ ಯಾವ ವಿಧವಾದ ವ್ಯತ್ಯಾಸವೂ ಇರುವುದಿಲ್ಲ. ಅಂತಹವುಗಳಲ್ಲಿ ಗಂಡಿನ ಕೂಗು ಅದರ ಲಿಂಗಸೂಚಕವಾಗಿರುತ್ತದೆ. ಸಮುದ್ರ ಪಕ್ಷಿಗಳಾದ 'ಟರ್ನ್' ಗಳಲ್ಲಿ (Terns) ಈ ರೀತಿಯ ವ್ಯತ್ಯಾಸವಿರುವುದಿಲ್ಲ. ಕೂಗೂ ಒಂದೇ ರೀತಿಯದಾಗಿರುತ್ತದೆ. ತಾನು ಗಂಡೆಂಬುದನ್ನು ಮೀನು ಹಿಡಿದು ಪಕ್ಕದಲ್ಲಿನ ಪಕ್ಷಿಗೆ ಕೊಡುವುದರ ಮೂಲಕ ಸೂಚಿಸುತ್ತದೆ. ಆ ಪಕ್ಷಿ ಅದನ್ನು ತೆಗೆದುಕೊಂಡಲ್ಲಿ ಬಹುಶಃ ಹೆಣ್ಣಿರಬಹುದು. ತನ್ನ ಭೂ ಪ್ರದೇಶ ಸೇರಿ ಇಳಿದು ಮೀನನ್ನು ತಿನ್ನಲುಪಕ್ರಮಿಸಿದಾಗ ಮಾತ್ರ ಅದು ಹೆಣ್ಣೆಂದು ಸ್ಥಿರಪಡುತ್ತದೆ. ಹಲವು ಬಗೆಯ ಕೊಕ್ಕರೆಗಳಲ್ಲಿ ಗಂಡು ಹಾಡುತ್ತಾ ಕುಣಿಯಲುಪಕ್ರಮಿಸಿ ಪ್ರಣಯ ಸೂಚಿಸುತ್ತವೆ. ಯೂರೋಪಿನ ಬಿಳಿ ಕೊಕ್ಕರೆ

ಗೂಡನ್ನು ಸಮೀಪಿಸುವಾಗಲೇ ತನ್ನ ಬರುವಿಕೆಯ ಸೂಚನೆಯಂತೆ ಕೊಕ್ಕಿನಿಂದ ತಾಳ ಹೊಡೆದಂತೆ ಶಬ್ದ ಮಾಡುತ್ತದೆ. ಗಂಡನ ಗುರುತು ಶಬ್ದದಿಂದರಿತಲ್ಲಿ ಹೆಣ್ಣು ಕೂಡ ಅದೇ ರೀತಿಯ ಶಬ್ದ ಮಾಡಿ ತನ್ನ ಒಲವನ್ನು ಸೂಚಿಸುತ್ತದೆ.

ಅನೇಕ ಬಾತುಗಳೂ, ಗ್ಯಾಸೆಟ್ ಮುಂತಾದ ಪಕ್ಷಿಗಳೂ ಪರಸ್ಪರ ಪ್ರೀತಿ ಸೂಚಕವಾಗಿ ಕತ್ತನ್ನು ನೀಳಚಾಚಿ ಕೊಕ್ಕಿನಿಂದ ಒಂದನ್ನೊಂದು ತಿಕ್ಕುತ್ತವೆ. ಕಾಡು ಟರ್ಕಿಗಳಲ್ಲಿ ಪ್ರಣಯ ಸೂಚನೆ ಗಂಡಿನ ಹೆಮ್ಮೆಯ ನಡೆ ; ಅವು ತಮ್ಮ ಬಾಲವನ್ನು ಪಂಕದಂತೆ ಮೇಲೆತ್ತಿ ಶಬ್ದ ಮಾಡುತ್ತಾ ತಿರುಗಾಡುತ್ತವೆ. ತಾವಾಗಿ ಹೆಣ್ಣಿನೆಡೆ ಹೋಗುವುದಿಲ್ಲ. ಹೆಣ್ಣು ಸಿದ್ಧವಾದಾಗ ತನ್ನಿಷ್ಟದ ನಲ್ಲನೆದುರು ಬಂದು ಸಂಭೋಗ ಇಚ್ಛಿಸುತ್ತದೆ.

ಅವುಗಳಲ್ಲಿ ಹಲವು ಜಾತಿಯವು ಬಹು ಪತ್ನೀಯುಗಳು. ಅವುಗಳಿಗೆ ಪ್ರಣಯ ವೇಳೆ ಒಂದು ದೊಡ್ಡ ಸಂಸ್ಕಾರ ! ಒಂದು ನಿರ್ದಿಷ್ಟ ಸ್ಥಳದಲ್ಲಿ ಗಂಡು ತನ್ನ ವರ್ಣ ರಂಜಿತ ಗರಿಯನ್ನು ಹರಡಿ ವಿಧವಿಧವಾಗಿ ಶಬ್ದ ಮಾಡುತ್ತಾ ನರ್ತನ ಮಾಡುತ್ತದೆ. ಹೆಣ್ಣೇ ಗಂಡನ್ನು ಮೆಚ್ಚಿ ಬರಬೇಕು. ಗಂಡಿಗೆ ತಿರಸ್ಕಾರ. ಗೂಡು ಕಟ್ಟುವುದಾಗಲೀ ಕುಟುಂಬ ರಕ್ಷಣೆಯಾಗಲೀ ಅದರ ಹೊಣೆಯಲ್ಲ. ಅದು ಸಂಪೂರ್ಣ ಸ್ವತಂತ್ರಪ್ರಾಣಿ ! ಅನೇಕ ಕಾಡು ಕೋಳಿ ಜಾತಿಗಳೂ, ಕವುಜಗಗಳೂ, ಏಷ್ಯಾದ ' ಆರ್‌ಗಸ್ ' ಹಕ್ಕಿ ನ್ಯೂಗಿನಿಯ ಪ್ಯಾರಡೈಸ್ ಹಕ್ಕಿ ಮುಂತಾದುವೆಲ್ಲವೂ ಹೀಗೆಯೇ ವರ್ತಿಸುತ್ತವೆ.

ಅವುಗಳಲ್ಲಿ ಅತ್ಯಂತ ಕುತೂಹಲಕಾರಿಯಾದದ್ದು ಉತ್ತರ ಅಮೆರಿಕಾದ ಕವುಜಗ ನಂತಹ ಗ್ರೌಸ್‌ಹಕ್ಕಿ (Grouse) ಅರ್ಧ ಮೈಲಿ ಉದ್ದ ೨೦೦ ಗಜ ಅಗಲದ ಅಖಾಡಾದಲ್ಲಿ ಸುಮಾರು ೩೦೦ – ೪೦೦ ಗಂಡು ಪಕ್ಷಿಗಳು ನರ್ತನ ಮಾಡಬಲ್ಲವು. ಅವು ಅಲ್ಲಲ್ಲಿ ಸುಮಾರು ೨೦ – ೩೦ ಅಡಿ ದೂರದಲ್ಲಿ ನಿಂತು ನರ್ತಿಸುತ್ತವೆ. ಆದರೆ ಅವುಗಳ ನರ್ತನದ ವರ್ತನೆಯಲ್ಲೂ ಶಿಸ್ತಿದೆ. ಅವುಗಳಲ್ಲೆಲ್ಲಾ ಬಲಿಷ್ಟವಾದ ಗಂಡು ಆ ಹಿಂಡಿನ ಮುಖ್ಯ ನಾಯಕನಾಗುತ್ತಾನೆ. ಅದರ ಇಚ್ಛೆಗೆ ತಡೆಯಿಲ್ಲ. ಸಾಮಾನ್ಯ ವಾಗಿ ಆ ಸ್ಥಳದಲ್ಲಿನ ಹೆಣ್ಣುಗಳೊಡನೆಲ್ಲಾ ಅದು ಸಂಭೋಗಿಸುತ್ತದೆ. ಅದರ ಸುತ್ತಲೂ ಉಪನಾಯಕರುಗಳಿದ್ದು, ಮುಖಂಡನಿಗೆ ಹೆಚ್ಚಾದ ಹೆಣ್ಣನ್ನು ತಮ್ಮ ತೃಪ್ತಿಗಾಗಿ ಬಳಸು ತ್ತವೆ. ಮಿಕ್ಕ ಗಂಡುಗಳಿಗೆ ನಾಯಕರುಗಳು ಮೋಹಪರವಶರಾಗಿದ್ದಾಗ ಮಿಕ್ಕಿರುವ ಹೆಣ್ಣುಗಳು ಸಿಕ್ಕರೂ ಸಿಗಬಹುದು, ಅಷ್ಟೆ ! ಅಲ್ಲಿಯ ಹುಲ್ಲುಗಾವಲಿನ ಕೋಳಿಗಳೂ ಇದೇ ರೀತಿಯೇ ವರ್ತಿಸುತ್ತವೆ... ಗಂಡಿಗೆ ಕತ್ತಿನ ಬಳಿ ಟೊಳ್ಳು ನೀಳಗರಿಗಳೂ, ಕೆಂಚನೆಯ ಗಾಳಿ ಚೀಲವೂ ಇದ್ದು, ಅವುಗಳನ್ನು ಉಬ್ಬಿಸಿ ಶಬ್ದ ಮಾಡುತ್ತಾ ಬಿಂಕ ದಿಂದ ತಿರುಗಾಡಲು ಅನುಕೂಲವೇರ್ಪಟ್ಟಿದೆ. ಸ್ಯಾಂಡ್ ಪೈಪರ್ ಹಕ್ಕಿಗಳಲ್ಲಿ ಗಂಡು ಗಳೆಲ್ಲಾ ಬೇರೆ ಬೇರೆ ಬಣ್ಣದ ಕುತ್ತಿಗೆ ಗರಿ ಹೊಂದಿರುತ್ತವೆ.

ಈ ಎಲ್ಲಾ ನಡವಳಿಕೆಯಿಂದ ಪಕ್ಷಿಗಳು ಬುದ್ಧಿಯುತ ಪ್ರಾಣಿಗಳೆಂದೂ, ತಮ್ಮ ಹಕ್ಕನ್ನು ಕಾಯ್ದಿಡಲೂ, ಕುಟುಂಬವನ್ನು ಸಲಹಲೂ ಸಕಲ ಕಾರ್ಯಕ್ರಮ ಕೈಗೊಂಡು


ಹೊರಾಡಲು ಸಿದ್ಧವಾದವೆಂದೂ, ತಿಳಿಯಬಹುದು. ತಮ್ಮ ನೈಸರ್ಗಿಕ ವಾತಾವರಣ ದಿಂದ ಹೊರಬಿದ್ದಲ್ಲಿ ಅವುಗಳಿಗೆ ಬೇರೆ ತಿಳುವಳಿಕೆ ಕೊಡುವುದು ಸುಲಭ. ಅದಲ್ಲೂ ಹಲವು 'ಗಿಣಿ', 'ಮೈನಾಹಕ್ಕಿ', 'ನೈಟಿಂಗೇಲ್' ಮುಂತಾದವು ಸುಲಭವಾಗಿ ಮನುಷ್ಯರಂತೆ ಹಲವು ಮಾತುಗಳನ್ನೂ ಉಚ್ಚರಿಸಲೂ ಕಲಿಯಬಲ್ಲುವು. ಜರ್ಮನಿಯ "ಆಟೋಕೋಹಿಲರ್" ಎಂಬಾತ ೧೯೪೦ರಲ್ಲಿ ಹಲವು ಕಾಗೆ ಮರಿಗಳನ್ನು ತಂದು ಸಲಹಿ ಒಂದರಿಂದ ಏಳರವರೆಗೆ ಸಂಖ್ಯೆ ಎಣಿಸಲು ಕಲಿಸಿದ. ಈಗಲೂ ಪಾಶ್ಚಾತ್ಯ ದೇಶಗಳಲ್ಲಿ ಮಾತನಾಡುವ ಗಿಣಿಗಳಿಗೂ, ಮೈನಾಹಕ್ಕಿಗಳಿಗೂ ಹೆಚ್ಚಿನ ಬೇಡಿಕೆಯಿದೆ.

ಆತ್ಮರಕ್ಷಣೆ ಎಲ್ಲಾ ಪ್ರಾಣಿಗಳಿಗೂ ಮುಖ್ಯ. ಸಂತಾನರಕ್ಷಣೆ ಎರಡನೆಯದು. ಪಕ್ಷಿಗಳಿಗೆ ಆತ್ಮರಕ್ಷಣೆಯ ಮುಖ್ಯ ಅಂಗ ಅವುಗಳ ರೆಕ್ಕೆ. ಅತ್ತಿತ್ತ ಹಾರಾಡಿ ತಪ್ಪಿಸಿ ಕೊಳ್ಳುವುದಕ್ಕೆ ಅದು ಸಹಾಯಕ. ಕೆಲ ಸಮಯ ಶತ್ರುಗಳಿಂದ ಇತರ ದೊಡ್ಡ ಪಕ್ಷಿಗಳಿಂದ ತಮ್ಮನ್ನೂ, ತಮ್ಮ ಮೊಟ್ಟೆ ಅಥವಾ ಮರಿಗಳನ್ನೂ ಅದು ರಕ್ಷಿಸಬೇಕಾಗುತ್ತದೆ. ಶತ್ರು ಅವನ್ನು ಹಾರಿ ಹಿಂಬಾಲಿಸಬಲ್ಲದಾದ್ದರಿಂದ ಪಾರಾಗಲು ಅವು ಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಗೂಬೆಗಳು ತಮ್ಮ ದೇಹದ ಪುಕ್ಕವನ್ನೆಲ್ಲಾ ಹಿಗ್ಗಿಸಿ ಬಹಳ ಗಾತ್ರವಿರುವಂತೆ ತೋರ್ಪಡಿಸಿಕೊಂಡು ಕಣ್ಣನ್ನು ಅರಳಿಸಿ ದುರುಗುಟ್ಟಿ ನೋಡಿ, ಹೆದರಿಸುತ್ತದೆ. ಗಿಡಗನಿಗೆ ಏನಾದರೂ ಅಪಾಯವಿದ್ದಲ್ಲಿ ಬೆನ್ನ ಮೇಲೆ ತಿರುಗಿ ಉಗುರುಗಳಿಂದ ಹೊಡೆಯಲನುವಾಗುತ್ತದೆ. ಸಣ್ಣ ಕೊಕ್ಕರೆ ನೀರು ಸಸ್ಯಗಳ ನಡುವೆ ಕೊಕ್ಕನ್ನು ಮೇಲಕ್ಕೆತ್ತಿ ಅದರಂತೆಯೇ ನಿಶ್ಚಲವಾಗಿ ನಿಂತು ತಪ್ಪಿಸಿಕೊಳ್ಳಲು ಪ್ರಯತ್ನಿಸು ತ್ತದೆ. ತನ್ನ ಮೊಟ್ಟೆಗೆ ಅಪಾಯವಿದ್ದಲ್ಲಿ ಪ್ಲೋವರ್ ಹಕ್ಕಿ ನೆಲದ ಮೇಲೆ ರೆಕ್ಕೆ ಎಳೆಯುತ್ತಾ ಗಾಯಗೊಂಡಂತೆ ನಟಿಸಿ, ಶತ್ರುವನ್ನು ಗೂಡಿನಿಂದ ದೂರ ಕರೆದೊಯ್ಯು ತ್ತದೆ. ಹಲವು ಪಕ್ಷಿಗಳು ತಮ್ಮ ಗೂಡಿನಿಂದ ದೂರವಿದ್ದು ಗೂಡಿನ ಸುಳಿವೇ ಸಿಗ ದಂತೆ ಮಾಡುತ್ತವೆ.

— ೮ —

ಪಕ್ಷಿಗಳು ಅಂಡಜಗಳು. ಸಂತಾನಾಭಿಲಾಷೆ ಪ್ರಾಣಿಧರ್ಮ. ಅವುಗಳು ಪರ್ವ ಕಾಲದಲ್ಲಿ ಮಾತ್ರ ಸಂಭೋಗಿಸುತ್ತವೆ. ಆ ಕಾಲದಲ್ಲಿ ಗಂಡು ಹೆಚ್ಚು ಚಟುವಟಿಕೆ ಹೊಂದಿ ತನ್ನ ಭೂ ಪ್ರದೇಶದ ಗುರುತುಮಾಡಲು ಹಾತೊರೆಯುತ್ತದೆ. ಮೊದಲು ಅದಕ್ಕೆ ಅಗತ್ಯವಾದದ್ದಕ್ಕಿಂತ ಹೆಚ್ಚಿನ ಪ್ರದೇಶವನ್ನು ತನ್ನ ಹಾಕಿನಿಂದ ಗುರುತಿಸಲೆತ್ನಿಸಿ ದರೂ, ಇತರ ಗಂಡುಗಳು ಅದಕ್ಕೆ ಆಸ್ಪದ ಕೊಡದೆ ಬಹುವಾಗಿ ಕಡಮೆ ಮಾಡುತ್ತವೆ. ಕೊನೆಗೆ ಪ್ರತಿ ಜಾತಿಗೂ ಸಾಕಷ್ಟು ಪ್ರದೇಶದ ವಿಂಗಡಣೆಯಾಗುತ್ತದೆ. ಇದರ ವಿಸ್ತೀರ್ಣ ಪಕ್ಷಿ ಸಂಖ್ಯೆಯನ್ನವಲಂಬಿಸುತ್ತದೆ. ಒಂದೇ ವಿಧದ ಪಕ್ಷಿ ಪ್ರಭೇದದಲ್ಲಿ ಸಂಖ್ಯೆ ಹೆಚ್ಚಾಗಿದ್ದಲ್ಲಿ ಪ್ರದೇಶ ಕಡಮೆಯಾಗುತ್ತದೆ. ಕಡಮೆಯಾದಲ್ಲಿ ಹೆಚ್ಚಿರಬಹುದು.


ಅದರ ಭೂ ಪ್ರದೇಶದ ಮಿತಿ ನಿರ್ಧಾರವಾದೊಡನೆ, ಅದನ್ನು ಕಾಯ್ದುಡಲು ಆ ಪಕ್ಷಿ ಸದಾ ಸಿದ್ಧ. ಇನ್ನಾವ ಪಕ್ಷಿಯೂ ಅದರೊಳಗೆ ಬರದಂತೆ ನಾಲ್ಕು ಕಡೆಯೂ ಹಾರಾಡುತ್ತಾ ಹಾಡುತ್ತಿರುತ್ತದೆ. ಮೊದಲೇ ವಿವರಿಸಿದಂತೆ ಈ ಹಾಡು ಅದರ ಕಹಳೆ ಕೂಗು. ಇನ್ನೊಂದು ಗಂಡು ಅಲ್ಲಿಗೆ ಬರುವಂತಿಲ್ಲ ; ಬಂದಲ್ಲಿ ಕಾದಾಡಿ ಮಡಿಯಲೂ ಸಿದ್ಧ ! ಹೆಣ್ಣಿಗೆ ಮಾತ್ರ ಅಲ್ಲಿ ಬರಲು ಸಾಧ್ಯ. ಅದೂ ಸಾಮಾನ್ಯವಾಗಿ ಒಂದೇ ಹೆಣ್ಣು. ಕಾದಾಡದಂತೆ ಗೂಡಿನಲ್ಲಿಟ್ಟಿದ್ದರೂ ತನ್ನ ಕೂಗಿನಿಂದಲೇ ಇತರವನ್ನು ಹೆದರಿಸಿ ಓಡಿಸುತ್ತದೆ. ಆರ್ಥರ್ ಆಲನ್ ಇದನ್ನು ಅರಿಯಲು ಒಂದು ಗಂಡನ್ನು ಹಿಡಿದು



ಪಕ್ಷಿ ಗೂಡುಗಳ ವೈವಿಧ್ಯತೆ

ಗೂಡಿನಲ್ಲಿರಿಸಿ ಆ ಗೂಡನ್ನು ಅದರ ಭೂಪ್ರದೇಶದಲ್ಲಿಟ್ಟ. ಅದು ಯಾವಾಗಲೂ ಹಾಡುತ್ತಾ ಇನ್ನಾವ ಗಂಡೂ ಅಲ್ಲಿಗೆ ಬರದಂತೆ ಎಚ್ಚರವಹಿಸಿತ್ತು. ಆ ಗೂಡನ್ನು ಆತ ಇನ್ನೊಂದು ಗಂಡಿನ ಪ್ರದೇಶಕ್ಕೆ ಒಯ್ದಿಟ್ಟಾಗ ಅದು ಹೆದರಿಕೆಯಿಂದ ವಿಹ್ವಲಗೊಂಡಿದ್ದು, ಆ ಪ್ರದೇಶದ ನಾಯಕ ಜಗಳವಾಡಲು ಬಂದಾಗ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ್ದರಿಂದ ಹೆದರಿಕೆಯಿಂದ ಹೃದಯಸ್ಥಂಭನ ಹೊಂದಿ ಸತ್ತಿತು! ಆದ್ದರಿಂದ ಪಕ್ಷಿಗಳಿಗೆ ಅದರ ಭೂ ಪ್ರದೇಶದ ಮಾಲೀಕತ್ವ ಸಂತಾನಾಭಿವೃದ್ಧಿಗೆ ಬಲು ಮುಖ್ಯ. ಈ ಮಾಲೀಕತ್ವ ಅದರ ಸ್ಥಾನಮಾನಗಳಿಗಾಗಿಯಲ್ಲ; ಸಂತಾನ ಅಭಿವೃದ್ಧಿಗೆ ಅಗತ್ಯವಾದ ಆಹಾರ ಹೊಂದಾಣಿಕೆಗೆ. ಆದ್ದರಿಂದಲೇ ಭೂ ಪ್ರದೇಶದ ಪಕ್ಷಿಗಳು ಗುಂಪಾಗಿ ಜೀವಿಸಿರಲು ಸಾಧ್ಯವಿಲ್ಲ. ಅವುಗಳಿಗೆ ಪ್ರತಿಯೊಂದಕ್ಕೂ ಸಾಕಷ್ಟು ಭೂಮಿಯ ಹಂಚಾಣಿಕೆಯಾಗಬೇಕು. ಸಮುದ್ರ ಪಕ್ಷಿಗಳಿಗೆ ಈ ತೊಂದರೆಯಿಲ್ಲ. ಆಹಾರ ಒಂದೇ ಸ್ಥಳದಲ್ಲಿ ಯಥೇಚ್ಛವಾಗಿ ದೊರಕುತ್ತದೆ.

ಆದ್ದರಿಂದಲೇ ಅವು ಗುಂಪಾಗಿ ವಾಸಿಸಲು ಸಾಧ್ಯ. ಭೂ ಪ್ರದೇಶದಲ್ಲಿ ಆಹಾರ ಅನುಕೂಲತೆ ಕಡಮೆಯಾಗಿರುವುದರಿಂದ ಅದಕ್ಕೆ ಪೈಪೋಟಿ ಹೆಚ್ಚು. ಯಾವಾಗಲೂ ಖಾಲಿಯಿರುವುದಿಲ್ಲ. ಒಂದು ಗಂಡು ಸತ್ತಲ್ಲಿ, ಇನ್ನೊಂದು ಕೂಡಲೇ ಅದನ್ನಾಕ್ರಮಿಸಿ ಕೊಳ್ಳುತ್ತದೆ.



ಪಕ್ಷಿ ಗೂಡುಗಳ ವೈವಿಧ್ಯತೆ

ಹೆಣ್ಣು ಮೊದಲು ಗಂಡಿನ ಭೂ ಪ್ರದೇಶಕ್ಕೆ ಬಂದಾಗ ಅದನ್ನು ಗಂಡು ಹೆದರಿಸುತ್ತದೆ. ಆದರೆ ಹೆಣ್ಣು ಮಣಿಯದೆ ಅದನ್ನು ಒಲಿಸಿಕೊಳ್ಳಲು ಸರ್ವಪ್ರಯತ್ನ ಮಾಡುತ್ತದೆ. ಆಗ ಗಂಡು ಶಾಂತವಾಗಿ ಅದನ್ನು ಪರಿಗ್ರಹಿಸುತ್ತದೆ. ತನ್ನ ಭೂ

ಪ್ರದೇಶ ಮೀರಿದಲ್ಲಿ ಹೆಣ್ಣನ್ನು ತನ್ನ ಇಂಚರದಿಂದ ಒಂದಕ್ಕೆ ಬರುವಂತೆ ಕರೆಯುತ್ತದೆ. ಪ್ರಣಯಕೇಳಿ ವಿಧವಿಧವಾಗಿರಬಹುದು. ಗಂಡು ನೃತ್ಯವಾಡಬಲ್ಲದು. ಅಥವಾ ಹೆಣ್ಣಿಗೆ ಪ್ರೇಮಪೂರ್ವಕವಾಗಿ ಒಳ್ಳೆಯ ತಿನಿಸನ್ನು ಒದಗಿಸಬಹುದು. ಕೊನೆಗೆ ಹೆಣ್ಣು ಸಂಭೋಗಕ್ಕೆ ಸಿದ್ಧವಾಗುತ್ತಿದ್ದಾಗ ಸಂತಾನಾಭಿವೃದ್ಧಿಗೆ ತೊಡಗುತ್ತದೆ.

ಸಂಭೋಗಕ್ಕೆ ಸಿದ್ಧವಾಗುವ ವಯಸ್ಸು ಪಕ್ಷಿಗಳ ಆಯುಷ್ಯವನ್ನವಲಂಬಿಸಿರುತ್ತದೆ. ದೀರ್ಘಾಯುಷ್ಯವುಳ್ಳ ಪಕ್ಷಿಗಳಲ್ಲಿ ಮೊದಲ ಸಂಭೋಗ ಮತ್ತು ಮೊಟ್ಟೆ ನಿಧಾನವಾಗ ಬಹುದು. ಸಮುದ್ರದ ಆಲ್‌ಬಟ್ರಾಸ್ ೧೦ – ೧೨ ವರ್ಷ ವಯಸ್ಸಿನ ನಂತರವೇ ಮೊಟ್ಟೆ ಇಡುತ್ತದೆ. ದೊಡ್ಡ ಹದ್ದು ಮುಂತಾದುವು ೨ – ೪ ವರ್ಷವಾಗಬೇಕು. ಸಣ್ಣ ಪಕ್ಷಿಗಳು ೧೦ – ೧೨ ತಿಂಗಳಲ್ಲೇ ಪ್ರಾರಂಭಿಸಬಲ್ಲವು.


ಅವುಗಳ ಗೂಡು ಪ್ರಪಂಚದ ಒಂದು ವಿಚಿತ್ರ. ಮರಿಗಳು ಬಲಿತು ಹೊರ ಬರುವವರೆಗೆ ಅವುಗಳಿಗೆ ಪೂರ್ಣ ಆಶ್ರಯ ದೊರಕುವಂತೆ ಅವುಗಳ ಗೂಡು ರಚಿತ ವಾಗುತ್ತವೆ. ಮರಳಿನಲ್ಲಿ ಕೆರೆದ ಹಳ್ಳ, ಕಲ್ಲುಗಳ ನಡುವೆ ಭೂಮಿಯ ಮೇಲೆ ಹಾಗೂ ಸುರಂಗಗಳಲ್ಲಿ ಹಾಗೂ ಅತಿ ಸುಂದರ ವೈವಿಧ್ಯಪೂರ್ಣಗೂಡಿನ ರಚನೆ ಪಕ್ಷಿಗಳಲ್ಲಿ ಕಂಡುಬರುತ್ತದೆ. ಅವುಗಳ ಗೂಡು ಒಂದಕ್ಕೊಂದು ವ್ಯತ್ಯಾಸವಾಗಿರುತ್ತದೆ.

ಮೊಟ್ಟೆಯಿಡಲು ಹೆಣ್ಣು ಸಿದ್ಧವಾದಾಗಲೇ ಸಂಭೋಗ ಏರ್ಪಡುವುದು. ಸಂಭೋಗದ ನಂತರ ಅದರ ಗೂಡಿನ ರಚನೆಯೇ ಅದರ ಮುಖ್ಯ ಕಾರ್ಯ. ಹಲವು ಪಕ್ಷಿಗಳು ಕಲ್ಲುಗಳ ನಡುವೆ, ಅದೇ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ಹಲವು ಸಮುದ್ರ ಪಕ್ಷಿಗಳು ಮರಳಿನಲ್ಲಿ ತಗ್ಗು ಮಾಡಿ ಮೊಟ್ಟೆಯಿಡುತ್ತವೆ.

ಸಿಂಪಿಗ ಹಕ್ಕಿ ಎಲೆಗಳನ್ನು ಜೋಡಿಸಿ ಹೊಲೆದು ಗೂಡು ರಚಿಸುತ್ತದೆ. ಆದರೆ ನೇಯ್ದು ಹಕ್ಕಿಯಗೂಡು ಸೃಷ್ಟಿಯ ಒಂದು ಉತ್ತಮ ಕಲೆ. ಗೂಡುಗಳ ಗಾತ್ರದಲ್ಲೂ ಹೆಚ್ಚಿನ ಅಂತರವಿದೆ. ಹಮ್ಮಿಂಗ್ ಪಕ್ಷಿಗಳ ಗೂಡು ಅತಿ ಸಣ್ಣದು. ಹಲವು ಹದ್ದುಗಳ ಹಳೆಯ ಗೂಡು ದೊಡ್ಡ ಗಾತ್ರದವು. ಅಮೆರಿಕಾದಲ್ಲಿ ಒಂದು ಗೂಡು ೮ ೧/೨ ಅಗಲ, ೧೨ ಅಡಿ ಆಳವಿದ್ದು ೨ ಟನ್ ಭಾರವಿತ್ತಂತೆ !


ಮರಕುಟುಕಗಳು ಮರಗಳಲ್ಲಿ ಸಣ್ಣ ತೂತು ಕೊರೆದು ಮೊಟ್ಟೆಯಿಡುತ್ತವೆ. ಮರಿಯಾದಮೇಲೆ ಗೂಡನ್ನು ತ್ಯಜಿಸುತ್ತದೆ. ಆದರೆ ಗೊರವಂಕ, ನೀಲಿ ಪಕ್ಷಿ, ಕೀಟಾಹಾರಿ ಮುಂತಾದ ಸಣ್ಣ ಹಕ್ಕಿಗಳು ಅದನ್ನು ಉಪಯೋಗಿಸಿಕೊಂಡು ತಮಗಿಷ್ಟ ವಾದಂತೆ ಗೂಡು ರಚಿಸುತ್ತವೆ. ಬಹು ಜಾತಿಯ ಪಕ್ಷಿಗಳ ಗೂಡು ಮೇಲೆ ತೆರೆದಿರುವ ಸಣ್ಣ ಬೊಗಸೆಯಂತಿರುತ್ತದೆ. ಅದು ಕಡ್ಡಿಯಿಂದ ಅಥವಾ ಹುಲ್ಲು, ಕೂದಲುಗಳಿಂದ ನೇಯ್ದಿರಬಹುದು. ಒಳಗೆ ಬರಿದಾಗಿಯೋ ಅಥವಾ ತುಪ್ಪಟ ಕೂದಲುಗಳಿಂದ ಹೊದಿಕೆ ಹೊಂದಿರಬಹುದು. ಹಲವು ಮಣ್ಣು ಸವರಿ ಗೂಡನ್ನು ಭದ್ರಪಡಿಸುತ್ತವೆ. ಹಲವು ಜೇಡರಬಲೆ ಎಳೆಯಂತಹ ನೂಲಿನಿಂದ ಕಟ್ಟುತ್ತವೆ. ಗಾತ್ರಕ್ಕೆ ತಕ್ಕಂತೆ ೩ ದಿನ ದಿಂದ ೨ ವಾರದವರೆಗೂ ಸಮಯ ಬೇಕಾಗಬಹುದು. ನೆಲದಮೇಲೆ, ಪೊದರು,

ಕಲ್ಲು ಪೊಟರೆ, ಮನೆಮಾಡು, ದೊಡ್ಡ ಮರಗಳಲ್ಲಿ ಗೂಡುಗಳು ರಚಿತವಾಗಬಹುದು. ಎತ್ತರವಾದ ಮರಗಳಲ್ಲಿ ದೊಡ್ಡ ಪಕ್ಷಿಗಳು ಮಾತ್ರ ಗೂಡುಕಟ್ಟುತ್ತವೆ. ಬಹುವಾಗಿ ೬–೮ ಅಡಿ ಎತ್ತರದೊಳಗೇ ಪಕ್ಷಿಗಳ ಗೂಡುಗಳಿರುತ್ತವೆ. ಮಿಂಚುಳ್ಳಿ ಮತ್ತು



ಪಕ್ಷಿ ಗೂಡುಗಳ ವೈವಿಧ್ಯತೆ


ಹಲವು ಜೇನುಹುಳ ತಿನ್ನುವ ಪಕ್ಕಿಗಳು ಮೃದುವಾದ ನದಿ ಅಥವಾ ಕೆರೆದಂಡೆಗಳಲ್ಲಿ ನೀಳ ಸುರಂಗ ಕೊರೆದು ಒಳಗೆ ಗೂಡು ಕಟ್ಟುತ್ತವೆ. ಸುರಂಗ ೩ರಿಂದ ೧೦ – ೧೨ ಅಡಿ ಉದ್ದವಿರಬಲ್ಲದು.



ಪಕ್ಷಿ ಗೂಡುಗಳ ವೈವಿಧ್ಯತೆ

ನೀರುಪಕ್ಷಿಗಳು ಜಟಿಲವಾದ ಗೂಡು ಕಟ್ಟುವುದಿಲ್ಲ. ಹಲವು ಕಡ್ಡಿ ಮತ್ತು ಕೊಳೆಯುತ್ತಿರುವ ಸಸ್ಯಭಾಗಗಳನ್ನು ಸೇರಿಸಿ ತೆಪ್ಪ ರಚಿಸಿ ಮೊಟ್ಟೆಯಿಡುತ್ತವೆ. ಆಹಾರಕ್ಕಾಗಿ ಹೊರಟಾಗ ಮೊಟ್ಟೆ ಕಾಣದಂತೆ ಸ್ವಲ್ಪ ಸಸ್ಯಭಾಗ ಮೇಲೆಳೆದು ಹೋಗುತ್ತದೆ. ಮೊಟ್ಟೆಯನ್ನು ಕಾಣದಂತಾಗಿಸಿ ರಕ್ಷಿಸಲೂ, ಶಾಖ ಒದಗಿಸಲೂ, ಇದು ಸಹಾಯಕ.

ಬಾತುಗಳು ತಮ್ಮ ಎದೆಯ ಬಳಿಯ ತುಪ್ಪಟ ಪುಕ್ಕಗಳನ್ನು ಕಿತ್ತು ಗೂಡಿನಲ್ಲಿ ಹರಡಿ ಶಾಖ ಒದಗಿಸುತ್ತವೆ. ನೆಯ್ಗೆ ಹಕ್ಕಿಗಳು ನೇತಾಡುವ ಬುಟ್ಟಿಯಾಕಾರದ ಗೂಡು ರಚಿಸುತ್ತವೆ. ಮೊದಲು ಹಲವು ಹುಲ್ಲು ತುಂಡುಗಳನ್ನು ಕೊಂಬೆ ಅಥವಾ ಎಳೆಗೆ ನೆಯ್ದು ಸುತ್ತಿ ಭದ್ರವಾಗಿಸಿ, ಅದರಿಂದ ನೇತಾಡುವ ತಮ್ಮ ಗೂಡನ್ನು ಕೊಕ್ಕು ಕಾಲುಗಳ ಸಹಾಯದಿಂದ ಹೆಣೆಯುತ್ತವೆ ! ಅದಕ್ಕೆ ತಳ ಮತ್ತು ಪಾರ್ಶ್ವಗಳಲ್ಲಿ ಎರಡು ರಂಧ್ರವೂ, ಒಳಗೆ ಮೊಟ್ಟೆಯಿಡುವ ಒಂದು ಸಣ್ಣ ಕೋಣೆಯೂ ರಚಿತವಾಗಿರುತ್ತದೆ. ಗೂಡುಗಳು ಮುಳ್ಳುಗಿಡ, ಕೊಳ, ಭಾವಿ, ಕೆರೆ ಬಳಿಯ ಮರಗಳಲ್ಲಿ ಹೆಚ್ಚಾಗಿ ಕಟ್ಟಲ್ಪಟ್ಟು ಸುಲಭವಾಗಿ ದೊರಕುವಂತಿರುವುದಿಲ್ಲ.





ಪಕ್ಷಿ ಗೂಡುಗಳ ವೈವಿಧ್ಯತೆ

ನೆಲದಲ್ಲಿ ಗುಳಿಮಾಡಿ ಮೊಟ್ಟೆಯಿಟ್ಟಿರುವುದು ಕಳ್ಳಿ ಮಧ್ಯೆಗೂಡಿನ ರಚನೆ

ಮಣ್ಣು ಗೂಡುಗಳೂ ಉಂಟು. ಫ್ಲೆಮಿಂಗೋಗಳು ೩ ಅಡಿ ಎತ್ತರದ ಮಣ್ಣಿನ ಗೂಡು ರಚಿಸಿ, ಮೇಲೆ ತಗ್ಗುಮಾಡಿ ಮೊಟ್ಟೆಯಿಡುತ್ತವೆ. ಸ್ವಾಲೋ, ಮಾರ್ಟಿನ್

ಹಕ್ಕಿಗಳು ಮಾಡಿನಡಿ, ಸೇತುವೆಯಡಿಯಲ್ಲಿ ಮಣ್ಣಿನಗೂಡು ರಚಿಸುತ್ತವೆ. ಅರ್ಜೆಂಟೈನಾದ 'ರೂಫಸ್ ಹಕ್ಕಿ' ಸಗಣಿ ಮತ್ತು ಮರಳನ್ನು ಕಲಸಿ ಗಾರೆಯಂತೆ ಮಾಡಿ, ಉಂಡೆಯಾಕಾರದ ಗೂಡು ಕಟ್ಟುತ್ತದೆ. ಮೊಟ್ಟೆ ಕೊಠಡಿಗೆ ಹೋಗಲು ಒಂದು ಬಾಗಿಲು ಮತ್ತು ಮೆಟ್ಟಲುಗಳು ರಚಿತವಾಗುತ್ತದೆ! ಅದು ಕಟ್ಟಿದ ಮಣ್ಣು ಗೂಡು ಬಿಸಿಲಿನಲ್ಲಿ ಬೆಂದು ಗಟ್ಟಿಯಾಗುತ್ತದೆ.

ಹಲವು "ಸ್ವಿಫ್ಟ್" (Swift) ಹಕ್ಕಿಗಳು ತಮ್ಮ ಜೊಲ್ಲಿನಿಂದಲೇ ಗೂಡು ಕಟ್ಟುತ್ತವೆ. ಅವುಗಳ ಜೊಲ್ಲು ಗಾಳಿಗೆ ಸೋಂಕಿದೊಡನೆ ಗಟ್ಟಿಯಾಗುತ್ತದೆ. ಇಂಡೋಚೈನಾ ಬಳಿಯ ಎತ್ತರದ ಪ್ರಪಾತ ಮುಖದಲ್ಲೆಲ್ಲಾ ಗೂಡು ಕಟ್ಟುವ ಎರಡು ಜಾತಿಯ ಗೂಡುಗಳಲ್ಲಿ 'ಸಸಾರಜನಕಾಂಶ' ಹೆಚ್ಚಾಗಿರುವುದರಿಂದ ಅದನ್ನು ಪಾಶ್ಚಾತ್ಯರು 'ಕಶಾಯ' (Soup) ತಯಾರಿಸಲು ಉಪಯೋಗಿಸುತ್ತಾರೆ. ಹಲವು ಜಾತಿ ಜೊಲ್ಲಿನ ಜೊತೆಗೆ ಹಲವು ತುಪ್ಪಟ ಮತ್ತು ರೆಕ್ಕೆಗಳನ್ನೂ ಸೇರಿಸಬಹುದು. ಅದರಲ್ಲಿ ಅತ್ಯಂತ ಆಶ್ಚರ್ಯಕರವಾದದ್ದು ಉಷ್ಣವಲಯದ ಹಲವೆಡೆಯಿರುವ 'ಪಾಮ್ ಸ್ವಿಪ್ಟ್' (Palm swift). ಇವು ಜೋತಾಡುವ ಎಲೆಗಳಲ್ಲಿ ತಮ್ಮ ಜೊಲ್ಲಿನಿಂದ ಒಂದು ಸಣ್ಣ ಮೆತ್ತೆ ರಚಿಸಿ ಅದಕ್ಕೆ ಅಂಟಿರುವಂತೆ ಎರಡು ಮೊಟ್ಟೆಯಿಡುತ್ತದೆ. ಎಲೆ ಎಷ್ಟೇ ರಭಸದಿಂದ ಅಲುಗಾಡಿದರೂ ಮೊಟ್ಟೆ ಕೆಳಗೆ ಬೀಳುವುದಿಲ್ಲ.



ಪಕ್ಷಿ ಗೂಡುಗಳ ವೈವಿಧ್ಯತೆ

ಪ್ರಪಂಚದಲ್ಲೇ ಅತಿ ದೊಡ್ಡ ಗೂಡು ರಚಿಸುವುದು ಆಸ್ಟ್ರೇಲಿಯಾದ ಒಂದು ಜಾತಿಯ ಕಾಡುಕೋಳಿ. ಅವು ಕಾವು ಕೊಟ್ಟು ಮರಿ ಮಾಡುವುದಿಲ್ಲ. ಸೊಪ್ಪು

K598

ಸದೆಯನ್ನೆಲ್ಲಾ ಒಟ್ಟುಗೂಡಿಸಿ ಮಧ್ಯೆ ಮೊಟ್ಟೆ ಸೇರಿಸುತ್ತದೆ. ಈ ಕಸ ಕೊಳೆಯುವಾಗ ಉತ್ಪನ್ನವಾಗುವ ಶಾಖದಿಂದ ಮೊಟ್ಟೆ ಮರಿಯಾಗುತ್ತದೆ. ೨೦ ಅಡಿ ಎತ್ತರ ೪೦-೫೦ ಅಡಿ ಅಗಲದ ಗೂಡು ಕಂಡುಬರುತ್ತವೆ.

ಶೀತವಲಯದ ವಿಚಿತ್ರ ಪಕ್ಷಿ ಪೆಂಗ್ವಿನ್‌ಗಳು, ಗೂಡು ರಚಿಸುವುದಿಲ್ಲ. ಮರಿ ಮಾಡುವ ಹೊಣೆ ಗಂಡಿನದು, ಹೆಣ್ಣಿನದಲ್ಲ! ಹೆಣ್ಣು ಇಟ್ಟ ಒಂದೇ ಮೊಟ್ಟೆಯನ್ನು ಗಂಡು ತನ್ನ ಕಾಲಮೇಲಿರಿಸಿ ಹೊಟ್ಟೆಯ ಪದರದಿಂದ ಮುಚ್ಚಿ ಅಲುಗಾಡದೆ ನಿಲ್ಲುತ್ತದೆ. ಶೀತ ಅತಿ ಹೆಚ್ಚಾದರೂ, ಗಾಳಿಯ ವೇಗ ಬಹಳವಾಗಿದ್ದರೂ ಅದು ನಿಶ್ಚಲವಾಗಿ ಎಲ್ಲವನ್ನೂ ಸಹಿಸಿಕೊಂಡು ನಿಂತಿರುತ್ತದೆ. ಮರಿಯಾಗಲು ಸುಮಾರು ೨ ತಿಂಗಳು ಬೇಕು. ಅಲ್ಲಿಯವರೆಗೆ ಹೆಣ್ಣು ಚನ್ನಾಗಿ ತಿಂದು ಕೊಬ್ಬಿದರೂ, ಗಂಡು ಮಾತ್ರ ಉಪವಾಸವಿದ್ದು ೨೦ - ೨೫ ರಾತಲು ತೂಕ ಕಳೆದುಕೊಳ್ಳುತ್ತದೆ. ಮರಿಯಾದೊಡನೆ ಅದಕ್ಕೆ ಬಿಡುಗಡೆ.

ಪಕ್ಕಪಕ್ಕದಲ್ಲೇ ವಾಸವಿರಲು ಸಾಮೂಹಿಕವಾಗಿ ರಚಿತವಾಗುವ ಗೂಡುಗಳೂ ಇವೆ. ಹಲವು ಅಗಲವಾದ ಎತ್ತರ ದಿಣ್ಣೆಗೂಡು ಮಾಡಿ ಅದರಲ್ಲಿ ೫೦ - ೬೦ ಸಣ್ಣ ಗೂಡು ಕಟ್ಟಲು ಅನುಕೂಲ ಮಾಡಿಕೊಳ್ಳುತ್ತವೆ.




ಪಕ್ಷಿ ಗೂಡುಗಳ ವೈವಿಧ್ಯತೆ

ಗೂಡಿನ ರಚನಾ ಕೌಶಲ್ಯ ಪಕ್ಷಿಗಳಲ್ಲಿ ವಂಶಾನುಗತವಾಗಿ ಬಂದದ್ದು. ಅದು ಕಲಿತದ್ದಲ್ಲ. ಸ್ವಾಭಾವಿಕವಾದ ಸಹಜ ಪ್ರವೃತ್ತಿ, ಮೊಟ್ಟೆಯಿಡುವುದು ಗೂಡು ರಚಿತವಾದೊಡನೆಯೇ ಪ್ರಾರಂಭವಾಗುತ್ತದೆ. ಬಹುಶಃ ಮೊಟ್ಟೆಯಿಡುವ ಕಾಲವನ್ನನುಸರಿಸಿಯೇ ಗೂಡು ಕಟ್ಟಲಾಗುತ್ತದೆಂದು ತೋರುತ್ತದೆ. ದಿನವೂ ಬೆಳಗ್ಗೆ ಮೊಟ್ಟೆಯಿಡುವುದು ಸಾಮಾನ್ಯ. ಆದರೆ ಕೋಗಿಲೆಗಳೂ ಮತ್ತಿತರ ಹಲವು ಪಕ್ಷಿಗಳೂ ಮಧ್ಯಾಹ್ನವೂ ಇಡುವುದುಂಟು. ದೊಡ್ಡ ಗಾತ್ರದ ಪಕ್ಷಿಗಳಾದ ಹದ್ದು, ಗೂಬೆ ಮುಂತಾದವು ೨ ದಿನಕ್ಕೊಮ್ಮೆ ಅಥವಾ ೫ ದಿನಕ್ಕೊಮ್ಮೆ ಒಂದರಂತೆ ಇಡಬಹುದು. ಆಸ್ಟ್ರೇಲಿಯಾದ ಮೇಲೀ ಕೋಳಿ ೫ರಿಂದ ೯ ದಿನದ ಅಂತರದಲ್ಲಿ ಒಂದರಂತೆ ಮೊಟ್ಟೆಯಿಡಬಹುದು.

ಶತ್ರುಭಾದೆ ಹೆಚ್ಚಾಗಿಲ್ಲದ ಪಕ್ಷಿಗಳಲ್ಲಿ ಮೊಟ್ಟೆಯ ಸಂಖ್ಯೆ ಕಡಮೆ. ಹಮ್ಮಿಂಗ್ ಮುಂತಾದ ಪಕ್ಷಿಗಳು ಸಾಮಾನ್ಯವಾಗಿ ೨ ಮೊಟ್ಟೆಯಿಡುತ್ತವೆ. ಕೊಕ್ಕರೆ ಮುಂತಾದುವು ೩–೪. ಹೆಚ್ಚಾಗಿ ಶಿಕಾರಿಯಾಗುವ ಬಾತು, ಕಾಡುಕೋಳಿ ಮುಂತಾದುವು ೧೦–೧೨ ಮೊಟ್ಟೆಯಿಡುತ್ತವೆ. ಬಹುದಪ್ಪಗಾತ್ರದ ಶತ್ರುಬಾಧೆಯಿಲ್ಲದ ಪೆಟ್ರಲ್, ಪೆಂಗ್ವಿನ್ ಮುಂತಾದುವು ಒಂದೇ ಮೊಟ್ಟೆಯಿಡುತ್ತವೆ.

ಗಾತ್ರದಲ್ಲಿ ಬಲು ದೊಡ್ಡದು ಆಫ್ರಿಕಾದ ಆಸ್ಟ್ರಿಚ್ ಪಕ್ಷಿ ಮೊಟ್ಟೆ. ಅದು ೬–೮ ಅಂಗುಲ ಉದ್ದವಿರುತ್ತದೆ. ಹಮ್ಮಿಂಗ್ ಪಕ್ಷಿಗಳದು ಬಲು ಸಣ್ಣ, ತಮ್ಮ ದೇಹ ಭಾರಕ್ಕಿಂತ ಹೆಚ್ಚಿನ ಭಾರದ ಮೊಟ್ಟೆಯೊಡ್ಡನ್ನು ಹಲವು ಪ್ರಭೇದಗಳು ಇಡಲು ಶಕ್ತವಾಗಿವೆ. ಅದರ ಬಣ್ಣ ಹಾಗೂ ಆಕಾರದಲ್ಲಿ ಹೆಚ್ಚಿನ ವೈವಿಧ್ಯತೆಯಿದ್ದು, ಆಕರ್ಷಕವಾಗಿರುತ್ತದೆ.

ಪಕ್ಷಿಗಳು ತಮ್ಮ ಮೊಟ್ಟೆಯ ಗುರುತು ಹಿಡಿಯುವಂತಿಲ್ಲ. ಸಾಮಾನ್ಯವಾಗಿ ಗೂಡಿನಲ್ಲಿರುವ ಮೊಟ್ಟೆಯಾಕಾರದ ವಸ್ತುವನ್ನು ಮಾತ್ರ ಗುರುತಿಸುತ್ತದೆ. ಬಾತು ಮೊಟ್ಟೆಗಳಿಗೆ ಕಾವಿಗೆ ಬಂದ ಕೋಳಿ ಕೂರಿಸಿ ಮರಿ ಮಾಡಿಸುವುದು ಇದಕ್ಕೆ ಉತ್ತಮ ಉದಾಹರಣೆ. ಬಣ್ಣ ಬಳಿದ ಮರದ ಮೊಟ್ಟೆಯಾಕಾರದ ವಸ್ತುವನ್ನೂ ಮರಿ ಮಾಡಲು ಹಕ್ಕಿ ಪ್ರಯತ್ನಿಸುತ್ತದೆ. ಇದರಿಂದಲೇ ಕೋಗಿಲೆ ಕಾಗೆಯ ಮೊಟ್ಟೆಗಳನ್ನು ಗೂಡಿನಿಂದ ಹೊರತಳ್ಳಿ ಅದಕ್ಕೆ ಬದಲು ತನ್ನ ಮೊಟ್ಟೆಗಳನ್ನಿಟ್ಟು ಮರಿ ಮಾಡಿಸುತ್ತದೆ. ಇಂತಹ ಪರೋಪಜೀವಿ ಪಕ್ಷಿಗಳು ಈ ವರ್ಗದಲ್ಲಿ ಅನೇಕವಿವೆ. ಸುಮಾರು ೮೦



ಪಕ್ಷಿ ಗೂಡುಗಳ ವೈವಿಧ್ಯತೆ

ಪ್ರಭೇದಗಳು ಪರ್ವಕಾಲದಲ್ಲಿ ಪರೋಪಜೀವಿಗಳಾಗುತ್ತವೆ. ಕೆಲವು ತಾವೇ ಗೂಡು ರಚಿಸಿ ಮರಿ ಮಾಡುತ್ತಲೂ, ಕೆಲಸಮಯ ಪರೋಪಜೀವಿಗಳಾಗುತ್ತಲೂ ಇರುತ್ತವೆ. ಜೇನು ತೋರ್ಪು ಹಕ್ಕಿಯ ಮರಿಗೆ ಕೊಕ್ಕಿನಲ್ಲಿ ಒಂದು ಜೊತೆ ಕೊಕ್ಕೆಗಳಿರುತ್ತವೆ. ಇದರಿಂದ ಇತರ ಮರಿಗಳನ್ನು ಅದು ಚುಚ್ಚಿ ಸಾಯಿಸಿ ಹೊರ ನೂಕುತ್ತದೆ. ಅದು ಬೆಳೆದಂತೆ ಈ ಕೊಕ್ಕೆಗಳು ಉದುರುತ್ತವೆ.

ನಮ್ಮ ಕೋಗಿಲೆ ತನ್ನ ಇಂಚರಕ್ಕೆ ಪ್ರಸಿದ್ಧಿಯಾದರೂ, ಕಾರ್ಯದಲ್ಲಿ ಅತಿ ಕ್ರೂರ. ಸುಮಾರು ೩೦೦ ಪ್ರಭೇದಗಳ ಗೂಡುಗಳಲ್ಲಿ ಅದು ಮರಿ ಮಾಡುತ್ತದೆ. ಅದು ತನ್ನ ಮೊಟ್ಟೆಯಂತೆ ಮೊಟ್ಟೆಯಿಡುವ ಪಕ್ಷಿಗಳ ಗೂಡನ್ನೇ ಆರಿಸಿ, ಅದು ಮೊಟ್ಟೆಯಿಟ್ಟಂತೆ ಮೊಟ್ಟೆಯನ್ನು ಹೊರನೂಕಿ, ಅದಕ್ಕೆ ಬದಲು ತನ್ನ ಮೊಟ್ಟೆಯಿಡುತ್ತದೆ. ಪಕ್ಷಿಗಳು ಬೆಳಗ್ಗೆ ಮೊಟ್ಟೆಯಿಡುವುದರಿಂದ ಇದು ಮಧ್ಯಾಹ್ನ ಮೊಟ್ಟೆಯಿಡಲು ಪ್ರಾರಂಭಿಸುವುದು ಈ ಕಾರ್ಯಕ್ಕೆ ಅನುಕೂಲವಾಗಿಯೇ ಇದೆ. ಹಾಗೇನಾದರೂ ಮೊಟ್ಟೆಗಳನ್ನು ಪೂರ್ಣ ತೆಗೆಯಲು ಸಾಧ್ಯವಿಲ್ಲದೆ ಅದರೊಡನೆ ತನ್ನ ಮೊಟ್ಟೆಗಳನ್ನಿಟ್ಟದ್ದಲ್ಲಿ, ಮರಿ ಹುಟ್ಟಿದೊಡನೇ ಇತರವನ್ನು ಕುಕ್ಕಿ ಸಾಯಿಸಿ ತಾನು ಚೆನ್ನಾಗಿ ಬೆಳೆಯಲು ಅನುಕೂಲ ಮಾಡಿಕೊಳ್ಳುತ್ತದೆ.

ಅನೇಕ ಪಕ್ಷಿಗಳು ನಿರ್ದಿಷ್ಟ ಸಂಖ್ಯೆಯ ಮೊಟ್ಟೆಗಳನ್ನು ಮಾತ್ರ ಒಂದು ಸಾರಿಗೆ ಕೊಡಬಲ್ಲವು. ಆ ಸಂಖ್ಯೆ ಪ್ರಭೇದಕ್ಕೆ ತಕ್ಕಂತಿರುತ್ತದೆ. ಮೊಟ್ಟೆಯನ್ನು ಗೂಡಿನಿಂದ ಕದ್ದಲ್ಲಿ ಅದು ಹೆಚ್ಚಾಗಿಡುವುದಿಲ್ಲ. ಆದರೆ ಹಲವಕ್ಕೆ ಅನಿರ್ದಿಷ್ಟತೆಯಿದ್ದು ತಮ್ಮ ಮನಸ್ಸಿಗೆ ತೃಪ್ತಿಯಾಗುವವರೆಗೆ ಇಡುತ್ತಲೇ ಇರುತ್ತವೆ. ಅವುಗಳಿಗೆ ತಮಗೆ ಸಾಕಷ್ಟು ಕಾಣಿಸಬೇಕು. ಆಗಲೇ ಮುಂದಿನ ಮೊಟ್ಟೆಯಿಡುವುದು ನಿಲ್ಲುವುದು. ಸಣ್ಣ ಹಕ್ಕಿಯೊಂದರ ಗೂಡಿನಿಂದ ದಿನವೂ ಮೊಟ್ಟೆ ಕದಿಯಲು ಪ್ರಾರಂಭಿಸಿದಾಗ, ಸಾಮಾನ್ಯವಾಗಿ ೫–೬ ಮೊಟ್ಟೆ ಮಾತ್ರವಿಡುವ ಆ ಹಕ್ಕಿ ೭೩ ದಿನಗಳಲ್ಲಿ ೭೧ ಮೊಟ್ಟೆಯಿಟ್ಟಿತೆಂದು ವರದಿಯಾಗಿದೆ. ಮೊಟ್ಟೆ ಸಂಖ್ಯೆಯಲ್ಲಿ ಸಾಕುಬಾತು ಮತ್ತು ಕೋಳಿಗಳು ದಾಖಲೆ ಸ್ಥಾಪಿಸಿವೆ. ಕೋಳಿ ಒಂದೇ ವರ್ಷದಲ್ಲಿ ೩೯೧ ಮೊಟ್ಟೆಯಿಡುತ್ತದೆ! ಬಾತೊಂದು ೩೬೫ ದಿನಗಳಲ್ಲಿ ೩೬೩ ಮೊಟ್ಟೆಗಳಿಟ್ಟ ದಾಖಲೆ ಇದೆ!

ಇದರಿಂದಲೇ ಕಾವಿಗೆ ಕೂರಲು ಆದಕ್ಕೆ ತೃಪ್ತಿಯಾಗಬೇಕು. ತೃಪ್ತಿ ಉಂಟಾಗುವುದು ಮೊಟ್ಟೆಯೊಡ್ಡನ್ನು ಕಂಡು, ಅಥವಾ ಅವುಗಳನ್ನು ತನ್ನ ರೆಕ್ಕೆಯಡಿ ಸೇರಿಸಿ ಸ್ಪರ್ಶಿಸಿ. ಹಲವು ಪ್ರಭೇದಗಳು ಮೊದಲು ಮೊಟ್ಟೆಯಿಟ್ಟ ದಿನದಿಂದಲೇ ಕಾವು ಕೂತು ದಿನವೂ ಮೊಟ್ಟೆಯ ಸಂಖ್ಯೆಯನ್ನು ಪೂರ್ಣವಾಗುವವರೆಗೆ ಹೆಚ್ಚಿಸುತ್ತಿರುತ್ತವೆ. ಕೆಲವು ಮೊಟ್ಟೆಯೊಡ್ಡು ಪೂರ್ಣವಾದ ಮೇಲೆ ಮಾತ್ರ ಈ ಕಾರ್ಯ ಪ್ರಾರಂಭಿಸುತ್ತವೆ. ಭ್ರೂಣ ಜೀವಂತವಿದ್ದರೂ ಮೊಟ್ಟೆಯ ಮೇಲೆ ಪಕ್ಷಿ ಕಾವಿಗೆ ಕೂತಲ್ಲಿ ಮಾತ್ರ, ಅಂದರೆ ಅದಕ್ಕೆ ಬೇಕಾದ ಶಾಖ ದೊರೆತೆಂದು ಮಾತ್ರ ವೃದ್ಧಿಯಾಗಲು ಪ್ರಾರಂಭಿಸಿ, ಮರಿಯಾಗಿ ಬೆಳೆಯುತ್ತದೆ. ಈ ಅವಧಿ ೧೧ರಿಂದ ೮೦ ದಿನಗಳವರೆಗೂ ಇರಬಹುದು. ಅಂಡದಿಂದ

ಹೊರಬೀಳುವ ಒಂದೆರಡು ದಿನ ಮುನ್ನವೇ ಮರಿ ಉಸಿರಾಡಲು ಪ್ರಾರಂಭಿಸಿ, ಚಿಪ್ಪಿನೊಳಗಿನ ಆಮ್ಲಜನಕವನ್ನು ಉಪಯೋಗಿಸಿಕೊಳ್ಳುತ್ತದೆ.



ಮರಿ ಉತ್ಪನ್ನ – ನಿಸ್ಸಹಾಯಕ ಮರಿ, ಪೂರ್ಣ ಬೆಳೆದ ಮರಿ

ಹಲವು ಪ್ರಭೇದಗಳು ತಮ್ಮ ಮೊಟ್ಟೆಗೆ ಅಪಾಯ ಸಂಭವಿಸಬಹುದಾದ ಭಯವಿದ್ದಾಗ ತಮ್ಮ ಕೊಕ್ಕಿನಲ್ಲಿ ಎತ್ತಿ ಸುರಕ್ಷಿತ ಸ್ಥಳಕ್ಕೆ ಬದಲಾಯಿಸುತ್ತವೆ. ಗುಂಪ್ಪಟಗಳು ಅಂತಹ ಚರ್ಯೆಯವು. ಹಲವು ಪಕ್ಷಿಗಳು ಮರಿಗಳನ್ನು ತಮ್ಮ ತೊಡೆಮಧ್ಯೆ ಒತ್ತಿಹಿಡಿದು ವರ್ಗಾಯಿಸುತ್ತವೆ. ದಪ್ಪ ಪಕ್ಷಿಗಳು ಗೂಡಿಗೆ ಇಳಿಯುವಾಗ ತಮ್ಮ ಚಲನೆ ವೇಗದಿಂದ ಮೊಟ್ಟೆಗಳನ್ನು ಅವುಗಳ ಸ್ಥಳದಿಂದ ಕೇವಲ ೫–೬ ಅಡಿ ದೂರ ಸ್ಥಳಾಂತರಿಸಿದರೂ, ಸ್ಥಳವನ್ನು ಗುರುತುಹಿಡಿಯಲಾರವು.

ಮರಿಗಳು ಮೊಟ್ಟೆಯ ಚಿಪ್ಪನ್ನು ಕುಕ್ಕಿ ಭೇದಿಸಿಕೊಂಡು ಬರಲು ಸುಲಭವಾಗು ವಂತೆ, ಚಿಪ್ಪಿನ ಬಹುಭಾಗವು ಬೆಳೆಯುವ ಮರಿಯ ಮೂಳೆಗಳ ರಚನೆಗಾಗಿ ಉಪಯುಕ್ತ ವಾಗಿ ತೆಳ್ಳಗಾಗಿರುತ್ತದೆ. ಪಕ್ಷಿಗಳ ಮೈಶಾಖ, ಸದಾ ಮೊಟ್ಟೆಗಳಿಗೆ ತಗಲುವಂತಿದ್ದಲ್ಲಿ ಮಾತ್ರ ಮರಿ ವೃದ್ಧಿಯಾಗಲು ಅನುಕೂಲ. ಪುಕ್ಕ ಶಾಖ ನಿರೋಧಕ. ಶಾಖ ಸರಿಯಾಗಿ ಮೊಟ್ಟೆಗೆ ತಗುಲಬೇಕಾದಲ್ಲಿ, ಹೊಟ್ಟೆ ನೇರವಾಗಿ ಮೊಟ್ಟೆಗಳಿಗೆ ತಗುಲುವಂತಿರಬೇಕು. ಇದರಿಂದಲೇ ಕಾವಿಗೆ ಬಂದಾಗ ಪಕ್ಷಿಗಳ ಹೊಟ್ಟೆಯ ಹತ್ತಿರ ಅಲ್ಲಲ್ಲಿ ಪುಕ್ಕ ಉದುರಿ, ಪಕ್ಷಿ ಕಾವಿಗೆ ಕೂತಾಗ ಆ ಜಾಗ ನೇರವಾಗಿ ಮೊಟ್ಟೆಗೆ ತಗುಲುವಂತೆ ಪುಕ್ಕಗಳನ್ನು ಕೆದರಿ ಕೊಂಡು ಕೂರುತ್ತವೆ. ಕಾವಿಗೆ ಕೂತಿರುವ ಪಕ್ಷಿ ಆಗಿಂದಾಗ್ಯೆ ಮೊಟ್ಟೆಗಳನ್ನು ತನ್ನ ಕೊಕ್ಕಿನಿಂದ ತಿರುವಿ ಇಟ್ಟು ಮೊಟ್ಟೆಗಳಿಗೆ ಎಲ್ಲಾ ಕಡೆಯಲ್ಲೂ ಸಮವಾಗಿ ಶಾಖ ಸಿಗು ವಂತೇರ್ಪಡಿಸಿಕೊಳ್ಳುತ್ತದೆ. ಹಲವು ಪಕ್ಷಿಗಳಲ್ಲಿ ಹೆಣ್ಣು, ಗಂಡು ಎರಡೂ ಭಾಗವಹಿಸು ವುದರಿಂದ ಆಹಾರಕ್ಕೆ ತೊಂದರೆಯಾಗುವುದಿಲ್ಲ. ಹೆಣ್ಣು ಮಾತ್ರ ಕೂರುವೆಡೆ ಹಲವು ಮರಿಯಾಗುವವರೆಗೂ ಅಲುಗಾಡದೆ ಕೂರಬಹುದು. ಕೆಲವು ೧/೨ ಗಂಟೆಗೊಮ್ಮೆ ಆಹಾರಕ್ಕಾಗಿ ೪-೫ ನಿಮಿಷ ವ್ಯಯಮಾಡುತ್ತವೆ.

ಇವುಗಳಲ್ಲಿ ಕುತೂಹಲಕಾರಿಯಾದುದ್ದು ಪೆಂಗ್ವಿನ್ (Pengvin) ಮತ್ತು ಆಸ್ಟ್ರೇಲಿಯಾದ ಮೇಲೀ ಕೋಳಿ. ಗಂಡು ಪೆಂಗ್ವಿನ್‌ಗಳು ಮೊದಲೇ ವಿವರಿಸಿರುವಂತೆ ಮರಿಮಾಡಲು ಸಹಾಯಕ. ಮೇಲೀ ಕೋಳಿಗಳು ಕಾವು ಕೂರುವುದಿಲ್ಲ. ಕಸಕಡ್ಡಿಗಳ ಶೇಖರಣೆಯಿಂದ ರಚಿತವಾದ ಅವುಗಳ ಗೂಡಿನಲ್ಲಿ ಅವುಗಳ ಕೊಳೆಯುವಿಕೆಯಿಂದ ಉತ್ಪನ್ನವಾಗುವ ಶಾಖವೇ ಮೊಟ್ಟೆ ಮರಿಯಾಗಲು ಸಹಾಯಕವಾಗುವಂತಾಗುತ್ತದೆ. ಮೊಟ್ಟೆಗಳನ್ನು ಅನೇಕ ಅಡಿ ಎತ್ತರ ಹಾಗೂ ಅಗಲದ ಕಸದ ರಾಶಿಯಲ್ಲಿಟ್ಟು ಅದರ ಮೇಲೆ ಮರಳು ಹರಡಿ ಒಳಗೆ ಶಾಖವಿರುವಂತೆ ಮಾಡುತ್ತದೆ. ಗೂಡಿನ ರಚನೆ ಶಾಖದ ವ್ಯವಸ್ಥೆಯೆಲ್ಲ ಗಂಡಿನದೇ. ಅದು ಮೊಟ್ಟೆಗೆ ಅಗತ್ಯವಾದ ಶಾಖ ಕಡಮೆಯಾದಲ್ಲಿ ಹೆಚ್ಚು ಮರಳಿನಿಂದ ಮುಚ್ಚಿ ಹೆಚ್ಚಾದಲ್ಲಿ ಅಲ್ಲಲ್ಲಿ ಗಾಳಿಯಾಡಲು ಕೆದಕಿಬಿಟ್ಟು ಶಾಖ ಒಂದೇಸಮನಾಗಿರುವಂತೆ ಮಾಡುತ್ತದೆ. ಅದರ ಕೊಕ್ಕು ಉಷ್ಣಮಾಪಕ ಯಂತ್ರದಂತೆ ಅದಕ್ಕೆ ಶಾಖ ಕಂಡುಹಿಡಿಯಲು ಸಹಾಯಕವಾಗಿದೆ. ಹೆಣ್ಣು ಅಲ್ಲಿಗೆ ಬರುವುದು ಮೊಟ್ಟೆ ಯಿಡಲು ಮಾತ್ರ. ವಾರಕ್ಕೆ ಒಂದರಂತೆ ಹೆಣ್ಣು ಅನೇಕ ತಿಂಗಳಕಾಲ ಮೊಟ್ಟೆ ಯಿಟ್ಟು ಪೂರ್ಣಗೊಳಿಸುತ್ತದೆ. ಮರಿಗಳೂ ಒಂದೇ ಸಲ ಉತ್ಪನ್ನವಾಗುವುದಿಲ್ಲ. ಅವು ಹೊರಬಂದಂತೆ ಆ ರಾಶಿಯಲ್ಲಿ ತೂರಿಕೊಂಡು ಹೊರಬೀಳುತ್ತವೆ. ಮರಿಗಳನ್ನು ಗಂಡು ಹೆಣ್ಣುಗಳು ಸಲಹುವುದೇ ಇಲ್ಲ. ಹೊರಬಂದಾಗಿನಿಂದ ತಾವೇ ತಮ್ಮ ಆಹಾರ ಹುಡುಕಿ ಜೀವಿಸಬೇಕು !

ಭಾರತದಲ್ಲಿನ ಪಕ್ಷಿಗಳಲ್ಲೂ ೪ ಕುತೂಹಲಕಾರೀ ಮರಿ ಮಾಡುವ ವಿಧಾನಗಳಿವೆ.

೧. ಹಾರನ್ ಬಿಲ್ ಅಥವಾ ಗೊಂಡ ಪಕ್ಷಿ

ಪರ್ವಕಾಲದಲ್ಲಿ ಸಂಭೋಗಾನಂತರ ಹೆಣ್ಣುಪಕ್ಷಿ ತನ್ನ ಹಳೆಯ ಗೂಡು ಅಥವಾ ಇತರ ಮರ ಪೊಟರೆಯೊಳಹೊಕ್ಕು, ತನ್ನ ಹಿಕ್ಕೆಯನ್ನೇ ತನ್ನ ಅಗಲ ಕೊಕ್ಕಿನಿಂದ ಸವರಿ ಹೊರ ರಂಧ್ರವನ್ನು ಮುಚ್ಚುತ್ತದೆ. ಕೆಲಸಮಯದಲ್ಲಿ ಗಂಡು ಈ ಕಾರ್ಯದಲ್ಲಿ ನೆರವಾಗಿ ಮಣ್ಣು ತಂದು ಒದಗಿಸುತ್ತದೆ, ಮತ್ತು ಮಣ್ಣು ಹಿಕ್ಕೆ ಕಲಸಿ ಗಾರೆಯಂತೆ ತೂತಿನ ಬಾಯಿಗೆ ಮೆತ್ತಿ ಮುಚ್ಚುತ್ತದೆ. ಮಧ್ಯೆ ಸಣ್ಣ ರಂಧ್ರ ಮಾತ್ರ ಬಿಟ್ಟಿದ್ದು, ಗಂಡು ಆಹಾರ ತಂದು ಹೆಣ್ಣಿನ ಕೊಕ್ಕಿನೊಳಗಿಡಲು ಮಾತ್ರ ಅವಕಾಶವಿರುತ್ತದೆ. ಪೊಟರೆಯಲ್ಲಿ ಹೆಣ್ಣು ಮೊಟ್ಟೆಯಿಟ್ಟು ಮರಿಮಾಡತೊಡಗುತ್ತದೆ. ಮೊಟ್ಟೆಯೊಡೆದು ಮರಿಗಳು (೩–೪) ೨-೩ ವಾರವಾಗುವವರೆಗೆ ತಾಯಿ ಹೊರಬರುವುದಿಲ್ಲ. ಆ ಕಾಲದಲ್ಲಿ ಗಂಡು ಸತತವಾಗಿ ದುಡಿದು ಹೆಣ್ಣಿಗೆ ಸಾಕಷ್ಟು ಆಹಾರ ಒದಗಿಸುತ್ತಿದ್ದು ತನಗೆ ಸಾಕಷ್ಟು ಆಹಾರ ಹೊಂಚಿಕೊಳ್ಳದೆ ಕೃಶವಾಗುತ್ತದೆ. ಆದರೆ ಹೆಣ್ಣು ಮಾತ್ರ ಚೆನ್ನಾಗಿ ಕೊಬ್ಬುತ್ತದೆ. ಮರಿಗಳಾದ ೨–೩ ವಾರಗಳಲ್ಲಿ ಹೆಣ್ಣು ಮಣ್ಣುಗೋಡೆಯನ್ನು ಕುಕ್ಕಿ ಒಡೆದು ಹೊರಬೀಳುತ್ತದೆ. ನಂತರ ಎರಡೂ ಪುನಃ ಪೊಟರೆ ಬಾಯನ್ನು ಅರ್ಧ ಮುಚ್ಚಿ ಮರಿಗಳಿಗೆ ಬೆಳೆಯುವವರೆಗೆ ಆಹಾರ ಒದಗಿಸುತ್ತವೆ. ಕಾವು ಕೂತಿರುವ ಹೆಣ್ಣಿಗೆ ಮತ್ತು ಅಸಹಾಯಕ ಮರಿಗಳಿಗೆ ಶತ್ರುಗಳಿಂದ ತೊಂದರೆಯಾಗದಂತೆ ಮಾಡಿದ ಏರ್ಪಾಟಿದು.

೨. ನೇಯ್ಗೆ ಹಕ್ಕಿ

ಇವು ಬಹು ಪತ್ನೀಯುತದವು. ಮಳೆಗಾಲದ ಮುನ್ನ ಗಂಡು ಪಕ್ಷಿ ನೀಳ ಗೂಡು ರಚಿಸಲು ಪ್ರಾರಂಭಿಸುತ್ತದೆ. ಗೂಡಿನ ರಚನೆಯೆಲ್ಲಾ ಪೂರ್ಣವಾಗಿ ಗಂಡಿನ ಕೆಲಸವೇ. ನೇತಾಡುವ ಈ ಗೂಡುಗಳು ಅರ್ಧ ರಚಿತವಾಗಿ ಮರಿಕೋಣೆ ರಚನೆಯಾಗುತ್ತಿರುವಾಗ ಅದು ಟೊಪ್ಪಿಗೆಯಾಕಾರವಾಗಿರುತ್ತದೆ. ಆಗ ಇದ್ದಕ್ಕಿದ್ದಂತೆ ಹೆಣ್ಣು ಪಕ್ಷಿಗಳ ಗುಂಪು ಅಲ್ಲಿಗೆ ಬಂದು ಗೂಡುಗಳನ್ನು ಪರೀಕ್ಷಿಸಲು ಆರಂಭಿಸುತ್ತದೆ. ಅವು ಗೂಡಿನಿಂದ ಗೂಡಿಗೆ ಹಾರಾಡಿ ಎಲ್ಲವನ್ನೂ ಪರಿಶೀಲಿಸುತ್ತವೆ. ಗಂಡಿನ ಮೋಹಕ ಧ್ವನಿ ನಡತೆಗಳ ಕಡೆ ಗಮನವೀಯುವುದೇ ಇಲ್ಲ. ಹೆಣ್ಣಿಗೆ ಯಾವುದಾದರೂ ಗೂಡು ಸರಿಹೋದಲ್ಲಿ ಅದು ಗೂಡನ್ನಾಕ್ರಮಿಸಿ ಕುಳಿತುಕೊಳ್ಳುತ್ತದೆ. ಅಂದಿನಿಂದಲೇ ಅವು ದಂಪತಿಗಳಾಗಿ ಗಂಡು ಬೇಗ ಗೂಡನ್ನು ಪೂರ್ತಿ ಮಾಡಲು ಪ್ರಯತ್ನಿಸುತ್ತದೆ. ಹೆಣ್ಣು ಮೊಟ್ಟೆಯಿಟ್ಟು ಕುಳಿತೊಡನೆಯೇ, ಗಂಡು ಗೂಡನ್ನು ಬಿಟ್ಟು ಇನ್ನೊಂದು ಗೂಡನ್ನು ರಚಿಸಲು ಪ್ರಾರಂಬಿಸುತ್ತದೆ. ಹೀಗೆ ಒಂದೇ ಪರ್ವದಲ್ಲಿ ಅವು ೩–೪ ಪತ್ನಿಯರನ್ನು ಹೊಂದಿ ದೊಡ್ಡ ಸಂಸಾರ ಬೆಳೆಸಲು ಕಾರಣವಾಗಬಲ್ಲವು.

೩. ಬಸ್ಟರ್ಡ್ ಗೀಜಗ (Bustard Grouse)

ಇವುಗಳಲ್ಲಿ ಹೆಣ್ಣು ದೊಡ್ಡ ಗಾತ್ರದವು! ಗಂಡನನ್ನು ಪಡೆಯಲು ಅದೇ ಪ್ರಯತ್ನಿಸಬೇಕು. ಅದಕ್ಕೇ ಹೆಚ್ಚಿನ ಬಣ್ಣವಿರುವುದು. ಗಂಡು ಸಣ್ಣಗಿದ್ದು ಹೆಣ್ಣುಗಳ ನರ್ತನದಿಂದ ಆಕರ್ಷಿತವಾಗಿ ಬರುತ್ತವೆ. ಹೆಣ್ಣು ತನಗಿಷ್ಟವಾದ ವರನಿಗಾಗಿ ಇತರ ಹೆಣ್ಣು ಪಕ್ಷಿಗಳೊಡನೆ ಜಗಳವಾಡಲೂ ಸಿದ್ಧ! ಸಂಭೋಗವಾಗಿ ಹೆಣ್ಣು ಗೂಡಿನಲ್ಲಿ ಮೊಟ್ಟೆ ಪೂರ್ಣವಾಗಿ ಇಟ್ಟೊಡನೆ, ಗಂಡನಿಗೆ ಅದನ್ನೊಪ್ಪಿಸಿ ತಾನು ಇನ್ನೊಬ್ಬ ಗಂಡನನ್ನು ಹುಡುಕಿಕೊಂಡು ಹೋಗುತ್ತದೆ. ಗಂಡು ಪಾಪ, ಮೊಟ್ಟೆಗಳ ಮೇಲೆ ಕಾವು ಕೂತು, ಮರಿ ಮಾಡಿ, ಮರಿಗಳನ್ನು ಸಾಕುವ ಹೊಣೆಯನ್ನೂ ತಾನೇ ಹೊರಬೇಕಾಗುತ್ತದೆ. ಜಕಾನಾ ಮತ್ತು ಒಂದು ಬಗೆಯ ಸ್ನೈಪ್ ಇದೇ ರೀತಿ ವರ್ತಿಸುತ್ತವೆ.

೪. ಕೋಗಿಲೆ

ಮನಮೋಹಕ ಇಂಚರದಿಂದ ಜನತೆಯನ್ನು ಮುಗ್ಧಗೊಳಿಸುವ ಕೋಗಿಲೆ ವಿನಾಶಕಾರಕ ಕ್ರೂರ ಪಕ್ಷಿ! ಅದು ಗೂಡು ಕಟ್ಟುವುದೇ ಇಲ್ಲ. ಇತರ ಪಕ್ಷಿಗಳ ಗೂಡನ್ನು ಉಪಯೋಗಿಸಿಕೊಂಡು, ಅದರಲ್ಲಿ ತನ್ನ ಮೊಟ್ಟೆಯಿಟ್ಟು ಇತರರು ತನ್ನ ಮರಿಗಳನ್ನು ಸಲಹಲು ಏರ್ಪಡಿಸುತ್ತದೆ. ಸಾಮಾನ್ಯವಾಗಿ ಅವು ಕಾಗೆಗಳ ಗೂಡನ್ನೇ ಅರಿಸುವುದು ವಾಡಿಕೆ. ಮೊಟ್ಟೆಗಳ ಗಾತ್ರ ಮತ್ತು ಬಣ್ಣ ಒಂದೇ ವಿಧವಾಗಿರುವುದರಿಂದ ಇದು ಸಾಧ್ಯವಾಗುತ್ತಿದೆ. ಇವುಗಳಲ್ಲಿ ಹಲವು ವಿಧ ನೇಯ್ಗೆ ಪಕ್ಷಿಯ ಗೂಡಿನಲ್ಲಿ ಮಾತ್ರ ಮೊಟ್ಟೆಯಿಡುವುದುಂಟು. ಗೂಡಿನಲ್ಲಿನ ಮೊಟ್ಟೆಗಳನ್ನು ಹೊರತಳ್ಳಿ ತಾನೂ ಮೊಟ್ಟೆಯಿಡಬಹುದು. ಮರಿಗಳೂ ಕಾಗೆಯ ಮರಿಗಳನ್ನು ಕುಕ್ಕಿ ಸಾಯಿಸಿ ಅಥವಾ ಗೂಡಿನಿಂದ ಹೊರತಳ್ಳಿ ತಾವು ಬೆಳೆಯಲು ಅನುಕೂಲವೇರ್ಪಡಿಸಿಕೊಳ್ಳುತ್ತವೆ. ವೃದ್ಧಿಯಾದ ಮರಿಗಳು ಮೊಟ್ಟೆಯ ಚಿಪ್ಪನ್ನೊಡೆದು ಹೊರಬೀಳಲು ಅನುಕೂಲವಾಗುವಂತೆ ಮರಿಗಳ ಕೊಕ್ಕುಗಳಲ್ಲಿ ಒಂದು ಮೊಟ್ಟೆ ಹಲ್ಲು ಇದೆ. ಚಿಪ್ಪನ್ನು ಪೂರ್ಣ ಕುಕ್ಕಿ ಒಡೆಯಲು ಕೆಲವು ಗಂಟೆಗಳಿಂದ ಹಲವು ದಿನಗಳೇ ಬೇಕಾಗಬಹುದು. ಮರಿ ಹೊರಬರುವ ಒಂದೆರಡು ದಿನ ಮುಂಚೆಯೇ ಅವು ಜೀವಂತವಾಗಿ ಚಿಲಿಪಿಲಿಗುಟ್ಟುವುದು ಕೇಳಿಸಬಹುದು. ಮರಿ ಹೊರಬಂದೊಡನೆ ತಾಯಿ ಚಿಪ್ಪನ್ನು ಪುಡಿ ಮಾಡಿ ನುಂಗಬಹುದು. ಅಥವಾ ಗೂಡಿನಿಂದ ದೂರ ಕೊಂಡೊಯ್ದು ಹಾಕಬಹುದು.

ಮೊಟ್ಟೆಯೊಡೆದು ಹೊರಬಂದ ಮರಿಗಳು ಎರಡು ವಿಧವಿರುತ್ತವೆ: ನಿಸ್ಸಹಾಯಕ ಮತ್ತು ಸ್ವಾವಲಂಬಿ. ಹಲವು ಪಕ್ಷಿ ಪ್ರಭೇದಗಳ ಮರಿ ಹೊರಬಿದ್ದಾಗ ಕೂದಲಿಲ್ಲದೆ ನಗ್ನವಾಗಿದ್ದು, ಕಣ್ಣು ಕಾಣಿಸದಿರುತ್ತದೆ. ಅವುಗಳಿಗೆ ಆಹಾರಕ್ಕಾಗಿ ಬಾಯಿ ತೆರೆದು ಕೂಗಲೂ ಮತ್ತು ಹಿಕ್ಕೆ ಹಾಕಲೂ ಮಾತ್ರ ತಿಳಿದಿರುತ್ತದೆ, ಇವುಗಳನ್ನು ಬಹು

ಕಾಲ ತಂದೆ ತಾಯಿಗಳು ಆಹಾರ ಒದಗಿಸಿ ಸಲಹಬೇಕು. ಇವು ಮೊಟ್ಟೆಯಿಂದ ಬೇಗ ಹೊರಬೀಳುತ್ತವೆ. ಅಲ್ಲದೆ ಮೊಟ್ಟೆಗಳೂ ಸಣ್ಣ ಗಾತ್ರದವಾಗಿರುತ್ತವೆ. ಆದರೆ ಕೆಲವು ಪ್ರಭೇದಗಳಲ್ಲಿ ಮರಿಗಳು ಹೊರಬೀಳುವಾಗಲೇ ಪೂರ್ಣ ಬೆಳೆದಿದ್ದು ಯಾವ ಸಹಾಯವೂ ಇಲ್ಲದೆ ಜೀವಿಸಲು ಶಕ್ತವಾಗಿರುತ್ತವೆ. ಇಂತಹ ಪ್ರಭೇದಗಳ ಮೊಟ್ಟೆ ದಪ್ಪ ವಾಗಿದ್ದು ಮರಿ ಹೆಚ್ಚು ಕಾಲ ಮೊಟ್ಟೆಯಲ್ಲೇ ವೃದ್ಧಿಯಾಗುತ್ತದೆ.

ನಿಸ್ಸಹಾಯಕ ಪಕ್ಷಿಗಳು ಬೇಗ ಬೆಳೆಯಲಾರಂಭಿಸುತ್ತವೆ. ಇದಕ್ಕಾಗಿ ಹೆಚ್ಚಿನ ಆಹಾರ ಬೇಕಾಗಿದ್ದು ಅದನ್ನು ಒದಗಿಸುವುದೇ ತಂದೆ ತಾಯಿಗಳ ಮುಖ್ಯ ಕರ್ತವ್ಯ ವಾಗುತ್ತದೆ. ಹುಟ್ಟಿದಾಗಿನ ತೂಕ ಕೇವಲ ೩–೪ ವಾರಗಳಲ್ಲಿ ಅದರ ೫೦ರಷ್ಟು ಹೆಚ್ಚಾಗಬಲ್ಲದು. ತಂದೆ ತಾಯಿಗಳು ಒಂದು ದಿನದಲ್ಲಿ ೫೦೦ರಿಂದ ೯೦೦ ಸಲ ಗೂಡಿಗೆ ಆಹಾರ ತಂದು ಒದಗಿಸಿದ ದಾಖಲೆಯಾಗಿದೆ ! ದೊಡ್ಡ ಮಾಂಸಾಹಾರಿಗಳ ಮರಿಗಳೂ ಇದೇ ರೀತಿಯಲ್ಲಿದ್ದರೂ ದೊಡ್ಡ ಮೃಗಗಳನ್ನು ಕೊಂದು ತರುವುದರಿಂದ ಹೆಚ್ಚಿನ ಸಲ ಅವು ಹಾರಾಡಬೇಕಾಗುವುದಿಲ್ಲ.

ಕೊಂಬೆಯಮೇಲೆ ಕುಳಿತು ವಿಶ್ರಾಂತಿ ಹೊಂದುವ ಪಕ್ಷಿಗಳು ಸಾಮಾನ್ಯವಾಗಿ ತಮ್ಮ ಕೊಕ್ಕಿನಲ್ಲಿರುವ ತಿನಿಸನ್ನು ಮರಿಗಳ ಕುತ್ತಿಗೆಯೊಳಕ್ಕೆ ನೂಕಿಟ್ಟು ನುಂಗಿಸುವುದು. ಹಲವು ಸಮುದ್ರ ಪಕ್ಷಿಗಳು ಆಹಾರ ದೊರೆತಾಗ ಅವುಗಳನ್ನು ಯಥೇಚ್ಛವಾಗಿ ನುಂಗು ತ್ತವೆ. ಮೀನೇ ಅವುಗಳಿಗೆ ಮುಖ್ಯಾಹಾರವಾದ್ದರಿಂದ ಹೆಚ್ಚಿನ ಅಭಾವವಿರುವುದಿಲ್ಲ. ಅರ್ಧ ಜೀರ್ಣವಾಗಿರುವ ಆ ಆಹಾರವನ್ನು ಗೂಡಿನಲ್ಲಿ ಕಕ್ಕುತ್ತವೆ. ಇದು ಮರಿಗಳಿಗೆ ಸುಲಭವಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಪೆಲಿಕನ್ ಪಕ್ಷಿಗಳಲ್ಲಿ ತಂದೆ ತಾಯಿಯರ ತೆರೆದ ಬಾಯೊಳಗೆ ಮರಿ ಕೊಕ್ಕು ಚಾಚಿ ಕಂಠದೊಳಗಿನಿಂದ ಅರ್ಧ ಜೀರ್ಣ ವಾದ ಆಹಾರ ಹೊರತೆಗೆದು ನುಂಗುತ್ತವೆ. ಹಲವು ಕೊಕ್ಕರೆಗಳು, ಮರಿಯ ಕೊಕ್ಕನ್ನು ತೆರೆದು ಹಿಡಿದು ತಾವು ಕಕ್ಕುವ ಆಹಾರವನ್ನು ಅದರ ಬಾಯೊಳಗೆ ತಮ್ಮ ನಾಲಗೆ ಯಿಂದ ತುಂಬುತ್ತವೆ. ಮರಿಗಳು ಯಾವ ಗುಂಪಿಗೆ ಸೇರಿದವೇ ಆಗಿರಲಿ, ಅವುಗಳ ಬಾಳು ಮೊದಲನೆಯ ವರ್ಷ ಕಷ್ಟವಾಗುತ್ತದೆ. ಶತ್ರುಗಳಿಂದ ತಪ್ಪಿಸಿಕೊಂಡು, ವಾತಾವರಣಕ್ಕೆ ಹೊಂದಿ, ಆಹಾರ ಹೊಂಚಿ ಬದುಕಲು ಕಲಿಯುವವರೆಗೆ ಅನೇಕ ಕಷ್ಟಗಳೇರ್ಪಡುತ್ತದೆ. ಅನೇಕವು ಬದುಕುವುದಿಲ್ಲ. ಮೊಟ್ಟೆಯೊಡೆದು ಮರಿಯಾದ ಎಲ್ಲಾ ಹಕ್ಕಿಗಳೂ ಬದುಕಿದಲ್ಲಿ ಪ್ರಪಂಚದಲ್ಲಿ ಆಹಾರಾಭಾವ ಒಂದು ವರ್ಷದಲ್ಲೇ ಅತಿ ಹೆಚ್ಚಾಗಿ ಎಲ್ಲಾ ಪ್ರಾಣಿಗಳಿಗೂ ತೊಂದರೆಯಾಗಬಹುದು. ಹಲವು ಪಾರಿವಾಳಗಳಲ್ಲಿ ಅದರ ತಿನಿಸು ಚೀಲದ ಬಳಿ ಹಾಲಿನಂತಹ ದ್ರವ ಸೃಷ್ಟಿಯಾಗಿ, ಅದನ್ನು ಮರಿ ಹೀರಿ ಬೆಳೆಯುತ್ತದೆ.

ರೋಗ ಬಾರದಂತೆ ಗೂಡನ್ನು ಸ್ವಚ್ಛವಾಗಿಡುವುದೂ ಪೋಷಕರ ಕೆಲಸ. ಮರಿಗಳ ಹಿಕ್ಕೆ ಅಲ್ಲೆ ಸೇರಿ ನಾತವಾದರೆ ಶತ್ರುಗಳಿಗೆ ಅವುಗಳ ಇರವು ಸುಲಭವಾಗಿ ದೊರಕುತ್ತದೆ. ಅದರಿಂದಲೇ ಸಾಧ್ಯವಾದಷ್ಟು ಹಿಕ್ಕೆ ಮತ್ತು ಉಳಿದ ಮಾಂಸ,

ಮೊಳೆ ಮಡುಂತಾದುವನ್ನು ಪೋಷಕ ತಂದೆ ತಾಯಿಗಳು ಗೂಡಿನಿಂದ ದೂರ ಕೊಂಡೊಯ್ಯುತ್ತವೆ. ಹಲವು ಪಕ್ಷಿಗಳು ಮಾತ್ರ ಅತಿ ಕೊಳಕು. ಅದರ ಗೂಡು ದುರ್ನಾತದಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಸಣ್ಣ ಮರಿಗಳ ಹಿಕ್ಕೆ ಒಂದು ತೆಳು ಪೊರೆಯಿಂದಾವೃತವಾಗಿ ಸಣ್ಣ ಪೊಟ್ಟಣಗಳಂತೆ ಹೊರಬೀಳುತ್ತವೆ. ಪೋಷಕರು ಅದನ್ನು ಸುಲಭವಾಗಿ ದೂರ ಸಾಗಿಸಿ ಬಿಸುಡಲು ಇದರಿಂದ ಅನುಕೂಲ.

ಆಹಾರ ಹೊಂಚಾಣಿಕೆಯಲ್ಲಿ ಮಾತ್ರವೇ ಅಲ್ಲದೆ ಅವುಗಳ ಮುಂದಿನ ಬೆಳವಣಿಗೆ ಯಲ್ಲೂ ಪಕ್ಷಿಗಳು ತೀವ್ರ ಆಸಕ್ತಿ ತೋರುತ್ತವೆ. ಮರಿ ಜನಿಸಿದಾಗ ಅದರ ಮೈ ತೇವವಾಗಿದ್ದು, ತಣ್ಣಗಿರುತ್ತದೆ. ಅದನ್ನು ಕೂಡಲೇ ಪೋಷಕರು ರೆಕ್ಕೆಯಡಿ ಸೇರಿಸಿ ಕಾವು ಕೊಟ್ಟು ಚೈತನ್ಯ ಬರಲು ಸಹಾಯಕರಾಗುತ್ತಾರೆ. ಈ ಆಶ್ರಯ ೨–೯ ಗಂಟೆ ಯಿಂದ ೨೦–೨೫ ದಿನಗಳವರೆಗಾಗಬಹುದು. ಮುಂದೆ ಮರಿಗಳು ಬಲಿತು ತಮ್ಮ ಆಹಾರವನ್ನು ಹೊಂಚಿಕೊಳ್ಳಲು ಶಕ್ತವಾಗುವವರೆಗೂ, ಅದು ಎಚ್ಚರಿಕೆ ವಹಿಸಿ ಜೀವನ ಪಥದ ವಿವಿಧ ಅಂಶದಲ್ಲಿ ತರಬೇತಿ ಕೊಟ್ಟು ಕಳುಹಿಸುತ್ತದೆ. ಮರಿಗಳು ತಮ್ಮ ರಕ್ಷಣೆಯಲ್ಲಿರುವಾಗ ಅವುಗಳನ್ನು ಕಾಪಾಡಲು ವಿವಿಧ ಮಾರ್ಗವನ್ನನುಸರಿಸು ವವಲ್ಲದೆ, ಶತ್ರುಗಳೊಡನೆ ಹೋರಾಡಲೂ ಸಿದ್ಧವಿರುತ್ತವೆ.

ಪಕ್ಷಿಜೀವನದ ಅಂತರ, ಆಹಾರ ವಾಯುಗುಣ ಮತ್ತು ಶತ್ರುಗಳ ಸಂಖ್ಯೆಯನ್ನು ಹೊಂದಿಕೊಂಡಿದೆ. ನೈಸರ್ಗಿಕ ವಾತಾವರಣದಲ್ಲಿ ವಿವಿಧ ಪಕ್ಷಿ ಪ್ರಭೇದಗಳ ಜೀವನ ಅಂತರವನ್ನು ಕಂಡುಹಿಡಿಯುವುದು ಅಸಾಧ್ಯ. ನಮಗೆ ಈಗಿರುವ ತಿಳುವಳಿಕೆ ಸೆರೆವಾಸ ದಲ್ಲಿ ಬದುಕಿರುವ ಪಕ್ಷಿಗಳಿಂದ ದೊರೆತದ್ದು. ಶತ್ರುಗಳ ಬಾಧೆಯಿಲ್ಲದೆ, ಆಹಾರ ಔಷಧೋಪಚಾರಗಳ ಸಹಾಯ ಪಡೆದ ಈ ಪಕ್ಷಿಗಳು ದೀರ್ಘಕಾಲ ಬದುಕುವುದು ಆಶ್ಚರ್ಯವೇನಲ್ಲ. ಇದು ಪ್ರತಿ ಜಾತಿ ಅಥವಾ ಪ್ರಭೇದ ಬದುಕಿರಬಹುದಾದ ಅಂತಿಮ ವಯಸ್ಸನ್ನು ಸೂಚಿಸುತ್ತವೆ. ಒಂದು ಕುಟುಂಬಕ್ಕೆ ಸೇರಿದ ಪಕ್ಷಿಗಳಲ್ಲಿ ದಪ್ಪಗಾತ್ರ ದವು ದೀರ್ಘಕಾಲ ಬದುಕುತ್ತವೆ. ಸಣ್ಣಗಾತ್ರದವು ಬೇಗ ಸಾಯಬಲ್ಲವು. ವಿವಿಧ ಕುಟುಂಬಗಳ ಪ್ರಭೇದಗಳಿಗೆ ಈ ತತ್ವ ಅನ್ವಯಿಸುವುದಿಲ್ಲ. ಉಸ್ತ್ರ ಪಕ್ಷಿಗಳು ೪೦–೪೫ ವರ್ಷ ಬದುಕಿವೆ. ಹದ್ದಿನ ಜಾತಿಗಳು ೫೦–೬೦ ವರ್ಷ ಬದುಕಬಲ್ಲವು. ಗುಬ್ಬಚ್ಚಿ ಗಾತ್ರದ, ಕೊಂಬೆಗಳ ಮೇಲೆ ವಿಶ್ರಮಿಸುವ ಹಕ್ಕಿಗಳು ೨೫–೩೦ ವರ್ಷವಿರಬಲ್ಲವು. ರಣಹದ್ದು ೫೨ ವರ್ಷ, ಗೂಬೆ ೬೮ ವರ್ಷ, ಪಾರಿವಾಳಗಳು ೨೦ ರಿಂದ ೩೪ ವರ್ಷ ಬದುಕಿದ್ದ ದಾಖಲೆಗಳಿವೆ. ನೈಸರ್ಗಿಕವಾಗಿ ಗಲ್‌ಗಳು ೨೮ವರ್ಷ, ಓರಿಯೋಲ್ ೧೦ ವರ್ಷ, ಬಾತುಗಳು ೧೫ ವರ್ಷ ಮತ್ತು ಕೊಕ್ಕರೆಗಳು ೧೬–೧೮ ವರ್ಷ ಬದುಕಿರು ವುದನ್ನು ಮರಿಗಳ ಕಾಲಿಗೆ ಬಳೆಹಾಕಿಬಿಟ್ಟು ಅರಿಯಲಾಗಿದೆ. ಕಾಗೆ ಚಿರಂಜೀವಿ ಯೆಂಬುದು ಸುಳ್ಳು. ೨೦–೨೫ ವರ್ಷಗಳಿರಬಲ್ಲದು.

— ೬ —

ಪಕ್ಷಿಗಳ ಜೀವನದಲ್ಲಿ ಅವುಗಳಿಗಿರುವ ಹಾರುವ ಶಕ್ತಿ ಅವುಗಳ ಜೀವ ಸಹಾಯಕವೆಂದೇ ತಿಳಿಯಬೇಕು. ಋತುಧರ್ಮವನ್ನನುಸರಿಸಿ ಅವು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವುದು ಆ ಜಾತಿಯ ಪಲವು ಪ್ರಭೇದಗಳ ವಿಶೇಷ ಲಕ್ಷಣ. ಇದು ಆಹಾರಕ್ಕಾಗಿ ಅಥವಾ ಸಂತಾನಾಭಿವೃದ್ಧಿಗಾಗಿರಬಹುದು. ಈ ಚಲನೆ ಸಾಮಾನ್ಯವಾಗಿ ಎಲ್ಲೆಲ್ಲೂ ಕಂಡುಬರುವುದು. ಚಳಿಗಾಲ ಬಂದಾಗ ಪಕ್ಷಿಗಳು ಬೆಚ್ಚಗಿನ ಪ್ರದೇಶದೆಡೆ ವಲಸೆ ಹೋಗುವುವು.

ಬಹು ಹಿಂದಿನ ಕಾಲದಿಂದಲೂ ಈ ವಿಚಿತ್ರ ನಡವಳಿಕೆ ಎಲ್ಲರ ಗಮನ ಸೆಳೆದಿದೆ. ಬೈಬಲ್ಲಿನಲ್ಲೂ ಇದರ ಉಲ್ಲೇಖವಿದೆ. ಹಲವರು ಹಠಾತ್ತನೆ ಪಕ್ಷಿ ಸಂಖ್ಯೆ ಕಡಮೆಯಾಗುವುದನ್ನು ಕಂಡು ಬಹುಶಃ ಅವು ದೀರ್ಘ ನಿದ್ರೆ ಹೊಂದುವವೆಂದು ಊಹಿಸಿದ್ದರು. ಹಲವು ಸಣ್ಣ ಪಕ್ಷಿಗಳು ತಮ್ಮ ದೇಹ ಚಲನವನ್ನು ತಾತ್ಕಾಲಿಕವಾಗಿ ತಟಸ್ಥವಾಗಿಸಿ, ಚಳಿಗಾಲ ಕಳೆಯುವುದೇ ಇಂತಹ ಊಹೆಗೆ ಕಾರಣವಾಗಿತ್ತು. ಆ ಸಮಯದಲ್ಲಿ ಅವುಗಳ ಮೈ ಉಷ್ಣಾಂಶ ಬಹಳ ಕಡಮೆಯಾಗಿ, ಸತ್ತಂತಿರುತ್ತದೆ. ಬೆಚ್ಚಗಿನ ವಾತಾವರಣ ಪ್ರಾರಂಭವಾದಾಗಲೇ ಅವು ಪುನಃ ಚೈತನ್ಯ ಹೊಂದಿ ಎಂದಿನಂತಾಗುತ್ತವೆ. ಆದರೆ ಪಕ್ಷಿಗಳಲ್ಲಿ ಈ ಮಾರ್ಗವನ್ನನುಸರಿಸುವ ಪ್ರಭೇದಗಳು ಬಹು ಕಡಮೆ.

ವಲಸೆ ಹೋಗುವಿಕೆ ಪಕ್ಷಿ ಜೀವನದಲ್ಲಿ ಒಂದು ಸಾಹಸಮಯ ಹಾಗೂ ಗಂಡಾಂತರ ಘಟನೆ. ಲಕ್ಷಾಂತರ ಪಕ್ಷಿಗಳು ಗುರಿಮುಟ್ಟುವುದಿಲ್ಲ. ಹವಾಮಾನದ ಬದಲಾವಣೆಗಳನ್ನು ಮೊದಲೇ ಕಂಡುಕೊಳ್ಳುವ ಶಕ್ತಿ ಅವುಗಳಿಗಿಲ್ಲ. ವಲಸೆ ಹೊರಡುವುದು ಹೊರಡುವಾಗಿನ ಸ್ಥಿತಿಗತಿಗಳನ್ನನುಸರಿಸಿ. ಆದರೆ ದಾರಿ ಸುಗಮವಾಗಿರುವುದಿಲ್ಲ. ಬಿರುಗಾಳಿಗಳ ಹೊಡೆತಕ್ಕೆ ಸಿಲುಕಿ ಬಹುದೂರ ನೂಕಲ್ಪಟ್ಟು ಅವು ಸೇರಲು ಸಾಧ್ಯವಿಲ್ಲದೆ ನಾಶಹೊಂದಬಹುದು. ಮಂಜು ಮುಂತಾದುವು ಅವುಗಳ ದಿಕ್ಸೂಚನೆಯನ್ನು ಬದಲಾಯಿಸುತ್ತವೆ. ಅಲ್ಲದೆ ಮಾನವ ಸೃಷ್ಟಿ ತೊಡಕುಗಳೂ ಅವುಗಳಿಗೆ ಅನೇಕವಿವೆ. ಪಾಶ್ಚಾತ್ಯ ದೇಶಗಳಲ್ಲಿ ಟೆಲಿವಿಷನ್ ಶಿಖರಗಳೂ, ವಿಮಾನ ದ್ವೀಪಗಳೂ, ಅವುಗಳಿಗೆ ಮಂಜು ಕವಿದಾಗ ಕಾಣದಾಗಿ, ಅಲ್ಲಿಗೆ ಅವು ಡಿಕ್ಕಿ ಹೊಡೆದು ಸಾವಿರಾರು ಸಂಖ್ಯೆಯಲ್ಲಿ ಸಾಯುತ್ತವೆ. ಒಂದೇ ರಾತ್ರೆ ಅಮೆರಿಕಾದಲ್ಲಿ ೨೦–೨೫ ಸಾವಿರ ವಲಸೆ ಹೋಗುತ್ತಿದ್ದ ಸಣ್ಣ ಪಕ್ಷಿಗಳು ಈ ರೀತಿಯಲ್ಲಿ ನಾಶ ಹೊಂದಿದ್ದು ವರದಿಯಾಗಿದೆ. ಕೊರೆಯುವ ಚಳಿಗಾಳಿಯೂ ಕೆಲವೊಮ್ಮೆ ಲಕ್ಷಾಂತರ ಪಕ್ಷಿಗಳನ್ನು ನಾಶಪಡಿಸುವುದಾಗಿ ತಿಳಿದುಬಂದಿದೆ. ಸುಂಟರಗಾಳಿಗಳು ಅವನ್ನು ಅವುಗಳ ಪಥದಿಂದ ೨,೦೦೦ ಮೈಲಿ ದೂರ ಕೊಂಡೊಯ್ದು ಅವುಗಳಿಗೆ ಅಪರಿಚಿತ ಸ್ಥಳದಲ್ಲಿರಿಸಿ ಅಲ್ಲಿ ಅವು ಪೂರ್ಣ ನಾಶಹೊಂದಿದ ಘಟನೆಯೂ ಉಲ್ಲೇಖಿಸಲ್ಪಟ್ಟಿದೆ.

ವಲಸೆ ಹೋಗುವಿಕೆ ಶೀತವಲಯದಲ್ಲಿ ಗುಂಪು ಸೇರುವ ಜಾತಿಗಳಲ್ಲಿ ಹೆಚ್ಚು. ಹೇರಳವಾದ ಆಹಾರ ವೈವಿಧ್ಯತೆಹೊಂದಿ ಸದಾಕಾಲವು ಅಭಾವವಿಲ್ಲದಿರುವ ಉಷ್ಣ ವಲಯದ ಪಕ್ಷಿಗಳು ವಲಸೆಹೋಗುವುದಿಲ್ಲ. ಹೋಗಬೇಕಾದ ಅವಶ್ಯಕತೆಯೂ ಇರುವುದಿಲ್ಲ. ಉಷ್ಣವಲಯದಲ್ಲಿ ವಲಸೆ ಹೋದರೂ ಸ್ವಲ್ಪ ದೂರವೇ. ತಮಗಿಷ್ಟ ವಾದ ಹಣ್ಣು ಹಂಪಲನ್ನು ಅರಿಸಿ ಅಥವಾ ತಮಗೆ ಅಹಿತವಾದ ವಾತಾವರಣದಿಂದ ಸ್ವಲ್ಪ ಕಾಲ ದೂರವಿರಲು ಮಾತ್ರ. ಆದರೆ ಶೀತವಲಯದವು ಹಾಗಲ್ಲ. ಅವುಗಳ ಪ್ರಾಣ ರಕ್ಷಣೆ ಮತ್ತು ಮುಂದಿನ ಸಂತಾನಾಭಿವೃದ್ಧಿ ಇದನ್ನನುಸರಿಸಿದೆ.

ಪಕ್ಷಿಗಳು ವಲಸೆ ಹೋಗಲು ಕಾರಣವೇನು ? ಅವು ವಲಸೆ ಹೊರಡುವ ಕಾಲ ವನ್ನು ನಿರ್ಧರಿಸುವುದು ಹೇಗೆ ? ಎಂಬುದರ ಅರಿವು ಇನ್ನೂ ಸರಿಯಾಗಿ ತಿಳಿದು ಬಂದಿಲ್ಲ. ಬಹುಶಃ ಪಕ್ಷಿಗಳು ಉಷ್ಣವಲಯದಲ್ಲೇ ಮೊದಲು ಉತ್ಪನ್ನವಾಗಿ ಸಂಖ್ಯೆ ಹೆಚ್ಚಿದಂತೆಲ್ಲಾ ಶೀತವಲಯದ ಕಡೆಗೆ ಹೋಗಲಾರಂಭಿಸಿ, ಶೀತ ತಡೆಯದಾದಾಗ ಅಥವಾ ಅಲ್ಲಿ ಆಹಾರ ಸೌಲಭ್ಯ ಕಡಮೆಯಾದಾಗ ಪುನಃ ಉಷ್ಣವಾತಾವರಣಕ್ಕೆ ಹಿಂತಿರುಗಬಹುದೆಂದು ಕಾಣುತ್ತದೆ. ಪರ್ವಕಾಲ ಸಮೀಪವಾದಾಗ ಪಕ್ಷಿಗಳ ಚಟುವಟಿಕೆ ಹೆಚ್ಚುವಂತೆ ಅಂತರಸ್ರಾವ ಗ್ರಂಥಿಗಳು ಏರ್ಪಡಿಸುತ್ತವೆ. ಆಗಲೇ ಹೆಣ್ಣು ಮೊಟ್ಟೆಯಿಡಲಾರಂಭಿಸುವುದು ; ಗಂಡು ಹೆಚ್ಚಾಗಿ ಹಾಡುತ್ತಾ ಒಡಾಡುವುದು. ಆಗಲೇ ವಲಸೆ ಹೊರಡಲೂ ಪ್ರಾರಂಭವಾಗುವುದು. ಬಹುಶಃ ಶೀತವಲಯಗಳಲ್ಲಿನ ಉಷ್ಣತೆ ಹಾಗೂ ಬೆಳಕು ಕಡಮೆಯಾಗಿ ಕತ್ತಲೆ ಹೆಚ್ಚುತ್ತಿದ್ದಂತೆ ಅವು ವಲಸೆ ಹೊರಡಲನು ವಾಗುವುವು.

ಅಷ್ಟು ದೂರ ಹಾರಾಡಲು ಪಕ್ಷಿಗಳಿಗೆ ಹೆಚ್ಚು ಶಕ್ತಿಯಿರಬೇಕು. ಹಲವು ಹಗಲು ಸಂಚಾರಿಗಳು. ಹಲವು ರಾತ್ರಿ ಕಾಲವೂ ಸಂಚರಿಸಬಲ್ಲವು. ವಲಸೆ ಹೋಗುವಾಗ ಸಾಮಾನ್ಯ ಸಮಯಕ್ಕಿಂತಲೂ ವೇಗವಾಗಿ ಅವು ಚಲಿಸುತ್ತವೆ. ಸಣ್ಣ ಪಕ್ಷಿಗಳ ವೇಗ ಸಾಮಾನ್ಯವಾಗಿ ೩೦ ಮೈಲಿಯನ್ನು ಮೀರುವುದಿಲ್ಲವಾದರೂ ಗಿಡುಗಗಳು ೩೦–೪೦ ಮೈಲಿ ವೇಗದಲ್ಲಿಯೂ, ಬಾತುಗಳು ೫೦–೬೦ ಮೈಲಿ ವೇಗದಲ್ಲಿಯೂ ಚಲಿಸ ಬಲ್ಲವು. ಈ ವೇಗದಿಂದ ಪ್ರತಿ ದಿನ ಅಥವಾ ಒಂದೇ ರಾತ್ರಿಯಲ್ಲಿ ೩೦೦ರಿಂದ ೫೦೦ ಮೈಲಿ ದೂರ ಸಾಗಬಲ್ಲದು. ನೀರು ಬಾತುಗಳು ತಾವು ವಲಸೆ ಹೋಗುವ ೧೭೦೦ ಮೈಲಿಯನ್ನು ಕೇವಲ ೬೦ ಗಂಟೆಗಳಲ್ಲಿ ಮುಗಿಸುತ್ತವೆ. ಅವು ಹಾರಾಡುವ ಎತ್ತರ ೩೦೦೦ ಅಡಿಗಳಿಂದ ೨೦,೦೦೦ ಅಡಿಗಳಿಷ್ಟಿರಬಹುದು.

ಅವುಗಳ ಈ ಚಲನೆಯಲ್ಲಿ ಆಶ್ಚರ್ಯಕರ ಪ್ರಸಂಗವೆಂದರೆ ಅವು ಹೇಗೆ ತಮ್ಮ ಗುರಿಯತ್ತ ಸಾಗುತ್ತವೆಂಬುದು ! ಅನೇಕ ಪ್ರಯೋಗಗಳಿಂದ ಹಗಲಿನಲ್ಲಿ ಸೂರ್ಯನ ಸಹಾಯದಿಂದಲೂ, ರಾತ್ರಿ ನಕ್ಷತ್ರಗಳಿಂದಲೂ ಅವು ತಮ್ಮ ದಿಕ್ಕನ್ನು ಕಂಡುಕೊಳ್ಳುತ್ತ ವೆಂಬುದು ಸ್ಥಿರಪಟ್ಟಿದೆ. ಸೂರ್ಯನ ಬೆಳಕು ಕಾಣದಂತೆ ಹಗಲಿನಲ್ಲೇರ್ಪಡಿಸಿದ ಪರೀಕ್ಷೆಯಲ್ಲೂ, ಪಕ್ಷಿಗಳಿಗೆ ದಿಕ್ಕು ಕಾಣದಂತಾಗುತ್ತಿತ್ತು.

ವಲಸೆ ಹೋಗುವ ಅಂತರವೂ ಹೆಚ್ಚಾಗಿರುತ್ತದೆ. ೨,೦೦೦ ಮೈಲಿಗಳಿಂದ ಆ ಅಂತರ ೪೦೦೦ ಮೈಲಿಯಷ್ಟಾಗಿರಬಲ್ಲದು. ಶೀತವಲಯದ ಟರ್ನ್ (Tern) ತನ್ನ ಉತ್ತರ ಪ್ರದೇಶದಿಂದ ಅಂಟಾರ್ಕ್‌ಟಿಕಾ ಬಳಿಯ ಸಮುದ್ರದೆಡೆಗೆ ಹೋಗುತ್ತದೆ. ಈ ಅಂತರ ಸುಮಾರು ೧೦,೦೦೦ ಮೈಲಿಗಳು. ಯೂರೋಪಿನ ಬಳಿಯ ಕೊಕ್ಕರೆ ಆಫ್ರಿಕಾದ ದಕ್ಷಿಣ ತುದಿಗೆ ವಲಸೆ ಹೋಗುತ್ತದೆ. ಉತ್ತರ ಅಮೆರಿಕಾದ ಅಲಾಸ್ಕಾ ಕೆನಡಾ ಬಳಿಯ ಹಲವು ಸಣ್ಣ ಪಕ್ಷಿಗಳು ಬೇಸಿಗೆಗಾಗಿ ದ.ಅಮೇರಿಕಾದ ದಕ್ಷಿಣ ತುದಿಗೆ ವಲಸೆ ಹೋಗುತ್ತವೆ. ಅವು ಏನಾದರೂ ಕಾರಣದಿಂದ ದಾರಿ ತಪ್ಪಿದರೂ, ಬೇಗ ಅದನ್ನು ಪುನಃ ಕಂಡುಹಿಡಿದುಕೊಳ್ಳಬಲ್ಲವು.

ಈ ವಿಚಿತ್ರದ ಪೂರ್ಣ ಮಾಹಿತಿ ಸಂಗ್ರಹಿಸಲು ಸತತ ಪ್ರಯತ್ನ ನಡೆಯುತ್ತಿದೆ. ಸಹಸ್ರಾರು ವಲಸೆ ಹೋಗುವ ಪಕ್ಷಿಗಳನ್ನು ಹಿಡಿದು, ಅವುಗಳ ಕಾಲಿಗೆ ಮುದ್ರೆ ಒತ್ತಿ ಗುರುತು ಮಾಡಿರುವ ಅಲ್ಯೂಮಿನಿಯಂ ಉಂಗುರಗಳನ್ನು ಸುತ್ತಿ ಬಿಡುತ್ತಾರೆ. ಆ ಪಕ್ಷಿಗಳು ಯಾವಾಗಲಾದರೂ, ಎಲ್ಲಾದರೂ ಯಾರಿಗಾದರೂ ದೊರಕಿದಲ್ಲಿ ಆ ಉಂಗುರವನ್ನು ಅವು ದೊರೆತ ಸ್ಥಳ ಮುಂತಾದ ಮಾಹಿತಿಯೊಡನೆ ಅದನ್ನು ಪ್ರಾರಂಭಿಸಿದ ಸಂಸ್ಥೆಗೆ ತಿಳಿಸಬೇಕೆಂದು ಕೋರಲಾಗುತ್ತಿದೆ. ಕೆನಡಾ, ಅಮೇರಿಕಾ ದೇಶಗಳೇ ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯಕ್ರಮ ತೆಗೆದುಕೊಂಡಿರುವುದು.

ಪಕ್ಷಿಗಳನ್ನು ಹಿಡಿಯಲು ವಿವಿಧ ಮಾರ್ಗಗಳನ್ನು ಅನುಸರಿಸಲಾಗಿದೆ. ಜಪಾನಿನಲ್ಲಿ ಬಹು ಸೂಕ್ಷ್ಮ ಎಳೆಯ ಮಂಜು ಬಲೆಗಳನ್ನು ಕಟ್ಟಿ ಅದರಲ್ಲಿ ಹಾರುವ ಪಕ್ಷಿಗಳು ಸಿಕ್ಕಿಕೊಳ್ಳುವಂತೇರ್ಪಡಿಸುತ್ತಾರೆ. ಉತ್ತರ ಕೆರೋಲಿನಾದಲ್ಲಿ ಕೆನಡಾದ ದಪ್ಪ ಬಾತುಗಳು ಬಂದು ತಂಗುತ್ತವೆ. ಅವು ಮೇಯುವ ಹೊಲಗಳನ್ನು ಗುರುತಿಸಿ, ಆ ಹೊಲದ ಒಂದು ಬದಿ ದೊಡ್ಡ ಬಲೆಯನ್ನು ಪದರ ಪದರವಾಗಿ ಮಡಚಿ ಇಟ್ಟಿರುತ್ತಾರೆ. ಬಲೆಗೆ ಸುತ್ತಲೂ ಲೋಹ ತುಂಡುಗಳನ್ನು ಕಟ್ಟಿದ್ದು ರಾಕೆಟ್ಟಿನ ಸಹಾಯದಿಂದ ಮೇಲೆಸೆಯಲ್ಪಡುತ್ತದೆ. ಅದರ ಸುತ್ತಲೂ ಲೋಹದ ತುಂಡುಗಳನ್ನು ಕಟ್ಟಿರುವುದರಿಂದ ಅವುಗಳ ಭಾರಕ್ಕೆ ಬಲೆ ಕೆಳಗೆ ಇಳಿದು ಮೇಯುವ ಪಕ್ಷಿಗಳ ಮೇಲೆ ಹರಡಿ ಅವುಗಳನ್ನು ಸೆರೆಹಿಡಿಯುತ್ತದೆ. ಕೂಡಲೇ ವೈಜ್ಞಾನಿಕ ತಂಡದವರು ಒಂದೊಂದಾಗಿ ಆ ಹಕ್ಕಿಗಳನ್ನು ಹಿಡಿದು ಉಂಗುರ ತೊಡಿಸಿ ಬಿಡುತ್ತಾರೆ. ಹಲವು ಬಿಳಿಯ ಹಕ್ಕಿಗಳ ರೆಕ್ಕೆಗೆ ಅಳಿಸದ ಬಣ್ಣವನ್ನು ಸವರಿಬಿಟ್ಟು ಅವುಗಳ ಚಲನವಲನವನ್ನು ಪರೀಕ್ಷಿಸುವುದೂ ಈಗ ಸಾಮಾನ್ಯ ಬಳಕೆಯಲ್ಲಿದೆ.

ನಮಗೆ ಇದುವರೆಗೆ ತಿಳಿದಿರುವ ಅವುಗಳ ವಲಸೆಯ ವಿಚಾರ ಈ ಮಾರ್ಗಾನುಸರಣೆಗಳಿಂದಲೇ. ಇನ್ನೂ ಅದು ಪೂರ್ಣವಾಗಿ ಅರ್ಥವಾಗಿಲ್ಲ.

ಆದಿಯಿಂದಲೂ ಮನುಷ್ಯರಿಗೂ ಪಕ್ಷಿಗಳಿಗೂ ನಿಕಟ ಸಂಭಂಧವೇರ್ಪಟ್ಟಿರುತ್ತದೆ. ಬಹುಶಃ ಅದು ಮನುಷ್ಯರ ಅನುಕೂಲಕ್ಕಾಗಿಯೇ ಆಗಿದ್ದರೂ, ಹಲವು ಪಕ್ಷಿಪ್ರಭೇದಗಳ ರಕ್ಷಣೆಗೆ ಕಾರಣವಾಗಿದೆ. ದೇವತೆಗಳ ವಾಹನವೆಂದು ಗರುಡ ನವಿಲುಗಳು

ಸಂರಕ್ಷಣೆ ಹೊಂದಿವೆ. ವಿವಿಧ ದೇಶಗಳಲ್ಲಿ ವಿವಿಧ ಪಕ್ಷಿಗಳನ್ನು ಪೂಜಿಸಿ ಗೌರವಿಸುತ್ತಿದ್ದರು. ಅದರ ವಿವಿಧ ಬಣ್ಣದ ರೆಕ್ಕೆಗಳೂ, ರುಚಿಕರ ಮಾಂಸವೂ ಅವರಿಗೆ ಸಹಾಯಕವಾಗಿದ್ದುವು.

ಭಾರತದಲ್ಲಿ ಗರುಡನಿಗೆ ಪ್ರಾಶಸ್ತ್ಯವಿದ್ದಂತೆ ಪುರಾತನ ಬೇಬಿಲೋನಿಯನ್ ಮತ್ತು ಹಿಟ್ಟೈಟ್ ರಾಷ್ಟ್ರಗಳಲ್ಲೂ ಹದ್ದುಗಳಿಗೆ ದೇವಸ್ಥಾನ ಕಟ್ಟುತ್ತಿದ್ದರು. ಈಜಿಪ್ಟಿನ ಮುಖ್ಯ ದೇವತೆ 'ಹೋರಸ್' – ಗಿಡುಗ. ಅವರಲ್ಲಿ ಹಲವು ಶಾಂತ ಹಾಗೂ ಉಗ್ರದೇವತೆಗಳಲ್ಲೆಲ್ಲಾ ಪಕ್ಷಿ ಅಂಶವಿತ್ತೆಂದು ಭಾವಿಸಲಾಗಿತ್ತು. ರೋಮನ್ನರಲ್ಲೂ ಪಕ್ಷಿ ವಿಚಾರದಲ್ಲಿ ಗೌರವವಿದ್ದು ಯುದ್ಧಕ್ಕೆ ಮೊದಲು ದೇವತೆಗಳ ಆಶೀರ್ವಾದವನ್ನು ಪಕ್ಷಿ ಚಲನೆಯಿಂದ ನಿರೀಕ್ಷಿಸುತ್ತಿದ್ದರು. ಅಲೆಗ್ಸಾಂಡರನು ದಂಡಯಾತ್ರೆ ಮುಗಿಸಿ ಹಿಂತಿರುಗಲು ಇದೇ ಮುಖ್ಯ ಸೂಚನೆಯಾಯಿತು. ಗೂಬೆ ಬುದ್ಧಿವಂತ ಪಕ್ಷಿಯೆಂದು ಅದನ್ನು ವಿದ್ಯೆಯ ಆದಿಶಕ್ತಿ 'ಅಥೆನಿ'ಯ ಸಂಗಾತಿಯಾಗಿ ಸೂಚಿಸಿದ್ದರು. ಕ್ರಿ. ಪೂ. ೫ನೇ ಶತಮಾನದ ಹಲವು ನಾಣ್ಯಗಳಲ್ಲೂ ಗೂಬೆಯ ಚಿತ್ರ ನಿರೂಪಣೆಯಿದೆ.

ಪಕ್ಷಿಗಳ ವರ್ಣರಂಜಿತ ಪುಕ್ಕ ಮಾನವನನ್ನು ಮೊದಲಿನಿಂದಲೂ ಆಕರ್ಷಿಸಿದೆ. ಶಾಂತಿಸಾಗರದ ದಕ್ಷಿಣದ ಭಾಗದಲ್ಲಿ ಆಸ್ಟ್ರೇಲಿಯಾ ದೇಶದ ಆಡಳಿತಕ್ಕೊಳಪಟ್ಟಿರುವ 'ಸಾಂಟ್ ಕ್ರೂಸ್' ದ್ವೀಪ ನಿವಾಸಿಗಳಿಗೆ ಈಗಲೂ ಅದು ಚಲಾವಣೆಯಲ್ಲಿರುವ ನಾಣ್ಯ! ಸಣ್ಣ ಜೇನು ಹಕ್ಕಿಯ ವರ್ಣರಂಜಿತ ಪುಕ್ಕವೇ ಇದಕ್ಕೆ ಮೂಲ.

ಕಡ್ಡಿಯೊಂದರ ತುದಿಗೆ ಸಜೀವ ಹಕ್ಕಿಯೊಂದನ್ನು ಕಟ್ಟಿ ಕಾಡಿನ ಮಧ್ಯೆ ಇಡಲಾಗುತ್ತದೆ. ಅದರ ಪಕ್ಕದ ಕೊಂಬೆಗೆ ಅಂಟುಮೇಣ ಸವರಲಾಗುತ್ತದೆ. ಹಕ್ಕಿ ಹಾಡನ್ನು ಕೇಳಿ ಜಗಳವಾಡಲು ಬರುವ ಇತರ ಹಕ್ಕಿಗಳು ಆ ಕೊಂಬೆಯಲ್ಲಿ ಕುಳಿತಾಗ ಅಂಟಿಕೊಂಡು ಹಾರಲಾಗದಾಗುತ್ತವೆ. ಅದನ್ನು ಸುಲಭವಾಗಿ ಹಿಡಿದುಕೊಂಡು, ಪುಕ್ಕ ಕಿತ್ತು ತೆಂಗಿನ ಚಿಪ್ಪಿನಲ್ಲಿ ತುಂಬಿಟ್ಟು ಮಾರಲಾಗುತ್ತದೆ. ಆ ಕೆಂಪು ವರ್ಣದ ಸಣ್ಣ ಗರಿಗಳನ್ನು ನಡುಪಟ್ಟಿಯಾಗಿ ಹೆಣೆಯಲಾಗುತ್ತದೆ. ಒಂದು ಉತ್ತಮ ನಡುಪಟ್ಟಿ ತಯಾರಾಗಲು ಸುಮಾರು ೩೦೦ ಪಕ್ಷಿ ಬೇಕಾಗುತ್ತದೆ.

ಮೊದಲು ಇತರ ಹಕ್ಕಿಗಳ ನೀಳಗರಿಗಳನ್ನು ಹೆಣೆದು ದುಂಡು ತಟ್ಟೆಗಳನ್ನು ರಚಿಸಿ, ಅದರ ಮೇಲೆ ಈ ಗರಿಗಳನ್ನು ಅಂಟಿಸಲಾಗುತ್ತದೆ. ಈ ತಟ್ಟೆಗಳನ್ನು ೩೦ ಅಡಿ ಉದ್ದದ ತಟ್ಟೆಗಳನ್ನಾಗಿ ಮುಂದೆ ಹೆಣೆಯಲಾಗುತ್ತದೆ. ಆಸ್ಟ್ರೇಲಿಯಾ ಪೌಂಡುಗಳಿಗೆ ಅದನ್ನು ಬದಲಾಯಿಸಿಕೊಳ್ಳಬಹುದು. ಒಂದು ಪಟ್ಟಿ ೨೫ ಪೌಂಡುಗಳಿಂದ ಕೇವಲ ಒಂದು ಷಿಲಿಂಗ್ ಬೆಲೆ ಬಾಳಬಹುದು. ಆ ನಿವಾಸಿಗಳು ತಮ್ಮ ಹೆಣ್ಣುಗಳಿಗೆ ಒಂದರಿಂದ ಹತ್ತರವರೆಗೆ ಆ ಪಟ್ಟಿಗಳ ಬೆಲೆ ಕಟ್ಟುತ್ತಾರೆ. ಭಾರತದಲ್ಲೂ ನವಿಲುಗರಿಗೆ ಹೆಚ್ಚಿನ ಮರ್ಯಾದೆಯಿದೆ.

ಆಫ್ರಿಕಾದ ಉಷ್ಟ್ರಪಕ್ಷಿಯ ಬಾಲ ಪುಕ್ಕಗಳು ನೀಳವಾಗಿ ಮೃದುವಾಗಿದ್ದು ಅತ್ಯಂತ ಬೆಲೆ ಬಾಳುತ್ತವೆ. ಅವುಗಳನ್ನು ಅಲ್ಲಲ್ಲಿ ಶೇಖರಿಸಿ ಅಥವಾ ಅದಕ್ಕಾಗಿ ಉಷ್ಟ್ರಪಕ್ಷಿ

ಗಳನ್ನು ಬೇಟೆಯಾಡಿ ಸಂಗ್ರಹಿಸುವುದು ಸಾಮಾನ್ಯ ವಾಡಿಕೆಯಲ್ಲಿದೆ. ಬ್ರೆಜಿಲ್‌ನ ಹಲವು ಭಾಗಗಳಲ್ಲಿ ಬಾಲಪುಕ್ಕಗಳಿಗಾಗಿ ರಿಯಾ ಪಕ್ಷಿಗಳನ್ನು ಸಾಕಲಾಗುತ್ತದೆ. ಮೇ ತಿಂಗಳಲ್ಲಿ ಬೆಳೆದಿರುವ ಅವುಗಳ ಬಾಲಗರಿಗಳನ್ನು ಪೂರ್ಣ ಕೀಳಲಾಗುತ್ತದೆ. ಅವು ಪುನಃ ಬೆಳೆಯುವುದರಿಂದ ಪಕ್ಷಿಗಳಿಗೆ ಹೆಚ್ಚಿನ ತೊಂದರೆಯಾಗುವುದಿಲ್ಲ. ಅವುಗಳನ್ನು ಧೂಳೊರಸುವ ಸಾಧನಗಳ ತಯಾರಿಕೆಯಲ್ಲೂ, ಟೊಪ್ಪಿಗಳ ಅಲಂಕಾರಕ್ಕೂ ಹೆಚ್ಚಾಗಿ ಉಪಯೋಗಿಸಲಾಗುತ್ತದೆ. ಭಾರತದಲ್ಲೂ ಹಲವು ವರ್ಷಗಳ ಕೆಳಗೆ ಸಿಂದ್ ಪ್ರದೇಶದಲ್ಲಿ ಕೊಕ್ಕರೆಗಳನ್ನು ಸಾಕಲಾಗುತ್ತಿತ್ತು. ಪರ್ವಕಾಲದ ಅವುಗಳ ಮೃದು ಗರಿಗಳಿಗೆ ಹೆಚ್ಚಿನ ಗಿರಾಕಿ ಇದ್ದುದರಿಂದ ಎಲ್ಲೆಲ್ಲೂ ಈ ವೃತ್ತಿ ಅಭಿವೃದ್ಧಿಯಾಗಿತ್ತು. ಆದರೆ ಈಗ ಅದಕ್ಕೆ ಬೆಲೆ ಕಡಮೆಯಾಗಿ ಪಕ್ಷಿ ಪ್ರಭೇದದ ನಾಶ ಕಡಮೆ ಯಾಗಿದೆ.

ಆದರೆ ಮನುಷ್ಯರಿಗೆ ಪಕ್ಷಿಗಳ ಮುಖ್ಯ ಉಪಯೋಗ ಅವುಗಳ ರುಚಿಕರ ಮಾಂಸ ಮೊಟ್ಟೆಗಳಿಂದಾಗಿದೆ. ಆಗ್ನೇಯ ಏಷ್ಯಾದ ಕಾಡುಕೋಳಿಯಿಂದ ಉತ್ಪನ್ನ ವಾದ ಸಹಸ್ರಾರು ಜಾತಿಯ ಕೋಳಿಗಳು ಇಂದು ಲಕ್ಷಾಂತರ ಕೋಟಿ ಸಂಖ್ಯೆಯಾಗಿದ್ದು, ಪ್ರಪಂಚದ ಎಲ್ಲಾ ವಾಯುಗುಣಕ್ಕೂ ಹೊಂದಿದಂತೆ ಬೆಳೆಯುತ್ತಿವೆ. ಬಹುಶಃ ನಾಯಿ ಜಾತಿಯೇ ಇದಕ್ಕೆ ಎರಡನೆಯದೆಂದು ತೋರುತ್ತದೆ. ಸಾಕಾಣಿಕೆ ಸುಮಾರು ೫೦೦೦ ವರ್ಷಗಳ ಹಿಂದೆಯೇ ಪ್ರಾರಂಭವಾದಂತಿದೆ. ಮಧ್ಯಪ್ರಾಚ್ಯದಲ್ಲಿ ಕ್ರಿ. ಪೂ. ೧,೫೦೦ರ ವೇಳೆಗೆ ಕೋಳಿ ಹೆಚ್ಚಾಗಿ ಹರಡಿದ್ದುವೆಂದು ತಿಳಿದುಬಂದಿದೆ.

ನಮ್ಮ ಉಪಯೋಗಕ್ಕಾಗಿ ಸುಲಭ ಖರ್ಚಿನಲ್ಲಿ ವೃದ್ಧಿಯಾಗುವ ಅನೇಕ ತಳಿ ಗಳನ್ನು ಉತ್ಪನ್ನ ಮಾಡಲಾಗಿದೆ. ಅತಿ ಹೆಚ್ಚಿನ ಮೊಟ್ಟೆ ಉತ್ಪತ್ತಿಯೂ ಬೇಗ ಮಾಂಸವೃದ್ಧಿಯೂ - ಎರಡು ಮುಖ್ಯ ಅಂಶಗಳು. ನೀಳ ಕಾಲಿನ ನೀಳ ಕತ್ತಿನ ಗಿಡ್ಡ ದೇಹದ, ವಿವಿಧ ವರ್ಣದ ಜಾತಿಗಳು ಹಲವಾರು ಉತ್ಪನ್ನವಾಗಿವೆ. ಕೋಳಿ ಜೂಜಿಗಾಗಿ ಹಲವು ತಳಿಗಳೂ ಇವೆ. ಜಪಾನಿನಲ್ಲಿ ೨೦ ಅಡಿ ನೀಳ ಬಾಲದ, ಆಕರ್ಷಣೀಯ ವರ್ಣದ ಕೋಳಿ ಜಾತಿಯೊಂದನ್ನು ವೃದ್ಧಿಗೊಳಿಸಲಾಗಿದೆ.

ಮಾಂಸಕ್ಕಾಗಿ ಬೆಳೆಸಲಾಗುತ್ತಿರುವ ಪಕ್ಷಿಗಳಲ್ಲಿ ಕೋಳಿಗಳು ಮೊದಲನೆಯ ಸ್ಥಾನವನ್ನೂ, ಬಾತುಗಳು ಎರಡನೆಯ ಸ್ಥಾನವನ್ನೂ, ಟರ್ಕಿ ಕೋಳಿಗಳು ಮೂರನೆಯ ಸ್ಥಾನವನ್ನೂ, ಮತ್ತು ವಿವಿಧ ಪಾರಿವಾಳಗಳು ನಾಲ್ಕನೆಯ ಸ್ಥಾನವನ್ನೂ ಪಡೆದಿರು ತ್ತವೆ. ಟರ್ಕಿ ಕೋಳಿಗಳನ್ನು ಬಹು ಹಿಂದೆಯೇ ಮೆಕ್ಸಿಕೋ ಪ್ರದೇಶದಲ್ಲಿ ಪಳಗಿಸಿ ಸಾಕಲಾಗುತ್ತಿತ್ತು. ೧,೫೩೦ರ ವೇಳೆಗೆ ಅದನ್ನು ಯೂರೋಪಿನಲ್ಲಿ ಸಾಕಲುಪಕ್ರಮಿಸಿ ಅದು ಈಗ ಎಲ್ಲಾ ಕಡೆಯೂ ವೃದ್ಧಿಯಾಗುತ್ತಿದೆ.

ಆಹಾರಕ್ಕಾಗಿ ಪಳಗಿಸಿ ವೃದ್ಧಿಗೊಂಡ ಪಕ್ಷಿಗಳಲ್ಲಿ ಪಾರಿವಾಳಗಳು ಅತಿಪುರಾತನ ವಾದವು. ಕ್ರಿ. ಪೂ. ೩,೦೦೦ ವರ್ಷಗಳ ಹಿಂದೆಯೇ ನೈಲ್ ಪ್ರದೇಶದಲ್ಲಿ ಪಾರಿವಾಳ ಗಳನ್ನು ಆಹಾರಕ್ಕಾಗಿ ಸಾಕುತ್ತಿದ್ದರಲ್ಲದೆ, ಅವುಗಳನ್ನು ವರ್ತಮಾನ ಕಳುಹಿಸಲೂ

ಉಪಯೋಗಿಸಲಾಗುತ್ತಿತ್ತು. ಈಗಲೂ ಜೂಜಿಗಾಗಿ, ಆಹಾರಕ್ಕಾಗಿ ಮತ್ತು ಅಲಂಕಾರಕ್ಕಾಗಿ ಸುಮಾರು ೨೦೦ ವಿಧಗಳು ಬಳಕೆಯಲ್ಲಿವೆ.

ಅವುಗಳ ಮೂರನೆಯ ಮುಖ್ಯೋಪಯೋಗ, ವಿವಿಧ ಕೀಟಗಳನ್ನು ಹತೋಟಿಯಲ್ಲಿಡುವುದೇ. ಕೀಟಗಳು ಬಹುಬೇಗ ವೃದ್ಧಿಗೊಳ್ಳುತ್ತವೆ. ಹಲವು ಜಾತಿ ಅವಕ್ಕೆ ಅನುಕೂಲವಾದ ವಾತಾವರಣವೇರ್ಪಟ್ಟಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಬೆಳೆಯುತ್ತವೆ. ಅಮೆರಿಕಾದಲ್ಲಿ ಹುಲ್ಲುಗಾವಲು ವಿನಾಶಕಾರಿಯಾದ ತಿಗಣೆಗೆ ಒಂದೇ ವರ್ಷದಲ್ಲಿ ೧೩–೧೪ ಪೀಳಿಗೆ ವೃದ್ಧಿಯಾಗುತ್ತದೆ. ಅಂದರೆ ಹತೋಟಿಯಲ್ಲಿಡದಿದ್ದಲ್ಲಿ ಒಂದೇ ವರ್ಷದಲ್ಲಿ ಕೋಟ್ಯಾಂತರ ಸಂಖ್ಯೆಯಲ್ಲಿ ಹೆಚ್ಚುತ್ತವೆ. ಮಿಡಿತೆಗಳ ಹಾವಳಿ ಎಲ್ಲರಿಗೂ ತಿಳಿದದ್ದೇ. ಮೈಲಿಗಟ್ಟಲೆ ಹಗಲಲ್ಲೇ ಸೂರ್ಯಬೆಳಕೂ ಕಾಣದಂತೆ ಮಂದವಾಗಿ ಹರಡಿ, ಹಾರಾಡಿ ದಾರಿಯಲ್ಲಿ ಸಿಕ್ಕ ಎಲ್ಲಾ ಪೈರು ಪಚ್ಚೆಗಳನ್ನು ಸಂಪೂರ್ಣ ತಿಂದು ನಾಶಪಡಿಸಿ, ಸಹಸ್ರಾರು ಚದುರಮೈಲಿ ಪ್ರದೇಶದಲ್ಲಿ ಕ್ಷಾಮ ಪ್ರರಿಸ್ಥಿತಿ ಏರ್ಪಡಿಸುತ್ತವೆ.

ಪಕ್ಷಿಕುಲಕ್ಕೆ ಕೀಟಗಳು ಮುಖ್ಯಾಹಾರ. ಕಾಳು ತಿನ್ನುವ ಪ್ರಭೇದಗಳ ಮರಿಗಳಿಗೂ ಮುಖ್ಯ ತಿನಿಸು ಕೀಟಗಳೇ. ಇದರಿಂದ ಪ್ರಕೃತಿಯಲ್ಲಿ ಅದನ್ನು ಹತೋಟಿಯಲ್ಲಿಡಲು ಪಕ್ಷಿಗಳು ಸಹಾಯಕ. ಬಿಳೀ ಕೊಕ್ಕರೆಗಳು, ಸ್ಟಾರ್‌ಲಿಂಗ್, ಗುಬ್ಬಚ್ಚಿಗಳು ಮತ್ತು ಪಾಸ್ಟರ್ ಹಕ್ಕಿಗಳೂ ಇದನ್ನೇ ಮುಖ್ಯಾಹಾರವಾಗಿ ಉಪಯೋಗಿಸುತ್ತವೆ. ಅವು ದಿನವಹಿ ತಮ್ಮ ದೇಹ ತೂಕಕ್ಕಿಂತ ಹೆಚ್ಚು ಭಾರದ ಕೀಟಗಳನ್ನು ಆಹಾರವಾಗಿ ಉಪಯೋಗಿಸುತ್ತವೆ. ಗುಬ್ಬಚ್ಚಿ ದಂಪತಿಗಳು ಮರಿಗಳಿಗೆ ೨೪೦ರಿಂದ ೩೨೦ ಸಾರಿ ಆಹಾರ ಗೂಡಿಗೆ ತರುತ್ತವೆ! ಇದು ಎಲ್ಲೆಲ್ಲೂ, ಎಲ್ಲಾ ಕಾಲವೂ ಕೀಟಗಳು ವೃದ್ಧಿಗೊಳ್ಳದಿದ್ದಾಗಲೂ, ನೆರವೇರುತ್ತಲೇ ಇರುವುದರಿಂದ, ಕೀಟಗಳನ್ನು ಬಹುಮಟ್ಟಿಗೆ ಹತೋಟಿಯಲ್ಲಿಡಲು ಕಾರಣವಾಗಿದೆ.

ನಾಲ್ಕನೆಯದಾಗಿ ಇತರ ನಾಶಕಾರಿ ಪ್ರಾಣಿಗಳನ್ನು ಹತೋಟಿಯಲ್ಲಿಡಲು ಅವು ಸಹಾಯಕ. ಮಾನವನ ಮುಖ್ಯ ಶತ್ರುವಾದ ಇಲಿ, ಹೆಗ್ಗಣ ಮತ್ತಿತರ ಜಾತಿಗಳನ್ನು ಹತೋಟಿಯಲ್ಲಿಡಲು ಹದ್ದು, ಗಿಡುಗ ಮತ್ತು ಗೂಬೆಗಳೇ ಮುಖ್ಯ ಕಾರಣ. ಒಂದು ಜೊತೆ ಇಲಿಗಳು ಒಂದು ವರ್ಷದಲ್ಲಿ ಸುಮಾರು ೧,೦೦೦ವಾಗಬಲ್ಲವು. ೩–೪ ವರ್ಷದಲ್ಲಿ ೧೦೦ ಕೋಟಿ ಮೀರಬಲ್ಲವು! ಆದ್ದರಿಂದ ಒಂದು ಜೊತೆ ಇಲಿ ನಾಶವಾದಲ್ಲಿ ಸುಮಾರು ೧,೦೦೦ ಇಲಿಗಳ ವೃದ್ಧಿ ತಪ್ಪಿಹೋದಂತೆ! ನಮಗೆ ಇದರಿಂದ ಲಕ್ಷಾಂತರ ರೂಪಾಯಿಗಳ ಉಳಿತಾಯವಾಗುತ್ತದೆ.

ಜಲಗಾರ ಪಕ್ಷಿಗಳಿಂದಲೇ ಐದನೆಯಮುಖ್ಯ ಉಪಯೋಗ. ರಣಹದ್ದು, ಹದ್ದು, ಕಾಗೆಗಳು ಈ ಪಂಗಡದವು. ಅವು ಸತ್ತ ಪ್ರಾಣಿಗಳ ಮಾಂಸ ತಿಂದು ರೋಗ ಹರಡದಂತೆ ಸಹಾಯಕವಾಗುತ್ತವೆ. ಕೊಳೆತ ಮಾಂಸ ಮತ್ತು ಇತರ ಆಹಾರ, ಸಾಂಕ್ರಾಮಿಕ ರೋಗಗಳಿಗೆ ನಾಂದಿ. ಅವುಗಳನ್ನು ಬಹು ಬೇಗ ತಿಂದು ಮುಗಿಸಿ ರೋಗ ಹರಡದಿರಲೂ ದುರ್ವಾಸನೆಯಿಲ್ಲದಿರಲೂ ಇವು ಸಹಾಯಕವಾಗುತ್ತವೆ. ಸಸ್ಯ ಬೀಜೋ

ತ್ಪಾದನಾ ಕಾರ್ಯದಲ್ಲೂ ಪಕ್ಷಿಗಳ ಪಾತ್ರವಿದೆ. ಹಲವು ಹೂವುಗಳಲ್ಲಿ ಹೆಚ್ಚಿನ ಜೇನು ದೊರಕುವಂತಿದ್ದು, ಸುಮಾರು ೬೦ ಪಕ್ಷಿ ಪ್ರಭೇದಗಳು ಅದನ್ನು ಉಪಯೋಗಿಸಿ ಕೊಳ್ಳುತ್ತವೆ. ಹಾಗೆ ಜೇನು ಹೀರಲು ಪ್ರಯತ್ನಿಸುವಾಗ ಕೊಕ್ಕಿಗೆ ಅಥವಾ ಕತ್ತಿನ ಭಾಗಕ್ಕೆ ಒಂದು ಹೂವಿನ ಪರಾಗ ಅಂಟಿ, ಇನ್ನೊಂದು ಹೂವಿಗೆ ವರ್ಗಾಯಿಸಲ್ಪಡು ತ್ತದೆ. ಬೂರಗಮರ, ಪಾರಿವಾಣ, ಮುತ್ತುಗ ಮುಂತಾದ ಮರಗಳ ವೃದ್ಧಿಗೆ ಪಕ್ಷಿ ಗಳೇ ಮುಖ್ಯ ಕಾರಣ. ಈ ಕಾರ್ಯ ಪಕ್ಷಿ ಕುಲದ ಆರನೆಯ ಸಹಾಯ.

ಬೀಜೋತ್ಪತ್ತಿಗೆ ಅನುಕೂಲವಾಗುವಂತೆಯೇ ಅದು ಬೀಜ ಹರಡಲೂ ಸಹಾಯಕ ವಾಗುತ್ತದೆ. ವಿವಿಧ ಹಣ್ಣುಗಳನ್ನು ತಿನ್ನುವುದರಿಂದ, ಹಣ್ಣಿನಲ್ಲಿರುವ ಬೀಜ, ಜೀರ್ಣ ರಸಗಳಿಂದ ಯಾವೊಂದೂ ತೊಂದರೆಗೆ ಒಳಗಾಗದೆ ಹೊರಬರುತ್ತವೆ. ಅವು ಪಕ್ಷಿ ಹಿಕ್ಕೆ ಹಾಕಿದೆಡೆ, ಅದೇ ಗೊಬ್ಬರದ ಸಹಾಯದಿಂದ ಬೆಳೆದು ವೃದ್ಧಿಗೊಳ್ಳುತ್ತದೆ. ಆದರೆ ಇದು ಸಹಾಯವೆನ್ನುವ ಬದಲು ನಮಗೆ ತೊಂದರೆಯೆಂದೇ ಭಾವಿಸಬೇಕು. ವಿವಿಧ ಹಣ್ಣು ಮರಗಳನ್ನು ನಾಶಪಡಿಸುವ ಬದನಿಕೆ, ಹಳೆಮನೆ, ದೇವಸ್ಥಾನಗಳನ್ನು ಹಾಳುಮಾಡುವ ವಿವಿಧ ಆಲ, ಅರಳಿ ಮರಗಳು, ಹಾಗೂ ಎಲ್ಲೆಲ್ಲೂ ಆವರಿಸಿ ತೊಂದರೆ ಕೊಡುವ ಲಂಟಾನಾ ಮುಳ್ಳು ಇವೆಲ್ಲವೂ ಪಕ್ಷಿಗಳಿಂದೇರ್ಪಡುವ ಬೀಜ ಪ್ರಸರಣದ ತೊಂದರೆಗಳೇ.

ಅವುಗಳಿಂದಾದ ಉಪಯುಕ್ತತೆಯಲ್ಲಿ ಏಳನೆಯ ಮುಖ್ಯಾಂಶ ಹಲವು ಪ್ರಭೇದ ಗಳ ಗೂಡಿನ ರಚನೆ. ಸಮುದ್ರದಂಚಿನಲ್ಲಿ ಕಡಿದಾದ ಕಲ್ಲು ಬಂಡೆಗಳ ಮುಖದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸ್ವಿಫ್ಟ್ ಜಾತಿಯ ಹಕ್ಕಿಗಳು ಗೂಡು ಕಟ್ಟುತ್ತವೆ. ಗೂಡು ಅವುಗಳ ಉಗುಳಿನಿಂದ ರಚಿತವಾದದ್ದು. ಈ ದ್ರವ ಗಾಳಿಗೆ ತಗುಲಿದೊಡನೆ ಗಟ್ಟಿ ಯಾಗುತ್ತದೆ. ಈ ಗೂಡುಗಳಿಂದ ರಚಿತವಾದ ರಸ ರುಚಿಕರ ಹಾಗೂ ಪೌಷ್ಟಿಕವೆಂದು ಹೆಚ್ಚು ಬೆಲೆ ಬಾಳುತ್ತದೆ. ಕೊಂಕಣದ ತೀರದಲ್ಲೂ ಹಲವೆಡೆ ಇಂತಹ ಗೂಡುಗಳು ರಚಿತವಾಗುತ್ತವೆ. ಆದರೆ ಅವು ಅಷ್ಟು ಉತ್ತಮ ದರ್ಜೆಯವಲ್ಲ. ಪೌಂಡಿಗೆ ೭ರಿಂದ ೪೦-೫೦ ರೂಪಾಯಿಗಳ ಮೌಲ್ಯ ಇದಕ್ಕೆ ದೊರಕುತ್ತದೆ.

ಕೊನೆಯದಾಗಿ ಅವುಗಳ ಹಿಕ್ಕೆ ಉತ್ತಮ ಗೊಬ್ಬರವಾಗುತ್ತದೆ. ಪೆರು ದೇಶದ ತೀರ ಪ್ರದೇಶದಲ್ಲಿನ ಹಲವು ದ್ವೀಪಗಳಲ್ಲಿ ಲಕ್ಷಾಂತರ ಪಕ್ಷಿಗಳು ಗುಂಪಾಗಿ ವಾಸಿಸು ವುದರಿಂದ ಸಹಸ್ರಾರು ವರ್ಷಗಳಲ್ಲಿ ಅವುಗಳ ಹಿಕ್ಕೆ ನೂರಾರು ಅಡಿ ಎತ್ತರವಾಗಿ ಶೇಖರಿಸಲ್ಪಟ್ಟಿತ್ತು. ಅದರ ಗೊಬ್ಬರದ ಮಹತ್ವವನ್ನು ಅರಿತಂದಿನಿಂದ ಅದನ್ನು ಅಗೆದು ತೆಗೆದು ಮಾರಿ, ಕೋಟ್ಯಾಂತರ ರೂಪಾಯಿ ಸಂಪಾದನೆಯಾಗತೊಡಗಿತು. ಆದರೆ ವರ್ಷವಿಡೀ ಜನರು ಈ ಕಸಬಿನಲ್ಲೇ ತೊಡಗಿ ಪಕ್ಷಿಗಳಿಗೆ ತ್ರಾಸ ಕೊಟ್ಟು ಅವು ಅಲ್ಲಿ ವೃದ್ಧಿಯಾಗಲು ಅಡಚಣೆಯಾದದ್ದರಿಂದ ಸರಕಾರಕ್ಕೆ ವರ್ಷದಲ್ಲಿ ಸೇರಬಹು ದಾದಷ್ಟು ಗೊಬ್ಬರವನ್ನು ಮಾತ್ರ ನಿಯಂತ್ರಿತ ಸಮಯದಲ್ಲಿ ತೆಗೆಯಲು ಅನುಮತಿ ಕೊಡುತ್ತದೆ. ಆದರೆ ಅಷ್ಟಕ್ಕೇ ಲಕ್ಷಾಂತರ ರೂಪಾಯಿಗಳ ಉತ್ಪತ್ತಿ ದೊರಕುತ್ತಿದೆ.

— ೧೦ —

ಪಕ್ಷಿಕುಲದ ಭವಿಷ್ಯವೇನು ? ಈಗಿರುವಂತೆಯೇ ಅವು ವೃದ್ಧಿಸಿ ವೈವಿಧ್ಯತೆ ಹೊಂದಿ ಹರಡುತ್ತವೆಯೇ ? ಅಥವಾ ಅವುಗಳ ವೃದ್ಧಿ ಇಳಿಮುಖವಾಗಿದೆಯೇ ? – ಎಂದು ಪರೀಕ್ಷಿಸಿದಲ್ಲಿ, ಮನುಷ್ಯಕುಲ ಅಭಿವೃದ್ಧಿಗೊಳ್ಳುತ್ತಿದ್ದಂತೆ ಮೃಗ ಪಕ್ಷಿಗಳ ಅಳಿವು ಹೆಚ್ಚಾಗುತ್ತಿದೆ. ಮಾನವ ತನಗೆ ಬೇಕಾದ ಅನುಕೂಲವೇರ್ಪಡಿಸಿಕೊಳ್ಳಲು ಅವುಗಳಿಗಿದ್ದ ನೈಸರ್ಗಿಕ ಸೌಕರ್ಯಗಳನ್ನು ನಾಶಪಡಿಸಿ, ಆಹಾರವನ್ನು ಕಡಮೆ ಮಾಡಿ ಅವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಂದು ಅವುಗಳ ಪೀಳಿಗೆ ಬಹಳ ಕಡಮೆಯಾಗಿದೆ. ಅವುಗಳು ಗೂಡು ಕಟ್ಟಲೂ, ವಾಸವಿರಲೂ, ಹಣ್ಣು ಹಂಪಲು ಹೊಂದಲೂ ಅನುಕೂಲವಾಗಿದ್ದ ನೈಸರ್ಗಿಕವಾದ ಕಾಡು, ಕೊಳ, ಸಾಲುಮರ – ಎಲ್ಲವನ್ನೂ ನಾಶ ಪಡಿಸುತ್ತಿರುವುದರಿಂದ ಪೀಳಿಗೆ ವೃದ್ಧಿಯಾಗುವುದು ಕುಂಠಿತವಾಗಿದೆ. ಆಹಾರಕ್ಕಾಗಿ ವಿವಿಧ ಪಕ್ಷಿಗಳನ್ನು ಸಿಕ್ಕೆಡೆ ಕೊಲ್ಲುವುದೂ, ಪೈರು ರಕ್ಷಣೆಗೆಂದು ಮಿತಿಯಿಲ್ಲದ ಔಷದ ಉಪಯೋಗವೂ, ಈ ಕುಲಕ್ಕೆ ಈಗ ಮಾರಕವಾಗಿವೆ.

ಪ್ಲೇಸ್ಟೋಸೀನ್ ಯುಗದಲ್ಲಿ ವೃದ್ಧಿಯಾಗಿದ್ದ ಬೃಹದಾಕಾರದ ಪಕ್ಷಿಗಳಲ್ಲಿ ಹಲಕೆಲವು ಮಾತ್ರ ಈಗ ಉಳಿದು ಬಂದಿವೆ. ಆಹಾರ ವೈವಿಧ್ಯತೆಗನುಗುಣವಾಗಿ ಸ್ವಾಭಾವಿಕ ವಿಕಾಸ ಹೊಂದಿರುವಲ್ಲಿ ಕಾಳು ತಿನ್ನುವ ಪಕ್ಷಿ ಪ್ರಭೇದವೇ ಪಕ್ಷಿ ಸಮೂಹದ ೩/೫ ಭಾಗವಾಗಿದ್ದು, ಅವುಗಳೇ ಮುಂದೆ ವೃದ್ಧಿಯಾಗಬಲ್ಲವು. ಜೇನು ಸೇವಿಸುವ ಮತ್ತು ಕೀಟಾಹಾರಿಗಳೂ ಸಣ್ಣ ಗಾತ್ರದವಾದ್ದರಿಂದ ಅವೂ ವೃದ್ಧಿಯಾಗಬಲ್ಲವು.

ನೈಸರ್ಗಿಕವಾಗಿ ವಾತಾವರಣದ ವ್ಯತ್ಯಾಸಗಳಿಗೆ ಹೊಂದಿಕೊಳ್ಳದೆ ಹಲವು ಪ್ರಭೇದಗಳು ನಾಶಹೊಂದುವುದು ಅನಿವಾರ್ಯ. ಈಗ ದೊರೆತಿರುವ ಪಳೆಯುಳಿಕೆಗಳ ಆಧಾರದಿಂದ ಶತಮಾನಕ್ಕೆ ಎರಡು ಪ್ರಭೇದ ಹಾಗೆ ನಿರ್ನಾಮವಾದರೆ ಹೆಚ್ಚೆಂದು ಅರಿಯಲಾಗಿದೆ. ಆದರೆ ಮನುಷ್ಯನ ದುರ್ನಡತೆಯಿಂದ ಕೇವಲ ೩ ಶತಮಾನಗಳಲ್ಲೇ ಸುಮಾರು ೮೦ ಪ್ರಭೇದಗಳು ಪೂರ್ಣ ನಾಶ ಹೊಂದಿರುವುದು ವ್ಯಕ್ತಪಟ್ಟಿದೆ. ಅಂದರೆ ಪ್ರಕೃತಿ ನಿಯಮದ ೧೫ರಷ್ಟು ಹೆಚ್ಚು ! ೧೮೮೫ರಿಂದ ೧೯೦೫ರ ವರೆಗಿನ ೨೦ ವರ್ಷಗಳಲ್ಲಿ ಸುಮಾರು ೨೦ ಪ್ರಭೇದಗಳು ನಾಶಹೊಂದಿದವು. ನಾಶಹೊಂದಿದುವುಗಳಲ್ಲಿ ಅನೇಕವು ದ್ವೀಪ ನಿವಾಸಿಗಳೇ. ಹಾರಲಾರದವನ್ನು ಜನರೇ ಹೊಡೆದು ಕೊಂದರು. ಇತರ ಹಲವು ನಾಯಿ, ಮೊಲ, ಬೆಕ್ಕು ಮುಂತಾದುವುಗಳಿಂದ ನಾಶಹೊಂದಿದವು. ಮತ್ತೆ ಕೆಲವು ತಮಗೆ ಬೇಕಾಗಿದ್ದ ವಾತಾವರಣ ಮನುಷ್ಯರಿಂದ ನಾಶವಾದಾಗ ವೃದ್ಧಿ ಹೊಂದಲು ಸಾಧ್ಯವಿಲ್ಲದೆ ಹಾಳಾದವು. ಹೊಸತಾಗಿ ಹರಡಿದ ರೋಗ ರುಜಿನಾದಿಗಳಿಂದಲೂ ಹಲವು ಪ್ರಭೇದ ನಶಿಸಿವೆ.



ಎಚ್ಚರ ವಹಿಸದಿದ್ದಲ್ಲಿ ಅತಿ ಬೇಗ ನಿರ್ನಾಮವಾಗಬಹುದಾದ ಪಕ್ಷಿಗಳು

ಎಸ್ಕಿಮೋ ಕರ್ಲಿವ್. ಕಾಂಡರ್ ಹದ್ದು.
ಬಿಳೀಕೊಕ್ಕಿನ ಮರಕುಟುಕ. ನೇನೇ ಬಾತು.

ನಾಶಹೊಂದಿದವುಗಳಲ್ಲಿ ‘ಗ್ರೇಟ್ ಆಕ್’ (Great Auk) ಪಕ್ಷಿ ಒಂದು. ಸುಮಾರು ೨ ೧/೨ ಅಡಿ ಉದ್ದವಿರುವ ಈ ಪಕ್ಷಿ ಹಾರುತ್ತಿರಲಿಲ್ಲ. ದ್ವೀಪಗಳಲ್ಲಿ ವಾಸವಾಗಿದ್ದು ಉತ್ತಮವಾಗಿ ಈಜಬಲ್ಲವಾದರೂ ನೆಲದಮೇಲೆ ಕಷ್ಟದಿಂದ ಮುಂದುವರೆಯುತ್ತಿದ್ದವು. ದೇಹದ ಮೇಲ್ಭಾಗ ಅಚ್ಚ ಕಪ್ಪು. ಕಣ್ಣಿನ ಸುತ್ತಲೂ ಮತ್ತು ಹೊಟ್ಟೆ ಭಾಗ ಪೂರ್ಣ ಬಿಳುಪು. ದೂರದಿಂದ ನೋಡಲು ಪೆಂಗ್ವಿನ್‌ಗಳಂತಿರುತ್ತಿದ್ದವು. ೧೪೯೭–೯೮ರಲ್ಲಿ ‘ಸಬಾಸ್ಟಿಯನ್ ಕೇಬಟ್’ ಎಂಬ ನಾವಿಕ ಅವುಗಳು ಲಕ್ಷಾಂತರ

ಗ್ರಂಥಭಂಡಾರ

ಸಂಖ್ಯೆಯಲ್ಲಿ ನ್ಯೂಫೌಂಡ್‌ಲೇಂಡ್ ತೀರದಲ್ಲಿರುವುದನ್ನು ಕಂಡು ಅವುಗಳು ರುಚಿಕರ ಮಾಂಸ ಮುದ್ದೆಯಂತಿರುವುದನ್ನು ವಿವರಿಸಿದ. ೧೫೩೪ರಲ್ಲಿ ಅಲ್ಲಿಗೆ ಹೋದ ಜಾಕ್ವಿಸ್ ಕಾರ್ಟಿಯರ್ ೧/೨ ಗಂಟೆಯಲ್ಲೇ ಎರಡು ದೋಣಿಗಳನ್ನು ತುಂಬುವಷ್ಟು ಪಕ್ಷಿಗಳನ್ನು ಕೊಂದು ತಂದ! ಅಲ್ಲಿಂದ ಮುಂದೆ ಅನೇಕರು ಅಲ್ಲಿಗೆ ಹೋಗಿ ಸಹಸ್ರಾರು ಪಕ್ಷಿಗಳನ್ನೂ ಅವುಗಳ ಮೊಟ್ಟೆಗಳನ್ನೂ ತರಲು ಪ್ರಾರಂಭಿಸಿದರು. ೧೮೪೪ರ ವೇಳೆಗೆ ಒಂದೂ ಉಳಿಯದೆ ಅವು ಪೂರ್ಣ ನಾಶಹೊಂದಿದವು.

ಹೀಗೆ ನಾಶವಾದವುಗಳಲ್ಲಿ ಮೆಡಗಾಸ್ಕರಿನ ' ಡೋಡೋ ' ಇನ್ನೊಂದು. ಡಚ್ಚರು ಅಲ್ಲಿಗೆ ಮೊದಲು ಹೋದಾಗ ಎಲ್ಲೆಲ್ಲೂ ಮಾಂಸ ಮುದ್ದೆಯಂತಿದ್ದ ಹಾರಲಾರದ ಈ ಕುರೂಪಿ ಪಕ್ಷಿಗಳೇ ತುಂಬಿದ್ದುದು ಕಂಡುಬಂದಿತು. ಅವು ತಿನ್ನಲು ರುಚಿಕರವೆಂದರಿತ ಅವರಿಗೆ ಅವುಗಳ ಬೇಟೆಯೇ ಮುಖ್ಯ ಕಸಬಾಯಿತು. ೧೬ನೇ ಶತಮಾನದಲ್ಲಿ ಅಲ್ಲಿ ನೆಲಸಲು ಬಂದವರಿಗೆ ಅದೇ ಮುಖ್ಯಾಹಾರವಾಗಿ ಅಳಿದುಳಿದಿದ್ದ ಕೆಲವು ಅವರ ನಾಯಿ ಬೆಕ್ಕುಗಳ ಪಾಲಾಯಿತು. ೧೭ನೇ ಶತಮಾನದ ಅಂತ್ಯದ ವೇಳೆಗೆ ಅವು ಪೂರ್ಣ ನಾಶಹೊಂದಿದವು.

ಇವುಗಳ ವಿಚಾರದಲ್ಲಿ ಪೂರ್ಣ ಮಾಹಿತಿಯಾಗಲೀ, ದಾಖಲಾತಿಯಾಗಲಿ, ನಮಗಿರುವುದಿಲ್ಲ. ದೊರೆತಿರುವ ವಿಚಾರ ಸಂಶೋಧನೆಯಿಂದ. ಆದರೆ ಅಮೆರಿಕಾದಲ್ಲಿದ್ದ " ಪ್ರಯಾಣಿಕ ಪಾರಿವಾಳ "ಗಳ ಕಥೆ ಒಂದು ದುರಂತ ಚರಿತ್ರೆ. ಮನುಷ್ಯ ಕುಲಕ್ಕೇ ಕಳಂಕಪ್ರಾಯವಾದದ್ದು. ಕೋಟ್ಯಾಂತರ ಸಂಖ್ಯೆಯಲ್ಲಿ ಅವು ಹಲವು ಕಾಡುಗಳನ್ನು ಪೂರ್ಣವಾಗಿ ಆವರಿಸಿ ಗೂಡು ಕಟ್ಟಿ ವಾಸಿಸುತ್ತಿದ್ದವು. ಅವು ದಕ್ಷಿಣ ದಿಕ್ಕಿಗೆ ವಲಸೆ ಹೋಗುವಾಗ ಇಡೀ ಆಕಾಶವೆಲ್ಲಾ ಮುಚ್ಚಿದಂತಾಗಿ, ರಾತ್ರೆ ಹಗಲೂ ೨-೩ ದಿನ ಹಾರಾಡುವುದು ಕಾಣುತ್ತಿತ್ತಂತೆ. ಒಂದು ಸಲದ ವಲಸೆ ಗುಂಪು ಸುಮಾರು ೧/೨ ಮೈಲಿ ಅಗಲ – ೧೫ – ೨೦ ಮೈಲಿ ನೀಳವಾಗಿರಬಹುದೆಂದು ಎಣಿಸಲಾಗಿತ್ತು. ೧೯ನೇ ಶತಮಾನದ ಆದಿಯಲ್ಲೂ ಅಮೆರಿಕಾದಲ್ಲಿ ಸುಮಾರು ೩೦೦ರಿಂದ ೪೦೦ ಕೋಟಿ ಪಕ್ಷಿಗಳಿದ್ದವು. ಆದರೆ ಅವುಗಳ ಮಾಂಸಕ್ಕೆ ಉತ್ತಮ ಬೆಲೆಯಿದ್ದದ್ದರಿಂದ ನಿರಂತರ ಬೇಟೆ ಪ್ರಾರಂಭವಾಯ್ತು. ವಲಸೆ ಹೋಗುವ ಪಕ್ಷಿ ಸಮೂಹವನ್ನು ಮಾನವ ಯುಕ್ತಿಯನ್ನೆಲ್ಲಾ ಪ್ರಯೋಗಿಸಿ ನಾಶಪಡಿಸಲಾರಂಭವಾಯ್ತು. ದೊಡ್ಡ ಪಿರಂಗಿಗಳ ತುಂಬ ಚರೆಗಳನ್ನು ತುಂಬಿ, ಗುಂಡಿಕ್ಕಿ ಒಂದೇ ಏಟಿಗೆ ಸಹಸ್ರಾರು ಪಕ್ಷಿಗಳನ್ನು ಸಾಯಿಸಲಾಗುತ್ತಿತ್ತು. ಕೊನೆಗೆ ಅವುಗಳು ರಾತ್ರೆ ವಿಶ್ರಮಿಸುತ್ತಿದ್ದ, ಗೂಡು ಕಟ್ಟುತ್ತಿದ ವನದ ಮರಗಳನ್ನೆಲ್ಲಾ ಕಡಿದು ದೊಡ್ಡ ಪಕ್ಷಿಗಳನ್ನೂ ಸಣ್ಣ ಮರಿಗಳನ್ನೂ ರಾಶಿಹಾಕಿ ಕೊಂದು ಮಾರಲಾಯಿತು. ಇವೆಲ್ಲದರ ಪರಿಣಾಮವಾಗಿ ೧೯೦೦ರ ವೇಳೆಗೇ ಅವುಗಳ ಸಂಖ್ಯೆ ಹಲವು ಮಾತ್ರವಾಗಿದ್ದು, ಆ ಜಾತಿಯ ' ಮಾರ್ತ ' ಎಂಬ ಕೊನೆಯ ಹಕ್ಕಿ ಸಿನ್‌ಸಿನಾಟಿ ಪ್ರಾಣಿ ಸಂಗ್ರಹಾಲಯದಲ್ಲಿ ೧೯೧೪ರ ಸೆಪ್ಟೆಂಬರ್ ಒಂದರಂದು ಅಸುನೀಗಿತು.

ಭರತಪುರ ಮಹಾರಾಜರ ಆಧೀನಕ್ಕೆ ಒಳಪಟ್ಟಿದ್ದ 'ಗನಾ' ಪ್ರದೇಶದಲ್ಲಿ ಪ್ರತಿ ವರ್ಷ ಬೇಟೆ ಏರ್ಪಡಿಸಲಾಗುತ್ತಿತ್ತು. ೧೯೧೪ರಲ್ಲಿ ಲಾರ್ಡ್ ಹಾರ್ಡಿಂಜ್‌ರ ಗೌರವಾರ್ಥ, ಏರ್ಪಡಿಸಿದ್ದ ಬೇಟೆ ಕೂಟದಲ್ಲಿ, ಒಂದೇ ದಿನ ೪,೦೬೨ ವಿವಿಧ ಪಕ್ಷಿಗಳನ್ನು ಕೊಲ್ಲಲಾಯಿತು. ಹಾಗೆಯೇ ೧೯೧೬ರಲ್ಲಿ ೪,೨೦೬ ಮತ್ತು ೪,೨೭೩ ಕೊಲ್ಲಲ್ಪಟ್ಟವೆಂಬ ದಾಖಲಾತಿಯಿದೆ! ಇದು ಹೆಮ್ಮೆ ಸೂಚಕವಾಗಿ ವಿವರಿತವಾಗಿದ್ದು, ಮಾನವನ ದೌರ್ಜನ್ಯದ ಪರಮಾವಧಿಯಾಗಿದೆ!

ಲ್ಯಾಬ್ರಡಾರ್ ಬಳಿಯ ಬಾತು ಕೋಳಿ, ಅಮೆರಿಕಾದ ಕರೋಲಿನಾ ಬಳಿಯ ಗಿಳಿ ಹಾಗೂ ಅಮೆರಿಕಾದಲ್ಲಿ ಎಲ್ಲೆಲ್ಲೂ ಹೇರಳವಾಗಿದ್ದ ಹೀತ್ ಕೋಳಿ ಅತೀವ ಬೇಟೆಯಿಂದಾಗಿ ಸಂಪೂರ್ಣ ನಾಶಹೊಂದಿವೆ. ಗಿಳಿ ಹಣ್ಣು ಹಂಪಲನ್ನು ನಾಶಪಡಿಸುವುದೆಂದು ಅವನ್ನು ಕಂಡಲ್ಲಿ ಕೊಂದು ನಿರ್ನಾಮಗೊಳಿಸಲಾಗಿದೆ. ಭಾರತದ ಬೆಟ್ಟ ಗೀಜಗ ಮತ್ತು ಕೆಂಪು ತಲೆಯ ಬಾತು ಈಗ ಬಹುಶಃ ಇದೇ ರೀತಿಯಲ್ಲಿ ನಾಶ ಹೊಂದಿರುವಂತಿದೆ. ಗೀಜಗ ೧೮೭೬ರಿಂದಲೂ ಕಂಡುಬಂದಿಲ್ಲ. ಬಾತು ೧೯೩೫ ರಿಂದಲೂ ಕಂಡಿಲ್ಲ.

ಅಮೆರಿಕಾದ ಬಳಿಯ "ವ್ಹೂಪಿಂಗ್ ಬಕಪಕ್ಷಿ" (Whooping crane) ಯೂರೋಪಿನ ಬಿಳಿ ಕೊಕ್ಕರೆ, ಕ್ಯಾಲಿಫೋರ್ನಿಯಾದ 'ಕಾಂಡರ್' (Condor) ರಣಹದ್ದು, ಭಾರತದ 'ಬಸ್ಟರ್ಡ್' (Bustard) ಪಕ್ಷಿ ಇವೆಲ್ಲವೂ ಹಲಕೆಲವು ಮಾತ್ರ ಈಗ ಉಳಿದಿದ್ದು, ಅವಕ್ಕೆ ರಕ್ಷಣೆ ಏರ್ಪಟ್ಟಿದ್ದರೂ ವೃದ್ಧಿಯಾಗುವ ಪೂರ್ಣ ನಂಬಿಕೆಯಿರುವುದಿಲ್ಲ. ಬಾತುಕೋಳಿಗಳು ವೃದ್ಧಿಯಾಗಲು ಅನುಕೂಲವಾಗಿದ್ದ ಜೌಗು ಪ್ರದೇಶವನ್ನೆಲ್ಲಾ ಬಸಿದು ಸುತ್ತಲಿನ ಮರ ಕಡಿದು ವ್ಯವಸಾಯ ಯೋಗ್ಯವಾಗಿಸುತ್ತಿರುವುದರಿಂದ ಅವುಗಳು ಗೂಡು ಕಟ್ಟಲೂ, ವೃದ್ಧಿಯಾಗಲೂ ಅನುಕೂಲವಿಲ್ಲದೆ ನಶಿಸುತ್ತಿವೆ. ಜನ ಸಂಖ್ಯೆ ಹೆಚ್ಚುತ್ತಿದ್ದಂತೆಲ್ಲಾ ಅವರ ಆಹಾರ ಉತ್ಪತ್ತಿಗೆ ನಡೆಸುವ ಏರ್ಪಾಟುಗಳಿಂದ ಪ್ರಾಣಿ ಜೀವನಕ್ಕೆ ತೊಂದರೆಯಾಗುವುದು ಸಹಜ. ಸರಿಯಾದ ಕಾರ್ಯಕ್ರಮ ಮೊದಲೇ ಯೋಚಿಸಿ ಕೈಕೊಳ್ಳದಿದ್ದಲ್ಲಿ ಅನೇಕ ಪ್ರಭೇದಗಳ ಶೀಘ್ರ ನಾಶಕ್ಕೆ ಮೂಲವಾಗಬಹುದು.

ಕ್ರಿಮಿನಾಶಕಗಳ ಬಳಕೆ ಪಕ್ಷಿಕುಲಕ್ಕೆ ಮಾರಕವಾಗುತ್ತಿದೆ. ವಿಷಪೂರಿತ ಬಿತ್ತನೆಯನ್ನು ತಿಂದು ಹಲವು ಸಾಯುತ್ತವೆ. ಕ್ರಿಮಿನಾಶಕ ಸಿಂಪಡಿಸುವುದರಿಂದ ಸತ್ತ ಕೀಟಗಳನ್ನು ತಿನ್ನುವುದರಿಂದ ಅವುಗಳಲ್ಲಿ ಅಡಕವಾದ ವಿಷಗಳು ಪಕ್ಷಿದೇಹದಲ್ಲಿ ಸೇರಿ ಅವುಗಳಿಗೆ ಕೆಡಕಾಗುತ್ತವೆ. ಗಿಡಗಳಿಗೆ ತಗುಲುವ ಕೀಟಗಳನ್ನು ನಾಶಪಡಿಸಲು ಡಿ. ಡಿ. ಟಿ. ಅಥವಾ ಬಿ. ಎಚ್. ಸಿ. ಪುಡಿಗಳನ್ನು ಎರಚಲಾಗುತ್ತಿದೆ. ಎಲೆಗಳು ಉದುರಿದಾಗ ಅವನ್ನು ಎರೆಹುಳ ಮುಂತಾದವು ತಿಂದಲ್ಲಿ ಅವುಗಳ ದೇಹದಲ್ಲಿ ಇವುಗಳ ಅಧಿಕಾಂಶ ಶೇಖರಣೆಯಾಗುತ್ತದೆ. ಸುಮಾರು ೭–೮ ಅಂತಹ ಎರೆಹುಳ ಸಣ್ಣ ಪಕ್ಷಿಗಳಿಗೆ ಮಾರಕವಾಗಬಹುದು. ಮೀನುಗಳೂ ಕೂಡ ಡಿ. ಡಿ. ಟಿ. ಮುಂತಾದುವನ್ನು ತಮ್ಮ

ದೇಹದಲ್ಲಿ ಶೇಖರಿಸಿಡಬಲ್ಲವು. ಅವುಗಳನ್ನು ಆಹಾರವಾಗಿ ಸೇವಿಸುವ ಪಕ್ಷಿಗಳಿಗೆ ಅಂತಹ ೫–೬ ಮೀನು ಮಾರಕವಾಗಬಲ್ಲವು. ಅಲ್ಲದೆ ಆ ಮಾರಕವಸ್ತು ಅಂಡಾಶಯ ವನ್ನು ಸೇರಿ ಮೊಟ್ಟೆಯಲ್ಲಿನ ಭ್ರೂಣವನ್ನೂ ನಾಶಗೊಳಿಸಿ ಪೀಳಿಗೆ ವೃದ್ಧಿಯಾಗದಂತೆ ಮಾಡಬಲ್ಲದು. ಔಷದ ಉಪಯೋಗದಲ್ಲಿ ಸಾಕಷ್ಟು ಎಚ್ಚರಿಕೆ ವಹಿಸದಿದ್ದಲ್ಲಿ ಮುಂದೆ ಅದು ಹೆಚ್ಚಿನ ನಾಶಕ್ಕೆ ಕಾರಣವಾಗಬಲ್ಲದು.

ಭಾರತದಲ್ಲಿ ಈ ಔಷದಗಳನ್ನು ಇತರ ಮುಂದುವರಿದ ದೇಶಗಳಿಗಿಂತ ಹೆಚ್ಚಾಗಿ ಬಳಸಲಾಗುತ್ತಿದೆ. ಹಲವು ಔಷದಗಳ ಬಳಕೆಗೆ ಉಗ್ರ ಕಾನೂನು ಇತರೆಡೆ ಬಳಕೆ ಯಲ್ಲಿದ್ದರೂ, ನಮ್ಮಲ್ಲಿ ಮೌಢ್ಯತೆಯೇ ಹೆಚ್ಚಾಗಿದೆ. ಹಲವು ಕಂಪನಿಗಳಿಗೆ ಲಾಭ ಒದಗಿಸುವ ದೃಷ್ಟಿಯೂ ಇದರಲ್ಲಿ ಅಡಕವಾಗಿರುವುದರಿಂದ ಬಹುಶಃ ಸಾಮಾನ್ಯ ಜನತೆಗೇ ಅದರ ಪೂರ್ಣ ತಿಳುವಳಿಕೆ ದೊರಕಿ ಉಪಯೋಗ ಕಡಮೆಯಾದ ಹೊರತು ಪಕ್ಷಿ ಕುಲಕ್ಕೆ ಉಳಿಗಾಲವಿರಲಾರದು. ಎಷ್ಟು ಬೇಗ ನಮ್ಮ ಜನತೆ ಜಾಗ್ರತೆಗೊಳ್ಳು ತ್ತದೋ, ಅಷ್ಟು ಬೇಗ ನಮ್ಮ ನೈಸರ್ಗಿಕ ದೈವದತ್ತ ಕೊಡುಗೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ' ಡೋಡೋ ' ' ಅಕ್ 'ಗಳಿಗಾದ ಗತಿಯೇ ಈಗಿನ ಪಕ್ಷಿ ಪ್ರಭೇದಗಳಿಗೇರ್ಪಟ್ಟು ಮುಂದಿನ ಪೀಳಿಗೆ ನಮ್ಮನ್ನು ಶಪಿಸುವಂತಾಗಬಹುದು.

ಅನೇಕ ಪಕ್ಷಿ ಪ್ರಭೇದಗಳಲ್ಲಿನ ವ್ಯತ್ಯಾಸ ತಮ್ಮ ಗಾತ್ರ ಅಥವಾ ಗರಿಗಳ ಅಥವಾ ದೇಹಭಾಗದ ಬಣ್ಣ ವೈವಿಧ್ಯತೆಯಿಂದ ಮಾತ್ರ. ಆದರಿಂದ ವಿವರಣೆ ಸೂಕ್ಷ್ಮವಾಗಿರ ಬೇಕು. ಪಕ್ಷಿ ದೇಹದ ವಿವಿಧ ಭಾಗಕ್ಕೆ ಬೇರೆ ಬೇರೆಯಾದ ಹೆಸರಿದೆ. ಸಾಮಾನ್ಯ ವಾಗಿ ಅದರಲ್ಲಿ ಸುಮಾರು ೨೨ ಮುಖ್ಯ ವಿವರಣೆಯಿಂದ ವಿವಿಧ ಭಾಗಗಳನ್ನು ಗುರುತಿಸಲಾಗಿದೆ. ರೆಕ್ಕೆ ವಿವರಣೆಯಲ್ಲಿ ಎಂಟಿದೆ. ಇದು ಸರಿಯಾದ ತಿಳುವಳಿಕೆ ದೊರಕಿ ಒಂದರಿಂದೊಂದನ್ನು ಬೇರ್ಪಡಿಸಿ ಗುರುತಿಸಲು ಸಹಾಯಕವಾಗಿದೆ.

೧. ಹಣೆ	೨. ಕಿರೀಟ	೩. ಕೊಕ್ಕು	೪. ಕಣ್ಣು
೫. ಕೆನ್ನೆ	೬. ಕತ್ತು	೭. ಗಲ್ಲ	೮. ಎದೆ
೯. ಹೊಟ್ಟೆ	೧೦. ಬೆನ್ನು	೧೧. ಹಿಂಬೆನ್ನು	೧೨. ರೆಕ್ಕೆ
೧೩. ಕಾಲು	೧೪. ಪಕ್ಕೆ	೧೫. ತುದಿಗರಿ	೧೬. ಮಧ್ಯಗರಿ
೧೭. ಬಾಲಗರಿ	೧೮. ಗಿಡ್ಡ ರೆಕ್ಕೆ	೧೯. ಮುಂಗೈ	೨೦. ಹಿಂಬೆರಳು
೨೧. ಮುಂಬೆರಳು	೨೨. ಕಿವಿಮರಸು.		

ಪ್ರಪಂಚದಲ್ಲಿ ಈಗ ೮೫೮೦ ಪಕ್ಷಿ ಪ್ರಭೇದಗಳನ್ನು ವಿವರಿಸಲಾಗಿದೆ. ಅವುಗಳಲ್ಲಿ ಇರುವ ವಿವಿಧ ವಲಯ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಬಹುಶಃ ಅದು ೩೦,೦೦೦ ಆಗಬಹುದು. ಭಾರತ ಮತ್ತು ಪಾಕಿಸ್ಥಾನ ಪ್ರದೇಶದಲ್ಲಿ ೨,೦೬೧ ಪ್ರಭೇದಗಳನ್ನು ವಿವರಿಸಲಾಗಿದೆ. ಅದರಲ್ಲಿ ಸುಮಾರು ೩೫೦ ಪ್ರಭೇದಗಳು ಉತ್ತರ ಶೀತವಲಯದಿಂದ ವಲಸೆ ಬರುವಂತಹವೇ. ಈ ಪ್ರದೇಶವನ್ನು ' ಪ್ರಾಚ್ಯ ' ಪ್ರದೇಶವೆಂದು ವಿವರಿಸಲಾಗಿದೆ.

ಭಾರತದಲ್ಲಿನ ಪ್ರದೇಶವನ್ನು ಪಕ್ಷಿ ವೈವಿಧ್ಯತೆಗನುಗುಣವಾಗಿ—

೧) ಗಂಗಾ ಬಯಲು – ಉ. ಭಾರತದ ಪೂರ್ಣ ಪ್ರದೇಶ.

೨) ದಕ್ಷಿಣ ಭಾರತ.

೩) ಹಿಮಾಲಯ ಪರ್ವತಶ್ರೇಣಿ, ಮತ್ತು

೪) ಅಸ್ಸಾಂ.

ಎಂದು ೪ ಭಾಗಗಳಾಗಿ ವಿಂಗಡಿಸಬಹುದು. ಪಂಜಾಬ್, ಸಿಂಧು ಮತ್ತು ರಾಜಾಸ್ಥಾನದಲ್ಲಿನ ಭಾಗದ ಪಕ್ಷಿಗಳು ಭಾರತದ ಇತರ ಭಾಗಗಳವಂತಿಲ್ಲ. ಅವು ಉ. ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿನ ಪಕ್ಷಿಗಳೊಡನೆ ಹೋಲಿಕೆ ಹೊಂದಿವೆ. ಹಿಮಾಲಯ ಪ್ರದೇಶವು ಮಧ್ಯ ಏಷ್ಯಾದೊಡನೆ ಸಾಮ್ಯತೆ ಹೊಂದಿದೆ. ಪಕ್ಷಿ ಪ್ರಭೇದಗಳ ಹಂಚಾಣಿಕೆ ಹಲವು ನಿರ್ದಿಷ್ಟ ಸೂಚನೆಗಳನ್ನನುಸರಿಸುತ್ತದೆ.

ಯಾವೊಂದು ಪ್ರಭೇದದ ದಪ್ಪಗಾತ್ರದ ಪಕ್ಷಿಗಳು ಸಾಮಾನ್ಯವಾಗಿ ತಣ್ಣಗಿರುವೆಡೆ ಹೆಚ್ಚಾಗಿರುತ್ತವೆ. ಸಣ್ಣಗಾತ್ರದವು ಉಷ್ಣ ಭಾಗದಲ್ಲಿ ಹೆಚ್ಚಾಗಿರುತ್ತವೆ. ಹಾಗೂ ಶೀತವಲಯುದವು ಉಷ್ಣವಲಯದವಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಮೊಟ್ಟೆಯಿಡುತ್ತವೆ. ಮರಳುಗಾಡಿನಲ್ಲಿನ ಪಕ್ಷಿಗಳಿಗೆ ಹಗುರ ಬಣ್ಣವಿರುತ್ತದೆ. ದಟ್ಟ ಕಾಡುವಾಸಿಗಳು ವಿವಿಧ ವರ್ಣವಿರುತ್ತವೆ. ಗಾಳಿಯಲ್ಲಿ ತೇವಾಂಶ ಹೆಚ್ಚಾಗಿದ್ದಷ್ಟೂ ಬಣ್ಣ ತೀವ್ರವಾಗುತ್ತದೆ.

ಪ್ರಾಣಿವರ್ಗದಲ್ಲಿ ಅಂಗರಚನೆಯಲ್ಲಿಯೂ, ಹೊರರೂಪದಲ್ಲಿಯೂ ತುಂಬ ಹೋಲುವ ವಿವಿಧ ಪ್ರಾಣಿಗಳಿರುತ್ತವೆ. ಈ ಪ್ರಾಣಿಗಳ ಗುಣ ವಿಶೇಷಗಳೆಲ್ಲಾ ಆನುವಂಶಿಕವಾದವು. ಅವು ಅನೇಕ ತಲೆಮಾರುಗಳಾದರೂ ಹಾಗೇ ಇರುತ್ತವೆ. ವಂಶಾನುಗತವಾಗುವ ಗುಣವಿಶೇಷಗಳಿಂದ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಪ್ರಾಣಿಗಳೆಲ್ಲಾ ಒಂದು ಪ್ರಭೇದಕ್ಕೆ ಸೇರುತ್ತವೆ. ಅನೇಕ ಪ್ರಭೇದಗಳಲ್ಲಿನ ಮುಖ್ಯಾಂಶಗಳು ಒಂದೇ ರೀತಿಯದಾಗಿರುತ್ತವೆ. ಅವುಗಳೆಲ್ಲಾ ಸೇರಿದಲ್ಲಿ ಒಂದು 'ಜಾತಿ'ಯಾಗುತ್ತದೆ. ಹೀಗೆ ಹಲವು ಜಾತಿಗಳು ಸೇರಿ "ಕುಟುಂಬ"ವಾಗಿಯೂ, ಹಲವು ಕುಟುಂಬಗಳು ಸೇರಿ ಒಂದು 'ಉಪವರ್ಗ'ವೂ, ಹಲವು ಉಪವರ್ಗಗಳಿಂದ 'ವರ್ಗ'ವೂ, ಹಲವು ವರ್ಗಗಳಿಂದ "ವಂಶ"ವೂ ಏರ್ಪಡುತ್ತದೆ.

ಪಕ್ಷಿವರ್ಗದಲ್ಲಿಯೂ ಇಂತಹುದೇ ವಿಭಾಗಗಳೇರ್ಪಟ್ಟಿವೆ. ಈ ವಿವರಣೆಯಿಂದ ಪಕ್ಷಿಗಳನ್ನು ಚೆನ್ನಾಗಿ ಗುರುತಿಸಲು ಸಹಾಯಕವಾಗುವಂತೆ ಅಂತರ ರಾಷ್ಟ್ರೀಯ ದ್ವಿಪದ ಹೆಸರನ್ನೇ ಎಲ್ಲಕ್ಕೂ ಇಡಲಾಗಿದೆ. ಇದರಿಂದ ಅವುಗಳ ಜಾತಿ ಮತ್ತು ಪ್ರಭೇದ ಸುಲಭವಾಗಿ ತಿಳಿಯುತ್ತದೆ. ಸಾಮಾನ್ಯವಾಗಿ ಒಂದೇ ಪಕ್ಷಿಗೆ ಸ್ವಭಾಷೆಯಲ್ಲಿ ಬೇರೆ ಬೇರೆ ಹೆಸರಿರುತ್ತದೆ. ಇದರಿಂದಾಗಿ ಒಂದೇ ಪ್ರಭೇದದ ಪಕ್ಷಿಗೆ ಭಾರತದಲ್ಲೇ ಹಲವಾರು ಹೆಸರುಗಳಿರಬಹುದು. ಇದು ಎಲ್ಲರಿಗೂ ಅರ್ಥವಾಗುವುದಿಲ್ಲ. ಸಂಶಯಕ್ಕೆಡೆ ಕೊಡುತ್ತದೆ. ಆದರೆ ಅಂತರ ರಾಷ್ಟ್ರೀಯ ಹೆಸರು, ಯಾವ ದೇಶದಲ್ಲಾಗಲೀ –

ಯಾವ ಭಾಗದಲ್ಲಾಗಲೀ ಒಂದೇ ಪಕ್ಷಿಯನ್ನು ಸೂಚಿಸುವುದರಿಂದ, ಸ್ಥಳೀಯ ಹೆಸರು ಏನೇ ಇರಲಿ ನಮಗೆ ಅರ್ಥವಾಗಿ ಗುರುತು ಹಿಡಿಯಲು ಸಹಾಯಕವಾಗುತ್ತದೆ.

ಪಕ್ಷಿವರ್ಗದಲ್ಲಿನ ಪ್ರಭೇದಗಳಲ್ಲಿ ಸ್ಥಳಾನುಕೂಲಕ್ಕನುಗುಣವಾಗಿ ಸಣ್ಣ ಸಣ್ಣ ಮಾರ್ಪಾಟು ಏರ್ಪಡುತ್ತದೆ. ಗಾತ್ರ, ದೇಹದ ಯಾವುದಾದರೊಂದು ಭಾಗದ ಬಣ್ಣ ಇತ್ಯಾದಿಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಅದನ್ನು ಬರೇ ಜಾತಿ ಪ್ರಭೇದ ಸೂಚನೆಯ ದ್ವಿಪದ ಹೆಸರು ವಿವರಿಸುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರಭೇದ ವೈವಿಧ್ಯತೆಯನ್ನು ಸೂಚಿಸಲನುಕೂಲವಾಗುವಂತೆ ಇನ್ನೊಂದು ಲ್ಯಾಟಿನ್ ಹೆಸರನ್ನು ಸೇರಿಸಲಾಗುತ್ತದೆ. ಆಗ ಮೂರು ಪದಗಳಿದ್ದು, ಮೊದಲನೆಯದು ಜಾತಿಯನ್ನೂ ಎರಡನೆಯದು ಪ್ರಭೇದವನ್ನೂ ಮೂರನೆಯದು ವಿಧವನ್ನೂ ಸೂಚಿಸುತ್ತವೆ. ಇದರಿಂದ ಪಕ್ಷಿ ವಿವರಣೆ ಸುಲಭವಾಗುತ್ತದೆ.

ಸಾಮಾನ್ಯ ಮನೆ ಕಾಗೆ, 'ಕಾರ್‌ವಸ್' ಜಾತಿಗೆ ಸೇರಿದ 'ಸ್ಪ್ಲೆಂಡೆನ್ಸ್' ಪ್ರಭೇದಕ್ಕೆ ಸೇರುತ್ತದೆ. ಆದರೆ ದೇಶದ ವಿವಿಧ ಭಾಗದಲ್ಲಿರುವ ಪ್ರಭೇದದಲ್ಲೇ ವೈವಿಧ್ಯತೆಯಿದೆ. ಆದ್ದರಿಂದ ಅವುಗಳ ವ್ಯತ್ಯಾಸ ವರ್ಣಿಸಲು ಈ ಕೆಳಗಿನ ಹೆಸರುಗಳನ್ನು ಬಳಸಲಾಗಿದೆ.

ಸಿಂಧೂನದಿಯ ಬಿಳಿಯ ಕಾಗೆ	:	ಕಾರ್‌ವಸ್ ಸ್ಪ್ಲೆಂಡೆನ್ಸ್ ಜುಗ್‌ಮಾಯರಿ.
ಬರ್ಮಾ ಬಿಳಿಯ ಕಾಗೆ	:	ಕಾರವಸ್ ಸ್ಪ್ಲೆಂಡೆನ್ಸ್ ಇನ್‌ಸೋಲೆನ್ಸ್.
ಸಾಮಾನ್ಯ ಕಾಗೆ	:	ಕಾರ್‌ವಸ್ ಸ್ಪ್ಲೆಂಡೆನ್ಸ್ ಸ್ಪ್ಲೆಂಡೆನ್ಸ್.
ಸಿಲೋನಿನ ಕಾಗೆ	:	ಕಾರ್‌ವಸ್ ಸ್ಪ್ಲೆಂಡೆನ್ಸ್ ಪ್ರೊಟೆಗೇಟಸ್.

ಇದರಿಂದ ಕಾಗೆಯಾದರೂ ಯಾವ ಭಾಗದ ಕಾಗೆಯೆಂದು ಕೂಡಲೆ ಅರ್ಥವಾಗಲು ಸಾಧ್ಯವಾಗುತ್ತದೆ. ಭಾರತದಲ್ಲಿನ ೨,೦೦೦ ಕ್ಕೆ ಮೇಲ್ಪಟ್ಟ ಪ್ರಭೇದಗಳಲ್ಲಿ 'ಸಾರಸ್ ಕೊಕ್ಕರೆ' ಮತ್ತು 'ಹಿಮಾಲಯದ ಗಡ್ಡವಿರುವ ಹದ್ದು' ಬಹು ದೊಡ್ಡ ಪಕ್ಷಿಗಳು. 'ನವಿಲು' 'ಬಸ್ಟರ್ಡ್' ಎರಡನೆಯವು. 'ಕೊಕ್ಕರೆ' ೫–೬ ಅಡಿ ಎತ್ತರವಿರುತ್ತವೆ. ಹದ್ದಿನ ರೆಕ್ಕೆಯ ಅಗಲ ೮ ಅಡಿ ಮೀರಬಹುದು. ಭಾರತದ ಬಲು ಸಣ್ಣ ಪಕ್ಷಿ 'ಟಿಕೆಲ್ಲಿರ ಜೇನುಪಕ್ಷಿ'! ಹೆಬ್ಬೆಟ್ಟಿನ ಗಾತ್ರ ಮಾತ್ರವಿರುತ್ತದೆ!

ಮನಮೋಹಕ ಬಣ್ಣ ವೈವಿಧ್ಯತೆಯಲ್ಲಿ ನವಿಲು ಮುಖ್ಯ. ಅಲ್ಲದೆ ಕಾಡುಗಳಲ್ಲಿ ಪ್ರಕಾಶಮಾನ ಬಣ್ಣ ಹೊಂದಿರುವ ಅನೇಕ ಸಣ್ಣ ಪಕ್ಷಿಗಳಿವೆ. ಜೇನುಪಕ್ಷಿಗಳು ಬಹು ಸಣ್ಣವಾದರೂ, ಬಣ್ಣ ಮೋಹಕ. ಅವು ಹೂವಿನಿಂದ ಹೂವಿಗೆ ಹಾರಾಡುವುದನ್ನು ನೋಡಲು ಆನಂದ.

ಭಾರತದಲ್ಲಿದ್ದ ಪಕ್ಷಿ ಪ್ರಭೇದಗಳಲ್ಲಿ ಬಹುಶಃ ಮೂರು ನಿರ್ನಾಮವಾಗಿರಬೇಕು. ಅವು ಬೆಟ್ಟದ ಗೀಜಗ, ಜೇರ್‌ಡನ್ನರ ಕೋರ್‌ಸರ್ ಮತ್ತು ನಸುಗೆಂಪು ತಲೆಯ ಬಾತು. ಈ ಮೂರು ಹಲವು ವರ್ಷಗಳಿಂದ ಹುಡುಕುತ್ತಿದ್ದರೂ ಒಂದಾದರೂ ಕಾಣಿಸುತ್ತಿಲ್ಲ. ಈಗಿರುವ ಪಕ್ಷಿ ಪ್ರಭೇದಗಳಲ್ಲೆಲ್ಲಾ ಗುಬ್ಬಚ್ಚಿ, ಕಾಗೆ ಮತ್ತು ಹಲವು ಸ್ಥಳಗಳಲ್ಲಿ

ಮೈನಾ, ಅತಿ ಹೆಚ್ಚಾಗಿರುವ ಪಕ್ಷಿಗಳು ಹಿಮಾಲಯದ ಬಳಿಯ ತ್ರಷ್, ಮತ್ತು ಬೆಟ್ಟದ ಮೈನಾ ನಮ್ಮಲ್ಲಿರುವ ಪಕ್ಷಿಗಳಲ್ಲಿ ಚೆನ್ನಾಗಿ ಹಾಡಬಲ್ಲ ಹಾಗೂ ಮಾತನಾಡ ಬಲ್ಲವು. ರಕ್ಷಣೆ ಒದಗಿಸದಿದ್ದಲ್ಲಿ ಬಹು ಸುಂದರ ಹಾಗೂ ಅಪರೂಪವಾದ ಅನೇಕ ಭಾರತೀಯ ಪಕ್ಷಿ ಪ್ರಭೇದಗಳು ಬಹು ಬೇಗ ನಶಿಸಿ ಇಲ್ಲವಾಗಬಹುದು.

ಮೊದಲು ಬದುಕಿದ್ದ ಪಕ್ಷಿವರ್ಗದ ಕೇವಲ ಶೇ. ೧೦ ಭಾಗದವು ಪಳೆಯುಳಿಕೆ ಗಳು ಪ್ಲೇಸ್ಟೋಸೀನ್ ಜೀವಕಲ್ಪದಿಂದ ನಮಗೆ ದೊರೆತಿವೆ. ಉತ್ತರ ಅಮೆರಿಕಾದ ಮುಂಜುಯುಗದ ಪಳೆಯುಳಿಕೆಗಳಿಂದ ಆಗ ಸುಮಾರು ೨೪೮ ಪ್ರಭೇದಗಳು ಬದುಕಿದ್ದ ವೆಂದೂ ಊಹಿಸಲಾಗಿದೆ. ಇದರಿಂದ ಪ್ಲೇಸ್ಟೋಸೀನ್ ಯುಗದಲ್ಲಿ ಸುಮಾರು ೧೧,೫೦೦ ಪ್ರಭೇದಗಳು ಇದ್ದಿರಬಹುದೆಂದು ಊಹಿಸಲಾಗಿದೆ.

ಪಕ್ಷಿವರ್ಗ ೩ – ೫ ಲಕ್ಷ ವರ್ಷಗಳ ಹಿಂದೆ ಬಹಳವಾಗಿ ವೃದ್ಧಿಯಾಗಿದ್ದು ಅಲ್ಲಿಂದ ಕ್ರಮೇಣ ಕ್ಷೀಣಿಸುತ್ತಿರುವಂತಿದೆ. ಬಹುಶಃ ಪ್ರತಿ ಪ್ರಭೇದ ೧೦ ಲಕ್ಷ ವರ್ಷಕ್ಕಿಂತ ಹೆಚ್ಚಾಗಿ ಜೀವಿಸಲಾರವು ಎಂದು ಕಂಡುಬಂದಿದೆ. ಇದರಂತೆ ಆರ್ಕಿಯಾಪ್ಟರಿಸ್ ಇದ್ದ ಸಮಯಕ್ಕೂ, ಈಗಿಗೂ ಮಧ್ಯೆ ಸುಮಾರು ೧೫ರಿಂದ ೨೦ ಲಕ್ಷ ಪ್ರಭೇದಗಳು ಉತ್ಪನ್ನ ವಾಗಿ ನಶಿಸಿರಬೇಕು. ಹಾಗಿದ್ದಲ್ಲಿ ಈಗ ಜೀವಂತವಿರುವ ಪಕ್ಷಿ ಸಮೂಹ ಹಿಂದಿದ್ದ ಪ್ರಭೇದಗಳ ಕೇವಲ ಶೇ ೧/೨ ಭಾಗ ಮಾತ್ರವಾಗುತ್ತದೆ. ಪ್ರಪಂಚದಲ್ಲಿನ ಒಟ್ಟು ೮,೫೮೦ ಜೀವಂತ ಪಕ್ಷಿ ಪ್ರಭೇದಗಳನ್ನು ಹಲವು ಹೋಲಿಕೆಯ ಆಧಾರದಿಂದ ೧೫೫ ಕುಟುಂಬಗಳಾಗಿಯೂ, ೨೭ ಉಪವರ್ಗಗಳಾಗಿಯೂ ವಿಂಗಡಿಸಲಾಗಿದೆ. ಒಂದೇ ಉಪವರ್ಗದ ಜಾತಿ ಪ್ರಭೇದಗಳು ಹೊರ ನೋಟಕ್ಕೆ ಹೆಚ್ಚು ವೈವಿಧ್ಯತೆ ಹೊಂದಿ ಹೋಲಿಕೆಯಿಲ್ಲದಿರುವಂತೆ ತೋರಬಹುದು. ಆದರೆ ಅವುಗಳ ಅಂಗರಚನೆ ಮುಂತಾದ ಹಲವು ಮುಖ್ಯಾಂಶಗಳ ಆಧಾರದಿಂದ ಈ ರಚನೆಯಾಗಿರುವುದರಿಂದ ಸರಿಯಾಗಿದೆ.

ಸಂಖ್ಯೆ	ಉಪವರ್ಗ		ಪಕ್ಷಿಗಳು	ಕುಟುಂಬ	ಪ್ರಭೇದಗಳು
೧.	ಸ್ಫೀನಿಸ್ಸಿಫಾರ್‌ಮೀಸ್ (Sphenisciformes)	:	ಪೆಂಗ್ವಿನ್‌ಗಳು (Penguins)	೧	೧೫
೨.	ಸ್ಟ್ರೂತಿಯೋನಿಫಾರ್‌ಮಿಸ್ (Struthioniformes)	:	ಉಷ್ಟ್ರಪಕ್ಷಿಗಳು (Ostriches)	೧	೧
೩.	ಕಾಸುವಾರಿಫಾರ್‌ಮಿಸ್ (Casuariiformes)	:	ಕಸೋವಾರಿ, ಎಮು (Cassowaries, emus)	೨	೪
೪.	ಆಪ್ಟರಿಜಿಫಾರ್‌ಮಿಸ್ (Apterygiformes)	:	ಕಿವಿ (Kiwis)	೧	೩
೫.	ರೈಫಾರ್‌ಮಿಸ್ (Rheiformes)	:	ರಿಯಾ (Rheas)	೧	೨

ಸಂಖ್ಯೆ	ಉಪವರ್ಗ	ಪಕ್ಷಿಗಳು	ಕುಟುಂಬ	ಪ್ರಭೇದಗಳು
೬.	ಟಿನಾಮಿಫಾರ್ ಮಿಸ್ (Tinamiformes)	: ಟಿನಾಮಸ್ (Tinamous)	೧	೪೨
೭.	ಗೇವಿಫಾರ್ ಮಿಸ್ (Gaviiformes)	: ಮುಳುಗುವ ಪಕ್ಷಿಗಳು (Divers)	೧	೪
೮.	ಪೋಡಿಸಿಪೆಡಿಫಾರ್ ಮಿಸ್ (Podicipediformes)	: ಗ್ರೀಬ್ (Grebes)	೧	೧೭
೯.	ಪ್ರೋಸೆಲ್ಲೇರಿಫಾರ್ ಮಿಸ್ (Procellariformes)	: ಆಲ್ ಬಟ್ರಾಸ್, ಪಿಟ್ರೆಲ್ (Albatross, Petrels)	೪	೯೨
೧೦.	ಪೆಲಿಕಾನಿಫಾರ್ ಮಿಸ್ (Pelecaaniformes)	: ಪೆಲಿಕಾನ್, ನೀರುಕಾಗೆ, ಅನಿಂಗಾ (Pelicans, Cormorants, Anhingas ಬೂಬಿ, ಫ್ರಿಗೇಟ್ Boobies, Frigate birds)	೬	೫೦
೧೧.	ಸಿಕೋನಿಫಾರ್ ಮಿಸ್ (Ciconiiformes)	: ಕೊಕ್ಕರೆ, ಪ್ಲೆಮಿಂಗೋ (Heron, Stork, Flamingos)	೭	೧೧೪
೧೨.	ಅನ್ ಸೇರಿಫಾರ್ ಮಿಸ್ (Anseriformes)	: ಬಾತು, ದಪ್ಪಬಾತು, ಹಂಸ, (Geese, Ducks, Swans)	೨	೧೪೯
೧೩.	ಫಾಲ್ ಕೋನಿಫಾರ್ ಮಿಸ್ (Falconiformes)	: ಹದ್ದು, ಗಿಡಗ ಇತ್ಯಾದಿ (Vultures, Hawks, Eagles)	೫	೨೭೪
೧೪.	ಗ್ಯಾಲಿಫಾರ್ ಮಿಸ್ (Galliformes)	: ಗೀಜಗ, ಟರ್ಕಿ, ಕೋಳಿ ಇತ್ಯಾದಿ (Grouse gnail, Turkeys)	೭	೨೫೦
೧೫.	ಗ್ರೂಯಿಫಾರ್ ಮಿಸ್ (Gruiformes)	: ಕೊಕ್ಕರೆ, ಕೂಟ್, ಬಸ್ಟರ್ಡ್ (Cranes, rails, Coots, Bustard)	೧೧	೧೮೫
೧೬.	ಚರಾಡ್ರಿಫಾರ್ ಮಿಸ್ (Charadriiformes)	: ಗಲ್, ಜಕಾನಾ, ಪ್ಲೋವರ್ (Gulls, Jacanas, Plover, Terns)	೧೬	೨೯೩
೧೭.	ಕೊಲಂಬಿಫಾರ್ ಮಿಸ್ (Columbiformes)	: ಪಾರಿವಾಳಗಳು (Pigeons, Sand grouse)	೩	೩೦೧
೧೮.	ಸಿಟ್ಟಾಸಿಫಾರ್ ಮಿಸ್ (Psittaciformes)	: ಗಿಳಿ ಜಾತಿಗಳು (Parrots, Parakeets, lories etc)	೧	೩೧೫
೧೯.	ಕ್ಯುಕುಲಿಫಾರ್ ಮಿಸ್ (Cuculiformes)	: ಕೋಗಿಲೆಗಳು (Cuckoos, touracas)	೨	೧೪೩
೨೦.	ಸ್ಟ್ರಿಗಿಫಾರ್ ಮಿಸ್ (Strigiformes)	: ಗೂಬೆಗಳು (Owls)	೨	೧೩೨

ಸಂಖ್ಯೆ	ಉಪವರ್ಗ	ಪಕ್ಷಿಗಳು	ಕುಟುಂಬ	ಪ್ರಭೇದಗಳು
೨೧.	ಕ್ಯಾಪ್ರಿಮಲ್‌ಜಿಫಾರ್‌ಮಿಸ್ (Caprimulgiformes)	: ಗುಪ್ಪಟ, ಕಪ್ಪೆಬಾಯಿ (frogmouth, Nightjar)	೫	೯೨
೨೨.	ಎಪೋಡಿಫಾರ್‌ಮಿಸ್ (Apodiformes)	: ಸ್ವಿಫ್ಟ್‌ಗಳು, ಹಮ್ಮಿಂಗ್ ಪಕ್ಷಿ (Swift, humming bird)	೩	೩೮೮
೨೩.	ಕೋಲಿಫಾರ್‌ಮಿಸ್ (Coliiformes)	: ಸಣ್ಣ ಹಕ್ಕಿಗಳು (Mouse birds)	೧	೬
೨೪.	ಟ್ರೋಗೋನಿಫಾರ್‌ಮಿಸ್ (Trogoniformes)	: ಟ್ರೋಗಾನ್‌ಗಳು (Trogons)	೧	೩೫
೨೫.	ಕೊರೇಸಿಫಾರ್‌ಮಿಸ್ (Coraciiformes)	: ಮಿಂಚುಳ್ಳಿ, ಹೂಪೀ (Kingfisher, Hoopee ಜೇನುಹುಳ ಭಕ್ಷಕಗಳು Bee-eaters)	೭	೧೬೨
೨೬.	ಪಿಸಿಫಾರ್‌ಮಿಸ್ (Piciformes)	: ಮರಕುಟುಕ, ಜೇನುದರ್ಶಕ (Woodpeckers, Honey-guides etc)	೭	೩೭೭
೨೭.	ಪಸೆರಿಫಾರ್‌ಮಿಸ್ (Passeriformes)	: ಗುಬ್ಬಚ್ಚಿ, ಸ್ವಾಲೋ (Sparrows, Swallow ತ್ರಷ್, ಲಾರ್ಕ್ ಇತ್ಯಾದಿ Thrush, lark etc.)	೫೫	೫೧೧೦
		ಒಟ್ಟು	೧೫೫	

ಹಲವರು ಇದನ್ನು ೨೮ ಮಾಡಿ ಫ್ಲೆಮಿಂಗೋಗಳನ್ನು ಪ್ರತ್ಯೇಕವಾದ ಒಂದು ಉಪವರ್ಗವಾಗಿ ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಫ್ಲೆಮಿಂಗೋಗಳ ಕೊಕ್ಕಿನಲ್ಲಿರುವ ಜರಡಿಯನುಕೂಲ ಇನ್ನಾವ ಪಕ್ಷಿಗೂ ಇಲ್ಲದಿರುವುದೇ ಇದಕ್ಕೆ ಕಾರಣ. ಆದರೆ ಇದಕ್ಕೆ ಬಹುಮತ ದೊರಕಿಲ್ಲವಾಗಿ ಈ ೨೭ ಉಪವರ್ಗಗಳನ್ನು ಮಾತ್ರ ಅನುಮೋದಿಸಲಾಗಿದೆ.

ಪಕ್ಷಿಗಳು

ಭಾಗ ಎರಡು

ಕುಟುಂಬ ವರ್ಣನೆ

ಕುಟುಂಬ ವರ್ಣನೆ

ಉಪವರ್ಗ ೧ : ಸ್ಫಿನಿಸಿಫಾರ್‌ಮಿಸ್ (Sphenisciformes)

ಕುಟುಂಬ ೧ : ಸ್ಫಿನಿಸಿಡೀ (Spheniscidae)

ಜಾತಿ – ೬

ಪ್ರಭೇದ – ೧೫

ಇದು ಅನೇಕ ವಿಚಿತ್ರ ದೇಹರಚನೆಗಳನ್ನೊಳಗೊಂಡಿರುವ ಕುತೂಹಲಕಾರಿ ಉಪವರ್ಗ. ೫ ಕೋಟಿ ವರ್ಷಗಳ ಹಿಂದೆಯೇ ಈಗಿರುವ ಪ್ರಭೇದಗಳು ಹೆಚ್ಚಾಗಿ ವರ್ಧಿಸಿದ್ದು, ದಕ್ಷಿಣ ಶೀತವಲಯದಲ್ಲೆಲ್ಲಾ ಪ್ರಸರಿಸಿತ್ತೆಂದು ಪಳೆಯುಳಿಕೆಗಳಿಂದ ತಿಳಿದುಬರುತ್ತದೆ. ಆದರೆ ಅವು ಗಾತ್ರದಲ್ಲಿ ದಪ್ಪವಾಗಿದ್ದು, ರೆಕ್ಕೆ ನೀಳವಾಗಿದ್ದುವು. ಅವು ಹಾರಾಡುತ್ತಿರಲಿಲ್ಲ. ಈ ಉಪವರ್ಗದವಕ್ಕೆ ಹಾರಾಡುವ ಶಕ್ತಿ ಸುಮಾರು ೧೦ ಕೋಟಿ ವರ್ಷಗಳ ಹಿಂದೆಯೇ ಲಯವಾಗಿತ್ತು. ಅದಕ್ಕೆ ಬದಲು, ಮೀನು ಮುಖ್ಯಾಹಾರವಾದ್ದರಿಂದ ನುರಿತ ಈಜುಗಾರಿಕೆ ಕಂಡುಬರುತ್ತದೆ. ಈಜಲು ಅನುಕೂಲವಾಗುವಂತಹ ಅಂಗರಚನೆಯೂ, ಮಾರ್ಪಾಟೂ ಏರ್ಪಟ್ಟಿರುತ್ತದೆ.

ಈಗ ಒಂದೇ ಕುಟುಂಬದ, ೬ ಜಾತಿಯ, ೧೫ ಪ್ರಭೇದಗಳು ದ. ಶೀತವಲಯದ ಹಲವೆಡೆ ಅಂದರೆ ದ. ಆಫ್ರಿಕಾ, ದ. ಅಮೇರಿಕಾ, ದಕ್ಷಿಣ ಆಸ್ಟ್ರೇಲಿಯಾ, ನ್ಯೂಜಿಲೆಂಡ್

ಮತ್ತು ಅಂಟಾರ್ಕ್ಟಿಕಾ ಖಂಡದ ತೀರ ಹಾಗೂ ಒಳಪ್ರದೇಶಗಳಲ್ಲೂ, ಅಲ್ಲಿಯ ದ್ವೀಪಗಳಲ್ಲೂ ಮಾತ್ರ ವಾಸಿಸುತ್ತವೆ.

ಅವುಗಳಿಗೆ ದೋಣಿಯಾಕಾರದ ಎದೆ ಮೂಳೆಗಳು ರಚಿತವಾಗಿದ್ದರೂ ಹಾರಾಡಲು ಸಹಾಯಕವಾದ ಗರಿಗಳ ವೃದ್ಧಿಯಿಲ್ಲ. ದೋಣಿಯಾಕಾರದ ಎದೆಮೂಳೆ ಹಾರಾಡಲು ಅನುಕೂಲವಾಗಿ ರಚಿತವಾದದ್ದು. ಆದರೆ ಹಾರಲಾರದೆ ಆ ನಿಯಮಕ್ಕೆ ಇದೊಂದೇ ಕುಟುಂಬ ಅಪವಾದವಾಗಿರುವುದು. ಮೊಣಕೈ ಎಲುಬುಗಳು ಮಣಿಯದೆ ಪೂರ್ಣ ಧೃಡತೆ ಹೊಂದಿರುವುದೂ ಒಂದು ವೈಶಿಷ್ಟ್ಯ. ಅದರಿಂದಲೇ ಅವುಗಳ ರೆಕ್ಕೆ ಈಜು ರೆಕ್ಕೆಗಳಾಗಿ ಮಾರ್ಪಟ್ಟಿದ್ದು ಭುಜದ ಬಳಿ ಮಾತ್ರ ಮಣಿಯುವಂತಿರುತ್ತವೆ.

ಅವುಗಳ ಮೈಯೆಲ್ಲಾ ಗಟ್ಟಿಗರಿಗಳಿಂದಾವೃತವಾಗಿ ಹೊರಭಾಗ ನುಣುಪಾಗಿರುತ್ತದೆ. ಇದರಿಂದ ಆ ಚಳಿಪ್ರದೇಶದಲ್ಲಿ ಉಣ್ಣೆಯಂತೆ ದೇಹವನ್ನು ಶಾಖವಾಗಿಡಲೂ, ಈಜುವಾಗ ನೀರು ಅಂಟಿಕೊಳ್ಳದಂತಿರಲೂ ಸಹಾಯಕವಾಗುತ್ತದೆ. ಕತ್ತು ಸಣ್ಣ. ಧೃಡವಾದ ಮೊನಚು ಕೊಕ್ಕು ಮೀನುಹಿಡಿಯಲು ಅನುಕೂಲ. ವೇಗವಾಗಿ ಈಜಲು ಈಜುರೆಕ್ಕೆ ಸಹಾಯಕ. ಕಾಲಿನಲ್ಲಿ ಜಾಲಾಂಗುಲವಿದ್ದರೂ ಅವು ಈಜುವಾಗ ಹುಟ್ಟುಗಳಂತೆ ದೇಹವನ್ನು ಅತ್ತಿತ್ತ ತಿರುವಲು ಮಾತ್ರ ಸಹಾಯಕ.

ಸಮುದ್ರದಲ್ಲಿ ತಲೆಮಾತ್ರ ಮೇಲೆ ಕಾಣುವಂತೆ ಮುಳುಗಿ ಈಜುತ್ತಿರಲು ಅವುಗಳಿಗೆ ಬಲು ಇಷ್ಟ. ದೂರ ಪ್ರಯಾಣಮಾಡುವಾಗಲೂ ಸಹಸ್ರಾರು ಗುಂಪಾಗಿ ಚಲಿಸಿ, ಆಗ್ಗಾಗ್ಗೆ ಉಸಿರಾಡಲು ಮಾತ್ರ ಹೊರಳಿ ಮೇಲೆದ್ದು ಮುಳುಗುತ್ತವೆ. ಗಂಟೆಗೆ ೨೫ ಮೈಲಿ ವೇಗದಲ್ಲಿ ಈಜಬಲ್ಲವು. ಹಾಗೂ ವೇಗದಿಂದ ಈಜುತ್ತಿರುವಂತೆಯೇ ನೀರಿನ ಮೇಲೆ ರೆಕ್ಕೆ ಬಡಿದು ೬ ಅಡಿಯಷ್ಟು ಎತ್ತರ ಮಂಜುಗಡ್ಡೆಗಳ ಮೇಲೆ ಹಾರಿ ನಿಲ್ಲಬಲ್ಲವು.

ನೆಲದಮೇಲೆ ಅಥವಾ ಮಂಜುಗಡ್ಡೆಗಳ ಮೇಲೆ ನಡೆಯಲು ಅವುಗಳಿಗೆ ಅನಾನುಕೂಲ. ಹಲವು ಕುಪ್ಪಳಿಸಿ ಮುಂದುವರೆಯುತ್ತವೆ. ಕೆಲವು ತೂರಾಡಿಕೊಂಡು ನಡೆಯಬಲ್ಲವು. ಆದ್ದರಿಂದಲೇ ಸ್ವಲ್ಪ ಅಜಾಗರೂಕರಾದರೂ ಇತರ ಮಾಂಸಾಹಾರೀ ಸಮುದ್ರಪಕ್ಷಿಗಳು ಅವುಗಳ ಮೊಟ್ಟೆ ಮತ್ತು ಮರಿಗಳನ್ನು ಸುಲಭವಾಗಿ ಅಪಹರಿಸುತ್ತವೆ. ಸಮುದ್ರದಲ್ಲಿ ಚಿರತೆ ಸೀಲ್ ಮತ್ತು ಕೊಲೆಗಾರ ತಿಮಿಂಗಲಗಳು ಅವುಗಳನ್ನು ಹಿಡಿದು ತಿನ್ನುತ್ತವೆ.

ಇವಕ್ಕೆ ಮೀನು, ಸೀಗಡಿಗಳೇ ಮುಖ್ಯಾಹಾರ. ಪರ್ವಕಾಲದಲ್ಲಿ ನೀರನ್ನು ತ್ಯಜಿಸಿ ಒಳನಾಡಿಗೆ ವಲಸೆ ಹೋಗುತ್ತವೆ. ಆಗ ಅವು ಮರಿಯಾಗುವವರೆವಿಗೂ ಉಪವಾಸವಿರಬೇಕಾಗುತ್ತದೆ. ಎರಡು ಪ್ರಭೇದಗಳು ಮಾತ್ರ ಬಹುದೂರ ವಲಸೆ ಹೋಗುವುವು. ಸಣ್ಣ ಗುಡ್ಡಗಳಿದ್ದಲ್ಲಿ ಪ್ರಯಾಸದಿಂದ ಹತ್ತಿ ಅಲ್ಲಿಂದ ಹೊಟ್ಟೆಯ ಮೇಲೆ ತೆವಳಿ ಜಾರಿ ವೇಗವಾಗಿ ಮುಂದುವರೆಯುತ್ತವೆ. ಪರ್ವಕಾಲದಲ್ಲಿ ದಪ್ಪನೆಯ ಕೊಬ್ಬು ಪದರ ಚರ್ಮದಡಿ ಏರ್ಪಟ್ಟಿದ್ದು, ಅದೇ ಉಪವಾಸವಿರುವಾಗ ದೇಹ ರಕ್ಷಣೆಗೆ ಸಹಾಯಕವಾಗುತ್ತದೆ.

ಗ್ರಂಥಭಂಡಾರ



ಕಸೋವಾರಿ



ಆನಿಂಗಾ (ನೀರು ನವಿಲು)




ಪ್ಯಾರಡೈಸ್ ಫ್ಲೈ ಕ್ಯಾಚರ್



ಎಮು



ರಣಹದ್ದು



ಸ್ಪೂನ್ ಬಿಲ್



ವ್ಯಾಗ್‌ಟೇಯಿಲ್ ಅಥವಾ ಕುಂಡಕುಸುಕ



ಗೂಬೆ

೨



ಮರಿ ಪೋಷಣೆ



ఐబిస్ (బుంస)



ಕೊಕ್ಕರೆ ಮತ್ತು ಐಬಿಸ್




ತೆರಪು ಕೊಕ್ಕಿನ ಕೊಕ್ಕರೆಗಳು



ಗಿಳಿ ಮರಿಗಳು



ಪ್ಲೋವರ್ ಪಕ್ಷಿ



ಈಜಿಪ್ಟ್ ಹದ್ದು



ನೀರುಕಾಗೆ

ಅವುಗಳ ಗಾತ್ರ ೩-೩ ೧/೨ ಅಡಿಯಿಂದ ಕೇವಲ ೧೨ ಅಂಗುಲ ಗಾತ್ರವಿರ ಬಹುದು. ಒಂದು ಪ್ರಭೇದ ಡಾರ್ವಿನ್ನರ ಗಾಲಿಪೋಗಸ್ ದ್ವೀಪದಲ್ಲಿ ಮಾತ್ರ ವಾಸವಿದೆ. ದ. ಆಫ್ರಿಕಾದ ಮಧ್ಯಮ ಗಾತ್ರದ ಪ್ರಭೇದ ಕತ್ತೆ ಕೆನೆಯುವಂತೆ ಕೂಗುತ್ತದೆ. ನ್ಯೂಜಿಲೆಂಡ್ ಸಮೀಪದಲ್ಲಿನ ಪ್ರಭೇದಗಳಿಗೆ ತಲೆಯ ಇಕ್ಕೆಡೆಗಳಲ್ಲೂ ಒಂದೊಂದು ಹಳದಿ ಗರಿಯ ಬೆಳವಣಿಗೆಯಿದೆ. ಅತಿ ಸಣ್ಣ ಗಾತ್ರದ ನೀಲಿ ಪೆಂಗ್ವಿನ್‌ಗಳು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ವಾಸಿಸುತ್ತವೆ.

ಅವು ಸಂಘಜೀವಿಗಳು. ಕೆಲವೆಡೆ ೩೦,೦೦೦ – ೫೦,೦೦೦ ಜೊತೆಗಳು ಒಂದೇ ಸ್ಥಳದಲ್ಲಿ ವಾಸಿಸುವುದು ವರದಿಯಾಗಿದೆ. ಅವು ಪ್ರತಿವರ್ಷವೂ ಪರ್ವಕಾಲದಲ್ಲಿ ಮರಿ ಮಾಡಲು ಒಂದೇ ಪ್ರದೇಶಕ್ಕೆ ಹಿಂತಿರುಗುವುವೆಂದೂ, ಅಲ್ಲದೆ ಅಲ್ಲಿಯೂ ಒಂದು ನಿರ್ದಿಷ್ಟ ಸ್ಥಳವನ್ನೇ ಆರಿಸುವುವೆಂದೂ ತಿಳಿದುಬಂದಿದೆ.

ಮೊಟ್ಟೆ ಒಂದು ಅಥವಾ ಎರಡು ಮಾತ್ರ. **ಚಕ್ರವರ್ತಿ** ಮತ್ತು **ರಾಜ ಪೆಂಗ್ವಿನ್‌ಗಳು** ದೊಡ್ಡ ಗಾತ್ರದ ಒಂದೇ ಮೊಟ್ಟೆಯಿಡುತ್ತವೆ. ಅವು ಗೂಡು ರಚಿಸುವುದಿಲ್ಲ. ತಮ್ಮ ಪಾದಗಳನ್ನು ಅಗಲಿಸಿ, ಮೊಟ್ಟೆಯನ್ನು ಪಾದದ ಮೇಲಿಟ್ಟು, ಕೆಳಹೊಟ್ಟೆ ಪದರವನ್ನು, ಹೊದಿಕೆಯಂತೆ ಅದರ ಮೇಲೆ ಮುಚ್ಚಿ ಕಾವು ಕೊಡುತ್ತವೆ. **ಹಳದಿಕಣ್ಣಿನ** ಮತ್ತು **ನೀಲಿಪೆಂಗ್ವಿನ್**‌ಗಳು ಬಿಲ ತೋಡಿ ಗೂಡು ರಚಿಸುತ್ತವೆ. ಉಳಿದವು ಕಸಕಡ್ಡಿಗಳನ್ನೂ, ಮಣ್ಣನ್ನೂ ಶೇಖರಿಸಿ, ಮೊಟ್ಟೆಯಿಟ್ಟು ಅದರ ಮೇಲೆ ಅಡ್ಡಲಾಗಿ ಮಲಗಿ ಇತರ ಪಕ್ಷಿಗಳಂತೆ ಕಾವು ಕೊಡುತ್ತವೆ. **ಅಡಿಲೇ** ಪೆಂಗ್ವಿನ್‌ಗಳು ಅಲ್ಲಿ ದೊರಕುವ ಕಲ್ಲು ಚೂರುಗಳನ್ನು ಶೇಖರಿಸಿ, ಅದರ ಮೇಲೆ ಮೊಟ್ಟೆಗಳನ್ನಿಟ್ಟು ಕಾವು ಕೂರುತ್ತವೆ.

ಚಕ್ರವರ್ತಿ ಪೆಂಗ್ವಿನ್ (Emperor Penguin) ಒಂದೇ ಪಕ್ಷಿ ವರ್ಗದಲ್ಲಿ ಜೀವನವಿಡೀ ಮಂಜು ಮತ್ತು ನೀರಿನಲ್ಲೇ ವಾಸಿಸುವುದು. ಪರ್ವಕಾಲದಲ್ಲಿ ನಿಗದಿಯಾದ ಸ್ಥಳಕ್ಕೇ ಹಿಂತಿರುಗಿ, ತಾನು ಹಿಂದಿನವರ್ಷ ಆಕ್ರಮಿಸಿಕೊಂಡಿದ್ದ ಸ್ಥಳವನ್ನೇ ಪುನಃ ಆಕ್ರಮಿಸಿಕೊಳ್ಳುತ್ತದೆ. ಹೆಣ್ಣು ದಪ್ಪ ಗಾತ್ರದ ಒಂದೇ ಮೊಟ್ಟೆಯನ್ನಿಡುವುದು. ಮೊಟ್ಟೆ ಇಟ್ಟೊಡನೇ ಗಂಡು ಅದನ್ನು ಶೇಖರಿಸಿ, ತನ್ನ ಪಾದಗಳ ಮೇಲಿರಿಸಿಕೊಂಡು, ಕಾವು ಕೊಡಲುದ್ಯುಕ್ತವಾಗುತ್ತದೆ. ಇಷ್ಟರಲ್ಲೆ ಅವು ವಲಸೆ ಬಂದು ೫–೮ ವಾರಗಳಾಗಿದ್ದು, ಉಪವಾಸವಿರುವ ಹೆಣ್ಣುಗಳು ಆಹಾರಕ್ಕಾಗಿ ಸಮುದ್ರಕ್ಕೆ ಹಿಂತಿರುಗುತ್ತವೆ. ಗಂಡು ಮಾತ್ರ ಇನ್ನೂ ೮ ವಾರ ಕಾಲ ಉಪವಾಸವಿದ್ದು, ಮರಿ ಮಾಡಬೇಕು ! ಗಂಡುಗಳೆಲ್ಲವೂ ಒಂದಕ್ಕೊಂದು ಸೇರಿ ನಿಂತು ಚಳಿ ತಡೆಯಲು ಪರಸ್ಪರ ಶಾಖ ಕೊಟ್ಟು, ಮರಿಯಾಗುವುದರೊಳಗೆ ಅವುಗಳ ತೂಕ ೧೫–೨೫ ಪೌಂಡುಗಳಷ್ಟು ಕಡಮೆಯಾಗುತ್ತದೆ ! ಅಲ್ಲದೆ ಮರಿಗಳಿಗೆ ಮೊದಲೆರಡು ದಿನಗಳವರೆಗೆ ತನ್ನ ಹೊಟ್ಟೆಯಲ್ಲಿ ಇನ್ನೂ ಜೀರ್ಣಿಸದೆ ರಕ್ಷಿಸಿಟ್ಟಿದ್ದ ಆಹಾರವನ್ನು ಕಕ್ಕಿ ಉಣಿಸುತ್ತದೆ !

ಆ ಸಮಯಕ್ಕೆ ಚೆನ್ನಾಗಿ ಮೇದು ಕೊಬ್ಬಿರುವ ಹೆಣ್ಣು ಅಲ್ಲಿಗೆ ಹಿಂತಿರುಗಿ, ಮರಿಯ ಪೋಷಣೆಗೆ ಪ್ರಾರಂಭಿಸುತ್ತದೆ. ಗಂಡು ಆಹಾರ ಹೊಂಚಲು ಸಮುದ್ರಕ್ಕೆ

ಹೊರಟು ೫–೬ ವಾರ ಚೆನ್ನಾಗಿ ತಿಂದು ಹಿಂತಿರುಗಿ, ಮುಂದೆ ೩ ತಿಂಗಳ ಕಾಲ ಮರಿ ಪೋಷಣೆಗೆ ಸಹಕರಿಸುತ್ತದೆ. ಈ ೬ ತಿಂಗಳ ಅವಧಿಯಲ್ಲಿ ಮರಿ ಪೂರ್ಣ ಬೆಳೆದು ಈಜಲು ಸಮರ್ಥವಾಗುತ್ತದೆ.

ದ. ಧ್ರುವದ ಸಮೀಪದಲ್ಲಿ ತಡೆಯಲಾಗದಂತಹ ಚಳಿಯಿರುವ ಚಳಿಗಾಲದಲ್ಲೇ ಅವು ಮರಿ ಮಾಡುವುದು ಒಂದು ನೈಸರ್ಗಿಕ ವಿಚಿತ್ರ. ಬಹುಶಃ ಮರಿಗಳು ತಮ್ಮ ಆಹಾರ ಹೊಂಚಲು ಹೊರಡಲು ಅನುಕೂಲವಾದ ಡಿಸೆಂಬರ್ ತಿಂಗಳಿಗೆ ಹೊಂದುವಂತೆ ಈ ಉಪವರ್ಗದಲ್ಲಿ ಇಂತಹ ಏರ್ಪಾಡಾಗಿರಬೇಕು!

ಉಪವರ್ಗ ೨ : ಸ್ಟ್ರೂತಿಯೋನಿಫಾರ್‌ಮಿಸ್ (Struthioniformes)

ಕುಟುಂಬ : ೧ : ಸ್ಟ್ರೂತಿಯೋನಿಡೀ. (Struthionidae)
ಜಾತಿ : ೧
ಪ್ರಭೇದ : ೧

ಇಂದು ಜೀವಿಸಿರುವ ಪಕ್ಷಿಗಳಲ್ಲಿ ಅತಿ ದೊಡ್ಡ ಗಾತ್ರದವಾದ ಉಷ್ಟ್ರಪಕ್ಷಿಗಳು ಈ ಉಪವರ್ಗಕ್ಕೆ ಸೇರಿವೆ. ಈ ಪಂಗಡ ಅತಿ ಪುರಾತನವಾದದ್ದು. ೫ ಕೋಟಿ ವರ್ಷಗಳ ಹಿಂದಿನ ಭೂಕಲ್ಪದಲ್ಲೂ ಅವುಗಳ ಸಂಬಂಧೀ ಪಕ್ಷಿಗಳ ಪಳೆಯುಳಿಕೆ (Fossils) ದೊರೆತಿವೆ. ಯೂರೋಪಿನ ದಕ್ಷಿಣಭಾಗ ಮತ್ತು ಪೂರ್ಣ ಆಫ್ರಿಕಾದಲ್ಲಿ ಹೇರಳವಾಗಿದ್ದ ಈ ಪಕ್ಷಿಗಳು ಬೇನೆಯಿಂದಾಗಿ ನಶಿಸಿ ಈಗ ಮಧ್ಯ ಆಫ್ರಿಕಾದ ರಕ್ಷಣಾ ಕ್ಷೇತ್ರಗಳ ಹುಲ್ಲುಗಾವಲಿನಲ್ಲಿ ಮಾತ್ರ ಕಂಡುಬರುತ್ತವೆ.

ಮೈದಾನದಲ್ಲಿ ೧೦–೧೫ರ ಗುಂಪಾಗಿ ವಾಸಿಸುವ ಪಕ್ಷಿಗಳಿವು. ಇತರ ಸಸ್ಯಾಹಾರಿ ಸಸ್ತನಿಗಳೊಡನೆ ಬೆರೆತಿರುತ್ತವೆ. ಈ ಮೃಗಗಳ ಚಲನೆಯಿಂದ ಹೊರಬೀಳುವ ವಿವಿಧ ಕೀಟ, ಇಲಿ ಮತ್ತು ಸರೀಸೃಪಗಳನ್ನು ಆಹಾರವಾಗಿ ತಿನ್ನುತ್ತವೆ. ಹಣ್ಣು, ಕಾಳು ಬೇಳೆಗಳನ್ನೂ ಉಪಯೋಗಿಸುತ್ತವೆ.

ಇವುಗಳ ಎತ್ತರ, ತೊಡೆಯ ಬಣ್ಣ, ಮೊಟ್ಟೆಯ ಗಾತ್ರ ಹಾಗೂ ರಚನೆಯ ಆಧಾರದಿಂದ ಆರು ವಿಧಗಳನ್ನು ಗುರುತಿಸಲಾಗಿದೆ. ಆದರೆ ಆ ವ್ಯತ್ಯಾಸ ಬಹಳ ಸೂಕ್ಷ್ಮ. ಗಂಡು ೭ ಅಡಿ ಎತ್ತರ ಬೆಳೆದು ೩೦೦ ಪೌಂಡುಗಳ ಭಾರವಿರಬಲ್ಲದು. ಹೆಣ್ಣು ಗಾತ್ರದಲ್ಲಿ ಗಂಡಿಗಿಂತ ಸಣ್ಣ. ದಪ್ಪ ಕಾಲು ಕಂಬಗಳಂತಿವೆ. ಪಕ್ಷಿವರ್ಗದಲ್ಲಿ ೨ ಬೆರಳು ಇರುವ ಏಕೈಕ ಪಕ್ಷಿಗಳಿವು. ೩೦–೪೫ ಮೈಲಿ ವೇಗವಾಗಿ ಓಡಬಲ್ಲವು. ಓಡುವಾಗ ಕಾಲಿನ ದಾಪು ೧೨–೧೫ ಅಡಿಯಿರುತ್ತದೆ. ಈ ವೇಗವೇ ಶತ್ರುಗಳಿಂದ ಪಾರಾಗಲು ಮುಖ್ಯ. ಕಾಲೇ ಇವುಗಳ ಮುಖ್ಯ ಆಯುಧ. ತೀವ್ರವಾಗಿ ಹೊಡೆದಾಡಬಲ್ಲವು. ಉಗುರು ದಪ್ಪ. ಅದರ ಹೊಡೆತದಿಂದ ಮನುಷ್ಯನನ್ನು ಅಥವಾ ಸಿಂಹವನ್ನೂ ಬಗೆಯಬಲ್ಲದು!

ಇದಕ್ಕೆ ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಪರ್ವಕಾಲ. ಗಂಡು ವಿಧವಿಧವಾಗಿ ಶಬ್ದ ಮಾಡುತ್ತಾ ನರ್ತಿಸಿ ಹೆಣ್ಣನ್ನು ಆಕರ್ಷಿಸುತ್ತದೆ. ಮರಳನ್ನು ಕೆರೆದು ತೆಳು ಗುಳಿಮಾಡಿ ಹೆಣ್ಣು ಮೊಟ್ಟೆಯಿಡುತ್ತದೆ. ೧೨–೧೮ ಮೊಟ್ಟೆ ಸಾಮಾನ್ಯ. ಮೊಟ್ಟೆ ಬಿಳಿ ಅಥವಾ ಮಾಸಲು ಹಳದಿ ಬಣ್ಣವಿದ್ದು, ಚಿಪ್ಪಿನಮೇಲೆಲ್ಲಾ ಗುಳಿಬಿದ್ದಿರುತ್ತದೆ. ಕೆಲ ಸಮಯ ೨-೩ ಹೆಣ್ಣು ಒಂದೇ ಗೂಡಿನಲ್ಲಿ ಮೊಟ್ಟೆಯಿಡುವುದುಂಟು. ಇದರಿಂದ ಪ್ರತಿ ಗಂಡಿಗೂ ೨-೩ ಹೆಣ್ಣಿರಬಹುದೆಂದು ತೋರುತ್ತದೆ. ಮೇಜರ್. ಆರ್. ಬ್ಯಾಗ್‌ನಾಲ್ಡ್‌ರವರು ಒಂದೇ ಗೂಡಿನಲ್ಲಿ ೯೪ ಮೊಟ್ಟೆಯಿದ್ದವೆಂದೂ, ಅವುಗಳಿಗೆ ಒಂದೇ ಹೆಣ್ಣು ಕಾವು ಕೊಡಲಾಗದೆ, ೨೪ ಮರಿ ಮಾತ್ರ ಜನಿಸಿ, ಉಳಿದುವೆಲ್ಲಾ ಹಾಳಾದುವೆಂದೂ ವಿವರಿಸಿದ್ದಾರೆ. ಗಂಡೇ ರಾತ್ರಿಯೆಲ್ಲಾ ಕೂತು ಕಾವು ಕೊಡುವುದು. ಹೆಣ್ಣು ಹಗಲಿನಲ್ಲಿ ಮಾತ್ರ ಆಗಾಗ ಕೂರುತ್ತದೆ. ೪೦-೪೨ ದಿನಗಳ ನಂತರ ಮರಿ ಹೊರಬರುತ್ತದೆ. ಮರಿ ಸಾಮಾನ್ಯವಾಗಿ ಒಂದು ಅಡಿ ಎತ್ತರವಿದ್ದು, ೪–೫ ತಿಂಗಳಲ್ಲೇ ೫ ಅಡಿಯಷ್ಟು ಎತ್ತರ ಬೆಳೆಯುತ್ತವೆ. ಪರ್ವಪಡೆಯಲು ೨-೩ ವರ್ಷ ಬೇಕು. ೫೦ ವರ್ಷ ಬದುಕಿರಬಲ್ಲವು.

ಅವುಗಳ ಮೊಟ್ಟೆ ೬–೮ ಅಂಗುಲ ಉದ್ದವಿದ್ದು, ೩ ಪೌಂಡು ತೂಗಬಹುದು ! ಮೊಟ್ಟೆ ಸಿಪ್ಪೆ ದಪ್ಪನಾಗಿರುವುದರಿಂದ ಅವುಗಳ ಮೇಲೆ ೧೦೦–೧೨೦ ಪೌಂಡು ಭಾರದ ಮನುಷ್ಯ ನಿಂತರೂ ಒಡೆಯುವುದಿಲ್ಲ !

ಉಷ್ಟ್ರಪಕ್ಷಿ ಉಪಯುಕ್ತ ಪಕ್ಷಿ. ಕ್ರಿ. ಪೂ. ೩೦೦೦ ವರ್ಷಗಳ ಹಿಂದಿನಿಂದಲೂ, ಅವುಗಳ ಮೊಟ್ಟೆ ಚಿಪ್ಪನ್ನು ಪಾನ ಪಾತ್ರಗಳಂತೆ ಉಪಯೋಗಿಸುತ್ತಿದ್ದುದು ಕಂಡು ಬಂದಿದೆ. ರೋಮನರಲ್ಲಿ ಐಶ್ವರ್ಯವಂತರು ಅದರ ಮಾಂಸವನ್ನು ಔತಣಗಳಲ್ಲಿ ಉಪಯೋಗಿಸುತ್ತಿದ್ದರು. ಅದರ ಕೊಬ್ಬು ಔಷಧವೆಂದೂ, ಅದರ ಕಿಬ್ಬೊಟ್ಟೆಯ ಕಲ್ಲುಗಳನ್ನು ತೇದು ಹಚ್ಚಿದರೆ ಕಣ್ಣುನೋವು ಗುಣ ಹೊಂದುವುದೆಂದೂ ಅವರು ನಂಬಿದ್ದರು.

ಇವುಗಳಲ್ಲಿನ ವಿಚಿತ್ರ ವರ್ತನೆಯೆಂದರೆ ಹೊಳೆಯುವ ವಸ್ತುಗಳನ್ನೆಲ್ಲಾ ನುಂಗುವುದೇ. ಇದರಿಂದಲೇ ಬೆಂಕಿಯನ್ನು ತಿನ್ನುವುದೆಂಬ ತಪ್ಪು ಭಾವನೆಯಿತ್ತು. ಗಡಿಯಾರ, ಗುಂಡಿ, ಗಾಜು – ಎಲ್ಲವನ್ನೂ ಇವು ನುಂಗುತ್ತವೆ. ಲೋಹವಸ್ತುಗಳು ಜೀರ್ಣವಾಗದೆ ಹಾಗೇ ಹೊರಬೀಳುತ್ತವೆ. ಉಳಿದವು ಕ್ರಮೇಣ ಅರೆಯಲ್ಪಟ್ಟು ಜೀರ್ಣವಾಗುತ್ತವೆ. ಆಹಾರ ಅರೆಯಲು ಸಹಾಯಕವಾಗಿ ದಪ್ಪಗಾತ್ರದ ಹರಳುಗಳನ್ನು ನುಂಗುತ್ತವೆ. ಕೆಲವು ಸಮಯ ಆ ಹರಳುಗಳ ನಡುವೆ ವಜ್ರಗಳೂ ದೊರೆತದ್ದುಂಟು !

ಅಪಾಯವಿದ್ದಾಗ ತನ್ನ ತಲೆಯನ್ನು ಮರಳಲ್ಲಿ ಹೂತುಕೊಳ್ಳುತ್ತದೆಂಬುದು ಬರಿಯ ಕಥೆ, ಅದು ನಿಜವಲ್ಲ. ಮರಿಗಳು ಓಡಬಲ್ಲವಾದರೂ ಅಪಾಯ ಸೂಚನೆಯಿದ್ದಲ್ಲಿ ಕತ್ತು ಚಾಚಿ ಸತ್ತಂತೆ ಬಿದ್ದು ತಪ್ಪಿಸಿಕೊಳ್ಳಲು ಹವಣಿಸುತ್ತದೆ.

ಹಿಂದೆ ಫ್ರಾನ್ಸಿನ ಯೋಧರು ಅವುಗಳ ಬಾಲ ಗರಿಗಳನ್ನು ತಂದಾಗಿನಿಂದ ಅದಕ್ಕೆ ಹೆಚ್ಚು ಪ್ರಾಶಸ್ತ್ಯವುಂಟಾಗಿ, ಕೆಲವೆಡೆ ಅವುಗಳನ್ನು ಸಾಕಲಾರಂಭಿಸಿದರು. ೧೮೬೩ರಲ್ಲಿ

ದ. ಆಫ್ರಿಕಾ ಮತ್ತು ಕೆನಿಯಾ ಬಳಿ ಈ ಸಾಕಾಣಿಕೆ ಕೇಂದ್ರಗಳು ಸ್ಥಾಪಿತವಾದವು. ಒಂದು ಉತ್ತಮ ಗರಿಗೆ ಹಿಂದೆ ೩೫-೪೫ ಪೌಂಡು ಮೌಲ್ಯವಿತ್ತು. (೭೦೦-೯೦೦ ರೂಪಾಯಿಗಳು). ೧೯೦೩ರಿಂದ ೧೯೧೩ರ ವರೆಗಿನ ಅವಧಿಯಲ್ಲಿ ಆಫ್ರಿಕಾದಿಂದ ಒಟ್ಟು ೧೯ ಮಿಲಿಯಂ ಪೌಂಡುಗಳ ಬೆಲೆಯ ಗರಿಗಳು ರಫ್ತಾಯಿತೆಂದು ತಿಳಿದುಬಂದಿದೆ. ಆದರೆ ಈಗ ಆ ಗರಿಗಳಿಗೆ ಪ್ರಾಶಸ್ತ್ಯವಿಲ್ಲ. ಒಂದೆಡೆ ಮಾತ್ರ ಈ ಪಕ್ಷಿಗಳನ್ನು ಸಾಕಲಾಗುತ್ತಿದೆ. ಹದಮಾಡಿದ ಚರ್ಮ ಮೃದುವಾಗಿ, ಕೈಚೀಲ ಮೊದಲಾದವನ್ನು ಮಾಡಲು ಸಹಾಯಕ ವಾಗುತ್ತದೆ.

ಉಪವರ್ಗ ೩ : ಕಾಸುವಾರಿಫಾರ್‌ಮಿಸ್ (Casuariiformes)

ಕುಟುಂಬ – ೨
ಜಾತಿ – ೨
ಪ್ರಭೇದ – ೪

ಕುಟುಂಬ ೧ : ಕಾಸುವಾರಿಡೀ (Casuariidae)

ಉತ್ತರ ಆಸ್ಟ್ರೇಲಿಯಾ, ನ್ಯೂಗಿನಿಗಳಲ್ಲಿ ವಾಸವಿರುವ ೩ ಮುಖ್ಯ ಪ್ರಭೇದಗಳು. **ಕಾಸುವಾರಿಗಳು** ದಪ್ಪ ದೇಹದ, ಗಿಡ್ಡ ಕಾಲಿನ, ಕಾಡುವಾಸಿಗಳು. ಇವುಗಳ ನೀಳ ಗರಿಗಳು ಒರಟಾದ ನೀಳ ಕೂದಲಿನಂತಿರುತ್ತವೆ. ಅಂಗಾಂಕುರ ರೆಕ್ಕೆ ೩-೪ ನೀಳಗರಿ ಹೊಂದಿದ್ದು, ಅವೂ ಕೂದಲೂ ಸೇರಿ ಪಕ್ಷಿ ಕಾಡಿನ ಪೊದೆಗಳಲ್ಲಿ ನುಗ್ಗುವಾಗ ಗಾಯ ವಾಗದಂತೆ ರಕ್ಷಿಸುತ್ತವೆ.

ತಲೆ ಮತ್ತು ಕತ್ತಿನ ಬಳಿ ಕೂದಲಿಲ್ಲದೆ, ಕೆಂಪು, ಹಳದಿ, ನೀಲಿಬಣ್ಣ ಇರು ತ್ತದೆ. ತಲೆಯ ಮೇಲೆ ಅಗಲ ಕೊಂಬಿನ ಶಿಖೆಯಿದೆ. ಕೆಲವಕ್ಕೆ ಕತ್ತಿನ ಬಳಿ ಕೆಂಪು ಬಣ್ಣದ ಚರ್ಮ ಚೀಲವಿರಬಹುದು. ಹೆಣ್ಣು ಗಂಡಿಗಿಂತ ದಪ್ಪ ಗಾತ್ರವಿರುವುದು ಈ ಕುಟುಂಬದಲ್ಲೇ.

ಕಾಲಿನ ಉಗುರು ಬಹಳ ಚೂಪು. ಕೋಪಿಷ್ಠ ಪಕ್ಷಿಗಳಿವು. ಕೋಪ ಬಂದಾಗ ಎದುರುಬಿದ್ದು ಉಗುರಿನಿಂದ ಸೀಳಲು ಹವಣಿಸುತ್ತವೆ! ಇವಕ್ಕೆ ಒಂದೇ ಹೆಣ್ಣಿನೊಡನೆ ಸಂಭೋಗ. ಕಾಡಿನ ಪೊದರುಗಳ ಮಧ್ಯೆ, ಎಲೆ ಹರಡಿದ ಗೂಡಿನಲ್ಲಿ ೪-೬ ಎಲೆ ಹಸಿರು ಬಣ್ಣದ ಮೊಟ್ಟೆಯಿಡುತ್ತವೆ. ಗಂಡೇ ಕಾವಿಗೆ ಕೂರುವುದು. ಮರಿ ಜನಿಸಿ ದಾಗ ಮೈಮೇಲೆಲ್ಲಾ ಬಿಳೀ ಪಟ್ಟೆ ಹೊಂದಿದ್ದು, ಅದು ರಕ್ಷಣೆಗೆ ಅನುಕೂಲವಾದ ಛದ್ಮ ಬಣ್ಣವಾಗಿರುತ್ತದೆ.

ಇವಕ್ಕೆ ಹಣ್ಣು ಮತ್ತು ಕಾಯಿಗಳೇ ಮುಖ್ಯಾಹಾರ. ಹಲವು ಸಣ್ಣ ಕೀಟ ಗಳನ್ನೂ ಸಸ್ಯಗಳನ್ನೂ ತಿನ್ನುತ್ತವೆ. ಕಾಡು ದಟ್ಟವಾಗಿದ್ದು, ಪೊದರುಗಳಿಂದಾವೃತ ವಾಗಿದ್ದರೂ ೩೦ ಮೈಲಿ ವೇಗವಾಗಿ ಓಡಬಲ್ಲವು, ಈಜಲೂ ನುರಿತವು.

ಕುಟುಂಬ ೨ : ಡ್ರೋಮಿಸೆಯಿಡೀ (Dromiceidae)

ಇದು ಎಮುಗಳ ಜಾತಿ. ಒಂದೇ ಪ್ರಭೇದ. ಆಸ್ಟ್ರೇಲಿಯಾದ ಅರ್ಧ ಮರಳು ಕಾಡುಗಳಲ್ಲಿ ವಾಸಿಸುತ್ತವೆ. ೫-೬ ಅಡಿ ಎತ್ತರವಿದ್ದು, ೧೧೦-೧೩೦ ಪೌಂಡು ತೂಗುತ್ತವೆ. ಇವುಗಳ ಗರಿಗಳೂ ಎರಡೆಳೆಯ ಕೂದಲಿನಂತಿದ್ದು, ನೀಳವಾಗಿ ಒರಟಾಗಿರುತ್ತವೆ. ಬೆನ್ನು ಅಗಲ. ಕತ್ತಿನ ಇಕ್ಕೆಡೆಗಳಲ್ಲೂ ಬೋಳಾಗಿದ್ದು, ತಲೆ, ಕತ್ತು ಪೂರ್ಣ ಕೂದಲು ಗರಿಯಿಂದಾವೃತವಾಗಿರುತ್ತವೆ. ಗಂಡು ಸ್ವಲ್ಪ ದಪ್ಪ, ೩೦ ಮೈಲಿ ವೇಗದಲ್ಲಿ ಓಡಬಲ್ಲವು. ಈಜಲೂ ನುರಿತಿವೆ. ಸಂಘ ಜೀವಿಗಳಾದರೂ, ಪರ್ವಕಾಲದಲ್ಲಿ ಮಾತ್ರ ಜೊತೆಜೊತೆಯಾಗಿ ಬೇರ್ಪಡುತ್ತವೆ.

ಮರ ಅಥವಾ ಪೊದರುಗಳಡಿಯಲ್ಲಿ ಬೇರು, ಹುಲ್ಲು, ತೊಗಟೆಗಳನ್ನು ಶೇಖರಿಸಿ ತೆಳ್ಳಗಿನ ಗೂಡು ರಚಿಸಿ, ೬ರಿಂದ ೧೫ ಮೊಟ್ಟೆಗಳನ್ನಿಡುತ್ತವೆ. ಸುಮಾರು ೫ ಅಂಗುಲ ದಪ್ಪದ ಮೊಟ್ಟೆಗಳು ಹಸಿರುಬಣ್ಣವಿರುತ್ತವೆ. ೧-೧ ೧/೨ ಪೌಂಡು ಭಾರವಿರಬಲ್ಲವು.

ಗಂಡೇ ಕಾವು ಕೊಡುವುದು. ಕಾವಿನ ಅವಧಿ ೫೮-೬೦ ದಿನ. ಮರಿಗಳು ಸಣ್ಣವಾಗಿದ್ದು ಪಟ್ಟಿ ಹೊಂದಿರುತ್ತವೆ. ತಂದೆ ಅವುಗಳಿಗೆ ಕೆಲಕಾಲ ಶಾಖವಿತ್ತು ರಕ್ಷಿಸುತ್ತದೆ.

ಇದರ ಮಾಂಸ ರುಚಿಯಲ್ಲಿ ದನದ ಮಾಂಸದಂತೆ. ಕೊಬ್ಬು ಹೆಚ್ಚು. ಅದನ್ನು ಕರಗಿಸಿಟ್ಟು, ಅಡಿಗೆಗೂ, ದೀಪಕ್ಕೂ ಹಿಂದೆ ಉಪಯೋಗಿಸಲಾಗುತ್ತಿತ್ತು. ಈಗಲೂ ಆಸ್ಟ್ರೇಲಿಯಾದಲ್ಲಿ ಇವು ಸಾಕಷ್ಟು ಸಂಖ್ಯೆಯಲ್ಲಿವೆ. ಹೊಲಗಳಿಗೆ ನುಗ್ಗಿ ಹೆಚ್ಚಿನ ನಷ್ಟಮಾಡಬಲ್ಲವು. ಆದ್ದರಿಂದ ಆಸ್ಟ್ರೇಲಿಯಾದಲ್ಲಿ ಅವುಗಳನ್ನು ಕೊಂದು ಅವುಗಳ ಕೊಕ್ಕನ್ನು ತಂದುಕೊಟ್ಟಲ್ಲಿ ಬಹುಮಾನವೀಯುತ್ತಾರೆ. ಮೊಟ್ಟೆಯಲ್ಲಿ ಅಧಿಕ ಎಣ್ಣೆ ಅಂಶವಿದ್ದು ಬೆಲೆಬಾಳುತ್ತದೆ.

ಇವು ಪೂರ್ಣ ನಾಶವಾಗದಂತೆ ಉಳಿಯಲು, ಈಗ ರಕ್ಷಣಾ ಕ್ಷೇತ್ರಗಳನ್ನು ಸ್ಥಾಪಿಸುವ ಯೋಚನೆಯಿದೆ.

ಉಪವರ್ಗ ೪ : ಆಪ್ಟೆರಿಜಿಫಾರ್ಮಿಸ್ (Apterygiformes)

ಕುಟುಂಬ ೧ ಆಪ್ಟೆರಿಜಿಡೀ (Apterygidae)
ಜಾತಿ ೧
ಪ್ರಭೇದಗಳು ೩

ನ್ಯೂಜಿಲೆಂಡಿನ ಮೂರು ಕಿವಿ ಪ್ರಭೇದಗಳು ಮಾತ್ರ ಈ ಕುಟುಂಬ ಹಾಗೂ ಉಪವರ್ಗಕ್ಕೆ ಸೇರಿದವು. ಹೆಸರು ಹೇಳಿದೊಡನೇ ದೇಶವನ್ನು ಜ್ಞಾಪಕಕ್ಕೆ ತರುವ ಪಕ್ಷಿ ಜಾತಿ ಇದೊಂದೇ.

ದಟ್ಟ ಜೌಗು ಕಾಡುಗಳಲ್ಲಿ ಬಿಲದೊಳಗೆ ಅಥವಾ ಮರದ ಬೇರುಗಳಡಿ ಹಗಲೆಲ್ಲಾ ಹುದುಗಿದ್ದು ರಾತ್ರೆ ಆಹಾರ ಅರಸಲು ಹೊರಬರುತ್ತವೆ. ದಪ್ಪ ಕೋಳಿ ಗಾತ್ರದ ಪಕ್ಷಿ

ಗಳಿವು. ಹಾರಲಾರದ ಪಕ್ಷಿ ಪಂಗಡದಲ್ಲಿ ಇವು ಅತಿ ಸಣ್ಣ ಗಾತ್ರದವು. ಎದೆಮೂಳೆಗೆ ದೋಣಿ ತಳದಾಕಾರ ರಚನೆಯಿಲ್ಲ. ೭೦೦ ವರ್ಷಗಳ ಹಿಂದೆ ವಾಸವಾಗಿದ್ದ ಮೋವಾ ಸಂತತಿಗೆ ಸೇರಿವೆ.

ಕಾಡುಕಡಿದು ವ್ಯವಸಾಯಯೋಗ್ಯವಾಗಿ ಮಾಡುತ್ತಿರುವುದರಿಂದಲೂ, ನಾಯಿ ಬೆಕ್ಕು ಮುಂತಾದ ಮಾಂಸಾಹಾರಿ ಮೃಗಗಳಿಂದಲೂ ಅವುಗಳಿಗೆ ತೊಂದರೆ ಉಂಟಾಗಿ ಸಂಖ್ಯೆ ನಶಿಸಿ, ಈಗ ಬಹಳ ಕಡಮೆಯಾಗಿದೆ. ಇವುಗಳ ದಪ್ಪ ಕಾಲುಗಳ ಮಧ್ಯೆ ಹೆಚ್ಚಿನ ಅಂತರವಿರುವುದರಿಂದ ವೇಗವಾಗಿ ಓಡಲಾರವು. ರೆಕ್ಕೆ ಬಹಳ ಸಣ್ಣ. ೨ ಅಂಗುಲ ಉದ್ದ ಮಾತ್ರ. ರೆಕ್ಕೆ ಅಥವಾ ಬಾಲದ ಗರಿಗಳಿರುವುದಿಲ್ಲ. ದೇಹ ಪೂರ್ಣ ಒರಟು ಕೂದಲಿನಿಂದಾವೃತವಾಗಿದ್ದು, ಈ ಅಂಕುರಾಂಗ ಕಾಣಿಸುವುದೇ ಇಲ್ಲ. ಈ ರೆಕ್ಕೆಯ ತಳದಲ್ಲಿ ಕೂದಲಿಲ್ಲದೆ ನಿದ್ರಿಸುವಾಗ ಪಕ್ಷಿಗಳು ತಮ್ಮ ತಲೆ ಮತ್ತು ಕೊಕ್ಕನ್ನು ಶಾಖಕ್ಕಾಗಿ ರೆಕ್ಕೆಯಡಿಯಿಟ್ಟುಕೊಳ್ಳುತ್ತವೆ.

ಇವುಗಳಿಗೆ ದೃಷ್ಟಿ ಮಂದ. ನೀಳ ಕೊಕ್ಕಿನಡಿ ಹಲವು ಒರಟು ಕೂದಲುಗಳಿದ್ದು, ಅವೇ ಅದರ ಮುಖ್ಯ ಸ್ಪರ್ಶಾಂಗ. ಅಲ್ಲದೆ ಅದಕ್ಕೆ ಆಘ್ರಾಣ ಶಕ್ತಿ ಅಧಿಕ. ಅದರ ಮೂಗಿನ ಹೊಳ್ಳೆ ಕೊಕ್ಕಿನ ತುದಿಯಲ್ಲಿರುವುದರಿಂದ ಮೂಗು ಕೊಕ್ಕಿನ ತುದಿಯವರೆಗೂ ಹರಡಿರುವುದು ಈ ಪಕ್ಷಿ ಪ್ರಭೇದ ಒಂದರಲ್ಲೇ.

ಬಿಲದೊಳಗೆ ಒಂದು ಅಥವಾ ಎರಡು ೫ ಅಂಗುಲ ನೀಳದ ಬಿಳುಪು ವರ್ಣದ ಮೊಟ್ಟೆಯಿಡುತ್ತವೆ. ಗಂಡೇ ಕಾವಿಗೆ ಕೂರುವುದು. ಮೊಟ್ಟೆ ದಪ್ಪವಾಗಿ ೧ ಪೌಂಡು ಭಾರವಿರುತ್ತವೆ. ಮರಿಯಾಗಲು ೭೫-೮೦ ದಿನಗಳ ಅವಧಿ ಅಗತ್ಯ.

ರಾಷ್ಟ್ರ ಜೀವನದಲ್ಲಿ ಉನ್ನತ ಮಟ್ಟ ಹೊಂದಿರುವ ಪಕ್ಷಿ. ಇಂದು ನ್ಯೂಜಿಲೆಂಡಿನ ಜನರನ್ನು ' ಕಿವಿ ' ಗಳೆಂದೇ ಕರೆಯಲಾಗುತ್ತದೆ. ರಾಷ್ಟ್ರ ಪಕ್ಷಿಯಾಗಿ ಆರಿಸಿ, ಅದನ್ನೇ ದೇಶದಲ್ಲಿ ವಿವಿಧ ಉತ್ಪನ್ನಗಳ ಗುರುತಾಗಿ ಬಳಸಲಾಗುತ್ತಿದೆ.

ಉಪವರ್ಗ ೫ : ರೀಫಾರ್‌ಮಿಸ್ (Rheiformes)

ಕುಟುಂಬ ೧ ರೀಯಿಡೀ (Rheidae)

ಜಾತಿ ೧

ಪ್ರಭೇದ ೨

ದಕ್ಷಿಣ ಅಮೇರಿಕಾದ ಉಷ್ಟ್ರಪಕ್ಷಿಗಳೆನಿಸಿದ ರಿಯಾಗಳು ಈ ಉಪವರ್ಗದವು. ಇವು ೪-೫ ಅಡಿ ಎತ್ತರ ಮಾತ್ರವಿದ್ದು, ೫೦ ಪೌಂಡು ಭಾರವಿರುತ್ತವೆ. ಪಶ್ಚಿಮ ವಲಯದಲ್ಲಿ ಇವೇ ದಪ್ಪ ಗಾತ್ರದವು. ಮರಗಳಿಲ್ಲದ ಹುಲ್ಲುಗಾವಲು ಮೈದಾನಗಳಲ್ಲಿಯೋ ಅವುಗಳ ಗುಂಪುವಾಸ. ಅಲ್ಲಲ್ಲಿ ಜಿಂಕೆ ಮುಂತಾದ ಮೃಗಗಳೊಡನೆ ಜೀವಿಸಿರುತ್ತವೆ. ಉಷ್ಟ್ರಪಕ್ಷಿಗಳಿಗೂ ಇವುಗಳಿಗೂ ಬಹಳ ಅಂತರವಿದೆ. ಪಾದ ಮತ್ತು ಕೊಕ್ಕಿನ ರಚನೆಯಲ್ಲೂ, ರೆಕ್ಕೆಯ ನೀಳದಲ್ಲೂ, ತೊಡೆ, ತಲೆ ಮತ್ತು ಕತ್ತಿನ

ಬಳಿ ಹೆಚ್ಚಿನ ಮೃದು ಗರಿ ಹೊಂದಿರುವುದರಲ್ಲೂ ವ್ಯತ್ಯಾಸ ಇದೆ. ಬಾಲ ಗರಿಗಳಿಲ್ಲ.

ಬಹುಪತ್ನೀಯುತ. ಪ್ರತಿ ಗಂಡಿಗೆ ೫–೬ ಹೆಣ್ಣು ಸೇರಿರಬಹುದು. ೩–೪ ಅಡಿ ಅಗಲದ ತಗ್ಗು ಕೆರೆದು, ಹುಲ್ಲು ಕಡ್ಡಿಗಳನ್ನು ಹರಡಿ ಗೂಡು ರಚಿಸುತ್ತದೆ. ಈ ಗೂಡಿನಲ್ಲಿ ಹೆಣ್ಣುಗಳು ಸುಮಾರು ೨೦ರಿಂದ ೫೦, ೫ ಅಂಗುಲ ಉದ್ದದ ಹಳದಿ ಅಥವಾ ಹಸಿರು ವರ್ಣದ ಮೊಟ್ಟೆಗಳನ್ನಿಡುತ್ತವೆ. ಗಂಡೇ ಕಾವು ಕೂರುವುದು. ೬ ವಾರಗಳಲ್ಲಿ ಮರಿಯಾಗುತ್ತದೆ. ಮರಿಗಳು ೬–೭ ವಾರ ತಾಯಿಯೊಡನಿರುತ್ತವೆ. ಗಂಡು ದಪ್ಪ ಧ್ವನಿಯಲ್ಲಿ ಕೂಗುತ್ತವೆ. ಹೆಣ್ಣು ಕೂಗಲಾರದು.

ಬ್ರೆಜಿಲ್ ಮತ್ತು ಅರ್ಜೆಂಟೈನಾ ರಾಷ್ಟ್ರಗಳ ಪಂಪಾಸ್ ಹುಲ್ಲುಗಾವಲುಗಳಲ್ಲಿ ಇವುಗಳ ವಾಸ. ಒಂದು ಪ್ರಭೇದಕ್ಕೆ ಕತ್ತಿನ ಬಳಿ ಹೆಚ್ಚು ಪುಕ್ಕವಿಲ್ಲದೆ ನೀಳಕೊಕ್ಕು ಇರುತ್ತದೆ. ಆಂಡೀಸ್ ಪರ್ವತಶ್ರೇಣಿ ತಪ್ಪಲಿನಲ್ಲಿ ಬೊಲೀವಿಯಾ ಮತ್ತು ಪೆರುವರೆಗೂ ಇವು ಕಂಡುಬರುತ್ತವೆ.

ಸ್ವಲ್ಪ ದೂರ ಕುದುರೆಗಿಂತಲೂ ವೇಗವಾಗಿ ಓಡಬಲ್ಲವು. ಮಾಂಸ ರುಚಿಕರ. ಆದ್ದರಿಂದ ಹೆಚ್ಚಾಗಿ ಬೇಟೆಯಾಡಲ್ಪಡುತ್ತದೆ. ಬಾಲ ಪುಕ್ಕ ಧೂಳೊರಸಲು ಉಪಯುಕ್ತ. ಅಲ್ಲಿಯ ಕುದುರೆ ಸವಾರ ಗೋಪಾಲಕರು, ಚರ್ಮದ ೩–೪ ಎಳೆಯಿದ್ದು ಪ್ರತಿಯೊಂದರ ತುದಿಯಲ್ಲೂ ಭಾರಕ್ಕಾಗಿ ಕಲ್ಲು ಕಟ್ಟಿರುವ 'ಬೋಲಾ' ಎಂಬ ದಾರವನ್ನು ಅತ್ಯಂತ ಚಾಕಚಕ್ಯತೆಯಿಂದ ಓಡುವ ಪಕ್ಷಿಗಳೆಡೆ ಎಸೆಯುತ್ತಾರೆ. ಭಾರವಿರುವ ತುದಿ ಪಕ್ಷಿಗೆ ತಗುಲಿದ್ದೇ ದಾರ ಪೂರ್ಣ ಸುತ್ತಿ ಉರುಳಿಸುತ್ತವೆ. ಅವುಗಳು ಸುಲಭವಾಗಿ ಪಳಗುತ್ತವೆ. ಶಾಕಾಹಾರಿಯಾದರೂ ಕೆಲವೊಮ್ಮೆ ಕೀಟ ಮತ್ತು ಸಣ್ಣ ಪ್ರಾಣಿಗಳನ್ನೂ ತಿನ್ನುತ್ತವೆ.

ಉಪವರ್ಗ ೬ : ಟಿನಾಮಿಫಾರ್ಮಿಸ್ (Tinamiformes)

ಕುಟುಂಬ ೧ ಟಿನಾಮಿಡೀ (Tinamidae)

ಜಾತಿ

ಪ್ರಭೇದ ೫೪

ಈ ಪಕ್ಷಿಗಳು ಹೊರನೋಟಕ್ಕೆ ಗುಮ್ಮಜುಂಗಗಳನ್ನು ಹೋಲುತ್ತವೆ. ಆದರೆ ಅವುಗಳ ಒಳಾಂಗ ರಚನೆ ರಿಯಾಗಳನ್ನು ಸೂಚಿಸುತ್ತದೆ. ಇವುಗಳಿಗೂ ಚಪ್ಪಟೆ ಎದೆಯು ರೇಟೈಟ್ ಪಕ್ಷಿಗಳಿಗೂ ಅನೇಕ ಹೋಲಿಕೆಯಿದೆ. ಇವುಗಳ ವೈಶಿಷ್ಟ್ಯ ಪುಡಿಯಾಗುವ ತುಪ್ಪಟ ಗರಿ ಹೊಂದಿರುವುದು. ಈ ರೀತಿಯ ಗರಿಗಳು ಹಲವು ಕೊಕ್ಕರೆ ಮತ್ತು ಗಿಳಿಗಳಿಗೆ ಮಾತ್ರ ಇರುತ್ತವೆ.

ವಿವಿಧ ವಾತಾವರಣಕ್ಕೆ ಹೊಂದಿಕೊಂಡಂತಿದ್ದು ಸಮುದ್ರ ಮಟ್ಟದಿಂದ ೧೦,೦೦೦ ದಿಂದ ೧೪೦೦೦ ಅಡಿಯವರೆಗೆ ಕಂಡುಬರುತ್ತವೆ. ಹಲವಕ್ಕೆ ತಲೆಯಮೇಲೆ ಕೊಂಬಿ

ನಂತಹ ಗರಿಯಿರಬಹುದು. ಹಲವು ವರ್ಣರಂಜಿತವಾಗಿವೆ. ಈ ಜಾತಿಗಳು ಗಾತ್ರದಲ್ಲಿ ದಪ್ಪ ಕೋಳಿಯುತಿದ್ದು ಮೆಕ್ಸಿಕೋದಿಂದ ದ. ಅಮೇರಿಕಾ ಪೂರ್ಣವಾಗಿ ಸುಮಾರು ೪೫ ಪ್ರಭೇದಗಳು ವರ್ಣಿತವಾಗಿವೆ. ಹೆಣ್ಣು ಗಂಡಿಗಿಂತ ದಪ್ಪ, ಮತ್ತು ಪರ್ವಕಾಲದಲ್ಲಿ ಅದೇ ಗಂಡುಗಳನ್ನು ಆಕರ್ಷಿಸುವುದು.

ಹಣ್ಣು, ಬೀಜ ಮತ್ತು ಸಣ್ಣ ಕಾಯಿಗಳು ಇದರ ಮುಖ್ಯಾಹಾರ. ಕೆಲಸಮಯ ಕೀಟಗಳನ್ನೂ ತಿನ್ನುವುದುಂಟು. ನೆಲದ ಮೇಲೆ ಓಡಾಡಿ ಆಹಾರ ಅರಸುತ್ತಿದ್ದು, ಅಪಾಯ ಸೂಚನೆಯಿದ್ದಲ್ಲಿ ಪೊದೆಗಳ ಮಧ್ಯೆ ಅಡಗಿ ಕುಳಿತುಕೊಳ್ಳುತ್ತದೆ. ೧೦೦–೧೫೦ ಗಜದವರೆಗೆ ವೇಗವಾಗಿ ಹಾರಬಲ್ಲದು. ಎದೆಮಾಂಸ ಕೋಳಿಯದರಂತೆ ಬಿಳುಪಾಗಿದ್ದು ಅತ್ಯಂತ ರುಚಿಕರ. ಆದ್ದರಿಂದಲೇ ಅವುಗಳನ್ನು ಅತಿಯಾಗಿ ಬೇಟೆಯಾಡಲಾಗುತ್ತಿದೆ.

ನೆಲದ ಮೇಲೆಯೇ ಗೂಡಿನ ರಚನೆ. ಪೊದರುಗಳ ಮಧ್ಯೆ ರಚಿತವಾದ ಸರಳ ಗೂಡು ಬೇಗ ಕಾಣಿಸುವಂತಿರುವುದಿಲ್ಲ. ೨ ರಿಂದ ೧೨ ಮೊಟ್ಟೆಯಿಡುತ್ತವೆ. ಈ ಪಕ್ಷಿಗಳ ಮೊಟ್ಟೆ ಸೃಷ್ಟಿಯ ಒಂದು ವೈಚಿತ್ರ್ಯ. ಮೆರಗು ಕೊಟ್ಟಂತೆ ಮೆರೆಯುತ್ತಿದ್ದು, ಹಳದಿ, ಕೆಂಪು, ನೀಲಿ, ಹಸಿರು, ಮತ್ತಿತರ ಬಣ್ಣ ಹೊಂದಿರುತ್ತದೆ. ದೂರದಿಂದ ನೋಡುವವರಿಗೆ ಪಿಂಗಾಣಿಯಲ್ಲಿ ಮಾಡಿಟ್ಟ ಕೃತಕ ವಸ್ತುವಿನಂತೆ ತೋರುತ್ತದೆ. ಗಂಡೇ ಕಾವಿಗೆ ಕೂರುವುದು. ಕಾವಿನ ಕಾಲಾವಧಿ ೩ ವಾರ. ಮರಿ ಪಟ್ಟೆಪಟ್ಟೆ ವರ್ಣದ ಮೃದು ಗರಿಹೊಂದಿ ಸ್ವಲ್ಪದೂರ ಓಡಲೂ, ಹಾರಲೂ ಸಿದ್ಧವಿರುತ್ತದೆ.

ಈ ಎಲ್ಲಾ ವಿವಿಧ ರಚನೆಯ ಸಮ್ಮಿಳನದಿಂದ ಅವು ಬಹು ಹಿಂದುಳಿದ ಪಕ್ಷಿಗಳೆಂದೂ, ಪಕ್ಷಿವಂಶವೃಕ್ಷದ ತಳದಲ್ಲಿರುವವೆಂದೂ ವಿವರಿಸಲಾಗಿದೆ.

ಉಪವರ್ಗ ೭ : ಗೇವಿಫಾರ್‌ಮಿಸ್ (Gaviiformes)

ಕುಟುಂಬ ೧ ಗೇವಿಡೀ (Gaviidae)

ಜಾತಿ ೧

ಪ್ರಭೇದ ೪

ಈ ಉಪವರ್ಗಕ್ಕೆ 'ಲೂನ್ಸ್' ಎಂಬ ನೀರಿನಲ್ಲಿ ಮುಳುಗುವ ಪಕ್ಷಿಗಳು ಸೇರುತ್ತವೆ. ಮಧ್ಯಜೀವ ಕಲ್ಪದಿಂದಲೂ ಈ ಜಾತಿಗಳು ಜೀವಿಸಿದ್ದು ಆಗ ಇದ್ದ ೧೧–೧೨ ಪ್ರಭೇದಗಳ ಪೈಕಿ ಈಗಳು ಒಂದೇ ಜಾತಿಯಲ್ಲಿ ೪ ಪ್ರಭೇದಗಳು ಮಾತ್ರ ಉಳಿದಿವೆ.

ಇವು ಸಾಧಾರಣ ಗಾತ್ರದ ನೀಳ ಮೈಯ ಪಕ್ಷಿಗಳು. ಉದ್ದನೆಯ ಮೊನಚಾದ ಕೊಕ್ಕು, ನೀಳ ಕುತ್ತಿಗೆ ಮತ್ತು ಬಹು ಸಣ ಬಾಲ ಇವುಗಳಿಗಿವೆ. ರೆಕ್ಕೆ ಸಣ್ಣ. ಪಕ್ಷಿ ಜಾತಿಯಲ್ಲಿ ಪಾದ ಮಾತ್ರವನ್ನುಳಿದು ಮಿಕ್ಕ ಕಾಲಿನ ಭಾಗವೆಲ್ಲಾ ಪೂರ್ಣವಾಗಿ ದೇಹದಲ್ಲಿ ಅಡಗಿರುವುದು ಇವುಗಳಲ್ಲಿ ಮಾತ್ರ. ಈ ರಚನೆ ಪಕ್ಷಿಗಳು ಈಜಲು ಅನುಕೂಲ

ವಾದರೂ, ನೆಲದ ಮೇಲೆ ಸ್ವಲ್ಪ ದೂರವೂ ನಡೆಯಲಾರದೆ ತೂರಾಡಿ ಮುಂದು ವರಿಯುತ್ತವೆ.

ಉತ್ತಮ ಈಜುಗಾರ ಪಕ್ಷಿಗಳಿವು. ಮುಳುಗುವುದರಲ್ಲಿ ನುರಿತವು. ಅವಕ್ಕೆ ಅನುಕೂಲವಾಗುವಂತೆ ಜಾಲಾಂಗುಲಿ ಹೊಂದಿವೆ. ಹೆದರಿದಾಗ ತಮ್ಮ ಪಾದದ ಒತ್ತಡ ದಿಂದ ದೇಹವನ್ನು ಮೇಲಕ್ಕೆ ಚಿಮ್ಮಿ, ಕೊಕ್ಕನ್ನೂ ಕತ್ತನ್ನೂ ಕೆಳಕ್ಕೆ ಬಾಗಿಸಿ ಹಠಾತ್ತನೆ ಮುಳುಗುತ್ತವೆ. ನೀರಿನಲ್ಲಿ ಹೆಚ್ಚು ಕಾಲ ಮುಳುಗಿರಲು ಅವುಗಳ ರಕ್ತಚಲನೆಯಲ್ಲೂ ಅನುಕೂಲತೆ ಏರ್ಪಟ್ಟಿದೆ. ಅವುಗಳ ಮೂಳೆ ಗಟ್ಟಿ. ಇತರ ಪಕ್ಷಿಗಳಂತೆ ಹಗುರವಾಗಿರು ವುದಿಲ್ಲ. ಇದರಿಂದ ಹೆಚ್ಚಿನ ಆಮ್ಲಜನಕವಿಲ್ಲದಿದ್ದರೂ ಬದುಕಿರಬಲ್ಲ ಶಕ್ತಿ ಹೊಂದಿವೆ.

ಇವಕ್ಕೆ ಮೀನೇ ಮುಖ್ಯಾಹಾರ. ಆಹಾರಕ್ಕಾಗಿ ದಡದ ಬಳಿಯೇ ಹೆಚ್ಚಾಗಿ ಮುಳುಗುತ್ತಿರುತ್ತವೆ. ಪ್ರತಿ ಸಲವೂ ೧/೨ ಅಥವಾ ೩/೪ ನಿಮಿಷ ಒಳಗಿರಬಲ್ಲವು. ಅಪಾಯ ಸೂಚನೆಯಾದರೆ ಹಲವು ನಿಮಿಷ ಮುಳುಗಿರುತ್ತವೆ. ಮುಳುಗಿರುವಾಗಲೂ ನೀರಿನೊಳಗೇ ಈಜಿ ದೂರದಲ್ಲಿ ಹೊರಬೀಳುತ್ತವೆ. ಸುಮಾರು ೨೪೦ ಅಡಿ ಆಳಕ್ಕೆ ಅವು ಮುಳುಗಿದ್ದುದು ವರದಿಯಾಗಿದೆ !

ಹಾರಲೂ ಸಮರ್ಥವಾದವು. ತಮ್ಮ ಸಣ್ಣ ರೆಕ್ಕೆಯ ವೇಗ ಬಡಿತದಿಂದ ಗಂಟೆಗೆ ೬೦ ಮೈಲಿ ವೇಗದಲ್ಲಿ ಹಾರಬಲ್ಲವು. ಒಂದು ಪ್ರಭೇದ ಉತ್ತರ ಶೀತವಲಯದಿಂದ ದಕ್ಷಿಣಕ್ಕೆ ಸುಮಾರು ೧೦೦೦ ಮೈಲಿ ದೂರ ಹಾರಿ ವಲಸೆ ಹೋಗುತ್ತವೆ.

ಅವುಗಳ ಕೂಗು ಇಂಪಾಗಿರುತ್ತದೆ. ಆದರೆ ಕೊನೆಯಲ್ಲಿ ಅದು ಕರ್ಕಶ ನಗು ವಿನಂತೆ ಅಂತ್ಯಗೊಳ್ಳುತ್ತದೆ. ಆದರಿಂದಲೇ ಆಂಗ್ಲರು ಇತರರನ್ನು ಹೀಯಾಳಿಸುವಾಗ 'ಲೂನ್‌ನಂತಹ ಹುಚ್ಚು' ಎನ್ನುವುದು. ಸರೋವರ ಅಥವಾ ಕೊಳಗಳ ತೀರದಲ್ಲಿನ ಜೊಂಡುಗಳ ಮಧ್ಯೆ ಗೂಡು ರಚಿಸಿ, ೨ ದಪ್ಪ ಕಪ್ಪು ಚುಕ್ಕೆಯುಳ್ಳ ಕೆಂಚುವರ್ಣದ ಮೊಟ್ಟೆಯಿಡುತ್ತವೆ. ೨೯ ದಿನಗಳ ಕಾಲಾವಧಿಯ ನಂತರ, ಮೇಲೆ ಕಪ್ಪಾಗಿದ್ದು ಹೊಟ್ಟೆಭಾಗ ಮಾತ್ರ ಬಿಳುಪಾಗಿರುವ ಮರಿಗಳು ಹೊರಬರುತ್ತವೆ. ಹೊರಬಂದ ಒಂದೆರಡು ಗಂಟೆಗಳಲ್ಲೇ ಅವು ಈಜಿ ತಮ್ಮ ಪೋಷಕರನ್ನು ಹಿಂಬಾಲಿಸುತ್ತವೆ. ಶಕ್ತಿ ಗುಂದಿದಲ್ಲಿ ಪೋಷಕರ ಬೆನ್ನು ಏರಿ ವಿಶ್ರಮಿಸಬಹುದು. ೨ ವಾರಗಳಲ್ಲೇ ಮುಳುಗಲು ಕಲಿತು, ಬೇಗ ಬೆಳೆದು ೧೦–೧೨ ವಾರದಲ್ಲಿ ಪೂರ್ಣ ಗಾತ್ರಹೊಂದುತ್ತವೆ.

೨೨ ವರ್ಷಕಾಲ ಬದುಕಿರಬಲ್ಲವೆಂದು ತಿಳಿದುಬಂದಿದೆ. ಅದರ ಮಾಂಸ ಹೊಲಸು ವಾಸನೆ ಹೊಂದಿದ್ದು, ಹಿಂದುಳಿದ ಪಂಗಡದ ಹಲವರು ಮಾತ್ರ ಉಪಯೋಗಿಸುತ್ತಾರೆ. ಅವುಗಳ ವಿವಿಧ ಬಣ್ಣದ ತುಪ್ಪಟ ಚರ್ಮ ಕೈ ಚೀಲ ತಯಾರಿಸಲು ಉಪಯುಕ್ತ. ಜಪಾನ್ ತೀರದಲ್ಲಿ ಈ ಪಕ್ಷಿಗಳ ತಂಡವನ್ನು ನೀರಿನಲ್ಲಿ ಮುಳುಗಿಸಿ ಅಲ್ಲಿರುವ ಮೀನು ಸಮೂಹವನ್ನು ಬಲೆಗಳೆಡೆಗೆ ಓಡಿಸಲು ಉಪಯೋಗಿಸುತ್ತಾರೆ. ಅವು ಕನಿಷ್ಠ ದರ್ಜೆಯ ಮೀನು ಜಾತಿಗಳನ್ನೇ ಹೆಚ್ಚಾಗಿ ತಿಂದು ಅನುಕೂಲವೇರ್ಪಡಿಸುತ್ತವೆಂದು ಜಪಾನ್ ಮತ್ತು ಉ. ಅಮೇರಿಕಾಗಳಲ್ಲಿ ಅವುಗಳಿಗೆ ರಕ್ಷಣೆ ಏರ್ಪಡಿಸಲಾಗಿದೆ.

ಹೆಣ್ಣು-ಗಂಡುಗಳಿಗೆ ಬಣ್ಣ ಅಥವಾ ಗಾತ್ರದಲ್ಲಿ ಭೇದವಿಲ್ಲ. ಕಪ್ಪು ತಲೆಯ, ಕೆಂಪು ಕತ್ತಿನ, ಹಳದಿ ಕೊಕ್ಕಿನ ಮತ್ತು ಹಸಿರು ತಲೆಯವೇ ನಾಲ್ಕು ಪ್ರಭೇದಗಳು. ಇದರಲ್ಲಿ ಕೆಂಪು ಕತ್ತಿನವು ಸಾಮಾನ್ಯ ೨೪ ಅಂಗುಲದಿಂದ – ೪೦ ಅಂಗುಲವಿರಬಹುದು. ಉತ್ತರ ಶೀತವಲಯದ ಬಹುಭಾಗದಲ್ಲಿ ಇವು ತುಗಿದ್ದು ಮೆಡಿಟರೇನಿಯನ್ ಮತ್ತು ಜಪಾನ್ – ಚೈನಾವರೆಗೂ ಚಳಿಗಾಲದಲ್ಲಿ ವಲಸೆ ಬರುತ್ತವೆ.

ಉಪವರ್ಗ ೮ : ಪೋಡಿಸಿಪೆಡಿಫಾರ್ಮಿಸ್ (Podicipediformes)
ಕುಟುಂಬ ೧ ಪೋಡಿಸಿಪೆಡಿಡೀ (Podicipedidae)
ಜಾತಿ ೪
ಪ್ರಭೇದ ೧೭

ಪ್ರಪಂಚದ ಎಲ್ಲೆಡೆ ಕಂಡುಬರುವ 'ಗ್ರೀಬ್ಸ್' (Grebes) ಎಂಬ ಜಲಪಕ್ಷಿಗಳು ಈ ಉಪವರ್ಗದವು. ಸಿಹಿನೀರಿನಲ್ಲೇ ಹೆಚ್ಚು ವಾಸ. ದೂರದಿಂದ ಬಾತಿನಂತೆ ಕಂಡರೂ ಅವುಗಳ ನೀಳ ಮೊನಚು ಕೊಕ್ಕು ಮತ್ತು ತೆಳು ದೇಹ ಅವುಗಳನ್ನು ಸುಲಭವಾಗಿ ಗುರುತಿಸಬಲ್ಲ ಚಿಹ್ನೆಗಳಾಗಿವೆ. ಮುಖ್ಯವಾದ ಗುರುತು ಪಾದಗಳದೇ. ಅವುಗಳ ಬೆರಳುಗಳು ಜಾಲಾಂಗುಲವಾಗಿರದೆ, ಪ್ರತಿ ಬೆರಳಿಗೂ ರೆಕ್ಕೆಯಂತಹ ತೆಳುವಾದ ಕೊಂಬಿನ ಪದರ ಬೆಳೆದಿರುತ್ತದೆ. ಈ ಉಪವರ್ಗಕ್ಕಲ್ಲದೆ ಇಂತಹ ರಚನೆ ಇನ್ನು ಮೂರು ಪಕ್ಷಿ ಉಪವರ್ಗಗಳಿಗೆ ಮಾತ್ರ ಇದೆ.

ಇವುಗಳಿಗೂ ಇತರ ಜಲಪಕ್ಷಿಗಳಿಗೂ ಅನೇಕ ವ್ಯತ್ಯಾಸಗಳಿವೆ. ಪುಕ್ಕವೆಲ್ಲಾ ಮೃದುವಾಗಿದ್ದು ವರ್ಣರಂಜಿತ. ಬಾಲ ಕಾರ್ಯಕಾರಿಯಲ್ಲ. ಬಾಲವೇ ಇಲ್ಲವೆನ್ನಬಹುದು. ಹಾರಾಡುವಾಗ ಅತ್ತಿತ್ತ ತಿರುಗಲು ಇದರಿಂದ ಸಹಾಯವಾಗದೆ, ನೀಳವಾಗಿ ಹಿಂದೆ ಜೋತುಬೀಳುವ ಕಾಲುಗಳೇ ಈ ಕಾರ್ಯಕ್ಕೆ ಮುಖ್ಯವಾದದ್ದು. ರೆಕ್ಕೆ ಸಣ್ಣ. ಆದ್ದರಿಂದ ಬಹು ದೂರ ಹಾರಲಾರವು. ಆದರೆ ಹಲವು ಉತ್ತರ ವಲಯದವು ದೂರ ವಲಸೆ ಹೋಗುವುದು ಕಂಡುಬರುತ್ತದೆ.

ಸಣ್ಣ ಮೀನು, ಸೀಗಡಿ ಮರಿಗಳು, ಕೀಟಮರಿಗಳು ಮುಂತಾದವೇ ಮುಖ್ಯಾಹಾರ. ಹೆಚ್ಚು ಕಾಲ ಮುಳುಗಿರಲಾರವು. ೧/೨ ನಿಮಿಷವಿದ್ದಲ್ಲಿ ಹೆಚ್ಚು. ಲೂನ್‌ಗಳಂತೆಯೇ ಇವುಗಳಲ್ಲೂ ದೇಹದಲ್ಲಿನ ಮತ್ತು ಪುಕ್ಕದಲ್ಲಿನ ಗಾಳಿ ಹೊರಬಿದ್ದು, ನಿಧಾನವಾಗಿ ಮುಳುಗಿ, ತಲೆ ಮತ್ತು ಕೊಕ್ಕನ್ನು ಮಾತ್ರ ಮೇಲಿಟ್ಟುಕೊಂಡು ನೀರಿನಡಿಯೇ ಈಜುತ್ತವೆ. ಮಾಂಸವೂ ಲೂನ್‌ಗಳಂತೆಯೇ ಹೊಲಸು ವಾಸನೆ ಹೊಂದಿ, ಹೆಚ್ಚು ಉಪಯುಕ್ತವಲ್ಲ.

೪ ಜಾತಿಗಳ ೧೭ ಪ್ರಭೇದಗಳು ಈಗ ಜೀವಂತವಿರುವವು. ದ. ಶೀತವಲಯವನ್ನುಳಿದು ಇನ್ನೆಲ್ಲೆಡೆ ಜೀವಿಸುತ್ತವೆ. ಪೋಡಿಸೆಪ್ಸ್ ಜಾತಿಯವೇ ೧೩ ಪ್ರಭೇದ ಹೊಂದಿ ಹೆಚ್ಚಾಗಿ ಹರಡಿರುವುದು. ಇವು ದೊಡ್ಡ ಜಾತಿಯವು. ಯೂರೇಷಿಯಾ–ಆಫ್ರಿಕಾದಿಂದ

ಆಸ್ಟ್ರೇಲಿಯಾವರೆಗೆ ವಾಸಿಸುವ ೨೮ ಅಂಗುಲ ಗಾತ್ರದ ಶಿಖಿಯಾಂತವು ಎರಡನೆಯದು. ಕೇವಲ ೧೧ ಅಂಗುಲ ಉದ್ದದ ಸಣ್ಣ ಗ್ರೀಬ್ ಎಲ್ಲೆಡೆ ಕಂಡುಬರುತ್ತದೆ. ಮಡಗಾಸ್ಕರ್, ನ್ಯೂಜಿಲೇಂಡ್, ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಮಾತ್ರ ಕಂಡುಬರುವ ಪ್ರತ್ಯೇಕ ಪ್ರಭೇದಗಳೂ ಹಲವಿವೆ. ಆಫ್ರಿಕಾದ ಟಿಟಿಕಾಕ ಸರೋವರದಲ್ಲಿರುವ ಪ್ರಭೇದ ಹಾರಲಾರದವು.

ಅವುಗಳ ಕೂಗು ವಿವಿಧವಾಗಿರುತ್ತದೆ. ಹೆಣ್ಣು – ಗಂಡುಗಳೆರಡೂ ಪರ್ವಕಾಲ ದಲ್ಲಿ ತಮ್ಮ ಕಿವಿ, ಕತ್ತು ಮತ್ತು ಶಿಖೆಗಳ ಬಳಿಯ ವರ್ಣ ರಂಜಿತ ಗರಿಗಳನ್ನು ತೋರ್ಪಡಿಸಿ ಒಂದನ್ನೊಂದು ಮೆಚ್ಚಿಸಲು ಪ್ರಯತ್ನಿಸುತ್ತವೆ.

ಹೆಣ್ಣು ಗಂಡುಗಳೆರಡೂ ಸೇರಿ ಗೂಡು ರಚಿಸುತ್ತವೆ. ಜೊಂಡುಹುಲ್ಲು, ಮತ್ತಿತರ ನೀರು ಸಸ್ಯಗಳಿಂದ ತೇಲುವ ತೆಪ್ಪದಂತಹ ಗೂಡು ರಚಿಸಿ ಅದನ್ನು ಜೊಂಡಿಗೆ ಸೇರಿಸಿಬಿಡುತ್ತದೆ. ಈ ಗೂಡಿನಲ್ಲಿ ೩–೧೦ ಮೊಟ್ಟೆಯಿಡುತ್ತವೆ. ಮೊಟ್ಟೆಯ ಭಾರಕ್ಕೆ ಗೂಡು ಸ್ವಲ್ಪ ನೀರಿನಲ್ಲಿ ಮುಳುಗಿರಬಹುದು. ೨೦ರಿಂದ ೩೦ ದಿನ ಕಾವಿತ್ತು ಮರಿ ಮಾಡುತ್ತವೆ. ಅವು ಸಣ್ಣ ಮರಿಗಳನ್ನು ತಮ್ಮ ಬೆನ್ನ ಮೇಲೆ, ಅಥವಾ ರೆಕ್ಕೆಯಡಿ ಮುಚ್ಚಿ ಹೊತ್ತು ತಿರುಗುತ್ತವೆ. ಮರಿಗಳಿಗೆ ಬಿಳಿ ಪಟ್ಟೆಗಳಿದ್ದು ತಲೆ ಸಣ್ಣಗಿರುತ್ತದೆ. ಮುಳುಗುವಾಗಲೂ ಮರಿಗಳೊಡನೇ ಮುಳುಗುತ್ತದೆ. ಕೆಲವು ಪ್ರಭೇದಗಳಲ್ಲಿ ಮೊದಲ ನೆಯ ಮರಿಗಳು ಪೂರ್ಣ ಬೆಳೆಯುವುದರೊಳಗೇ ಎರಡನೆಯ ಸಲ ಮೊಟ್ಟೆಯಿಡು ವುದರಿಂದ ಗಂಡು ಅರೆಬಲಿತ ಮರಿಗಳನ್ನು ಸಲಹಲುಪಕ್ರಮಿಸುತ್ತದೆ.

ಅವುಗಳಲ್ಲಿ ಅತ್ಯಂತ ಕುತೂಹಲಕಾರಿ ವರ್ತನೆಯೊಂದಿದೆ. ಪಕ್ಷಿಗಳು ಆಗಾಗ ತಮ್ಮ ಗರಿಗಳನ್ನು ಕಿತ್ತು ತಿನ್ನುತ್ತವೆ. ಮರಿಗಳಿಗೂ ಅದೇ ವಾಡಿಕೆಯಿದೆ. ಅವುಗಳ ಹೊಟ್ಟೆಯಲ್ಲೂ ತಮ್ಮ ತಂದೆತಾಯಿಗಳ ಪುಕ್ಕಗಳು ಹೇರಳವಾಗಿರುತ್ತವೆ. ಇದರ ಉಪ ಯೋಗ ಇನ್ನೂ ಸರಿಯಾಗಿ ಅರ್ಥವಾಗಿಲ್ಲ.

ಉಪವರ್ಗ ೯ : ಪ್ರೋಸೆಲ್ಲೇರಿಫಾರ್ಮಿಸ್ (Procellariiformes)
ಕುಟುಂಬ ೪
ಜಾತಿ
ಪ್ರಭೇದ ೯೨

ಈ ಉಪವರ್ಗದಲ್ಲಿನ ೪ ಕುಟುಂಬಗಳ ಜಾತಿಪ್ರಭೇದಗಳೆಲ್ಲಾ ಬಹುಮಾಗಿ ಸಮುದ್ರವಾಸಿಗಳೇ. ಪರ್ವಕಾಲದಲ್ಲಿ ಸಂತಾನಾಭಿವೃದ್ಧಿಗಾಗಿ ಮಾತ್ರ ದಡಕ್ಕೆ ಬರುತ್ತವೆ. ದಪ್ಪಗಾತ್ರದ ಒಂದೇ ಬಿಳುಪು ಮೊಟ್ಟೆಯಿಡುತ್ತವೆ. ಒಂದು ಕುಟುಂಬ ಮಾತ್ರ ನೆಲದ ಮೇಲೆ ಗೂಡು ರಚಿಸುವುವು. ಉಳಿದವು ಬಿಲ ಕೊರೆದು ಅದರಲ್ಲಿ ಮರಿಮಾಡುತ್ತವೆ.

ಅವುಗಳಲ್ಲಿ ರಚನಾ ವೈಶಿಷ್ಟ್ಯ ಹಲವಿವೆ. ಮೂಗಿನ ಹೊಳ್ಳೆಗಳು ಕೊಕ್ಕಿನ ಮೇಲ್ಭಾಗದಲ್ಲಿ ಸ್ವಲ್ಪದೂರ ನಳಿಕೆಯಾಕಾರವಾಗಿ ಮುಂದುವರಿದು ತೆರೆಯುತ್ತವೆ. ಈ

ರಚನೆ ಇನ್ನಾವ ಉಪವರ್ಗದಲ್ಲೂ ಇರುವುದಿಲ್ಲ. ಅದರಿಂದಲೇ ಇವುಗಳನ್ನು ಮೊದಲು 'ಟೂಬಿನೇರ್ಸ್' ಅಥವಾ "ನಳಿಗೆಮೂಗಿನ" ಉಪವರ್ಗವೆಂದು ಕರೆಯಲಾಗಿತ್ತು. ಪರ್ವಕಾಲದಲ್ಲಿ ಅವುಗಳ ಚಟುವಟಿಕೆಗಳೆಲ್ಲಾ ರಾತ್ರಿ ವೇಳೆಯಲ್ಲೇ. ಅದರ ಹೊಟ್ಟೆಯಲ್ಲಿ ಹಳದಿ ವರ್ಣದ ಎಣ್ಣೆ ಉತ್ಪನ್ನವಾಗಿ ಅವುಗಳನ್ನು ಮರಿಗಳಿಗೆ ಉಣಿಸುವುದಲ್ಲದೆ, ಹೆದರಿದಾಗ ಅವುಗಳ ಬಾಯಿ ಮತ್ತು ಮೂಗಿನಿಂದಲೂ ಹೊರಬೀಳುತ್ತದೆ. ಅವುಗಳ ಮಾಂಸಕ್ಕೆ ಹೊಲಸು ವಾಸನೆಯಿದ್ದು, ಉಪಯುಕ್ತವಲ್ಲ.

ಅವುಗಳಲ್ಲಿನ ಮುಕ್ಕಾಲುಭಾಗ ಪ್ರಭೇದಗಳ ಜೀವನ ದಕ್ಷಿಣ ವಲಯದಲ್ಲೇ. ಅಲ್ಲದೆ ಪಳೆಯುಳಿಕೆಗಳ ಆಧಾರದಿಂದಲೂ ಅವು ಬಹುಶಃ ದಕ್ಷಿಣ ವಲಯದಲ್ಲೇ ಸುಮಾರು ೧೦ ಕೋಟಿ ವರ್ಷಗಳ ಹಿಂದೆ ಉದ್ಭವವಾಗಿರಬಹುದೆಂದು ಊಹಿಸಲಾಗಿದೆ.

ಅವುಗಳಲ್ಲಿ ಮೊದಲನೆಯ ಪಂಗಡ 'ಆಲ್‌ಬಟ್ರಾಸ್' ಪಕ್ಷಿಗಳು. ಕಡಿದಾದ ನೀಳ ರೆಕ್ಕೆಯಿರುವ ದಪ್ಪ ಬಾತಿನ ಗಾತ್ರದ ಪಕ್ಷಿಗಳು. ಎರಡನೆಯ ಕುಟುಂಬ ಮಧ್ಯಮ ಗಾತ್ರದವು. ಅವುಗಳಿಗೂ ಕಿರಿದಾದ ನೀಳ ರೆಕ್ಕೆಗಳಿವೆ. 'ಪೀಟ್ರಲ್'ಗಳು ೯–೧೦ ಅಂಗುಲದ ಕಪ್ಪು ಬಣ್ಣದ ಪಕ್ಷಿಗಳು. ಸಣ್ಣ ರೆಕ್ಕೆ ಅಗಲವಾಗಿರುತ್ತದೆ. ಮುಳುಗುವ ಪೀಟ್ರಲ್‌ಗಳು ನೀರಿನಲ್ಲಿ ಮುಳುಗಿ ಜೀವಿಸಲು ಅನುಕೂಲವಾಗುವಂತೆ ಗಿಡ್ಡ ರೆಕ್ಕೆಯ ದಪ್ಪದೇಹ ಹೊಂದಿರುತ್ತವೆ.

ಕುಟುಂಬ ೧ : ಡಯೋಮಿಡೈಡೀ (Diomedeidae) (ಆಲ್ಬಟ್ರಾಸ್‌ಗಳು) (Albatross)

ಇದರಲ್ಲಿನ ಒಟ್ಟು ೧೩ ಪ್ರಭೇದಗಳಲ್ಲಿ ೯ ದಕ್ಷಿಣವಲಯದ ಸಮುದ್ರಗಳಲ್ಲಿ ವಾಸಿಸುತ್ತವೆ. ಇಲ್ಲಿ ಹೆಚ್ಚು ಗಾಳಿ ಬಡಿತವಿರುವುದೇ ಇದಕ್ಕೆ ಮುಖ್ಯ ಕಾರಣ. ಗಾಳಿ ಕಡಮೆಯಾದಲ್ಲಿ ಅವುಗಳಿಗೆ ಕಷ್ಟ, ಹೆಚ್ಚಾಗಿದ್ದಷ್ಟೂ ಅದನ್ನನುಸರಿಸಿ ದೀರ್ಘಕಾಲ ತೇಲುತ್ತಾ ಹಾರಾಡಲು ಅವು ಶಕ್ತವಾಗಿರುತ್ತವೆ. ಅದರಿಂದಲೇ ಗಾಳಿಯ ಒತ್ತಡವನ್ನು ಉಪಯೋಗಿಸಿಕೊಂಡು ತಡೆಯಿಲ್ಲದೆ ಅನೇಕ ದಿನಗಳವರೆಗೆ ಹಾರಾಡುತ್ತಿರುತ್ತವೆ.

ಇದನ್ನು ಮೊದಲು ಪೋರ್ಚುಗೀಸರು 'ಆಲ್ಕಟ್ರಾಸ್ (Alcatross) ಅಂದರೆ ದಪ್ಪ ಪಕ್ಷಿ ಎಂದು ಕರೆದರು. ಮುಂದೆ ಇದು '**ಆಲ್ಬಟ್ರಾಸ್**' ಆಯಿತು. ನಿಶ್ಶಬ್ದವಾಗಿ ಹಡಗುಗಳನ್ನು ಹಿಂಬಾಲಿಸಿ ಗಾಳಿಯಲ್ಲಿ ಹಗಲಿರುಳೂ ತೇಲುತ್ತಿದ್ದ ಈ ಪಕ್ಷಿಗಳನ್ನು, ಬಹುಶಃ ಸತ್ತ ನಾವಿಕರ ಆತ್ಮಗಳಿರಬಹುದೆಂದು ಬಹುಕಾಲ ನಂಬಲಾಗಿತ್ತು, ಅವು ಬುದ್ಧಿವಂತ ಪಕ್ಷಿಗಳಲ್ಲ. ಅದರಿಂದಲೇ ಅದನ್ನು 'ಮೂಕಪಕ್ಷಿ' ಎಂದು ಈಗಲೂ ಕರೆಯಲಾಗುತ್ತದೆ. ಜಪಾನೀಯರು ಅದನ್ನು 'ಮುಠ್ಠಾಳ ಪಕ್ಷಿ' ಎಂದೇ ಕರೆಯುತ್ತಾರೆ !

ಅವುಗಳ ವರ್ತನೆಯೇ ಇದಕ್ಕೆ ಕಾರಣ. ಹಾರಾಡುತ್ತಿದ್ದು ಬೇಸತ್ತಾಗ ಹಡಗಿನಲ್ಲಿ ಇಳಿದು ಮನುಷ್ಯರು ಹತ್ತಿರ ಬಂದರೂ ಅಲುಗಾಡದೆ ಸುಮ್ಮನಿರುತ್ತವೆ. ತನಗೆ

ಇಷ್ಟವಿದ್ದೆಡೆಯಲ್ಲಿ ಗೂಡು ರಚಿಸಿ ಮರಿಮಾಡುತ್ತವೆ. ಮನೆ ಪಕ್ಕ, ರಸ್ತೆ ಪಕ್ಕ, ಮತ್ತು ಮನೆಯು ಕ್ಕೆ ತೋಟಗಳಲ್ಲೂ ಅವುಗಳಿಗೆ ಇಷ್ಟವಾದೆಡೆ ಮೊಟ್ಟೆಯಿಕ್ಕಿ ಯಾರನ್ನೂ ಲೆಕ್ಕಿಸದೆ ಇರುತ್ತವೆ. ಯಾರಾದರೂ ಹೆಚ್ಚಾಗಿ ತೊಂದರೆ ಮಾಡಿದಲ್ಲಿ ಮಾತ್ರ ಕೊಕ್ಕಿನಿಂದ ಕುಕ್ಕಲು ಹವಣಿಸುತ್ತವೆ.

ಗಾಳಿಯಿದ್ದಲ್ಲಿ ಅದನ್ನನುಸರಿಸಿ ಹಾರಾಡುತ್ತಿರುತ್ತವೆ. ಅವುಗಳ ನೀಳ ರೆಕ್ಕೆ ಗಾಳಿಯಲ್ಲಿ ತೇಲಲು ಅನುಕೂಲ. ಹಾರಬಲ್ಲ ರೆಕ್ಕೆಗಳ ಅಗಲ ೧೦–೧೧ ಅಡಿಗಳಿರ ಬಹುದು. ಆದರಿಂದ ಗಾಳಿ ಕಡಮೆಯಾದಲ್ಲಿ ಹಾರಲಾರದೆ ಹಡಗಿನಲ್ಲಿ ಇಳಿಯು ತ್ತವೆ. ದ. ವಲಯದಲ್ಲಿ ಗಾಳಿ ವೇಗ ಹೆಚ್ಚಾಗಿರುವುದರಿಂದ, (ರೇಖಾಂಶ ೪೦ರ ಬಳಿ), ಅವು ಅದರ ಮೇಲೆ ತೇಲಿ ದಿನಕ್ಕೆ ೨೦೦–೨೫೦ ಮೈಲಿ ದೂರ ಹೋಗಬಲ್ಲವು. ಸುಮಾರು ೮೦ ದಿನಗಳಲ್ಲಿ ಅವು ಪ್ರಪಂಚವನ್ನು ಹೀಗೆ ಸುತ್ತಿ ಬರುವುದುಂಟು. ತಮ್ಮ ೫ನೇ ವರ್ಷದವರೆಗೆ ಅವು ಹೀಗೇ ಸುತ್ತುತ್ತಲೇ ಇರುತ್ತವೆ. ೨ ಪ್ರಭೇದಗಳು ಮಾತ್ರ ಹವಾಯಿಯು ಪಶ್ಚಿಮಕ್ಕಿರುವ ದ್ವೀಪಗಳಲ್ಲಿ ಕಂಡುಬರುತ್ತವೆ. ಅವು ಉತ್ತರ ವಲಯದಲ್ಲಿದ್ದರೂ ಪರ್ವಕಾಲದಲ್ಲಿ ದಕ್ಷಿಣಕ್ಕೆ ವಲಸೆ ಹೋಗುತ್ತವೆ.

ಬೆಹರಿಂಗ್ ಬಳಿಯಿರುವ ಇನ್ನೊಂದು ಪ್ರಭೇದದ ಉತ್ತಮ ಗರಿಗಳಿಗಾಗಿ ಬೇಟೆ ಯಾಡಲಾಗಿದ್ದು ನಿರ್ನಾಮ ಹೊಂದಿತೆಂದು ಪರಿಗಣಿಸಲಾಗಿತ್ತು. ಆದರೆ ೧೯೫೩ರಲ್ಲಿ ಹಠಾತ್ತಾಗಿ ೨೦ ಪಕ್ಷಿಗಳ ತಂಡವೊಂದು ಜಪಾನ್ ದ್ವೀಪದಲ್ಲಿ ಬಂದಿಳಿಯಿತು. ಅದನ್ನು ಈಗ ಜಪಾನಿನಲ್ಲಿ ಬಹು ಎಚ್ಚರಿಕೆಯಿಂದ ಪೋಷಿಸಿ ರಾಷ್ಟ್ರೀಯ ರಕ್ಷಣೆ ಒದಗಿಸಲಾಗಿದೆ. ಈಗ ಅವು ೭೦–೮೦ ಸಂಖ್ಯೆಯಲ್ಲಿರುವುದೆಂದು ತಿಳಿದು ಬಂದಿದೆ.

೭ ವರ್ಷ ವಯಸ್ಸಿನ ನಂತರವೇ ಅವು ಪರ್ವ ಹೊಂದುವುದು. ದಂಪತಿಗಳಾಗಿ ಜೊತೆಗೂಡಿದಲ್ಲಿ ಜೀವನವಿಡೀ ಒಟ್ಟಿಗಿರುತ್ತವೆ. ಪರ್ವಕಾಲದಲ್ಲಿ ಅದೇ ಜೊತೆ ಪುನಃ ಪುನಃ ಜೊತೆಗೂಡಿ ಮರಿಮಾಡುತ್ತವೆ. ಗೂಡು ರಚನೆ ಪ್ರದೇಶ ಮಣ್ಣು ಕೆರೆದ ತಗ್ಗು ಅಥವಾ ಮಣ್ಣು ಅಥವಾ ಮರಳು ಗುಂಪೆ. ಹಲವು ದ್ವೀಪಗಳಲ್ಲಿ ಸಾಮೂಹಿಕವಾಗಿ ತಂಗಿದ್ದು ಮರಿಮಾಡುತ್ತವೆ. ಮರಿ ಪೋಷಣೆಯಲ್ಲಿ ಗಂಡು – ಹೆಣ್ಣು ಗಳೆರಡೂ ಭಾಗವಹಿಸುತ್ತವೆ. ಕಾವಿನ ಅವಧಿ ೬೫ರಿಂದ ೭೫ ದಿನಗಳು. ಮರಿಗಳಿಗೆ ಅರೆಜೀರ್ಣ ಆಹಾರ ಕಕ್ಕಿ ತಿನ್ನಿಸುತ್ತದೆ. ಗಾತ್ರಕ್ಕನುಗುಣವಾಗಿ ೮ – ೯ ತಿಂಗಳವರೆಗೆ ಮರಿ ಗೂಡಿನಲ್ಲಿರಬಲ್ಲವು. 'ಅಲೆದಾಟದ ಆಲ್ಬಟ್ರಾಸ್' ೨ ವರ್ಷಗಳಿಗೊಮ್ಮೆ ಮಾತ್ರ ಮರಿ ಮಾಡುತ್ತವೆ. ಮರಿ ಮಾರ್ಚಿ ತಿಂಗಳು ಹುಟ್ಟಿದ ನಂತರ ತಂದೆ ಅಥವಾ ತಾಯಿ ೧೦ – ೧೨ ದಿನಗಳಿಗೊಮ್ಮೆ ಮಾತ್ರ ಭೇಟಿಕೊಟ್ಟು ಸಾಕಷ್ಟು ಆಹಾರವನ್ನಿಟ್ಟು ಹೋಗುತ್ತವೆ. ಮರಿ ಅದನ್ನು ಬೇಕಾದಾಗ ಉಪಯೋಗಿಸಿಕೊಂಡು ಬೆಳೆಯುತ್ತವೆ. ಅಪಾಯವಿದ್ದಲ್ಲಿ ಕೊಕ್ಕಿನಿಂದ ತಿವಿದು, ಅಥವಾ ಹಳದಿ ದುರ್ವಾಸನೆಯ ಎಣ್ಣೆ ಸೃಜಿಸಿ, ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತವೆ.

ಪರ್ವಕಾಲದಲ್ಲಿ ಗಂಡು ಹೆಣ್ಣುಗಳೆರಡೂ ಎದುರುಬದುರಾಗಿ ನಿಂತು ರೆಕ್ಕೆಗಳನ್ನೆತ್ತಿ ಹಿಡಿದು ವಿಧವಿಧವಾಗಿ ನರ್ತಿಸುತ್ತವೆ. ಪೂರ್ವದಲ್ಲಿ ದೀರ್ಘಕಾಲ ಸಮುದ್ರಯಾನದಲ್ಲಿ ತೊಡಗಿದ್ದು, ಆಹಾರ ಅಭಾವವಿರುತ್ತಿದ್ದ ನಾವಿಕರು, ವಾಸನೆಯಿದ್ದರೂ ಲೆಕ್ಕಿಸದೆ ಅವುಗಳನ್ನು ಕೊಂದು ಉಪಯೋಗಿಸುತ್ತಿದ್ದರು. ಮೊಟ್ಟೆಗಳೂ ಉಪಯುಕ್ತವಾದವು. ಅವುಗಳ ಮೃದು ಗರಿಗಳು ಹಾಸಿಗೆಗೂ, ಅಲಂಕಾರಕ್ಕೂ ಬೇಕಿದ್ದು, ಸಹಸ್ರಾರು ಪಕ್ಷಿಗಳನ್ನು ಬೇಟೆಯಾಡಲಾಗುತ್ತಿತ್ತು. ಈಗ ಅವುಗಳಿಗೆ ಬೆಲೆ ಕಡಮೆಯಾದ್ದರಿಂದ ವೃದ್ಧಿಗೊಳ್ಳುತ್ತಿವೆ.

ಕುಟುಂಬ ೨ : ಪ್ರೋಸೆಲ್ಲಾರಿಡೀ (Procellariidae) (ಷಿಯರ್‌ವಾಟರ್, ಫುಲ್‌ಮರ್ ಮತ್ತು ದೊಡ್ಡ ಪೀಟ್ರಲ್‌ಗಳು) (Shearwater, Fulmar and Grant Petrels)

ಈ ಕುಟುಂಬದಲ್ಲಿ ಸುಮಾರು ೫೩ ಪ್ರಭೇದಗಳಿದ್ದು ಈ ಉಪವರ್ಗದ ಮುಖ್ಯ ಕುಟುಂಬ ಗಾತ್ರ ಮತ್ತು ಬಣ್ಣದಲ್ಲಿ ಹೆಚ್ಚಿನ ವೈವಿಧ್ಯವಿದೆ. ಅತಿ ಶೀತ ಪ್ರದೇಶಗಳನ್ನುಳಿದು ಇನ್ನುಳಿದ ಸಮುದ್ರ ದ್ವೀಪ ತೀರಗಳಲ್ಲೆಲ್ಲಾ ಕಂಡುಬರುತ್ತವೆ. ಎಲ್ಲವೂ ವಲಸೆ ಹೋಗುವುದರಲ್ಲಿ ಹೆಸರುವಾಸಿ. ೧೫ – ೨೫ ಅಂಗುಲ ನೀಳ ಮಧ್ಯಗಾತ್ರದ ವಿವಿಧ ವರ್ಣದ ಪಕ್ಷಿಗಳು.

ಪ್ರತಿವರ್ಷವೂ ನಿರ್ದಿಷ್ಟ ಸ್ಥಳಕ್ಕೇ ಹಿಂತಿರುಗಿ ಮರಿಮಾಡುತ್ತವೆ. ಎಷ್ಟೇ ದೂರವಿರಲೀ ಅಥವಾ ಎಲ್ಲಿಯೋ ಇರಲೀ ಆ ಸ್ಥಳಕ್ಕೆ ತಪ್ಪದೆ ಬಂದು ತಲುಪುತ್ತದೆ. ಪರೀಕ್ಷಾರ್ಥವಾಗಿ ಒಂದು ಸ್ಥಳದಿಂದ ೩೪೦೦ ಮೈಲಿ ದೂರ ವಿಮಾನದಲ್ಲಿ ಕೊಂಡೊಯ್ದು ಗುರುತು ಮಾಡಿ ಬಿಟ್ಟ ಪಕ್ಷಿಯೊಂದು ಕೇವಲ ೧೨ ದಿನಗಳಲ್ಲೇ ತನ್ನ ಸ್ಥಳಕ್ಕೆ ಹಿಂದಿರುಗಿತು! ಹಲವು ಸಾಮಾನ್ಯವಾಗಿ ಶಾಂತಿಸಾಗರವನ್ನು ಸುತ್ತಿ ವಲಸೆ ಹೋಗುತ್ತವೆ.

ಗಂಡು ೭ ವರ್ಷ, ಹೆಣ್ಣು ೫ ವರ್ಷವಾದಾಗ ಮಾತ್ರ ಸಂತಾನಾಭಿವೃದ್ಧಿ ಕಾರ್ಯದಲ್ಲಿ ತೊಡಗುವುದು. ಬಿಲ ತೋಡಿ ಸುರಂಗ ರಚಿಸಿ ಅದರಲ್ಲಿ ಒಂದೇ ಮೊಟ್ಟೆಯಿಡುತ್ತವೆ. ಗಂಡು ಹೆಣ್ಣುಗಳೆರಡೂ ಕಾವು ಕೊಡುತ್ತವೆ. ಮರಿಯಾಗಲು ೫೨ – ೫೫ ದಿನಗಳು ಬೇಕು. ಅರ್ಧಜೀರ್ಣವಾದ ಸೀಗಡಿಯೇ ಮರಿಗಳಿಗೆ ಆಹಾರ. ತಂದೆತಾಯಿಗಳು ಅರ್ಧ ಜೀರ್ಣವಾದ ಸೀಗಡಿಯನ್ನು ಕಕ್ಕಿ ಉಣಿಸುತ್ತವೆ. ಮರಿಗಳು ಬಹು ಬೇಗ ಬೆಳೆದು ಕೊಬ್ಬುತ್ತವೆ. ೪ – ೬ ವಾರಗಳಲ್ಲೇ ಅವು ತಮ್ಮ ಪಿತೃಗಳಿಗಿಂತ ಹೆಚ್ಚಿನ ತೂಕವಿರುತ್ತವೆ! ಮರಿಗಳು ೧೨ – ೧೪ ವಾರ ಕಾಲ ಗೂಡಿನಲ್ಲಿದ್ದು ಹೊರಬೀಳುತ್ತವೆ. ಈ ಮರಿಗಳ ಮೈಯಲ್ಲಿ ಹೆಚ್ಚಿನ ಕೊಬ್ಬು ಶೇಖರವಾಗಿ ಅತ್ಯಂತ ರುಚಿಕರವಾಗಿರುತ್ತದೆ. ಅವನ್ನು ಕೊಂದು ಉಪಯೋಗಿಸಲಾಗುತ್ತಿದೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಅವುಗಳನ್ನು 'ಮಾಂಸಪಕ್ಷಿ'ಗಳೆಂದು ಲಕ್ಷಾಂತರ ಸಂಖ್ಯೆಯಲ್ಲಿ ಕೊಂದು ರಫ್ತು ಮಾಡ

ಗ್ರಂಥಭಂಡಾರ

ಲಾಗುತ್ತಿತ್ತು. ಅದನ್ನು ಈಗ ತಡೆದಿಟ್ಟು ನಿರ್ದಿಷ್ಟ ಸಂಖ್ಯೆಯ ಹಕ್ಕಿಗಳನ್ನು ಮಾತ್ರ ಕೊಲ್ಲಲು ಅನುಮತಿ ಕೊಡಲಾಗುತ್ತಿದೆ.

'ಷಿಯರ್‌ವಾಟರ್' (Shearwater) ಮತ್ತು 'ಫುಲ್‌ಮರ್' (Fulmar) ಪಕ್ಷಿಗಳೂ, ಮತ್ತು ಪೆಂಗ್ವಿನ್‌ಗಳ ಮೊಟ್ಟೆ ಮತ್ತು ಮರಿಗಳನ್ನು ಅಪಹರಿಸಿ ಭಕ್ಷಿಸುವ ದೊಡ್ಡ ಪೀಟ್ರಲ್‌ಗಳು ಈ ಕುಟುಂಬದವು.

ಕುಟುಂಬ ೩ : ಹೈಡ್ರೋಬಾಟಿಡೀ (Hydrobatidae)
(ಬಿರುಗಾಳಿ ಸೂಚಕ ಪೀಟ್ರಲ್‌ಗಳು)

ಇದರಲ್ಲಿ ಸುಮಾರು ೨೨ ಪ್ರಭೇದಗಳಿದ್ದು, ೬ – ೧೦ ಅಂಗುಲ ನೀಳ ದೇಹ ಹೊಂದಿರುತ್ತವೆ. ಸಮುದ್ರಯಾನ ಹಡಗುಗಳನ್ನು ಬಹುದೂರ ಹಿಂಬಾಲಿಸಿ ಹೋಗು ವುದರಿಂದ ನಾವಿಕರೆಲ್ಲರಿಗೂ ಚಿರಪರಿಚಿತ. ಅವುಗಳು ಬಿರುಗಾಳಿಯನ್ನು ಸೂಚಿ ಸುತ್ತವೆಂದು ನಂಬಲಾಗಿದ್ದದ್ದರಿಂದ ಅವುಗಳನ್ನು 'ಬಿರುಗಾಳಿ ಪೀಟ್ರಲ್'ಗಳೆಂದು ಕರೆಯಲಾಗುತ್ತಿದೆ.

ಸಾಮಾನ್ಯವಾಗಿ ಮೇಲ್ಭಾಗ ಅಚ್ಚಕಪ್ಪು ಅಥವಾ ಮಾಸಲು ಕಂದುಬಣ್ಣ. ಬೆನ್ನಿನ ತಳಭಾಗದಲ್ಲಿ ಬಿಳಿಯ ಮಚ್ಚೆಯಿರುತ್ತದೆ. ಅವುಗಳು ಹೆಚ್ಚುಕಾಲ ಸಮುದ್ರದಲ್ಲೇ ಕಳೆದು, ಸಂತಾನಾಭಿವೃದ್ಧಿಗಾಗಿ ಮಾತ್ರ ಭೂಮಿಯ ಮೇಲೆ ಇಳಿಯುತ್ತವೆ. ನೀರಿಗೆ ಸಮೀಪವಾಗಿ ಅವು ಗುಂಪುಗುಂಪಾಗಿ ಹಾರಾಡುತ್ತಿರುತ್ತವೆ. ಆಹಾರ ಹೆಚ್ಚಾಗಿ ದೊರಕುವೆಡೆ ಲಕ್ಷಾಂತರ ಸೇರಬಲ್ಲವು. ಸೀಗಡಿ, ಮತ್ತು ಹಡಗಿನ ಚಲನೆಯಿಂದ ಮೇಲೆ ಬರುವ ವಿವಿಧ ಸಣ್ಣ ಜೀವಿಗಳೇ ಮುಖ್ಯಾಹಾರ.

ಹಾರಾಡುತ್ತಾ ನೀರಿನ ಮೇಲಿಳಿಯದೆ ಆಹಾರವನ್ನು ಮಾತ್ರ ಹೆಕ್ಕಿ ತಿನ್ನು ವುದು ವಾಡಿಕೆ. ಕೆಲವು ವೇಳೆ ನೀರಿನಲ್ಲಿ ಮುಳುಗಿ ತಿನ್ನಬಲ್ಲವು. ಅವು ನೀರಿನ ಮೇಲೆ ಪೂರ್ಣ ತೇಲುತ್ತವೆ. ಕಾಲು ತೆಳುವಾದ್ದರಿಂದ ನೆಲದ ಮೇಲೆ ಹೆಚ್ಚಾಗಿ ಓಡಾಡಲಾಗುವುದಿಲ್ಲ.

ಪರ್ವಕಾಲದಲ್ಲಿ ವಲಸೆ ಬಂದು ಹಲವು ನಿರ್ದಿಷ್ಟ ದ್ವೀಪಗಳಲ್ಲೂ ಮತ್ತು ಸಮುದ್ರತಡಿಯ ಬೆಟ್ಟಗಳ ಬಂಡೆಗಳಲ್ಲಿಯೂ ಮರಿಮಾಡುತ್ತವೆ. ಕಲ್ಲು ಪೊಟರೆಯಡಿ, ಅಥವಾ ಪೊದರು ಹುಲ್ಲುತಳದಲ್ಲಿ ತಮ್ಮ ಕೊಕ್ಕು ಮತ್ತು ಕಾಲುಗಳಿಂದ ೨ – ೩ ಅಡಿ ಬಿಲ ಕೊರೆದು, ಅದರಲ್ಲಿ ತಮ್ಮ ಒಂದೇ ಬಿಳಿಯ ಮೊಟ್ಟೆಯನ್ನಿಡುತ್ತವೆ.

ಪರ್ವಕಾಲದಲ್ಲಿ ಅವುಗಳ ಚಲನೆಯೆಲ್ಲಾ ರಾತ್ರಿಯಲ್ಲೇ. ಹಗಲೆಲ್ಲಾ ಬಿಲದಲ್ಲಿ ಅಡಗಿ ನಿಶ್ಶಬ್ದವಾಗಿ ಕುಳಿತಿರುತ್ತವೆ. ಕಾವಿನ ಅವಧಿ ೫ ೧/೨ ಯಿಂದ ೭ವಾರ. ಗಂಡು –ಹೆಣ್ಣುಗಳೆರಡೂ ಭಾಗವಹಿಸುತ್ತವೆ. ೨ರಿಂದ ೪ ದಿನ ಪ್ರತಿಯೊಂದರ ಸರದಿಯಿರು ತ್ತದೆ. ಆ ಅವಧಿಯಲ್ಲಿ ಅವು ಉಪವಾಸವಿರುತ್ತವೆ. ಮರಿಗಳಿಗೆ ಮೃದು ಗರಿಗಳ ಹೊದಿಕೆಯಿರುತ್ತದೆ. ಮರಿಯಾದದ್ದೇ ಅವುಗಳಿಗೆ ಮೊದಲು ತಮ್ಮ ಹೊಟ್ಟೆಯಲ್ಲಿನ

ಎಣ್ಣೆಯನ್ನು ಕುಡಿಸುತ್ತವೆ. ನಂತರ ಅರ್ಧ ಜೀರ್ಣವಾದ ಆಹಾರವನ್ನು ಕಕ್ಕಿ ತಿನ್ನಿಸುತ್ತವೆ. ಮರಿ ಪೂರ್ಣ ಬೆಳೆದು ಹಾರಿಹೋಗಲು ೭ರಿಂದ ೯ವಾರ ಬೇಕಾಗುತ್ತದೆ. ಅಲ್ಲಿಂದ ಮುದೆ ಅವು ಸ್ವತಂತ್ರ ಜೀವಿಗಳು.

ಕುಟುಂಬ ೪ : ಪೆಲಿಕನಾಯ್‌ಡಿಡೀ (Pelecanoididae)
(ಮುಳುಗುವ ಪೀಟ್ರಲ್‌ಗಳು)

ಇದರಲ್ಲಿ ನಾಲ್ಕು ಪ್ರಭೇದಗಳು ಮಾತ್ರ ಇವೆ. ಬಹಳ ಹಿಂದುಳಿದ ಪ್ರಭೇದಗಳಿವು. ಇತರ ಪಕ್ಷಿಗಳಂತೆ ಹಾರಾಡಿ ಆಹಾರ ಹೊಂಚಿಕೊಳ್ಳುವ ಬದಲು ಸಮುದ್ರದಲ್ಲಿ ಮುಳುಗಿ ಮೀನು ಹಿಡಿದು ತಿನ್ನುತ್ತವೆ. ಆಕಾರದಲ್ಲಿ ಈಗ ನಿರ್ನಾಮವಾಗಿರುವ 'ಆಕ್' ಪಕ್ಷಿಗಳನ್ನು ಹೋಲುತ್ತವೆ. ಈಜಲು ರೆಕ್ಕೆ ಸಹಾಯಕ. ೬ರಿಂದ ೧೦ ಅಂಗುಲ ಉದ್ದದ ದಪ್ಪದೇಹದವು. ಸಾಮಾನ್ಯವಾಗಿ ಮೇಲ್ಮೈ ಕಪ್ಪಾಗಿದ್ದು ತಳಭಾಗ ಬೆಳ್ಳಗಿರುತ್ತದೆ. ಮೇಲು ಕೊಕ್ಕು ಚೂಪಾಗಿ ಬಾಗಿರುತ್ತದೆ. ಅಟ್ಲಾಂಟಿಕ್ ಸಾಗರದ ತೀರ ಪ್ರದೇಶದಲ್ಲೆಲ್ಲಾ ಗುಂಪುಗುಂಪಾಗಿ ಕಂಡುಬರುತ್ತವೆ.

ಅವುಗಳೂ ಬಿರುಗಾಳಿ ಸೂಚಕ ಪೀಟ್ರಲ್‌ಗಳಂತೆ ಸುರಂಗ ತೋಡಿ ಒಂದೇ ಬಿಳಿ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಕಾವಿನ ಅವಧಿ ೮ ವಾರ ಮೀರಬಹುದು. ಕಪ್ಪೆ ವಟಗುಟ್ಟುವಂತೆ, ಅಥವಾ ಬೆಕ್ಕು ಕೂಗುವಂತೆ ಅವುಗಳ ಧ್ವನಿ. ಪರ್ವಕಾಲದಲ್ಲಿ ರಾತ್ರಿಯೇ ಅವುಗಳ ಚಟುವಟಿಕೆ ಹೆಚ್ಚು.

ಉಪವರ್ಗ ೧೦ : ಪೆಲಿಕಾನಿಫಾರ್‌ಮಿಸ್ (Pelecaniiformis)

ಕುಟುಂಬ ೬
ಜಾತಿ
ಪ್ರಭೇದ ೫೦

ದಪ್ಪ ಗಾತ್ರದ ಮೀನೇ ಆಹಾರವಾಗಿರುವ ಜಲಪಕ್ಷಿಗಳು. ಅವುಗಳಲ್ಲಿ ೬ ಕುಟುಂಬಗಳೂ ವಿಧವಿಧವಾಗಿದ್ದರೂ, ಸ್ವಭಾವ ಮತ್ತು ಹಲವು ರಚನೆಯಲ್ಲಿ ಸಾಮ್ಯತೆಯಿದೆ. ಎಲ್ಲಾ ಜಲಪಕ್ಷಿಗಳಿಗೂ ಮುಂದಿನ ಮೂರು ಬೆರಳುಗಳು ಮಾತ್ರ ಜಾಲಾಂಗುಲವಾಗಿರುತ್ತವೆ. ಆದರೆ ಈ ಉಪವರ್ಗದ ಪ್ರಭೇದಗಳಿಗೆ ೪ ಬೆರಳೂ ಒಂದರೊಡನೊಂದು ಅಂಟಿದಂತೆ ಜಾಲಾಂಗುಲವಾಗಿರುತ್ತದೆ. ಅಂದರೆ ಹಿಂದಿನ ಬೆರಳೂ ಮುಂಚಾಚಿರುತ್ತದೆ.

ದಪ್ಪಗಾತ್ರವಾದರೂ, ದೃಢ ರೆಕ್ಕೆ ನೀಳಕೊಕ್ಕು ಗಿಡ್ಡಕಾಲು ಹೊಂದಿದ್ದು ಚೆನ್ನಾಗಿ ಹಾರಬಲ್ಲವು. ಅಲ್ಲದೆ ಕೊಕ್ಕಿನಡಿ ಆಹಾರಚೀಲ ಹೊಂದಿದೆ. ತೇಲಲೂ ಹಾರಾಡಲು ಅನುಕೂಲವಾಗುವಂತೆ ಹಗುರ ಮೂಳೆಗಳೂ, ಚರ್ಮದಡಿ ಗಾಳಿಚೀಲಗಳೂ ಇವೆ.

ಎಲ್ಲವೂ ಸಾಮಾನ್ಯ ಗೂಡು ರಚಿಸಿ ೧ – ೬ ಬಿಳಿ ಮೊಟ್ಟೆಯಿಡುತ್ತವೆ. ಕಾವು ಅವಧಿ ೩ರಿಂದ ೬ವಾರ. ಮರಿ ಹುಟ್ಟಿದಾಗ ನಿಸ್ಸಹಾಯಕವಾಗಿ ಕುರುಡಾಗಿದ್ದು ೫ – ೮ ವಾರಗಳಲ್ಲೇ ಪೂರ್ಣ ಬೆಳೆಯುತ್ತದೆ.

ಪ್ರಪಂಚದ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಎಲ್ಲೆಡೆ ಅವು ಕಂಡುಬರುತ್ತವೆ.

ಕುಟುಂಬ ೧ : ಫಯಿತಾಂಟಿಡೀ (Phaethontidae)
(ಉಷ್ಣವಲಯದ ಪಕ್ಷಿಗಳು)

ಈ ಕುಟುಂಬ ಉಷ್ಣವಲಯದ ಸಮುದ್ರವಾಸಿಗಳು. ಬೇರೆ ಯಾವ ಪಕ್ಷಿಗಳೂ ಇದರಷ್ಟು ದೂರ ಸಮುದ್ರದಲ್ಲಿ ಹೋಗುವುದಿಲ್ಲ. ನೂರಾರು ಮೈಲಿ ದೂರದಲ್ಲಿ ಇವು ಕಾಣಸಿಕ್ಕಿವೆ. ಒಂದೇ ಜಾತಿಯ ೩ ಪ್ರಭೇದಗಳಿವೆ.

ಎಲ್ಲ ಪಕ್ಷಿಗಳ ಬಣ್ಣ ಬಿಳುಪು. ಮಧ್ಯ ಕಪ್ಪು ಗೆರೆ ಅಥವಾ ಚುಕ್ಕೆಗಳಿರಬಹುದು. ೧ – ೧ ೧/೨ ಅಡಿ ದೇಹ. ಬಾಲದ ಮಧ್ಯೆ ಎರಡು ಗರಿ ಒಂದೆರಡಡಿ ನೀಳವಾಗಿ ಬೆಳೆದಿರುತ್ತದೆ. ಒಂದು ಪ್ರಭೇದದಲ್ಲಿ ಮಾತ್ರ ಮರಿಗಳಿರುವ ಕಪ್ಪು ಪಟ್ಟೆ ಬೆಳೆದ ಪಕ್ಷಿಗಳೂ ಇರುತ್ತವೆ. ಕೆಂಪು ಕೊಕ್ಕು ಬಿಳಿ ಬಾಲ; ಆದರೆ ಹಳದಿ ಕೊಕ್ಕಿನ ಪಕ್ಷಿಗಳೇ ಸಾಮಾನ್ಯವಾಗಿ ಕಾಣಿಸುತ್ತವೆ. ಅವು ನೀರಿನ ಮೇಲೆ ತಂಗುವುದಿಲ್ಲ. ಚೆನ್ನಾಗಿ ಈಜಲಾರವು. ಮೀನು ಮತ್ತು ಶಿರಪಾದಿಗಳು ಮುಖ್ಯಾಹಾರ. ಮೇಲೆ ಹಾರಾಡುತ್ತಾ ಆಹಾರ ಕಂಡರೆ ಗಿಡುಗನಂತೆರಗಿ ಹಿಡಿಯುತ್ತವೆ.

ಅವು ಗೂಡು ರಚಿಸುವುದಿಲ್ಲ. ಸಮುದ್ರ ತೀರದ ಕಲ್ಲು ಪ್ರಪಾತಗಳ ಮಧ್ಯದಲ್ಲಿನ ಬಂಡಗಳಲ್ಲಿ ಅಥವಾ ಪೊದರುಗಳ ಕೆಳಗೆ ತಮ್ಮ ಒಂದೇ ಮೊಟ್ಟೆಯನ್ನಿಡುತ್ತವೆ. ಕಾವಿನ ಅವಧಿ ೨೮ ದಿನ. ಮರಿ ಬಲಿತೊಡನೆ ಅವನ್ನು ತ್ಯಜಿಸುತ್ತವೆ. ಕೆಲವು ಪ್ರದೇಶಗಳಲ್ಲಿ ವರ್ಷಕ್ಕೆರಡು ಸಲ ಮರಿಮಾಡುವುದುಂಟು.

ಸಾಮಾನ್ಯ ಸಮಯದಲ್ಲಿ ಅವು ಜೊತೆಯಾಗಿದ್ದರೂ ಪರ್ವಕಾಲದಲ್ಲಿ ಮಾತ್ರ ಗುಂಪಾಗಿ ಸೇರುತ್ತವೆ. ಮೊಟ್ಟೆ ಬಿಟ್ಟು ಕದಲುವುದಿಲ್ಲ. ಮನುಷ್ಯರು ಹತ್ತಿರ ಬಂದು ಮೇಲಕ್ಕೆತ್ತಿದರೂ ತಪ್ಪಿಸಿಕೊಳ್ಳಲು ಆ ಸಮಯದಲ್ಲಿ ಯತ್ನಿಸುವುದಿಲ್ಲ. ಕುಕ್ಕಲು ಮಾತ್ರ ಹವಣಿಸುತ್ತವೆ. ಆ ಪಕ್ಷಿಗಳ ಒಂದು ಪ್ರಭೇದದ ಬಾಲದಲ್ಲಿನ ಕೆಂಪು ಗರಿಗಳನ್ನು ಮಾತ್ರ ಕಿತ್ತು ತೆಗೆದುಕೊಳ್ಳಲಾಗುತ್ತದೆ.

ಕುಟುಂಬ ೨ : ಪೆಲಿಕಾನಿಡೀ (Pelecanidae)
(ಪೆಲಿಕಾನ್‌ಗಳು)

ಇವೂ ಪುರಾತನ ಕಾಲದಿಂದಲೂ ವಾಸಿಸುತ್ತಾ ಬಂದು, ಹೆಚ್ಚಿನ ವ್ಯತ್ಯಾಸ ಹೊಂದದ ಪಕ್ಷಿಜಾತಿ. ಪ್ರಾಚೀನ ಕಾಲದಲ್ಲಿ ಅವು ತಮ್ಮ ಎದೆಯನ್ನು ಚುಚ್ಚಿಕೊಂಡು

ರಕ್ತ ಬರಿಸಿ, ಅದನ್ನು ಮರಿಗಳಿಗೆ ಉಣಿಸುತ್ತದೆಂಬ ತಪ್ಪು ಭಾವನೆಯಿತ್ತು. ಅವು ಧ್ಯಾನ ಮತ್ತು ನಿಷ್ಠೆಯ ಚಿಹ್ನೆಯೆಂದೂ ತಿಳಿದಿದ್ದರು.

ಅದರ ದೃಢವಾದ ನೀಳಕೊಕ್ಕಿನಡಿ ಒಂದು ದೊಡ್ಡ ಚೀಲವಿದೆ. ಈ ಚೀಲ ಅದರ ಹೊಟ್ಟೆಯ ಹಿರಪ್ಪು ವಿಶಾಲವಾಗಿದ್ದು ಆಹಾರ ಶೇಖರಿಸಿಡಲು ಸಹಾಯಕವಾಗಿದೆ. ಬಾಯಿ ತೆರೆದು ನೀರಿನಲ್ಲಿ ಮುಳುಗಿ ಮೀನು ಹಿಡಿಯುವಾಗ ಹೆಚ್ಚಿನ ನೀರೂ ಜೊತೆಯಲ್ಲಿ ಬಂದು ಈ ಚೀಲದಿಂದಲೇ ಹೊರಬರುತ್ತದೆ.

ಒಟ್ಟು ೬ ಪ್ರಭೇದಗಳು; ೨ ಪಶ್ಚಿಮ ವಲಯದವು, ೪ ಪೂರ್ವವಲಯದವು. ಬಿಳೀ ಅಥವಾ ಕಂದು ಬಣ್ಣ. ಚೀಲದ ಚರ್ಮ ಬಿಳುಪು ಅಥವಾ ಕಪ್ಪು. ಸಮುದ್ರ ತೀರದವು ಕಂದು ಬಣ್ಣ. ಉಳಿದ ಪ್ರಭೇದ ಒಳನಾಡಿನ ಸಿಹಿನೀರಿನ ಸರೋವರ ಮುಂತಾದೆಡೆ ಜೀವಿಸುತ್ತವೆ.

ಅವುಗಳ ರೆಕ್ಕೆಯ ಅಗಲ ೬ ಅಡಿಯಿಂದ ೯ ಅಡಿ. ಮೂಳೆ ಪೂರ್ಣ ಹಾಗೂ ಚರ್ಮದಡಿ ಬೇಕಾದಷ್ಟು ಗಾಳಿ ಚೀಲಗಳಿವೆ. ಇದರಿಂದ ಭಾರ ದೇಹವಿದ್ದರೂ ಚೆನ್ನಾಗಿ ಹಾರಬಲ್ಲವು.

ಸಂಘಜೀವಿಗಳು. ಪರ್ವಕಾಲದಲ್ಲೂ, ಇತರ ಸಮಯದಲ್ಲೂ, ಒಟ್ಟೊಟ್ಟಾಗಿಯೇ ಇರುತ್ತವೆ. ವಿಶ್ರಮಿಸುವಾಗ ಕೊಕ್ಕನ್ನು ಕೆಳಬಾಗಿಸಿ ಎದೆಯ ಮೇಲೆ ವಿಶ್ರಮಿಸುವಂತಿಟ್ಟಿರುತ್ತವೆ. ಹಾರಾಡುವಾಗ ಅವು ವಿಶಿಷ್ಟ ವಿನ್ಯಾಸದಲ್ಲಿ ಹಾರಾಡುವುದು ಹೆಚ್ಚು. ಒಂದಕ್ಕೊಂದರ ಅಂತರ ಚ್ಯುತಿಯಿಲ್ಲದೆ ವಿವಿಧ ವಿನ್ಯಾಸದಲ್ಲಿ ಅವು ಹಾರುತ್ತವೆ.

ಬುದ್ಧಿಯುತ ಪಕ್ಷಿಗಳಿವು. ಆಹಾರ ಹೊಂಚುವುದರಲ್ಲಿಯೂ ಸಹಕಾರತತ್ವವನ್ನನುಸರಿಸುತ್ತವೆ. ಎಲ್ಲವೂ ಸಾಲಾಗಿ ಕೆರೆಯೊಳಗೆ ದೂರ ತೇಲಿ ಒಮ್ಮೆಲೇ ರೆಕ್ಕೆ ಬಡಿದು, ಕಾಲಿನಿಂದ ನೀರು ಕದಲಿಸಿ ದಂಡೆಯೆಡೆಗೆ ಈಜುತ್ತವೆ. ದಂಡೆ ಸಮೀಪಿಸುತ್ತಿದ್ದಂತೆ ಒಳಗಿರುವ ಮೀನುಗಳೆಲ್ಲಾ ಹೆದರಿ ಗುಂಪುಕೂಡುತ್ತವೆ. ಆಗ ಅವು ತಮ್ಮ ಕೊಕ್ಕುಗಳನ್ನು ಅಗಲವಾಗಿ ತೆರೆದು ಚೀಲಗಳಲ್ಲಿ ಸಾಕಷ್ಟು ಶೇಖರಿಸಿಕೊಳ್ಳುತ್ತವೆ. ಕಂದು ಪೆಲಿಕನ್‌ಗಳು ನೀರಿನ ಕಡೆ ಎರಗಿ ಕೊಕ್ಕಿಗೆ ಸಿಕ್ಕ ಮೀನುಗಳನ್ನು ಮಾತ್ರ ಹಿಡಿದುಕೊಳ್ಳುತ್ತವೆ. ಅವುಗಳಿಗೆ ಸುರಿತ ಮೀನುಗಾರಿಕೆ ಬರುವುದಿಲ್ಲ.

ಸಣ್ಣ ದ್ವೀಪ ಅಥವಾ ವಿವಿಧ ಜೌಗು ಪ್ರದೇಶದಲ್ಲೇ ಗೂಡಿನ ರಚನೆ. ಸಣ್ಣ ತಗ್ಗನ್ನು ಕೆರೆದು ಹಲವು ಕಡ್ಡಿಗಳನ್ನೂ ಶೇಖರಿಸಿಟ್ಟು ಗೂಡು ರಚಿಸಿ ಮೊಟ್ಟೆಯಿಡುತ್ತವೆ. ಮರ, ಪೊದರುಗಳಲ್ಲಿ ಹಲವು ಕಡ್ಡಿಗಳ ಗೂಡು ರಚಿಸಿ ೧ – ೪ ಬಿಳಿ ಮೊಟ್ಟೆಯಿಡುವುದೂ ಉಂಟು. ೪ - ೫ ವಾರ ಕಾಲ ಹೆಣ್ಣುಗಂಡುಗಳೆರಡೂ ಕಾವು ಕೊತು ಮರಿ ಮಾಡುತ್ತವೆ. ಮರಿ ಹುಟ್ಟಿದಾಗ ನಗ್ನವಾಗಿ ಕುರೂಪಿಯಾಗಿರುತ್ತದೆ. ತಾಯಿ ತಂದೆ ಅರ್ಧ ಜೀರ್ಣವಾದ ಆಹಾರವನ್ನು ಕುರುಡುಮರಿಯ ಬಾಯಿಯೊಳಗೆ ಕಕ್ಕಿ ತುರುಕಿ ನುಂಗಿಸುತ್ತವೆ. ಮರಿ ೨ ತಿಂಗಳಲ್ಲಿ ಪೂರ್ಣ ಬೆಳೆಯುತ್ತದೆ.

ದಪ್ಪಗಾತ್ರದ ಪಕ್ಷಿಯಾದ್ದರಿಂದ ದಿನವಹಿ ಸುಮಾರು ೪ ಪೌಂಡು ಆಹಾರ ಬೇಕಾಗುತ್ತದೆ. ಎಲ್ಲಾ ವಿಧವಾದ ಮೀನುಗಳೂ ಅವಕ್ಕೆ ಆಹಾರವಾಗಬಹುದು. ३ – ೪ ವರ್ಷಗಳಲ್ಲಿ ಪೂರ್ಣ ಬೆಳೆದು ३೦ ವರ್ಷಗಳವರೆಗೂ ಬದುಕಿರಬಲ್ಲವು.

ಕುಟುಂಬ ३ : ಫೆಲಾಕ್ರೋಕೊರಾಸಿಡೀ (Phalacrocoracidae) (ನೀರು ಕಾಗೆಗಳು)

ಈ ಉಪವರ್ಗದಲ್ಲಿನ ಅಧಿಕ ಸಂಖ್ಯೆಯ ಕುಟುಂಬವಿದು. ಸಾಮಾನ್ಯವಾಗಿ ಸಮುದ್ರತೀರ, ಸರೋವರ, ಕೆರೆ, ನದಿ ಮುಂತಾದುವುಗಳಲ್ಲಿ ವಾಸಿಸುತ್ತವೆ. ಸಮುದ್ರ ದೊಳಗೆ ದೂರ ಹೋಗುವುದಿಲ್ಲ. ಉತ್ತರ ಶೀತವಲಯದ ಹಲವು ಭಾಗಗಳನ್ನುಳಿದು ಇತರ ಎಲ್ಲೆಡೆ ಕಂಡುಬರುತ್ತವೆ.

ಗಾತ್ರದಲ್ಲಿ ೧೮ ಅಂಗುಲದಿಂದ ೪೦ ಅಂಗುಲದಷ್ಟಿದ್ದು, ಸಣ್ಣಬಾತುಗಳನ್ನು ಹೋಲುತ್ತವೆ. ಹಾರುವಾಗಲೂ ಬಾತಿನಂತೆಯೇ ಕಂಡುಬರುತ್ತವೆ. ಉತ್ತರವಲಯದವು ದಟ್ಟ ಕಂದು ಅಥವಾ ಕಪ್ಪು. ಹಲವಕ್ಕೆ ಪರ್ವಕಾಲದಲ್ಲಿ ತೊಡೆ, ತಲೆ ಮತ್ತು ಕತ್ತಿನ ಬಳಿ ಬಿಳಿಯ ಮಚ್ಚೆ ಬರುತ್ತವೆ. ವಿವಿಧ ದೇಶಗಳಲ್ಲಿನ ಪ್ರಭೇದಗಳು ವಿವಿಧ ಬಣ್ಣ, ಆಕಾರ ಹೊಂದಿರುತ್ತವೆ.

ಇವಕ್ಕೆ ಮೀನೇ ಮುಖ್ಯಾಹಾರ. ಅದಕ್ಕಾಗಿ ಆಳವಾಗಿ ಮುಳುಗಬಲ್ಲವು. ಇವುಗಳಿಗೆ ಹೆಚ್ಚಿನ ಗಾಳಿಗೂಡುಗಳಿರುವುದಿಲ್ಲ. ಮೂಳೆಯೂ ದೃಢವಾಗಿದೆ. ಆದ್ದರಿಂದಲೇ ನೀರಿನಲ್ಲಿ ಇಳಿದಾಗ ನಿಧಾನವಾಗಿ ಮುಳುಗಿ ಬೆನ್ನು ಕತ್ತು ಮಾತ್ರ ಮೇಲಿರುವಂತೆ ಈಜುತ್ತವೆ. ೭೫ರಿಂದ ೧೦೦ ಅಡಿ ಆಳದ ವರೆಗೆ ಮುಳುಗಿ ಮೀನು ಹಿಡಿಯುತ್ತವೆ. ಆದರೆ ಮುಳುಗಿರುವಾಗ ತಿನ್ನುವುದಿಲ್ಲ. ಮೇಲಕ್ಕೆ ಬಂದು ಮೀನನ್ನು ನೇರಪಡಿಸಿಕೊಂಡು ನುಂಗುತ್ತವೆ. ಆದರೆ ಒಂದು ಸಲಕ್ಕೆ ಒಂದು ನಿಮಿಷಕ್ಕಿಂತ ಹೆಚ್ಚಾಗಿ ಮುಳುಗಿರುವುದಿಲ್ಲ.

ಮನುಷ್ಯರಿಗೆ ಹೆಚ್ಚಾಗಿ ಉಪಯುಕ್ತವಾದ ಪಕ್ಷಿಪುಗಡಗಳಲ್ಲಿ ಇದೂ ಒಂದು. ಲಕ್ಷಾಂತರ ಸಂಖ್ಯೆಯಲ್ಲಿ ತಂಗುವುದರಿಂದ ಆ ಸ್ಥಳಗಳಲ್ಲಿ ಅವುಗಳ ಹಿಕ್ಕೆ ಅನೇಕ ಟನ್‌ಗಳಷ್ಟು ಶೇಖರವಾಗುತ್ತವೆ. ಗೊಬ್ಬರಕ್ಕಾಗಿ ಅದು ಬಹು ಉಪಯುಕ್ತ, ತುಂಬ ಬೆಲೆ ಬಾಳುತ್ತದೆ. ದ. ಅಮೇರಿಕಾದ ಪೆರು, ದ. ಆಫ್ರಿಕಾದ ತುದಿ, ಹಾಗೂ ಫ್ಲಾರಿಡಾಗಳಲ್ಲಿ ಅವು ತಂಗಲು ಬೇಕಾದ ಅನುಕೂಲಗಳನ್ನು ಏರ್ಪಡಿಸಿ ಹೆಚ್ಚಿನ ಗೊಬ್ಬರ ಶೇಖರಣೆಗೆ ಅನುಕೂಲ ಏರ್ಪಡಿಸಿದ್ದಾರೆ. ಜಪಾನಿನಲ್ಲಿ ಅವು ತಂಗುವ ಮರಗಳನ್ನು ಗುರುತಿಸಿ ಅವುಗಳ ಕೆಳಗೆ ಹುಲ್ಲು ತೆಳ್ಳಗೆ ಹರಡಿ ಗೊಬ್ಬರ ಬಿದ್ದದ್ದನ್ನು ಶೇಖರಿಸಿ ಉಪಯೋಗಿಸುತ್ತಾರೆ.

ಅಲ್ಲದೆ ಚೈನಾ ಮತ್ತು ಜಪಾನ್ ದೇಶಗಳಲ್ಲಿ ಅವುಗಳನ್ನು ಸಾಕಿ ಮೀನು ಹಿಡಿಯಲು ಬಳಸುತ್ತಿದ್ದರು. ಇತ್ತೀಚೆಗೆ ಅದು ಕಡಮೆಯಾಗಿದೆ. ೧೦ – ೧೨ ಪಕ್ಷಿ

ಗಳನ್ನು ದೋಣಿಯಲ್ಲಿ ಸಮುದ್ರಕ್ಕೆ ಕೊಂಡೊಯ್ದು, ಮೀನು ಕಂಡದ್ದೇ ಅವು ಗಳನ್ನು ಮುಳುಗಿ ಹಿಡಿಯಲು ಬಿಡುತ್ತಾರೆ. ಪ್ರತಿ ಹಕ್ಕಿಗೂ ಹಿಡಿದ ಮೀನನ್ನು ನುಂಗದಂತೆ ಕುತ್ತಿಗೆಗೆ ಉದ್ದವಾದ ದಾರ ಕಟ್ಟಿರುತ್ತಾರೆ. ಮೇಲೆ ಬಂದೊಡನೆ ಅದನ್ನು ದೋಣಿಯೊಳಕ್ಕೆಳೆದು ಬಾಯಿಯಲ್ಲಿನ ಮೀನುಗಳನ್ನು ತೆಗೆದುಕೊಂಡು ಪುನಃ ಅದನ್ನು ನೀರಿಗೆ ಇಳಿಬಿಡುತ್ತಾರೆ. ಆದರೆ ಅವುಗಳನ್ನು ಸಾಕುವುದು ಕಷ್ಟ ವೆಂದು ಈ ವಿಧಾನದ ಬಳಕೆ ಕಡಮೆಯಾಗಿದೆ.

ಹೆಚ್ಚಿನ ಪ್ರಭೇದಗಳಿರುವುದು ದ. ವಲಯದಲ್ಲಿ. ಇವುಗಳಿಗೆ ಹೊಟ್ಟೆಯಡಿ ಬಿಳುಪು ಬಣ್ಣವಿರುತ್ತದೆ. ಗಾಲಿಪೋಗಸ್ (Galipogus) ದ್ವೀಪದ ಪ್ರಭೇದಗಳು ಹಾರಲಾರವು. ಅತಿ ಸಣ್ಣಗಾತ್ರದವು ದ. ಏಷ್ಯಾದಿಂದ ಮಲಯದವರೆಗೆ ಕಾಣ ಬರುತ್ತವೆ. ಅವು ಕೇವಲ ೧೮–೨೦ ಅಂಗುಲಗಳ ಗಾತ್ರ ಇರುತ್ತವೆ. ಉಳಿದ ಎಲ್ಲಾ ಪ್ರಭೇದಗಳೂ ಚೆನ್ನಾಗಿ ಹಾರಬಲ್ಲವು. ಹಲವು ಉತ್ತರ ವಲಯದವು ವಲಸೆ ಹೋಗುತ್ತವೆ. ಹಾರುವಾಗ ಕೊಕ್ಕನ್ನು ಸ್ವಲ್ಪ ಹಿಂದಿಟ್ಟುಕೊಳ್ಳುತ್ತವೆ. ಬಹುಶಃ ಉಸಿರಾಡಲು ಇದು ಸಹಕಾರಿಯೆಂದು ತೋರುತ್ತದೆ.

ಇವುಗಳ ಇನ್ನೊಂದು ಮುಖ್ಯ ನಡತೆಯೆಂದರೆ ಈಜಿದ ನಂತರ ತಮ್ಮ ರೆಕ್ಕೆ ಯನ್ನು ಅಗಲಿಸಿ ಒಣಗಿಸುವುದೇ. ಉಳಿದ ಜಲಪಕ್ಷಿಗಳಂತೆ ಇವುಗಳ ರೆಕ್ಕೆಯ ಮೇಲಿನ ನೀರು ಜಾರಿಹೋಗದೆ ಅಂಟುವಂತಿರುತ್ತದೆ. ಆದ್ದರಿಂದಲೇ ಅವು ರೆಕ್ಕೆಯನ್ನು ಹರಡಿ ಹಿಡಿದು ಒಣಗಿಸುತ್ತವೆ.

ಇವು ಗುಂಪು ಕೂಡಿಯೇ ಸಂತಾನಾಭಿವೃದ್ಧಿ ಮಾಡುತ್ತವೆ. ಲಕ್ಷಾಂತರ ಸಂಖ್ಯೆ ಯಲ್ಲಿ ಹಾಗೆ ಕೂಡಬಹುದು. ಇದರಿಂದಲೇ ಹೇರಳವಾದ ಗೊಬ್ಬರ ಶೇಖರಣೆ ಯಾಗುವುದು. ಸಮುದ್ರ ತೀರದವು ಯಾವಾಗಲೂ ನೆಲದ ಮೇಲೆಯೇ ಗೂಡು ಕಟ್ಟು ವುವು. ಹಲವು ಮರಗಳಲ್ಲಿ ತಂಗುವುವು. ಕಡ್ಡಿ, ಎಲೆ, ಹುಲ್ಲುಗಳ ಸಣ್ಣ ಗೂಡು ರಚಿಸಿ ಅದರಲ್ಲಿ ೨ರಿಂದ ೬ ನೀಲಿ ಅಥವಾ ಮಾಸಲು ಹಸಿರು ಬಣ್ಣದ ಮೊಟ್ಟೆಗಳನ್ನಿಡು ತ್ತವೆ. ಹೆಣ್ಣುಗಂಡುಗಳೆರಡೂ ಕಾವಿಗೆ ಕೂರುತ್ತವೆ. ಕಾವಿನ ಅವಧಿ ೨ರಿಂದ ೫ ವಾರ ಗಳು. ಮರಿಗಳು ಹುಟ್ಟಿದಾಗ ನಿಸ್ಸಹಾಯಕ. ೫–೮ ವಾರದಲ್ಲಿ ಬೆಳೆಯು ತ್ತವೆ. ಸಾಮಾನ್ಯವಾಗಿ ವರ್ಷಕ್ಕೆ ಒಂದೇ ಸಲ ಮೊಟ್ಟೆಯಿಡುವುದು. ಆದರೆ ಕೆಲವು ಎರಡು ಸಲ ಇಡಬಲ್ಲವು. ಮರಿಗಳಿಗೆ ಅರ್ಧ ಜೀರ್ಣವಾದ ಆಹಾರವನ್ನು ಕಕ್ಕಿ ತಿನ್ನಿಸುತ್ತವೆ.

ಕೊಳಕು ಪಕ್ಷಿಗಳಿವು. ಹಿಕ್ಕೆ ಮತ್ತು ಕಕ್ಕಿದ ಮೀನು ಒಳಗೆ ಕೊಳೆತು ದುರ್ವಾಸನೆ ಯನ್ನು ಉತ್ಪನ್ನ ಮಾಡುತ್ತವೆ. ಅಲ್ಲೇ ನೊಣಗಳೂ ಹೇರಳವಾಗಿ ಆಕರ್ಷಿತ ವಾಗುತ್ತವೆ. ಆದರೂ ಮೊದಲ ವರ್ಷ ಮಾತ್ರ ಮರಿಗಳಿಗೆ ತೊಂದರೆಯಿದೆ. ಚೆನ್ನಾಗಿ ಬೆಳೆದರೆ ೩೦ ವರ್ಷಕಾಲ ಬದುಕಿರಬಲ್ಲವು.

ಕುಟುಂಬ ೪ : ಆನ್‌ಹಿಂಗಿಡೀ (Anhingidae)
(ನೀರು ನವಿಲುಗಳು)

ನೋಡಲು ನೀರುಕಾಗೆಗಳಂತಿದ್ದರೂ ಅವು ಪ್ರತ್ಯೇಕ ಪಕ್ಷಿಕುಟುಂಬ. ನೀಳ ದೇಹದ ಇವು ಉಷ್ಣ ಮತ್ತು ಸಮಶೀತೋಷ್ಣವಲಯದ ಕೆರೆ ಕೊಳ ನದಿಗಳಲ್ಲಿ ಮಾತ್ರ ವಾಸಿಸುತ್ತವೆ. ಸಮುದ್ರವಾಸಿಗಳು ಇಲ್ಲ. ವಿವಿಧ ದೇಶಗಳಲ್ಲಿನ ಪ್ರಭೇದಗಳು ತಮ್ಮ ಗಾತ್ರ ಮತ್ತು ಬಣ್ಣಗಳಲ್ಲಿ ವ್ಯತ್ಯಾಸ ಹೊಂದಿರುತ್ತವೆ.

ಇವುಗಳಿಗೆ ಕತ್ತು ಬಹುನೀಳ, ತಲೆ ಚಪ್ಪಟೆ, ಕೊಕ್ಕು ಉದ್ದ ಹಾಗೂ ಮೊನಚು. ಹೆಣ್ಣು ಗಂಡುಗಳ ಮಧ್ಯೆ ವ್ಯತ್ಯಾಸವಿರುತ್ತದೆ. ರೆಕ್ಕೆ ರಚನೆಯಲ್ಲಿ, ಹಾಗೂ ನೀರು ಅಂಟಿರುವ ರೆಕ್ಕೆಯನ್ನು ಒಣಗಿಸಲು ಹರಡಿ ನಿಲ್ಲುವುದರಲ್ಲಿ, ಇವಕ್ಕೂ ನೀರು ಕಾಗೆಗಳಿಗೂ ಸಾಮ್ಯವಿದೆ. ಇವು 'ಐಬಿಸ್' ಮತ್ತು 'ಕೊಕ್ಕರೆ'ಗಳೊಡನೆ ಸೇರಿ ಹಲವು ಸಂಖ್ಯೆಯಲ್ಲಿ ಗೂಡು ರಚಿಸುತ್ತವೆ. ೫ರಿಂದ ೩೫ ಅಡಿ ಎತ್ತರದ ನೀರ ಮೇಲಿನ ಪೊದರು ಅಥವಾ ಮರಗಳಲ್ಲಿ ಕಡ್ಡಿ, ಎಲೆಗಳಿಂದ ಗೂಡು ರಚಿತವಾಗುತ್ತದೆ. ೨–೪ ಮೊಟ್ಟೆ ಮಾಸಲು ನೀಲಿ ಬಣ್ಣವಾಗಿರುತ್ತದೆ. ಕಾವಿನ ಅವಧಿ ೨೫ರಿಂದ ೨೮ ದಿನ. ಗಂಡು ಹೆಣ್ಣುಗಳೆರಡೂ ಕಾವು ಕೂರುತ್ತವೆ. ಮರಿ ನಿಸ್ಸಹಾಯಕ. ಆದರೆ ೨ ವಾರದಲ್ಲೇ ಅಪಾಯ ಸೂಚನೆಯಾದರೆ ಗೂಡಿನಿಂದ ತೆವಳಿ ನೀರಿಗೆ ಬಿದ್ದು ತಪ್ಪಿಸಿಕೊಂಡು ಅಪಾಯ ತಪ್ಪಿದಾಗ ಪುನಃ ಗೂಡು ಸೇರುತ್ತವೆ. ೬–೮ ವಾರಗಳಲ್ಲಿ ಪೂರ್ಣ ಬಲಿಯುತ್ತವೆ.

ಉತ್ತಮವಾಗಿ ಹಾರಬಲ್ಲವು. ಉ. ವಲಯದವು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಹಾರುವಾಗ ಕತ್ತು ನೇರವಾಗಿ, ಬಾಲರೆಕ್ಕೆಯೂ ಹಿಂದೆ ತೇಲುತ್ತಿದ್ದು ನೋಟಕ್ಕೆ ಆಕರ್ಷವಾಗಿರುತ್ತದೆ. ಅಪಾಯವಿದ್ದಾಗ ಮತ್ತು ಆಹಾರಕ್ಕಾಗಿ ಮಾತ್ರ ಅವು ನೀರಿನಲ್ಲಿಳಿಯುತ್ತವೆ. ಈಜಲು ಪಾದಗಳೇ ಮುಖ್ಯ. ಈಜುವಾಗ ಪೂರ್ಣದೇಹ ಮುಳುಗಿ ತನ್ನ ಹಾವಿನಂತಹ ನೀಳ ಕುತ್ತಿಗೆಯನ್ನು ಮಾತ್ರ ಹೊರಚಾಚಿರುತ್ತವೆ. ಆದರಿಂದಲೇ ಅವಕ್ಕೆ 'ಹಾವು ಪಕ್ಷಿ' ಎಂದೂ ಹೆಸರು ಬಂದಿದೆ. ಮೀನನ್ನು ತನ್ನ ಕೊಕ್ಕಿನಿಂದ ಈಟಿಯಂತೆ ಚುಚ್ಚಿ ಹೊರತಂದು ಮೇಲಕ್ಕೆಸೆದು ಕೊಕ್ಕಿನಲ್ಲಿ ನೇರವಾಗಿರಿಸಿ ನುಂಗುತ್ತವೆ. ಎಲ್ಲಾ ಮೀನುಗಳನ್ನೂ ಹಾಗೆಯೇ ಚುಚ್ಚಿ, ಬೇಕಾದರೆ ಅದನ್ನು ಕಾಲು ಕೊಕ್ಕಿನಿಂದ ಹೊಡೆದು ಸಾಯಿಸಿ, ಮೇಲೆಸೆದು ಹಿಡಿದು ತಿರುವಿ ನೇರವಾಗಿಸಿಯೇ ತಿನ್ನುವುದು ಈ ಕುಟುಂಬದ ವಾಡಿಕೆ. ಸೀಗಡಿ, ಕಪ್ಪೆ ಮತ್ತು ಇತರ ನೀರು ಕೀಟಗಳನ್ನು ತಿನ್ನುತ್ತವೆ.

ಇವುಗಳ ದೇಹರಚನೆಯಲ್ಲೂ ನೀರು ಕಾಗೆಗಳಂತೆಯೇ ದಪ್ಪ ಮೂಳೆಗಳೂ ಕಡಮೆ ಗಾಳಿ ಪೊರೆಗಳೂ ಇರುವುವು. ಆಳವಾಗಿ ಮುಳುಗಲು ಅವು ಅನುಕೂಲ. ಹೊಟ್ಟೆಯ ಒಳಭಾಗದಲ್ಲಿ ಕೂದಲು ಬೆಳೆದ ಪದರವಿದೆ. ಇದು ಬಹುಶಃ ಅವು ತಿಂದ ಮೀನು, ಮೂಳೆಗಳು ಚುಚ್ಚದಂತೆ ಮಾಡಲು ಅನುಕೂಲವಾದಂತಿದೆ.

ಕುಟುಂಬ ೫ : ಸುಲಿಡೀ (Sulidae)

(ಗ್ಯಾನೆಟ್ ಮತ್ತು ಬೂಬಿಗಳು) (Gannets and Boobies)

ಈ ಕುಟುಂಬದ ೯ ಪ್ರಭೇದಗಳು ದೊಡ್ಡ ಬಾತುಗಳ ಗಾತ್ರದವು. ನೀಳ ಮೊನಚಾದ ರೆಕ್ಕೆ, ಉದ್ದನೆಯ ದೃಢವಾದ ಮೊನಚು ಕೊಕ್ಕು, ಉದ್ದ ಬೆಣೆಯಂತಹ ಬಾಲ, ದಪ್ಪನೆಯ ಗಿಡ್ಡ ಕಾಲು ಹೊಂದಿರುವ ದಪ್ಪದೇಹದ ಪಕ್ಷಿಗಳು. ಅವುಗಳ ಮೂಳೆ ಹಗುರ. ಚರ್ಮದಡಿ ಅನೇಕ ಗಾಳಿಚೀಲಗಳಿದ್ದು ನೀರಿನಲ್ಲಿ ತೇಲಲು ಅನುಕೂಲವಾಗಿವೆ. ಅವುಗಳು ವಿವಿಧ ಬಣ್ಣ ಹೊಂದಿರಬಹುದು. ರೆಕ್ಕೆ, ಬೆನ್ನು, ಕುತ್ತಿಗೆ, ಕೊಕ್ಕು, ಕಣ್ಣನಡಿ, ಬಾಲ, ಕಾಲುಗಳು ಒಂದೇಪಕ್ಷಿಯಲ್ಲಿ ಬೇರೆಬೇರೆ ಬಣ್ಣವಾಗಿರಬಹುದು. ಪ್ರಭೇದಗಳ ವಿಂಗಡಣೆಗೆ ಅದೇ ಮುಖ್ಯಾಧಾರ. ಗ್ಯಾನೆಟ್‌ಗಳು ಮಾತ್ರ ವಲಸೆ ಹೋಗುವ ಪಕ್ಷಿಪ್ರಭೇದ. ಇವುಗಳಲ್ಲೂ ವಯಸ್ಸಾದಂತೆ ವಲಸೆಯ ಇಚ್ಛೆ ಕಡಮೆಯಾಗುತ್ತದೆ. ವಲಸೆ ಹೋಗುವವೆಲ್ಲಾ ಎಳೆಯ ಪ್ರಾಯದವು ಮಾತ್ರ. ಸುಮಾರು ೪೦೦೦ ಮೈಲಿ ಹಾರಬಲ್ಲವು. ೩ – ೪ ವರ್ಷಗಳ ನಂತರವೇ ಸಂತಾನಾರಂಭ. ಬೂಬಿಗಳು ಉಷ್ಣವಲಯದವು.

ಗ್ಯಾನೆಟ್‌ಗಳು (Gannet) ಸಮುದ್ರದಡಿಯ ಕಲ್ಲು ಪ್ರಪಾತಗಳ ಮುಖದಲ್ಲಿನ ಬದಂಗಳಲ್ಲಿ ಗೂಡು ರಚಿಸುತ್ತವೆ. ಸ್ಥಳಾಭಾವದಿಂದ ಅವುಗಳ ಸಮೂಹ ಬಹಳ ಒತ್ತಾಗಿರುತ್ತದೆ. ಸೆಯಿಂಟ್‌ಲಾರೆನ್ಸ್ ಮುಖಜಭೂಮಿಯ ಬಳಿಯ ಪ್ರಪಾತದಲ್ಲಿ ಸುಮಾರು ಒಂದು ಲಕ್ಷ ಪಕ್ಷಿ ಜೋಡಿಗಳು ಗೂಡು ಮಾಡಿದ್ದವೆಂದು ವಿವರಿಸಲಾಗಿತ್ತು. ಮುಂದೆ ಅವುಗಳನ್ನು ಮೀನುಗಾರರು ನಿರ್ನಾಮಮಾಡುವಂತಾಗಿ ಈಗ ರಕ್ಷಿತವಾಗಿ ಮತ್ತೆ ವೃದ್ಧಿಯಾಗುತ್ತಿವೆ.

ಇವುಗಳ ಗೂಡು ಮಣ್ಣು, ಕಡ್ಡಿ, ಹುಲ್ಲುಗಳ ಮಿಶ್ರಣ. ಪ್ರತಿವರ್ಷ ಗೂಡನ್ನು ಭದ್ರಪಡಿಸುತ್ತಿರುತ್ತವೆ. ತಮ್ಮ ಹಳೆಯ ಗೂಡಿಗೇ ವರ್ಷಂಪ್ರತಿ ಹಿಂತಿರುಗುವುದು ಸಾಮಾನ್ಯ ವಾಡಿಕೆ. ಮೊಟ್ಟೆ ಒಂದೇ—ಬಿಳುಪು. ಪಕ್ಷಿಗಳು ಕೊಳಕು ಸ್ವಭಾವದವು. ಹಿಕ್ಕೆಯೆಲ್ಲಾ ಗೂಡಿನಲ್ಲೇ, ಮೊಟ್ಟೆಯ ಮೇಲೂ. ಅವುಗಳ ದೇಹದಲ್ಲಿ ಕಾಣುವಂತಹ ಚರ್ಮಭಾಗವಿಲ್ಲದ್ದರಿಂದ ಕಾವಿಗೆ ಕೂರುವಾಗ ತಮ್ಮ ಜಾಲಾಂಗುಲ ಪಾದವನ್ನು ಮೊಟ್ಟೆಯ ಇಕ್ಕೆಡೆಗಳಲ್ಲೂ ಎಚ್ಚರಿಕೆಯಿಂದಿಟ್ಟು ಕೂರುತ್ತವೆ.

ಕಾವು ಕೊಡುವುದರಲ್ಲಿ ಗಂಡು ಹೆಣ್ಣುಗಳೆರಡೂ ಭಾಗವಹಿಸುವುವು. ಕಾಲಾವಧಿ ೪೨ ದಿನ. ಮರಿ ನಿಸ್ಸಹಾಯಕ. ೧೦ – ೧೨ ವಾರಗಳಲ್ಲಿ ಪೂರ್ಣ ಬೆಳವಣಿಗೆ. ಆಹಾರ ತಂದೆ ತಾಯಿಗಳ ಅರ್ಧಜೀರ್ಣಿತ ಆಹಾರವೇ. ನೀರಿನ ಮೇಲೆ ಹಾರಾಡುತ್ತಾ, ಮೀನು ಕಂಡಾಗ ಗಿಡುಗನಂತೆ ಎರಗಿ ಮುಳುಗಿ ಹಿಡಿದು ಅಲ್ಲಿಯೇ ಅದನ್ನು ನುಂಗುತ್ತವೆ. ಸುಮಾರು ೭೦ – ೮೦ಅಡಿ ಆಳಕ್ಕೆ ಮುಳುಗಬಲ್ಲವು. ಆದರೆ ಹೆಚ್ಚುಕಾಲ ನೀರಿನಲ್ಲಿರಲು ಇವಕ್ಕೆ ಸಾಧ್ಯವಿಲ್ಲ.

ಬೂಬಿಗಳ ಆರು ಪ್ರಭೇದಗಳೂ ಉಷ್ಣವಲಯದಲ್ಲೇ ಹೆಚ್ಚು. ಅಮೇರಿಕಾದ ಪಶ್ಚಿಮ ಭಾಗ ಮತ್ತು ಹಿಂದೂಸಾಗರದ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅವುಗಳಿಗೆ ಹಾರುವ ಮೀನು ಇಷ್ಟವಾದ ಆಹಾರ. ಹಡಗುಗಳು ಚಲಿಸುವಾಗ ಮೀನುಗಳು ನೀರಿನಿಂದ ಹಾರುವುದನ್ನೂ ಅವು ಅರಿತು ಹಿಂಬಾಲಿಸಿ ಸಾಕಷ್ಟು ಆಹಾರ ಪಡೆಯುತ್ತವೆ. ಇನ್ನೆಲ್ಲಾ ವಿಧದಲ್ಲೂ ಅವು ಗ್ಯಾನೆಟ್‌ಗಳಂತಿರುತ್ತವೆ.

ಕುಟುಂಬ ೬ : ಫ್ರಿಗೇಟಿಡೀ (Fregatidae)
(ಫ್ರಿಗೇಟ್ ಪಕ್ಷಿಗಳು)

ಉಷ್ಣವಲಯ ಸಮುದ್ರ ವಾಸಿಗಳಾದ ಈ ಪಕ್ಷಿಗಳು ಜಲಪಕ್ಷಿ ಪ್ರಭೇದಗಳಲ್ಲಿ ಅತ್ಯುತ್ತಮ ಹಾರಾಟ ಸಾಮರ್ಥ್ಯವುಳ್ಳವು. ಜೀವಿತದ ಬಹುಕಾಲ ಸಮುದ್ರದ ಮೇಲೆ ಹಾರಾಡಿ ಸಮುದ್ರದಿಂದಲೇ ಆಹಾರ ಪಡೆದು, ಜಾಲಾಂಗುಲ ಪಾದ ಹೊಂದಿದ್ದರೂ ಇವು ಉತ್ತಮ ಈಜುಗಾರರಲ್ಲ. ನೀರು ರೆಕ್ಕೆಗೆ ಅಂಟಿ ಹಾರಲು ತೊಂದರೆಯಾಗುವುದರಿಂದ ಸಾಧ್ಯವಾದಷ್ಟುಮಟ್ಟಿಗೆ ನೀರಿನಲ್ಲಿ ಇಳಿಯುವುದಿಲ್ಲ. ನೆಲದ ಮೇಲೆಯೂ ಚೆನ್ನಾಗಿ ನಡೆಯಲಾರವು. ಗಾಳಿ ಒತ್ತಡ ಹೆಚ್ಚಾಗಿಲ್ಲದಿದ್ದರೆ ಹಾರಲು ಕಷ್ಟವಾಗುತ್ತದೆ. ಆದ್ದರಿಂದ ದೊಡ್ಡ ಮರ, ಪೊದರುಗಳ ಮೇಲೆ ವಿಶ್ರಮಿಸುವುವು. ಹಾರಲುಪಕ್ರಮಿಸಿದ್ದೇ ಆದರೆ ಗಂಟೆಗಟ್ಟಲೆ ನಿರಾಯಾಸವಾಗಿ ಗಾಳಿಯಲ್ಲಿ ತೇಲಾಡುತ್ತಿರುತ್ತವೆ. ಬಾಲ ಸ್ವಾಲೋ ಹಕ್ಕಿಗಳಂತೆ 'N' ಆಕಾರ ಹೊಂದಿರುತ್ತದೆ. ಬಹು ಸುಂದರ ಪಕ್ಷಿಗಳಿವು. ಭಾರ ೩–೪ ಪೌಂಡುಗಳಷ್ಟು ಮಾತ್ರ ಇರುತ್ತದೆ. ರೆಕ್ಕೆಯ ಅಗಲ ೭ ಅಡಿಗಳಿರಬಹುದು. ಇತರ ಪಕ್ಷಿಗಳು ಆಹಾರ ಹೊಂಚಿಕೊಂಡಾಗ ಅವುಗಳನ್ನು ಅಟ್ಟಿ ಹೆದರಿಸಿ ಆಹಾರ ಕಸಿದುಕೊಳ್ಳುವುದರಲ್ಲಿ ಅತಿಯಾದ ನಿಪುಣತೆ ಇದೆ. ಬೂಬಿಗಲ್, ನೀರುಕಾಗೆ ಮುಂತಾದುವು ಹೊಟ್ಟೆತುಂಬಿ ಹಾರಾಡುವಾಗ ಅಟ್ಟಿ, ಕುಕ್ಕಿ ತೊಂದರೆಗೊಳಿಸಿ ಅವು ಆಹಾರ ಕಕ್ಕುವಂತೆ ಮಾಡುತ್ತವೆ ಮತ್ತು ಆ ಆಹಾರವನ್ನು ಹಾರುತ್ತಾ ಹಿಡಿದು, ತಾವು ತಿನ್ನುತ್ತವೆ. ಆದರೆ ಸಮುದ್ರದಲ್ಲಿ ತೇಲಾಡುವ ಶಿರೋಪಾದಿ, ಆಮೆಮರಿ, ವಿವಿಧ ಮೀನುಗಳನ್ನು ತನ್ನ ಹದ್ದಿನಂತಹ ನೀಳ ಮುಂಬಾಗಿದ ಕೊಕ್ಕಿನಿಂದ ಹಿಡಿದು ತಿನ್ನುತ್ತವೆ. ಆದರೆ ನೀರು ರೆಕ್ಕೆಗೆ ತಗುಲದಂತೆ ಎಚ್ಚರಿಕೆ ವಹಿಸುತ್ತವೆ.

ಇತರ ಪಕ್ಷಿಮರಿಗಳನ್ನೂ ಇವು ಭಕ್ಷಿಸುತ್ತವೆ. ಸಮುದ್ರ ಪಕ್ಷಿಗಳ ಗೂಡುಗಳ ಬಳಿ ಹಾರಾಡುತ್ತಾ ಹೊಂಚುತ್ತಿದ್ದು, ತಂದೆತಾಯಿಗಳ ಅಜಾಗರೂಕತೆಯಿಂದ ಮರಿಗಳು ಕಾಣಿಸಿದರೆ ಕ್ಷಣಮಾತ್ರದಲ್ಲಿ ಕೆಳಗೆರಗಿ ಹಾರಿಸಿಕೊಂಡು ಹೋಗುತ್ತವೆ. ತಮ್ಮ ಜಾತಿಯ ಮರಿಗಳನ್ನೂ ಹಾಗೆಯೇ ತಿನ್ನಬಲ್ಲವು.

ಸಮುದ್ರ ಮಧ್ಯದ ದ್ವೀಪಗಳಲ್ಲಿ ಮರ ಅಥವಾ ನೆಲದ ಮೇಲೆ ಹಲವು ಕಡ್ಡಿಗಳ ಜೋಡಣೆಯ ಗೂಡು ರಚಿಸುತ್ತವೆ. ಗಂಡೇ ಗೂಡುರಚಿಸಿ ತನ್ನ ಕತ್ತಿನ ಬಳಿಯ ರಕ್ತ

ವರ್ಣದ ಚೀಲವನ್ನು ಹಿಗ್ಗಿಸಿ, ಹೆಣ್ಣನ್ನು ಆಕರ್ಷಿಸಲು ಪ್ರಯತ್ನಿಸುತ್ತದೆ. ಈ ಚೀಲ ಪರ್ವಕಾಲದಲ್ಲಿ ರಕ್ತವರ್ಣವಾಗಿ ಮಕ್ಕಳ ಬೆಲೂನಿನಂತೆ ಗಾಳಿಯಿಂದ ಊದಲು ಸಾಧ್ಯವಿದೆ. ಹೆಣ್ಣು ಸೇರಿದೊಡನೆ ಗೂಡನ್ನು ಪೂರ್ಣ ಮುಗಿಸಿ ಒಂದೇ ಮೊಟ್ಟೆ ಇಡುತ್ತದೆ. ಗಂಡು ಹೆಣ್ಣುಗಳೆರಡೂ ೬ ವಾರಕಾಲ ಕಾವು ಕೊಟ್ಟು ಮರಿಮಾಡುತ್ತವೆ. ಮರಿ ನಿಸ್ಸಹಾಯಕ. ೨-೩ ವರ್ಷಗಳವರೆಗೆ ಬಿಳಿಯ ಬಣ್ಣ ಹೊಂದಿ ಮರಿಗಳು ವಯಸ್ಕವಾದಾಗಲೇ ಕ್ರಮೇಣ ತನ್ನ ಸಾಮಾನ್ಯ ಬಣ್ಣಕ್ಕೆ ತಿರುಗುವುದು.

ಕುಟುಂಬ ೧೧ : ಸಿಕೋನಿಫಾರ್ಮಿಸ್ (Ciconiiformes)

ಕುಟುಂಬ ೭

ಪ್ರಭೇದ ೧೧೪

ಇವೆಲ್ಲವೂ ನೀರು ಬದಿಯ ಕೊಚ್ಚೆಯಲ್ಲಿ ಮತ್ತು ನೀರಿನಲ್ಲಿ ಕಾಲುನಡಿಗೆಯ ನೀರು ಹಕ್ಕಿಗಳು. ಕೆಲವುಮಾತ್ರ ಒಳ ಭೂಪ್ರದೇಶದಲ್ಲೂ ವಾಸಿಸುತ್ತವೆ. ೧೦ ಅಂಗುಲದಿಂದ ೫ ಅಡಿಗಳವರೆಗೆ ಎತ್ತರವಾಗಿರಬಹುದು. ಎಲ್ಲವೂ ನೀಳಕಾಲು, ನೀಳಕೊಕ್ಕು ಹೊಂದಿ, ಸಣ್ಣಬಾಲ ಮತ್ತು ದೊಡ್ಡರೆಕ್ಕೆ ಹೊಂದಿರುತ್ತವೆ. ನಾಲ್ಕು ಬೆರಳುಗಳಲ್ಲಿ ಮುಂದಿನ ಮೂರು ಅರ್ಧ ಜಾಲಾಂಗುಲ ಹೊಂದಿರಬಹುದು. ಬಣ್ಣ ವೈವಿಧ್ಯತೆ ಇದ್ದರೂ ಸಾಮಾನ್ಯಬಣ್ಣಗಳೇ. ಬಿಳುಪು, ಕಪ್ಪು, ನಸುಗೆಂಪು ಇತ್ಯಾದಿ. ಹೆಣ್ಣು ಗಂಡುಗಳಲ್ಲಿ ಹೆಚ್ಚಿನ ಹೊರವ್ಯತ್ಯಾಸ ಕಾಣುವುದಿಲ್ಲ.

ಹಿಮಾವೃತ ಪ್ರದೇಶಗಳನ್ನುಳಿದು ಪ್ರಪಂಚದ ಎಲ್ಲೆಡೆ ಇವು ಕಂಡುಬರುತ್ತವೆ. ಮಾಂಸಾಹಾರಿಗಳು. ಸರೀಸೃಪ, ಕಪ್ಪೆ, ಮೀನು ವಿವಿಧ ಕೀಟ ಇವುಗಳೇ ಮುಖ್ಯ ಆಹಾರ. ಹಲವು ಕೊಳೆತ ಮಾಂಸವನ್ನೂ ತಿನ್ನುತ್ತವೆ. ಹಾರಾಡಲು ನುರಿತ ಪಕ್ಷಿಗಳು. ಸಮಶೀತೋಷ್ಣವಲಯದ ಹಲವು ಪ್ರಭೇದಗಳು ಮಾತ್ರ ವಲಸೆ ಹೋಗುವುವು. ಈ ಉಪವರ್ಗ ಸುಮಾರು ೧೮ ಲಕ್ಷ ವರ್ಷಗಳ ಹಿಂದೆಯೇ ಉತ್ಪನ್ನವಾಗಿದ್ದಿರಬೇಕು. ಈಗಲೂ ಹಲವು ಪೂರ್ಣ ಹಿಂದುಳಿದಿವೆ.

ಕುಟುಂಬ ೧ : ಆರ್ಡೈಡೀ (Ardeidae)

ಈ ಉಪವರ್ಗದ ಅತಿ ಹೆಚ್ಚು ಸಂಖ್ಯೆಯ ಪಕ್ಷಿಗಳನ್ನು ಒಳಗೊಂಡಿರುವುದು ಈ ಕುಟುಂಬವೇ. ಸುಮಾರು ೬೨ ಪ್ರಭೇದಗಳಿವೆ. ಇವುಗಳ ತಲೆ ಪೂರ್ಣ ಗರಿಗಳಿಂದಾವೃತವಾಗಿದ್ದು ಕತ್ತಿನ ಮೂಳೆ ಸರಣಿಯಲ್ಲಿ, ಬೇರೆ ಬೇರೆ ಉದ್ದದ ಮೂಳೆಗಳು ಜೋಡಣೆಯಾಗಿವೆ. ಆದ್ದರಿಂದಲೇ ಹಾರುವಾಗಲೂ, ವಿಶ್ರಮಿಸುವಾಗಲೂ ಕುತ್ತಿಗೆ 'S' ಆಕಾರವಾಗಿ ಬಾಗಿರುತ್ತದೆ. ಕೊಕ್ಕು ಉದ್ದವಾಗಿ ಕೆಲವು ಪಕ್ಷಿಗಳಲ್ಲಿ ತುದಿ ಮಾತ್ರ ಬಾಗಿರಬಹುದು. ಮಧ್ಯೆ ಬೆರಳಿನ ಒಂದು ಪಾರ್ಶ್ವದಲ್ಲಿ ಬಾಚಣಿಗೆಯಂತಹ ಹಲ್ಲುಗಳಿವೆ. ಹಿಂಬೆರಳು ಒಂದೇ ಮಟ್ಟವಿರುವುದರಿಂದ ವಿಶ್ರಮಿಸುವಾಗ ಪಕ್ಷಿ ತನ್ನ ನಾಲ್ಕು

ಬೆರಳುಗಳ ಮೇಲೆ ಭಾರವಿಡುತ್ತದೆ. ಇನ್ನೊಂದು ವೈಶಿಷ್ಟ್ಯ – ಪುಡಿಗರಿಗಳ ಬೆಳವಣಿಗೆ. ಈ ಗರಿಗಳು ಉದುರದೆ ದೇಹದ ಹಲವು ನಿರ್ದಿಷ್ಟ ಭಾಗಗಳಲ್ಲಿ ಜೀವನವಿಡೀ ಬೆಳೆಯುತ್ತಿರುತ್ತವೆ. ಅವುಗಳ ತುದಿ ಪುಡಿಯಾಗಿ, ಆ ಪುಡಿಯನ್ನು ಕೊಕ್ಕಿನಿಂದ ಪಕ್ಷಿ ತನ್ನ ಗರಿಗಳಿಗೆ ಸವರುತ್ತದೆ. ಇದರಿಂದ ತಲೆ ಅಥವಾ ಗರಿಗೆ ಅಂಟಿಕೊಂಡ ಎಣ್ಣೆ, ಕೊಳೆ ಮುಂತಾದುವು ಸಡಿಲವಾಗಿ, ಆಮೇಲೆ ಅದನ್ನು ಬಾಚಣಿಗೆಯಂತಿರುವ ಬೆರಳಿನಿಂದ ಬಾಚಿ ತೆಗೆಯುತ್ತದೆ. ನೀರು ಅಂಟದಿರಲು ತಮ್ಮ ಬಾಲದ ಬಳಿಯ ಗ್ರಂಥಿಯ ಎಣ್ಣೆಯನ್ನು ಸವರಿಕೊಳ್ಳುತ್ತದೆ.

ಬಿಟ್ಟರ್ನ್ಸ್ (Bitterns ಸಣ್ಣ ಕ್ರೌಂಚ ಪಕ್ಷಿ) ಗಳಲ್ಲಿ ೧೨ ಪ್ರಭೇದಗಳಿವೆ. ಅವುಗಳಿಗೆ ೨ ಜೊತೆ ಪುಡಿಗರಿಗಳ ಮಚ್ಚೆಯಿದೆ. ಕಾಲು, ಕೊಕ್ಕು ಉಳಿದ ಕೊಕ್ಕರೆಗಳಿಗಿಂತ ಸಣ್ಣ. ಎಲ್ಲವೂ ಜೊಂಡು ಬೆಳೆದ ಜೌಗುಪ್ರದೇಶವಾಸಿಗಳು. ಒಂಟಿ ಗೂಡೇ ಹೊರತು ಸಾಮೂಹಿಕವಾಗಿರುವುದಿಲ್ಲ. ನೆಲದಮೇಲೆ ಅಥವಾ ಜೊಂಡಿನ ಮಧ್ಯೆ ಗೂಡು ರಚನೆ. ಸಣ್ಣ ಪಕ್ಷಿಗಳು ಕಂದು ಅಥವಾ ಪಟ್ಟೆಯಿರುವ ಕಂದು ಬಣ್ಣವಿರುತ್ತವೆ.

ಅವು ಅಪಾಯವಿದ್ದರೆ ತಪ್ಪಿಸಿಕೊಳ್ಳಲು ಉಪಾಯವನ್ನವಲಂಬಿಸುತ್ತದೆಯೇ ಹೊರತು ಹಾರಾಟವನ್ನಲ್ಲ. ಆದ್ದರಿಂದಲೇ ದೂರ ಹಾರಾಡಲಾರವು. ಕತ್ತನ್ನು ನೇರ ಮೇಲಕ್ಕೆ ಚಾಚಿ, ಅಲುಗಾಡದೆ ನಿಂತು ಜೊಂಡಿನಂತೆ ಕಾಣಿಸುತ್ತವೆ. ಗಾಳಿ ಹೆಚ್ಚಾಗಿದ್ದರೆ ಜೊಂಡಿನಂತೆಯೇ ನಿಧಾನವಾಗಿ ತೂರಾಡುತ್ತಿರುತ್ತವೆ. ಇವುಗಳಲ್ಲಿನ ಎರಡು ಜಾತಿಗಳಲ್ಲಿ ಒಂದು ದಪ್ಪಗಾತ್ರದವು. ೪ ಪ್ರಭೇದಗಳನ್ನೊಳಗೊಂಡಿವೆ. ೨–೨೧/೨ ಅಡಿ ಉದ್ದ ಮತ್ತು ೨–೨೧/೨ ಅಡಿ ಎತ್ತರವಿರಬಲ್ಲವು. ಗಂಡು ಪರ್ವಕಾಲದಲ್ಲಿ ಕರ್ಕಶವಾಗಿ ಕೂಗಿ ಹೆಣ್ಣನ್ನು ಆಹ್ವಾನಿಸುತ್ತದೆ. ನದಿ, ಸರೋವರ ತೀರಗಳಲ್ಲಿನ ಜೊಂಡುಗಳ ನಡುವೆ ನೆಲದಮೇಲೆ ಗೂಡು ರಚಿಸುತ್ತವೆ. ಹೆಣ್ಣು ೩–೬ ಕಂದು ಬಣ್ಣದ ಮೊಟ್ಟೆಗಳನ್ನಿಟ್ಟು ೨–೩ ವಾರ ಕಾಲ ಕಾವು ಕೂರುತ್ತದೆ. ಹೆಣ್ಣು ಗಂಡುಗಳೆರಡೂ ಕಾವು ಕೊಟ್ಟು ಮುಂದೆ ಮರಿಗೆ ಆಹಾರ ಕಕ್ಕಿ ತಿನ್ನಿಸುತ್ತವೆ.

ಇನ್ನೊಂದು ಜಾತಿಯ ೮ ಪ್ರಭೇದಗಳು ಸಣ್ಣ ಗಾತ್ರದವು. ದೇಹ ಸಣ್ಣ ಪಾರಿವಾಳದ ಗಾತ್ರವಿದ್ದು ಉದ್ದ ಒಂದಡಿಗೂ ಕಡಮೆಯಾಗಿರುತ್ತದೆ. ಬಣ್ಣ ದೊಡ್ಡವನ್ನೇ ಹೋಲುತ್ತಾ ಇದ್ದರೂ ದಟ್ಟ. ಹೆಣ್ಣು ಹೆಚ್ಚಿನ ಬಣ್ಣ ಹೊಂದಿರುತ್ತದೆ. ಈ ಕುಟುಂಬದಲ್ಲಿ ಹೆಣ್ಣು ಗಂಡಿಗೆ ವ್ಯತ್ಯಾಸವಿರುವುದು ಈ ಜಾತಿ ಪ್ರಭೇದದಲ್ಲೇ. ಉಷ್ಣ ಹಾಗೂ ಸಮಶೀತೋಷ್ಣ ವಲಯದಲ್ಲೆಲ್ಲಾ ಪಸರಿಸಿದ್ದು, ಜೊಂಡುಗಳ ಮಧ್ಯೆ, ನೆಲದ ಮೇಲೆ ೧–೧೩ ಅಡಿ ಎತ್ತರದಲ್ಲಿ ಗೂಡು ರಚಿಸುತ್ತವೆ. ೪–೬ ಮೊಟ್ಟೆ ೧೬–೨೦ ದಿನಗಳಲ್ಲಿ ಮರಿಯಾಗುತ್ತವೆ. ಗಂಡು ಹೆಣ್ಣುಗಳೆರಡೂ ಕಾವು ಕೊಟ್ಟು ಆಹಾರ ಕಕ್ಕಿ ಸಲಹುತ್ತವೆ. ಮರಿಗಳು ಒಂದು ತಿಂಗಳಲ್ಲೇ ಹಾರಾಡುತ್ತವೆ. ವಿವಿಧ ಕೀಟಗಳು, ಮೀನು, ಕಪ್ಪೆ ಮುಂತಾದುವುಗಳೆಲ್ಲಾ ಅವಕ್ಕೆ ಆಹಾರವಾಗುತ್ತವೆ.

ಕ್ರೌಂಚಪಕ್ಷಿಗಳ ಪಂಗಡ ಇನ್ನೊಂದು. ಇವುಗಳಿಗೆ ನಾಲ್ಕು ಜೊತೆ ಪುಡಿಗರಿ ಸ್ಥಳವಿರುತ್ತದೆ. ಸಣ್ಣ ಪಂಗಡದವುಗಳ ಗಾತ್ರ ಬಣ್ಣ ಮತ್ತು ಅಪಾಯ ಸಮಯ ದಲ್ಲಿನ ನಡತೆ ಎಲ್ಲಾ ಬಿಟ್ರನ್‌ಗಳಂತೆಯೇ ಇರುತ್ತದೆ. ೪ ಜಾತಿಯ ೬ ಪ್ರಭೇದ ನ್ಯೂಗಿನಿಯಿಂದ ಮಧ್ಯ ಆಫ್ರಿಕಾದವರೆಗೆ ಹರಡಿದೆ.

ಇನ್ನೊಂದು ಮುಖ್ಯ ಪಂಗಡ ರಾತ್ರಿಕಾಲದ ಕ್ರೌಂಚಪಕ್ಷಿಗಳದು. ಇದರಲ್ಲಿ ೨ ಜಾತಿಗಳಿವೆ. ಮೊದಲನೆಯ ಜಾತಿಯಲ್ಲಿ ೪ ಪ್ರಭೇದಗಳಿವೆ. ಅವುಗಳಲ್ಲಿ ಜಪಾನಿನ ವರ್ಣರಂಜಿತ ರಾತ್ರಿ ಕ್ರೌಂಚ ಹೆಸರುವಾಸಿಯಾದದ್ದು. ಇವು ಹಗಲೆಲ್ಲಾ ಮರದಲ್ಲಿ ವಿಶ್ರಮಿಸಿ ಮುಸುಕಾದೊಡನೆ ಹೊರಟು ಆಹಾರ ಅರಸುತ್ತವೆ. ಏಡಿ, ಮೀನು, ಕೀಟಗಳೇ ಆಹಾರ. ಕಡ್ಡಿಗಳ ಗೂಡು ಮರದ ಮೇಲೆ. ಹಲವು ಜೊತೆ ಪಕ್ಷಿಗಳು ಒಂದೇ ಮರದಲ್ಲಿ ಗೂಡು ರಚಿಸಬಹುದು. ೩ – ೪ ಮೊಟ್ಟೆಯಿಟ್ಟು, ೧೨ – ೨೨ ದಿನ ಕಾವು ಕೂರುತ್ತವೆ. ಕಾವು ಕೂತಾಗ ಬಿಟ್ಟರ್ನ್‌ಗಳಂತೆಯೇ ಕತ್ತು ಮೇಲೆಚಾಚಿ ಕೊಂಬೆಯಾಕಾರದಲ್ಲಿ ಚಲಿಸದೆ ಕೂರುತ್ತವೆ.

ಇದರ ಇನ್ನೊಂದು ಜಾತಿ ೫ ಪ್ರಭೇದಗಳನ್ನೊಳಗೊಂಡಿದೆ. ದಪ್ಪ ಕೊಕ್ಕಿನ, ಗಿಡ್ಡಕಾಲಿನ, ಪಕ್ಷಿಗಳಿವು. ಅಮೇರಿಕಾ, ಆಫ್ರಿಕಾ, ಯುರೋಪ್, ಏಷ್ಯಾಗಳಲ್ಲೆಲ್ಲಾ ಕಂಡುಬರುತ್ತವೆ. ಕತ್ತನ್ನು ಮಡಚಿ, ತಲೆ ಎದೆಯ ಬಳಿಯಿರುವಂತೆ ಹಾರುತ್ತವೆ. ಜಪಾನಿನಲ್ಲಿ ೧೦ನೆಯ ಶತಮಾನದ ದೊರೆಯೊಬ್ಬ ಇವುಗಳ ಸೌಂದರ್ಯ ಹಾಗೂ ನಯ ನಡವಳಿಕೆಯನ್ನು ಮೆಚ್ಚಿ ಅವಕ್ಕೆ ತನ್ನ ರಾಜ್ಯದ ಅಂತಸ್ತುಗಳಲ್ಲಿ ೫ನೆಯದಾದ "ಗೋ-ಯಿ" ಸ್ಥಾನವನ್ನು ಕೊಟ್ಟನಂತೆ. ಜಪಾನಿನಲ್ಲಿ ಇಂದಿಗೂ "ಗೋಯಿ ಕ್ರೌಂಚ"ವೆಂದೇ ಹೆಸರು. ಇವು ಗುಂಪಾಗಿ ಒಂದೇ ಸ್ಥಳದಲ್ಲಿ ಗೂಡುಕಟ್ಟುತ್ತವೆ. ಎತ್ತರ ಮರಗಳಲ್ಲಿ ದಪ್ಪ ಗೂಡು ಕಟ್ಟಿ, ೩ – ೫ ಮಾಸಲು ನೀಲಿ ಮೊಟ್ಟೆಯಿಟ್ಟು ಹೆಣ್ಣುಗಂಡುಗಳೆರಡೂ ೨೧ ದಿನ ಕಾವು ಕೊಟ್ಟು ಮರಿಮಾಡುತ್ತವೆ. ಮೀನು ಮರಿಗಳ ಮುಖ್ಯಾಹಾರ. ೬ ವಾರಗಳಲ್ಲಿ ಬಲಿಯುತ್ತವೆ. ಪರ್ವ ಕಾಲದಲ್ಲಿ ವಲಸೆ ಹೋಗುವ ಪಕ್ಷಿಗಳಿವು. ಆದರೆ ದಕ್ಷಿಣಕ್ಕೆ ಹೋಗುವ ಮುನ್ನ ಅವು ತಮಗಿಷ್ಟವಾದ ದಿಕ್ಕಿಗೆ ಪ್ರಯಾಣಮಾಡಿ ನಂತರವೇ ದಕ್ಷಿಣಕ್ಕೆ ವಲಸೆ ಹೋಗುವುದು ಹಲವು ಕ್ರೌಂಚಗಳಲ್ಲಿರುವ ವಿಚಿತ್ರ ವರ್ತನೆ.

ಹಗಲು ಕ್ರೌಂಚಗಳು ಮೂರನೆಯ ಮುಖ್ಯ ಪಂಗಡ. ಸುಮಾರು ೮ ಜಾತಿಯ ೩೫ ಪ್ರಭೇದಗಳಿವೆ. ಅತ್ಯಂತ ಪ್ರಗತಿಹೊಂದಿರುವ, ದಪ್ಪಗಾತ್ರದ, ವಿವಿಧ ವರ್ಣದ ಪಕ್ಷಿಗಳು ಇದಕ್ಕೆ ಸೇರಿರುತ್ತವೆ. ಹಸಿರು ಕ್ರೌಂಚ ಸಮಶೀತೋಷ್ಣವಲಯದಲ್ಲಿ ನೀರಿ ನಂಚಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಅವು ಮರದ ಮೇಲೆಯೇ ಗೂಡು ರಚಿಸಿ ೩-೫ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಪೂರ್ವವಲಯದ ಕ್ರೌಂಚಗಳು ಅಚ್ಚ ಬಿಳುಪು ಅಥವಾ ಹಸುರು ಬಣ್ಣದವು. ಮೈ ಮಾತ್ರ ದಪ್ಪ. ಕೊಕ್ಕೆ ಕಾಲು ರೆಕ್ಕೆಯೆಲ್ಲಾ ಸಣ್ಣ. ಅವು ಸಾಮೂಹಿಕವಾಗಿ ಮರಗಳಲ್ಲಿ ಗೂಡು ರಚಿಸಿ ಸಂತಾನಾಭಿವೃದ್ಧಿ ಮಾಡುತ್ತವೆ.

ಇದರಲ್ಲಿ ಕಂದು ಬಣ್ಣದ ಬೆನ್ನಿನ ಬಿಳಿ ಕ್ರೌಂಚ ಎಲ್ಲರಿಗೂ ತಿಳಿದಿರುವುದು. ಮೈದಾನದಲ್ಲೆಲ್ಲಾ ದನ ಮೇಯುವೆಡೆ ಅವುಗಳ ಜೊತೆಗೂಡಿ ಗುಂಪಾಗಿ ಮೇಯುತ್ತವೆ. ಇವು ಪ್ರಪಂಚದ ಎಲ್ಲೆಡೆ ಸಾಮಾನ್ಯವಾಗಿ ಹೊಂದಿಕೊಂಡು ಬೇಗ ಅಭಿವೃದ್ಧಿ ಹೊಂದಿ ಹರಡುತ್ತಿವೆ. ಕಾಲು ಕೊಕ್ಕು ಹಳದಿ. ದನಗಳ ಚಲನೆಯಿಂದ ಹೊರಬರುವ ಕೀಟಗಳನ್ನು ತಿನ್ನುತ್ತಾ ಅವುಗಳೊಂದಿಗೆ ತಿರುಗಾಡುತ್ತವೆ. ವಿವಿಧ ರಾಷ್ಟ್ರಗಳಲ್ಲಿ ಈ ಪಕ್ಷಿಗಳಿಗೆ ಸಂಬಂಧಿಸಿದ ೮ ಪ್ರಭೇದಗಳಿವೆ. ಪರ್ವಕಾಲದಲ್ಲಿ ಇವು ಹೊಸದಾದ ಉದ್ದ ಬಿಳೀ ಗರಿಗಳನ್ನು ಬೆಳೆಸುತ್ತವೆ. ಇವುಗಳು ಅಲಂಕಾರಕ್ಕಾಗಿ ಉಪಯೋಗಿಸಲ್ಪಡುತ್ತವೆ. "ಆಮ್‌ಗ್ರೇಟ್" ಎಂದು ಈ ಗರಿಗಳಿಗೆ ಹೆಸರಿದ್ದು ಅವು ಬೆಲೆಬಾಳುವುದರಿಂದ ಎಲ್ಲೆಲ್ಲೂ ಈ ಪಕ್ಷಿಗಳನ್ನು ಬೇಟೆಯಾಡಲಾರಂಭಿಸಿದರು. ಈಗ ಅವಕ್ಕೆ ರಕ್ಷಣೆ ದೊರಕಿ ವೃದ್ಧಿಯಾಗುತ್ತಿವೆ. ಆದರೂ ದ. ಅಮೇರಿಕಾ ಮುಂತಾದೆಡೆ ಅವುಗಳ ಕೊಲೆ ಇನ್ನೂ ನಿಂತಿಲ್ಲ.

ಈ ಕುಟುಂಬದ ದಪ್ಪಗಾತ್ರದವು ಒಂದೇ ಜಾತಿಯ ೧೧ ಪ್ರಭೇದಗಳು. ಇವು ದೊಡ್ಡ ಗಾತ್ರದ ಕ್ರೌಂಚಪಕ್ಷಿಗಳು. ಇಂಡಿಯಾ, ಅಮೇರಿಕಾ, ಏಷ್ಯಾ, ಆಫ್ರಿಕಾಗಳಲ್ಲಿ ಹೆಚ್ಚು. ೪ರಿಂದ ೫ ಅಡಿ ಎತ್ತರವಿರಬಲ್ಲವು. ಇವೆಲ್ಲವೂ ದೊಡ್ಡ ಮರದಲ್ಲೇ ಅನೇಕ ಗೂಡು ಕಟ್ಟಿ ಮರಿಮಾಡುತ್ತವೆ. ೪ - ೬ ಮೊಟ್ಟೆಯಿಟ್ಟು ೨೫ - ೩೦ ದಿನದ ಕಾವು ಒದಗಿಸುತ್ತವೆ. ಮರಿಗಳಿಗೆ ಅರ್ಧ ಜೀರ್ಣವಾದ ಆಹಾರ ಮೊದಲು ಒದಗಿ ನಂತರ ಮೀನುಗಳನ್ನು ಒದಗಿಸಲಾಗುತ್ತದೆ. ಒಂದೇ ದೊಡ್ಡ ಮರದಲ್ಲಿ ೫ ಪ್ರಭೇದಗಳು ಗೂಡು ಕಟ್ಟಿರಬಹುದು. ಗೂಡು ೫೦ - ೬೦ ಅಡಿ ಎತ್ತರದಲ್ಲಿರುವುದರಿಂದ ಎಳೆಯ ಮರಿಗಳು ತಪ್ಪಿ ಕೆಳಗೆ ಬಿದ್ದು ಸಾಯುವುದು ಹೆಚ್ಚು. ಶೇ. ೬೨ – ೬೫ ಭಾಗ ಸಾಯಬಹುದು. ಮೊದಲ ೬ ತಿಂಗಳು ಬದುಕಿದ್ದರೆ ಅವು ಆಮೇಲೆ ೨೦–೨೫ ವರ್ಷ ಬದುಕಿರಬಲ್ಲವು. ಇವುಗಳಲ್ಲೆಲ್ಲಾ ದ. ಅಮೇರಿಕಾದ 'ಅಗಾಮಿ' ಕ್ರೌಂಚ, ಹಸಿರು ರೆಕ್ಕೆಯು, ನೀಳ ಕತ್ತಿನ, ದಟ್ಟ ಕೊಕ್ಕಿನ ಸುಂದರ ಪಕ್ಷಿ.

ಕುಟುಂಬ ೨ : ಕಾಕ್‌ಲಿಯೊರಿಡೀ (Cochleariidae)
(ದೋಣಿ ಕೊಕ್ಕಿನ ಕ್ರೌಂಚಗಳು)

ದ. ಮೆಕ್ಸಿಕೊದಿಂದ ದ. ಬ್ರೆಜಿಲ್‌ವರೆಗಿನ ಜೌಗು ಪ್ರದೇಶಗಳ ಮರಗಳಲ್ಲಿ ವಾಸಿಸುವ ಸೋಮಾರಿ ಪಕ್ಷಿಗಳು. ಇವಕ್ಕೆ ೪ ಜೊತೆ ಪುಡಿಗರಿಗಳ ಮಚ್ಚೆಯೂ, ಮಧ್ಯೆ ಕಾಲ್ಬೆರಳಿಗೆ ಬಾಚಣಿಗೆಯೂ ಇದ್ದು ಕ್ರೌಂಚವನ್ನು ಹೋಲುತ್ತವೆ. ಮೈ ಬಣ್ಣ ಮಾಸಲು ಕಂದು, ೩ ಅಂಗುಲ ಅಗಲದ ಕೊಕ್ಕು ಈ ಪ್ರಭೇದದ ವೈಚಿತ್ರ್ಯ. ಕೀಟ, ಕಪ್ಪೆ ಮತ್ತು ಸಣ್ಣ ಸಸ್ತನಿಗಳನ್ನು ತಿನ್ನುತ್ತವೆ. ನಿಶಾಚರಪಕ್ಷಿ. ಕೊಕ್ಕರೆಗಳಂತೆ ಆಗಾಗ ಕೊಕ್ಕು ಬಡಿದು ಶಬ್ದ ಮಾಡುತ್ತವೆ. ಅಲ್ಲದೆ ಅವುಗಳಂತೆಯೇ ಇವಕ್ಕೆ ಕತ್ತಿನಡಿ ಗರಿಯಿಲ್ಲದ ಚರ್ಮವೂ ಮತ್ತು ಅಗಲವಾಗಬಲ್ಲ ಚೀಲವೂ ಇರುತ್ತದೆ. ಮರಗಳಲ್ಲಿ ಕಡ್ಡಿ

ಗಳ ಗೂಡು ರಚಿಸಿ ೨-೪ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಇವುಗಳ ಜೀವನ ಚರಿತ್ರೆ ಇನ್ನೂ ಪೂರ್ತಿಯಾಗಿ ತಿಳಿದಿಲ್ಲ.

ಕುಟುಂಬ ೩ : ಬೇಲೇನಿಸಿಪಿಟಿಡೀ (Balaenicipitidae)
(ಪಾದರಕ್ಷೆ ಕೊಕ್ಕಿನ ಕ್ರೌಂಚ)

ಇದರಲ್ಲೂ ಒಂದೇ ಜಾತಿಯು ಒಂದೇ ಪ್ರಭೇದವಿದೆ. ಪೂರ್ವ ಆಫ್ರಿಕಾದ ನೈಲ್ ನದಿಯ ಬಯಲು ಪ್ರದೇಶದಲ್ಲಿ ನೀಳ ಹುಲ್ಲು ಜೌಗುಗಳಲ್ಲಿ ವಾಸವಿರುತ್ತವೆ. ೩ ೧/೨ – ೪ ಅಡಿ ಎತ್ತರದ, ದಪ್ಪದೇಹದ ಬೆದರುವ ಪಕ್ಷಿಗಳು. ಮನುಷ್ಯರಿಂದ ಬಹಳ ದೂರವಿರುತ್ತವೆ. ಒಂಟಿ ಅಥವಾ ಜೊತೆಯಾಗಿ ಆಹಾರ ಅರಸುತ್ತಾ ನಡೆಯುತ್ತಿರುತ್ತವೆ; ಅಥವಾ ತಮ್ಮ ದಪ್ಪ ಕೊಕ್ಕನ್ನು ಎದೆಯ ಮೇಲಿರಿಸಿದಂತೆ ಬಾಗಿ ನಿಂತಿರುತ್ತವೆ. ಕೊಕ್ಕು ಇದರ ವೈಶಿಷ್ಟ್ಯ. ಅದು ೮ ಅಂಗುಲ ಉದ್ದ ಮತ್ತು ಅಷ್ಟೇ ಅಗಲವಿದ್ದು ಬೂಟುಗಳಂತಿರುತ್ತದೆ. ಇದರಿಂದಲೇ ಅದಕ್ಕೆ "ಪಾದರಕ್ಷೆ ಕೊಕ್ಕಿನ" ಕ್ರೌಂಚವೆಂದು ಹೆಸರು. ಇವುಗಳೂ ಹಲವು ವಿಧದಲ್ಲಿ ಕ್ರೌಂಚಗಳನ್ನು ಇನ್ನು ಕೆಲವಂಶಗಳಲ್ಲಿ ಕೊಕ್ಕರೆಗಳನ್ನು ಹೋಲುತ್ತವೆ. ಕೊಕ್ಕು ಬಡಿದು ಶಬ್ದ ಮಾಡುವುದು ಸಾಮಾನ್ಯ.

ಕೆಸರನ್ನು ಕೆದಕಿ ಒಳಗಿರುವ ಮೀನು, ಕಪ್ಪೆ, ಸಣ್ಣ ಆಮೆ, ಮೊಸಳೆ ಮತ್ತಿತರ ಸಣ್ಣ ಸಸ್ತನಿಗಳನ್ನು ತಿನ್ನುತ್ತವೆ. ನೆಲದ ಮೇಲೆ ಹುಲ್ಲು ಕಡ್ಡಿಗಳಿಂದ ಗೂಡು ರಚಿಸಿ ಎರಡು ಮೊಟ್ಟೆಯಿಟ್ಟು ಮರಿಮಾಡುತ್ತವೆ.

ಕುಟುಂಬ ೪ : ಸ್ಕೋಪಿಡೀ (Scopidae)
(ಸುತ್ತಿಗೆ ತಲೆಯ ಕ್ರೌಂಚಗಳು)

ಇವು ವಿಚಿತ್ರ ಪಕ್ಷಿಗಳು. ಪುಡಿಗರಿ ಮಚ್ಚೆಗಳಿರುವುದಿಲ್ಲ. ಆದರೆ ಕತ್ತನ್ನು ಹೊರಚಾಚಿ ಐಬಿಸ್ ಅಥವಾ ಕೊಕ್ಕರೆಗಳಂತೆ ಹಾರುತ್ತವೆ. ಮಧ್ಯ ಉಗುರಿಗೆ ಬಾಚಣಿಗೆ ಇದೆ. ಕೊಕ್ಕು ಅಗಲವಾಗಿ ನೀಳವಾಗಿದೆ. ಸುಮಾರು ೨೦ – ೨೨ ಅಂಗುಲ ಎತ್ತರದ ಕಂದುಬಣ್ಣದ ಮೈಮೇಲೆ ಕೆಂಚು ಬಣ್ಣದ ರೆಕ್ಕೆಗಳಿರುತ್ತವೆ. ಕಾಲು ಸಣ್ಣ, ಕತ್ತು ಗಿಡ್ಡ. ತಲೆಯ ಹಿಂದೆ ಉದ್ದ ಗರಿಗಳಿಂದ ತಲೆ ಎರಡು ತಲೆಯ ಸುತ್ತಿಗೆಯಂತೆ ಕಾಣಿಸುತ್ತದೆ. ಆದ್ದರಿಂದಲೇ ಸುತ್ತಿಗೆ ತಲೆಯ ಕ್ರೌಂಚಗಳೆಂದು ಇವಕ್ಕೆ ಹೆಸರು. ಆಫ್ರಿಕಾ, ಅರೇಬಿಯಾ, ಮೆಡಗಾಸ್ಕರ್ ಬಳಿ ಕಂಡುಬರುತ್ತವೆ. ಇವನ್ನು ಹಿಡಿಸಿದರೆ ಕೆಡಕಾಗುವುದೆಂದು ನಂಬಿಕೆಯಿದೆ. ಅದೇ ಇವುಗಳಿಗೆ ಮುಖ್ಯ ರಕ್ಷಣೆ.

ಇವು ಹೆಚ್ಚು ಚಟುವಟಿಕೆಯಿಂದಿರುವುದು ಸಂಜೆಯ ಸಮಯದಲ್ಲಿ. ಮೀನು, ಕಪ್ಪೆ, ಕೀಟಗಳು ಆಹಾರ. ಒಂಟಿ, ಜೊತೆ ಅಥವಾ ಹಲವು ಸಣ್ಣ ಗುಂಪಾಗಿರುತ್ತವೆ. ಇವು

ಗಳಲ್ಲಿ ವಿಚಿತ್ರವರ್ತನೆಯೊಂದು ಕಂಡುಬಂದಿದೆ. ೨-೩ ಸೇರಿದಾಗ ಇದ್ದಕ್ಕಿದ್ದಂತೆ ಕುಪ್ಪಳಿಸಿ ಹಾರಿ, ಒಂದಕ್ಕೊಂದು ನಮಸ್ಕರಿಸಿದಂತೆ ಬಾಗಿ ಹಠಾತ್ತಾಗಿ ತಟಸ್ಥವಾಗಿ ನಿಲ್ಲುತ್ತವೆ. ಈ ವರ್ತನೆಗೆ ಕಾರಣ ತಿಳಿದಿಲ್ಲ.

ಇದರ ಗೂಡೂ ವಿಚಿತ್ರವಾದದ್ದೇ. ಸುಮಾರು ೬ ಅಡಿ ಅಗಲದ, ವರ್ತುಲಾಕಾರದ ಮೇಲ್ಛಾವಣಿಯಿಂದ ಕೂಡಿದ ಗೂಡು. ಒಳಗೆ ಎರಡು ಕೋಣೆಗಳಿರುತ್ತವೆ. ಒಳಹೋಗಲು ಕಷ್ಟ ಸಾಧ್ಯವಾದ ಕಡೆ ಸಣ್ಣ ಬಾಗಿಲು. ಗೂಡು ಕಡ್ಡಿ ಹುಲ್ಲುಗಳನ್ನು ಜೋಡಿಸಿ ಮಣ್ಣು ಸವರಿ ಕಟ್ಟಿದ್ದು ! ಹೊರಮೈಗೆ ಹೊಳೆಯುವ ವಿವಿಧ ವರ್ಣದ ಬಟ್ಟೆ. ಗಾಜು, ಪಿಂಗಾಣಿ ಸಾಮಾನು, ಮೂಳೆ ಮತ್ತಿತರ ವಿಚಿತ್ರ ವಸ್ತುಗಳನ್ನೂ ಅಂಟಿಸಲಾಗುತ್ತದೆ. ಕಲ್ಲು ಬಂಡೆಗಳ ಬಡುಗಳಲ್ಲಿ ಅಥವಾ ಎತ್ತರ ಮರಗಳಲ್ಲಿ ಇವುಗಳ ರಚನೆ. ಕೆಲವು ಗೂಡುಗಳು ಒತ್ತಾಗಿ ರಚಿತವಾಗಿರುತ್ತವೆ. ಈ ಗೂಡು ಒಂದೇ ಜೊತೆ ಪಕ್ಷಿಗಳ ಹಲವು ತಿಂಗಳ ಕಾರ್ಯ ಸಾಧನೆ. ಆದರೆ ಅದನ್ನು ಅವು ಆಗಾಗ ಸರಿಪಡಿಸಿ, ಅನೇಕ ವರ್ಷ ಉಪಯೋಗಿಸುತ್ತವೆ. ಮನುಷ್ಯರು ಮನೆ ಕಟ್ಟಿದಂತೆಯೇ ಅದರ ರಚನೆ ಮತ್ತು ಉದ್ದೇಶ. ಈ ಗೂಡಿನ ಒಳಕೋಣೆಯೊಂದರಲ್ಲಿ ೩-೬ ಸಣ್ಣ ಮೊಟ್ಟೆಗಳನ್ನು, ಎರಡೂ ಕಾವುಕೊಟ್ಟು ಮರಿಮಾಡುತ್ತವೆ.

ಕುಟುಂಬ ೫ : ಸಿಕೋನಿಡೀ (Ciconiidae)
(ಕೊಕ್ಕರೆಗಳು)

ನ್ಯೂಜಿಲೆಂಡ್ ಉ. ಅಮೇರಿಕಾದ ಶೀತವಲಯ ಭಾಗವನ್ನುಳಿದು ಪ್ರಪಂಚದ ಇತರೆಡೆಯೆಲ್ಲಾ ಕಂಡುಬರುವುವು. ೧೧ ಪ್ರಭೇದಗಳು. ಈ ಉಪವರ್ಗದ ಇತರ ಪ್ರಭೇದಗಳಿಗೂ ಇವಕ್ಕೂ ಅನೇಕ ವ್ಯತ್ಯಾಸಗಳಿವೆ. ಇವುಗಳಿಗೆ ಪುಡಿ ಗರಿಯ ಮಚ್ಚೆಗಳಿರುವುದಿಲ್ಲ. ಕಾಲ್ಬೆರಳಿಗೆ ಬಾಚಣಿಗೆ ಇಲ್ಲ. ಹಾಗೂ ಇವು ಉಳಿದುವುಗಳಂತೆ ಶಬ್ದ ಮಾಡಲಾರವು. ತಮಗೆ ಬೇಕಾದಾಗ ಅಭಿಪ್ರಾಯ ಸೂಚಕವಾಗಿ ತಮ್ಮ ದಪ್ಪ ಕೊಕ್ಕುಗಳನ್ನು ಅಲುಗಾಡಿಸಿ ಶಬ್ದ ಮಾಡುತ್ತವೆ. ಹಿಂಬೆರಳು ಮೇಲೆ ಎದ್ದು ಅಷ್ಟೇನೂ ಉಪಯುಕ್ತವಾಗಿಲ್ಲ.

ರೆಕ್ಕೆ ಬಲಿಷ್ಠವಾಗಿದ್ದು ಹಾರುವಾಗ ಸ್ವಲ್ಪ ಕಾಲ ಬಡಿದು, ಸ್ವಲ್ಪ ದೂರ ತೇಲಿ ಚಲಿಸುತ್ತವೆ. ಕತ್ತು ಹಾರುವಾಗ ಮುಂದೆ ನೇರವಾಗಿ ಚಾಚಿರುತ್ತದೆ. ನೀಳ ಕಾಲುಗಳೂ ಹಿಂದೆ ನೇರವಾಗಿ ಜೋತುಬೀಳುತ್ತವೆ. ಉತ್ತರ ವಲಯದವು ದಕ್ಷಿಣಕ್ಕೆ ಬಹುದೂರ ವಲಸೆ ಹೋಗುತ್ತವೆ. ಅವು ಮಕ್ಕಳನ್ನು ತರುತ್ತವೆಂಬ ಭಾವನೆ ಅವುಗಳ ರಕ್ಷಣೆಗೆ ಮೂಲಕಾರಣವಾಗಿತ್ತು. ಬಿಳೀ ಕೊಕ್ಕರೆಗಳು ಮನೆಗಳ ಮೇಲೆ ಗೂಡು ಕಟ್ಟಿರಲು ಪೋಲೆಂಡ್, ಹಾಲೆಂಡ್ ಮುಂತಾದ ಪ್ರದೇಶಗಳಲ್ಲಿ ಅನುಕೂಲವೇರ್ಪಡಿಸಲಾಗುತ್ತದೆ. ಅವು ಗೂಡು ಕಟ್ಟಿದ್ದರೆ ಅದೃಷ್ಟವೆಂದು ಅವರು ನಂಬಿ ಹಾಗೆ ಪ್ರೋತ್ಸಾಹಿಸುತ್ತಾರೆ.

ಬಿಳೀ ಕೊಕ್ಕರೆಗಳೂ ಯೂರೋಪಿನಿಂದ ದಕ್ಷಿಣ ಆಫ್ರಿಕಾ ಕಡೆ ವಲಸೆ ಹೋಗುತ್ತವೆ. ಅವು ಪ್ರತಿವರ್ಷವೂ ತಮ್ಮ ಹಳೆಯ ಗೂಡಿದ್ದ ಸ್ಥಳಕ್ಕೆ ಹಿಂದಿರುಗುತ್ತವೆ. ಮರಿಗಳೂ ತಾವು ಬೆಳೆದ ಸ್ಥಳಕ್ಕೆ ಹಿಂತಿರುಗಿ ಗೂಡು ಕಟ್ಟಲು ಹೊಸ ಜಾಗ ಹುಡುಕುತ್ತವೆ. ಹೆಣ್ಣು ಗಂಡುಗಳೆರಡೂ ಗೂಡು ರಚನೆಯಲ್ಲಿ ಅಥವಾ ಅದನ್ನು ಸರಿಪಡಿಸಲು ಶ್ರಮಿಸುತ್ತವೆ. ಗಂಡು ಕಡ್ಡಿ, ಎಲೆ, ಬಟ್ಟೆಚೂರು ಮುಂತಾದುವುಗಳನ್ನೆಲ್ಲಾ ಹುಡುಕಿ ತರುತ್ತದೆ. ಹೆಣ್ಣು ಅವುಗಳನ್ನು ತನ್ನಿಷ್ಟಕ್ಕೆ ತಕ್ಕಂತೆ ಜೋಡಿಸಿ ಗೂಡು ರಚಿಸುತ್ತದೆ. ಗೂಡಿನಲ್ಲಿ ೩–೫ ಮೊಟ್ಟೆಯಿಟ್ಟು ಗಂಡು ಹಗಲೂ, ಹೆಣ್ಣು ರಾತ್ರಿಯೂ ಕಾವು ಕೊಡುತ್ತವೆ. ಅವಧಿ ಸುಮಾರು ೩೦ ದಿನ. ಮರಿಗಳ ಪೋಷಣೆ ಎರಡೂ ವಹಿಸುತ್ತವೆ. ಮೊದಲು ಅವು ಅರ್ಧ ಜೀರ್ಣಿತ ಆಹಾರವನ್ನು ಗೂಡಿನಲ್ಲಿ ಚೆಲ್ಲುತ್ತವೆ. ಮರಿ ಅದನ್ನು ಹೆಕ್ಕಿ ತಿನ್ನುತ್ತದೆ. ಮರಿ ಬೆಳೆದಂತೆ ಮೀನು, ಕಪ್ಪೆ, ಹಾವು, ಹಕ್ಕಿಗಳು ಇತ್ಯಾದಿಯನ್ನು ಒದಗಿಸುತ್ತವೆ. ಮರಿಗಳು ೮ ವಾರಗಳಲ್ಲಿ ಬೆಳೆದು ಹಾರುತ್ತವೆ. ಹಕ್ಕಿಗಳು ದಪ್ಪಗಾತ್ರವಾದ್ದರಿಂದ ಹಲವು ಸಾರಿ ನೆಗೆದು ಕುಪ್ಪಳಿಸಿ ಹಾರುತ್ತವೆ.

ಕಪ್ಪು ಕೊಕ್ಕರೆಗಳು (Black Stork) ಗಾತ್ರದಲ್ಲಿ ಇವಕ್ಕಿಂತ ಸಣ್ಣದು. ಅದು ಕಾಡು ಮೈದಾನವಾಸಿ. ಮಾನವ ವಾಸದೆಡೆ ಇರುವುದಿಲ್ಲ. ಕೊಕ್ಕರೆಗಳಲ್ಲೆಲ್ಲಾ ಅತ್ಯಂತ ಸುಂದರ ಹಾಗು ಎತ್ತರವಾದದ್ದು **ಜೀನು ಕೊಕ್ಕಿನ ಕೊಕ್ಕರೆ** (Saddle billed Stork) ಆಫ್ರಿಕಾ ವಾಸಿ. ಅದರ ಬಹು ನೀಳ ದಪ್ಪ ಕೊಕ್ಕಿನ ಮೇಲ್ಭಾಗದಲ್ಲಿ ಕುದುರೆ ಜೀನಿನಂತಹ ಬೆಳವಣಿಗೆ ಇದೆ. '**ಮಾರ್‌ಬೌ**' (Maribou) ಕೊಕ್ಕರೆಗಳು ಬಹು ದಪ್ಪ ಗಾತ್ರದವು. ದ. ಏಷ್ಯಾ ಮತ್ತು ಆಫ್ರಿಕಾಖಂಡಗಳಲ್ಲಿ ಕಂಡುಬರುತ್ತವೆ. ಅವು ಸತ್ತ ಮಾಂಸವನ್ನು ತಮ್ಮ ದಪ್ಪ ಕೊಕ್ಕುಗಳಿಂದ ಕಿತ್ತು ತಿನ್ನುತ್ತವೆ. ಇವಕ್ಕೆ ಕತ್ತಿನಡಿ ಉದ್ದನೆಯ ಕೆಂಪು ಮಾಂಸ ಚೀಲ ನೇತಾಡುತ್ತದೆ. ಮೆಕ್ಸಿಕೊದಿಂದ ದಕ್ಷಿಣಕ್ಕೆ ಕಂಡು ಬರುವ 'ಜಾಬೀರು' ಕೊಕ್ಕರೆಗಳು ಪಶ್ಚಿಮವಲಯದ ದಪ್ಪ ಪಕ್ಷಿಗಳು. ಮಾರ್‌ಬೌನಂತಿದ್ದರೂ ಇವು ಸತ್ತ ಮಾಂಸ ತಿನ್ನುವುದಿಲ್ಲ. ಬರೀ ಮೀನು, ಕಪ್ಪೆ ಮುಂತಾದುವನ್ನು ಮಾತ್ರ ತಿನ್ನುತ್ತವೆ. "**ಕಾಡುಕೊಕ್ಕರೆ**" (Wild Stork) ಅಮೇರಿಕಾದ ಫ್ಲಾರಿಡಾ ಬಳಿಯ ಪ್ರಭೇದ. ಅದರ ಕತ್ತು ನಗ್ನವಾಗಿ ಗರಿಯಿಲ್ಲದಿದ್ದು "**ಐಬಿಸ್**" (Ibis) ಪಕ್ಷಿಗಳನ್ನು ಹೋಲುತ್ತವೆ. ಅನೇಕ ಪಕ್ಷಿಗಳು ಒಂದೇ ಮರದಲ್ಲಿ ಅಗಲ ಗೂಡುಗಳನ್ನು ರಚಿಸಿ ವಾಸಿಸುತ್ತವೆ. ಮೇಯುವಾಗ ಕಾಲಿನಿಂದ ಕೆಸರನ್ನು ಕದಡಿ ಹೊರಬೀಳುವ ಕೀಟ, ಮೀನು ಇತ್ಯಾದಿಗಳನ್ನು ಹಿಡಿದು ತಿನ್ನುತ್ತವೆ.

ಕುಟುಂಬ ೬ : ತ್ರೆಸ್‌ಕಯೊರ್ನಿತಿಡೀ (Threskiormthidae)
(ಐಬಿಸ್ ಮತ್ತು ಸ್ಪೂನ್‌ಬಿಲ್‌ಗಳು)

ಇದರಲ್ಲಿ ಸುಮಾರು ೨೮ ಪ್ರಭೇದಗಳು ಸೇರಿವೆ. ಎಲ್ಲಾ ಮಧ್ಯಮ ಗಾತ್ರದ, ನೀರಿನಲ್ಲಿ ನಡೆದಾಡುವ ಪಕ್ಷಿಗಳು. ಎಲ್ಲಕ್ಕೂ ತಲೆಯು ನಗ್ನವಾಗಿದ್ದು ಗರಿಯಿರು

ವುದಿಲ್ಲ. ಒಂದಕ್ಕೆ ತಲೆ, ಹಾಗೂ ಕತ್ತು ನಗ್ನ, ಪುಡಿಗರಿಯ ಮುಚ್ಚಿಗಳಿಲ್ಲ, ಹಲವು ಕೂಗಲಾರವು, ಬೆರಳುಗಳು ನೀಳವಾದವು.

ಈ ಕುಟುಂಬ ಎರಡು ಮುಖ್ಯ ಪಂಗಡಗಳನ್ನೊಳಗೊಂಡಿದೆ. ದಪ್ಪವಾಗಿ ಕೆಳಬಾಗಿರುವ ನೀಳ ಕೊಕ್ಕಿನ ಐಬಿಸ್ ಮತ್ತು ಚಮಚದಾಕಾರದ ನೀಳ ಕೊಕ್ಕುಳ್ಳ ಸ್ಪೂನ್‌ಬಿಲ್‌ಗಳು ಎಲ್ಲವೂ ಸಂಘ ಜೀವಿಗಳು. ಯಾವಾಗಲೂ ಗುಂಪಾಗಿರುತ್ತವೆ. ಸ್ಪೂನ್‌ಬಿಲ್‌ಗಳು ಒಂದೇಸಮನಾಗಿ ರೆಕ್ಕೆ ಬಡಿದು ಹಾರಾಡುತ್ತವೆ. ಐಬಿಸ್ ಕೆಲಸಮಯ ಬಡಿದು ಕೆಲದೂರ ತೇಲಿ ಹಾರುತ್ತವೆ.

ಐಬಿಸ್‌ಗಳನ್ನು ೫೦೦೦ ವರ್ಷಗಳ ಹಿಂದಿನಿಂದಲೂ ಈಜಿಪ್ಟ್‌ನಲ್ಲಿ ಪೂಜಿಸುತ್ತಿದ್ದರು. ಅಲ್ಲದೆ ಅವರು ಚಿತ್ರಾಕ್ಷರಗಳಲ್ಲೂ ಅದನ್ನು ಬಳಸಿದ್ದರು. ಹಲವು ಪಕ್ಷಿಗಳನ್ನು ಸತ್ತಮೇಲೆ ರಕ್ಷಿಸಿಡಲಾಗಿದೆ. ಎಲ್ಲಾ ಪಕ್ಷಿಗಳೂ ದಡದಲ್ಲಿ, ಕೆಸರು ಗದ್ದೆಗಳಲ್ಲಿ ಇದ್ದು ದ್ವಿಚರ, ಮೀನು, ಕೀಟ, ಮತ್ತು ಅವುಗಳ ಮರಿಗಳನ್ನು ಸೇವಿಸುತ್ತವೆ.

ಇವುಗಳಲ್ಲಿ ಸಣ್ಣದು '**ಹೊಳಪು ಐಬಿಸ್**'. ಯುರೇಷಿಯಾ, ಆಸ್ಟ್ರೇಲಿಯಾ, ಮಡಗಾಸ್ಕರ್ ಮತ್ತು ಆಫ್ರಿಕಾಗಳಲ್ಲಿ ಹೆಚ್ಚು. ಗರಿಗಳು ಹೊಳಪು ಹೊಂದಿದ್ದು ಸುಂದರವಾಗಿ ಕಾಣುತ್ತವೆ. "ಬಿಳೀ ಐಬಿಸ್" ಎಲ್ಲೆಲ್ಲೂ ಕಾಣುವ ಸಾಮಾನ್ಯ ವಿಧ. ರೆಕ್ಕೆ ತುದಿಯ ಗರಿಗಳು ನೀಳವಾಗಿ ಅಚ್ಚ ಕಪ್ಪಾಗಿರುತ್ತವೆ. ಯಾವಾಗಲೂ ಗುಂಪು ಗುಂಪಾಗಿ ವಾಸಿಸುತ್ತವೆ. ವೆನಿಜೂಲದಿಂದ ಬ್ರೆಜಿಲ್‌ವರೆಗಿನ ಪ್ರದೇಶದಲ್ಲಿ "**ಕೆಂಪು ಐಬಿಸ್**" ವಾಸವಾಗಿವೆ. ಸುಂದರ ಗರಿಗಳಿಗಾಗಿಯೂ, ಮಾಂಸಕ್ಕಾಗಿಯೂ, ಹೆಚ್ಚಾಗಿ ಅವನ್ನು ಬೇಟೆಯಾಡಲಾಗುತ್ತಿದೆ. ರಕ್ಷಣೆ ಒದಗಿಸದಿದ್ದಲ್ಲಿ ಬೇಗ ನಿರ್ಮೂಲವಾಗಬಹುದು.

ಇವೆಲ್ಲವೂ ಸಂಘಜೀವಿಗಳು. ಒಟ್ಟಾಗಿ ಚಲಿಸಿ ಒಂದೇ ಸ್ಥಳದಲ್ಲಿ ವಾಸವಿದ್ದು ಸಂತಾನಾಭಿವೃದ್ಧಿ ಮಾಡುತ್ತವೆ. ಸುಮಾರು ೨ - ೨ ೧/೨ ಅಡಿ ಅಗಲದ ಗೂಡು ಕಡ್ಡಿಗಳಿಂದ ರಚಿತವಾಗಿ ಅದರಲ್ಲಿ ೩ – ೫ ಮೊಟ್ಟೆಗಳು ಇಡಲ್ಪಡುತ್ತವೆ. ೨೦ ದಿನ ಗಂಡು ಹೆಣ್ಣುಗಳೆರಡೂ ಕಾವುಕೊಟ್ಟು ಮರಿಮಾಡುತ್ತವೆ. ಮರಿ ಒಂದೆರಡು ವಾರಗಳಲ್ಲೇ ಬೆಳೆದು ಕೊಂಬೆ ಮೇಲೇರಲೂ, ನೀರಿಗೆ ಬಿದ್ದಲ್ಲಿ ಈಜಲೂ ಸಾಮರ್ಥ್ಯ ಹೊಂದುತ್ತವೆ.

ಸ್ಪೂನ್‌ಬಿಲ್‌ಗಳ ನಾಲ್ಕು ಪ್ರಭೇದಗಳು ಬೆಳ್ಳಗಿವೆ. ಪಶ್ಚಿಮ ಯುರೋಪಿನಿಂದ ಇಂಡಿಯಾವರೆಗೆ ಕಂಡುಬರುತ್ತವೆ. ಇವುಗಳಲ್ಲಿ ಅತಿ ಸುಂದರವಾದ ನಸುಕೆಂಪು ಬಣ್ಣದವು, ಸಂಯುಕ್ತ ಸಂಸ್ಥಾನಗಳಿಂದ ಚಿಲೀವರೆಗಿದ್ದು ಅದನ್ನು ಅತೀವ ಬೇಟೆಯಾಡಿ ನಾಶಪಡಿಸಲಾಗಿತ್ತು. ಈಗ ರಕ್ಷಣೆ ದೊರಕಿರುವುದರಿಂದ ಪ್ರಭೇದ ಹಾಳಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಇವು ವಲಸೆ ಹೋಗುತ್ತವೆ. ಒಂದೇ ಸ್ಥಳದಲ್ಲಿ ಸಾಮೂಹಿಕವಾದ ಗೂಡು ಸ್ಥಳವಾರಿಸಿ ಗೂಡು ರಚಿಸುತ್ತವೆ. ಗೂಡು ನೆಲದ ಮೇಲೆ ರಚಿಸಿ ೩ – ೫ ಮೊಟ್ಟೆಯಿಡುತ್ತದೆ. ಬಣ್ಣ ಬಿಳುಪು ಅಥವಾ ಮಾಸಲು ಕಂದು. ಕಾವು ಅವಧಿ

೨೧ ದಿನ. ಮರಿಗಳಿಗೆ ವಾಂತಿಮಾಡಿದ ಅರೆಜೀರ್ಣಿತ ಆಹಾರವೇ ಮುಖ್ಯ. ಮರಿಗಳು ತಮ್ಮ ಕೊಕ್ಕನ್ನು ತಮ್ಮ ಪಿತೃಗಳ ಕುತ್ತಿಗೆಯೊಳಕ್ಕೆ ಚಾಚಿ ಆಹಾರ ತೆಗೆದು ತಿನ್ನುತ್ತವೆ.

ಜೌಗು ಪ್ರದೇಶ ಹಾಗೂ ಕಡಮೆ ನೀರಿನ ತೀರ ಪ್ರದೇಶಗಳಲ್ಲಿ ಅಡ್ಡಾಡಿ ದ್ವಿಚರ ಮೀನು, ಕೀಟ ಮುಂತಾದುವನ್ನು ಮೇಯುತ್ತವೆ.

ಕುಟುಂಬ ೭ : ಫೀನಿಕಾಪ್ಟೆರಿಡೀ (Phoenicopteridae)

ಅತ್ಯಂತ ಸುಂದರ ಹಾಗೂ ಕುತೂಹಲಕಾರಿ ಪಕ್ಷಿಗಳಿವು. ಕಾಲು, ಕತ್ತು ಬಲು ನೀಳ! ದೇಹಕ್ಕೆ ಹೋಲಿಸಿದಲ್ಲಿ ಇಷ್ಟು ಉದ್ದದ ಕಾಲು, ಕತ್ತು, ಪಕ್ಷಿವರ್ಗದಲ್ಲಿ ಇನ್ನಾವುದಕ್ಕೂ ಇರುವುದಿಲ್ಲ. ಅವುಗಳ ಮುಂದಿನ ಮೂರು ಬೆರಳುಗಳು ಜಾಲಾಂಗುಲಿಗಳು. ಹಿಂಬೆರಳು ಕೆಲವಕ್ಕೆ ಇರುವುದೇ ಇಲ್ಲ. ಹಾರುವಾಗ ಕತ್ತನ್ನು ಮುಂದೆ ಚಾಚಿ ಕಾಲುಗಳನ್ನು ಹಿಂದೆ ನೇರವಾಗಿಟ್ಟುಕೊಂಡು ಹಾರುತ್ತವೆ. ಹಾರುವಾಗ ಬಾತುಗಳಂತೆ ಕೂಗುತ್ತವೆ.

ಈಗ ಬದುಕಿರುವ ೪ ಪ್ರಭೇದಗಳಲ್ಲಿ ಹೆಚ್ಚಾಗಿ ಹರಡಿರುವುದು "**ದೊಡ್ಡ ಫ್ಲೆಮಿಂಗೊ**". ಏಷ್ಯಾ, ಪಶ್ಚಿಮಭಾಗ, ಯೂರೋಪಿನ ದಕ್ಷಿಣಾರ್ಧ ಮಧ್ಯ ಹಾಗೂ ದ. ಅಮೇರಿಕಾಗಳಲ್ಲಿ ಇವು ಹೆಚ್ಚು. ಬಿಳುಪು ಮೈ, ನಸುಗೆಂಪು ರೆಕ್ಕೆ. ಇದರ ಇನ್ನೊಂದು ವಿಧ ಹೆಚ್ಚು ಕೆಂಪಾಗಿದ್ದು ವೆಸ್ಟ್ ಇಂಡೀಸ್ ಬಳಿ ಕಂಡುಬರುತ್ತದೆ. "**ಸಣ್ಣ ಫ್ಲೆಮಿಂಗೊ**" ಪ್ರಭೇದ ಆಫ್ರಿಕಾದ ಮಧ್ಯ ಪ್ರದೇಶದಲ್ಲಿ ಮಾತ್ರ ವಾಸಿಸುತ್ತದೆ. "**ಆಂಡಿಯನ್ ಫ್ಲೆಮಿಂಗೊ**" ಮತ್ತು "**ಜೇಮ್ಸ್ ಫ್ಲೆಮಿಂಗೊ**" ಪ್ರಭೇದಗಳು ದ. ಅಮೇರಿಕಾದ ಆಂಡೀಸ್ ಪರ್ವತ ಶ್ರೇಣಿಗಳಲ್ಲಿ ಮಾತ್ರ ವಾಸವಿವೆ.

ಇವುಗಳಿಗೆ ಉಪ್ಪುನೀರಿನ ಸರೋವರಗಳೇ ಇಷ್ಟ. ಇವುಗಳ ಗೂಡು ಬಹಳ ವಿಚಿತ್ರ. ದೊಡ್ಡ ಬೊಗಸೆಯಾಕಾರದಲ್ಲಿ ಮಣ್ಣನ್ನು ಶೇಖರಿಸಿ ತುದಿಯಲ್ಲಿ ಮಟ್ಟ ಮಾಡುತ್ತವೆ. ೧–೧ ೧/೨ ಅಡಿ ಅಗಲ, ೧೦ ಅಂಗುಲದಿಂದ ೧ ೧/೨ ಅಡಿ ಎತ್ತರವಿರಬಲ್ಲವು. ಮೇಲ್ಭಾಗ ಸುಮಾರು ೧ ಅಡಿ ಅಗಲವಿದ್ದು ಮಧ್ಯೆ ಸ್ವಲ್ಪ ತಗ್ಗು ಮಾಡಿರುತ್ತದೆ. ಆ ತಗ್ಗಿನಲ್ಲಿ ಒಂದೇ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ, ೨೫–೩೫ ದಿನ ಕಾವು ಕೊಟ್ಟು ಮರಿಮಾಡುತ್ತವೆ. ತಮ್ಮ ನೀಳ ಪಾದಗಳನ್ನು ಮಡಚಿ ಈ ಗೂಡಿನ ಮೇಲೆ ಕೂರುತ್ತವೆ. ಹುಟ್ಟಿದ ೩ – ೪ ದಿನಗಳಲ್ಲೇ ಅವು ಕೆಳಕ್ಕಿಳಿದು ಓಡಾಡುತ್ತವೆ. ಚೆನ್ನಾಗಿ ಈಜುತ್ತವೆ.

ಈ ಪಕ್ಷಿಗಳ ಕೊಕ್ಕು ಒಂದು ವೈಚಿತ್ರ್ಯ. ಅದು ಮುಂಚಾಚಿದ್ದು, ಮೇಲುಭಾಗದಲ್ಲಿ ಜರಡಿಯಂತಹ ಸಣ್ಣ ರಂಧ್ರಗಳಿವೆ. ನಾಲಗೆಯ ಮೇಲೂ ಮುಳ್ಳುಗಳಂತಹ ಒತ್ತಾದ ರಚನೆ ಜರಡಿಯಂತೆ ಸಹಾಯಕವಾಗುತ್ತದೆ. ಅದು ಕೊಕ್ಕನ್ನು ಚಾಚಿ ನೀರಿನಲ್ಲಿ ಆಹಾರ ಹುಡುಕುವಾಗ ರಂಧ್ರವಿರುವ ಕೊಕ್ಕಿನ ಮೇಲ್ಭಾಗ

ಮಣ್ಣಿನ ಮೇಲಿದ್ದು ಕೊಕ್ಕಿನಿಂದ ನೀರನ್ನು ಒಳನೂಕುತ್ತವೆ. ಅದರೊಡನೆ ಮಣ್ಣು ಆಹಾರಗಳೂ ಒಳಹೊಕ್ಕು ಆಹಾರ ಜರಡಿಯಾಗಿ ಒಳನಿಂತು, ನೀರೂ ಕಲೆತ ಮಣ್ಣೂ ಹೊರಬೀಳುತ್ತವೆ. ಅದಕ್ಕೆ ನಾಲಗೆ ಬಹು ದಪ್ಪವಾದ್ದರಿಂದ ದೊಡ್ಡ ಗಾತ್ರದ ಆಹಾರ ನುಂಗಲಾಗುವುದಿಲ್ಲ. ಸಣ್ಣ ಕೀಟಗಳು, ಅವುಗಳ ಮರಿಗಳು, ಸೂಕ್ಷ್ಮ ಸಸ್ಯಗಳು ಮುಂತಾದವೇ ಅವುಗಳ ಮುಖ್ಯಾಹಾರ.

ಅವುಗಳ ಮಾಂಸ ರುಚಿಕರವಲ್ಲ. ಹಿಂದುಳಿದ ಹಲವು ಪಂಗಡದವರು ಮಾತ್ರ ಒಮ್ಮೊಮ್ಮೆ ಅದನ್ನು ಉಪಯೋಗಿಸುತ್ತಾರೆ. ಹಿಂದೆ ರೋಮನ್ನರ ಕಾಲದಲ್ಲಿ ಚಕ್ರವರ್ತಿಗಳಿಗೆ ಅವುಗಳ ನಾಲಗೆಯನ್ನು ಮಾತ್ರ ಬಡಿಸಲಾಗುತ್ತಿತ್ತಂತೆ ! ಅಂದರೆ ಒಂದು ಊಟಕ್ಕೆ ಸಹಸ್ರಾರು ಪಕ್ಷಿಗಳನ್ನು ಕೊಲ್ಲಲಾಗುತ್ತಿತ್ತು. ಈಗ ಅವು ಹೆಚ್ಚಿನ ಸಂಖ್ಯೆಯಲ್ಲೇ ಉಳಿದಿವೆ. ಅವನ್ನು ಕೊಲೆಮಾಡುವುದು ಅವುಗಳ ಸುಂದರ ಗರಿಗಳಿಗಾಗಿ ಮಾತ್ರ.

ಉಪವರ್ಗ ೧೨ : ಅನ್‌ಸೇರಿಫಾರ್‌ಮಿಸ್ (Anseriformes)

ಕುಟುಂಬ ೨

ಪ್ರಭೇದ ೧೪೯

ದೃಢ ದೇಹದ, ನೀಳ ಕತ್ತಿನ, ಗಿಡ್ಡ ಕಾಲಿನ ಈಜುವ ಜಲಪಕ್ಷಿಗಳಿವು. ಇವುಗಳ ರೆಕ್ಕೆಯ ರಚನೆಯಲ್ಲಿ ೧೧ ರೆಕ್ಕೆಗರಿಗಳೂ, ಗರಿಯಿಂದ ಕೂಡಿದ ಎಣ್ಣೆ ಗ್ರಂಥಿಯೂ, ತೆರೆದ ದುಂಡಗಿನ ಮೂಗು ಹೊಳ್ಳೆಗಳೂ ಸೇರಿವೆ. ಎಲ್ಲವೂ ಉತ್ತಮವಾಗಿ ಹಾರಬಲ್ಲವು. ವಯಸ್ಕ ಪಕ್ಷಿಗಳಿಗೆ ಮೃದುವಾದ ಅಡಿಗರಿಗಳ ಹೊದಿಕೆಯಿದೆ. ಕಾವು ಕೊಡಲು ನಗ್ನ ಮಚ್ಚೆಯಿಲ್ಲ. ಮೊಟ್ಟೆಗಳಿಗೆ ಚುಕ್ಕೆಯಿಲ್ಲ. ಮರಿ ಜನಿಸಿದ್ದೇ ಗೂಡು ಬಿಟ್ಟು ಹೋಗಲು ಸಿದ್ಧವಾಗಿರುತ್ತದೆ.

ಇದರಲ್ಲಿ ಎರಡು ಮುಖ್ಯ ಕುಟುಂಬಗಳಿವೆ. ಮೊದಲನೆಯದರಲ್ಲಿ ದ.ಅಮೇರಿಕಾದ ಮೂರು ಚೀರಾಟ ಪಕ್ಷಿ ಪ್ರಭೇದಗಳು ಮಾತ್ರ ಸೇರಿವೆ. ಇನ್ನೊಂದರಲ್ಲಿ ನಿಜ ಜಲ ಪಕ್ಷಿಗಳಾದ ಬಾತು ಮುಂತಾದ ೧೪೫ ಪ್ರಭೇದಗಳಿವೆ.

ಕುಟುಂಬ ೧ : ಆನ್‌ಹಿಮಿಡೀ (Anhimidae)

(ಚೀರಾಟ ಕೋಳಿಗಳು)

ಸಣ್ಣ ಟರ್ಕಿಕೋಳಿ ಗಾತ್ರದ, ನೀಳ ಕಾಲಿನ, ನೀರಿನಲ್ಲಿ ಅಡ್ಡಾಡಿ ಈಜುವ ೩ ಜಾತಿಗಳು ದ. ಅಮೇರಿಕಾದಲ್ಲಿ ಮಾತ್ರ ಕಂಡುಬರುತ್ತವೆ. ಇವು ಬಾತಿನ ಜಾತಿಗೆ ಸೇರಿದ ವಾದರೂ ಕೊಕ್ಕು ಕೋಳಿಗಳಂತಿವೆ. ಸಣ್ಣ ತಲೆ, ಕತ್ತು, ತಲೆಯೆಲ್ಲಾ ಮೃದು ಗರಿಗಳಿಂದಾವೃತವಾಗಿವೆ. ನೀಳ ಕಾಲ್ಬೆರಳುಗಳಿಗೆ ಸ್ವಲ್ಪವೇ ಜಾಲವಿರಬಹುದು. ರೆಕ್ಕೆ ದೃಢವಾಗಿದ್ದು, ಅದರ ಹೊರಭಾಗದಲ್ಲಿ ಎರಡು ನೀಳ ಮುಳ್ಳಿನಂತಹ ಬೆಳವಣಿಗೆ ಇದೆ.

ಉಷ್ಟ್ರಪಕ್ಷಿ, ಪೆಂಗ್ವಿನ್‌ಗಳಂತೆ ದೇಹವಿಡೀ ಗರಿ ಬೆಳೆದು ನಗ್ನ ಸ್ಥಳಗಳಿರುವುದಿಲ್ಲ. ಮೂಳೆಯೆಲ್ಲಾ ಗಾಳಿ ಸೇರಲನುಕೂಲವಾಗಿ ಹಗುರವಾಗಿದೆ. ಚರ್ಮದಡಿ ಗಾಳಿ ಚೀಲಗಳಿವೆ. ಜವುಗು ಜಾಗಗಳಲ್ಲೂ, ತೇವವಿರುವ ಹುಲ್ಲುಗಾವಲುಗಳಲ್ಲೂ ವಾಸಿಸುತ್ತವೆ. ಒತ್ತಾಗಿ ಜಲಸಸಿ ಬೆಳೆದಂತೆ ಅದರ ಮೇಲೆ ಓಡಾಡುತ್ತವೆ. ಉತ್ತಮವಾಗಿ ಹಾರಾಡಬಲ್ಲವು. ಹೆದರಿದಾಗ ಪಕ್ಕದಲ್ಲಿನ ದೊಡ್ಡ ಮರಗಳ ಮೇಲೆ ಹಾರಿ ಕುಳಿತುಕೊಳ್ಳುತ್ತವೆ. ವರ್ಷವಿಡೀ ತಮ್ಮ ಕೀಚಲು ಧ್ವನಿಯಲ್ಲಿ ಚೀರಾಡುತ್ತಿರುವುದರಿಂದಲೇ ಇವುಗಳಿಗೆ ಈ ಹೆಸರು ಇಡಲಾಗಿದೆ. ಜೊತೆಗೂಡಿ ಅಥವಾ ಗುಂಪಾಗಿ ವಾಸಿಸುತ್ತವೆ. ಇವು ಜನರನ್ನು ಕಂಡೊಡನೆ ಚೀರಾಡಿ ಎಲ್ಲಾ ಪ್ರಾಣಿಗಳಿಗೂ ಎಚ್ಚರಿಕೆ ಕೊಡುತ್ತವೆ.

ಇವು ಸಸ್ಯಾಹಾರಿಗಳು. ಜಲಸಸ್ಯ, ಬೀಜ ಮತ್ತು ಹುಲ್ಲು ಇವಕ್ಕೆ ಮೇವು. ಜೌಗು ಪ್ರದೇಶದ ಹುಲ್ಲಿನ ನಡುವೆ ನೆಲದಲ್ಲಿ ಜೊಂಡು ಹುಲ್ಲುಗಳಿಂದ ಗೂಡು ರಚಿಸಿ ೨ - ೫ ಮೊಟ್ಟೆಯಿಟ್ಟು ೪೦ – ೪೨ ದಿನಗಳಲ್ಲಿ ಮರಿ ಮಾಡುತ್ತವೆ. ಹೆಣ್ಣು ಗಂಡುಗಳೆರಡೂ ಕಾವು ಕೊಡುವುವು. ಮರಿಗಳು ಜನಿಸಿದಾಗ ಮೃದುಗರಿ ಹೊದಿಕೆ ಹೊಂದಿದ್ದು ಬೇಗ ತಂದೆತಾಯಿಗಳನ್ನು ಹಿಂಬಾಲಿಸುತ್ತವೆ.

ಒಂದು ಪ್ರಭೇದಕ್ಕೆ ನೀಳ ಕೊಂಬು ಬೆಳೆದು ಮುಂದೆ ಚಾಚಿದೆ. ಇನ್ನೆರಡಕ್ಕೆ ತಲೆಯಮೇಲೆ ಗರಿಗಳ ಶಿಖೆಯಿದೆ. ಎಲ್ಲವೂ ಸುಲಭವಾಗಿ ಪಳಗುತ್ತವೆ.

ಕುಟುಂಬ ೨ : ಅನಾಟಿಡೀ (Anatidae)

(ಬಾತುಗಳು ಮತ್ತು ಹಂಸಪಕ್ಷಿಗಳು)

ಸುಮಾರು ೧೪೫ ಪ್ರಭೇದಗಳನ್ನು ಜಲಪಕ್ಷಿಗಳೆಂದು ವಿವರಿಸಲಾಗಿದೆ. ಇವುಗಳನ್ನೇ ಮಾನವ ಹೆಚ್ಚಾಗಿ ಪಳಗಿಸಿ, ಉಪಯೋಗಿಸಿ, ಅನುಕೂಲಹೊಂದಿ ವಿವರಿಸಿರುವುದು. ಎಲ್ಲವೂ ಚೆನ್ನಾಗಿ ಈಜಬಲ್ಲವು. ಕಾಲು ಗಿಡ್ಡ. ಬೆರಳುಗಳು ಜಾಲಾಂಗುಲಗಳು. ನೀಳ ಕತ್ತು ಮತ್ತು ಚಪ್ಪಟೆ ಕೊಕ್ಕು ಎಲ್ಲಕ್ಕೂ ಸಾಮಾನ್ಯ. ಹಲವು ಮಾತ್ರ ಒಂಟಿಯಾಗಿರುತ್ತವೆ. ಸಾಮಾನ್ಯವಾಗಿ ಸಂಘಜೀವಿಗಳು. ಗುಂಪು ಸೇರುವುದು ಇವುಗಳಿಗೆ ಸಾಮಾನ್ಯ ನಡತೆ. ವಾಸಿಸುವುದೂ, ಮೇವು ಹುಡುಕುವುದೂ, ವಲಸೆ ಹೊರಡುವುದೂ ಗುಂಪಾಗಿಯೇ.

ಇವುಗಳಲ್ಲಿ ಮುಖ್ಯವಾಗಿ ಮೂರು ಪಂಗಡಗಳನ್ನೇರ್ಪಡಿಸಬಹುದು. ಮೊದಲನೆಯದರಲ್ಲಿ ದಪ್ಪ ಗಾತ್ರದ, ಬಹು ನೀಳ ಕತ್ತಿನ ಹಂಸಗಳಿರುತ್ತವೆ. ಅವುಗಳ ಕತ್ತು ದೇಹದುದ್ದಕ್ಕಿಂತ ನೀಳವಾಗಿರುತ್ತದೆ. ಎರಡನೆಯದು ದಪ್ಪ ಗಾತ್ರದವಾದರೂ ಹಂಸಗಳಿಗಿಂತ ಚಿಕ್ಕದಾಗಿ ಕತ್ತು ದೇಹದಷ್ಟೇ ಉದ್ದವಾಗಿರಬಹುದಾದ ಹೆಬ್ಬಾತುಗಳು. ಮೂರನೆಯ ಪಂಗಡಕ್ಕೆ ಉಳಿದೆಲ್ಲಾ ಬಾತುಗಳೂ ಸೇರುತ್ತವೆ. ಇವು ಸಣ್ಣ ದೇಹದ ಗಿಡ್ಡ ಕತ್ತಿನವು. ಆದರೆ ಇವುಗಳಲ್ಲೂ ಆಹಾರ ಮತ್ತು ಜೀವನ

ವೈವಿಧ್ಯತೆಗಳ ಆಧಾರದಿಂದ ಅನೇಕ ಉಪಪಂಗಡಗಳನ್ನು ವಿವರಿಸಬಹುದಾಗಿದೆ. ಈಗ ಈ ಕುಟುಂಬವನ್ನು ೨ ಮುಖ್ಯ ಪಂಗಡಗಳಾಗಿ ವಿಂಗಡಿಸಿ, ಮೊದಲೆರಡು ಸೇರಿದ್ದನ್ನು 'ಆನ್‌ಸೆರಿನೀ' ಎಂದೂ, ಮೂರನೆಯದನ್ನು 'ಅನಾಟಿನೀ' ಎಂದು ಕರೆಯಲಾಗಿದೆ.

ಆನ್‌ಸೆರಿನೀ ಪಂಗಡಕ್ಕೆ ಹಂಸಗಳು, ಹೆಬ್ಬಾತುಗಳು, ಮತ್ತು ಸಿಳ್ಳುಹಾಕುವ ದಪ್ಪ ಬಾತುಗಳು ಸೇರುತ್ತವೆ. ಹಂಸಗಳು ದಪ್ಪ ಗಾತ್ರದವಾದರೂ ಅತ್ಯಂತ ಸುಂದರ ಪಕ್ಷಿಗಳು. ಒಟ್ಟು ೭ ಪ್ರಭೇದಗಳಿವೆ. ಅವುಗಳಲ್ಲಿ ೫ ಬಿಳುಪು, ೨ ಮಾತ್ರ ವರ್ಣವುಳ್ಳವು. ಅವು ಉತ್ತರ ಶೀತವಲಯದಲ್ಲಿದ್ದು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಮೊಟ್ಟೆ, ಚರ್ಮ ಒರಟು. ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ.

'ವ್ಹೂಸರ್' ಮತ್ತು 'ಜಿವಿಕ್' ಹಂಸಗಳು ಯೂರೋಪ್ ಮತ್ತು ಏಷ್ಯಾ ಖಂಡದ ಟಂಡ್ರಾ ಪ್ರದೇಶದಲ್ಲಿ ವಾಸಿಸುತ್ತವೆ. 'ಶಿಳ್ಳುಹಾಕುವ ಹಂಸ' ಉ. ಅಮೇರಿಕಾದ ಅಲಾಸ್ಕಾ ಬಳಿ ವಾಸವಿರುತ್ತವೆ. 'ಮೂಗ ಹಂಸ'ಗಳಿಗೆ ಕೊಕ್ಕಿನ ಮೇಲೆ ಒಂದು ಗಂಟಿರುತ್ತದೆ. ಅದನ್ನು ಯೂರೋಪಿನಲ್ಲಿ ಹೆಚ್ಚಾಗಿ ಪಳಗಿಸಿ ಸಾಕ ಲಾಗುತ್ತಿದ್ದು, ಅಮೇರಿಕಾಕ್ಕೆ ತಂದು ಬಿಡಲಾಯಿತು. ಈಗ ಅಲ್ಲಿ ಅದು ಹೆಚ್ಚಾಗಿ ವೃದ್ಧಿಗೊಂಡಿದೆ.

ದಕ್ಷಿಣವಲಯದಲ್ಲಿ ೨ ಪ್ರಭೇದಗಳಿವೆ. 'ಕಪ್ಪು ಕತ್ತಿನ ಹಂಸ' ದ. ಅಮೇರಿಕಾದ ದಕ್ಷಿಣ ಪ್ರದೇಶದಲ್ಲಿ ವಾಸಿಸುತ್ತವೆ. ಆಸ್ಟ್ರೇಲಿಯಾ ಮತ್ತು ಟಾಸ್ಮೇನಿಯಾದಲ್ಲಿ ಅತಿ ಸುಂದರ ಪೂರ್ಣ 'ಕಪ್ಪು ಹಂಸ'ಗಳಿವೆ. ಇವುಗಳನ್ನು ಈಗ ಯೂರೋಪಿನಲ್ಲಿಯೂ ಅಲ್ಲಲ್ಲಿ ವೃದ್ಧಿಗೊಳಿಸಲಾಗಿದೆ.

ಹೆಬ್ಬಾತುಗಳಲ್ಲಿ ಒಟ್ಟು ೧೪ ಪ್ರಭೇದಗಳಿವೆ. ಅವುಗಳಲ್ಲಿ ೫ ಬೂದು ಬಣ್ಣದವು. ಒಂದು ಮಾತ್ರ ಅಮೇರಿಕಾದ ಶೀತವಲಯದಲ್ಲಿ ಕಂಡುಬರುತ್ತದೆ. ಉಳಿದ ನಾಲ್ಕು ಯೂರೋಪ್, ಏಷ್ಯಾ ಖಂಡದವು. ಅವುಗಳ ಸಂತಾನಾಭಿವೃದ್ಧಿ ಉತ್ತರ ಶೀತವಲಯದ ದುರ್ಗಮ ಪ್ರದೇಶದಲ್ಲಿದ್ದು, ಅವುಗಳು ವಲಸೆ ಬಂದು ತಂಗುವ ಸ್ಥಳಗಳಲ್ಲಿ ಅವುಗಳಿಗೆ ರಕ್ಷಣೆಯಿತ್ತಿರುವುದರಿಂದ, ಅವು ಸಾಮಾನ್ಯ ಸಂಖ್ಯೆಯಲ್ಲಿ ಕಂಡುಬರುತ್ತವೆ. ೩ ಅಚ್ಚ ಬಿಳುಪಿನವು. ಅವುಗಳಲ್ಲಿ ಒಂದು ಚಳಿಗಾಲದಲ್ಲಿ ಬೆಳ್ಳಗಾಗಿ, ಇತರ ಸಮಯದಲ್ಲಿ ನಸು ನೀಲಿ ಬಣ್ಣವಿರುತ್ತದೆ. ಈ ಪ್ರಭೇದಗಳಲ್ಲಿ ಮುಖ್ಯವಾದದ್ದು ಕೆನಡಾದ ಕಪ್ಪು ತಲೆಯ ದಪ್ಪ ಗಾತ್ರದ ಹೆಬ್ಬಾತು. ದವಡೆಯಲ್ಲಿ ಬಿಳೀ ಪಟ್ಟೆಯಿರುತ್ತದೆ. ಸುಮಾರು ೨ ೧/೨–೩ ೩/೪ ಅಡಿ ಉದ್ದವಾಗಿ ೧೦–೧೪ ಪೌಂಡು ಭಾರವಿರಬಲ್ಲವು! ಅವುಗಳನ್ನು ಉತ್ತಮ ಹಾಗೂ ರುಚಿಕರ ಮಾಂಸಕ್ಕಾಗಿ ಹೆಚ್ಚಾಗಿ ಕೊಂದು ಉಪಯೋಗಿಸ ಲಾಗುತ್ತಿದೆ. **ಬ್ರ್ಯಾಂಟ್** (Brant) ಹೆಬ್ಬಾತು ಇದಕ್ಕೆ ಗಾತ್ರದಲ್ಲಿ ಸ್ವಲ್ಪ ಸಣ್ಣ. ಇದಕ್ಕೆ ದವಡೆಯು ಬಳಿ ಪಟ್ಟೆಗಳಿರುವುದಿಲ್ಲ. ಬಾರ್‌ನಕಲ್ ಹೆಬ್ಬಾತಿಗೆ ತಲೆ ಪೂರ್ಣ ಬಿಳುಪು. ಸ್ವಲ್ಪವೂ ಕಪ್ಪು ಬಣ್ಣವಿರುವುದಿಲ್ಲ.

ಹಿಮಾಲಯದ ಪಟ್ಟೆ ತಲೆಯ ಹೆಬ್ಬಾತು ಭಾರತಕ್ಕೆ ವಲಸೆ ಬರುತ್ತದೆ. ಅದರ ತಲೆಯಲ್ಲಿ ಎರಡು ಅಡ್ಡ ಪಟ್ಟೆಗಳಿರುತ್ತವೆ. ಇದರಂತೆಯೇ ಹವಾಯಿನ ' **ನೇನೇ** ' ಹೆಬ್ಬಾತು. ಆಹಾರಕ್ಕಾಗಿ ಇವನ್ನು ಹೆಚ್ಚಾಗಿ ಬೇಟೆಯಾಡಲಾಗಿದ್ದು, ಕೆಲವನ್ನು ಇಂಗ್ಲೆಂಡಿಗೆ ತಂದು ಸಲಹಿ ಸಂತತಿಯನ್ನು ವೃದ್ಧಿಗೊಳಿಸದಿದ್ದಲ್ಲಿ ಅವು ಇದುವರೆಗೆ ಪೂರ್ಣ ನಶಿಸುತ್ತಿದ್ದವು. ಸುಮಾರು ೩೦೦-೪೦೦ ಪಕ್ಷಿಗಳು ಮಾತ್ರ ಈಗ ಬದುಕಿವೆ. ಕಪ್ಪು ಬಿಳುಪು ಚುಕ್ಕೆ ಹೆಬ್ಬಾತುಗಳ ಜಾತಿ ಆಸ್ಟ್ರೇಲಿಯಾದಲ್ಲಿದೆ. ಅವುಗಳಿಗೆ ಕಾಲು ಉದ್ದ. ಅವು ಕೆಲಸಮಯ ಮರದ ಮೇಲೆ ಕೂರುತ್ತವೆ. ಅದಕ್ಕೆ ಅನುಕೂಲವಾಗಿ ಅದರ ಹಿಂಬೆರಳು ಉದ್ದವಾಗಿದೆ.

ಇವುಗಳಿಗೆ ಹೊಂದಿದಂತೆಯೇ ೮ ಪ್ರಭೇದಗಳನ್ನೊಳಗೊಂಡ ಇನ್ನೊಂದು ಉಪಪಂಗಡವಿದೆ. ಅವುಗಳಲ್ಲಿನ ಪಕ್ಷಿಗಳು ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣ ವಲಯದಲ್ಲಿ ಕಂಡುಬರುತ್ತದೆ. ರಾತ್ರಿ ಸಂಚರಿಸುವ ಪಕ್ಷಿಗಳು. ಹಲವು ಪ್ರಭೇದ ಮರಗಳಲ್ಲಿ ಕುಳಿತು ವಿಶ್ರಮಿಸಿ ಗೂಡು ರಚಿಸುತ್ತವೆ. ಭಾರತದಲ್ಲೂ ಇದರ ಒಂದು ಪ್ರಭೇದವಿದೆ. ಹಾರಾಡುವಾಗ ಶಿಳ್ಳು ಹಾಕಿದಂತಹ ಶಬ್ದ ಮಾಡುತ್ತವೆ.

' ಅನಾಟಿನೀ ' ಉಪಕುಟುಂಬಕ್ಕೆ ಉಳಿದ ಎಲ್ಲಾ ಬಾತುಗಳೂ ಸೇರಿವೆ. ಅವುಗಳನ್ನು ೭ ನಿರ್ದಿಷ್ಟ ಪಂಗಡಗಳಾಗಿ ವಿಂಗಡಿಸಬಹುದು. ಅವುಗಳಲ್ಲಿ ಮೊಟ್ಟೆ ನುಣುಪು. ಹೆಣ್ಣು ಮಾತ್ರ ಕಾವಿಗೆ ಕೂರುವುದು.

ಮೊದಲನೆಯದು ದಪ್ಪ ಗಾತ್ರದ **ಷೆಲ್ ಬಾತುಗಳು.** ಯುರೋಪ್, ಏಷ್ಯಾ ಖಂಡಗಳ ಸಮಶೀತೋಷ್ಣ ವಲಯಗಳಲ್ಲಿ ಹೆಚ್ಚಾಗಿವೆ. ಅಚ್ಚ ಬಿಳುಪು, ಕಪ್ಪು ಪಟ್ಟೆಗಳಿರಬಹುದು. ಗುಡಿಗೆ ಕೆಂಪು ಕೊಕ್ಕಿನ ಮೇಲೆ ಉಂಡೆ ಗಂಟಿರಬಹುದು. ಅವು ಹೆಚ್ಚು ದೂರ ವಲಸೆ ಹೋಗುವುದಿಲ್ಲ. ಕೊರಿಯಾದಲ್ಲಿ ಶಿಖೆಯ ಪ್ರಭೇದ ಈಗ ನಿರ್ನಾಮವಾಗಿದೆ. ವಿವಿಧ ಬಣ್ಣ, ಗಿಡ್ಡನೆಯ ದಪ್ಪ ಕೊಕ್ಕು. ಹೆಚ್ಚು ಸಂಖ್ಯೆಯಲ್ಲಿ ಒಟ್ಟಾಗಿರುವುದಿಲ್ಲ, ಹೆಣ್ಣು ಹೆಚ್ಚು ಚಟುವಟಿಕೆ ಹೊಂದಿ, ಗಂಡನ್ನು ಚುನಾಯಿಸುತ್ತದೆ. ಅವುಗಳ ಮೊಟ್ಟೆ ನುಣುಪಾಗಿರುತ್ತದೆ. ಹೆಣ್ಣು ಕಾವಿಗೆ ಕೂರುತ್ತದೆ.

ಎರಡನೆಯದು **ಮುಳುಗುವ ಬಾತುಗಳು.** ಇವೇ ಬಹು ಅಧಿಕ ಸಂಖ್ಯೆಯಲ್ಲಿರುವುದು. ಗಿಡ್ಡ ಕಾಲು ಮತ್ತು ಚಪ್ಪಟೆ ಕೊಕ್ಕು ಇವಕ್ಕಿದೆ. ಗಂಡು ಹೆಣ್ಣುಗಳಲ್ಲಿ ಬಣ್ಣದ ಅಂತರವಿದೆ. ಗಂಡು ಗಾತ್ರದಲ್ಲೂ ದಪ್ಪ. ಸಾಮಾನ್ಯವಾಗಿ ರೆಕ್ಕೆ ಮಧ್ಯ ಭಾಗದಲ್ಲಿ ಹೊಳೆಯುವ ಬಣ್ಣದ ಗರಿಗಳ ಗುಚ್ಛವಿರುತ್ತದೆ. ಹೆಚ್ಚಾಗಿ ನದಿ, ಸರೋವರ ಕೊಳಗಳ ಬಳಿ ವಾಸಿಸುತ್ತವೆ. ಆಹಾರಕ್ಕಾಗಿ ಸಮುದ್ರದಡಿಯಲ್ಲೂ ಕಾಣಬಹುದು. ನೀರು ಕಡಮೆಯಿರುವ ದಡದಬಳಿ ಬಾಲ ಮೇಲೆತ್ತಿ ಮುಳುಗಿ, ಆಹಾರ ಹೊಂಚುತ್ತವೆ. ಪೂರ್ಣ ಮುಳುಗಿ ಈಜಲಾರವು. ದ. ಭಾರತದ ಕೊಳ ಕೆರೆಗಳಲ್ಲೆಲ್ಲಾ ಹೆಚ್ಚಾಗಿ ಕಂಡುಬರುವ ಬಾತು ವಿಧಗಳೆಲ್ಲಾ ಈ ಪಂಗಡದವೇ. ಅವುಗಳನ್ನು ಸುಲಭವಾಗಿ ಪಳಗಿಸಬಹುದು. ಹಲವು ಹಾರಲಾರದ ಪ್ರಭೇದ

ಗಳೂ ಇದಕ್ಕೆ ಸೇರಿವೆ. ಇವುಗಳಿಗೆಲ್ಲಾ ಹಿಂದಿನ ಬೆರಳಿಗೆ ಮುಚ್ಚಳದಂತಹ ಬೆಳವಣಿಗೆಯಿಲ್ಲ.

ಮೂರನೆಯದು **ಪೋಚಾರ್ಟ್ ಬಾತುಗಳು**. ಸುಮಾರು ೧೪-೧೫ ಪ್ರಭೇದಗಳನ್ನೊಳಗೊಂಡಿದೆ. ಹಿಂಬೆರಳಿಗೆ ಬೆಳವಣಿಗೆಯಿದೆ. ದಪ್ಪ ದೇಹದವು. ಗುಂಪು ಗುಂಪಾಗಿರುತ್ತವೆ. ರೆಕ್ಕೆಗಳ ಮಧ್ಯೆ ಹೊಳಪು ಗರಿಗಳಿಲ್ಲ. ಅಧಿಕ ಸಂಖ್ಯೆಯು ಗುಂಪಾಗಿ ವಲಸೆಹೋಗುತ್ತವೆ. ಸಸ್ಯಾಹಾರಿಗಳೂ, ಹಲವು ಕೀಟ ಹಾಗೂ ಮಾಂಸಾಹಾರಿಗಳೂ ಇದರಲ್ಲಿವೆ. ಮಾಂಸ ರುಚಿಕರ.

ನಾಲ್ಕನೆಯದರಲ್ಲಿ ಹೆಚ್ಚಿನ ಕಾಲ ಕಾಡಿನ ಮರಗಳಲ್ಲಿ ವಾಸಿಸುವ ವಿವಿಧ ಬಾತುಗಳು ಸೇರಿರುತ್ತವೆ. ಬೆರಳುಗಳು ನೀಳವಾಗಿ, ಹಿಂಬೆರಳು ದೃಢವಾಗಿ ಬೆಳೆದು ಮೇಲುಬೆಳವಣಿಗೆ ಇರುವುದಿಲ್ಲ. ಹಲವು ಅತ್ಯುತ್ತಮ ಬಣ್ಣದವಾಗಿರಬಹುದು. ಗಂಡು ಬೇರೆ ಬಣ್ಣವಿರುತ್ತದೆ. ಅಮೇರಿಕಾದ ಹೆಸರಾಂತ **ಮುಸ್ಕೊವಿ** ಬಾತುಗಳೂ, ಜಪಾನ್ ದೇಶದ **ಮಂಡಾರಿನ್** ಬಾತುಗಳೂ ಇದಕ್ಕೆ ಸೇರಿವೆ. ಇವೆಲ್ಲವೂ ಮರದ ಮೇಲೆ ವಿಶ್ರಮಿಸಿ, ಗೂಡು ರಚಿಸಿ, ಸಂತಾನಾಭಿವೃದ್ಧಿ ಮಾಡುವ ಪ್ರಭೇದಗಳು.

ಐದನೆಯದಕ್ಕೆ **ಐಡರ್** ಬಾತುಗಳು ಸೇರಿವೆ. ಒಟ್ಟು ೪ ಪ್ರಭೇದಗಳು ಮಾತ್ರ. ಸಾಮಾನ್ಯವಾಗಿ ಉತ್ತರ ಶೀತವಲಯ ವಾಸಿಗಳು. ಅವುಗಳಲ್ಲಿ ಹೆಣ್ಣು ಗೂಡನ್ನು ತನ್ನ ಎದೆಯಿಂದ ಕಿತ್ತು ತೆಗೆದು ಹಲವು ಮೃದುಗಳನ್ನು ಜೋಡಿಸಿ ಮೆತ್ತಗಿರುವಂತೆ ಏರ್ಪಡಿಸುತ್ತದೆ. ಹಾಸಿಗೆ ದಿಂಬುಗಳಿಗಾಗಿ ಉಪಯೋಗಿಸುವ ಈ ಗರಿಗಳನ್ನು ಶೇಖರಿಸಿ ಉತ್ತಮ ಬೆಲೆಗೆ ಮಾರಲಾಗುತ್ತದೆ. ಅವುಗಳ ಮೊಟ್ಟೆಗಳಿಗೂ ಹೆಚ್ಚಿನ ಬೇಡಿಕೆಯಿದೆ. ಇದೇ ಐಸ್‌ಲೆಂಡಿನ ನಿವಾಸಿಗಳಿಗೆ ಮುಖ್ಯ ಉದ್ಯೋಗ. ಗೂಡು ರಚಿಸಿರುವಾಗಲೇ ಗೂಡಿನಲ್ಲಿರುವ ಗರಿಗಳನ್ನು ಒಂದು ಸಲ ತೆಗೆದುಕೊಳ್ಳುವರು. ಬಾತು ಇನ್ನೂ ತನ್ನ ಎದೆಯಿಂದ ತೆಗೆದು ಉಪಯೋಗಿಸುತ್ತದೆ. ಅವು ಅಧಿಕ ಸಂಖ್ಯೆಯಲ್ಲಿ ಒಂದೇ ಎಡೆ ಮರಿಮಾಡುವುದರಿಂದ ಹೆಚ್ಚಿನ ಉತ್ಪತ್ತಿ ಗಳಿಸಲು ಸಾಧ್ಯವಿದೆ. ಅವು ಉತ್ತಮ ಮುಳುಗು ಪಕ್ಷಿಗಳು. ಮೀನೇ ಮುಖ್ಯಾಹಾರ.

ಆರನೆಯ ಪಂಗಡದಲ್ಲಿ ಉತ್ತಮ ಈಜುಗಾರರೂ, ಮುಳುಗು ಪಕ್ಷಿಗಳೂ ಆದ ಉತ್ತರವಲಯದ **ಸಮುದ್ರ ಬಾತುಗಳ** ೧೬ ಪ್ರಭೇದಗಳು ಸೇರುತ್ತವೆ. ಹೆಚ್ಚು ಶಬ್ದ ಮಾಡುವುದಿಲ್ಲ. ಶೀತವಲಯ ವಾಸಿಗಳು. ಪರ್ವಕಾಲದ ಪ್ರಣಯಾಚರಣೆಯಲ್ಲಿ ನುರಿತವು. ಮೀನೇ ಮುಖ್ಯಾಹಾರ. ಮೆರ್‌ಗಾನ್‌ಸರ್ ಬಾತುಗಳ ಕೊಕ್ಕಿನಂಚಿಗೆ ಗರಗಸದಂತಹ ಕಚ್ಚುಗಳಿದ್ದು ಅವು ಮೀನು ಹಿಡಿಯಲು ಅನುಕೂಲವಾಗಿವೆ. ಇವು ರುಚಿಕರವಲ್ಲ. ಹಲವು ಬಾತುಗಳಿಗೆ ಚಿತ್ರವಿಚಿತ್ರ ಬಣ್ಣವಿರುತ್ತವೆ. ಒಂದು ಪ್ರಭೇದದ ಬಾಲ ಅತಿ ನೀಳವಾಗಿ ಮೇಲೆದ್ದಿರುತ್ತದೆ. ಇವೆಲ್ಲವೂ ಸಮುದ್ರ ತೀರದ ಬಾತುಗಳು.

ಏಳನೆಯ ಗುಂಪಿಗೆ **ಸೆಡೆತ ಬಾಲದ ಬಾತುಗಳು** ಸೇರುತ್ತವೆ. ಸಣ್ಣ ಗಾತ್ರದ ಪಕ್ಷಿಗಳು. ಭೂಮಿಯ ಮೇಲೆ ಕಷ್ಟದಿಂದ ನಡೆಯುತ್ತವೆ. ಅವು ಈಜು

ವಾಗ ಬಾಲದ ಸೆಡೆತ ಗರಿಗಳು ನೇರವಾಗಿ ನಿಂತಿರುತ್ತವೆ. ಜೌಗಿನ ಮಧ್ಯೆ ಭೂಮಿಯಲ್ಲಿ ಗೂಡು ರಚಿಸಿ ದಪ್ಪ ಮೊಟ್ಟೆಗಳನ್ನಿಡುತ್ತವೆ. ಗಂಡು ಮರಿಯ ಪೋಷಣೆಯಲ್ಲಿ ಆಸಕ್ತಿ ವಹಿಸುತ್ತದೆ. ಚಿಲಿ, ಅರ್ಜೆಂಟೈನಾದ ಬಳಿ ವಾಸಿಸುವ ಒಂದು ಪ್ರಭೇದದ ಮರಿ ಪರೋಪಜೀವಿ. ಅವು ತಮ್ಮ ಮೊಟ್ಟೆಗಳನ್ನು ತಿಳಿಯದಂತೆ ಪಕ್ಕದಲ್ಲಿನ ಇತರ ಪಕ್ಷಿಗಳ ಗೂಡುಗಳಲ್ಲಿಟ್ಟು ಮರಿಮಾಡಲೇರ್ಪಡಿಸುತ್ತವೆ! ದ. ವಲಯದ ಹಲವು ಪ್ರಭೇದಗಳಲ್ಲಿ ಸ್ಥಳವಾಸಿಗಳು ವಲಸೆ ಹೋಗುವುದಿಲ್ಲ. ಆಸ್ಟ್ರೇಲಿಯಾದ ಒಂದು ಪ್ರಭೇದ ಕಸ್ತೂರಿ ವಾಸನೆ ಹೊಂದಿರುತ್ತದೆ.

ಉಪವರ್ಗ ೧೨ : ಫಾಲ್‌ಕೋನಿಫಾರ್‌ಮಿಸ್ (Falconiformes)

(ಮಾಂಸಾಹಾರಿ ಪಕ್ಷಿಗಳು)

ಕುಟುಂಬ ೫

ಪ್ರಭೇದ ೨೭೪

ಹಗಲು ಸಂಚಾರಿಗಳಾದ ಮಾಂಸಾಹಾರಿ ಹಿಂಸ್ರ ಪಕ್ಷಿಗಳಿವು. ಕೊಕ್ಕು ಮತ್ತು ಕಾಲಿನ ರಚನೆ ಇವುಗಳ ಆಹಾರಕ್ಕೆ ಅನುಕೂಲವಾಗುವಂತೆ ಇದೆ. ದೃಢವಾದ ಮೊನಚು ಕೊಕ್ಕು ಮುಂದೆ ಬಾಗಿರುತ್ತದೆ. ಮೇಲ್ಭಾಗದಲ್ಲಿ ಮಾಂಸದ ಮೆತ್ತೆ ಇದ್ದು, ಮೂಗಿನ ಹೊಳ್ಳೆ ಅಲ್ಲೆ ತೆರೆಯುತ್ತದೆ. ಅವುಗಳ ಕಾಲುಗಳು ಗಟ್ಟಿ. ಬೆರಳುಗಳು ನೀಳವಾಗಿ ಉದ್ದನೆಯ ಬಾಗಿದ ಉಗುರು ಹೊಂದಿವೆ. ಹಿಂಬೆರಳೂ ನೀಳವಾದ ಉಗುರು ಹೊಂದಿದ್ದು ಮಿಕ್ಕ ಬೆರಳುಗಳನ್ನು ಒತ್ತಿ ಹಿಡಿಯುವುದಲ್ಲದೆ, ಇವುಗಳಿಂದ ಜೀವಂತ ಆಹಾರವನ್ನೂ ತಪ್ಪಿಸಿಕೊಳ್ಳದಂತೆ ಹಿಡಿಯಲು ಸಾಧ್ಯವಾಗಂತ್ತದೆ.

ದ. ಶೀತವಲಯದ ಅಂಟಾರ್ಕ್‌ಟಿಕಾ ಖಂಡವನ್ನುಳಿದು ಪ್ರಪಂಚದ ಇತರೆಲ್ಲೆಡೆ ಕಂಡುಬರುತ್ತವೆ. ಎಲ್ಲವೂ ಮಾಂಸಾಹಾರಿಗಳು. ಹಲವು ಕೊಳೆತ ಮಾಂಸ ತಿನ್ನುತ್ತವೆ. ಶಕ್ತ ರೆಕ್ಕೆಗಳಿದ್ದು ಚೆನ್ನಾಗಿ ಹಾರಬಲ್ಲವು. ಹಲವು ನುರಿತ ತೇಲುಪಕ್ಷಿಗಳು. ಮೊಟ್ಟೆ ಸಂಖ್ಯೆ ಕಡಮೆ. ಸಂತಾನಾಭಿವೃದ್ಧಿ ನಿಧಾನ. ಎಲ್ಲವೂ ಗೂಡು ರಚಿಸುವವೇ.

ಕುಟುಂಬ ೧ : ಕೆತಾರ್‌ಟಿಡೀ (Cathartidae)

ಪಶ್ಚಿಮ ವಲಯದ ಮಾಂಸಾಹಾರಿ ಪಕ್ಷಿಗಳು. ಕೊಕ್ಕರೆ ಮತ್ತು ನೀರು ಕಾಗೆಗಳಿಗೆ ಇವು ಸ್ವಲ್ಪ ಸಂಬಂಧಪಟ್ಟಿವೆ. ಬಹುನೀಳ ಬೆರಳುಗಳಲ್ಲಿ ಉಗುರು ಹೆಚ್ಚು ಉದ್ದವಾಗಿರುವುದಿಲ್ಲ. ಹೊಳ್ಳೆಗಳು ಉದ್ದ. ಹೆಚ್ಚಾಗಿ ಕೂಗಲಾರವು. ಭೂಪಕ್ಷಿಗಳಲ್ಲೆಲ್ಲಾ ಅತ್ಯುತ್ತಮ ತೇಲುಪಕ್ಷಿಗಳಿವು. ಕೊಕ್ಕು ಕೂಡ ಹೆಚ್ಚು ಗಟ್ಟಿಯಾಗಿಲ್ಲ. ಕೊಳೆತ ಮಾಂಸವನ್ನು ಮಾತ್ರ ಹರಿಯಬಲ್ಲವು. ತಿರುಗಿಬೀಳುವ ಪ್ರಾಣಿಗಳಿಂದ ದೂರವಿರುತ್ತವೆ. ಸತ್ತು ಕೊಳೆತ ದೇಹವೇ ಮುಖ್ಯಾಹಾರವಾದ ರಣಹದ್ದುಗಳು ಈ ಜಾತಿಗೆ ಸೇರಿವೆ.

ಪ್ರಪಂಚದ ಅತಿ ದೊಡ್ಡ ಹಾರಾಟಪಕ್ಷಿಗಳು ಇದಕ್ಕೆ ಸೇರಿವೆ. ಅಮೇರಿಕಾದ **ಕ್ಯಾಲಿಫೋರ್ನಿಯಾ** ಮತ್ತು **ಆಂಡಿಯನ್ ಕಾಂಡರ್**‌ಗಳು ೨೦ – ೨೨ ಪೌಂಡು ಭಾರವಿದ್ದು, ಅವುಗಳ ರೆಕ್ಕೆಯಗಲ ೧೦ ಅಡಿ ಇರಬಹುದು. ಈ ಕುಟುಂಬ ಬಹು ಹಿಂದೆಯೇ ಅಂದರೆ ಸುಮಾರು ೪ – ೫ ಕೋಟಿ ವರ್ಷಗಳ ಹಿಂದೆಯೇ ಉತ್ಪನ್ನವಾದು ವೆಂಬುದಕ್ಕೆ ಅನೇಕ ಪಳೆಯುಳಿಕೆಗಳು ದೊರೆತಿವೆ. ಕ್ಯಾಲಿಫೋರ್ನಿಯಾದ ಪಕ್ಷಿ ಈಗ ಬಹಳ ಅಪರೂಪವಾಗುತ್ತಿದೆ. ೧೯೫೦ರ ಎಣಿಕೆಯಂತೆ ಕೇವಲ ೪೬ ಪಕ್ಷಿಗಳಿವೆಯೆಂದು ತಿಳಿದುಬಂದಿದೆ.

ಇವುಗಳ ನಾಶಕ್ಕೆ ಮುಖ್ಯ ಕಾರಣಗಳು ಹಲವಾರು. ಈ ದೊಡ್ಡ ಹದ್ದುಗಳು ಶಿಕಾರಿಯ ಸುಲಭ ಗುರಿಯಾಗುವುದೂ, ತೋಳ ನರಿಗಳನ್ನು ಕೊಲ್ಲಲು ಉಪಯುಕ್ತ ವಿಷಗಳು ಇದಕ್ಕೂ ಮಾರಕವಾಗುವುದೂ, ಇವುಗಳ ನೈಸರ್ಗಿಕ ಆಹಾರ ಬಹಳ ಕಡಮೆಯಾಗಿರುವುದೂ ಅವುಗಳಲ್ಲಿ ಮುಖ್ಯ. ಇವು ೬ ವರ್ಷ ವಯಸ್ಸಿನ ನಂತರವೇ ಪರ್ವ ಪಡೆದು ಒಂದೇ ಮೊಟ್ಟೆಯಿಡುವುದರಿಂದ ಸಂತಾನಾಭಿವೃದ್ಧಿಯೂ ಬಹಳ ನಿಧಾನ. ' ಆಂಡಿಯನ್ ' ಪ್ರಭೇದ ಬೆಟ್ಟ ಶ್ರೇಣಿಗಳಲ್ಲಿ ಮಾತ್ರ ವಾಸಿಸುವುದರಿಂದ ಇದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಆಂಡಿಯನ್ ಕೋಂಡರಿಗೆ ತಲೆಯ ಮೇಲೆ ಗಟ್ಟಿ ಶಿಖೆಯಿದೆ. ಕ್ಯಾಲಿಫೋರ್ನಿಯಾ ಪ್ರಭೇದದ ತಲೆ ಪೂರ್ಣ ನಗ್ನ. ಇವುಗಳ ಮೂರನೆಯ ಮುಖ್ಯ ಪ್ರಭೇದ **ರಾಜ ರಣಹದ್ದು**. ಬಿಳುಪು ಕಪ್ಪು ಬಣ್ಣದಿಂದ ಕೂಡಿದ್ದು ಮೆಕ್ಸಿಕೋದಿಂದ ದ. ಅಮೇರಿಕಾದ ಮಧ್ಯಭಾಗದವರೆಗೂ ಹರಡಿದೆ. ಅದರ ನಗ್ನ ತಲೆ ವಿವಿಧ ಬಣ್ಣ ಹೊಂದಿರು ತ್ತದೆ.

ಕಪ್ಪು ರಣಹದ್ದು ಮತ್ತು **ಟರ್ಕಿರಣಹದ್ದು**ಗಳ ಹೆಸರು ಅವುಗಳ ತಲೆಯ ಬಣ್ಣವನ್ನು ಸೂಚಿಸುತ್ತದೆ. ಇವೆರಡೂ ಉ. ಮತ್ತು ದ. ಅಮೇರಿಕಾದ ಬಹುಭಾಗದಲ್ಲಿ ಕಂಡುಬರುತ್ತವೆ. ಇವಕ್ಕೆ ಅತ್ಯುತ್ತಮ ದೃಷ್ಟಿಯಿದೆ. ನೂರಾರು ಅಡಿ ಎತ್ತರಕ್ಕೆ ಹಾರಿ, ಗಾಳಿಯಲ್ಲಿ ತೇಲುತ್ತಿದ್ದು ತಮ್ಮ ತೀಕ್ಷ್ಣ ದೃಷ್ಟಿಯಿಂದ ಬಹು ದೂರದವರೆಗೆ ನೋಡಿ ಆಹಾರ ಕಂಡುಹಿಡಿಯುತ್ತವೆ. ಇವು ಸಾಮಾನ್ಯವಾಗಿ ಸಂಘ ಜೀವಿಗಳಲ್ಲದಿದ್ದರೂ, ರಾತ್ರಿ ತಂಗುವಾಗ ಮತ್ತು ಆಹಾರ ದೊರಕಿದಾಗ ಗುಂಪು ಸೇರು ತ್ತವೆ. ಬಹು ದೂರದಲ್ಲಿ ಹಾರುವ ಪಕ್ಷಿಗೆ ಇನ್ನೊಂದು ಹಠಾತ್ತಾಗಿ ಕೆಳಗೆರಗುವುದು ಆಹಾರ ದೊರೆತ ಸೂಚನೆಯೆಂದು ತೋರುತ್ತದೆ. ಯಾವುದೇ ಒಂದು ಪಕ್ಷಿಗೆ ಆಹಾರ ದೊರೆತರೂ ಇತರ ಎಲ್ಲಕ್ಕೂ ಅದರ ಸುಳಿವು ದೊರಕಿ ಒಟ್ಟುಸೇರುತ್ತವೆ. ಇವುಗಳಿಗೆ ಆಘ್ರಾಣ ಶಕ್ತಿಯಿದ್ದರೂ, ತೀಕ್ಷ್ಣ ನೋಟವೇ ಅತಿ ಮುಖ್ಯ, ' ಹಳದಿ ತಲೆಯ ರಣ ಹದ್ದು ' ದ. ಅಮೇರಿಕಾದಲ್ಲಿ ಕಂಡುಬರುತ್ತದೆ.

ಕಪ್ಪು ಮತ್ತು ಟರ್ಕಿ ರಣಹದ್ದುಗಳು ನೆಲದ ಮೇಲೆ ಗೂಡು ರಚಿಸುತ್ತವೆ. ಮರ ಪೊಟರೆ ಮತ್ತು ಹಳ್ಳಗಳಲ್ಲೂ ೨ – ೩ ಮೊಟ್ಟೆಯಿಟ್ಟು ಮರಿಮಾಡುವುವು.

ಕಾವಿನ ಅವಧಿ ೬ ವಾರ. ಮರಿಗಳಿಗೆ ತಲೆಯ ಮೇಲೂ ಮೃದು ಗರಿಗಳಿರುತ್ತವೆ. ಬೆಳೆದಂತೆ ಅವು ಉದುರುತ್ತವೆ.

ಎಲ್ಲವೂ ಕೊಳಕು ಪಕ್ಷಿಗಳು. ಮೇಲೆ ದುರ್ನಾತವಿರಬಹುದು. ಆದರೆ ನೀರಿನಲ್ಲಿ ಕೊಳೆತ ಮಾಂಸ ಹರಿದು ತಿಂದು ಸಹಾಯಮಾಡುತ್ತವೆ.

ಕುಟುಂಬ ೨ : ಸಜಿಟ್ಟಾರಿಡೀ (Sagittariidae)

(ಕಾರಕೂನ ಪಕ್ಷಿಗಳು)

ಇದರಲ್ಲಿ ಒಂದೇ ಜಾತಿಯು ಒಂದೇ ಪ್ರಭೇದವಿದೆ. ನೀಳಕಾಲಿನ ಗಿಡುಗನಂತಹ ಪಕ್ಷಿ. ಹೆಚ್ಚಾಗಿ ಹಾರುವುದಿಲ್ಲ. ನೆಲದ ಮೇಲೆ ವೇಗವಾಗಿ ಅತ್ತಿತ್ತ ಹಾರಾಡಿ ತನ್ನ ಮುಖ್ಯಾಹಾರವಾದ ಹಾವುಗಳನ್ನು ಹಿಡಿದು ತಿನ್ನುತ್ತದೆ. ಸಣ್ಣಗಿದ್ದಲ್ಲಿ ಹಾವನ್ನು ತನ್ನ ನೀಳ ಬಲಿಷ್ಠ ಕಾಲಿನಿಂದ ತಲೆಯ ಮೇಲೆ ಒದೆದು ಬೀಳಿಸಿ, ರೆಕ್ಕೆಗಳಿಂದ ಬಡಿದು ಸಾಯಿಸುತ್ತದೆ. ಹಾವು ದಪ್ಪ ಗಾತ್ರವಿದ್ದರೆ ಮೇಲಕ್ಕೆ ಹಾರಿ ಕೊಂಡೊಯ್ದು ಕೆಳಕ್ಕೆ ಹಾಕಿ ಸಾಯಿಸುತ್ತದೆ. ಹಾವು ಕಚ್ಚಲು ಹವಣಿಸಿದರೆ ರೆಕ್ಕೆಗರಿಗಳನ್ನು ಒಡ್ಡುವುದರಿಂದ ಘಾಸಿಯಾಗುವುದಿಲ್ಲ.

ಇದು ಆಫ್ರಿಕಾದ ಪಕ್ಷಿ. ಉಪಯುಕ್ತತೆಯಿಂದ ಅಲ್ಲಿ ರಕ್ಷಣೆಗೆ ಒಳಪಟ್ಟಿದೆ. ಅದರ ಕತ್ತಿನ ಬಳಿ ದಪ್ಪನೆಯ ಲೇಖನಿಗಳಂತಹ ಗರಿಗಳು ಜೋಲುಬಿದ್ದಿದ್ದು ಕಿವಿಯ ಹಿಂದೆ ಲೇಖಣಿಕೆಗಳನ್ನು ಸಿಕ್ಕಿಸಿಕೊಳ್ಳುವ ಕಾರಕೂನರಂತೆ ಕಾಣುವುದರಿಂದ ಅದಕ್ಕೆ ಕಾರಾಕೂನ ಪಕ್ಷಿಗಳೆಂದು ಕರೆಯಲಾಗುತ್ತದೆ. ಅವು ಸಾಮಾನ್ಯವಾಗಿ ಹುಲ್ಲುಗಾವಲುಗಳಲ್ಲೇ ಹೆಚ್ಚಾಗಿ ವಾಸಿಸುವುದು. ಜೊತೆಗೂಡಿ ವಾಸಿಸುವುದೇ ಸಾಮಾನ್ಯ.

ಒಮ್ಮೆ ಜೊತೆಗೂಡಿದಲ್ಲಿ ಜೀವನವಿಡೀ ಹಾಗೇ ಉಳಿಯುತ್ತವೆ. ಹೆಣ್ಣು ಗಾತ್ರದಲ್ಲಿ ಸಣ್ಣದು. ಪೊದರು ಅಥವಾ ಮರಗಳಲ್ಲಿ ಹಲವು ಕಡ್ಡಿಗಳಿಂದ ಗೂಡು ರಚಿಸಿ, ೭ ವಾರಗಳಲ್ಲಿ ಮರಿಯಾಗುವಂತಹ ೨ ಮೊಟ್ಟೆಗಳನ್ನಿಡುತ್ತವೆ. ಒಮ್ಮೆ ಗೂಡು ರಚಿಸಿದರೆ ವರ್ಷವಿಡೀ ಅದನ್ನೇ ವೃದ್ಧಿಪಡಿಸಿಕೊಳ್ಳುತ್ತಿದ್ದು, ಕೆಲವು ೫–೬ ಅಡಿ ಅಗಲವಾಗಬಹುದು! ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ. ಮರಿಗೆ ಅರೆಜೀರ್ಣ ಆಹಾರವನ್ನು ಮಾಡಿ ತಾಯಿ ತಿನ್ನಿಸುತ್ತದೆ. ನಿಸ್ಸಹಾಯಕ ಮರಿಗಳು ೨ ತಿಂಗಳಲ್ಲಿ ಓಡಾಡಲು ಸಮರ್ಥವಾಗುತ್ತವೆ.

ಕುಟುಂಬ ೩ : ಆಕ್ಸಿಪಿಟ್ರಿಡೀ (Accipitridae)

(ಪೂರ್ವವಲಯದ ರಣಹದ್ದು, ಹದ್ದು, ಗಿಡುಗ, ಡೇಗೆ, ಗೃಧ್ರಗಳು)

ಹಿಂಸ್ರ ಪಕ್ಷಿಗಳಲ್ಲಿ ಈ ಕುಟುಂಬವೇ ಅತ್ಯಂತ ವೈವಿಧ್ಯತೆ ಹೊಂದಿರುವ ದೊಡ್ಡ ಗುಂಪು. ಸುಮಾರು ೭೦ ಜಾತಿಗಳಲ್ಲಿ ೨೦೫ ಪ್ರಭೇದಗಳನ್ನೊಳಗೊಂಡಿದೆ. ಗಾತ್ರದಲ್ಲೂ ಸಣ್ಣ ಪಾರಿವಾಳ ಗಾತ್ರದ ಡೇಗೆಯಿಂದ ಬಹು ದೊಡ್ಡ ರಣಹದ್ದುಗಳವರೆಗಿನ ವಿವಿಧ ಅಂತರವಿದೆ.

ರಣಹದ್ದುಗಳು : ಅಮೇರಿಕಾದ ರಣಹದ್ದು ಕುಟುಂಬಕ್ಕೂ, ಇಲ್ಲಿಯ ರಣಹದ್ದುಗಳಿಗೂ ಇರುವ ಮುಖ್ಯ ವ್ಯತ್ಯಾಸಗಳು ಮೊದಲನೆಯದಾಗಿ ನೀಳ ಮೊನಚಾದ ಉಗುರು ಇರುವ ಕಾಲ್ಬೆರಳುಗಳು; ಎರಡನೆಯದಾಗಿ ವರ್ತುಲಾಕಾರದ ಹೊಳ್ಳೆಗಳು. ಇವುಗಳ ತಲೆಯೂ ಪೂರ್ಣ ನಗ್ನ. ಈಜಿಪ್ಟಿನ ರಣಹದ್ದಿಗೆ ಮಾತ್ರ ಕುತ್ತಿಗೆ ತಲೆಗಳೆಡೆ ಸಣ್ಣ ಗರಿಗಳಿವೆ. ಈ ಪ್ರಭೇದ ಅತಿ ಪುರಾತನವಾದದ್ದು. ಈಜಿಪ್ಷಿಯನ್ನರ ಕಾಲದಲ್ಲೇ ಹೆಚ್ಚು ಪ್ರಾಶಸ್ತ್ಯ ಹೊಂದಿದ್ದಿತು. ಎಂತಹ ಕೊಳೆತ ಮಾಂಸವನ್ನೂ ಮಲವನ್ನೂ ತಿನ್ನಬಲ್ಲದು. ೨ ಮೊಟ್ಟೆಯಿಟ್ಟು ೪೫ ದಿನ ಕಾವು ಕೂರುತ್ತದೆ.

ಗ್ರಿಫ್ಫಾನ್ ರಣಹದ್ದಿಗೆ ನೀಳ ಕತ್ತಿದೆ. ಎದೆಯ ಬಳಿ ಕತ್ತಿನ ಸುತ್ತಲೂ ಹೂಮಾಲೆಯಾಕಾರದ ಗರಿಗಳಿದ್ದು, ಬೇಕಾದಾಗ ತನ್ನ ಕತ್ತನ್ನು ಸಂಕುಚಿತಗೊಳಿಸಿ ಕೊಳ್ಳಲು ಶಕ್ತವಾಗಿದೆ. ಆಫ್ರಿಕಾ, ಯೂರೋಪ್, ಭಾರತದಲ್ಲೆಲ್ಲಾ ಕಂಡುಬರುತ್ತದೆ. ದಪ್ಪದೇಹದ ಶಕ್ತಿಯುತ ಪಕ್ಷಿಯಾದರೂ ಆಹಾರ ಕೊಲ್ಲುವುದಿಲ್ಲ. ಕೊಳೆತ ಮಾಂಸವನ್ನೇ ಹುಡುಕುತ್ತದೆ. ಇವು ಹಲವೊಮ್ಮೆ ಕಲ್ಲು ಬಂಡೆಗಳ ಮೇಲೆ ಗುಂಪಾಗಿ ಗೂಡು ರಚಿಸಿ ಸಂತಾನಾಭಿವೃದ್ಧಿ ಮಾಡುತ್ತವೆ. ಒಂದೇ ಮೊಟ್ಟೆ ಇಟ್ಟು ೪೫ ರಿಂದ ೫೫ ದಿನ ಗಂಡು ಹೆಣ್ಣುಗಳೆರಡೂ ಕಾವು ಕೂತು ಮರಿಮಾಡುತ್ತವೆ. ಅರ್ಧ ಜೀರ್ಣಿತ ವಾಂತಿಯೇ ಮರಿಗಳಿಗೆ ಆಹಾರ.

ಆಫ್ರಿಕಾದಲ್ಲಿ **ಕಿವಿಯಿರುವ ರಣಹದ್ದು, ಬಿಳುಪು ತಲೆಯ ರಣಹದ್ದು** ಮತ್ತು **ಟೊಪ್ಪಿಗೆ ರಣಹದ್ದುಗಳಿವೆ.** ಅವೆಲ್ಲವೂ ಆಹಾರದಲ್ಲೂ, ಸಂತಾನಾಭಿವೃದ್ಧಿಯಲ್ಲೂ, ಉಳಿದುವನ್ನೇ ಹೋಲುತ್ತವೆ. ಬಿಳುಪು ತಲೆಯವು ಹಲವೊಮ್ಮೆ ಆಹಾರ ಸಿಗದಿದ್ದಾಗ ಸಣ್ಣ ಪ್ರಾಣಿಗಳನ್ನು ಬೇಟೆಯಾಡಬಲ್ಲವು.

ಹದ್ದುಗಳು : ಇವುಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಲಾಗಿದೆ. ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣವಲಯ ವಾಸಿಗಳಾದ ಬಿಳಿಯ ಬಾಲದ ಹದ್ದುಗಳು ಇದಕ್ಕೆ ಸೇರಿವೆ. ಒಟ್ಟು ೭ ಪ್ರಭೇದಗಳು. ಹಗುರ ಬಣ್ಣದವು. ಹಲವು ಆಕರ್ಷಕವಾಗಿರುತ್ತವೆ. ಎಲ್ಲವೂ ಗೂಡು ಕಟ್ಟುವುದು ಮರಗಳಲ್ಲೆ. ೨ – ೫ ಮೊಟ್ಟೆಯಿಟ್ಟು ೪ ವಾರ ಕಾವುಕೊಟ್ಟು ಮರಿಮಾಡುತ್ತವೆ. ಉತ್ತಮ ಹಾರಾಟ ಪಕ್ಷಿಗಳು. ಸಣ್ಣ ಸಸ್ತನಿಗಳು, ಹಾವು, ಕಪ್ಪೆ, ಕೀಟಗಳೆಲ್ಲವನ್ನೂ ತಿನ್ನುತ್ತವೆ. ಆಫ್ರಿಕಾದಲ್ಲಿ ಸಂಜೆ ಮಾತ್ರ ಸಂಚರಿಸುವ ಪ್ರಭೇದವೊಂದು ಬಾವಲಿಗಳನ್ನೂ ಕೀಟಗಳನ್ನೂ ಮಾತ್ರ ತಿನ್ನುತ್ತದೆ.

ಎರಡನೆಯ ಗುಂಪಿಗೆ ಇಬ್ಭಾಗ ಬಾಲದ ಮತ್ತು ಗಿಣಿ ಕೊಕ್ಕಿನ ಜಾತಿಗಳು ಸೇರಿರುತ್ತವೆ. ಅವೆಲ್ಲವೂ ಪಶ್ಚಿಮವಲಯದವು. ಒಂದು ಪ್ರಭೇದ ಜೇನು ಮತ್ತು ಕಣಜ ಗೂಡುಗಳನ್ನೂ, ಹರಿದ ಮರಿಗಳನ್ನೂ, ನೊಣಗಳನ್ನೂ ಹಿಡಿದು ತಿನ್ನುತ್ತವೆ. ಅವು ಮೊದಲು ಹೊಟ್ಟೆಯಡಿಯ ಅರ್ಧಭಾಗವನ್ನು ಕಿತ್ತು ಚೆಲ್ಲಿ ಉಳಿಕೆ ಭಾಗವನ್ನು ಮಾತ್ರ ತಿನ್ನುವುದರಿಂದ ಮುಳ್ಳು ಕುಟುಕಿ ತೊಂದರೆಯಾಗುವುದಿಲ್ಲ. ಇಬ್ಭಾಗ ಬಾಲದ

ಪ್ರಭೇದ ಕೀಟ ದ್ವಿಚರಗಳನ್ನು ಮತ್ತು ಅನೇಕ ಸರೀಸೃಪಗಳನ್ನು ತಿನ್ನುತ್ತವೆ. ಉತ್ತಮ ಹಾರಾಟಗಾರ. ಅನಾಯಾಸವಾಗಿ ದೀರ್ಘಕಾಲ ಹಾರಾಡುತ್ತಿರಬಲ್ಲುದು.

ಮೂರನೆಯ ಪಂಗಡಕ್ಕೆ, ಈ ಪಂಗಡಗಳಿಗೂ ಮುಂದಿನ ಕುಟುಂಬ ಪಕ್ಷಿಗಳಿಗೂ ಹಲವು ಸಾಮ್ಯತೆಗಳನ್ನು ಹೊಂದಿರುವ ನಿಜಹದ್ದುಗಳು ಸೇರುತ್ತವೆ. ಅಮೇರಿಕಾದಲ್ಲಿನ ೪ ಜಾತಿಗಳು ಇದರಲ್ಲಿವೆ. ಒಂದು ಫ್ಲಾರಿಡಾ ಬಳಿಯ ಒಂದು ಜಾತಿಯ ಬಸವನ ಹುಳುಗಳನ್ನು ಮಾತ್ರ ತಿನ್ನುವುದರಿಂದ, ಬೇರೆ ಸ್ಥಳಗಳಲ್ಲಿ ಇಲ್ಲ. ಇದೇ ಪಂಗಡಕ್ಕೆ ಭಾರತದ **ಗರುಡ** ಪಕ್ಷಿ ಹಾಗೂ ಜಪಾನಿನ **ಕಪ್ಪುಹದ್ದು** ಸೇರುತ್ತವೆ. ಅವು ಹಳ್ಳಿ ಪಟ್ಟಣಗಳ ಬಳಿ ವಾಸವಿದ್ದು ಜಲಗಾರರಂತೆ ಹಲ್ಲಿ, ಕಪ್ಪೆ, ಇಲಿಗಳನ್ನು ಹುಡುಕಿ ಭಕ್ಷಿಸುತ್ತವೆ. ಎಲ್ಲಾ ಹದ್ದುಗಳೂ ಆಹಾರವನ್ನು ಕಾಲುಗಳಲ್ಲಿ ಹಿಡಿದು ಎತ್ತಿ, ಚಲಿಸುವಾಗ ಅಥವಾ ಮರದ ಮೇಲೆ ಕುಳಿತು ಭಕ್ಷಿಸುತ್ತವೆ. ಇವುಗಳಲ್ಲೆಲ್ಲಾ ಅತ್ಯಂತ ದೊಡ್ಡ ಗಾತ್ರದ್ದು **ಲ್ಯಾಮರ್‌ಗೇಯರ್** (Lammergeyer) ಹದ್ದು, ಸುಮಾರು ೪ ಅಡಿ ಎತ್ತರವಿರುವ ಆಫ್ರಿಕಾ ಬೆಟ್ಟವಾಸಿ. ಅದು ಕೊಳೆತ ಮಾಂಸ ತಿನ್ನಬಲ್ಲುದಾದರೂ ಮೂಳೆಗಳೇ ಇಷ್ಟ. ಸಣ್ಣ ಮೂಳೆಗಳನ್ನು ಹಾಗೆಯೇ ನುಂಗುತ್ತವೆ. ದಪ್ಪವಾದುವನ್ನು ಎತ್ತರದಿಂದ ಬಂಡೆಯ ಮೇಲೆ ಎಸೆದು ತಿನ್ನುತ್ತವೆ!

ಗಿಡುಗಗಳು : ಉಷ್ಣ ಮತ್ತು ಸಮಶೀತೋಷ್ಣವಲಯ ವಾಸಿಗಳು. ೪೦ ಪ್ರಭೇದಗಳಿವೆ. ಉತ್ತಮ ಬೇಟೆಗಾರರು. ದುಂಡು ರೆಕ್ಕೆಯ, ಮೊನೆಯ ಉಗುರಿನ ಬೆರಳುಳ್ಳ, ನೀಳ ಕಾಲಿನ, ಬಹುವೇಗವಾಗಿ ಹಾರಬಲ್ಲ ಪಕ್ಷಿಗಳಿವು. ಬಾಲ ಉದ್ದ. **ಗೋಸ್‌ಹಾಕ್** (Goshawk) ೧ ೧/೨ – ೨ ಅಡಿ ಉದ್ದದ ಪಕ್ಷಿ. ಸಮಶೀತೋಷ್ಣವಲಯಗಳಲ್ಲಿ ಮಾತ್ರ ವಾಸ. ಅಮೇರಿಕಾ, ಏಷ್ಯಾ, ಯೂರೋಪ್‌ಗಳಲ್ಲಿ ಹೆಚ್ಚಾಗಿವೆ. ಅವುಗಳನ್ನು ಪಳಗಿಸಿ ಜಪಾನಿನಲ್ಲಿ ಇತರ ಪಕ್ಷಿಗಳ ಬೇಟೆಗಾಗಿ ಉಪಯೋಗಿಸುತ್ತಿದ್ದರು. ಹಲವು ಪ್ರಭೇದಗಳಲ್ಲಿ ಹೆಣ್ಣು ಗಂಡಿಗಿಂತ ದಪ್ಪ ಗಾತ್ರದವು. ಮರಗಳಲ್ಲಿ ಮೊದಲು ದಪ್ಪ ಕಡ್ಡಿಗಳಿಂದ ಗೂಡು ರಚಿಸಿ ಮಧ್ಯೆ ಗುಳಿಯಲ್ಲಿ ಸಣ್ಣ ಕಡ್ಡಿಗಳನ್ನಿಟ್ಟು. ೩–೫ ಮೊಟ್ಟೆಯಿಡುತ್ತವೆ. ಕಾವು ಕೂರುವುದು ಹೆಣ್ಣು ಮಾತ್ರ. ಗಂಡು ಅದಕ್ಕೆ ಆ ಸಮಯದಲ್ಲಿ ಆಹಾರ ಒದಗಿಸುತ್ತದೆ. ಕಾವು ಕಾಲಾವಧಿ ೪–೫ ವಾರ. ಮರಿಗಳು ೬ ವಾರದಲ್ಲಿ ಪೂರ್ಣ ಬೆಳೆಯುತ್ತವೆ.

ಮಿಶ್ರಜಾತಿಗಳು : ಮೇಲಿನ ಜಾತಿಗಳಿಗೆ ಪೂರ್ಣವಾಗಿ ಹೊಂದಿಕೊಳ್ಳದ ಸುಮಾರು ೯೦ ಪ್ರಭೇದಗಳನ್ನೂ ೨೯ ಜಾತಿಗಳಾಗಿ ಇನ್ನೊಂದು ಉಪಪಂಗಡದಲ್ಲಿ ವಿವರಿಸಲಾಗಿದೆ. ಇವೆಲ್ಲವೂ ಮಿಶ್ರಜಾತಿಗಳು. ಗಿಡುಗದಂತಹ ಪಕ್ಷಿಗಳೂ, ಹಲವು ಹದ್ದುಗಳೂ ಇದಕ್ಕೆ ಸೇರಿವೆ. ಸಾಮಾನ್ಯವಾಗಿ ಎಲ್ಲೆಡೆ ಕಂಡುಬರುವ ಹಲವು ಪ್ರಭೇದಗಳು ನಮಗೆ ಚಿರಪರಿಚಿತವಾಗಿದ್ದು ಈ ಉಪಪಂಗಡಕ್ಕೆ ಸೇರುತ್ತವೆ. ಅಮೇರಿಕಾದ ಕೆಂಪುಬಾಲದ ಹದ್ದು ಅಗಲ ರೆಕ್ಕೆಯ ಗಿಡುಗ ಮುಂತಾದವೂ ಹೆಸರುವಾಸಿಯಾದ "ಸುವರ್ಣ ಗೃಧ್ರ" ಮತ್ತು "ಬೋಳು ತಲೆಯ ಗೃಧ್ರ"ಗಳೂ ಈ ಪಂಗಡದವೇ.

ಮೊಲ ಮುಂತಾದ ಸಣ್ಣ ಸಸ್ತನಿಗಳೂ, ಸರೀಸೃಪಗಳೂ, ದ್ವಿಚರಗಳೂ ಮುಖ್ಯಾಹಾರ. ಇಲಿಗಳ ಮುಖ್ಯ ಶತ್ರುಗಳಿವು.

ಸುವರ್ಣ ಗೃಧ್ರಗಳು ಪ್ರಪಾತಗಳ ಮುಖದಲ್ಲಿನ ಬಡುಗಳಲ್ಲೇ ಹೆಚ್ಚಾಗಿ ಗೂಡು ರಚಿಸುವುದು. ಕೆಲವೇಳೆ ಮರಗಳ ಮೇಲೂ ರಚಿಸುವುವು. ಒಮ್ಮೆ ಗೂಡು ರಚಿಸಿದಲ್ಲಿ ಪ್ರತಿವರ್ಷವೂ ಅದನ್ನೇ ಸರಿಪಡಿಸಿ ಅಥವಾ ವೃದ್ಧಿಗೊಳಿಸಿ ೨ ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯು ಬಿಳುಪು ಬಣ್ಣದ ಮೈಮೇಲೆ ಕಂದು ಬಣ್ಣದ ಚುಕ್ಕೆಗಳಿರುತ್ತವೆ. ಹೆಣ್ಣೇ ಕಾವು ಕೂರುವುದು ಜಾಸ್ತಿ. ಗಂಡು ಯಾವಾಗಲಾದರೂ ಸಹಾಯಕವಾಗುತ್ತದೆ. ಮರಿಗೆ ೧೧ – ೧೨ ವಾರ ಗೂಡುವಾಸ ಬೇಕಾಗುತ್ತದೆ. ಆಹಾರ ಸುಲಭವಾಗಿ ಸಿಗದಿದ್ದಲ್ಲಿ ಕುರಿಮರಿಗಳನ್ನು ತಿನ್ನುತ್ತವೆ. 'ಬೋಳುತಲೆಯವು' ನಿಜವಾಗಿಯೂ ಬೋಳಲ್ಲ. ಬಿಳಿಯ ಸಣ್ಣ ಗರಿಗಳಿದ್ದು ದೂರದಿಂದ ನೋಡಲು ಬೋಳಾಗಿ ಕಾಣುತ್ತದೆ, ಅದರ ಜೀವನವೂ ಮೇಲಿನದರಂತೆಯೇ. ಅವು ದೊಡ್ಡ ಮರಗಳ ಮೇಲೆ ಮಾತ್ರ ಗೂಡು ರಚಿಸುತ್ತವೆ. ಮರಗಳನ್ನು ಹೆಚ್ಚಾಗಿ ಕಡಿಯುವುದೂ, ಡಿ. ಡಿ. ಟಿ. ಮುಂತಾದ ಔಷಧಗಳ ಹೆಚ್ಚು ಬಳಕೆಯೂ ಈ ಜಾತಿಗಳಿಗೆ ಕೆಡಕುಂಟುಮಾಡಿದೆ.

ಬ್ರೆಜಿಲ್ ದಕ್ಷಿಣಕ್ಕಿರುವ ದಪ್ಪದೇಹದ ಶಿಖೆ ಹೊಂದಿರುವ **ಹಾರ್ಪಿ ಗೃಧ್ರ** (Harpee Eagle) ಬಲಿಷ್ಠ ಉಗುರು ಹೊಂದಿ ೩ ಬೆರಳಿನ ಸ್ಲಾತ್‌ಗಳನ್ನೂ, ವಿವಿಧ ಕೋತಿ ಮುಂತಾದುವನ್ನೂ ತಿನ್ನುತ್ತವೆ.

ಡೇಗೆಗಳು: ಇವುಗಳಲ್ಲಿ ೧೭ ಪ್ರಭೇದಗಳಿವೆ. ನೀಳ ಕಾಲಿನ, ಚದುರಬಾಲದಂಚಿನ, ಸ್ವಲ್ಪ ದಪ್ಪ ದುಂಡು ರೆಕ್ಕೆಗಳ ಹಿಂಸ್ರ ಪಕ್ಷಿಗಳು. ಗೂಬೆಯಂತಿರುವ ಮುಖಚರ್ಯೆ. ದಪ್ಪ ಕೆಳಬಾಗಿದ ಮೊನಚು ಕೊಕ್ಕು. ಜೌಗು ಪ್ರದೇಶ ಮತ್ತು ಮೈದಾನಗಳ ಮೇಲೆ ಹಾರಾಡಿ ಸಣ್ಣ ಸಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ಮತ್ತು ಕಪ್ಪೆಗಳನ್ನು ತಿನ್ನುತ್ತವೆ. ಶೀತವಲಯವನ್ನುಳಿದು ಇನ್ನೆಲ್ಲೆಡೆ ಕಂಡುಬರುತ್ತವೆ. ಹೆಣ್ಣು ಗಂಡುಗಳಿಗೆ ತೀಕ್ಷ್ಣ ಬಣ್ಣ ಭೇದವಿದೆ. ಗಂಡು ಬೂದು ಬಣ್ಣ, ಹೆಣ್ಣು ಕಂದು ಬಣ್ಣ.

ಹೆಣ್ಣು ಜೌಗು ಪ್ರದೇಶದ ಹುಲ್ಲುಗಳ ನಡುವೆ ಹುಲ್ಲುಕಡ್ಡಿಗಳ ಗೂಡು ರಚಿಸುತ್ತದೆ. ೩ – ೬ ಮೊಟ್ಟೆಗಳನ್ನಿಟ್ಟು ತಾನೇ ಕಾವು ಕೂರುತ್ತದೆ. ಕಾವು ಕಾಲಾವಧಿ ೪ - ೫ ವಾರ. ಮರಿ ಬಲಿಯಲು ೫ – ೬ ವಾರ ಕಾಲ ಬೇಕಾಗುತ್ತದೆ.

ಹಾವು ಹದ್ದುಗಳು : ಇವು ದಪ್ಪ ಗಾತ್ರದ ಬಲಿತ ರೆಕ್ಕೆಯ ಪಕ್ಷಿಗಳು. ಜೌಗು ಪ್ರದೇಶದಲ್ಲಿ ಸತತವಾಗಿ ಹಾರಾಡುತ್ತಿದ್ದು ಸರೀಸೃಪ ಮತ್ತು ದ್ವಿಚರಗಳನ್ನು ತಿಂದು ಜೀವಿಸುತ್ತವೆ.

ಕುಟುಂಬ ೪ : ಪಾಂಡಿಯೋನಿಡೀ (Pandionidae)

(ಕಡಲ ಹದ್ದು ಅಥವಾ ಕಡಲ ಡೇಗೆಗಳು)

ನ್ಯೂಜಿಲೆಂಡ್ ಒಂದನ್ನು ಬಿಟ್ಟು ಇತರ ಎಲ್ಲಕಡೆ ಸಮುದ್ರ ತೀರಪ್ರದೇಶ, ನದಿ, ಸರೋವರ ದಡಗಳ ಬಳಿ ವಾಸಿಸುವ ಪಕ್ಷಿಗಳಿವು. ಆಕಾರದಲ್ಲಿ ದೊಡ್ಡ ಗಿಡುಗಗಳಂತಿರು

ತ್ತವೆ. ೧ ೧/೨ – ೨ ಅಡಿ ಎತ್ತರವಿದ್ದು, ಅಗಲವಾದ ನೀಳ ರೆಕ್ಕೆ ಹೊಂದಿರುತ್ತವೆ. ಹೆಣ್ಣು ಗಾತ್ರದಲ್ಲಿ ಸ್ವಲ್ಪ ಸಣ್ಣ. ತೊಡೆ ಪೂರ್ಣ ದಪ್ಪವಾಗಿ ಗರಿಗಳಿಂದಾವೃತವಾಗಿರುತ್ತವೆ. ಕಾಲು ಮಾತ್ರ ನಗ್ನ. ನಾಲ್ಕು ಬೆರಳುಗಳೂ ಒಂದೇ ಉದ್ದವಿರುತ್ತವೆ. ಮೂರನೆಯ ಬೆರಳನ್ನು ಹಿಂದುಮುಂದು ತಿರುವಬಹುದು. ಇದರಿಂದ ಆಹಾರವನ್ನು ಮುಂದಿನ ಎರಡು ಮತ್ತು ಹಿಂದಿನ ಎರಡು ಬೆರಳುಗಳಿಂದ ಹಿಡಿಯಬಹುದು. ಉಗುರು ನೀಳವಾಗಿ ಒಳಬಾಗಿರುತ್ತದೆ. ಪಾದದಡಿ ಮೆತ್ತೆಯಲ್ಲಿ ಸಣ್ಣ ಮುಳ್ಳುಗಳಂತಿದ್ದು, ಮೀನು ಜಾರದಂತೆ ಹಿಡಿಯಲು ಸಹಾಯಕವಾಗಿದೆ.

ಜೀವಂತವಾದ ಮೀನೇ ಇವುಗಳಿಗೆ ಮುಖ್ಯಾಹಾರ. ನೀರಿನ ಮೇಲೆ ೫೦ರಿಂದ ೨೦೦ ಅಡಿ ಎತ್ತರದಲ್ಲಿ ಹಾರಾಡುತ್ತಿದ್ದು, ಆಹಾರ ಕಂಡೊಡನೇ ಕಾಲು ತಳವಾಗಿ ಎರಗಿ ಹಿಡಿಯುತ್ತದೆ. ಪಕ್ಷಿ ಪೂರ್ಣ ನೀರಿನಲ್ಲಿ ಮುಳುಗಲೂಬಹುದು. ನೀರನ್ನು ಕೊಡವಿ ಮೀನಿನೊಡನೆ ಪಕ್ಕದ ಬಂಡೆ ಅಥವಾ ಮರಗಳ ಮೇಲೆ ಕುಳಿತು ತಿನ್ನುತ್ತವೆ. ಹಲವು ಸಮಯ ಇದನ್ನು ಹೆದರಿಸಿ 'ಬೋಳು ತಲೆಯ ಹದ್ದು' ಮೀನನ್ನು ಕಿತ್ತುಕೊಳ್ಳುವುದುಂಟು. ಕೊಳೆತ ಮೀನನ್ನು ಎಂದಿಗೂ ತಿನ್ನುವುದಿಲ್ಲ.

ಎತ್ತರದ ಮರ ಅಥವಾ ಕೆಲಸಮಯ ತಂತಿಕಂಬಗಳ ಮೇಲೆ ಬಹುದೊಡ್ಡ ಗಾತ್ರದ ಗೂಡು ರಚಿಸುತ್ತವೆ. ೪ – ೫ ಅಡಿ ಉದ್ದದ ಕಡ್ಡಿಗಳನ್ನು ಉಪಯೋಗಿಸಬಲ್ಲವು. ಅದರ ಮಧ್ಯೆ ಸಮುದ್ರ ಸಸ್ಯ ಮತ್ತಿತರ ಸಸ್ಯಗಳಿಂದ ಮೆತ್ತೆ ತಯಾರಿಸಿ ೨ ಮೊಟ್ಟೆಗಳನ್ನಿಡುತ್ತವೆ. ಒಮ್ಮೆ ರಚಿಸಿದ ಗೂಡು ವರ್ಷೇವರ್ಷೆ ಉಪಯುಕ್ತವಾಗುತ್ತದೆ. ಬಿಳೀ ಮೊಟ್ಟೆಗಳ ಮೇಲೆ ಕೆಂಪು, ಕಂದು ಮತ್ತು ಬೂದು ಚುಕ್ಕೆಗಳಿರುತ್ತವೆ. ಹೆಣ್ಣೇ ಕಾವು ಕೂರುವುದು. ಕಾವಿನ ಅವಧಿ ೫ – ೬ ವಾರ.

ಫ್ರಿಗೇಟ್ ಪಕ್ಷಿ (Frigate), ಬೋಳುತಲೆಯ ಗೃಧ್ರ ಮುಂತಾದುವು ಅವನ್ನು ಹೆದರಿಸಿ ಆಹಾರ ಕಸಿದುಕೊಳ್ಳುತ್ತವೆಯೋ ಹೊರತು ತೊಂದರೆ ಮಾಡುವುದಿಲ್ಲ. ಅದಕ್ಕೆ ಮುಖ್ಯ ಶತ್ರು ಮನುಷ್ಯರೇ. ಈಗ ಅದನ್ನು ಅಲ್ಲಲ್ಲಿ ರಕ್ಷಣೆಗೆ ಒಳಪಡಿಸಲಾಗಿದೆ.

ಕುಟುಂಬ ೫ : ಫಾಲ್‌ಕೋನಿಡೀ (Falconidae)
(ಶ್ಯೇನಗಳು)

ಈ ಕುಟುಂಬದಲ್ಲಿ **ಶ್ಯೇನ** ಪ್ರಭೇದಗಳು ಸೇರುತ್ತದೆ. ಶ್ಯೇನಗಳ (ಫಾಲ್‌ಕನ್, ಗಿರ್ ಫಾಲ್‌ಕನ್) ಎರಡು ಪಂಗಡಗಳೂ ಮತ್ತು **ಕರಾಕಸ್** ಪ್ರಭೇದಗಳೂ ಇದಕ್ಕೆ ಸೇರಿವೆ. ಗಾತ್ರ ೬ ೧/೨ ಅಂಗುಲದಿಂದ ೨ ಅಡಿಯವರೆಗಿರಬಹುದು. 'ಕರಾಕಸ್'ಗಳು ನಿಧಾನ ಚಲನದವು. ಶ್ಯೇನಗಳು ಚುರುಕು ಚಲನವುಳ್ಳವು. ಇವುಗಳಿಗೆ ತೊಡೆಯ ಮೇಲೆ ಸಡಿಲವಾದ ಗರಿ ಜೋಡಣೆಯಿದ್ದು ಅಲ್ಲಲ್ಲಿ ಸಿಕ್ಕಿಸಿದಂತಿರುತ್ತವೆ. ರೆಕ್ಕೆ ನೀಳ

ವಾಗಿ ಕೊನೆ ಕೋನಾಕಾರವಾಗಿರುತ್ತದೆ, ಮೇಲು ಕೊಕ್ಕಿನಲ್ಲಿ ಸಾಮಾನ್ಯವಾಗಿ ಒಂದು ಕಟ್ಟು ಇರುತ್ತದೆ. ಇದರಲ್ಲಿ ಒಟ್ಟು ೫೮ ಪ್ರಭೇದಗಳನ್ನು ವಿವರಿಸಲಾಗಿದೆ.

ದ. ಅಮೇರಿಕಾದ 'ಕರಾಕಸ್'ಗಳೂ ಹದ್ದಿನಂತಿರುವ ಚುರುಕು ಪಕ್ಷಿಗಳು. ತಲೆಯ ಮೇಲೆ ಕಪ್ಪು ಟೊಪ್ಪಿಗೆಯಿರುವ ಕೆಂಪು ಮೂತಿಯು ಪ್ರಭೇದ ಇದು. ಮೆಕ್ಸಿಕೋ ದೇಶದ ರಾಷ್ಟ್ರ ಪಕ್ಷಿ. ಈ ಪಂಗಡದಲ್ಲಿ ಒಟ್ಟು ೯ ಪ್ರಭೇದಗಳಿವೆ. ಗಟ್ಟಿಯಾದ ನೀಳ ಕಾಲುಗಳಿವೆ. ವೇಗವಾಗಿ ಚಲಿಸಲು ಇದು ಸಹಾಯಕ, ಮೃತ ದೇಹದ ಬಳಿ ಇರುವ ದೊಡ್ಡ ಹದ್ದುಗಳನ್ನು ಓಡಿಸಿ ಆಹಾರ ಹೊಂಚಿಕೊಳ್ಳ ಬಲ್ಲವು. ಸಾಮಾನ್ಯವಾಗಿ ಜಲಗಾರರೇ. ಮರದಲ್ಲೇ ಗೂಡು ರಚನೆ. ೨ ಮೊಟ್ಟೆಗೆ ೪ – ೫ ವಾರ ಅವಧಿ. ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ.

ಶ್ಯೇನಗಳಲ್ಲಿ (ಫಾಲ್‌ಕನ್) ಹಲವು ಹಿಂದುಳಿದ ಪ್ರಭೇದಗಳು ದ. ಅಮೇರಿಕಾ ದಲ್ಲಿ ಕಂಡುಬರುತ್ತವೆ. ಸರೀಸೃಪಗಳೇ ಮುಖ್ಯಾಹಾರವಾಗಿ ಕಾಡು, ಹುಲ್ಲುಗಾವಲ ಬಳಿ ವಾಸಿಸುತ್ತವೆ. ಆಫ್ರಿಕಾ, ಅಮೇರಿಕಾ, ಮಲಯಾಗಳಲ್ಲಿ ಗಿಡ್ಡ ಜಾತಿಯ ಹಲವು ಪ್ರಭೇದಗಳಿವೆ. ೬ – ೬ ೧/೨ ಅಂಗುಲ ಉದ್ದ ಮಾತ್ರ. ಕೀಟ ಸಣ್ಣ ಸರೀಸೃಪ ಮುಂತಾದುವು ಇವುಗಳ ಆಹಾರ. ಇವುಗಳಲ್ಲಿ ದಪ್ಪಗಾತ್ರದವು ಶೀತವಲಯದ ಬಿಳಿಯ ಗಿರ್‌ಫಾಲ್‌ಕನ್‌ಗಳು (Girfalcan).

ನಿಜ ಶ್ಯೇನ ಪಂಗಡಕ್ಕೆ ಸುಮಾರು ೩೫ ಪ್ರಭೇದಗಳು ಸೇರಿರುತ್ತವೆ. **ಪೆರಿಗ್ರ್ಯಾನ್ ಶ್ಯೇನ** ಬಹುಕಾಲದಿಂದಲೂ ಬೇಟೆಗಾಗಿ ಉಪಯುಕ್ತ ಪಕ್ಷಿ. ಪ್ರಪಂಚದ ಬಹುಭಾಗ ದಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಶ್ಯೇನಗಳು ಉತ್ತಮ ಬೇಟೆಗಾರರು. ತಮ್ಮ ಗುರಿಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯುತ್ತವೆ. ಎರಗುವಿಕೆಯ ವೇಗ ಗಂಟೆಗೆ ೧೭೫ ಮೈಲಿಯಷ್ಟಿರಬಹುದು. ತನ್ನ ಬಲಿಷ್ಠ ಕಾಲಿನ ಒಂದೇ ಹೊಡೆತದಿಂದ ಪಕ್ಷಿಗಳನ್ನು ಸಾಯಿಸಿ ಅಥವಾ ಬೀಳಿಸಿ ನಂತರ ಕೆಳಗಿಳಿದು ಕುಕ್ಕಿ ತಿನ್ನುತ್ತದೆ.

ಪೂರ್ವದಲ್ಲಿ ಅವುಗಳ ಬಳಕೆ ಹಣವಂತರಲ್ಲಿ ಮತ್ತು ರಾಜಮನೆತನಗಳಲ್ಲಿ ಒಂದು ಮುಖ್ಯ ವಿಚಾರವಾಗಿತ್ತು. ಹಲವು ಉತ್ತಮ ಜಾತಿಗಳನ್ನು ಸಾಕಿ ಬೇಟೆಗಾಗಿ ಉಪ ಯೋಗಿಸುತ್ತಿದ್ದರು. ಪಕ್ಷಿಗಳಿಗೆ ವಿಿತವರ್ಣಗಳ ಟೊಪ್ಪಿಗೆ, ಕತ್ತುಪಟ್ಟಿ, ಕಾಲುಚೀಲ ಮುಂತಾದುವನ್ನು ಬಳಸುತ್ತಿದ್ದರು. ಈ ವಸ್ತುಗಳ ಬಣ್ಣ ಅದರ ಅಂತಸ್ತು ಸೂಚಕ, ಎಷ್ಟರಮಟ್ಟಿಗೆ ಅದು ಬೇಟೆಯಲ್ಲಿ ನುರಿತಿರುತ್ತಿತ್ತೊ ಅಷ್ಟರ ಮಟ್ಟಿಗೆ ಅದಕ್ಕೆ ಹೆಚ್ಚಿನ ಅಂತಸ್ತು. ತನಗಿಂತ ಅತಿ ದೊಡ್ಡದಾದ ಕೊಕ್ಕರೆ ಜಾತಿಯನ್ನು ಕೊಂದಿದ್ದಲ್ಲಿ ಮಾತ್ರ ಜಪಾನಿನಲ್ಲಿ ಹೆಚ್ಚು ಅಂತಸ್ತು ಕೊಡಲಾಗುತ್ತಿತ್ತು. ಈ ಬೇಟೆ ನಿರ್ವಹಣೆಗೆ ಹೆಚ್ಚು ಖರ್ಚಾಗುತ್ತಿದ್ದುದರಿಂದ ರಾಜಮನೆತನಗಳಲ್ಲಿ ಮಾತ್ರ ಇತ್ತೀಚಿನವರೆಗೂ ಈ ಕ್ರೀಡೆ ಬಳಕೆಯಲ್ಲಿತ್ತು.

ಅವುಗಳ ಮುಖ್ಯಾಹಾರ ಇಲಿ ಮತ್ತು ಸರೀಸೃಪಗಳು. ಆದ್ದರಿಂದ ಉಪಯುಕ್ತ ಪಕ್ಷಿ. ಅವು ಗೂಡು ರಚಿಸುವುದಿಲ್ಲ. ನೆಲದ ಮೇಲೆ ಅಥವಾ ಕಲ್ಲು ಪ್ರಪಾತ ಬಡು

ಗಳಲ್ಲಿ ೨ – ೪ ಮೊಟ್ಟೆಯಿಡುತ್ತವೆ. ಒಂದು ಪ್ರಭೇದದವು ಮರ ಪೊಟರೆಗಳಲ್ಲಿ ಮೊಟ್ಟೆ ಯಿಡುತ್ತವೆ. ಕಾವು ಕಾಲಾವಧಿ ೪ ವಾರ. ಹೆಣ್ಣು ಕಾವು ಕೊಡುವುದು. ಕೆಲ ಸಮಯ ಅದು ಮೇಯಲು ಹೋದಾಗ ಗಂಡು ಅದರ ಕೆಲಸ ಮಾಡುತ್ತದೆ.

ಉಪವರ್ಗ ೧೪ : ಗ್ಯಾಲಿಫಾರ್‌ಮಿಸ್ (Galliformes)

(ಕೋಳಿ ಮುಂತಾದ ಪಕ್ಷಿಗಳು)

ಕುಟುಂಬ ೬

ಪ್ರಭೇದ ೨೪೦

ಕೋಳಿ ಜಾತಿ ಪಕ್ಷಿಗಳಿವು. ಎಲ್ಲವೂ ನೆಲದ ಮೇಲೆಯೇ ಓಡಾಡಿ ಆಹಾರ ಹೊಂದುವುವು. ದಪ್ಪನೆಯ ಮೊನಚು ಕೊಕ್ಕು ಗಿಡ್ಡವಾಗಿ ಕೆಳಬಾಗಿದಂತಿರುತ್ತದೆ. ಕಾಲುದಪ್ಪ. ಓಡಾಡಲು ಇದರಿಂದ ಅನುಕೂಲ. ಹಿಂದಿನ ಕೊನೆಯ ಬೆರಳು ಸಣ್ಣ. ಸ್ವಲ್ಪ ದೂರ ವೇಗವಾಗಿ ಹಾರಾಡಬಲ್ಲವು. ಆದರೆ ಈಜಲಾರವು. ೪ ಪ್ರಭೇದಗಳು ಮಾತ್ರ ವಲಸೆ ಹೋಗುತ್ತವೆ. ಉಳಿದವೆಲ್ಲಾ ನೆಲವಾಸಿಗಳೇ. ಅಂಟಾರ್ಟಿಕ್ ಖಂಡ ವನ್ನುಳಿದು ಇತರ ಎಲ್ಲೆಡೆ ಕಂಡುಬರುತ್ತವೆ.

ಈ ಉಪವರ್ಗ ಮೊದಲಿನಿಂದಲೂ ಮಾನವನಿಗೆ ಆಹಾರಕ್ಕಾಗಿ ಉಪಯುಕ್ತ ವಾಗಿರುವುದರಿಂದ ಅವುಗಳ ಹೆಚ್ಚಿನ ವೃದ್ಧಿಗೆ ಕಾರಣವಾಗಿದೆ. ಅವುಗಳ ಮಾಂಸ ಅತ್ಯಂತ ರುಚಿಕರ. ಮೊಟ್ಟೆ ಉಪಯುಕ್ತ. ಇದರಿಂದ ಸ್ಥಳಕ್ಕೆ, ವಾತಾವರಣಕ್ಕೆ ಮತ್ತು ಅನುಕೂಲಕ್ಕೆ ತಕ್ಕಂತೆ ಅನೇಕ ತಳಿಗಳನ್ನು ಉತ್ಪನ್ನಮಾಡಲಾಗಿದೆ. ಅಲ್ಲದೆ ಹಲವು ನಯನಮೋಹಕ ಸುಂದರ ಪಕ್ಷಿಗಳು. ಅದಕ್ಕಾಗಿಯೂ ಹಲವನ್ನು ಪಳಗಿಸಿ ಸಾಕ ಲಾಗುತ್ತದೆ.

ಕುಟುಂಬ ೧ : ಮೆಗಪೋಡಿಡೀ (Megapodiidae)

(ದಿಬ್ಬ ರಚಿಸುವ ಪಕ್ಷಿಗಳು)

ಸರೀಸೃಪಗಳಂತೆ ತಮ್ಮ ಮೊಟ್ಟೆಗೆ ತಾವು ಕಾವು ಕೊಡದೆ ಮರಿ ಮಾಡುವ ಅಪೂರ್ವ ಪಕ್ಷಿ ಕುಟುಂಬವಿದು. ಆಸ್ಟ್ರೇಲಿಯಾ, ಮಲಯಾಗಳಲ್ಲಿ ಮಾತ್ರ ವಾಸಿಸುವ ೧೦ ಪ್ರಭೇದಗಳನ್ನೊಳಗೊಂಡಿದೆ. ಗಾತ್ರದಲ್ಲಿ ಸಾಮಾನ್ಯ ಕೋಳಿಯಂತಿರುತ್ತವೆ. ಬಲು ದೊಡ್ಡದಾದರೂ ಹುಂಜದ ಗಾತ್ರ ಮೀರುವುದಿಲ್ಲ.

ತಲೆ ಪೂರ್ಣ ಬೋಳಾಗಿ ಅಥವಾ ಶಿಖೆ ಹೊಂದಿರಬಹುದು ಅಥವಾ ಸಾಮಾನ್ಯ ವಾಗಿರಬಹುದು. ದಪ್ಪನೆಯ ಕಾಲು, ನೀಳ ಬೆರಳುಗಳು ಸಾಮಾನ್ಯ. ಭೂಮಿಯ ಮೇಲಿರುವುದಾದರೂ, ಹೆದರಿದಾಗ ಪಕ್ಕದ ಮರಗಳ ಕೊಂಬೆಗಳಿಗೆ ಹಾರಿ ಕುಳಿತು ಕೊಳ್ಳುತ್ತವೆ. ಬಣ್ಣ ವೈವಿಧ್ಯತೆ ಇಲ್ಲ. ಗಂಡು ಸ್ವಲ್ಪ ದಪ್ಪಗಾತ್ರ. ಕೆರೆ, ನದಿ ಅಥವಾ ಸಮುದ್ರದಂಚಿನ ದಟ್ಟ ಕಾಡುಗಳಲ್ಲಿ ವಾಸಿಸುತ್ತವೆ.

ತಮ್ಮ ಕಾಲಿನಿಂದ ನೆಲದ ಮೇಲಿನ ಎಲೆಗಳನ್ನು ಕೆರೆದು ಹಿಂದೆ ನೂಕಿ ಶೇಖರಿಸಿ ಗುಡ್ಡೆ ಮಾಡುತ್ತವೆ. ಈ ದಿಬ್ಬ ಸುಮಾರು ೨೦ ಅಡಿ ಅಗಲ ೫ – ೭ ಅಡಿ ಎತ್ತರವಿರಬಹುದು. ಇದಕ್ಕಾಗಿ ಬಹುದೂರದಿಂದಲೂ ಎಲೆಗಳನ್ನು ಗುಡಿಸಿದಂತೆ ಕಾಲಿನಿಂದ ತಳ್ಳಿ ತರುತ್ತದೆ. ಹಲವು ಪ್ರಭೇದಗಳಲ್ಲಿ ಒಂದೇ ಜೊತೆ ಇಂತಹ ಗೂಡನ್ನು ರಚಿಸುತ್ತವೆ. ಕೆಲವು ವಿಧಗಳಲ್ಲಿ ಹಲವು ಸೇರಿ ಗುಂಪಾಗಿ ಅಂತಹ ಗೂಡು ರಚಿಸುತ್ತವೆ. ಹೀಗೆ ಶೇಖರಿಸಿದ ಎಲೆ – ಸಸ್ಯ ಕೊಳೆಯಲು ಪ್ರಾರಂಭವಾಗಿ ಒಳಗೆ ಶಾಖವಿರುವಾಗ ಗೂಡು ಸಿದ್ಧವಾಗುತ್ತದೆ. ಹೆಣ್ಣು ದಿಬ್ಬದ ಮೇಲೇರಿ ೨ – ೩ ಅಡಿ ಆಳದ ಹಳ್ಳ ಕೊರೆದು ಒಂದು ಮೊಟ್ಟೆಯಿಟ್ಟು ಮುಚ್ಚುತ್ತದೆ. ಮಾರನೆಯ ದಿನವೂ ಹೀಗೆಯೇ ಇನ್ನೊಂದು ಹಳ್ಳ ಕೊರೆದು ಮೊಟ್ಟೆಯಿಟ್ಟು ಮುಚ್ಚುವುದು. ಪ್ರತಿ ಹೆಣ್ಣು ೫ - ೮ ಮೊಟ್ಟೆಗಳನ್ನಿಡಬಲ್ಲವು.

ಹೆಣ್ಣು ಗಂಡುಗಳೆರಡೂ ಪಕ್ಕದಲ್ಲಿಯೇ ವಾಸಿಸುತ್ತಿದ್ದು ಆಗಾಗ ಗುಳಿತೋಡಿ ಮೊಟ್ಟೆಗಳ ಬಳಿಯ ಕಾವು ಸರಿಯಾಗಿದೆಯೇ ಎಂದು ಪರೀಕ್ಷಿಸುತ್ತವೆ. ಅವುಗಳ ಕೊಕ್ಕೇ ಉಷ್ಣಮಾಪಕವಾಗಿ ಸಹಾಯಕ. ಹೆಚ್ಚಿದಲ್ಲಿ ಗಾಳಿಯಾಡಲು ಏರ್ಪಡಿಸಿ ಕಡಮೆ ಮಾಡುತ್ತದೆ. ಕಡಮೆಯಿದ್ದಲ್ಲಿ ಮರಳಿನಿಂದ ಎಲೆಗಳನ್ನು ಮುಚ್ಚಿ ಹೆಚ್ಚು ಶಾಖವೇರ್ಪಡಿಸುತ್ತವೆ.

ಕಾವು ಕಾಲಾವಧಿ ೮ – ೧೦ ವಾರ. ಮರಿ ಹೊರಬಂದಾಗ ಪೂರ್ಣ ಗರಿಬೆಳೆದು ದಾರಿ ತೋಡಿ ಹೊರಬಿದ್ದು ಹೋಗುತ್ತದೆ. ತಂದೆ ತಾಯಿಗಳ ಸಹಾಯವೇ ಅದಕ್ಕಿರುವುದಿಲ್ಲ.

ಆಸ್ಟ್ರೇಲಿಯಾದ "ಮಾಲಿ ಕೋಳಿ" ಮಳೆ ಕಡಮೆಯಿರುವ ಪೊದರುಭೂಮಿಯಲ್ಲಿ ಗೂಡು ರಚಿಸುತ್ತವೆ. ಪೂರ್ಣ ನೆಲದ ಮೇಲಿದ್ದಲ್ಲಿ ತೇವ ಸಾಲದೆ ಒಣಗ ಬಹುದಾದ್ದರಿಂದ ೧೦ – ೧೪ ಅಡಿ ಅಗಲದ ೨–೩ ಅಡಿ ಆಳದ ಗುಳಿ ತೋಡಿ ಎಲೆ ಸಸ್ಯಗಳನ್ನು ತುಂಬಿ ನೆಲದ ಮಟ್ಟಕ್ಕೆ ೨ - ೩ ಅಡಿ ಎತ್ತರದವರೆಗೂ ಶೇಖರಿಸುತ್ತವೆ. ಮಳೆ ಬಿದ್ದು, ನೀರು ಸೇರಿ ಶಾಖ ಹೆಚ್ಚಾದದ್ದೇ ಮೊಟ್ಟೆಯಿಡಲು ಪ್ರಾರಂಭಿಸಿ, ಮರಳನ್ನು ಹೆಚ್ಚು ಹೆಚ್ಚಾಗಿ ಮೇಲೆ ಹರಡಿ ಶಾಖ ಕಡಮೆಯಾಗದಂತೆ ಎಚ್ಚರಿಕೆ ವಹಿಸುತ್ತವೆ. ಈ ಪ್ರಭೇದದಲ್ಲಿ ಗಂಡು ಮಾತ್ರ ಗೂಡಿನ ರಕ್ಷಕ. ಹೆಣ್ಣು ಅಲ್ಲಿರುವುದಿಲ್ಲ.

ಸೆಲಿಬಿಸ್ ದ್ವೀಪದ "ಮಾಲಿಯೋ ಕೋಳಿ" ಅಗ್ನಿಪರ್ವತದ ಬಳಿಯ ಬಿಸಿನೀರಿನ ಬುಗ್ಗೆಗಳ ಬಳಿ ಮೊಟ್ಟೆಯಿಟ್ಟು ಅದರ ಕಾವಿನಿಂದ ಮರಿಯಾಗುವಂತೆ ಏರ್ಪಡಿಸುತ್ತದೆ. ಆಸ್ಟ್ರೇಲಿಯಾದ "ಪೊದರು ಟರ್ಕಿ" ೫೦ ಅಡಿ ಅಗಲ, ೮ – ೧೦ ಅಡಿ ಎತ್ತರದ ಪ್ರಪಂಚದಲ್ಲಿ ಅತ್ಯಂತ ದೊಡ್ಡ ದಿಬ್ಬ ಗೂಡು ರಚಿಸುತ್ತವೆ.

ದಿಬ್ಬ ಒಮ್ಮೆ ರಚಿತವಾದರೆ ವರ್ಷಂಪ್ರತಿ ಅದನ್ನೇ ಸರಿಪಡಿಸಿ ಉಪಯೋಗಿಸುತ್ತವೆ. ಸಾಕಷ್ಟು ಎಲೆಗಳನ್ನು ಶೇಖರಿಸುವುದು ಮಾತ್ರ ಸಾಮಾನ್ಯ. ಆದರೆ ಮಾಲೀ ಕೋಳಿಗಳು ಪ್ರತಿವರ್ಷವೂ ಹೊಸ ಗೂಡನ್ನೇ ರಚಿಸುತ್ತವೆ.

ಕುಟುಂಬ ೨ : ಕ್ರಾಸಿಡೀ (Cracidae)

೧೧/೨ ಅಡಿಯಿಂದ ೩ ೧/೨ ಅಡಿ ಎತ್ತರದ ಈ ಪಕ್ಷಿಗಳ ೩೫ ಪ್ರಭೇದಗಳು ಮೆಕ್ಸಿಕೋದಿಂದ ದಕ್ಷಿಣ ಅಮೇರಿಕಾದ ಮಧ್ಯಭಾಗದವರೆಗೆ ಕಂಡುಬರುತ್ತವೆ. ಅವೆಲ್ಲವೂ ತಮಗೆ ಬೇಕಾದ ಕಾಳು, ಕೀಟ, ಹುಳು, ಹಣ್ಣುಗಳನ್ನು ನೆಲದಮೇಲೆಯೇ ಹುಡುಕಿ ಪಡೆದರೂ ರಾತ್ರಿಕಾಲದಲ್ಲಿ ಮರದ ಮೇಲೆ ಕುಳಿತು ವಿಶ್ರಮಿಸುತ್ತವೆ. ಅಲ್ಲದೆ ಎಲ್ಲವೂ ಮರದಲ್ಲೇ ಗೂಡು ಕಟ್ಟುತ್ತವೆ. ಅವುಗಳ ಕಾಲು ಸಣ್ಣ. ಆದರೆ ಹಿಂಬೆರಳು ನೀಳವಾಗಿ ಕೊಂಬೆ ಹಿಡಿಯಲು ಸಹಾಯಕ. ೨ – ೩ ಮೊಟ್ಟೆ ಮಾತ್ರ. ಮೊಟ್ಟೆ ಬಹಳ ದಪ್ಪವಾಗಿದ್ದು ಚಿಪ್ಪು ಒರಟಾಗಿರುತ್ತದೆ.

ಕುರಾಸೋರ್(Curassor) ಗಳು ದಪ್ಪಗಾತ್ರದ ಸುಂದರ ಪಕ್ಷಿಗಳು. ವಿವಿಧ ಬಣ್ಣದ ಕೊಕ್ಕು ಶಿಖೆಯಲ್ಲಿ ಸುರುಳಿ ಸುತ್ತಿದಂತಿರುವ ನೀಳಗರಿ ಮತ್ತು ಕೆಲಸಮಯ ಕೊಕ್ಕಿನ ಬುಡದಲ್ಲಿ ದಪ್ಪ ಬೆಳವಣಿಗೆ ಹೊಂದಿರುತ್ತವೆ. ಗಂಡು ಕಪ್ಪುಬಣ್ಣ. ಹೊಟ್ಟೆ ಬಿಳುಪಾಗಿರಬಹುದು. ಹೆಣ್ಣು ಹಸುರು ಬಣ್ಣವಿರುತ್ತವೆ.

ಗುವಾನ್ (Guvana) ಪಕ್ಷಿಗಳು ಸಣ್ಣಗಾತ್ರದವು. ಕಂದು, ಕಪ್ಪು, ಬೂದು ಬಣ್ಣವಿರುತ್ತವೆ. ತಲೆಯ ಮೇಲೆ ಬಿಳಿಯ ಶಿಖೆಯಿರಬಹುದು. ಮರದ ಮೇಲೆಯೇ ವಾಸ. ಹಣ್ಣು ಮುಖ್ಯಾಹಾರ. ಸಂಘಜೀವಿಗಳು. ಹೆಚ್ಚಿನ ಸಂಖ್ಯೆಯಲ್ಲಿ ಗುಂಪು ಕೂಡಿರುತ್ತವೆ.

ಚಚಾಲಕಾ (Chachalaka)ಗಳು ೨ ಅಡಿಗೂ ಸಣ್ಣದಾದ ಪಕ್ಷಿಗಳು. ನೀಳ ಬಾಲದ ಕಂದು, ಅಥವಾ ಹಸುರು ಮಿಶ್ರಿತ ಬಣ್ಣದವು. ಕಾಡಿನಂಚಿನ ಮರಗಳಲ್ಲಿ ವಾಸ. ಹಣ್ಣು ಮುಖ್ಯಾಹಾರ. ಕಣ್ಣಿನ ಬಳಿ ಅಚ್ಚ ಕೆಂಪು ಪಟ್ಟೆಯೊಂದಿರಬಹುದು. ಗುಂಪಾಗಿದ್ದು, ಹೆಚ್ಚಿನ ಶಬ್ದ ಮಾಡುತ್ತಿರುತ್ತವೆ.

ಕುಟುಂಬ ೩ : ಟೆಟ್ರಾವೋನಿಡೀ (Tetraonidae)
(ಗ್ರೌಸ್‌ಗಳು)

ಉತ್ತರ ವಲಯದ ಸಮಶೀತೋಷ್ಣವಲಯದಲ್ಲಿನ ಬೇಟೆ ಪಕ್ಷಿಗಳ ೧೮ ಪ್ರಭೇದಗಳು ಈ ಕುಟುಂಬ. ಈ ಉಪವರ್ಗದಲ್ಲಿನ ಪಕ್ಷಿಗಳಲ್ಲಿ ಇವುಗಳಿಗೆ ಮಾತ್ರ ಪೂರ್ಣ ಹಿಮ್ಮಡಿ ಮತ್ತು ಬಹುಭಾಗ ಪಾದ, ಗರಿಗಳಿಂದ ಕೂಡಿರುತ್ತವೆ. ತಳಬಾಗಿದ ಕೊಕ್ಕು ಬಹು ಗಿಡ್ಡವಾಗಿರುತ್ತದೆ. ಹೊಳ್ಳೆಗಳೂ ಗರಿಗಳಿಂದಾವೃತವಾಗಿರಬಹುದು. ಚಳಿಗಾಲದಲ್ಲಿ ಹಲವು ಪ್ರಭೇದಗಳ ಕಾಲ್ಬೆರಳುಗಳ ಎರಡು ಕಡೆಗಳಲ್ಲೂ ಬಾಚಣಿಗೆ ಯಂತಹ ಬೆಳವಣಿಗೆಯಾಗುತ್ತದೆ. ಬೇಸಿಗೆಯಲ್ಲಿ ಉದುರುತ್ತವೆ. ಅದರ ಕತ್ತು ಗಿಡ್ಡ, ಕತ್ತಿನ ಬಳಿ ದಪ್ಪವಾಗಬಲ್ಲ ಗಾಳಿ ಪೊರೆಯಿರಬಹುದು. ಅಥವಾ ನೇರವಾಗಿ ನಿಲ್ಲಬಲ್ಲ ಗರಿಗಳಿರುತ್ತವೆ. ಕಣ್ಣಿನ ಮೇಲೆ ವಿವಿಧ ವರ್ಣದ ಮಚ್ಚೆಯಿರಬಹುದು.

ಯೂರೋಪ್ ಮತ್ತು ಏಷ್ಯಾದ ಸಮಶೀತೋಷ್ಣ ವಲಯದಲ್ಲಿನ **ಕಾಪರ್ ಕೈಲೀ** (Copperkyli) ಈ ಕುಟುಂಬದ ದಪ್ಪ ಪಕ್ಷಿಗಳು. ಗಂಡು ಅಚ್ಚ ಕಪ್ಪು. ಬಾಲ ಪಂಕದಂತೆ ಪರ್ವಕಾಲದ ತೋರ್ಪಿಗೆ ಅನುಕೂಲವಾಗಿದೆ. ಅತ್ಯುತ್ತಮ ಮಾಂಸವಾದ್ದರಿಂದ ಅಧಿಕ ಸಂಖ್ಯೆಯಲ್ಲಿ ಬೇಟೆಗೀಡಾಗುತ್ತಿವೆ. ಸೈಬೀರಿಯಾದಲ್ಲಿ ಮಾತ್ರ ಈಗ ಹೆಚ್ಚಾಗಿ ಉಳಿದಿವೆ. ಇವು ಒಂಟಿ ಜೀವಿಗಳು. ಪ್ರತಿ ಗಂಡೂ ೨ – ೧೦ ಹೆಣ್ಣುಗಳನ್ನು ಹೊಂದುತ್ತವೆ. ತಮ್ಮ ಸ್ಥಳದಲ್ಲೇ ಪ್ರತಿವರ್ಷ ಪರ್ವಕಾಲದಲ್ಲಿ ಸೇರುತ್ತವೆ. ಆಗ ಗಂಡು ಮರದ ಮೇಲೆ ಕುಳಿತು ಸತತ ಕೂಗುತ್ತಾ ಇರುತ್ತದೆ. ಮರದಡಿ ಕೆರೆದು ಹೆಣ್ಣು ೫ – ೮ ಮೊಟ್ಟೆಯಿಡುತ್ತದೆ. ಹೆಣ್ಣು ಮಾತ್ರವೇ ಕಾವಿಗೆ ಕೂರುವುದು. ಅವಧಿ ಸುಮಾರು ೧ ತಿಂಗಳು.

ಅದೇ ಪ್ರದೇಶದಲ್ಲಿನ "ಕಪ್ಪು ಗ್ರೌಸ್"ಗಳೂ ಹೀಗೆಯೇ ವರ್ತಿಸುತ್ತವೆ. ಇವು ಸ್ವಲ್ಪ ಮೈದಾನ ಹಾಗೂ ಜೌಗು ಪ್ರದೇಶದಲ್ಲಿ ಜಾಸ್ತಿ. ಪರ್ವಕಾಲದಲ್ಲಿ ಇವುಗಳಿಗೆ ಅಚ್ಚಕೆಂಪು ಶಿಖೆ ಮೂಡುತ್ತದೆ. ಇವು ಸಂಘಜೀವಿಗಳು. ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟುಗೂಡಿರುತ್ತವೆ. ಹೆಣ್ಣೇ ಕಾವಿಗೆ ಕೂರುವುದು. ಮೈದಾನದ ರಕ್ಷಿತ ಸ್ಥಳದಲ್ಲಿ ೭ – ೧೦ ಮೊಟ್ಟೆಯಿಡುತ್ತದೆ. ಮರಿಗಳು ೨ – ೩ ವಾರ ತಾಯಿಯೊಡನಿದ್ದು ನಂತರ ಪ್ರತ್ಯೇಕಗೊಳ್ಳುತ್ತವೆ.

ಉತ್ತರ ಅಮೇರಿಕಾದಲ್ಲಿ ಮೂರು ಪ್ರಭೇದಗಳಿವೆ. "ಸೇಜ್ ಗ್ರೌಸ್" ದಪ್ಪ ಗಾತ್ರದವು. ಪರ್ವಕಾಲದಲ್ಲಿ ಎದೆಯ ಕತ್ತಿನ ಬಳಿಯ ಬಿಳಿಯ ಗರಿಗಳನ್ನೂ ಗಾಳಿ ಚೀಲವನ್ನೂ ಉಬ್ಬಿಸಿ ಹೂವಿನ ಹಾರ ಧರಿಸಿರುವಂತೆ ತೋರುತ್ತದೆ. ಎರಡನೆಯದು ಹುಲ್ಲುಗಾವಲಿನ ವಾಸಿ **ಪ್ರೈಯರಿಕೋಳಿ**. ಅದರ ಪರ್ವ ತೋರ್ಪು ಬಹು ವಿಚಿತ್ರ. ಗಂಡು ತಾನು ಆರಿಸಿರುವ ಸ್ಥಳದಲ್ಲಿನ ಎತ್ತರ ದಿಬ್ಬದಲ್ಲಿ ನಿಂತು ಕೂಗಲೂ, ಕುಣಿಯಲೂ ತೊಡಗುತ್ತದೆ, ಹಲವು ಹೆಜ್ಜೆ ಓಡಿನಿಂತು, ಕಾಲಿನಿಂದ ನೆಲವನ್ನು ದೂರಕ್ಕೆ ಕೇಳಿಸುವಂತೆ ತಟ್ಟುತ್ತದೆ, ಅಲ್ಲದೆ ಬಾಗುತ್ತ, ಬಳುಕುತ್ತ, ಕೆರೆಯುತ್ತಾ ಮುಂದುವರಿಯುವ ಅವುಗಳ ವರ್ತನೆ ವಿಚಿತ್ರ. ಆಗಾಗ ದಪ್ಪ ಸ್ವರದಲ್ಲಿ ಕೂಗುತ್ತದೆ. ಅಲ್ಲದೆ ಆ ಸಮಯದಲ್ಲಿ ಕತ್ತಿನ ಬಳಿಯೂ ಕೆಂಪು ಗಾಳಿಚೀಲವನ್ನು ಉಬ್ಬಿಸಿ, ಕತ್ತಿನ ಗರಿಗಳನ್ನು ನೇರವಾಗಿಸಿ, ಬಾಲವನ್ನು ಪಂಕದಾಕಾರವಾಗಿರಿಸಿ ತಿರುಗುತ್ತದೆ. ಈ ವರ್ತನೆ ಬಹುಶಃ ೨ – ೩ ತಿಂಗಳು ನಡೆಯಬಹುದು. ಹೆಣ್ಣುಗಳು ಮಾರ್ಚಿ – ಏಪ್ರಿಲ್‌ನಲ್ಲಿ ಅಲ್ಲಿಗೆ ಬರುತ್ತವೆ. ಹೆಣ್ಣುಗಳು ತಮಗಿಷ್ಟವಾದೆಡೆ ನೆಲ ಕೆರೆದು ಹಲವು ಹುಲ್ಲುಕಡ್ಡಿಗಳನ್ನಿಟ್ಟು ೧೨ – ೧೫ ಮೊಟ್ಟೆಯಿಡುತ್ತವೆ. ೨೦ - ೨೫ ದಿನಗಳನಂತರ ಪೂರ್ಣ ಬಲಿತ ಮರಿ ಜನಿಸಿ ಕೂಡಲೇ ಆಹಾರ ಹುಡುಕಹೊರಡುತ್ತವೆ.

ಮೂರನೆಯ ಪ್ರಭೇದ **ರಫ್‌ಡ್ ಗ್ರೌಸ್** (Ruffed Grouse) ತನ್ನ ರೆಕ್ಕೆಯ ಚಲನೆಯಿಂದಲೇ ತಟ್ಟಿದಂತಹ ಶಬ್ದಮಾಡುತ್ತವೆ. ಯಾವುದಾದರೂ ಬಿದ್ದ ಮರದ ದಿಮ್ಮಿಯ ಮೇಲೆ ನಿಂತು ನಿಧಾನವಾಗಿ ಪ್ರಾರಂಭಿಸಿ ಅದನ್ನು ತ್ವರಿತಗೊಳಿಸುತ್ತವೆ.

ಈ ಶಬ್ದ ಹಲವು ಮೈಲಿ ದೂರ ಕೇಳಿಸುತ್ತದೆ. ಒಂದೇ ಹೆಣ್ಣಿನೊಡನೆ ಸಂಪರ್ಕ. ನೆಲದ ಮೇಲಿನ ಗೂಡಿನಲ್ಲಿ ೮ - ೧೨ ಮೊಟ್ಟೆಯಿಡುತ್ತವೆ. ಮರಿಮಾಡುವುದು ಹೆಣ್ಣು. ಉತ್ತರ ಅಮೇರಿಕಾದ 'ಸ್ಪ್ರೂಸ್ ಗ್ರೌಸ್' ಬುದ್ಧಿಹೀನ ಪಕ್ಷಿ. ಹೆದರಿದಾಗ ಹಾರಿ ಮರದ ತಳಕೊಂಬೆಗಳಲ್ಲಿ ಕುಳಿತು ಅಲುಗಾಡದಿರುತ್ತವೆ. ಕೋಲಿನಿಂದ ಹೊಡೆದು ಹಿಡಿಯಬಹುದು. ಈಗ ರಕ್ಷಣೆ ಕ್ಷೇತ್ರಗಳಲ್ಲಿ ಮಾತ್ರ ವಾಸಮಾಡುತ್ತಿವೆ.

ಟಾರ್‌ಮಿಗನ್ (Ptarmigan) ಗಳ ನಾಲ್ಕು ಪ್ರಭೇದಗಳು ಉತ್ತರ ದಿಕ್ಕಿನ ಶೀತವಲಯದ ಸಣ್ಣಗಾತ್ರದ ಪಕ್ಷಿಗಳು. ಹಿಮದಲ್ಲಿ ನಡೆಯಲು ಅನುಕೂಲವಾಗುವಂತೆ, ಇವಕ್ಕೆ ಬೆರಳು ಕಾಲು ಪೂರ್ತಿ ಮೃದುಗರಿ ತುಂಬಿದೆ. ಇನ್ನಾವ ಪಕ್ಷಿಗೂ ಈ ರೀತಿಯ ಬೆಳವಣಿಗೆಯಿರುವುದಿಲ್ಲ. ಏಕಪತ್ನೀ ಜೀವಿಗಳು. ಹೆಣ್ಣು ಮಾತ್ರ ಕಾವಿಗೆ ಕೂರುವುದು. ಗಂಡು ಮರಿರಕ್ಷಣೆಗೆ ಸಹಾಯಕ. ಮರಿಗಳು ಪೂರ್ತಿ ಬೆಳೆದಿದ್ದರೆ ಕೆಲವೇ ಗಂಟೆಗಳಲ್ಲಿ ಓಡಾಡಲೂ, ಹಾರಾಡಲೂ ಸಿದ್ಧವಾಗುತ್ತವೆ.

ಇವುಗಳಲ್ಲಿ ಅತಿ ಮುಖ್ಯವಾದದ್ದು ಬಣ್ಣದ ವೈವಿಧ್ಯ. ಸಾಮಾನ್ಯವಾಗಿ ಕಂದು ಕೆಂಚು ಬಣ್ಣ ಹೊಂದಿರುತ್ತವೆ. ಆದರೆ ಅವು ತಮ್ಮ ವಾಸಸ್ಥಳಕ್ಕನುಗುಣವಾಗಿ ಹಿಮಕಾಲದಲ್ಲಿ ಬಿಳಿಯ ಮಚ್ಚೆಗಳನ್ನೋ ಅಥವಾ ಪೂರ್ಣ ಬಿಳುಪನ್ನೇ ಪಡೆಯುತ್ತವೆ. ಆತ್ಮರಕ್ಷಣೆಗೆ ಇದು ಮುಖ್ಯವಾದದ್ದರಿಂದ ಇದನ್ನೇ ಅವು ಅನುಸರಿಸುತ್ತಿರುವುದು ಒಂದು ವೈಶಿಷ್ಟ್ಯ.

ಕುಟುಂಬ ೪ : ಫೇಸಿಯಾನಿಡೀ (Phasianidae)

(ಕವುಜಗ, ಜೀವಂಜೀವ, ಪುರಲಿಗಳು)

ಇದರಲ್ಲಿ ಒಟ್ಟು ೧೭೮ ಪ್ರಭೇದಗಳಿವೆ. ಪ್ರಪಂಚದ ಅತಿ ವರ್ಣರಂಜಿತ ಪಕ್ಷಿ. ಗಾತ್ರದಲ್ಲಿ ಸಣ್ಣ ಕೋಳಿಯಂತಹ ಪಕ್ಷಿಯಿಂದ ಹಿಡಿದು ಅತಿ ದೊಡ್ಡದಾದ ನವಿಲುಗಳ ಗಾತ್ರದವರೆಗಿವೆ. ಜೀವಂಜೀವಗಳಲ್ಲಿ ಅತ್ಯಂತ ಹೆಚ್ಚಿನ ವೈವಿಧ್ಯತೆಯಿದೆ. ಎಲ್ಲವೂ ಸಾಮಾನ್ಯವಾಗಿ ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಪಕ್ಷಿಗಳು. ಶೀತವಲಯದಲ್ಲಿ ಒಂದೂ ಇಲ್ಲ.

ತೆರೆದ ಹೊಳ್ಳೆಗಳಿದ್ದು ಕತ್ತಿನ ಬಳಿ ಯಾವ ತರಹದ ಚೀಲವೂ ಇರುವುದಿಲ್ಲ. ಕಾಲಿನ ಪಾದ ಪೂರ್ಣ ಬೋಳಾಗಿ ಗರಿಯಿರುವುದಿಲ್ಲ. ಹಲವು ಪ್ರಭೇದಗಳ ಹಿಂಬೆರಳುಗಳ ಮೇಲೆ ಬಾಕುವಿನಂತಹ ಮುಳ್ಳು ಬೆಳೆದಿರುತ್ತದೆ. ಅದನ್ನು ಅವು ಆಯುಧವಾಗಿ ಉಪಯೋಗಿಸುತ್ತವೆ.

ಪಶ್ಚಿಮ ವಲಯದ ಪುರಲಿಗಳು, ಪೂರ್ವವಲಯದ ಪುರಲಿಗಳು ಮತ್ತು ಕವುಜಗ ಮತ್ತು ಜೀವಂಜೀವ ಹಾಗೂ ನವಿಲುಗಳು — ಈ ಮೂರು ಪಂಗಡಗಳು ಇದರಲ್ಲಿ ಮುಖ್ಯವಾದವು.

ಪಶ್ಚಿಮ ವಲಯದ ಪುರಲಿಗಳು ಒಂದೇ ರೀತಿಯವು. ಅವುಗಳಲ್ಲಿ ಹೆಚ್ಚಿನ ವೈವಿಧ್ಯತೆಗಳಿಲ್ಲ. ಸಣ್ಣ ಗಾತ್ರ, ಕಾಲಿನಲ್ಲಿ ಹಿಮ್ಮಡಿ ಮುಳ್ಳು ಇರುವುದಿಲ್ಲ, ಅವುಗಳ

ಮೇಲ್ಕೊಕ್ಕಿನಲ್ಲಿ ಹಲ್ಲಿನಂತಹ ಒಂದು ಕಚ್ಚು ಇದೆ. ಉತ್ತರ ಅಮೇರಿಕಾದಿಂದ ದಕ್ಷಿಣ ಅಮೇರಿಕಾದ ಮಧ್ಯಭಾಗದವರೆಗೆ ೩೩ ಪ್ರಭೇದಗಳು ಕಂಡುಬರುತ್ತವೆ. ಬಹು ಬೇಗ ಪಳಗಿ ವೃದ್ಧಿಗೊಳ್ಳುತ್ತವೆ. ಮಾಂಸ ರುಚಿಕರ. ಸುಲಭವಾಗಿ ಪಳಗುತ್ತವೆ. ನ್ಯೂಜಿಲೆಂಡಿನಲ್ಲಿ ಹೊಸತಾಗಿ ಅವುಗಳನ್ನು ತಂದುಬಿಟ್ಟಿದ್ದು, ಅತಿಯಾಗಿ ಹೆಚ್ಚಿ ಅವನ್ನೂ ಬೇಟೆಯಾಡಿ ರಫ್ತು ಮಾಡಲಾಗುತ್ತಿತ್ತು. ಎಲ್ಲವೂ ಸ್ಥಳವಾಸಿಗಳೇ, ಯಾವುದೂ ವಲಸೆ ಹೋಗುವುದಿಲ್ಲ. ಅವುಗಳಲ್ಲಿ ಸ್ಥಳಕ್ಕನುಗುಣವಾದ ಹಲವು ವರ್ಣ ಮಾರ್ಪಾಟು ಆಗಿವೆ.

ಅವೆಲ್ಲವೂ ಒಂದೇ ಹೆಣ್ಣಿನೊಡನೆ ಸಂಪರ್ಕ ಹೊಂದುವುವು. ಗೂಡಿನ ರಚನೆ ನೆಲದಮೇಲೆ ಮಾತ್ರ. ಪೊದರುಗಳ ನಡುವೆ ಹುಲ್ಲುಕಡ್ಡಿಗಳ ದೊಡ್ಡ ಗೂಡು ರಚಿಸಿ ೧೦ – ೨೦ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಉತ್ತರಭಾಗದ ಪ್ರಭೇದಗಳು ವರ್ಷಕ್ಕೆ ಒಂದೇ ಸಂತತಿ ಉತ್ಪನ್ನ ಮಾಡುತ್ತವೆ. ಆದರೆ ಉಷ್ಣವಲಯದವು ೨ – ೩ ಸಲ ಮರಿಮಾಡಬಲ್ಲವು ಗೂಡು ರಚಿಸುವುದೂ, ಕಾವು ಕೂರುವುದೂ ಹೆಣ್ಣೇ. ಗಂಡು ಸಹಾಯಕವಾಗುತ್ತದೆ. ಮರಿಗಳು ಹೊರಬಿದ್ದಾಗ ಪೂರ್ಣ ಬಲಿತು ಸ್ವಲ್ಪ ಕಾಲ ದಲ್ಲೇ ಆಹಾರ ಅರಸುತ್ತವೆ.

ಅವು ಸಂಘಜೀವಿಗಳು. ಗುಂಪಾಗಿ ವಾಸಿಸುತ್ತವೆ. ರಾತ್ರಿ ವಿಶ್ರಮಿಸುವಾಗ ಅವು ಗುಂಪಾಗಿರುತ್ತವೆ. ಸಾಮಾನ್ಯವಾಗಿ ವರ್ತುಲಾಕಾರವಾಗಿದ್ದು ಮುಖವನ್ನು ಹೊರಗಡೆ ನಾನಾ ದಿಕ್ಕುಗಳಲ್ಲಿ ತಿರುವಿರುತ್ತವೆ.

ಎರಡನೆಯ ಪಂಗಡದಲ್ಲಿ ಪೂರ್ವವಲಯದ ಸುಮಾರು ೯೫ ಪುರುಲೆ ಪ್ರಭೇದ ಗಳಿವೆ. ಅವು ಸಾಮಾನ್ಯ ಬಣ್ಣದವು. ಪುಷ್ಟಿಯಾದ ದೇಹದವು. ಕೊಕ್ಕಿನಲ್ಲಿ ಕಚ್ಚು ಇರುವುದಿಲ್ಲ. ಎಲ್ಲಕ್ಕೂ ಹಿಮ್ಮಡಿ ಮುಳ್ಳು ಇರುತ್ತದೆ. ಯೂರೋಪಿನಿಂದ ಆಸ್ಟ್ರೇಲಿಯಾದವರೆಗೆ ಹರಡಿರುತ್ತದೆ. ಇದರಲ್ಲಿ ೪ ಪ್ರಭೇದಗಳು ವಲಸೆ ಹೋಗು ವುವು. ಯೂರೋಪಿನ ಉತ್ತರ ಭಾಗದಿಂದ ಉತ್ತರ ಆಫ್ರಿಕಾಕ್ಕೆ ವಲಸೆಹೋಗುತ್ತವೆ.

ಈ ವಲಸೆ ಹೋಗುವ ಪ್ರಭೇದ ಈಜಿಪ್ಟ್, ಸಿನಾಯಾರ ಪ್ರದೇಶದ ಜನರಿಗೆ ಒಂದು ದೈವದತ್ತ ಕೊಡುಗೆಯಾಗುತ್ತದೆ. ಬೈಬಲ್ಲಿನಲ್ಲೂ ಕೋಟ್ಯಂತರ ಪಕ್ಷಿಗಳನ್ನು ಇಸ್ರೇಲಿನ ಜನತೆ ಆಹಾರಕ್ಕಾಗಿ ಹಿಡಿದುದಾಗಿ ಉಲ್ಲೇಖವಿದೆ. ೧೯೩೬ರ ವರೆಗೂ ವರ್ಷಂಪ್ರತಿ ಲಕ್ಷಾಂತರ ಪಕ್ಷಿಗಳನ್ನು ಅಲ್ಲಿಂದ ರಫ್ತು ಮಾಡಲಾಗುತ್ತಿತ್ತು. ಇದರಿಂದ ಅವುಗಳ ಸಂಖ್ಯೆ ಅತಿ ಕಡಮೆಯಾಗಿದೆ. ಜಪಾನಿನಲ್ಲಿ ಒಂದು ಪ್ರಭೇದವನ್ನು ಪಳಗಿಸಿ ಮೊಟ್ಟೆಗಾಗಿ ಸಾಕುತ್ತಿದ್ದಾರೆ. ಹೆಣ್ಣು ವರ್ಷಕ್ಕೆ ೨೦೦ಕ್ಕೂ ಮೇಲ್ಪಟ್ಟು ಮೊಟ್ಟೆ ಕೊಡು ತ್ತದೆ. ಆಫ್ರಿಕಾದ ವಿವಿಧ ವರ್ಣದ ಪುರಲೆಗಳು ಮನಸ್ಸಿದ್ದೆಡೆ ವಲಸೆ ಹೋಗುತ್ತವೆ.

ಹಲವು ಪ್ರಭೇದಗಳು ದಪ್ಪ ಗಾತ್ರದವು. ೧೨ ಅಡಿ ಉದ್ದವಿದ್ದು ೩ – ೪ ಪೌಂಡು ಭಾರವಿರುತ್ತವೆ. ಯೂರೋಪಿನ **ಚಕೋರ್** ಕವುಜಗ ಹಾಗೂ ಕಂದು ಕವುಜಗಗಳು ಉತ್ತಮ ಬೇಟೆ ಪಕ್ಷಿಗಳು.

ಪಾರಿವಾಳದ ಪಂಗಡಕ್ಕೆ ಸುಮಾರು ೫೦ ಪ್ರಭೇದಗಳು ಸೇರುತ್ತವೆ. ನವಿಲು, ಜೀವಂಜೀವಗಳ ಅನೇಕ ವಿಧಗಳು ಇದಕ್ಕೆ ಸೇರುತ್ತವೆ. ಮೋಹಕ ಬಣ್ಣದ ಗರಿಗಳು ಗಂಡಿಗೆ ಮಾತ್ರ ಇರುತ್ತವೆ. ಹೆಣ್ಣು ವರ್ಣರಹಿತ. ಕಾಲಿನಲ್ಲಿ ಗರಿಗಳಿಲ್ಲದೆ, ಹಿಮ್ಮಡಿ ಮುಳ್ಳು ಇದ್ದು ವರ್ಣರಂಜಿತ ನೀಳ ಬಾಲಗರಿಯೂ ಇರುತ್ತದೆ.

ಜೀವಂಜೀವಗಳಲ್ಲಿ ಉಂಗುರ ಕತ್ತಿನ ಪ್ರಭೇದ ಸಾಮಾನ್ಯವಾಗಿ ಎಲ್ಲೆಡೆ ಹರಡಿರುವುದು. ಅದು ಬಹುಶಃ ಮೊದಲು ಗ್ರೀಸ್‌ನಲ್ಲಿ ವೃದ್ಧಿಯಾಗಿ ರೋಮನರ ಕಾಲದಲ್ಲಿ ಎಲ್ಲೆಡೆ ಹರಡಿರಬೇಕೆಂದು ತೋರುತ್ತದೆ. ಪ್ರಪಂಚದ ಎಲ್ಲೆಡೆ ಅದೂ, ಅದರ ಇತರ ವಿಧಗಳೂ ಹೆಚ್ಚಾಗಿ ಉತ್ಪನ್ನವಾಗಿರುವುದು ಕಂಡುಬರುತ್ತದೆ.

ಹಿಮಾಲಯ ಪರ್ವತಶ್ರೇಣಿಯ ಪೂರ್ವಕ್ಕೆ ಜಪಾನ್, ಚೈನಾ, ಇಂಡೋಚೈನಾಗಳಲ್ಲಿ ಅತಿ ಮನೋಹರ ಪ್ರಭೇದಗಳು ಕಂಡುಬರುತ್ತವೆ. **ಸ್ವರ್ಣ** ಮತ್ತು **ರಜತ** ಜೀವಂಜೀವಗಳು ಅತ್ಯಂತ ಸುಂದರವಾದವು. **ಅಮ್‌ಹರ್‌ಸ್ಟ್** ಪ್ರಭೇದವೂ ವರ್ಣರಂಜಿತವಾದದ್ದು. **ರೀವ್ಸ್** ಪ್ರಭೇದಕ್ಕೆ ಬಹು ನೀಳ ಬಾಲವಿದ್ದು ಪಕ್ಷಿ ೮ – ೯ ಅಡಿ ಉದ್ದವಿರುತ್ತದೆ. **ತಾಮ್ರವರ್ಣದ** ಪಕ್ಷಿಗಳು ಜಪಾನಿನ ಎತ್ತರ ಗುಡ್ಡ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ. ಅವುಗಳನ್ನು ಪಳಗಿಸಲು ಸಾಧ್ಯವಾಗಿಲ್ಲ. ೧೯೦೦ರಲ್ಲಿ ಫಾರ್ಮೋಸಾದಲ್ಲಿನ ಹೊಸ ಪ್ರಭೇದವೊಂದು ಹೊಳಪು ಕಪ್ಪು ಮೈಮೇಲೆ ಬಿಳಿ ಪಟ್ಟೆ ಹೊಂದಿರುವುದನ್ನು ಕಂಡುಹಿಡಿದು ಮಿಕಾಡೋ ಎಂದು ಅದಕ್ಕೆ ಹೆಸರಿಡಲಾಗಿದೆ.

ಹಿಮಾಲಯದ ಪರ್ವತಶ್ರೇಣಿಗಳಲ್ಲಿ **ಮೊನಾಲ್** (Monal) ಅಥವಾ **ಇಂಪೇಯನ್** (Impain) ಜೀವಂಜೀವಗಳು ಕಂಡುಬಂದಿವೆ. ಅವು ದಪ್ಪದೇಹದ ಗಿಡ್ಡ ಬಾಲದವು. ಇನ್ನೊಂದು ಪ್ರಭೇದ **ಟ್ರಗೋಪಾನ್** (Tragopan) ಚುಕ್ಕೆ ಮೈಬಣ್ಣ ಹೊಂದಿವೆ. ಇವೆರಡೂ ಮರವಾಸಿಗಳು. ಈ ಪಂಗಡದಲ್ಲಿ ಇವೆರಡೇ ಮರವಾಸಿಗಳು ಮತ್ತು ಟ್ರಗೋಪಾನ್ ಗೂಡು ರಚಿಸುವುದು ಕೂಡ ಮರದಲ್ಲೇ. ಸುಮಾತ್ರ, ಬೋರ್ನಿಯೋ ಮತ್ತು ಮಲಯಾದಲ್ಲಿನ ದಟ್ಟ ಕಾಡುಗಳಲ್ಲಿ ೭ – ೮ ಅಡಿ ಉದ್ದ ದೇಹದ **ಆರ್‌ಗಾಸ್** ಪ್ರಭೇದವಿದೆ. ಅದರ ಬಾಲ ಗರಿಗಳು ನೀಳವಾಗಿ ಚಪ್ಪಟೆಯಾಗಿದ್ದು ಹಲವು ಕಣ್ಣುಗಳನ್ನೂ ಹೊಂದಿರುತ್ತವೆ. ಈ ಕಣ್ಣುಗಳು ಕಂದುಬಣ್ಣವಾಗಿದ್ದರೂ ಸುತ್ತಲೂ ಕಪ್ಪುಗೆರೆಯಿದ್ದು ನೋಡಲು ಆಕರ್ಷಕವಾಗಿರುತ್ತವೆ. ಅವುಗಳ ಪೂರ್ಣ ಜೀವನಚರಿತ್ರೆ ಇನ್ನೂ ಸರಿಯಾಗಿ ತಿಳಿದುಬಂದಿಲ್ಲ.

'ನವಿಲು'ಗಳು ದಕ್ಷಿಣ ಭಾರತ ಮತ್ತು ಸಿಲೋನಿನ ಪಕ್ಷಿಗಳು. ಬಹು ಪೂರ್ವದಿಂದಲೂ ಅದನ್ನು ಪಳಗಿಸಿ ಸಾಕಲಾಗಿದೆ. ಕ್ರಿ. ಪೂ. ೧೦೦೦ಕ್ಕೆ ಹಿಂದೆಯೇ ಸಾಲೊಮನ್ ದೊರೆ ಅವನ್ನು ಈಜಿಪ್ಟ್, ಜೆರೂಸಲೆಂ ಪ್ರದೇಶಕ್ಕೆ ತರಿಸಿ ಬೆಳೆಸಿದ್ದನೆಂದು ತಿಳಿಯುತ್ತದೆ. ಗಂಡಿಗೆ ನೀಳಬಾಲ ಗುಂಪುಗರಿಗಳ ಬೆಳವಣಿಗೆಯಿಂದಾಗಿ ಬೇರೆಬೇರೆ ಬಣ್ಣದ ಕಣ್ಣು ಇರುತ್ತವೆ. ಜಾವಾದ ಪ್ರಭೇದಕ್ಕೆ ಕತ್ತು, ಎದೆಯ ಭಾಗದಲ್ಲಿ ನೀಲಿ ಬಣ್ಣಕ್ಕೆ ಬದಲು ಹಸಿರು ಬಣ್ಣವಿರುತ್ತದೆ. ಇತ್ತೀಚೆಗೆ ಆಫ್ರಿಕಾದ ಕಾಂಗೋ

ಗ್ರಂಥಭಂಡಾರ

ಕಾಡುಗಳಲ್ಲೂ ಒಂದು ಪ್ರಭೇದ ಕಂಡುಹಿಡಿಯಲಾಗಿದೆ. ಇವೆಲ್ಲವೂ ಗುಂಪಾಗಿ ನೆಲದ ಮೇಲೆ ವಾಸಿಸಿ, ಹುಳು ಹುಪ್ಪಟೆಗಳನ್ನೂ, ಕಾಳು ಹಣ್ಣುಗಳನ್ನೂ ತಿಂದು ಜೀವಿಸು ತ್ತವೆ. ಸ್ವಲ್ಪ ದೂರ ಹಾರುತ್ತವೆ. ರಾತ್ರಿ ಮರಗಳಲ್ಲಿ ವಿಶ್ರಮಿಸುತ್ತವೆ.

ಕೋಳಿಗಳು ಮಾನವನಿಗೆ ಅತ್ಯಂತ ಉಪಯುಕ್ತ ಪಕ್ಷಿಗಳು. ಕಾಡುಪಕ್ಷಿಗಳ ಲ್ಲೆಲ್ಲಾ ಇದೇ ಪಳಗಿಸಲು ಸುಲಭವಾಗಿದ್ದು ಅದರ ವಿವಿಧ ಉಪಯುಕ್ತತೆಗಾಗಿ ಅನೇಕ ವಿಧಗಳ ಉತ್ಪನ್ನವಾಗಿದೆ. ಇವೆಲ್ಲವೂ ಭಾರತದಿಂದ ಜಾವಾವರೆಗಿನ ಕಾಡುಗಳಲ್ಲಿ ವಾಸವಿರುವ ೪ ಪ್ರಭೇದದ ಕಾಡುಕೋಳಿಗಳಿಂದ ಉತ್ಪನ್ನವಾದವು. ಇವುಗಳಿಗೆ ತಲೆಯ ಮೇಲೆ ಚರ್ಮ ಶಿಖೆಗಳಿದ್ದು, ಕತ್ತಿನ ಬಳಿ ಜೋಲುಮಾಂಸ ಭಾಗವಿದೆ. ಬಾಲ ಹೆಚ್ಚಾಗಿ ಕಮಾನಿನಂತೆ ಬಾಗಿರುತ್ತದೆ. ಬೇರೆ ಬೇರೆ ಬಣ್ಣ ಹೊಂದಿರಬಲ್ಲವು. ಇವೂ ಜೀವಂಜೀವ ಪ್ರಭೇದಗಳೇ. ಕ್ರಿ. ಪೂ. ೫೦೦೦ ವರ್ಷಗಳ ಹಿಂದೆಯೇ ಇವನ್ನು ಪಳಗಿಸಿದ್ದರೆಂದು ವರದಿಯಿದೆ.

ಕೋಳಿಗಳನ್ನು ಜೂಜಾಟಕ್ಕೋಸ್ಕರ ಮೊದಲು ಪಳಗಿಸಲಾಯಿತೆಂದೂ, ಮುಂದೆ ಅದರ ಮಾಂಸ ಮತ್ತು ಮೊಟ್ಟೆಗೆ ಪ್ರಾಶಸ್ತ್ಯವೀಯಲಾಯಿತೆಂದೂ ತಿಳಿಯಲಾಗಿದೆ. ಇಂದಿನ ಜೂಜಿನ ಪ್ರಭೇದಗಳು, ಕಾಡು ಸಂತತಿಯನ್ನೇ ಹೆಚ್ಚಾಗಿ ಹೋಲುತ್ತವೆ. ಈಗ ವರ್ಷಕ್ಕೆ ೩೫೦ ಮೊಟ್ಟೆಗಳನ್ನಿಡುವ, ಬೇಗ ಬೆಳೆದು ಹೆಚ್ಚಿನ ಮಾಂಸ ಒದಗಿಸುವ ಪ್ರಭೇದಗಳು ಅನೇಕ ಇವೆ.

ಕುಟುಂಬ ೫ : ನ್ಯೂಮಿಡಿಡೀ (Numididae)
(ಗಿನೀ ಕೋಳಿಗಳು)

ದಕ್ಷಿಣ ಆಫ್ರಿಕಾ ಮತ್ತು ಮೆಡಗಾಸ್ಕರ್ ಬಳಿ ಮಾತ್ರ ಕಂಡುಬರುವುವು. ಕಾಡುವಾಸಿಗಳು. ೭ ಪ್ರಭೇದಗಳಿಗೂ ಗುಂಡು ಆಕಾರವಿದ್ದು, ಬಾಲ ಕಾಣದೆ ನೀಲಿಗರಿಗಳಮೇಲೆ ಬಿಳಿಯ ಚುಕ್ಕೆಗಳಿರುತ್ತವೆ. ಆಫ್ರಿಕಾದ ಪೂರ್ವ ಪ್ರದೇಶದ ಕಾಡುಗಳಲ್ಲಿ **ಹದ್ದು ಮೂತಿಯ** ಪ್ರಭೇದವಿದೆ. ಇದಕ್ಕೆ ಬೋಳುತಲೆಯ ಹದ್ದಿ ನಂತಹ ಮೂತಿ, ಕುತ್ತಿಗೆಯ ಬಳಿ ನೀಳ ಪಟ್ಟೆಯ ಗರಿ ಇದ್ದು, ಇದೊಂದೇ ಪ್ರಭೇದದಲ್ಲಿ ಬಾಲ ಕಾಣುವಂತಿರುತ್ತದೆ. 'ಕಪ್ಪು' ಮತ್ತು 'ಬಿಳಿ ಎದೆಯ' ಪ್ರಭೇದಗಳು ಅಪ ರೂಪ. ಅವುಗಳ ಜೀವನಚರಿತ್ರೆಯೂ ಸರಿಯಾಗಿ ತಿಳಿದಿಲ್ಲ. **ಟೊಪ್ಪಿಗೆಯ** ಪ್ರಭೇದ ಈಗ ಸಾಕಲಾಗುತ್ತಿರುವ ವಿಧಗಳ ಪೂರ್ವಜ. ಅವುಗಳನ್ನು ಗ್ರೀಕ್ ಮತ್ತು ರೋಮನ್ನರು ಪಳಗಿಸಿದರೆಂದು ತಿಳಿದುಬರುತ್ತದೆ. ಈಗ ಅವುಗಳಲ್ಲಿ ಬಣ್ಣ ವೈವಿಧ್ಯತೆ ಉತ್ಪನ್ನವಾಗಿದ್ದರೂ, ಅಂಗರಚನೆಯಲ್ಲಿ ಹೆಚ್ಚಿನ ಮಾರ್ಪಾಟಿಲ್ಲ. ಅವುಗಳ ಸಾಕಾಣಿಕೆ ಹೆಚ್ಚು ಉತ್ಪನ್ನದಾಯಕವಲ್ಲ. ಸಾಕುವುದು ಕಷ್ಟ, ಮೊಟ್ಟೆಯೂ ಕಡಮೆ. ಆದರೆ ಅತ್ಯಂತ ರುಚಿಕರ. ಅವು ಬಹು ವಾಚಾಳಿಗಳು. ಸ್ವಲ್ಪ ಅಪಾಯದ ಸೂಚನೆ ಯಿದ್ದರೂ ಕೀರಲುಧ್ವನಿಯಲ್ಲಿ ಕಿರುಚುತ್ತವೆ. ವಿಶ್ರಮಿಸುತ್ತಿರುವಾಗಲೂ ಬಹುಕಾಲ

ಕೂಗುತ್ತಿರುತ್ತವೆ. ಸಂಘಜೀವಿಗಳು. ಪರ್ವಕಾಲದಲ್ಲಿ ಮಾತ್ರ ಜೊತೆಗೂಡಿರುತ್ತವೆ. ವೇಗವಾಗಿ ಓಡಬಲ್ಲವು. ಒಂದೇ ದಿನದಲ್ಲಿ ೨೦–೨೫ ಮೈಲಿ ದೂರ ಹೋದ ವರದಿಗಳಿವೆ.

ಆವಶ್ಯಕವಾದರೆ ಹಾರಬಲ್ಲವು. ರಾತ್ರಿವೇಳೆ ಮರದ ಮೇಲೆಯೇ ವಿಶ್ರಮಿಸುವುವು.

ಕುಟುಂಬ ೬ : ಮೆಲಿಯಾಗ್ರಿಡಿಡೀ (Meleagrididae) (ಟರ್ಕಿ ಕೋಳಿಗಳು)

ಈ ಕುಟುಂಬದ ಗಂಡು ಹಕ್ಕಿಗಳಿಗೆ ತಲೆ – ಕತ್ತು ಭಾಗ ವರ್ಣರಂಜಿತವಾಗಿದ್ದು, ಬೆರಳುಗಳ ನಡುವೆ ಸ್ವಲ್ಪ ಜಾಲವಿರುತ್ತದೆ. ಇವು ಪಶ್ಚಿಮ ವಲಯದ ಪಕ್ಷಿಗಳು. ಇವುಗಳ ರುಚಿಕರ ಮಾಂಸಕ್ಕಾಗಿ ಪ್ರಪಂಚದ ಅನೇಕ ಕಡೆ ಸಾಕಲಾಗುತ್ತಿದೆ. ವರ್ಣ ವೈವಿಧ್ಯತೆಯ ಆಧಾರದಿಂದ ಸುಮಾರು ೭ ವಿಧಗಳನ್ನು ವಿಂಗಡಿಸಲಾಗಿದೆ.

ಇವುಗಳೆಲ್ಲವೂ ಮರಗಳಿಂದ ಕೂಡಿದ ಬಯಲುಗಳಲ್ಲಿ ವಾಸಿಸುವುದು ಹೆಚ್ಚು. ಸಣ್ಣ ಗುಂಪುಗಳಲ್ಲಿ ಹಗಲೆಲ್ಲಾ ನೆಲದಮೇಲೆ ಆಹಾರ ಹುಡುಕಿ ತಿರುಗಾಡುತ್ತ ರಾತ್ರಿ ಮರಗಳ ಮೇಲೆ ವಿಶ್ರಮಿಸುತ್ತವೆ. ವಲಸೆ ಹೋಗದ ದಪ್ಪದೇಹದ ಪಕ್ಷಿಗಳು. ಹಾರಾಡಲು ಸಾಮರ್ಥ್ಯವುಳ್ಳವಾದರೂ ಬಹುದೂರ ಹಾರಲಾರವು.

ಅಮೇರಿಕಾದ ಪೆನಿಸಿಲ್‌ವೇನಿಯಾ ಪ್ರದೇಶದಿಂದ ದಕ್ಷಿಣಕ್ಕೆ ಫ್ಲಾರಿಡಾವರೆಗೆ ರಕ್ಷಣೆಗೊಳಗಾಗಿ ಅವು ಈಗ ವೃದ್ಧಿಗೊಳ್ಳುತ್ತಿವೆ. ಅವುಗಳ ಬಣ್ಣ ಹೆಚ್ಚು ವೈವಿಧ್ಯತೆ ಹೊಂದಿರುತ್ತದೆ. ಗಂಡಿಗೆ ಎದೆಯ ಬಳಿ ಗಡ್ಡದಂತಹ ನೀಳ ಕೂದಲು ಗರಿಯ ಕುಚ್ಚಿದೆ. **ಯುಕಟಾನ್** (Ucatan) ಬ್ರಿ. ಹಾಂಡೂರಾಸ್ (Br. Honduras) ಮತ್ತು ಗ್ವಾಟಿಮಾಲಾ (Guatimala) ಪ್ರದೇಶದಲ್ಲಿ ಒಂದು ಮುಖ್ಯ ಪ್ರಭೇದಕ್ಕೆ ಕುತ್ತಿಗೆ ತಲೆ ಪೂರ್ತಿ ನೀಲಿ ಬಣ್ಣವಿರುತ್ತದೆ. ಕೆಂಪು ಛಾಯೆಯಿಲ್ಲ. ಬಾಲ ಸ್ವಲ್ಪ ಉದ್ದವಾಗಿ ನವಿಲಿನಂತೆ ಅರ್ಧ ಕಣ್ಣು ಇರುತ್ತದೆ. ಅಲ್ಲದೆ ಗಂಡಿಗೆ ಎದೆ, ಗಡ್ಡದ ಕೂದಲಿರುವುದಿಲ್ಲ. ಪರ್ವಕಾಲದಲ್ಲಿ ಗಂಡು ತನ್ನ ಬಾಲದ ಪುಕ್ಕವನ್ನು ಅಗಲಿಸಿ ಮೇಲೆತ್ತಿ ಗ್ಲಕ್‌ಗ್ಲಕ್ ಎಂದು ಶಬ್ದಮಾಡುತ್ತ ಪ್ರದರ್ಶಿಸುತ್ತದೆ. ಗಂಡು ಬಹುಪತ್ನೀಕ. ಸಂಭೋಗಾನಂತರ ಹೆಣ್ಣು ಪ್ರತ್ಯೇಕವಾಗಿ ನೆಲದಮೇಲೆ ಗೂಡು ರಚಿಸಿ ೮ ರಿಂದ ೧೫ ಮೊಟ್ಟೆಯಿಟ್ಟು, ೨೮ – ೩೦ ದಿನಗಳ ಕಾವು ಕೊಟ್ಟು ಮರಿಮಾಡಿ ಸಲಹುತ್ತವೆ.

ಟರ್ಕಿಕೋಳಿಗಳ ಮಾಂಸ ಬಹು ರುಚಿ. ಮುಂಚೆ ವಲಸೆಗಾಗಿ ಬಂದ ಅಮೇರಿಕನ್ನರಿಗೆ ಅದು ಮುಖ್ಯ ಆಹಾರವಾಗಿತ್ತು. ಹೆಚ್ಚಿನ ಶಿಕಾರಿಯಿಂದ ಬಹುಭಾಗ ನಶಿಸಿ, ಈಗ ರಕ್ಷಣೆ ದೊರೆತು ಪುನಃ ವೃದ್ಧಿಗೊಳ್ಳುತ್ತಿವೆ. ಮಾಂಸಕ್ಕಾಗಿ ಅವುಗಳನ್ನು ಬೆಳೆಸಲು ಅಭಿವೃದ್ಧಿ ಕ್ಷೇತ್ರಗಳು ಏರ್ಪಟ್ಟಿದ್ದರೂ ಹೆಚ್ಚಿನ ಬದಲಾವಣೆಯಾಗಿಲ್ಲ. ಇತ್ತೀಚೆಗೆ ಬಿಳಿ ವರ್ಣದ ಒಂದು ವಿಧವನ್ನು ಉತ್ಪತ್ತಿಮಾಡಲಾಗಿದೆ. ಅದಕ್ಕೆ ಹೆಚ್ಚಿನ ಮಾಂಸವಿದ್ದು ಬೇಗ ಬೆಳೆಯುತ್ತದೆ.

ಕುಟುಂಬ ೭ : ಒಪಿಸ್‌ತೋಕೋಮಿಡೀ (Opisthocomidae)
(ಹೋಯಿಟ್‌ಜೀನ್‌ಗಳು)

ಅನೇಕ ಪಂಗಡಗಳೊಂದಿಗೆ ಸಾಮ್ಯತೆ ಹೊಂದಿರುವ ವಿಚಿತ್ರ ಪಕ್ಷಿಗಳಿವು. ರಚನೆ ಮತ್ತು ನಡತೆಗಳಲ್ಲಿ ಕೋಗಿಲೆಗಳನ್ನು ಹೋಲುತ್ತವೆ. ಅಮೆಸಾನ್ ಪ್ರದೇಶದ ಕಾಡುಗಳಲ್ಲಿ ವಾಸಿಸುತ್ತವೆ.

೨ ಅಡಿ ಉದ್ದದ ಜೀವಂಜೀವಗಳಂತಹ ಪಕ್ಷಿಗಳಿವು. ಸಾಮಾನ್ಯವಾಗಿ ಕಂದು ಬಣ್ಣದ ಮೈ, ಹಸುರು ಬಣ್ಣದ ಹೊಟ್ಟೆ ಇರುತ್ತವೆ. ಕತ್ತು ಉದ್ದ, ತಲೆ ಸಣ್ಣ, ಶಿಖೆಯ ಗರಿಗಳು ವಿರಳವಾಗಿ ನೆಟ್ಟಗೆ ನಿಂತಿರುತ್ತವೆ. ಕಾಲು ದಟ್ಟವಾಗಿ ಉಗುರು ಉದ್ದವಾಗಿರುತ್ತದೆ. ಹೊಲಸು ವಾಸನೆಯ ಪಕ್ಷಿಗಳು.

ಸಂಘಜೀವಿಗಳು. ೨೦ – ೫೦ ಪಕ್ಷಿಗಳು ಗುಂಪಾಗಿರುತ್ತವೆ. ಪೊದರುಗಳ ಮಧ್ಯೆ ಕಡ್ಡಿಗಳಿಂದ ಗೂಡು ರಚಿಸುತ್ತವೆ. ೨ – ೩ ಮೊಟ್ಟೆ ಇಡುತ್ತವೆ. ಕಾವಿನ ಅವಧಿ ೨೦ – ೨೫ ದಿನ. ಮರಿ ಜನಿಸಿದಾಗ ಬಹು ಕುತೂಹಲಕಾರಿಯಾಗಿರುತ್ತದೆ. ಪೂರ್ಣ ನಗ್ನವಾಗಿದ್ದು, ಅವುಗಳ ರೆಕ್ಕೆಗಳ ಮೇಲ್ಭಾಗದಲ್ಲಿ ಎರಡು ಕೊಂಡಿಯಿರುವ ಉಗುರುಗಳು ಬೆಳೆದಿರುತ್ತವೆ. ಹುಟ್ಟಿದ ಕೆಲವೇ ಗಂಟೆಗಳಲ್ಲಿ ಮರಿ ನಿಧಾನವಾಗಿ ಕೊಂಬೆಗಳ ಮೇಲೆಲ್ಲಾ ತೆವಳಿ ಹರಿದಾಡಲು ಪ್ರಯತ್ನಿಸುತ್ತದೆ. ಅದರ ಈ ಚಲನೆಗೆ ಈ ರೆಕ್ಕೆ ಬೆರಳುಗಳೂ ಸಹಾಯಕ. ೨ – ೩ ವಾರಗಳಲ್ಲಿ ಅವು ಬಿದ್ದು ಹೋಗುತ್ತವೆ. ಬೆಳೆದ ಹಕ್ಕಿಗಳಿಗೆ ಅವು ಇರುವುದಿಲ್ಲ. ಮರಿ ಕೊಂಬೆಗಳಮೇಲೆ ತೆವಳುವಾಗ ತಪ್ಪಿ ಕೆಳಗೆ ನೀರಿನಲ್ಲಿ ಬಿದ್ದರೂ ಅವು ಚೆನ್ನಾಗಿ ಈಜಿ ಮರ ಹತ್ತಬಲ್ಲವು.

ಇವುಗಳ ಹೊಟ್ಟೆ ದಪ್ಪವಾಗಿ ಇಬ್ಭಾಗವಾಗಿರುತ್ತದೆ. ತಿನ್ನುವ ಎಲೆಗಳೆಲ್ಲಾ ಇದರಲ್ಲಿ ಶೇಖರಿಸಿಡಲ್ಪಟ್ಟು, ಮುಂದೆ ಜೀರ್ಣಿಸಲು ಈ ಎರಡು ಭಾಗ ಅನುಕೂಲ. ಗಾತ್ರವೂ ಬಲು ದೊಡ್ಡದಾಗಿ ಹೆಚ್ಚು ಭಾಗವನ್ನು ಆಕ್ರಮಿಸುತ್ತದೆ. ಇದರಿಂದ ಎದೆ ಸ್ನಾಯುಗಳೂ, ಮಾಂಸವೂ ಚೆನ್ನಾಗಿ ವೃದ್ಧಿಯಾಗದೆ, ದೂರ ಹಾರಲಾರವು.

ಮರಿಗಳ ಕೊಂಡಿ ಬೆರಳುಗಳೂ ತೆವಳುವಿಕೆಯೂ, ಪೂರ್ಣ ಸರೀಸೃಪಗಳಂತಿದ್ದು ಅವುಗಳ ಉತ್ಪತ್ತಿಯ ಮೂಲವನ್ನು ಸೂಚಿಸುವಂತಿದೆ.

ಉಪವರ್ಗ ೧೫ : ಗ್ರೂಯಿಫಾರ್‌ಮಿಸ್ (Gruiformes)
(ಕೊಕ್ಕರೆ, ನಾಮದಕೋಳಿ, ಬಸ್‌ಟರ್ಡ್)

ಕುಟುಂಬ ೧೧

ಪ್ರಭೇದ ೧೮೫

ಬೇರೆಬೇರೆ ಗಾತ್ರದ ೧೧ ಕುಟುಂಬಗಳುಳ್ಳ ಉಪವರ್ಗವಿದು.

ಅವುಗಳ ಹೊರ ತೋರ್ಪಿನಲ್ಲಿ ಬಹಳ ವ್ಯತ್ಯಾಸಗಳಿದ್ದರೂ, ಒಳ ರಚನೆಯಲ್ಲಿ ಸಾಮ್ಯತೆ ಹೊಂದಿವೆ. ಒಟ್ಟು ೧೯೯ ಪ್ರಭೇದಗಳಿದ್ದು ಅದರಲ್ಲಿ ಹಲವು ಇತ್ತೀಚೆಗೆ

ನಶಿಸಿ, ಈಗ ೧೮೫ ಮಾತ್ರ ಜೀವಂತವಾಗಿವೆ. ಶೀತವಲಯುವನ್ನುಳಿದು ಮಿಕ್ಕ ಪ್ರದೇಶ ಗಳಲ್ಲೆಲ್ಲಾ ಕಂಡುಬರುತ್ತವೆ.

ಹೆಚ್ಚಿನವು ಜೌಗು ಪ್ರದೇಶದ ಅಥವಾ ನೀರಂಚಿನ ವಾಸಿಗಳು. ಕೆಲವು ಎತ್ತರ ಮೈದಾನದಲ್ಲೂ ಮರಳು ಭೂಮಿಯಲ್ಲೂ ವಾಸವಿರುತ್ತವೆ. ಗಟ್ಟಿ ಕೊಕ್ಕು, ಉದ್ದ ಕಾಲು, ಉದ್ದ ಕತ್ತು ಮತ್ತು ದೊಡ್ಡ ರೆಕ್ಕೆ ಹೊಂದಿರುತ್ತವೆ. ಬೆರಳು ಸಣ್ಣದರಿಂದ ಬಹು ಉದ್ದವಾಗಿರಬಹುದು. ಹಲವು ಪ್ರಭೇದಗಳ ಬೆರಳುಗಳು ಎಲೆಯಂತೆ ಅಗಲವಾಗಿರುತ್ತವೆ. ಗಂಡುಹೆಣ್ಣುಗಳಿಗೆ ಬಣ್ಣದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಗಾತ್ರ ಹೆಚ್ಚಿದಷ್ಟೂ ಚೆನ್ನಾಗಿ ಹಾರುತ್ತವೆ. ಎಷ್ಟೋ ಸಣ್ಣ ಪಕ್ಷಿಪ್ರಭೇದಗಳು ಹಾರ ಲಾರದವು. ಹಾರುವಾಗ ಕತ್ತು ಮುಂದೆ, ಕಾಲು ಹಿಂದೆ, ನೇರ ಚಾಚಿ ಹಾರುತ್ತವೆ. ಮರಿ ಜನಿಸಿದಾಗ ಚೆನ್ನಾಗಿ ಬೆಳೆದಿರುತ್ತದೆ. ಮರಿಪೋಷಣೆಯಲ್ಲಿ ಹೆಣ್ಣು ಅಥವಾ ಗಂಡು ಮಾತ್ರ ಸಹಾಯಮಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಎರಡೂ ಭಾಗವಹಿಸ ಬಹುದು.

ಕುಟುಂಬ ೧ : ಮೆಸಿಟಾರ್ನಿತಿಡೀ (Mesitornithidae)

ಮೆಡಗಾಸ್ಕರಿನ ಕಾಡು ಮತ್ತು ಪೊದರುಗಳ ನಡುವೆ ನೆಲವಾಸಿಗಳಾದ ೨ ವಿಚಿತ್ರ ಪ್ರಭೇದಗಳಿವೆ. ಕೆಂಚು ಅಥವಾ ಹಸಿರು ಕಂದು ಬಣ್ಣ ಹೊಂದಿರುವ ೧೦ – ೧೨ ಅಂಗುಲದ ಪಕ್ಷಿಗಳಿವು. ದೂರ ಹಾರಲಾರವು. ಆದರೆ ಚೆನ್ನಾಗಿ ಓಡಬಲ್ಲವು. ಅವು ಗಳ ದೇಹದಲ್ಲಿ ೫ ಜೊತೆ ಪುಡಿ ಪುಕ್ಕ ಪ್ರದೇಶಗಳಿವೆ.

ಇದರ ಒಂದು ಪ್ರಭೇದ ಪಾಂಚಾಲೀ ವಂಶಸ್ಥವು! ಹೆಣ್ಣು ಅನೇಕ ಗಂಡಂದಿರನ್ನು ಹೊಂದುತ್ತದೆ. ಗಂಡೇ ಗೂಡು ರಚಿಸಿ, ಮರಿ ಮಾಡುವುದು. ಇನ್ನೆರಡು ಪ್ರಭೇದಗಳಲ್ಲಿ ಗಂಡು ಹೆಣ್ಣುಗಳಿಗೆ ಹೆಚ್ಚಿನ ವ್ಯತ್ಯಾಸವಿಲ್ಲದೆ ಹೆಣ್ಣೇ ಕಾವುಕೊಟ್ಟು ಮರಿಮಾಡುವುದು. ಸಣ್ಣ ಮರ ಅಥವಾ ಪೊದರಿನ ನಡುವೆ ಹಲವು ಕಡ್ಡಿ ಗಳಿಂದ ಗೂಡು ರಚಿಸಿ, ೧ - ೩ ಮೊಟ್ಟೆಯಿಡುತ್ತವೆ. ಗೂಡಿಗೆ ಹಾರಲಾಗದೆ, ಮರ ವೇರಿ ಹತ್ತುತ್ತವೆ. ಮರಿಗಳಿಗೆ ಜನಿಸಿದಾಗ ಕರೀ ಮೃದು ಪುಕ್ಕಗಳಿರುತ್ತವೆ. ಕೀಟ, ಹಣ್ಣು, ಕಾಳುಗಳೇ ಮುಖ್ಯ ಆಹಾರ.

ಕುಟುಂಬ ೨ : ಟರ್‌ನಿಸಿಡೀ (Turnicidae)

ಈ ಕುಟುಂಬದ ೧೬ ಪ್ರಭೇದಗಳೂ ಸಣ್ಣ ಗಾತ್ರದ, ಹಗುರ ವರ್ಣದ, ಹೆಚ್ಚಾಗಿ ಹಾರಲಾರದ ನೆಲಪಕ್ಷಿಗಳು – ಚೆನ್ನಾಗಿ ಓಡಬಲ್ಲವು. **ತೋಕೆಣೆ ಪುರಲಿ** ಪಕ್ಷಿಗಳಂ ತಿದ್ದರೂ, ಇವಕ್ಕೆ ಹಿಂಬೆರಳಿರುವುದಿಲ್ಲ. ಕೊಕ್ಕು ಸಣ್ಣ. ಪೂರ್ವವಲಯದಲ್ಲಿ ಸ್ಪೈಯಿನ್ ನಿಂದ ಆಸ್ಟ್ರೇಲಿಯಾದವರೆಗಿನ ಪ್ರದೇಶದಲ್ಲಿ ಕಂಡುಬರುತ್ತದೆ. ಬಯಲು ಪ್ರದೇಶದ ಹುಲ್ಲುಗಾವಲುಗಳಲ್ಲಿ **ಬಸ್ ಟರ್ಡ್**‌ಗಳಂತೆ ಒಳಾಂಗರಚನೆ ಹೊಂದಿರುತ್ತವೆ.

ಗಾತ್ರ ೫-೮ ಅಂಗುಲ ಮಾತ್ರ. ಹುಲ್ಲುಗಾವಲು ಮಧ್ಯೆ ವಾಸಿಸುತ್ತಾ ಚೆನ್ನಾಗಿ ಬಾಗಿ ಓಡುತ್ತವೆ. ವಾತಾವರಣಕ್ಕೆ ಹೊಂದಿ ಕಾಣಿಸದಂತಹ ಮೈ ಬಣ್ಣ. ಒಂಟಿ ಅಥವಾ ಜೊತೆಯಾಗಿ ಮಾತ್ರ ಇರುತ್ತವೆ. ಹೆಣ್ಣು ಗಾತ್ರದಲ್ಲಿ ಸ್ವಲ್ಪ ದೊಡ್ಡದು. ಹೆಣ್ಣೇ ಪರ್ವಕಾಲದಲ್ಲಿ ಮುಖ್ಯ ಪಾತ್ರ ವಹಿಸಿ ಅನೇಕ ಗಂಡುಗಳ ಸಂಪರ್ಕ ಹೊಂದುತ್ತದೆ. ಹುಲ್ಲಿನ ನಡುವೆ ಸಣ್ಣ ಗೂಡು ರಚಿಸಿ ೩-೫ ಮೊಟ್ಟೆಯಿಡುತ್ತದೆ. ಕಾವು ಕೊಡುವುದೂ, ಮರಿಸಾಕುವುದೂ ಗಂಡಿನ ಕೆಲಸ. ಕಾವಿನ ಅವಧಿ ೧೦-೧೫ ದಿನ ಮಾತ್ರ. ಮರಿಗಳು ಹುಟ್ಟಿದಾಗ ಪೂರ್ಣ ಬೆಳೆದು, ಹುಟ್ಟಿದ ಕೂಡಲೇ ಓಡಾಡಲು ಸಮರ್ಥವಾಗಿರುತ್ತವೆ.

ಸಹರಾ ದಕ್ಷಿಣಕ್ಕಿರುವ ಪ್ರದೇಶದಲ್ಲಿನ ಪ್ರಭೇದ ಗಾತ್ರದಲ್ಲಿ ಬಹು ಸಣ್ಣ. ೨ ಮೊಟ್ಟೆಯನ್ನಿಡುತ್ತದೆ. ಅದಕ್ಕೆ ಕೊಕ್ಕಿನ ಬಳಿ ಮತ್ತು ರೆಕ್ಕೆಗಳ ಮೇಲೆ ಬಿಳಿಯ ಮಚ್ಚೆಯಿರುತ್ತದೆ. ಆಸ್ಟ್ರೇಲಿಯಾದ ಪ್ರಭೇದ ಗಾತ್ರ ಬಣ್ಣಗಳಲ್ಲಿ ಬೇರೆಯವುಗಳಂತಿದ್ದರೂ ಹಿಂಬೆರಳು ಚೆನ್ನಾಗಿ ಬೆಳೆದಿರುತ್ತದೆ. ರಾತ್ರಿ ತಿರುಗಾಡುವುದೇ ಹೆಚ್ಚು. ಕೆಲಸಮಯ ಬೆರಳುಗಳನ್ನು ಊರಿ ಎದ್ದು ನಿಂತು ಸುತ್ತಲೂ ನೋಡುತ್ತವೆ.

ಕುಟುಂಬ ೩ : ಗ್ರೂಯಿಡೀ (Gruidae)
(ಬಕಗಳು)

ಅತ್ಯಂತ ಪ್ರೇಕ್ಷಣೀಯ ಪಕ್ಷಿಕುಟುಂಬವಿದು. ಒಟ್ಟು ೧೪ ಪ್ರಭೇದಗಳನ್ನೊಳಗೊಂಡಿದೆ. ಉತ್ತಮ ಗರಿಗಳಿಗಾಗಿ ಹೆಚ್ಚಾಗಿ ಕೊಲ್ಲಲ್ಪಟ್ಟು ಈಗ ಹಲವು ಪ್ರಭೇದಗಳು ಪೂರ್ಣ ನಾಶಹೊಂದುವ ಸ್ಥಿತಿಯಲ್ಲಿವೆ. ಬಹುವಾಗಿ ಇವು ಜೌಗು, ನದೀತೀರ, ಹಾಗೂ ಕೆರೆಯಂಚಿನ ವಾಸಿಗಳು. ಹಲವು ಮಾತ್ರ ಸಮುದ್ರತೀರ ಮತ್ತು ಮರಳು ದಿಬ್ಬಗಳ ಮೇಲೆ ವಾಸಿಸುತ್ತವೆ.

ಉದ್ದ ಕಾಲಿನ, ಉದ್ದ ಕತ್ತಿನ, ದೊಡ್ಡ ರೆಕ್ಕೆಗಳ, ಮೊಟಕು ಬಾಲದ ಪಕ್ಷಿಗಳು. ತಲೆಯ ಕೆಳಭಾಗ ಬೋಳಾಗಿರಬಹುದು. ಹಿಂಬೆರಳು ಕಿರಿದಾಗಿ ಮೇಲಿರುತ್ತದೆ. ಹಾರುವಾಗ ಕತ್ತನ್ನು ನೇರ ಹೊರಚಾಚಿ ಹಾರಾಡುತ್ತವೆ. ಅವುಗಳ ಶ್ವಾಸನಾಳ ಪ್ರಭೇದಗಳಿಗನುಗುಣವಾಗಿ ಬೆಳೆದು ಬಹು ನೀಳವಾದ ಕಹಳೆ ಕೊಂಬಿನಂತಿರುತ್ತದೆ. ಈ ರಚನೆಯು ಈ ಕುಟುಂಬದ ವೈಶಿಷ್ಟ್ಯ. ಇದರಿಂದಲೇ ಅವುಗಳ ಕಹಳೆಯಂತಹ ಕೂಗು ಬಹಳ ದೂರ ಕೇಳಿಸುವುದು. ಹಾರುವಾಗಲೂ ವಿಶ್ರಮಿಸುವಾಗಲೂ ಶಬ್ದ ಮಾಡುತ್ತವೆ. ಹಲವೊಮ್ಮೆ ಆಕರ್ಷಣೀಯ ಶಬ್ದ ಮಾಡುವುದೂ ಉಂಟು. ಕೊಕ್ಕರೆಗಳಂತೆ ಕೊಕ್ಕುಗಳನ್ನು ಒಂದಕ್ಕೊಂದು ಬಡಿದು ಶಬ್ದ ಮಾಡುತ್ತವೆ.

ದ. ಅಮೇರಿಕಾ, ಮಲಯಾ ಪ್ರದೇಶ, ನ್ಯೂಜಿಲೆಂಡ್ ಮತ್ತು ಶೀತವಲಯಗಳನ್ನುಳಿದು ಇತರ ಎಲ್ಲೆಡೆ ಈ ಪ್ರಭೇದಗಳು ಕಾಣಬರುತ್ತವೆ. ಅನೇಕ ಪ್ರಭೇದಗಳು ಸಂಘಜೀವಿಗಳು. ವಲಸೆ ಹೋಗುತ್ತವೆ. ವಲಸೆಹೋಗುವಾಗ ಬಹು

ಎತ್ತರದಲ್ಲಿ ಹಾರಾಡುತ್ತವೆ. ೨ ಮೈಲಿಗಿಂತ ಮೇಲೆ ಹಾರಾಡುವುದು ಕಂಡು ಬಂದಿದೆ.

ಅವು ವಿವಿಧ ಆಹಾರ ತಿನ್ನುತ್ತವೆ. ಸಸ್ಯಾಹಾರ ಹೆಚ್ಚಾಗಿ ಉಪಯೋಗಿಸಿದರೂ ಹಣ್ಣು, ಕಾಳು, ವಿವಿಧ ಕೀಟ, ಕೀಟಮರಿಗಳು, ಬಸವನ ಹುಳು, ದ್ವಿಚರ, ಸರೀಸೃಪ ಮತ್ತು ವಿವಿಧ ಮೀನುಗಳನ್ನು ತಿನ್ನುತ್ತವೆ. ಮೆದು ಭೂಮಿಯಲ್ಲಿ ತಮ್ಮ ಕೊಕ್ಕಿನಿಂದ ಕೆದಕಿ, ಬೇರು ಹುಳುಗಳನ್ನು ಆರಿಸಿ ತಿನ್ನುತ್ತವೆ. ಹೊಲದಲ್ಲಿ ಮೇಯ್ದು ಆಗಾಗ ನೀರು ಕುಡಿಯಲು ನೀರಿನೆಡೆ ಹೋಗುತ್ತಿರುತ್ತವೆ. ಪೂರ್ತಿ ಕೊಕ್ಕನ್ನು ನೀರಿನಲ್ಲದ್ದಿ, ನೀರು ಸೆಳೆದು, ಕೊಕ್ಕನ್ನು ಮೇಲಕ್ಕೆತ್ತಿ ನುಂಗುತ್ತವೆ.

ಅವುಗಳಲ್ಲಿ ಪ್ರಣಯ ನರ್ತನ ಅತಿ ಮೋಹಕ. ರೆಕ್ಕೆಗಳನ್ನು ಅರ್ಧ ತೆರೆದು ಒಂದರ ಎದಿರೊಂದು ಸುತ್ತುತ್ತಾ, ಇದ್ದಕ್ಕಿದ್ದಂತೆ ರೆಕ್ಕೆಯನ್ನು ಪೂರ್ಣ ಅಗಲಿಸಿ ಮೇಲಕ್ಕೆ ಹಾರುತ್ತವೆ. ಮತ್ತು ಆಗಾಗ ಒಂದಕ್ಕೊಂದು ಬಾಗಿ ನಮಿಸಿ ನಿಮಿರುತ್ತವೆ. ಕಡ್ಡಿ, ಹುಲ್ಲುಗಳನ್ನು ಕಿತ್ತು ಮೇಲೆಸೆದು ಹಾರಿ, ಕುಕ್ಕಿ ಕುಣಿಯುತ್ತವೆ. ಅಂತೂ, ಅವುಗಳ ಈ ನರ್ತನ ಅತ್ಯಂತ ಆಕರ್ಷಣೀಯ. ಆದರೆ ಹಲವು ಪ್ರಭೇದಗಳಲ್ಲಿ ಈ ತರಹದ ನರ್ತನ ವರ್ಷವಿಡೀ ಇದ್ದು, ಬಹುಶಃ ಈ ವರ್ತನೆ ಅವುಗಳ ಸಂತೋಷ ಸೂಚಕವಾಗಿರಬಹುದು. ೧೫ – ೨೦ ಅಡಿ ಎತ್ತರ ನೆಗೆಯುತ್ತವೆ. ಅಲ್ಲದೆ, ಗುಂಪಿನಲ್ಲಿನ ಎಲ್ಲಾ ಪಕ್ಷಿಗಳೂ ಭಾಗವಹಿಸುತ್ತವೆ.

ಯೂರೋಪು, ಏಷ್ಯಾಗಳಲ್ಲಿ ೭ ಪ್ರಭೇದಗಳು ಹೆಚ್ಚಾಗಿವೆ. ಅವೆಲ್ಲವೂ ದ. ಆಫ್ರಿಕಾಕ್ಕೆ ವಲಸೆ ಹೋಗುತ್ತವೆ. ಅವುಗಳಲ್ಲಿ ಭಾರತದ **ಸಾರಸ** ಪಕ್ಷಿ ಅತಿ ಸುಂದರವಾದದ್ದು. ಅಮೇರಿಕಾದಲ್ಲಿ ೨ ಮುಖ್ಯ ಪ್ರಭೇದಗಳಿವೆ. ದ. ಯೂರೋಪಿನ **ಡೆಮುಸಲ್** ಭಾರತಕ್ಕೆ ವಲಸೆ ಬರುತ್ತದೆ. ಇದು ಸುಮಾರು ೩ ಅಡಿ ಎತ್ತರದ ಈ ಕುಟುಂಬದ ಸಣ್ಣ ಗಾತ್ರದ ಪಕ್ಷಿ ಪ್ರಭೇದ. ಆಫ್ರಿಕಾದ ಹುಲ್ಲುಗಾವಲುಗಳಲ್ಲಿ ಎರಡು ಮುಖ್ಯ ಪ್ರಭೇದಗಳಿವೆ. ಅದರಲ್ಲಿನ ಶಿಖೆಯ ಪ್ರಭೇದ, ನಯನ ಮೋಹಕ. ತಲೆಯ ಮೇಲೆ ನೀಳವಾಗಿ ಹರಡಿ ನಿಲ್ಲುವ ಗರಿಗಳು ಬ್ರಷ್‌ನಂತಿರುತ್ತವೆ. ಇನ್ನೊಂದು ಪ್ರಭೇದಕ್ಕೆ ಕತ್ತಿನಡಿ ಬಿಳಿಯ ಗರಿ ಬೆಳೆದಿರುವ ಜೋಲು ಮಾಂಸದ ಭಾಗವಿದೆ.

ಅವು ದೀರ್ಘಾಯುಷಿಗಳು. ಜಪಾನಿನ ಕಥೆಗಳಲ್ಲಿ ಅವುಗಳಿಗೆ ೧೦೦೦ ವರ್ಷ ಆಯಸ್ಸೆಂದು ಸೂಚಿಸಲಾಗಿದೆ. ಅದೇ ಅವರ ಶುಭ ಸೂಚಕ ಚಿಹ್ನೆ. ೭೦ – ೮೦ ವರ್ಷ ಬದುಕಬಲ್ಲವು. ಸೆರೆಯಲ್ಲಿ ೫೨ ವರ್ಷ ಬದುಕಿದ ಮಾಹಿತಿಯಿದೆ. ಅವು ವರ್ಷಕ್ಕೆ ಒಂದೇ ಸಲ ಮರಿ ಮಾಡುವುದು. ಮರಿಗಳ ಸಂಖ್ಯೆಯೂ ಕಡಮೆ.

ಅವೆಲ್ಲವೂ ನೆಲದಲ್ಲೇ ಗೂಡು ರಚಿಸುವುದು. ನೀರಿನಿಂದಾವರಿಸಲ್ಪಟ್ಟ ಜಾಗದಲ್ಲಿ ವಿಶಾಲ ಗೂಡುಗಳನ್ನು ರಚಿಸಿ, ೨ – ೩ ಮೊಟ್ಟೆಯಿಡುತ್ತವೆ. ಮೊಟ್ಟೆಗಳಲ್ಲಿ ೨ – ೩ ದಿನ ಅಂತರವಿರುವುದರಿಂದ ಮರಿ ಜೀವಿಸುವುದರಲ್ಲೂ ೨ – ೩ ದಿನದ ಅಂತರವಿರುತ್ತದೆ. ಕಾವು ಕಾಲಾವಧಿ ೩೦ – ೩೨ ದಿನಗಳು. ಗಂಡು ಹೆಣ್ಣುಗಳೆರಡೂ

ಕಾವು ಕೊಡುತ್ತವೆ. ಮರಿಗಳಿಗೆ ಹುಟ್ಟಿದಾಗ ಮೃದು ಗರಿಗಳ ಹೊದಿಕೆಯಿದ್ದು, ತಕ್ಷಣ ಓಡಾಡಲು ಶಕ್ತವಾಗಿರುತ್ತವೆ. ೧೦ ವಾರಗಳಲ್ಲಿ ಹಾರಾಡಬಲ್ಲವು.

ಅವುಗಳ ಗರಿ ಮಾಂಸಗಳ ಅಪೇಕ್ಷೆಯಿಂದಾಗಿ ಹೆಚ್ಚಾಗಿ ಕೊಲ್ಲಲ್ಪಟ್ಟು ಹಲವು ಪ್ರಭೇದ ನಿರ್ನಾಮವಾಗುವ ಸ್ಥಿತಿಯಲ್ಲಿವೆ. ಅಮೇರಿಕಾದ **ವೂಪಿಂಗ್** ಕೊಕ್ಕರೆಯ ಕಥೆ ಇದಕ್ಕೆ ನಿದರ್ಶನ. ಸಂಖ್ಯೆ ಕೇವಲ ೨೩ಕ್ಕೆ ಇಳಿದಿದ್ದು ಈಗ ರಕ್ಷಣೆ ಹೊಂದಿ ಒಟ್ಟು ೪೭ ಪಕ್ಷಿಗಳಾಗಿವೆ. ಅವುಗಳಲ್ಲಿ ೬ ಬೇರೆಬೇರೆ ಮೃಗಾಲಯಗಳಲ್ಲಿರುವುವು. ಬೌದ್ಧಮತೀಯ ರಾಜ್ಯಗಳಲ್ಲಿ ಮಾತ್ರ ಅದಕ್ಕೆ ಹೆಚ್ಚಿನ ಮರ್ಯಾದೆ ಇರುವುದರಿಂದ ರಕ್ಷಣೆಗೊಳಗಾಗಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತವೆ.

ಕುಟುಂಬ ೪ : ಅರಾಮಿಡೀ (Aramidae)

ಒಂದೇ ಪ್ರಭೇದವನ್ನೊಳಗೊಂಡು ಉತ್ತರ ಅಮೇರಿಕಾದ ದಕ್ಷಿಣ ಪ್ರದೇಶದಿಂದ, ದ. ಅಮೇರಿಕಾದ ಅರ್ಜೆಂಟೈನಾವರೆಗೆ ಕಂಡುಬರುವ ಲಿಂಪ್‌ಕಿನ್ ಕುಟುಂಬವಿದು. ಇವು ಬಕಗಳಿಗೂ, ನೀರು ಕೋಳಿಗಳ ಕುಟುಂಬಕ್ಕೂ ನಡುವಣದು. ಎಲಬುಗಳೂ, ಗರಿಗಳೂ ಬಕಗಳಂತಿದ್ದು, ಜೀರ್ಣೇಂದ್ರಿಯ ಮತ್ತು ನಡತೆಯೆಲ್ಲಾ ನೀರು ಕೋಳಿಗಳಂತಿರುತ್ತವೆ.

ಇವುಗಳ ಹಿಂಬೆರಳು ನೀಳವಾಗಿ ಒಂದೇ ಮಟ್ಟದಲ್ಲಿರುತ್ತವೆ. ತಲೆ ತುಂಬ ಪುಕ್ಕದಿಂದತುಂಬಿದೆ. ರೆಕ್ಕೆ ಸಣ್ಣ. ಅಳುವಂತಹ ಶಬ್ದ ಮಾಡುತ್ತವೆ. ವಲಸೆ ಹೋಗಲಾರವು. ಅಡವಿಯ ಮಧ್ಯೆ, ನೀರಿನ ಸುಳಿ, ಜೊಂಡುಗಳ ಮಧ್ಯೆ ವಾಸಿಸುತ್ತವಾದರೂ, ಸಣ್ಣ ಮರ ಪೊದರುಗಳ ಮೇಲೆ ಹಾರಿ ಕುಳಿತು, ಕೊಂಬೆಗಳ ಮೇಲೆಲ್ಲಾ ಓಡಾಡುತ್ತಿರುತ್ತವೆ.

ಚೆನ್ನಾಗಿ ಈಜಬಲ್ಲವು. ರಾತ್ರೆ ಮರದಲ್ಲೇ ತಂಗುವುವು. ಬಸವನ ಹುಳು ಮತ್ತು ಮೃದ್ವಂಗಿಗಳೇ ಮುಖ್ಯ ಆಹಾರ. ಕೀಟ, ಕಪ್ಪೆ ಮೊದಲಾದುವುಗಳನ್ನು ತಿನ್ನಬಲ್ಲವು.

ಸಣ್ಣ ಪೊದರು, ಮರ ಅಥವಾ ನೀಳ ಜೊಂಡಿನಲ್ಲಿ ಕಸಕಡ್ಡಿಗಳಿಂದ ದೊಡ್ಡ ಗೂಡು ರಚಿಸಿ ೪ – ೮ ಮೊಟ್ಟೆಯಿಡುತ್ತವೆ. ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡಿ ಪೋಷಿಸುತ್ತವೆ. ಮರಿಗಳಿಗೆ ಕಂದು, ಮೃದು ಪುಕ್ಕವಿರುತ್ತದೆ.

ಇವೆಲ್ಲವೂ ದೂರ ಹಾರದ, ರುಚಿಕರ ಮಾಂಸಪಕ್ಷಿಗಳಾದ್ದರಿಂದ, ಬೇಟೆಮಾಡಲೂ ಹಿಡಿಯಲೂ ಸುಲಭ. ಅಲ್ಲಲ್ಲಿ ರಕ್ಷಣಾ ಕ್ಷೇತ್ರವೇರ್ಪಡದಿದ್ದಲ್ಲಿ ಈ ವೇಳೆಗೇ ನಿರ್ನಾಮವಾಗುತ್ತಿತ್ತು.

ಕುಟುಂಬ ೫ : ಸೋಫಿಡೀ (Psophiidae)

(ಟ್ರಂಪೆಟಿಯರ್‌ಗಳು)

ದ. ಅಮೇರಿಕಾದ ಜೌಗು ಕಾಡುಗಳಲ್ಲಿ ವಾಸಿಸುವ ೩ ಪ್ರಭೇದಗಳ ಕುಟುಂಬ ವಿದು. ಲಿಂಪೆಟ್‌ಗಳಂತೆಯೇ ಬಕ ಹಾಗೂ ನೀರುಕೋಳಿಗಳ ನಡುವಣ ಸಂಬಂಧ ಹೊಂದಿವೆ. ಇವುಗಳಿಗೆ ಉದ್ದದ ಕಾಲುಗಳು ಇದ್ದರೂ ಕೋಳಿಗಳಂತಹ ಗಿಡ್ಡ ಕೊಕ್ಕು ಮತ್ತು ದುಂಡನೆಯ ರೆಕ್ಕೆಗಳಿರುತ್ತವೆ. ನದಿಗಳನ್ನು ದಾಟಬೇಕಾದಾಗ ಚೆನ್ನಾಗಿ ಈಜುತ್ತವೆ. ಬಕಗಳಂತೆಯೇ ಪರ್ವಕಾಲದಲ್ಲಿ ನರ್ತನ ಮಾಡುತ್ತವೆ. ನೆಲದ ಮೇಲಿನ ಗೂಡುಗಳಲ್ಲಿ ೬ – ೧೦ ಬಿಳಿಯ ಅಥವಾ ಹಸಿರು ವರ್ಣದ ಮೊಟ್ಟೆ ಇಡುತ್ತವೆ.

ಗಂಡು ಹಕ್ಕಿ ದೀರ್ಘವಾಗಿ ಕಹಳೆಯಂತೆ ಕೂಗುತ್ತದೆ. ಸುಲಭವಾಗಿ ಹಿಡಿಯ ಬಹುದಾದ್ದರಿಂದಲೂ, ಮಾಂಸ ಕೋಳಿಯಂದರಂತೆ ರುಚಿಕರವಾದ್ದರಿಂದಲೂ ಇವುಗಳು ದಟ್ಟ ಕಾಡುಗಳ ಮಧ್ಯೆ ಮಾತ್ರ ಕಂಡುಬರುತ್ತವೆ.

ಕುಟುಂಬ ೬ : ರಾಲ್ಲಿಡೀ (Rallidae)

(ರೆಯಿಲ್ ಮತ್ತು ಕೂಟ್ ನೀರುಕೋಳಿಗಳು)

ಇವು ಸಾಮಾನ್ಯವಾಗಿ ಓಡಾಡುವ, ಈಜುವ ಅಥವಾ ತೀರದ ನೀರಿನಲ್ಲಿ ನಡೆದಾಡುವ ಸಣ್ಣ ಅಥವಾ ಮಧ್ಯಮ ಗಾತ್ರದ ಪಕ್ಷಿಗಳು. ೧೩೨ ಪ್ರಭೇದಗಳನ್ನೊಳಗೊಂಡಿವೆ. ಬಣ್ಣ ಸಾಮಾನ್ಯ. ಹಲವು ಮಾತ್ರ ವರ್ಣರಂಜಿತ. ಕೋಳಿಯಾಕಾರವೇ ಹೆಚ್ಚು. ಕೆರೆ, ಕೊಳ, ಮೈದಾನ ಪ್ರದೇಶಗಳಲ್ಲಿ ವಾಸಮಾಡುತ್ತವೆ.

ರೆಯಿಲ್, ಗ್ಯಾಲಿನ್ಯೂಲ್ ಮತ್ತು ಕೂಟ್‌ಗಳೆಂಬ ಮೂರು ಜಾತಿಗಳಿದ್ದರೂ ಅವುಗಳೆಲ್ಲಕ್ಕೂ ಹೋಲಿಕೆಯಿದೆ. ಎಲ್ಲವೂ ಸರ್ವ ಭಕ್ಷಕ ಪಕ್ಷಿಗಳು. ಎಂತಹ ಆಹಾರವನ್ನಾದರೂ ಬಳಸಿ ಜೀವಿಸಬಲ್ಲವು. ಅವುಗಳಲ್ಲಿನ ವೈವಿಧ್ಯತೆಗೆ ವಾಸದ ವಾತಾವರಣಕ್ಕನುಗುಣವಾದ ಹೊರ ಮಾರ್ಪಾಟು ಮಾತ್ರ ಕಾರಣ.

ರೆಯಿಲ್ ಪಕ್ಷಿಗಳಿಗೆ ದೇಹ ಚಪ್ಪಟೆಯಾಗಿದ್ದು, ಜೊಂಡುಗಳ ಮಧ್ಯೆ ವೇಗದಿಂದ ತೂರಿ ಓಡಾಡಲು ಅನುಕೂಲವಾಗಿರುತ್ತದೆ. ಎಲ್ಲವೂ ವಾತಾವರಣಕ್ಕೆ ಹೊಂದಿಕೊಳ್ಳುವಂತಹ ಸೌಮ್ಯ ವರ್ಣ ಹೊಂದಿರುತ್ತವೆ. ಕೆಂಪು, ಕಂದು ಬಣ್ಣಗಳೇ ಜಾಸ್ತಿ. ಬೂದು ಬಣ್ಣವಿದ್ದಲ್ಲಿ ಚುಕ್ಕೆ ಅಥವಾ ಚಪ್ಪಟೆ ಹೊಂದಿ ಆಕರ್ಷಕವಾಗಿರುತ್ತವೆ. ಕಾಲು ದೃಢವಾಗಿದ್ದು, ಬೆರಳುಗಳು ಬಲು ನೀಳವಾಗಿ, ಕೆಸರು ಜಲಸಸ್ಯಗಳ ಮೇಲೆ ಓಡಾಡಲು ಅನುಕೂಲವಾಗಿರುತ್ತದೆ. ಜೊಂಡು, ಹುಲ್ಲು ಮಧ್ಯೆ ಅವಿತಿದ್ದು ಸಂಜೆ, ರಾತ್ರೆ ಹೆಚ್ಚಾಗಿ ಕೂಗುತ್ತಿರುತ್ತವೆ.

ಅವುಗಳಲ್ಲಿ ಉದ್ದ ಕೊಕ್ಕಿನವು ಅಮೇರಿಕಾದಲ್ಲಿಯೂ, ಸಣ್ಣ ಕೊಕ್ಕಿನವು ಯೂರೋಪಿನಲ್ಲಿಯೂ ಹೆಚ್ಚು. ಅವುಗಳನ್ನು ಕ್ರೇಕ್‌ಗಳೆಂದೂ ಕರೆಯಲಾಗುತ್ತದೆ.

ಅವೆಲ್ಲವೂ ನೆಲದಮೇಲೆ ಜೊಂಡು, ಹುಲ್ಲುಗಳ ನಡುವೆ, ಸಸ್ಯ, ಕಡ್ಡಿಗಳಿಂದ ಗೂಡು ರಚಿಸಿ ೫–೧೪ ಮೊಟ್ಟೆಯಿಡುತ್ತವೆ. ಮೊಟ್ಟೆ ಮಾಸಲು ಬಣ್ಣ. ಕಂದು ಅಥವಾ ಕೆಂಪು ಚುಕ್ಕೆಗಳಿರುತ್ತವೆ. ಗಂಡು ಹೆಣ್ಣುಗಳೆರಡೂ ಕಾವು ಕೂರುತ್ತವೆ. ಮರಿ ಬಲಿತು ಜನಿಸುತ್ತದೆ.

ಕೂಟ್‌ಗಳು ಭಾರತದಲ್ಲಿ ನಾಮದ ಕೋಳಿಗಳೆಂದು ಹೆಸರಾದವು. ಅವುಗಳ ಬೆರಳುಗಳು ಎಲೆಯಂತೆ ಅಗಲವಾಗಿ ಬೆಳೆದಿರುತ್ತವೆ. ಉತ್ತಮ ಈಜುಗಾರ ಪಕ್ಷಿಗಳು. ಹೆಚ್ಚಿನಕಾಲ ನೀರಿನಲ್ಲಿ ಇರುತ್ತವೆ. ಈಜುವಾಗ ತಲೆಯಲ್ಲಾಡಿಸುವಂತೆ ವರ್ತಿಸುತ್ತವೆ. ಸಂಘಜೀವಿಗಳು. ಜೊಂಡು ಬೆಳೆದ ತಗ್ಗು ನೀರಿನಲ್ಲೇ ಹೆಚ್ಚಾಗಿ ವಾಸ. ಹೆದರಿದಾಗ ಬಹು ದೂರ ಅಗಲ ಬೆರಳುಗಳ ಸಹಾಯದಿಂದ ನೀರಿನ ಮೇಲೆ ನಡೆದು ಮುಂದೆ ಹಾರುತ್ತವೆ.

ಅವು ೧೨–೧೮ ಅಂಗುಲ ಉದ್ದ ದೇಹದ ಸಾಮಾನ್ಯ ಕಪ್ಪು ಬಣ್ಣದ ಪಕ್ಷಿಗಳು. ಕೊಕ್ಕಿನ ಮೇಲೆ ಬಿಳಿಯ ನೀಳ ಗಂಟಿದ್ದು ಅದೇ ನಾಮದಂತೆ ಕಾಣುತ್ತದೆ. ಆಫ್ರಿಕಾದ ಪ್ರಭೇದ ಒಂದರಲ್ಲಿ ಈ ಬಿಳಿಯ ಗಂಟಿನ ಮೇಲೆ ಕೆಂಪು ಮಚ್ಚೆಗಳಿರುತ್ತವೆ. ಶೀತ ವಲಯಗಳನ್ನುಳಿದು ಪ್ರಪಂಚದ ಬಹುಭಾಗದಲ್ಲಿ ಕಂಡುಬರುತ್ತವೆ. ಕೊಂಬುವಲಯ ನೀರುಕೋಳಿಗೆ ಈ ಗಂಟಿನ ಮಧ್ಯದಲ್ಲಿ ಕೊಂಬಿನಂತಹ ಬೆಳವಣಿಗೆ ಇದೆ. ದ. ಅಮೇರಿಕಾದ ಆಂಡೀಸ್ ಪರ್ವತಶ್ರೇಣಿಗಳ ಕೆಲ ಪ್ರದೇಶದಲ್ಲಿ ಮಾತ್ರ ಕಾಣಿಸುತ್ತವೆ.

ಅವುಗಳೆಲ್ಲಾ ಜೊಂಡುಗಳ ನಡುವೆ ವಿವಿಧ ಸಸ್ಯ ಭಾಗಗಳಿಂದ ತೇಲುವ ಗೂಡು ರಚಿಸುತ್ತವೆ.

'ಗ್ಯಾಲಿನೂಲ್ಸ್' ಪಂಗಡ ಇವೆರಡರ ಮಧ್ಯದವು. ಹಣೆಫಲಕ ನೀರು ಕೋಳಿಗಳಿಗಿಂತ ವಿಶಾಲವಾಗಿರುತ್ತದೆ. ಕೊಕ್ಕು ಮತ್ತು ಫಲಕ ಕೆಂಪು ಅಥವಾ ಹಳದಿ ಬಣ್ಣ ಹೊಂದಿರುತ್ತವೆ. ಅವು ಉಷ್ಣ ಮತ್ತು ಸಮಶೀತೋಷ್ಣವಲಯ ಗಳಲ್ಲಿ ಹೆಚ್ಚಾಗಿ ಹರಡಿರುತ್ತವೆ. ದೇಹ ಮಿರುಗುವ ನೀಲಿ, ಹಸಿರು, ನೇರಳೆ ಮುಂತಾದ ಬಣ್ಣ ಹೊಂದಿರುತ್ತವೆ. ಕಾಲು ಹಳದಿ ಅಥವಾ ಹಸಿರು ಬಣ್ಣ.

ನೀರುಕೋಳಿಗಳಂತೆಯೇ ತೇಲುಗೂಡು ರಚಿಸುವುವು. ೬–೮ ಮೊಟ್ಟೆ ಯಿಟ್ಟು ಮರಿ ಮಾಡುತ್ತವೆ. ಮರಿಗಳು ಬಲಿತು ಜನಿಸುತ್ತವೆ.

ತಿನ್ನಲು ರುಚಿಕರವಾದ್ದರಿಂದ ಇವುಗಳನ್ನು ಅತಿಯಾಗಿ ಕೊಲ್ಲಲಾಗುತ್ತಿದೆ. ಕಳೆದ ಹಲವು ವರ್ಷಗಳಲ್ಲಿ ೧೦–೧೫ ಪ್ರಭೇದಗಳು ಪೂರ್ಣ ನಶಿಸಿವೆ ! ಅವುಗಳಲ್ಲಿ ನೀಲಿವರ್ಣದ ಟರ್ಕಿಕೋಳಿ ಗಾತ್ರದ ಕೆಂಪು ಫಲಕ ಹೊಂದಿದ ಟಕಾಹೆ ಎಂಬ ನ್ಯೂಜೀಲೆಂಡ್ ಪ್ರಭೇದ ಪೂರ್ಣ ನಶಿಸಿದೆ ಎಂದು ಊಹಿಸಲಾಗಿತ್ತು. ೧೯೪೮ರಲ್ಲಿ ಆಕಸ್ಮಾತ್ತಾಗಿ ದುರ್ಗಮ ಬೆಟ್ಟ ಕಣಿವೆಯೊಂದರ ನಡುವೆ ಸುಮಾರು ೧೦೦ ಪಕ್ಷಿಗಳು ಬದುಕಿರುವುದು ಕಂಡುಬಂದು, ಅವುಗಳನ್ನು ರಕ್ಷಿಸಿ ವೃದ್ಧಿಗೊಳಿಸಲು ಸರ್ವಪ್ರಯತ್ನ ಮಾಡಲಾಗುತ್ತಿದೆ. ಹಾರಲಾರದ ಸಣ್ಣ ಕೋಳಿಯಂತಹ **ವೆಕಾ** ಎಂಬ ಪ್ರಭೇದ ವೊಂದು ನ್ಯೂಜಿಲೆಂಡಿನಲ್ಲಿ ಹೆಚ್ಚಾಗಿದೆ.

ಕುಟುಂಬ ೭ : ಹೆಲಿಯಾರ್ನಿತಿಡೀ (Heliornithidae)

(ಫಿನ್‌ಫ್ರುಟ್‌ಗಳು)

ಮಧ್ಯ ಮತ್ತು ದ. ಅಮೇರಿಕಾ, ಮಧ್ಯ ಆಫ್ರಿಕಾ ಮತ್ತು ಸುಮಾತ್ರಾ ದ್ವೀಪಗಳಲ್ಲಿ ಕಂಡುಬರುವ ೩ ಪ್ರಭೇದಗಳುಳ್ಳ ರೆಯಿಲ್‌ನಂತಹ ಪಕ್ಷಿ ಕುಟುಂಬ. ಇವು ಬೇಗ ಗಾಬರಿಯಾಗುವ ನಾಚುವ ಪಕ್ಷಿಗಳು. ಚೆನ್ನಾಗಿ ನೋಡಲು ಸಿಗುವುದಿಲ್ಲ.

ಉದ್ದ ಕತ್ತಿನ, ಉದ್ದ ಕೊಕ್ಕಿನ, ಉದ್ದ ದೇಹದ ಪಕ್ಷಿಗಳು. ಬಾಲ ಉದ್ದ. ಕಾಲು ಗಿಡ್ಡ. ಬೆರಳುಗಳು ನೀರುಕೋಳಿಗಳಂತೆ ಅಗಲವಾಗಿರುತ್ತವೆ. ಈಜುವಾಗ ದೇಹದ ಬಹು ಭಾಗ ಮುಳುಗಿರುವುದು. ಮತ್ತು ರಾತ್ರಿ ನೀರಿನ ಮೇಲೆ ಕೊಂಬೆಗಳಲ್ಲಿ ವಿಶ್ರಮಿಸುವುದು. ಡಾಕ್ಟರ್ ಪಕ್ಷಿಗಳನ್ನು ಹೋಲುತ್ತವೆ. ಮೈಯೆಲ್ಲಾ ಗರಿಯಿಂದ ಕೂಡಿವೆ. ತಲೆ ಮೈದು, ಬಿಳಿಚುಕ್ಕೆ ಪಟ್ಟೆಗಳಿರಬಹುದು. ಪುಕ್ಕ ಸಣ್ಣ. ಮೀನು ಮತ್ತು ಜಲಚರಗಳೇ ಮುಖ್ಯ ಆಹಾರ. ಕಪ್ಪು ಪ್ರದೇಶದಲ್ಲಿ ಒಂಟಿ ಅಥವಾ ಜೊತೆಗೂಡಿ ವಾಸಿಸುತ್ತವೆ. ಪೂರ್ಣ ಜೀವನ ಚರಿತ್ರೆ ಸರಿಯಾಗಿ ತಿಳಿದಿಲ್ಲ.

ಕುಟುಂಬ ೮ : ರೈನೋಕೇಟಿಡೀ (Rnynochetidae)

(ಕಾಗು)

ಶಾಂತಿಸಾಗರದ ದಕ್ಷಿಣಕ್ಕಿರುವ ಕ್ಯಾಲಿಡೋನಿಯಾ ದ್ವೀಪ ವಾಸಿಗಳಾದ ಬಹು ಹಿಂದುಳಿದ ಪಂಗಡದ **ಕಾಗು** ಪಕ್ಷಿ ಪ್ರಭೇದ ಮಾತ್ರ ಇದಕ್ಕೆ ಸೇರಿದೆ. ಹಾರಲಾರದ, ನೀಳ ಕಾಲಿನ ಬೂದು ಬಣ್ಣದ ಪಕ್ಷಿಗಳು. ಕೊಕ್ಕು ಮತ್ತು ಕಾಲುಗಳು ಅಚ್ಚ ಕೆಂಪು. ವೇಗವಾಗಿ ಓಡಬಲ್ಲವು. ಬಹು ದೂರ ಕೇಳುವಂತಹ ಕೀಚಲು ಧ್ವನಿಯಿದೆ. ನಿಮಿರಿ ನಿಲ್ಲುವ ಗರಿಗಳ ಶಿಖೆಯಿದೆ.

ಪರ್ವಕಾಲದಲ್ಲಿ ರೆಕ್ಕೆ ಅರ್ಧ ತೆರೆದು ಓಡಿ ಕುಪ್ಪಳಿಸಿ ನರ್ತನ ಮಾಡುತ್ತದೆ. ಸಾಮಾನ್ಯವಾಗಿ ನೆಲದಮೇಲೆ ಎಲೆ, ಕಡ್ಡಿಗಳ ಗೂಡು ರಚಿಸಿ ಒಂದೇ ಮೊಟ್ಟೆಯಿಡುವುದು. ೪೦ ದಿನಗಳ ಕಾಲಾವಧಿ. ಹೆಣ್ಣು ಗಂಡುಗಳೆರಡೂ ಕಾವು ಕೊಡುತ್ತವೆ. ನಾಯಿ, ಬೆಕ್ಕುಗಳ ಹಾವಳಿಯಿಂದ ಈಗ ಹೆಚ್ಚು ನಾಶವಾಗಿ ಬಹುಶಃ ಹಲವೇ ವರ್ಷಗಳಲ್ಲಿ ಪೂರ್ಣವಾಗಿ ನಾಶಹೊಂದಬಹುದು.

ಕುಟುಂಬ ೯ : ಕಾರ್ಯಾಮಿಡೀ (Cariamidae)

(ಸೆರೀಮಾಸ್)

ಬ್ರೆಜಿಲ್‌ನಿಂದ ಅರ್ಜೆಂಟೈನಾವರೆಗಿನ ಪ್ರದೇಶದಲ್ಲಿನ ೨ ಜಾತಿ ಪ್ರಭೇದಗಳು. ಮೇಲ್ಮೈ ಕಂದು ಬಣ್ಣ, ತಳಭಾಗ ಬೂದು, ನೀಳ ಕತ್ತು, ಉದ್ದನೆಯ ಕಾಲುಗಳು, ನೇರವಾಗಿ ನಿಂತಿರುವ ನೀಳ ಬಾಲ, ಮತ್ತು ಉದ್ದನೆಯ ಮೇಲ್ಮೊಕ್ಕು ಮೊನಚಾಗಿ ಕೆಳಬಾಗಿರುತ್ತದೆ. ನೆಲವಾಸಿಗಳು. ಜೊತೆ ಅಥವಾ ಗುಂಪುಗಳಾಗಿ ಮೇಯುತ್ತಿರುತ್ತವೆ. ಹೆದರಿದಾಗ ತಲೆಕೆಳಗಿಟ್ಟು ವೇಗವಾಗಿ ಓಡಿ ತಪ್ಪಿಸಿಕೊಳ್ಳುತ್ತವೆ. ಕೊಕ್ಕಿನ

ಮೇಲೆ ನೇರಗರಿ, ಶಿಖೆಯ ಪ್ರಭೇದದವು ಹುಲ್ಲುಗಾವಲುಗಳಲ್ಲಿ ವಾಸಮಾಡುತ್ತವೆ. ಕಾಡು ಪೊದರುಗಳಲ್ಲಿಯೂ ಇರುತ್ತವೆ.

ರಾತ್ರಿ ಮರದ ಕೊಂಬೆಯ ಮೇಲೆಯೇ ವಿಶ್ರಮಿಸುವುದು. ಹೆಚ್ಚಾಗಿ ಹಾರಲಾರವು. ಕೀಟಗಳೇ ಮುಖ್ಯ ಆಹಾರ. ಇರುವೆ ಇಷ್ಟ. ಸಣ್ಣ ಹಲ್ಲಿ, ಹಾವುಗಳನ್ನು ತಿನ್ನುತ್ತವೆ. ಪರ್ವಕಾಲದಲ್ಲಿ ಗಂಡು ನರ್ತಿಸುತ್ತದೆ. ಅವುಗಳ ಕೂಗು ಕೇಕೆ ಹಾಕಿ ನಕ್ಕಂತೆ ಕೇಳಿಸುತ್ತದೆ. ಎರಡೇ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ ಕಾವು ಕೊಟ್ಟು ಮರಿಮಾಡುತ್ತವೆ.

ಕುಟುಂಬ ೧೦ : ಯೂರಿಫ್ಲಿಜಿಡೀ (Euryphygidae)

(ಸನ್ ಬಿಟ್ಟರ್ನ್‌ಗಳು)

ಮಧ್ಯ ಮತ್ತು ದ. ಅಮೇರಿಕಾದ ನಿವಾಸಿ. ಒಂಟಿ ಅಥವಾ ಜೊತೆಗೂಡಿ ಕಾಡುಗಳ ನಡುವೆ ಅಥವಾ ಅಂಚಿನಲ್ಲಿನ ನದಿ, ಕೊಳಗಳ ಪಕ್ಕ ವಾಸಿಸುವುವು. ವಲಸೆ ಹೋಗಲಾರದ ಸ್ಥಳ ವಾಸಿಗಳು. ಒಂದೇ ಪ್ರಭೇದದ ೩ ವಿಧಗಳನ್ನೊಳಗೊಂಡಿವೆ.

ತೀರದಲ್ಲಿ ನಿಧಾನವಾಗಿ ನಡೆಯುತ್ತಾ ಮೀನು, ಕಪ್ಪೆ ಮುಂತಾದ ಜಲಚರಗಳನ್ನು ತಿನ್ನುತ್ತವೆ. ಸಾಕಾದಾಗ ಅಥವಾ ಬೆದರಿದಾಗ ಪಕ್ಕದ ಮರದ ಮೇಲಕ್ಕೆ ಹಾರಿ ಕುಳಿತುಕೊಳ್ಳುತ್ತವೆ. ರೆಕ್ಕೆಯಗಲಿಸಿದಾಗ ಆದರಲ್ಲಿ ಕೆಂಪು, ಕಂದು, ಬೂದುಬಣ್ಣಗಳಿದ್ದು ಪಂಕದಂತೆ ಹರಡುತ್ತದೆ. ಬಾಲದ ತುದಿಯು ದುಂಡಗಿನ ಪಂಕದಂತಿರುತ್ತದೆ.

ಪರ್ವಕಾಲದಲ್ಲಿ ಗಂಡು ಬಾಲ ಮತ್ತು ರೆಕ್ಕೆಗಳನ್ನು ಅಡ್ಡ ಹರಡಿ ನರ್ತಿಸುತ್ತವೆ. ಮರದ ಮೇಲೆ ಎಲೆ, ಕಡ್ಡಿ, ಸೊಪ್ಪುಗಳ ಗುಂಡೆ ಸೇರಿಸಿ ಗೂಡು ರಚಿಸುತ್ತವೆ. ಈ ಗುಂಡೆಯ ಒಂದು ಪಾರ್ಶ್ವದಲ್ಲಿ ಒಳಹೋಗಲು ಅರ್ಧ ವರ್ತುಲಾಕಾರದ ಬಾಗಿಲು ಏರ್ಪಟ್ಟಿರುತ್ತದೆ. ೨ ಮೊಟ್ಟೆಗಳು ಸಾಮಾನ್ಯ. ಮರಿ ಬಲಿತು ಜನಿಸುತ್ತದೆ.

ಕುಟುಂಬ ೧೧ : ಓಟಿಡೀ (Otidae)

(ಬಸ್ಟರ್ಡ್‌ಗಳು)

ಪಶ್ಚಿಮ ವಲಯದ ಮೈದಾನ ಪ್ರದೇಶದ ಹುಲ್ಲುಗಾವಲಿನ ಮಧ್ಯೆ ವಾಸಿಸುವ ಸಾಮಾನ್ಯವಾಗಿ ದಪ್ಪ ಗಾತ್ರದ ಪಕ್ಷಿಗಳಿವು. ಆಫ್ರಿಕಾದಲ್ಲಿ ೧೬ ಪ್ರಭೇದಗಳೂ, ಯೂರೋಪ್, ಏಷ್ಯಾಗಳಲ್ಲಿ ೬ ಪ್ರಭೇದಗಳೂ, ಆಸ್ಟ್ರೇಲಿಯಾದಲ್ಲಿ ಒಂದು ಪ್ರಭೇದವೂ ಇವೆ.

ಹಲವು ಆಫ್ರಿಕಾ ಪ್ರಭೇದಗಳು ಕೋಳಿಯ ಗಾತ್ರವಿದ್ದು ೩ – ೩ ೧/೨ ಪೌಂಡು ತೂಕವಿರುತ್ತವೆ. ಉಳಿದುವು ದಪ್ಪ ಗಾತ್ರದವು. ೩ ೧/೨ ಅಡಿ ಎತ್ತರವಿದ್ದು ೩೦ – ೪೦ ಪೌಂಡು ಭಾರವಿರಬಲ್ಲವು. ಎಲ್ಲಕ್ಕೂ ತೀಕ್ಷ್ಣ ದೃಷ್ಟಿಯಿದ್ದು, ಹಾರಲು ಶಕ್ತ

ವಾಗಿದ್ದರೂ ಓಡಿ ತಪ್ಪಿಸಿಕೊಳ್ಳಲು ಯತ್ನಿಸುವುದೇ ಸಾಮಾನ್ಯ ವಾಡಿಕೆ. ಕಂದು ಅಥವಾ ಬೂದು ಬಣ್ಣದ ಮೈಮೇಲೆ ಆಕರ್ಷಕ ಪಟ್ಟೆ ಅಥವಾ ಬಿಳುಪು ಅಥವಾ ಕಪ್ಪು ಬಣ್ಣದ ಮಚ್ಚೆಗಳಿರಬಹುದು. ಹಲವು ಪ್ರಭೇದಗಳಿಗೆ ಶಿಖೆಗಳಿವೆ.

ಉದ್ದ ಕಾಲಿನ, ನೀಳ ಕತ್ತಿನ, ಅಗಲ ರೆಕ್ಕೆಯ, ಗುಂಡು ದೇಹದ ಪಕ್ಷಿಗಳಿವು. ಬಕಗಳಂತೆ ನೀಳವಾಗಿ ಕತ್ತನ್ನು ಮುಂದೆ ಚಾಚಿ ಹಾರುತ್ತವೆ. ಹೆಚ್ಚು ಎತ್ತರದಲ್ಲಿ ಹಾರುವುದಿಲ್ಲ. ಬಹುಶಃ ಅವುಗಳ ಭಾರ ಶರೀರವೇ ಇದಕ್ಕೆ ಕಾರಣವಿರಬಹುದು. ೧೨ – ೧೬ ಪಕ್ಷಿಗಳ ಗುಂಪು ಒಟ್ಟಾಗಿ ವಾಸಿಸುತ್ತವೆ.

ಅವು ರುಚಿಕರ ಮಾಂಸ ಹೊಂದಿ ಹೆಚ್ಚು ಭಾರವಿರುವುದರಿಂದ ಸಾಮೂಹಿಕವಾಗಿ ಕೊಲ್ಲಲ್ಪಟ್ಟು ಈಗ ಬಹಳ ಕಡಮೆ ಸಂಖ್ಯೆಯಲ್ಲಿವೆ. ಉಷ್ಣವಲಯದ ಸ್ವಲ್ಪ ದೂರ ವಲಸೆ ಹೋಗುತ್ತವೆ. ಅವು ಕಾಳು, ಹುಳುಗಳನ್ನು ತಿನ್ನುತ್ತವೆ. ಸಣ್ಣ ಪ್ರಾಣಿಗಳನ್ನು ತಿನ್ನಬಲ್ಲವು. ಅವುಗಳ ರೆಕ್ಕೆಯ ಕೆಳ ಭಾಗದಲ್ಲಿ ಬಿಳುಪು ಮಚ್ಚೆಗಳಿದ್ದು ಹಾರುವಾಗ ಸುಂದರವಾಗಿ ಕಾಣುತ್ತವೆ.

ಗೂಡು ರಚಿಸುವುದಿಲ್ಲ. ನೆಲದ ಮೇಲೆ ೧ ಮೊಟ್ಟೆಯಿಡುವುದೇ ಹೆಚ್ಚು. ಹಲವು ಒಮ್ಮೆಗೆ ೨ ಇಡಬಲ್ಲವು. ಹೆಣ್ಣು ಮಾತ್ರ ಕಾವು ಕೂತು, ೩೦ - ೩೫ ದಿನಗಳಲ್ಲಿ ಪೂರ್ಣ ಬಲಿತ ಮರಿಗಳು ಜನಿಸಲು ಸಹಾಯಕವಾಗುತ್ತವೆ.

ಉಪವರ್ಗ ೧೬ : ಚೆರಾಡ್ರಿಫಾರ್‌ಮಿಸ್ (Charadriiformes)

ಕುಟುಂಬ ೧೬

ಪ್ರಭೇದ ೨೯೩

೫ ಅಂಗುಲದಿಂದ ೨ ೧/೨ ಅಡಿ ಉದ್ದ ದೇಹದ ಈ ಒಟ್ಟು ೧೯ ಕುಟುಂಬಗಳನ್ನು ೩ ಪಂಗಡಗಳಾಗಿ ವಿಂಗಡಿಸಬಹುದು. ತೀಕ್ಷ್ಣ ಬಣ್ಣವಿರುವುದಿಲ್ಲ. ಸಾಮಾನ್ಯ ಬಿಳುಪು, ಕಪ್ಪು, ಕಂದು ಹಾಗೂ ಬೂದು ಬಣ್ಣಗಳನ್ನು ಹೊಂದಿ, ನೀರು ಅಂಟದ ಗರಿ ಹೊಂದಿರುವ ಪ್ರಭೇದಗಳು. ಹಲವು ಪ್ರಭೇದಗಳಲ್ಲಿ ಮಾತ್ರ ಹೆಣ್ಣು ಗಂಡುಗಳಿಗೆ ಭೇದವಿರುವುದು. ಅವುಗಳಲ್ಲಿನ ವೈವಿಧ್ಯತೆ ಕೊಕ್ಕು ಮತ್ತು ಕಾಲುಗಳಲ್ಲಿ. ಎಲ್ಲವೂ ಮಾಂಸಾಹಾರಿಗಳು. ಮೀನೇ ಮುಖ್ಯಾಹಾರ. ಎಲ್ಲಕ್ಕೂ ಪುಕ್ಕಮುಸುಕಿದ ಎಣ್ಣೆ ಗ್ರಂಥಿಯಿದೆ.

ಪ್ರಪಂಚದ ಬಹು ಭಾಗದಲ್ಲಿ ವಾಸಿಸುವ ಉಪವರ್ಗ ಸಾಮಾನ್ಯವಾಗಿ ಸಮುದ್ರ ತೀರ, ನದಿ, ಕೊಳ, ಜೌಗು ಪ್ರದೇಶ ಮತ್ತು ಮೈದಾನ ವಾಸಿಗಳು. ಕೆಲವು ಮಾತ್ರ ಒಳನಾಡಿನಲ್ಲೆ ವಾಸವಿದ್ದು ತೀರದ ಸಮೀಪ ಬರುವುದೇ ಇಲ್ಲ. ಸಂತಾನಾಭಿವೃದ್ಧಿ ನಿಧಾನ. ವರ್ಷಕ್ಕೆ ಒಂದೇ ಸಲ ೧ – ೪ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಮೊದಲು ಮೊಟ್ಟೆಯಿಟ್ಟಂದಿನಿಂದಲೇ ಕಾವು ಕೊಡಲು ಪ್ರಾರಂಭಿಸಬಹುದು. ಮರಿ ಪೂರ್ಣ ಬಲಿತು ಜನಿಸುತ್ತದೆ. ಹಲವು ಒಡನೆ ಬೇರ್ಪಡಬಹುದು. ಕೆಲವು

ಮಾತ್ರ ದೀರ್ಘಕಾಲ ತಂದೆ ತಾಯಿಗಳ ಆರೈಕೆಗೊಳಪಟ್ಟಿರುತ್ತವೆ. ಹೆಣ್ಣು, ಗಂಡು ಅಥವಾ ಎರಡೂ ಮರಿ ಪೋಷಣೆಯಲ್ಲಿ ಭಾಗವಹಿಸುತ್ತವೆ.

ಕುಟುಂಬ ೧ : ಜಕಾನಿಡೀ (Jacanidae)
(ನೀರುಗಿಳಿಗಳು)

ತಾವರೆ ಕನ್ನೈದಿಲೆ ಇತ್ಯಾದಿ ಜಲಸಸ್ಯಗಳಿಂದಾವೃತವಾದ ಕೆರೆಗಳಲ್ಲಿ ನೀರುಗಿಳಿಗಳು ವಾಸಿಸುತ್ತವೆ. ಹಗುರ ದೇಹವಾದ್ದರಿಂದ ಅವುಗಳ ಮೇಲೆ ನಡೆದಾಡಲು ಸಾಧ್ಯವಿದೆ. ಸಣ್ಣ ಮೀನು, ಮೃದ್ವಂಗಿಗಳು ಮತ್ತು ಸಸ್ಯಬೀಜಗಳೇ ಆಹಾರ. ಅವುಗಳಿಗೆ ಬಹು ಉದ್ದ ಬೆರಳೂ, ಉಗುರುಗಳೂ ಇದ್ದು ಇವೇ ತೇಲುವ ಸಸ್ಯಗಳ ಮೇಲೆ ನಡೆಯಲು ಸಹಾಯಕ. ಈಜಬಲ್ಲವು. ಅಪಾಯವಿದ್ದಲ್ಲಿ ಸ್ವಲ್ಪ ದೂರ ಮುಳುಗಿ ಈಜಿ ಹೊರಬೀಳುತ್ತವೆ. ತಲೆಯ ಮೇಲೆ ನೀರುಕೋಳಿಗಳಿಗಿರುವಂತಹ ವಿವಿಧ ವರ್ಣದ ಫಲಕಗಳಿರುತ್ತವೆ. ಅಲ್ಲದೆ ಅವುಗಳ ರೆಕ್ಕೆಗಳ ತಿರುವಿನೆಡೆ ಮುಳ್ಳಿನಂತಹ ಬೆಳವಣಿಗೆಯಿಂದೆ.

ಒಟ್ಟು ೩ ಪ್ರಭೇದಗಳು. ಹೆಣ್ಣು ಗಂಡಿಗಿಂತ ದಪ್ಪ. ಗಂಡೇ ಕಾವಿಗೆ ಕೂತು ಮರಿ ಪೋಷಣೆ ಮಾಡುವುದು. ಗೂಡು ಜಲಸಸ್ಯಭಾಗಗಳಿಂದ ರಚಿತವಾಗಿ ತೇಲುತ್ತಿರುತ್ತದೆ. ಈ ಗೂಡಿನಲ್ಲಿ ೩ – ೮ ಹೊಳಪಿನ ಕಂದು ಬಣ್ಣದ ಮೊಟ್ಟೆಗಳನ್ನಿಟ್ಟು ೨೦ – ೨೫ ದಿನ ಕಾವು ಕೊಟ್ಟು ಮರಿಮಾಡುತ್ತವೆ. ಪರ್ವಕಾಲವಲ್ಲದಾಗ ಅವು ಸಣ್ಣ ಗುಂಪುಗಳಾಗಿ ಕೊಳಗಳ ಮೇಲೆ ಹಾರುತ್ತಿರುತ್ತವೆ. ಕೆಳಗಿಳಿದು ವಿಶ್ರಮಿಸುವಾಗ ರೆಕ್ಕೆಗಳನ್ನು ಪೂರ್ಣ ಮೇಲಕ್ಕೆತ್ತಿ ಹಿಡಿದಿದ್ದು ನಂತರ ಮಡಚುತ್ತವೆ. ಸಾಮಾನ್ಯವಾಗಿ ಕೆಂಚು ಬಣ್ಣದ ಮೈಮೇಲೆ ಬಿಳುಪು ಪಟ್ಟೆ ಅಥವಾ ಹಳದಿ ಮಚ್ಚೆ ಹೊಂದಿರುತ್ತವೆ. ಭಾರತದ ಪ್ರಭೇದಕ್ಕೆ ಜೀವಂಜೀವಗಳಂತೆ ಉದ್ದ ಬಾಲವಿರುತ್ತದೆ. ಒಂದು ಪ್ರಭೇದ ಪೂರ್ಣ ಕಪ್ಪು.

ಕುಟುಂಬ ೨ : ರಾಸ್ಟ್ರಾಟುಲಿಡೀ (Rostratulidae)
(ವರ್ಣರಂಜಿತ ಸ್ನೈಪ್‌ಗಳು)

ಎರಡು ಪ್ರಭೇದಗಳು ಮಾತ್ರ. ಒಂದು ದಕ್ಷಿಣ ಏಷ್ಯಾದ ಬಹುಭಾಗ ಹಾಗೂ ಆಸ್ಟ್ರೇಲಿಯಾ, ಆಫ್ರಿಕಾ ಖಂಡಗಳಲ್ಲಿವೆ. ಇನ್ನೊಂದು ದ. ಅಮೇರಿಕಾದ ಮಧ್ಯಭಾಗ ವಾಸಿ. ಕೆರೆ, ಕೊಳಗಳಲ್ಲಿನ ಜೊಂಡುಗಳ ಮಧ್ಯೆ ಒಂಟಿ ಅಥವಾ ೩ – ೮ ರ ಗುಂಪಾಗಿರುತ್ತವೆ. ನಿಶಾಚರ ಪಕ್ಷಿಗಳು. ಸ್ವಲ್ಪ ದೂರ ಈಜಲೂ, ಹಾರಲೂ ಅದಕ್ಕೆ ಸಾಧ್ಯವಿದೆ. ನೀರಿನಲ್ಲಿನ ಹುಳು ಹುಪ್ಪಟೆಗಳೂ, ಮೃದ್ವಂಗಿಗಳೂ, ಬೀಜವೂ, ಮುಖ್ಯಾಹಾರ ತಳಭಾಗ ಬಿಳುಪು. ಆದರೆ ಮೈ ಮೇಲ್ಭಾಗ ಕಪ್ಪು, ಕೆಂಪು, ಬಿಳುಪು ಚುಕ್ಕೆ ಪಟ್ಟೆಗಳನ್ನೊಳಗೊಂಡಿರಬಹುದು. ಅವುಗಳಲ್ಲಿ ಹೆಣ್ಣಿಗೆ ಬಣ್ಣ ಹೆಚ್ಚು. ಗಾತ್ರದಲ್ಲಿ ದಪ್ಪ. ಪ್ರಣಯ

ತೋರಿಕೆ ಹೆಣ್ಣಿನದು. ಹಲವು ಸಸ್ಯಭಾಗ ಹಾಗೂ ಕಡ್ಡಿಗಳಿಂದ ತೇಲುವ ಅಥವಾ ನೆಲದ ಮೇಲಿನ ಗೂಡು ರಚಿಸಿ ೨ – ೬ ಮೊಟ್ಟೆಯಿಡುತ್ತವೆ. ಕಾವು ಕೊಡುವುದೂ ಮರಿ ಪೋಷಿಸುವುದೂ ಗಂಡಿನ ಕೆಲಸ. ಸಾಮಾನ್ಯವಾಗಿ ವಲಸೆ ಹೋಗುವುದಿಲ್ಲ.

ಕುಟುಂಬ ೩ : ಹಿಮಟೋಪೋಡಿಡೀ (Haematopodidae)

ಸಮುದ್ರ ತೀರ ಪ್ರದೇಶದ ಸಾಮಾನ್ಯ ಗಾತ್ರದ ಪಕ್ಷಿಗಳಿವು. ಅವುಗಳ ನೀಳ ದಪ್ಪನೆಯ ಕೊಕ್ಕು ಮೇಲಿನರ್ಧಭಾಗ ಚಪ್ಪಟೆಯಾಗಿದ್ದು, ಮೃದ್ವಂಗಿಗಳನ್ನೂ, ಸಿಂಪಿಗಳನ್ನೂ ಉಳಿಯಲ್ಲಿ ಕತ್ತರಿಸಿದಂತೆ ಕುಕ್ಕಿ ಚಿಪ್ಪು ಒಡೆದು ತಿನ್ನಲು ಸಹಾಯಕ. ಏಡಿಗಳನ್ನು ತಿನ್ನಲೂ, ಕೆಸರಿನಲ್ಲಿನ ಹುಳು ಅರಸಲೂ ಅನುಕೂಲ. ಚೆನ್ನಾಗಿ ಹಾರಾಡಬಲ್ಲವು. ಹೊಗೆ ಕಪ್ಪು ಅಥವಾ ಕಂದು ಮೇಲ್ಮೈ, ಬಿಳುಪು ತಳಭಾಗ ಹೊಂದಿರುತ್ತದೆ. ಕಾಲು ಮತ್ತು ಕೊಕ್ಕುಗಳು ಮಾತ್ರ ಪೂರ್ಣ ಕೆಂಪು.

ದಡದಲ್ಲಿನ ಮರಳುಗಳ ಮೇಲೆ ಸಣ್ಣ ಹಳ್ಳ ಕೆರೆದು ೨ – ೮ ಮೊಟ್ಟೆಯಿಡುತ್ತವೆ. ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ. ಕಾವು ಕಾಲಾವಧಿ ೨೦ – ೨೫ ದಿನಗಳು.

ಕುಟುಂಬ ೪ : ಚಾರಾಡ್ರಿಡೀ (Charadriidae)
(ಪ್ಲೋವರ್‌ಗಳು, ಟಿಟ್ಟಿಭಗಳು.)

ಪ್ರಪಂಚದ ಬಹಳ ಭಾಗಗಳಲ್ಲಿ ಕಂಡುಬರುವ ಕುಟುಂಬವಿದು. ಹಿಮಾವೃತ ಪ್ರದೇಶದಲ್ಲಿ ಮಾತ್ರ ವಾಸವಿಲ್ಲ. ಒಟ್ಟು ೬೨ ಪ್ರಭೇದಗಳು. ಸಣ್ಣ ಗಾತ್ರದಿಂದ ಮಧ್ಯಮ ಗಾತ್ರದವರೆಗಿನ ಅಂತರ ಹೊಂದಿರುತ್ತವೆ. ಹಲವು ವರ್ಣರಂಜಿತ. ಮಿಕ್ಕವು ಕಂದು, ಬಿಳುಪು, ಕಪ್ಪು ಬಣ್ಣಗಳ ವಿವಿಧ ಮಚ್ಚೆ ಹೊಂದಿವೆ.

ದುಂಡು ದೇಹದ ಆ ಪಕ್ಷಿಗಳಿಗೆ ಪಾರಿವಾಳದಂತಹ ದೃಢ ಸಣ್ಣ ಕೊಕ್ಕುಗಳಿದ್ದು ತುದಿ ಸ್ವಲ್ಪ ದಪ್ಪವಾಗಿರುತ್ತದೆ. ಇವುಗಳಲ್ಲಿನ ೨೧ ಪ್ರಭೇದ ಸಮುದ್ರ ತೀರಗಳಲ್ಲೂ, ಮರಳು ಅಥವಾ ಮಣ್ಣು ದಿಬ್ಬಗಳಲ್ಲೂ ಮತ್ತು ಹುಲ್ಲು ಮೈದಾನಗಳಲ್ಲೂ ವಾಸಿಸುತ್ತವೆ. ಅವುಗಳ ಬೆನ್ನು ಕಂದು ಬಣ್ಣವಿದ್ದು ಹೊಟ್ಟೆ ಭಾಗ ಬಿಳುಪಾಗಿರುತ್ತದೆ. ಹಲವು ಉತ್ತರವಲಯ ವಾಸಿಗಳು. ಗುಂಪು ಗುಂಪಾಗಿ ತೀರ ಪ್ರದೇಶದಲ್ಲಿ ಕಂಡುಬರುತ್ತಿದ್ದು ಪಳಗಿದಂತಿರುತ್ತವೆ. ಅವು ನೀರಿನಲ್ಲಿ ಹೆಚ್ಚು ದೂರ ತೆವಳಲಾರದೆ ದಡದಲ್ಲೆ ಹೆಚ್ಚಾಗಿ ಓಡಾಡುತ್ತಿರುತ್ತವೆ. ಅಲೆಗಳು ಹಿಂದಿರುಗುವಾಗ ಕಾಣಬರುವ ವಿವಿಧ ಕೀಟಗಳನ್ನು ಅವು ಓಡಾಡಿ ಆರಿಸಿ ತಿನ್ನುತ್ತವೆ.

ಹೊಲಗಳ ಮಧ್ಯೆ ಮತ್ತು ಪಕ್ಕದ ಹುಲ್ಲುಗಾವಲುಗಳಲ್ಲಿ ವಾಸಿಸುವ ಟಿಟ್ಟಿಭಗಳು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತವಾದವು. ಅವುಗಳ ಎಚ್ಚರಿಕೆಯ ಕೂಗು ಸಾಮಾನ್ಯವಾಗಿ ಕೇಳಿಬರುತ್ತದೆ. ಕಪ್ಪು ಹೊಟ್ಟೆಯ ಮತ್ತು ಸುವರ್ಣ ವರ್ಣದ

ಟಿಟ್ಟಿಭಗಳು ದಪ್ಪ ಗಾತ್ರದವು. ಕಪ್ಪು ಹೊಟ್ಟೆಯ ಪ್ರಭೇದಕ್ಕೆ ಹಿಂಬೆರಳು ಅಪೂರ್ಣವಾಗಿರುತ್ತದೆ.

ಕೋಯಷ್ಟಿಕಗಳು ಒಳನಾಡಿನಲ್ಲಿ ವಾಸಿಸುವ ೧೦ - ೧೪ ಅಂಗುಲ ಉದ್ದ ದೇಹದ ಪಕ್ಷಿಗಳು. ಅವುಗಳ ಮೊಟ್ಟೆ ಮತ್ತು ಮಾಂಸ ಹೆಚ್ಚು ರುಚಿಕರ. ಇದರಿಂದಾಗಿ ಅನೇಕಕಡೆ ಉಪಯೋಗಿಸಲಾಗುತ್ತಿದೆ. ಅವುಗಳ ಮೊಟ್ಟೆಯನ್ನು ಮೊದಲು ಸಲ ತೆಗೆದುಕೊಂಡರೆ ವರ್ಷಾಂತ್ಯದೊಳಗೇ ಇನ್ನೊಂದು ಸಲ ಅವು ಮೊಟ್ಟೆಯಿಡುತ್ತವೆ. ದಕ್ಷಿಣ ಆಫ್ರಿಕಾದ ಹಲವು ಪ್ರಭೇದಗಳಿಗೆ ರೆಕ್ಕೆಯ ಕೋನದಲ್ಲಿ ಮುಳ್ಳಿನಂತಹ ಬೆಳವಣಿಗೆಯಿದೆ. ಜಗಳವಾಡುವಾಗ ಅದನ್ನು ಆಯುಧದಂತೆ ಉಪಯೋಗಿಸುತ್ತದೆ.

ಕೋಯಷ್ಟಿಕಗಳು ಚಟುವಟಿಕೆಯ ಪಕ್ಷಿಗಳು. ಪರ್ವಕಾಲದಲ್ಲಿ ಬಹಳ ಎಚ್ಚರಿಕೆಯಿಂದಿರುತ್ತವೆ. ಅಪಾಯ ಸೂಚನೆಯಿದ್ದಲ್ಲಿ ಕರ್ಕಶವಾಗಿ ಕೂಗಿ ಇತರ ಎಲ್ಲಾ ಪಕ್ಷಿಗಳನ್ನೂ ಎಚ್ಚರಿಸುತ್ತವೆ.

ಈ ಕುಟುಂಬದ ಪಕ್ಷಿಗಳೆಲ್ಲಾ ನೆಲದ ಮೇಲೆ ಗೂಡು ರಚಿಸುವುವು. ನೆಲದಲ್ಲಿ ಸಣ್ಣ ಗುಳಿ ಮಾಡಿ ಕಸ ಕಡ್ಡಿಗಳನ್ನು ಅಥವಾ ಕಲ್ಲುಗಳನ್ನು ಸೇರಿಸಿ ನಡುವೆ ೩ - ೪ ಮೊಟ್ಟೆಗಳನ್ನಿಡುತ್ತವೆ. ಕಾವು ಕಾಲಾವಧಿ ೨೦ – ೩೦ ದಿನಗಳು. ಹೆಣ್ಣು ಗಂಡುಗಳೆರಡೂ ಕಾವು ಕೊಡುತ್ತವೆ. ಜನಿಸಿದಾಗ ಮರಿ ಪೂರ್ಣ ಬಲಿತಿರುತ್ತವೆ. ೩ – ೫ ವಾರಗಳಲ್ಲಿ ಹಾರಿಹೋಗಬಲ್ಲವು.

ಕೋಯಷ್ಟಿಕಗಳಲ್ಲಿ ವಿಚಿತ್ರ ವರ್ತನೆಯೊಂದು ಕಂಡುಬರುತ್ತದೆ. ಗೂಡಿನಲ್ಲಿ ಮೊಟ್ಟೆ ಅಥವಾ ಮರಿಗಳಿಗೆ ಅಪಾಯವಿದ್ದಾಗ ರೆಕ್ಕೆ ಮುರಿದು ಒದ್ದಾಡುತ್ತಿರುವಂತೆ ನಟಿಸಿ ತೆವಳಿಕೊಂಡು ಮುಂದುವರಿದು ಶತ್ರುವನ್ನು ದೂರ ಕರೆದೊಯ್ಯುತ್ತವೆ.

ನ್ಯೂಜಿಲೆಂಡಿನ ಪ್ರಭೇದ ೨ ಮೊಟ್ಟೆಯಿಡುವುವಲ್ಲದೆ, ಚಳಿಗಾಲದಲ್ಲಿ ಸುಮಾರು ೧೦೦೦ ಪಕ್ಷಿಗಳ ಗುಂಪು, ಉತ್ತರಕ್ಕೆ ವಲಸೆ ಹೋಗುತ್ತವೆ. ಅಲ್ಲದೆ ಅವುಗಳ ಕೊಕ್ಕು ಬಲಕ್ಕೆ ನುಲುಚಿದಂತೆ ತಿರುಗುತ್ತದೆ. ಇದರ ಕಾರಣ ಇದುವರೆಗೆ ತಿಳಿದುಬಂದಿಲ್ಲ.

ಕುಟುಂಬ ೫ : ಸ್ಕೋಲೋಪಾಸಿಡೀ (Scolopacidae)

ಈ ಕುಟುಂಬದ ಪಕ್ಷಿಗಳಿಗೆ ತೆಳ್ಳನೆಯ ಕೆಳಬಾಗಿದ ಉದ್ದಕೊಕ್ಕಿದ್ದು ಅದು ತಲೆಯಷ್ಟೇ ಅಥವಾ ಅದಕ್ಕಿಂತ ಉದ್ದವಾಗಿರಬಲ್ಲದು. ಅವುಗಳ ಬಣ್ಣ ಹಗುರ. ಹಿಂಬೆರಳು ಚೆನ್ನಾಗಿ ಬೆಳೆದಿರುತ್ತದೆ. ಅವೆಲ್ಲವೂ ಉತ್ತರ ವಲಯದಲ್ಲಿ ಹೆಚ್ಚು. ದಕ್ಷಿಣವಲಯದಲ್ಲಿ ಹಲವು ಪ್ರಭೇದ ಮಾತ್ರವಿದೆ. ಎಲ್ಲಾ ಪ್ರಭೇದಗಳೂ ಅತಿ ದೂರ ವಲಸೆ ಹೋಗುವುವು. ಅವುಗಳಲ್ಲಿ ನಾಲ್ಕು ಮುಖ್ಯ ಪಂಗಡಗಳಿವೆ.

ಮೊದಲನೆಯ ಪಂಗಡದವು ಉತ್ತರವಲಯದವು. ಉಪ್ಪುನೀರಿನ ಜೌಗುಪ್ರದೇಶಗಳಲ್ಲೂ, ತೀರ ಬಳಿಯ ಜೌಗುಗಳಲ್ಲೂ ಹೆಚ್ಚಾಗಿರುತ್ತವೆ. ದಕ್ಷಿಣಕ್ಕೆ ವಲಸೆ ಹೋಗುತ್ತದೆ. ಅತಿ ಗಲಭೆಯ ಪಂಗಡ. ಯಾವಾಗಲೂ ಕೀರಲುಧ್ವನಿಯಲ್ಲಿ ಕೂಗಾಡುತ್ತಿರುತ್ತವೆ.

ಇವುಗಳಲ್ಲಿ ಹಲವು ಪ್ರಭೇದಗಳು ತಾವೇ ಗೂಡು ರಚಿಸದೆ ಮರಗಳಲ್ಲಿ ಇತರ ಹಕ್ಕಿಗಳು ವಿಸರ್ಜಿಸಿದ ಗೂಡುಗಳಲ್ಲಿ ಮೊಟ್ಟೆಯಿಡುತ್ತವೆ. ಅಳಿಲು ಗೂಡುಗಳನ್ನು ಉಪಯೋಗಿಸುವುದುಂಟು. ಇವುಗಳಲ್ಲಿ ಸ್ಯಾಂಡ್‌ಪೈಪರ್ ಹಕ್ಕಿಗಳು ತೀರದಲ್ಲಿ ಆಡ್ಡಾಡುತ್ತಾ ಬಾಲವನ್ನು ಮೇಲಿಂದ ಕೆಳಕ್ಕೆ ಆಡಿಸುತ್ತಿರುತ್ತವೆ. **ಕರ್‌ಲಿವ್**‌ಗಳು ದಪ್ಪಗಾತ್ರದವು. ಒಟ್ಟು ೩ ಪ್ರಭೇದವಿವೆ. ಸುಮಾರು ೩೦ - ೩೨ ವರ್ಷ ಬದುಕಿರಬಲ್ಲವು.

ಅವು ಬಹು ದೂರ ವಲಸೆ ಹೋಗುವುವು. ಬೀಜಗಳು, ಹಣ್ಣು ಮತ್ತು ಕೀಟಗಳೇ ಮುಖ್ಯ ಆಹಾರ. ಮಾಂಸ ರುಚಿಕರವಾದ್ದರಿಂದ ಅತಿಯಾಗಿ ಕೊಂದು ಉಪಯೋಗಿಸಲಾಗುತ್ತದೆ. ಆದ್ದರಿಂದ ಎಸ್ಕಿಮೋ ಕರ್‌ಲಿವ್ ಮುಂತಾದ ಪ್ರಭೇದಗಳು ನಿರ್ನಾಮವಾಗಿವೆ. ಒಂದು ಪ್ರಭೇದ ವಲಸೆ ಹೋದಾಗ ಪಕ್ಷಿಗಳ ಮೊಟ್ಟೆ ತಿಂದು ಜೀವಿಸುತ್ತದೆ. ಇದು ಸುಮಾರು ೫೦೦೦ ಮೈಲಿ ದೂರ ಎಲ್ಲಿಯೂ ವಿಶ್ರಮಿಸದೆ ಹಾರಿ ವಲಸೆ ಹೋಗಬಲ್ಲದು. ವಿಲ್ಲೆಟ್‌ಗಳಿಗೆ ರೆಕ್ಕೆಯಲ್ಲಿ ಬಿಳಿಯ ಮಚ್ಚೆಯಿದ್ದು ಸಮುದ್ರ ತೀರದಬಳಿಯ ತಂತಿ ಕಂಬಗಳ ಮೇಲೂ ವಿಶ್ರಮಿಸುವುದು.

ಎರಡನೆಯ ಪಂಗಡ ಉಲ್ಲಂಗಿಗಳದು. ೧೦ – ೧೫ ಅಂಗುಲ ಉದ್ದ ದೇಹದ ೨೫ ಪ್ರಭೇದಗಳಿವೆ. ಅವುಗಳ ಕಾಲು ಗಿಡ್ಡ, ಕೊಕ್ಕು ಅತಿ ಉದ್ದ. ಕೆಸರಿನೊಳಗೆ ಹುಳುಗಳನ್ನು ಕೆದಕಿ ಅರಸಲು ಕೊಕ್ಕು ಅನುಕೂಲ. ಒಳನಾಡಿನ ಪಕ್ಷಿಗಳಿವು. ಪರ್ವಕಾಲದಲ್ಲಿ ಗಂಡು ಮೇಲೆ ಹಾರಾಡಿ ಇದ್ದಕ್ಕಿದ್ದಂತೆ ಹೆಣ್ಣಿನೊಡನೆ ಶಬ್ದಮಾಡುತ್ತಾ ಇಳಿಯುತ್ತದೆ. ಕಾಡು ಉಲ್ಲಂಗಿ ದುಂಡು ದೇಹದ ಬೇಟೆ ಹಕ್ಕಿ. ಜೌಗು ಪ್ರದೇಶದ ಮಣ್ಣಿನಲ್ಲಿ ಕೆದಕಿ ಆಹಾರ ಹೊಂದುತ್ತವೆ. ಅತ್ಯಂತ ರುಚಿಕರ ಮಾಂಸದ ಪಕ್ಷಿಯಿದು. ಒಂದು ಪ್ರಭೇದ ಸಾಮಾನ್ಯವಾಗಿ ಕಡಲ ತಡಿಯಲ್ಲಿ ಕಂಡುಬರುತ್ತದೆ.

ಮೂರನೆಯ ಪಂಗಡಕ್ಕೆ ೫ ಅಂಗುಲ ಉದ್ದ ದೇಹದ ಸಣ್ಣ **ಸ್ಯಾಂಡ್‌ಪೈಪರ್** ಹಕ್ಕಿಗಳು ಸೇರಿವೆ. **ನಾಟ್**‌ಗಳು ಉತ್ತರ ಶೀತವಲಯದ ತಂಡ್ರಾ ಪ್ರದೇಶಗಳಲ್ಲಿ ಜೀವಿಸಿ ಆಫ್ರಿಕಾದವರೆಗೂ ವಲಸೆ ಹೋಗುತ್ತವೆ. ಎಲ್ಲವೂ ಕಂದು ಬಣ್ಣದ ಮೇಲ್ಮೈ ಮತ್ತು ಬಿಳಪು ತಳಭಾಗ ಹೊಂದಿರುತ್ತವೆ. ಕೆಲವಕ್ಕೆ ಕಪ್ಪು ಮಚ್ಚೆಗಳಿರಬಹುದು. ಇವುಗಳಲ್ಲಿ ೧೦ – ೧೨ ಅಂಗುಲದ ರಫ್ ಪಕ್ಷಿಗಳು ಕುತೂಹಲಕಾರಿ ಹಾಗೂ ನಿಯಮ ತಪ್ಪಿದ ಪಕ್ಷಿಗಳು. ಪರ್ವಕಾಲದಲ್ಲಿ ಗಂಡುಗಳ ಕತ್ತಿನ ಬಳಿ ವಿವಿಧ ವರ್ಣದ ನೀಳ ಗರಿ ಬೆಳೆದು, ಅವುಗಳನ್ನು ನಿಮಿರಿಸಿ ಗರಿ ಕೆದರಿಕೊಂಡು ಮೈ ಅಲುಗಾಡಿಸಿ ನರ್ತನಮಾಡುತ್ತವೆ. ಇವೆಲ್ಲವೂ ದೊಡ್ಡ ಗುಂಪಾಗಿ ವಲಸೆ ಹೊರಡುತ್ತವೆ.

ಕೊನೆಯ ಪಂಗಡಕ್ಕೆ **ಟರ್ನ್‌ಸ್ಟೋನ್** ಪಕ್ಷಿಗಳ ಮೂರು ಪ್ರಭೇದ ಸೇರಿದೆ. ಅವು ಟಿಟ್ಟಿಭಗಳನ್ನು ಹೋಲುತ್ತವೆ. ಸಣ್ಣದಾದ ಕೊಕ್ಕು ದೃಢವಾಗಿ ತುದಿ ಮಾತ್ರ ಕೆಳಬಾಗಿದಂತಿದ್ದರೂ ಟಿಟ್ಟಿಭಗಳಿಗಿರುವಂತೆ ತುದಿಯ ಬಳಿ ದಪ್ಪವಾಗಿಲ್ಲ.

ದುಂಡು ದೇಹದ ಗಿಡ್ಡ ಕತ್ತಿನವು. ಹಿಂಬೆರಳು ಚೆನ್ನಾಗಿ ಬೆಳೆದಿರುತ್ತದೆ. ವರ್ಣರಂಜಿತ ಪಕ್ಷಿಗಳು. ಕಾವಿ ಬಣ್ಣದ ಕಾಲು, ಕೆಂಪು ಕೊಕ್ಕು ಮತ್ತು ವಿವಿಧ ಮೈ

ಬಣ್ಣವಿರುತ್ತದೆ. ಅವು ತೀರದಲ್ಲಿನ ಸಣ್ಣಪುಟ್ಟ ಕಲ್ಲುಗಳನ್ನು ತಮ್ಮ ಕೊಕ್ಕಿನಿಂದ ಕೆದಕಿ ಅದರಡಿಯುಲ್ಲಿನ ಹುಳುಗಳನ್ನು ತಿನ್ನುತ್ತವೆ. ಆ ಹೆಸರು ಬರಲು ಇದೇ ಮುಖ್ಯ ಕಾರಣ. ಉತ್ತರಧ್ರುವದ ಬಲು ಸಮೀಪದವರೆಗೂ ನೆಲೆಸಿರುವ ಪಕ್ಷಿಸಮೂಹ. ಅವು ನೆಲದಲ್ಲಿ ಗೂಡು ರಚಿಸಿ, ೩–೪ ಮೊಟ್ಟೆಯಿಟ್ಟು, ಹೆಣ್ಣು ಗಂಡುಗಳೆರಡೂ ಮರಿಮಾಡು ತ್ತವೆ. ಅಲೆಯುಂಚಿನ ಸರ್ಫ್ ಪಕ್ಷಿಗಳು ನೀರಿನ ಅಂಚಿನಲ್ಲೇ ಇದ್ದು ಆಹಾರ ಹೊಂದು ತ್ತವೆ. ಆದರೆ ಇವುಗಳಲ್ಲಿ ಗಂಡು ಮರಿಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ಹೊಂದುತ್ತದೆ.

ಕುಟುಂಬ ೬ : ರಿಕರ್‌ವಿರಾಸ್ಟ್ರಿಡೀ (Recurvirostridae)
(ಸ್ಟಿಲ್ಟ್, ಅವೋಸೆಟ್‌ಗಳು)

ಇವುಗಳಿಗೆ ಅತಿ ಉದ್ದ ಕಾಲುಗಳಿವೆ. ಒಟ್ಟು ೩ ಪ್ರಭೇದಗಳು. ಸಣ್ಣ ತಲೆಯು ಬಹು ಉದ್ದ ಕೊಕ್ಕಿನ ಉದ್ದ ಕತ್ತಿನ ಪಕ್ಷಿಗಳು. ಸ್ಟಿಲ್ಟ್‌ಗಳಿಗೆ ಕೊಕ್ಕು ನೇರವಾಗಿದೆ. ಅವೋಸೆಟ್ಟುಗಳ ಕೊಕ್ಕು ಸ್ವಲ್ಪ ಮೇಲಕ್ಕೆ ಬಾಗಿದೆ. ಕೊಕ್ಕಿನ ಆಕಾರ ಆಹಾರ ಸ್ವಭಾವವನ್ನವಲಂಬಿಸುತ್ತದೆ. ಸ್ಟಿಲ್ಟ್‌ಗಳು ಮಣ್ಣಿನಲ್ಲಿ ಹುಡುಕಿ ಆಹಾರ ಸಂಗ್ರಹಿಸು ತ್ತದೆ. ಆದರೆ ಅವೋಸೆಟ್‌ಗಳು ನೀರಿನಲ್ಲಿ ಕೊಕ್ಕನ್ನು ಅಲುಗಾಡಿಸಿ ದೊರೆತ ಹುಳು ಹುಪ್ಪಟೆಗಳನ್ನು ಹಿಡಿದು ತಿನ್ನುತ್ತವೆ.

ಸ್ಟಿಲ್ಟ್‌ಗಳ ಪ್ರಭೇದಗಳೆಲ್ಲಾ ಉಷ್ಣ ಮತ್ತು ಸಮಶೀತೋಷ್ಣವಲಯ ವಾಸಿಗಳು. ಅವೋಸೆಟ್‌ಗಳೂ ಅದೇ ರೀತಿಯಲ್ಲಿ ಹರಡಿದ್ದರೂ ತ್ರಿವರ್ಣಬಣ್ಣ ಹೊಂದಿರುತ್ತವೆ.

ಐಬಿಸ್‌ಬಿಲ್ ಎಂಬ ಪ್ರಭೇದ ಹಿಮಾಲಯ ಪರ್ವತಶ್ರೇಣಿಯ ೧೦೦೦೦ ಅಡಿ ಎತ್ತರದಲ್ಲಿನ ಕೊಳ, ಹಳ್ಳ ಮುಂತಾದಕಡೆ ಮಾತ್ರವಿರುತ್ತವೆ.

ಇವೆಲ್ಲವೂ ಕೊಚ್ಚೆ ನೀರಿನಲ್ಲಿ ಅಲೆದಾಡಿ ಅಹಾರ ಒದಗಿಸಿಕೊಳ್ಳುವ ಒಳನಾಡು, ಕೆರೆ, ಕೊಳಗಳ ಬಳಿಯ ಪಕ್ಷಿಗಳು. ಚೆನ್ನಾಗಿ ಹಾರಬಲ್ಲವು. ಬೇಕಾದಾಗ ಈಜಲೂ ನುರಿತವು. ಅವೋಸೆಟ್‌ಗಳು ನೀರಿನಲ್ಲಿನ ಅಕಶೇರುಕ, ಮೃದ್ವಂಗಿ, ದ್ವಿಚರ ಮುಂತಾದ ಪ್ರಾಣಿಗಳನ್ನು ತಿನ್ನುತ್ತವೆ. ಸಂಘಜೀವಿ. ಗುಂಪಾಗಿದ್ದು ಒಂದೇ ಸ್ಥಳದಲ್ಲಿ ಸಾಮೂ ಹಿಕವಾಗಿ ವಾಸಿಸುತ್ತವೆ. ನೆಲ ಕೆರೆದು ಗುಳಿತೋಡಿ ಅದರಲ್ಲಿ ೩–೪ ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಸ್ಟಿಲ್ಟ್‌ಗಳು ವಿವಿಧ ಸಸ್ಯಭಾಗಗಳನ್ನು ಉಪಯೋಗಿಸಿ ತೇಲುವ ದೊಡ್ಡ ಗೂಡು ರಚಿಸಿ ಗಂಡು ಹೆಣ್ಣುಗಳೆರಡೂ ಕಾವಿತ್ತು ಮರಿಮಾಡುತ್ತವೆ.

ಕುಟುಂಬ ೭ : ಫಾಲರೋಪೋಡಿಡೀ (Phalaropodidae)
(ಫಾಲರೋಪ್ಸ್)

ಮೂರು ಪ್ರಭೇದಗಳುಳ್ಳ, ಈಜಲು ನುರಿತ ತೀರ ಪಕ್ಷಿಗಳಿವು. ಕಾಲ್ಬೆರಳುಗಳು ನೀರು ಕೋಳಿಗಳಂತೆ ಅಗಲವಾಗಿ ಎಲೆಯಾಕಾರವಾಗಿರುತ್ತವೆ. ಉತ್ತರ ಅಮೇರಿಕಾದ ಮಧ್ಯಪ್ರದೇಶದಲ್ಲಿ ವಾಸಿಸುತ್ತವೆ. ಇತರ ಎರಡು ಉತ್ತರ ಶೀತವಲಯ ವಾಸಿಗಳಲ್ಲಿ

ಹೆಣ್ಣೇ ದಪ್ಪ ಗಾತ್ರದವು. ಮೂರು ಬಣ್ಣ ಹೊಂದಿವೆ. ಪ್ರಣಯ ಕಾಲದಲ್ಲಿ ಅವೇ ಮುಖ್ಯ ಪಾತ್ರ ವಹಿಸುತ್ತವೆ. ಗೂಡಿನ ರಚನೆ, ಕಾವು ಕೂರುವುದು ಮತ್ತು ಮರಿಗಳನ್ನು ಪೋಷಿಸುವುದು ಗಂಡಿನ ಕೆಲಸವೇ. ನೀರಿನ ಬಳಿ ಬಟ್ಟಲಿನಾಕಾರದ ಗೂಡಿನಲ್ಲಿ ೩ – ೫ ಮೊಟ್ಟೆಯನ್ನು ಇಡುತ್ತವೆ. ಅನಂತರ ಅದು ಅಲ್ಲಿರುವುದಿಲ್ಲ. ಹಲವು ಒಂದೇಕಡೆ ಗುಂಪಾಗಿ ಗೂಡುಗಳನ್ನು ನಿರ್ಮಿಸಿಕೊಳ್ಳುವುದುಂಟು.

ನೀರುಕೋಳಿಯಂತೆ ತಲೆ ಅಲ್ಲಾಡಿಸುತ್ತಾ ಈಜುವುದು. ದೂರ ಹಾರುವುದಿಲ್ಲ. ಆದರೆ ವಲಸೆ ಹೋಗುವಾಗ ಮಾತ್ರ ದೂರ ಹೋಗುತ್ತದೆ. ಹಾರಾಡುವಾಗ ಗುಂಪಾಗಿದ್ದು ಇದ್ದಕ್ಕಿದ್ದಂತೆ ಎಲ್ಲವೂ ಒಂದೇಕಡೆ ಇರುವಂತೆ ಈ ರೀತಿ ಹಾರಾಡುತ್ತಾ ಅತ್ತಿತ್ತ ಎಲ್ಲ ಪಕ್ಷಿಗಳೂ ತಿರುಗುವುದು ಒಂದು ವೈಚಿತ್ರ.

ಕುಟುಂಬ ೮ : ಡ್ರೋಮಡಿಡೀ (Dromadidae)

ಒಂದೇ ಪ್ರಭೇದ ಇದಕ್ಕೆ ಸೇರುವುದು. ಅವುಗಳ ಉದ್ದ ಕಾಲೂ, ಅಗಲವಾದ ಈಜುಬೆರಳುಗಳೂ ಅವೋಸೆಟ್‌ಗಳಂತಿವೆ. ಆದರೆ ಕ್ರೌಂಚದಂತಹ ನೀಳ ದಪ್ಪನೆಯ ಕೊಕ್ಕಿದೆ. ಈ ಉಪವರ್ಗದ ಪಕ್ಷಿಗಳಲ್ಲಿ ಇದೊಂದೆ ಸುರಂಗ ಗೂಡು ರಚಿಸಿ ಅಚ್ಚ ಬಿಳುಪು ಮೊಟ್ಟೆಯಿಡುವುದು.

ಇವು ಸಂಘಜೀವಿಗಳು. ೬ – ೮ ರಿಂದ ನೂರಾರು ಪಕ್ಷಿಗಳ ಗುಂಪಿರಬಹುದು. ಸಮುದ್ರತೀರದಲ್ಲಿನ ಕೊಚ್ಚೆ ನೀರಿನಲ್ಲಿ ತಿರುಗಾಡುತ್ತಾ ಮೃದ್ವಂಗಿ ಮತ್ತಿತರ ಕಟಂಕ ಚರ್ಮಿಗಳನ್ನು ತನ್ನ ದಪ್ಪ ಕೊಕ್ಕಿನಿಂದ ಚುಚ್ಚಿ ಒಡೆದು ತಿನ್ನುತ್ತವೆ. ತೀರದ ಮರಳು ದಡದಲ್ಲಿ ೪ – ೫ ಅಡಿ ಉದ್ದದ ಸುರಂಗ ಕೊರೆದು ದಪ್ಪನೆಯ ಒಂದೇ ಮೊಟ್ಟೆಯಿಡುತ್ತವೆ. ಮರಿ ಪೂರ್ಣ ಬೆಳೆದು ಮೃದುಗರಿ ಹೊಂದಿ ಜನಿಸಿದರೂ ಹಲವು ದಿನ ಸುರಂಗದಲ್ಲೇ ಇದ್ದು ಹೊರಬೀಳುತ್ತವೆ. ಪೂರ್ವ ಆಫ್ರಿಕಾ ಮತ್ತು ಆಗ್ನೇಯ ಏಷ್ಯಾದಲ್ಲಿನ ಪಕ್ಷಿ ಜಾತಿ.

ಕುಟುಂಬ ೯ : ಬುರ್‌ಹಿನಿಡೀ (Burhinidae)

ಸಾಮಾನ್ಯವಾಗಿ ಕಲ್ಲು ತೀರಪ್ರದೇಶದ ಮೇಲೆ ಈಜಾಡುವ ದಪ್ಪಮಂಡಿಯ ಪಕ್ಷಿಗಳಿವು. ಕಂದು ಬಣ್ಣ ಆಕಾರದಲ್ಲಿ ಬಸ್ಟರ್ಡ್‌ಗಳಂತಿರುತ್ತವೆ. ೧ ೧/೨ – ೨ ಅಡಿ ಎತ್ತರವಿರುತ್ತದೆ. ಕೊಕ್ಕು ಗಿಡ್ಡ. ಬೆರಳಿನ ಮಧ್ಯೆ ಜಾಲದ ಗುಳಿ ಇದೆ, ಹಿಂಬೆರಳಿರುವುದಿಲ್ಲ. ರಾತ್ರಿ ಹೆಚ್ಚು ಓಡಾಡಲೂ ಅನುಕೂಲವಾಗುವಂತಹ ದುಂಡನೆಯ ದೊಡ್ಡ ಕಣ್ಣುಗಳಿವೆ. ಸಮಶೀತೋಷ್ಣ ಮತ್ತು ಉಷ್ಣವಲಯದ ಬಹುಭಾಗದಲ್ಲಿ ವಾಸಿಸುತ್ತವೆ. ಉತ್ತರ ವಲಯದ ಪ್ರಭೇದಗಳು ರಕ್ಷಣೆಗೆ ದೂರ ವಲಸೆ ಹೋಗುತ್ತವೆ. ಹಲವು ಒಳನಾಡಿನ ಪ್ರಭೇದಗಳು, ನದೀ ತೀರದ ಕಲ್ಲುಗಳ ನಡುವೆ ಇದ್ದು ಮೊಸಳೆಗಳ ಬಳಿ ವಾಸಿಸುವ ಒಂದು ಪ್ರಭೇದವಿದೆ. ಆಫ್ರಿಕಾದಿಂದ ದ. ಅಮೇರಿಕದವರೆಗೆ ಅವುಗಳ ವ್ಯಾಪ್ತಿ ಕಂಡುಬರುತ್ತಿದೆ.

ಅವುಗಳೆಲ್ಲವೂ ಸಾಮಾನ್ಯವಾಗಿ ಒಳನಾಡಿನ ಪ್ರದೇಶವಾಸಿಗಳು. ಜೌಗು ಪ್ರದೇಶದಲ್ಲಿರುವುದಿಲ್ಲ. ಅಲ್ಲಿಂದ ನೀರು ಕುಡಿಯಲು ದೂರ ಹಾರಿ ಹೋಗುತ್ತವೆ. ಹಗಲೆಲ್ಲಾ ಕಾಲು ಮಡಚಿ ನೆಲದ ಮೇಲೆ ಮಲಗಿದ್ದು ಸಂಜೆ ರಾತ್ರಿ ಓಡಾಡುತ್ತವೆ. ಮಾಂಸಾಹಾರಿಗಳು. ನೆಲದ ಮೇಲೆ ಗುಳಿಕೊರೆದು ೨ – ೩ ಮೊಟ್ಟೆಯಿಡುತ್ತವೆ. ಹೆಣ್ಣು ಕಾವು ಕೊಡುವುದು. ೨೨ – ೨೩ ದಿನ ಕಾವಿನ ಅವಧಿ. ಮರಿಗಳು ಹುಟ್ಟಿದಾಗ ಪೂರ್ಣ ಬಲಿತಿರುತ್ತವೆ.

ಕುಟುಂಬ ೧೦ : ಗ್ಲೇರಿಯೋಲಿಡಿ (Glareolidae)

೨ ಪಂಗಡಗಳನ್ನೊಳಗೊಂಡ ೧೬ ಪ್ರಭೇದಗಳ ಪಶ್ಚಿಮವಲಯದ ಸಂಘಜೀವಿಗಳು ಮತ್ತು ಕೀಟಾಹಾರಿಗಳು. ಆಫ್ರಿಕಾ, ಏಷ್ಯಾ ಯುೂರೇಷಿಯಾದ ದಕ್ಷಿಣಭಾಗ, ಆಸ್ಟ್ರೇಲಿಯಾಗಳಲ್ಲಿ ಹೆಚ್ಚು. ಮೊದಲನೆಯ ಪಂಗಡದಲ್ಲಿ ಸಾಮಾನ್ಯ ಕಂದು ಬೂದು ಬಣ್ಣದ, ಮರಳುಕಾಡುವಾಸಿಗಳಾದ ಸಣ್ಣ ಪಕ್ಷಿಗಳ ೯ ಪ್ರಭೇದಗಳಿವೆ. ಅವುಗಳ ಕೊಕ್ಕು ಸಣ್ಣ. ಕೆಳಬಾಗಿರುತ್ತದೆ. ಹಿಂಬೆರಳಿರುವುದಿಲ್ಲ. ಹೆಚ್ಚಾಗಿ ಹಾರಲಾರವಾದರೂ ನೆಲದ ಮೇಲೆ ಅತಿ ವೇಗವಾಗಿ ಓಡಬಲ್ಲವು. ಮೊಸಳೆಗಳ ಜೊತೆಯಲ್ಲಿ ವಾಸಿಸಿ ಅವುಗಳ ಬಾಯೊಳಹೊಕ್ಕು ಹಲ್ಲುಗಳ ಮಧ್ಯೆ ಅಂಟಿಕೊಂಡಿರಬಹುದಾದ ಮಾಂಸ ಹೆಕ್ಕಿ ತಿಂದು ಮೊಸಳೆಯ ಬಾಯನ್ನು ಶುಚಿಪಡಿಸುತ್ತವೆ.

ಎರಡನೆಯ ಪಂಗಡದ ೭ ಪ್ರಭೇದಗಳು ಹಗುರ ವರ್ಣದ ಸ್ವಾಲೋ ಹಕ್ಕಿಯಂತಹ ವಿಂಗಡಿತ ಬಾಲದ ಮೈದಾನ ವಾಸಿಗಳು. ಅವುಗಳ ಗಿಡ್ಡ ಕಾಲು ಓಡಲು ಅನುಕೂಲ. ಕೀಟಾಹಾರಿಗಳು. ಆಫ್ರಿಕಾದಲ್ಲಿನ ವಿನಾಶಕಾರೀ ಮಿಡತೆಗಳನ್ನು ತಿಂದು ಅನುಕೂಲಪಡಿಸುತ್ತವೆ.

ಎಲ್ಲವೂ ನೆಲವಾಸಿಗಳು. ನೆಲದ ಮೇಲೆಯೇ ಗೂಡು ರಚಿಸುವುದು. ೨ – ೩ ಮೊಟ್ಟೆಯಿಟ್ಟು ಹೆಣ್ಣು ಕಾವು ಕೂರುತ್ತದೆ. ಈಜಿಪ್ಟಿನ ಪ್ರಭೇದ ರಾತ್ರಿವೇಳೆ ಕಾವಿತ್ತು, ಹಗಲಲ್ಲಿ ಮೊಟ್ಟೆಗಳನ್ನು ಮರಳಲ್ಲಿ ಹೂತಿಟ್ಟು ಸೂರ್ಯನ ಕಾವು ಅದಕ್ಕೆ ತಗಲುವಂತೆ ಏರ್ಪಡಿಸುತ್ತದೆ.

ಕುಟುಂಬ ೧೧ : ತಿನೋಕೋರಿಡಿ (Thinocoridae)

ನೀರಿನಲ್ಲಿ ಹರಿದಾಡುವ ಪಕ್ಷಿ ಪ್ರಭೇದಗಳಿಗೆ ಸೇರಿದ್ದರೂ ಪೂರ್ಣ ಕಾಳು ಆಹಾರವಾಗಿ ಹೊಂದಲು ಅನುಕೂಲವಾದ ಗುಬ್ಬಚ್ಚಿಯಂತಹ ಕೊಕ್ಕು ಪಡೆದಿರುವ ೪ ಪ್ರಭೇದಗಳು ಈ ಕುಟುಂಬದವು. ದಕ್ಷಿಣ ಅಮೇರಿಕಾದ ಉತ್ತರ ಭಾಗದಲ್ಲಿನ ಮೈದಾನ ಮತ್ತು ಕಾಡು ಪ್ರದೇಶದಲ್ಲಿ ಕಂಡುಬರುತ್ತವೆ. ಉತ್ತರ ದಿಕ್ಕಿಗೆ ಬಹುದೂರ ವಲಸೆ ಹೋಗುತ್ತವೆ.

ಗಿಡ್ಡ ಕಾಲಿನ ನೀಳರೆಕ್ಕೆಯ ದುಂಡುದೇಹದ ಸಣ್ಣ ಪಕ್ಷಿಗಳಿವು. ಕೊಕ್ಕು ಗುಬ್ಬಚ್ಚಿಯಂತೆ ಸಣ್ಣ ಹಾಗೂ ದೃಢವಾದದ್ದು ಅದರ ಮೂಗು ಹೊಳ್ಳೆಗಳ ಮೇಲೆ ಮುಚ್ಚಳನು

ಕೂಲವಾದಂತಹ ಪೊರೆಯೊಂದಿದೆ. ಬಹುಶಃ ಅದರಿಂದ ಮರಳು ಮತ್ತು ಧೂಳು ಮೂಗಿನೊಳಕ್ಕೆ ಹೋಗದಂತೆ ಅನುಕೂಲವಾಗಬಹುದು.

ಎಲ್ಲವೂ ನೆಲಪಕ್ಷಿಗಳು. ಚೆನ್ನಾಗಿ ಓಡಬಲ್ಲವು. ಗುಂಪಾಗಿರುವುದೇ ಸಾಮಾನ್ಯ. ಹೆದರಿದಾಗ ನೆಲಕ್ಕಂಟಿ ಮಲಗುತ್ತವೆ. ನೆಲ ಕೆರೆದು ೩ – ೪ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಒಂದು ಪ್ರಭೇದ ಮೊಟ್ಟೆಯನ್ನಿಟ್ಟು ಹೊರಹೋಗುವಾಗ ಮಣ್ಣು ಮುಚ್ಚುತ್ತವೆ. ಪೂರ್ಣ ಬಲಿತ ಮರಿ ಜನಿಸಿ ಬೇಗ ಓಡಾಡುತ್ತವೆ.

ಕುಟುಂಬ ೧೨ : ಚಯೋನಿಡಿಡೀ (Chionididae)

ಇವು ದಕ್ಷಿಣ ಶೀತವಲಯದ ಪಕ್ಷಿಪ್ರಭೇದಗಳು. ಅವುಗಳ ಕೊಕ್ಕಿನ ಮೇಲ್ಭಾಗದಲ್ಲಿ ಜೀನಿನಂತಹ ಕೊಂಬಿನ ಕವಚ ಬೆಳೆದು, ಅದರ ದುಂಡು ಹೊಳ್ಳೆಗಳನ್ನು ರಕ್ಷಿಸುವಂತಿರುತ್ತವೆ. ನೋಟಕ್ಕೆ ಸಾಧುವಾಗಿ ಕಂಡರೂ ಕ್ರೂರ ಜಲಗಾರ ಪಕ್ಷಿಗಳು. ಇತರ ಸಮುದ್ರಪಕ್ಷಿಗಳ ನೆಲಸು ಅಂಚಿನಲ್ಲೇ ಓಡಾಡುತ್ತಿದ್ದು, ಎಚ್ಚರಿಕೆ ತಪ್ಪಿದ ಪಕ್ಷಿಗಳ ಮೊಟ್ಟೆ ಮತ್ತು ಮರಿಗಳನ್ನು ತಿನ್ನುತ್ತವೆ. ಕಡಲಾನೆಗಳ ಪ್ರಸವಾನಂತರದ ಹೊಲಸನ್ನೂ, ಅವುಗಳ ಮಲವನ್ನೂ ತಿನ್ನಲು ಗುಂಪು ಸೇರುತ್ತವೆ. ಆದರೆ ಹೆದರಿಕೆಯರಿಯದ ಪಕ್ಷಿಗಳಿವು. ಇತರ ಸಮಯಗಳಲ್ಲಿ ಮೀನು, ಕಂಟಕ ಚರ್ಮಿ ಮುಂತಾದವನ್ನು ಹಿಡಿದು ತಿನ್ನುತ್ತವೆ.

ಅವುಗಳ ದುಂಡನೆಯ ದೇಹಕ್ಕೆ ನೀಳ ರೆಕ್ಕೆಗಳೂ, ಗಿಡ್ಡಕಾಲು ಮತ್ತು ಕೊಕ್ಕು ಇರುತ್ತವೆ. ಹಿಂಬೆರಳು ಚೆನ್ನಾಗಿ ಬೆಳೆದಿರುತ್ತದೆ. ಕೊಕ್ಕು ಮತ್ತು ಮುಖದಲ್ಲಿ ಜೋಲು ಮಾಂಸವಿದ್ದು, ರೆಕ್ಕೆಯಲ್ಲೂ ಕೊಂಬು ಮುಳ್ಳಿರಬಹುದು. ಈಜಲು ನುರಿತವು. ಆದರೆ ಸಾಮಾನ್ಯವಾಗಿ ನೆಲದಮೇಲಿರುತ್ತವೆ. ಚೆನ್ನಾಗಿ ಹಾರಲೂಬಲ್ಲವು.

ಎರಡು ಪ್ರಭೇದಗಳು ಮಾತ್ರವಿವೆ. ೧೦ –೧೨ರ ಗುಂಪು ಸಾಧಾರಣ. ನೆಲದ ಮೇಲೆ ಗೂಡು ರಚಿಸಿ ೩ – ೪ ಬಿಳೀ ಮೊಟ್ಟೆಯಿಡುತ್ತವೆ. ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ. ಮರಿ ಜನಿಸಿದಾಗ ಪೂರ್ಣ ಬೆಳೆದಿರುತ್ತದೆ.

ಕುಟುಂಬ ೧೩ : ಸ್ಟರ್‌ಕೋರಾರಿಡೀ (Stercorariidae)
(ಸ್ಕುವಾ ಮತ್ತು ಜೀಗರ್‌ಗಳು) (Skua & Jaegers)

ಉತ್ತಮ ಬೇಟೆಗಾರ ಪಕ್ಷಿಗಳ ೪ ಪ್ರಭೇದಗಳು ಇದರಲ್ಲಿವೆ. ಸಮುದ್ರವಾಸಿಗಳು. ಗಲ್‌ಗಳಂತೆಯೋ ಎತ್ತರ ಪ್ರದೇಶವಾಸಿಗಳಾದ ದರೋಡೆ ಪಕ್ಷಿಗಳು. ಅವುಗಳಿಗೂ ಗಲ್‌ಗಳಿಗೂ ಇರುವ ವ್ಯತ್ಯಾಸವೆಂದರೆ, ಅವುಗಳ ಕೊಕ್ಕಿನ ಮೇಲೆ ಬೆಳೆದಿರುವ ಮಾಂಸದಿಂಡಿನಲ್ಲಿ ಹೊಳ್ಳೆ ತೆರೆಯುವುದೇ. ಒಂದು ಪ್ರಭೇದ ಹೆಚ್ಚಾಗಿ ಕಂಡುಬರುವ ದಪ್ಪ ಗಾತ್ರದ ಪೂರ್ಣ ಕಂದುವರ್ಣದ ಪಕ್ಷಿಗಳು. ಇತರ ಮೂರು ಹಗುರವರ್ಣ ಹೊಂದಿರುತ್ತವೆ. ಎಲ್ಲವೂ ಉತ್ತಮ ರೆಕ್ಕೆ ಹೊಂದಿದ್ದು ದೂರ ಹಾರಬಲ್ಲವು.

ಪಕ್ಷಿವರ್ಗದಲ್ಲೇ ಉತ್ತರ ಮತ್ತು ದಕ್ಷಿಣ ಶೀತವಲಯವೆರಡರಲ್ಲೂ ಕಂಡುಬರುವ ಪ್ರಭೇದ ದಪ್ಪಗಾತ್ರದ ಸ್ಕುವಾಗಳೇ! ಅವುಗಳ ಸಂತಾನಾಭಿವೃದ್ಧಿ ಉತ್ತರ ಶೀತ ವಲಯದ ತೀರಪ್ರದೇಶದಲ್ಲೇ. ದ. ಶೀತವಲಯದ ಅಂಟಾರ್ಕ್ಟಿಕಾ ಅಂಚಿನಲ್ಲೂ ಅವುಗಳು ವಾಸಿಸುತ್ತವೆ. ಇಲ್ಲಿಯೇ ಅವುಗಳ ಸಂಖ್ಯೆ ಅಧಿಕವಾಗಿರುವುದು. ಸಮುದ್ರವಾಸಿ ಪಕ್ಷಿಗಳು. ಮೀನು ನುಂಗಿ ಹಾರಾಡುತ್ತಿರುವಾಗ ಅವುಗಳನ್ನು ಅಟ್ಟಿಸಿ ಹೋಗಿ ಬೆದರಿಸಿ, ಮೀನನ್ನು ಕಕ್ಕುವಂತೆ ಮಾಡಿ, ಅದನ್ನು ಹಿಡಿದು ತಾವು ತಿನ್ನುತ್ತವೆ. ಅದರಿಂದಲೇ ಅವುಗಳಿಗೆ ಬೇಟೆಯಾಡುವ ದರೋಡೆಕೋರರೆಂದು ಹೆಸರಿಟ್ಟಿರುವರು. ತಾವೇ ಮೀನು ಹಿಡಿಯಬಲ್ಲವು. ತೀರದಲ್ಲಿರಬಹುದಾದ ಸತ್ತು ಕೊಳೆತ ಮಾಂಸವನ್ನೂ ತಿನ್ನಬಲ್ಲವು. ತಿಮಿಂಗಿಲ ಬೇಟೆಯ ಹಡಗುಗಳ ಬಳಿ ಸುತ್ತಾಡುತ್ತಾ ಸಾಕಷ್ಟು ಆಹಾರ ಹೊಂಚಿಕೊಳ್ಳುತ್ತವೆ.

ಪೆಂಗ್ವಿನ್ ನೆಲಸುಗಳ ಬಳಿಯೂ ವಾಸವಿರುವುದು ಸಾಮಾನ್ಯ. ಅವುಗಳ ನೆಲಸುಗಳ ಬಳಿಯೇ ತಾವೂ ಗೂಡು ರಚಿಸಿಕೊಂಡು, ಅವುಗಳ ಮೊಟ್ಟೆ ಮತ್ತು ಮರಿಗಳನ್ನು ಅಪಹರಿಸಲು ಹೊಂಚುಹಾಕುತ್ತವೆ. ನೆಲ ಕೆರೆದು ೨ ಮೊಟ್ಟೆಯಿಡುವುದು ಸಾಮಾನ್ಯ. ಆ ಮೊಟ್ಟೆಗಳ ನಡುವೆ ಹೆಚ್ಚು ಅಂತರವಿದ್ದು ಮೊದಲ ಮೊಟ್ಟೆ ಬೇಗ ಮರಿಯಾಗಿ ಬೆಳೆಯುತ್ತದೆ. ಮರಿ ಸ್ವಲ್ಪದೂರ ತೆವಳಿ ಅಡ್ಡಾಡುತ್ತಾ ಹೋದಲ್ಲೂ, ತಂದೆ ತಾಯಿಗಳು ಅದರ ಗುರುತು ಹಿಡಿಯದೆ ಹಿಂತಿರುಗಿದಾಗ ಕೊಂದು ತಿನ್ನುತ್ತವೆ! ಇದು ಸಾಮಾನ್ಯವಾದ್ದರಿಂದ ೨ ಮೊಟ್ಟೆಯಿಟ್ಟರೂ ಒಂದೇ ಮರಿಯಾಗುವುದು ಸಾಮಾನ್ಯ. ಗೂಡಿನ ಸ್ಥಳ ನಿರ್ಧಾರವಾದ ಮೇಲೆ ಜೀವನವಿಡೀ ಅಲ್ಲಿಗೇ ಹಿಂತಿರುಗಿ ಮರಿಮಾಡುತ್ತವೆ.

ಇತರ ಮೂರು ಪ್ರಭೇದಗಳು ಉ. ಶೀತವಲಯ ವಾಸಿಗಳು. ಒಂದು ಪ್ರಭೇದಕ್ಕೆ ೨ ಉದ್ದ ಬಾಲಗರಿಯಿವೆ. ಅದರಲ್ಲೂ ಹೆಣ್ಣು – ಗಂಡುಗಳೆರಡೂ ೨೨ – ೨೮ ದಿನ ಕಾವಿತ್ತು ತಮ್ಮ ೨ ಮೊಟ್ಟೆಯನ್ನು ಮರಿಮಾಡುತ್ತವೆ. ಎರಡು ಧ್ರುವಗಳೆಡೆಯಲ್ಲೂ ಅವು ಕಂಡುಬರುತ್ತವೆ.

ಕುಟುಂಬ ೧೪ : ಲಾರಿಡೀ (Laridae)

(ಗಲ್‌ಗಳು)

ಒಟ್ಟು ೮೨ ಪ್ರಭೇದಗಳನ್ನೊಳಗೊಂಡಿರುವ ೨ ಪಂಗಡಗಳುಳ್ಳ ಕುಟುಂಬ. ನೀಳ ರೆಕ್ಕೆಯ, ಜಾಲಾಂಗುಲಿ ಪಾದದ ಮುಖ್ಯ ಸಮುದ್ರ ಪಕ್ಷಿಗಳು. ನದೀ ಸರೋವರವಿದ್ದಲ್ಲಿ ಒಳನಾಡಿನವರೆಗೂ ಹಾರಿಬರುತ್ತವೆ. ಶೀತವಲಯ ಮತ್ತು ಮರಳುಕಾಡುಗಳನ್ನುಳಿದು ಇತರೆಲ್ಲೆಡೆ ಸಾಮಾನ್ಯವಾಗಿ ಕಂಡುಬರುತ್ತವೆ. ಗಲ್‌ಗಳ ದಪ್ಪ ದೇಹ ೧೦ - ೩೫ ಅಂಗುಲವಿದ್ದು ಅವುಗಳ ಉದ್ದ ಮೊನಚು ಕೊಕ್ಕು ತುದಿಯಲ್ಲಿ ಕೆಳಬಾಗಿರುತ್ತದೆ. **ಟರ್ನ್‌ಗಳು** (Tern) ಸಣ್ಣ ಪಕ್ಷಿಗಳು. ತೆಳುವಾದ ಉದ್ದ ರೆಕ್ಕೆಯೂ ಉದ್ದ ಮೊನಚು ಕೊಕ್ಕೂ ಅವುಗಳ ಹೆಗ್ಗುರುತು.

ಗಲ್‌ಗಳು ಸಮುದ್ರ ತೀರದಲ್ಲೆಲ್ಲಾ ಸಾಮಾನ್ಯವಾಗಿ ಕಂಡುಬರುತ್ತವೆ. ಕಿಟ್ಟಿ ವಾಕಿಗಳನ್ನುಳಿದು ಇತರ ಪ್ರಭೇದಗಳು ಸಮುದ್ರದಲ್ಲಿ ಬಹುದೂರ ಹೋಗುವುದಿಲ್ಲ. ಆದರೆ ಈ ಪ್ರಭೇದ ಮಾತ್ರ ಸಹಸ್ರಾರು ಮೈಲಿ ದೂರ ಹೋಗುತ್ತವೆ. ಮೀನು, ಮಾಂಸ ಮುಖ್ಯಾಹಾರವಾದರೂ ಎಲ್ಲಾ ವಿಧದ ಆಹಾರವನ್ನೂ ಸೇವಿಸುತ್ತವೆ. ಆದ್ದರಿಂದ ಉತ್ತಮ ಜಲಗಾರ ಪಕ್ಷಿಗಳು. ಕಪ್ಪೆಚಿಪ್ಪು ಮತ್ತಿತರ ಚಿಪ್ಪಿನ ಪ್ರಾಣಿಗಳು ಇವಕ್ಕೆ ಇಷ್ಟವಾದವು. ಅವುಗಳನ್ನು ಹಿಡಿದೆತ್ತಿ ಮೇಲೊಯ್ದು ಬಂಡೆಗಳ ಮೇಲೆ ಬೀಳಿಸಿ ಚಿಪ್ಪನ್ನು ಒಡೆಯುತ್ತದೆ. ನೇಗಿಲ ಗೆರೆಯ ಹಿಂದೆ ಹಾರಾಡಿ ಕಾಣುವ ಹುಳು ಹುಪ್ಪಟೆಗಳನ್ನು ತಿನ್ನುತ್ತವೆ. ಎಲ್ಲಾ ಕೀಟಗಳನ್ನೂ ತಿನ್ನಬಲ್ಲವು.

ಹಲವು ಪ್ರಭೇದಗಳಲ್ಲಿ ಮರಿಗಳಿಗೂ ಬೆಳೆದ ಪಕ್ಷಿಗಳಿಗೂ ಬಹು ಹೆಚ್ಚಿನ ವರ್ಣ ವ್ಯತ್ಯಾಸವಿದೆ. ಮೊದಲ ವರ್ಷ ಅವು ಪೂರ್ಣ ಕಂದು ಬಣ್ಣ ಹೊಂದಿ ಕೊಕ್ಕು ಕಪ್ಪ ಗಿರಬಲ್ಲದು. ಎರಡನೆಯ ವರ್ಷ ಅವು ಬೂದು ಬಣ್ಣವಾಗಿ ವಯಸ್ಸಾದಂತೆ ಪೂರ್ಣ ಬಣ್ಣ ಹೊಂದುತ್ತವೆ. ವಿವಿಧ ಪ್ರಭೇದಗಳ ಮೈವರ್ಣದಲ್ಲಿ ಹೆಚ್ಚಿನ ವ್ಯತ್ಯಾಸವಿರುತ್ತದೆ. ಹಲವು ಪೂರ್ಣ ಬಿಳುಪು. ಕೆಲವಕ್ಕೆ ಬೆನ್ನು ಮತ್ತು ರೆಕ್ಕೆ ಪೂರ್ಣ ಕಪ್ಪಾಗಿದ್ದು ಉಳಿದ ಭಾಗ ಬಿಳುಪಾಗಿರುತ್ತವೆ. ಕೆಲವು ಬಿಳುಪು ಬೂದು, ಕಂದು ಬಣ್ಣಗಳ ವಿವಿಧ ವರ್ಣ ಹೊಂದಿರಬಹುದು. ಮರಿಗಳಿಗೆ ಅಪಾಯ ಹೆಚ್ಚು. ೨ ವರ್ಷಗಳಾದಲ್ಲಿ ಮಾತ್ರ ತೊಂದರೆ ತಪ್ಪಿ ದೀರ್ಘಕಾಲ ಜೀವಿಸಬಲ್ಲದು.

ಪೂರ್ಣ ಸಂಘಜೀವಿಗಳಿವು. ಹಾರಾಡುವಾಗ, ತಿನ್ನುವಾಗ, ಸಂತಾನಾಭಿವೃದ್ಧಿ ಸಮಯದಲ್ಲಿ ಹಾಗೂ ವಲಸೆ ಹೋಗುವಾಗ ಯಾವಾಗಲೂ ದೊಡ್ಡ ಗುಂಪಾಗಿಯೇ ಇರುತ್ತವೆ. ಅವು ವಿವಿಧ ಉಪವರ್ಗಗಳ ಪಕ್ಷಿಗಳೊಡನೆಯೂ ಸೇರಿ ಸಹಬಾಳ್ವೆ ಮಾಡಬಲ್ಲವು. ನೆಲದ ಮೇಲೆ ಸಮುದ್ರ ಸಸ್ಯ ಮತ್ತು ಕಸಕಡ್ಡಿಗಳಿಂದ ದಪ್ಪ ಗೂಡು ರಚಿಸುತ್ತವೆ. ೨ – ೩ ಮೊಟ್ಟೆಯಿಡುವುದು ಸಾಮಾನ್ಯ. ೨೦ – ೩೦ ದಿನ ಹೆಣ್ಣು ಗಂಡು ಗಳೆರಡೂ ಕಾವಿತ್ತು ಮರಿಮಾಡಿ, ಗಂಡು ಮರಿಪೋಷಣೆಯಲ್ಲೂ ಸಹಕರಿಸುತ್ತದೆ. ಮರಿ ಬಲಿತು ಜನಿಸಿದರೂ ದೂರ ಹೋದಲ್ಲಿ ಇತರ ಪಕ್ಷಿಗಳು ಹಿಡಿದು ತಿನ್ನುತ್ತವೆ. ಅವೆಲ್ಲವೂ ತೀರಪ್ರದೇಶದ ಪಕ್ಕದಲ್ಲೇ ಇರುವ ದ್ವೀಪಗಳಲ್ಲೇ ಹೆಚ್ಚಾಗಿ ಗೂಡು ಕಟ್ಟುವುದು. ಹೆಚ್ಚಾಗಿ ಅರಚುತ್ತಾ ಚಟುವಟಿಕೆಯಾಗಿರುತ್ತವೆ. ಮೀನು ಕೇಂದ್ರಗಳೆಡೆ ಅವುಗಳನ್ನು ಶುದ್ಧಿಮಾಡುವಾಗ ಬೇಕಾದಷ್ಟು ಕರುಳು ಮುಂತಾದ ವಸ್ತುಗಳನ್ನು ಬಿಸಾಡುವುದರಿಂದ ಅವು ಅಲ್ಲೇ ಹಾರಾಡುತ್ತಿರುತ್ತವೆ. ಚೆನ್ನಾಗಿ ಈಜಬಲ್ಲವು. ಆದರೆ ಮುಳುಗಲಾರವು. ಎತ್ತರ ಹಾರಿ ಗಾಳಿಯಲ್ಲಿ ಬಹುಕಾಲ ತೇಲಾಡಲು ನುರಿತವು.

ಟರ್ನ್‌ಗಳು ಸಣ್ಣ ಪಕ್ಷಿಗಳು. ಆಹಾರದಲ್ಲೂ ಗಲ್‌ಗಳಂತೆ ಸರ್ವ ಭಕ್ಷಕಗಳಲ್ಲ. ಹೆಚ್ಚಾಗಿ ತೇಲುವುದಿಲ್ಲ. ರೆಕ್ಕೆಬಡಿತದಿಂದ ಹಾರಾಡುತ್ತವೆ. ಸೀಗಡಿಗಳು, ಸಣ್ಣ ಮೀನುಗಳ ಮರಿಗಳೇ ಮುಖ್ಯ ಆಹಾರ. ನೀರಿನ ಮೇಲೆ ಹಾರಾಡುತ್ತಿದ್ದು, ಆಹಾರ ಕಂಡಾಗ ಹಠಾತ್ತಾಗಿ ಎರಗಿ ನೀರಿನಲ್ಲಿ ಮುಳುಗಿ ಅವನ್ನು ಹಿಡಿದು ಮೇಲೆ

ಹಾರಿಬರುತ್ತವೆ. ಹಲವು ಪ್ರಭೇದಗಳು ನೀರಿನಲ್ಲಿ ಮುಳುಗದೆ ಮೇಲಿನಿಂದಲೇ ಕೊಕ್ಕನ್ನು ಮಾತ್ರ ನೀರಿನೊಳಕ್ಕೆ ಚಾಚಿ ಆಹಾರ ಹಿಡಿಯಬಲ್ಲವು. ಅವುಗಳ ಬಣ್ಣ ವೈವಿಧ್ಯತೆ ಗಲ್‌ಗಳಂತಿದ್ದರೂ, ತಲೆಯಮೇಲೆ ಅವುಗಳಿಗೆ ಸಾಮಾನ್ಯವಾಗಿ ಕಪ್ಪು ಬಣ್ಣವಿರುತ್ತದೆ.

ಟರ್ನ್‌ಗಳಿಗೆ ಜಾಲಾಂಗುಲವಿದ್ದರೂ, ಕಾಲು ಸಣ್ಣವಾದ್ದರಿಂದ ಚೆನ್ನಾಗಿ ಈಜಲಾರವು, ಗಲ್‌ಗಳ ಒಂದು ಪ್ರಭೇದಕ್ಕೆ ಮಾತ್ರ ಕವಲು ಬಾಲವಿದೆ. ಆದರೆ ಟರ್ನ್‌ಗಳಿಗೆಲ್ಲಾ ಕವಲು ಬಾಲವೇ ಸಾಮಾನ್ಯ. ಮರಿಯಾಗಿದ್ದಾಗ ಮಾತ್ರ ಅದು ಚದುರ ತುದಿಯವಾಗಿರಬಲ್ಲದು. ಕೆಲವು ಒಳನಾಡಿನ ಉಪ್ಪು ಸರೋವರ ಹಾಗೂ ಜೌಗು ಪ್ರದೇಶದಲ್ಲಿ ಜೀವಿಸಿ ಮರಿಮಾಡುತ್ತವೆ. ಶಾಂತಿಸಾಗರದ ಮಧ್ಯದಲ್ಲಿನ ದ್ವೀಪದಲ್ಲಿರುವ ಬಿಳಿ ಜಾತಿಯೊಂದು ಮಾತ್ರ ಸಣ್ಣ ಪೊದರು ಮರಗಳಲ್ಲಿ ಗೂಡು ರಚಿಸಿ, ಮೊಟ್ಟೆ ಇಟ್ಟು ಕಾವು ಕೂರುತ್ತದೆ. **ಇಂಕಾ ಟರ್ನ್** (Inca Tern) ಇತರ ಪಕ್ಷಿಗಳ ಹಿಕ್ಕೆ ಪದರದ ಮಧ್ಯದಲ್ಲಿನ ಗುಳಿಗಳಲ್ಲೊ ಅಥವಾ ಕಲ್ಲು ಪೊಟರೆಗಳಲ್ಲೊ ಮೊಟ್ಟೆ ಇಡುತ್ತವೆ.

ಪರ್ವಕಾಲದಲ್ಲಿ ಅವು ಸಾಮೂಹಿಕವಾಗಿ ನಿರ್ದಿಷ್ಟ ಮರಿ ಮಾಡುವ ಪ್ರದೇಶಕ್ಕೆ ಬಂದು ಗೂಡು ರಚಿಸುತ್ತದೆ. ಗಂಡು ತನ್ನ ಪ್ರೇಯಸಿಗೆ ರುಚಿಕರ ಮೀನನ್ನು ಕೊಟ್ಟು ಒಲಿಸುತ್ತದೆ. ಜಗಳ, ಕಿರುಚಾಟದಿಂದ ಅತಿ ಹೆಚ್ಚಿನ ಗಲಭೆ ಮಾಡುತ್ತಿರುತ್ತದೆ. ತಮ್ಮ ಪಾದದಿಂದ ಮರಳನ್ನು ಹಿಂದೆ ನೂಕಿ ಹಳ್ಳ ಮಾಡಿ ಅದರಲ್ಲಿ ಕುಳಿತು ಸುತ್ತ ತಿರುಗುತ್ತವೆ. ಇದರಿಂದ ಆ ಗೂಡು ಅಗಲವಾಗುತ್ತದೆ. ಅದರಲ್ಲಿ ಹಲವು ಕಲ್ಲು ಹರಳನ್ನು ಅಥವಾ ವಿವಿಧ ಚಿಪ್ಪುಗಳನ್ನು ಸೇರಿಸಬಹುದು. ೨ – ೩ ಮೊಟ್ಟೆ ಇಡುವುದು ಸಾಮಾನ್ಯ. ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ. ಕಾಲಾವಧಿ ೨೧ – ೨೮ ದಿನ. ಮರಿ ಪೂರ್ಣ ಬಲಿತಿರುತ್ತವೆ. ಮೈಯೆಲ್ಲಾ ಬೂದು ಬಣ್ಣದ ಮೃದು ಗರಿಗಳಿಂದಾವೃತವಾಗಿದೆ. ೨ – ೩ ದಿನಗಳಲ್ಲೇ ಗೂಡು ಬಿಡುತ್ತವೆ. ಮರಿಗಳು ಕೆಲ ಸಮಯ ಉದ್ದ ಮೀನುಗಳನ್ನು ನುಂಗಲಾರದೆ, ಅರ್ಧ ನುಂಗಿ ಆ ಭಾಗ ಜೀರ್ಣವಾದಂತೆ ಮಿಕ್ಕವನ್ನು ತಿನ್ನುತ್ತದೆ. ಮರಿಗಳಿಗೆ ಗೂಬೆ, ಇಲಿ, ಇತರ ಪಕ್ಷಿಗಳೂ, ಹಲವು ರೋಗಗಳೂ ಮಾರಕ, ಇದರಿಂದ ಅವುಗಳ ಉಳಿವು ಕಷ್ಟ. ದೊಡ್ಡ ಪಕ್ಷಿಗಳನ್ನು ಗೂಬೆ ಮುಂತಾದವು ಕೊಲ್ಲುತ್ತವೆ. ೫ ವಾರಗಳಲ್ಲೇ ಹಾರಬಲ್ಲವಾದರೂ ಒಂದೆರೆಡು. ವರ್ಷವಾದನಂತರವೇ ವಲಸೆ ಹೋಗುವುದು. ಬಹುದೂರ ವಲಸೆ ಹೋಗುತ್ತವೆ. ಉತ್ತರ ಶೀಶವಲಯದವು ದಕ್ಷಿಣ ಶೀತವಲಯದವರೆಗೆ ಹಾರುತ್ತವೆ. ೩ – ೪ ವರ್ಷ ವಯಸ್ಸಿನ ನಂತರವೇ ಪರ್ವ ಪಡೆಯುವುವು. ೨೩ ವರ್ಷಗಳವರೆಗೆ ಬದುಕಿರಬಲ್ಲವು. ಪ್ರತಿ ವರ್ಷವೂ ಅವು ತಾವು ಹುಟ್ಟಿದ ಸ್ಥಳಕ್ಕೇ ಹಿಂತಿರುಗುತ್ತವೆ. ಎಷ್ಟೇ ದೂರದಲ್ಲಿದ್ದರೂ ತಮ್ಮ ಹುಟ್ಟು ಸ್ಥಳಕ್ಕೆ ಹೋಗಿ ಮರಿ ಮಾಡುವುದು ಇವುಗಳ ವೈಶಿಷ್ಟ್ಯ. ಲ್ಯಾಬ್ರಡಾರ್‌ನಿಂದ ಹೊರಟ ಗುರುತು ಮಾಡಿದ ಪಕ್ಷಿ ೬ ವಾರಗಳಲ್ಲಿ ಫ್ರಾನ್ಸಿನಲ್ಲಿ ಕಾಣಿಸಿಕೊಂಡಿತು. ೯೦ ದಿನಗಳಲ್ಲಿ ೯೦೦೦ ಮೈಲಿ ದೂರ ವಲಸೆ

ಹೋದ ನಿದರ್ಶನಗಳಿವೆ ! ಉತ್ತರ ಶೀತವಲಯದ ಟರ್ನ್ ಒಂದು ೧೦,೦೦೦ ಮೈಲಿ ದೂರ ವಲಸೆ ಹೋಗಿ ದಾಖಲೆ ಸ್ಥಾಪಿಸಿದೆ !

ಇವುಗಳಲ್ಲಿ **ತಲೆಯಾಡಿಸುವ ಟರ್ನ್** ಮತ್ತು **ಹೊಗೆಬಣ್ಣದ ಟರ್ನ್**‌ಗಳು ಪೂರ್ಣ ಸಮುದ್ರವಾಸಿಗಳು. ಯಾವಾಗಲೂ ಬಹುದೂರ ನೀರಿನ ಮೇಲೆ ಹಾರು ತ್ತಿರುವುವು. ಪರ್ವಕಾಲದಲ್ಲಿ ಮಾತ್ರ ಭೂಮಿಯಮೇಲಿರುತ್ತವೆ. ಕೇವಲ ೬ ಅಂಗುಲ ಉದ್ದ ದೇಹದ **ಸಣ್ಣ ಟರ್ನ್** ಸುಂದರ ಪಕ್ಷಿ. ಬಿಳಿಯ ದೇಹದ ಕಪ್ಪು ತಲೆಯ ಹಳದಿ ಕೊಕ್ಕುಗಳನ್ನು ಹೊಂದಿರುತ್ತವೆ.

ಕುಟುಂಬ ೧೫ : ರಿಂಕೋಪಿಡೀ (Rhynchopidae)

ವಿಚಿತ್ರ ಕೊಕ್ಕಿನ ೩ ಪಕ್ಷಿ ಪ್ರಭೇದಗಳಿವು. ಈ ಕುಟುಂಬದ ಪಕ್ಷಿಗಳಿಗೆ ಮಾತ್ರ ತಳಕೊಕ್ಕು ಮೇಲಿನದಕ್ಕಿಂತ ಉದ್ದವಾಗಿರುವುದು. ಅವು ನೀರಿನ ಮೇಲ್ಭಾಗದಲ್ಲಿ ಹಾರಾಡುತ್ತಾ ನೀಳ ತಳಕೊಕ್ಕನ್ನು ನೀರಿನಲ್ಲಿ ಇಳಿ ಬಿಟ್ಟಿರುತ್ತದೆ. ಸಣ್ಣ ಮೀನು ಅಥವಾ ಸೀಗಡಿ ಸಿಕ್ಕಿದರೆ ಮೇಲ್ಕೊಕ್ಕು ತಟ್ಟನೆ ಸೇರಿ ಅದನ್ನು ಮೇಲೆತ್ತಿ ತಿನ್ನುತ್ತದೆ. ಕೊಕ್ಕು ಕತ್ತಿಯಲಗಿನಂತೆ ಹರಿತವಾಗಿ ಮೇಲೆ ಅಗಲವಾಗಿರುತ್ತದೆ.

ಅವು ಒಂಟಿಯಾಗಿ ಅಥವಾ ಸಣ್ಣ ಗುಂಪಾಗಿ ಆಹಾರ ಅರಸುತ್ತ ಹಾರಾಡುತ್ತವೆ. ಮೀನು ಮರಿ, ಮತ್ತು ಸೀಗಡಿಗಳು ಸಂಜೆ, ರಾತ್ರಿ ಕಾಲದಲ್ಲೇ ಮೇಲಕ್ಕೆ ಬರುವುದರಿಂದ ಆಗಲೇ ಇವುಗಳ ಚಲನೆ ಜಾಸ್ತಿ. ಇವುಗಳ ಕಣ್ಣಿನಲ್ಲಿನ ಪಾಪೆ ನೇರವಾಗಿದ್ದು, ಅದನ್ನು ಸಂಕುಚಿತಗೊಳಿಸಲು ಅವು ಶಕ್ತವಾಗಿವೆ.

ಉತ್ತರ ಅಮೇರಿಕಾದ **ಕಪ್ಪು ಸ್ಕಿಮ್ಮರ್** ದಪ್ಪ ಗಾತ್ರದ ಪಕ್ಷಿ. ದಕ್ಷಿಣ ಅಮೇರಿಕಾದ ಮಧ್ಯ ಭಾಗದವರೆಗೆ ಅವು ಕಂಡುಬರುತ್ತವೆ. **ಆಫ್ರಿಕಾ ಸ್ಕಿಮ್ಮರ್**‌ಗಳಿಗೆ ಹಳದಿ ಕೊಕ್ಕಿದೆ. ಭಾರತದ ಸ್ಕಿಮ್ಮರ್‌ಗಳಿಗೆ ಕೊಕ್ಕು ತಳಭಾಗದಲ್ಲಿ ಕಪ್ಪಗಿದ್ದು, ತುದಿ ಮಾತ್ರ ಹಳದಿಯಾಗಿರುತ್ತದೆ.

ಮರಳು ತೀರದಲ್ಲಿ ಕುಳಿತು, ಎದೆಯನ್ನು ತಿರುವಿ, ತೆಳು ಗುಳಿ ಮಾಡಿ ಗೂಡು ರಚಿಸಿ ೨ – ೩ ಮೊಟ್ಟೆಯಿಡುತ್ತವೆ. ಹೆಣ್ಣೇ ಕಾವು ಕೊಡುವುದು. ಮರಿಗಳು ಕಂದು ಬಣ್ಣದ ಮೃದು ಗರಿ ಹೊಚ್ಚಡ ಹೊಂದಿ ಜನಿಸುತ್ತವೆ. ಅವುಗಳಿಗೆ ಎರಡು ಕೊಕ್ಕೂ ಒಂದೇ ಉದ್ದವಿದ್ದು, ಮುಂದೆ ಅವು ಬೆಳೆದಂತೆಲ್ಲಾ ಅಡಿ ಕೊಕ್ಕು ನೀಳವಾಗುತ್ತದೆ.

ಕುಟುಂಬ ೧೬ : ಆಲ್‌ಸಿಡೀ (Alcidae)

(ಆಕ್, ಪಿಪ್ಪಿನ್‌ಗಳು)

ಇವು ಪೆಂಗ್ವಿನ್‌ಗಳಂತಹ ಉತ್ತರವಲಯದ ಪಕ್ಷಿ ಪ್ರಭೇದಗಳು. ಒಟ್ಟು ೨೩ ಪ್ರಭೇದಗಳಿವೆ. ಪೆಂಗ್ವಿನ್‌ಗಳಂತೆಯೇ ಬಣ್ಣ, ಆಕಾರ ಮತ್ತು ನಡತೆ ಹೊಂದಿ ಅದರಂತೆಯೇ ಚೆನ್ನಾಗಿ ಈಜಿ, ಮುಳುಗಿ, ಮೀನು ತಿಂದು ಜೀವಿಸುತ್ತವೆ.

ಆದರೆ ಈ ಪ್ರಭೇದಗಳೆಲ್ಲಾ ಚೆನ್ನಾಗಿ ಹಾರಬಲ್ಲವು. ಎಲ್ಲವೂ ಉತ್ತರ ಶೀತವಲಯದ ಅಂಚಿನ ಪ್ರದೇಶದಲ್ಲಿ ಸಂತಾನಾಭಿವೃದ್ಧಿ ಮಾಡುತ್ತವೆ. ಬೆಹರಿಂಗ್ ಸಮುದ್ರ ಪ್ರದೇಶದಡೆಯಲ್ಲೇ ೧೯ ಪ್ರಭೇದಗಳಿವೆ. ಇತ್ತೀಚೆಗೆ ನಿರ್ನಾಮವಾದ **ಗ್ರೇಟ್ ಆಕ್**(Great Auk) ಪಕ್ಷಿ ಪ್ರಭೇದವೂ ಇದಕ್ಕೆ ಸೇರಿದ್ದು. ಅವುಗಳ ಮಾಂಸ ರುಚಿಕರವಾಗಿ, ಪರ್ವಕಾಲದಲ್ಲಿ ನೆಲದಮೇಲಿದ್ದಾಗ ಓಡಾಡಲು ಸಾಧ್ಯವಿಲ್ಲದೆ ಸಾಧುವಾಗಿದ್ದರಿಂದ, ಅವುಗಳನ್ನು ಸುಲಭವಾಗಿ ಹಿಡಿದು ತಿನ್ನಲು ಸಾಧ್ಯವಾಯಿತು. ಈ ಸಂತತಿಯ ಕೊನೆಯ ಜೊತೆಯನ್ನು ೧೮೪೪ರಲ್ಲಿ ಐಸ್‌ಲ್ಯಾಂಡ್‌ನಲ್ಲಿ ಕೊಲ್ಲಲಾಯಿತು. ಈಗ ಹಲವು ವಸ್ತು ಸಂಗ್ರಹಾಲಯಗಳಲ್ಲಿ ಮಾತ್ರ ಅವುಗಳ ಪ್ರತಿರೂಪ ಮಾಡಿ ಇರಿಸಲಾಗಿದೆ. ಅವು ೧ ೧/೨ ಅಡಿ ಎತ್ತರದ ಪಕ್ಷಿಗಳು. ಸುಮಾರು ೫ ಅಂಗುಲ ಉದ್ದದ ದಪ್ಪ ಮೊಟ್ಟೆಯಿಡುತ್ತಿದ್ದವು. ಸುಮಾರು ೬ ವಾರದ ಕಾವಿನ ಅವಧಿಯಲ್ಲಿ ಮರಿ ಬಲಿತು ಜನಿಸುತ್ತಿದ್ದವು. ಈಗ ಅದು ಪೂರ್ಣ ನಾಶವಾಗಿದೆ.

ಈಗಿರುವ ಪ್ರಭೇದಗಳಲ್ಲಿ ದಪ್ಪ ಕೊಕ್ಕಿನ **ಮುರ್ರೆಗಳೇ** ಮುಖ್ಯ. **ಕ್ಷೌರಕತ್ತಿ ಕೊಕ್ಕಿನ ಆಕ್** ಎರಡನೆಯದು. ಇವೆರಡೂ ಕಲ್ಲು ಪ್ರಪಾತಗಳ ಒಡ್ಡುಗಳಲ್ಲಿ ಒಂದೇ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಗೂಡು ರಚಿಸುವುದಿಲ್ಲ. ಈ ಪಕ್ಷಿಗಳೂ ಜೀವವಿಡೀ ತಮ್ಮ ಗೂಡಿಗೇ ಪ್ರತಿವರ್ಷವೂ ಹಿಂತಿರುಗುತ್ತವೆ. ಕಾವೀಯಲು ಹೆಣ್ಣು–ಗಂಡುಗಳೆರಡೂ ಸಹಕರಿಸುತ್ತವೆ. ಮರಿಗಳು ಜನಿಸಿದ ೨ ವಾರಗಳಲ್ಲೇ ನೀರು ಅಂಟದ ಗರಿ ಬೆಳೆದು ಈಜಲು ಸಹಾಯಕವಾಗುತ್ತದೆ. **ಕಪ್ಪುಗಿಲ್ಲಿಮಾಟ್** ಮತ್ತು **ಡವ್‌ಕೀ**ಗಳು ಕಲ್ಲು ಪೊಟರೆಯಲ್ಲೇ ಮೊಟ್ಟೆಯಿಟ್ಟು ಮರಿಮಾಡಿ, ಅದು ಬಲಿಯುವವರೆಗೂ ಅಲ್ಲೇ ಸುರಕ್ಷಿತವಾಗಿರುತ್ತವೆ.

ಪಫ್ಫಿನ್‌ಗಳು ಈ ಕುಟುಂಬದವು. ಕೋಬಿನ ಮತ್ತು ಗುಚ್ಛತಲೆಯ ಎರಡು ಪ್ರಭೇದಗಳಿವೆ. ಅವುಗಳ ಕೊಕ್ಕು ಪರ್ವಕಾಲದಲ್ಲಿ ವರ್ಣರಂಜಿತವಾಗಿ ನಂತರ ಪೊರೆ ಬಿಟ್ಟು ಸಾಮಾನ್ಯವರ್ಣವಾಗುತ್ತದೆ. ಜಾಲಾಂಗುಲಗಳ ಮೇಲೆ ನಿಂತು ಚೆನ್ನಾಗಿ ಚಲಿಸಬಲ್ಲವು. ನೀರಂಚಿನ ಮೇಲ್ಭಾಗದಲ್ಲಿ ೪–೫ ಅಡಿ ಉದ್ದದ ಸುರಂಗ ತೋಡಿ ಗೂಡು ರಚಿಸುತ್ತವೆ. ದಟ್ಟಕೊಕ್ಕಿನಿಂದ ಮಣ್ಣನ್ನು ಕೊರೆದು ಪಾದದಿಂದ ಹೊರ ನೂಕಿ ಸುರಂಗ ಮಾಡುತ್ತವೆ. ಒಂದೇ ಮೊಟ್ಟೆಯಿಡುವುದು ಮತ್ತು ಹೆಣ್ಣೇ ಕಾವೀಯುವುದು. ಗಂಡು ಸಹಾಯಕ ಮತ್ತು ಮರಿಪೋಷಕ. ಮರಿ ಜನಿಸಿದಾಗ ಮೃದುಗರಿ ಹೊದಿಕೆ ಹೊಂದಿದ್ದು, ಅವು ಉದುರಿ ಪುಕ್ಕ ಬೆಳೆಯುವವರೆಗೂ ಸುರಂಗದಲ್ಲೇ ವಾಸಿಸಿ ಹೊರಬೀಳುತ್ತವೆ.

ಡವ್‌ಕೀಗಳು ಸಣ್ಣ ಗಾತ್ರದವು. ೮–೯ ಅಂಗುಲ ಉದ್ದ ಮಾತ್ರ. ಕಲ್ಲು ಬಡ್ಡುಗಳಲ್ಲೇ ವಾಸ. ದೂರ ವಲಸೆ ಹೋಗುತ್ತವೆ. ಕೊಬ್ಬಿದ ದುಂಡು ದೇಹ ಹೊಂದಿರುತ್ತದೆ. ಅವು ಎಸ್ಕಿಮೋಗಳಿಗೆ ಪ್ರೀತಿಯ ಆಹಾರ. ಹಲವು ಸಣ್ಣ ಗಾತ್ರದ ಮುರ್ರೇ ಮತ್ತು ಆಕ್‌ಗಳನ್ನು, **ಮುರ್ರೇಲೇಟ್** ಮತ್ತು **ಆಕ್‌ಲೆಟ್**‌ಗಳೆಂದು

ಕರೆಯಲಾಗುತ್ತದೆ. ಅವುಗಳ ಕೊಕ್ಕು ಗುಬ್ಬಚ್ಚಿಗಳಂತಿರುತ್ತವೆ. ಉ. ಶೀತವಲಯದ ಬೆಟ್ಟದಂಚಿನ ಮೇಲ್ಭಾಗದ ಮಂಜು ಪ್ರದೇಶದಲ್ಲೇ ಅದರ ಸಂತಾನಾಭಿವೃದ್ಧಿ.

ಉಪವರ್ಗ ೧೭ : ಕೊಲಂಬಿಫಾರ್ಮಿಸ್ (Columbiformes)

(ಡೋಡೋ ಮತ್ತು ವಿವಿಧ ಪಾರಿವಾಳಗಳು)

ಕುಟುಂಬ ೩

ಪ್ರಭೇದ ೩೦೧

ಶೀತವಲಯವನ್ನುಳಿದು ಇನ್ನೆಲ್ಲ ಕಡೆ ಕಂಡುಬರುವ ಉಪವರ್ಗ. ಒಂದು ಕುಟುಂಬ ಇತ್ತೀಚೆಗೆ ನಿರ್ನಾಮವಾಯಿತು. ಇನ್ನೆರಡು ಕುಟುಂಬಗಳ ಪಕ್ಷಿಗಳೆಲ್ಲಾ ನೆಲ ವಾಸಿಗಳು. ದಟ್ಟದೇಹದ ವಿವಿಧ ವರ್ಗದ ಸಸ್ಯಾಹಾರಿಗಳು. ಅರ್ಧ ಜೀರ್ಣವಾದ ಆಹಾರವನ್ನು ಕಕ್ಕಿ ಮರಿಗಳಿಗೆ ಉಣ್ಣಿಸುತ್ತವೆ. ಈ ಉಪವರ್ಗದ ಪಕ್ಷಿಗಳು ಮಾತ್ರ ನೇರ ನೀರು ಕುಡಿಯಬಲ್ಲ ಪಕ್ಷಿವರ್ಗ. ಕೊಕ್ಕನ್ನು ನೀರಿನಲ್ಲಿ ಅದ್ದಿ ಸಾಕಷ್ಟು ಹೀರುತ್ತವೆ.

ಕುಟುಂಬ ೧ : ರಾಫಿಡೀ (Raphidae)

(ಡೋಡೋಗಳು)

ಈಗ ನಿರ್ನಾಮವಾಗಿರುವ ಕುಟುಂಬವಿದು. ಮೊರೀಷಿಯಸ್ ದ್ವೀಪಗಳಲ್ಲಿ ವಾಸವಿರುವ ಹಾರಲಾರದ ದಪ್ಪ ಪಾರಿವಾಳ. ಇನ್ನೆರಡು ಅದರಂತಹ ಜಾತಿ ಪಕ್ಕದ ದ್ವೀಪಗಳಲ್ಲಿ ವಾಸವಿದ್ದವು. ಎಲ್ಲವೂ ಸುಮಾರು ೫೦ ಪೌಂಡು ಭಾರದ ೨ - ೪೬ ಅಡಿ ಎತ್ತರದ ಟರ್ಕಿಯಂತಹ ಪಕ್ಷಿಗಳು. ದಪ್ಪ ತಲೆ, ದುಂಡು ದೇಹ, ಉದ್ದವಾದ ಕೆಳಬಾಗಿದ ದಪ್ಪ ಕೊಕ್ಕು, ದಟ್ಟಕಾಲು, ಮತ್ತು ಬಲು ಸಣ್ಣ ರೆಕ್ಕೆಗಳನ್ನು ಹೊಂದಿದ್ದವು. ಗಂಡು ಗಾತ್ರದಲ್ಲಿ ದೊಡ್ಡದು. ಹೆಣ್ಣು ವರ್ಣರಂಜಿತ. ಹಣ್ಣು, ಕಾಳು, ಬೀಜ ಗಳನ್ನು ತಿನ್ನುತ್ತಿದ್ದವು. ಒಂದೇ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತಿದ್ದವು. ೧೬ನೇ ಶತಮಾನದಲ್ಲಿ ಇಲ್ಲಿಗೆ ವಲಸೆ ಬಂದ ಪೋರ್ಚುಗೀಸರಿಗೆ ಇವು ದೈವದತ್ತ ಕೊಡುಗೆಯಾದುವು. ಅನಾಯಾಸವಾಗಿ ದೊರೆಯುತ್ತಿದ್ದ ಈ ರುಚಿಕರ ಮಾಂಸ ಮುದ್ದೆಯನ್ನು ನಿಷ್ಕಾರಣವಾಗಿ ಕೊಲ್ಲಲಾರಂಭಿಸಿದರು. ಅಳಿದುಳಿದವನ್ನು ಅವರ ಹಂದಿ ನಾಯಿಗಳು ತಿಂದು ೧೬೦೦ ರಿಂದ ೧೮೦೦ರ ವೇಳೆಗೆ ಪೂರ್ಣ ನಾಶ ಗೊಳಿಸಿದವು.

ಕುಟುಂಬ ೨ : ಟೀರೋಕ್ಲಿಡೀ (Pteroclidae)

(ಮರಳು ಗ್ರೌಸ್‌ಗಳು)

ಈ ಕುಟುಂಬದ ಪಕ್ಷಿಗಳು ಮರವಿಲ್ಲದ ಮೈದಾನಗಳಲ್ಲಿ ವಾಸವಿರುತ್ತವೆ. ಹೆಚ್ಚು ರುಚಿಕರ ಬೇಟೆಪಕ್ಷಿ. ರಚನೆಯಲ್ಲೂ, ನಡತೆಯಲ್ಲೂ ಗ್ರೌಸ್ ಹಕ್ಕಿಗಳಂತಿದ್ದರೂ ತಲೆ

ಮಾತ್ರ ಪೂರ್ಣ ಪಾರಿವಾಳದಂತಿರುತ್ತದೆ. ಅದರ ಕೊಕ್ಕಿನ ಮೇಲಿನ ಮಾಂಸ ಬೆಳವಣಿಗೆ ಯಿಲ್ಲ. ಅದಕ್ಕೆ ನೀಳ ರೆಕ್ಕೆ ಬಾಲವಿದೆ. ಕಾಲು ಪೂರ್ಣ ಗರಿಗಳಿಂದಾವೃತ.

ಅವುಗಳ ಕಂದು ಹಳದಿಬಣ್ಣ ಪಟ್ಟೆಗಳೆಲ್ಲಾ ಅವುಗಳ ವಾಸಸ್ಥಳಕ್ಕನುಗುಣ ವಾಗಿದ್ದು ಅಡಗಿ ಕುಳಿತಲ್ಲಿ ಮರಳಿನಲ್ಲಿ ಕಾಣಿಸುವುದೇ ಇಲ್ಲ. ಸಂಘಜೀವಿಗಳು. ವೇಗ ವಾಗಿ ದೂರ ಹಾರಬಲ್ಲವು. ನೆಲವಾಸಿಗಳಾದರೂ ನೀರು ಕುಡಿಯುವುದು ಹೆಚ್ಚು. ನೀರು ಎಷ್ಟೇದೂರವಿರಲಿ ಅಲ್ಲಿಗೆ ಹಾರಿಹೋಗಿ ಸ್ವಲ್ಪ ದೂರದಲ್ಲೇ ಇಳಿದು ಅಪಾಯದ ಅರಿವಿದೆಯೋ ಎಂದು ಪರೀಕ್ಷಿಸಿ ನಂತರವೇ ನೀರನ್ನು ಸಮಿಾಪಿಸಿ ಪಾರಿವಾಳದಂತೆ ಸಾಕಷ್ಟು ಕುಡಿಯುತ್ತವೆ. ಹಲವು ಪಕ್ಷಿಗಳು ಈಜಲೂಬಲ್ಲವು.

ಪಾರಿವಾಳಗಳಿಗೂ ಅವುಗಳಿಗೂ ಇರುವ ಮುಖ್ಯ ವ್ಯತ್ಯಾಸ, ಅವುಗಳ ಮರಿ ಪೂರ್ಣ ಬೆಳೆದು ಹುಟ್ಟಿ ಬೇಗ ಗೂಡನ್ನು ತ್ಯಜಿಸುವುದು. ೨ – ೩ ಮೊಟ್ಟೆಗಳನ್ನು ನೆಲದಮೇಲಿಟ್ಟು ಹೆಣ್ಣು ಗಂಡುಗಳೆರಡೂ ಕಾವು ಕೂರುತ್ತವೆ. ಕಾಲಾವಧಿ ೨೨–೨೮ ದಿನ. ಪಕ್ಷಿಗಳು ೨ ಅಥವಾ ೩ ಸಲ ಮರಿಮಾಡಬಲ್ಲವು. ಹೆಣ್ಣು ಹಗಲಲ್ಲೂ, ಗಂಡು ರಾತ್ರಿಯೂ ಕಾವು ಕೂರುತ್ತವೆ. ಗಂಡು ಹಗಲಲ್ಲಿ ತನ್ನ ಪ್ರೇಯಸಿಗೆ ಆಹಾರ ಮತ್ತು ನೀರನ್ನು ಒದಗಿಸುತ್ತದೆ. ಮರಿಗಳಿಗೆ ಅರ್ಧ ಜೀರ್ಣವಾದ ಆಹಾರವನ್ನು ಕಕ್ಕಿ ಉಣಿಸುತ್ತದೆ.

ಒಟ್ಟು ೧೬ ಪ್ರಭೇದಗಳಿವೆ. ಯೂರೋಪ್, ಏಷ್ಯಾಗಳ ಮಧ್ಯ ಮತ್ತು ದಕ್ಷಿಣ ಭಾಗ, ಆಫ್ರಿಕಾ ಮತ್ತು ಮೆಡಗಾಸ್ಕರ್‌ಗಳಲ್ಲಿ ಮಾತ್ರ ಇವು ಕಂಡುಬರುತ್ತವೆ. ಏಷ್ಯಾ ಮಧ್ಯಭಾಗದ್ದು, ಯೂರೋಪಿನ ದಕ್ಷಿಣದೆಡೆ ವಲಸೆ ಹೋಗುತ್ತವೆ.

ಕುಟುಂಬ ೩ : ಕೊಲಂಬಿಡೀ (Columbidae)
(ಪಾರಿವಾಳಗಳು, ಬೆಳುವಗಳು)

ಉಷ್ಣ ಮತ್ತು ಸಮಶೀತೋಷ್ಣವಲಯದಲ್ಲಿ ವಾಸಿಸುವ ಪಕ್ಷಿ ಕುಟುಂಬವಿದು. ಇದರಲ್ಲಿ ೨೮೯ ಪ್ರಭೇದಗಳಿವೆ. ಹೆಚ್ಚು ಭಾಗ ಆಸ್ಟ್ರೇಲೇಷಿಯಾದಲ್ಲೇ ವಾಸವಿರುವುದು.

ಎಲ್ಲವೂ ದುಂಡು ದೇಹದ, ಗಿಡ್ಡ ಕತ್ತಿನ, ಸಣ್ಣ ತಲೆಯ ಪಕ್ಷಿಗಳು. ಅವುಗಳಿಗೆ ಕೆಳಬಾಗಿದ ದಪ್ಪನೆಯ ದುಂಡು ಕೊಕ್ಕಿದೆ. ದೂರ ಹಾರಬಲ್ಲವು. 'ಕೂ' ಎಂದು ಕೂಗುವುದೇ ಹೆಚ್ಚಾದರೂ ಕುಗ್ಗುಲಗಳಂತೆ ಶಿಳ್ಳು ಹಾಕುತ್ತವೆ. ಪಾರಿವಾಳಗಳು ದಪ್ಪ ಗಾತ್ರದವು. ಬೆಳುವಗಳು ಗಾತ್ರದಲ್ಲಿ ಸಣ್ಣ. ಆದರೆ ಈ ಹೆಸರನ್ನು ವಿವಿಧ ಸ್ಥಳಗಳಲ್ಲಿ ಬೇರೆಬೇರೆಯಾಗಿ ಉಪಯೋಗಿಸುತ್ತಾರೆ.

ನೆಲದಮೇಲೆ, ಮರದ ಪೊಟರೆ ಅಥವಾ ಕೊಂಬೆ, ಮನೆಮಾಡು, ಮತ್ತು ಪ್ರಪಾತ ಬದುಗಳಲ್ಲಿ ಹಲವು ಕಡ್ಡಿಗಳ ಗೂಡು ರಚಿಸಿ ೧ – ೩ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಹೆಣ್ಣು, ಗಂಡುಗಳೆರಡೂ ಕಾವು ಕೊಡುವುದಾದರೂ, ಗಂಡು ಹಗಲು, ಹೆಣ್ಣು ರಾತ್ರಿ ಕಾವು ಕೊಡುತ್ತದೆ. ಕಾಲಾವಧಿ ೧೨ರಿಂದ ೨೮ ದಿನ. ಮರಿ ಕುರುಡು ಮತ್ತು ನಿಸ್ಸಹಾಯಕ. ತಂದೆ ತಾಯಿಗಳ ಆರೈಕೆ ಅಗತ್ಯ.

ಇವುಗಳಲ್ಲಿನ ವೈಶಿಷ್ಟ್ಯ ' ಹಾಲಿನ ' ಉತ್ಪನ್ನ. ಮರಿಯಾದಾಗ ತಂದೆ ತಾಯಿಗಳ ಎದೆ ಚೀಲದ ಒಳಭಾಗ ದಪ್ಪವಾಗಿ ಹಾಲಿನಂತಹ ದ್ರವವನ್ನು ಉತ್ಪನ್ನಮಾಡುತ್ತವೆ. ಅವು ಹುಳಿ ಕಟ್ಟಿದ ಹೆಪ್ಪಿನಂತಾಗಿ ಅದನ್ನು ಅವು ಕಕ್ಕಿ ಮರಿಗಳಿಗೆ ತಿನ್ನಿಸುತ್ತವೆ. ಇದು ಸಸ್ತನಿಗಳ ಹಾಲಿನಷ್ಟೇ ಉತ್ತಮವಾದದ್ದು. ಮರಿ ತಮ್ಮ ಕೊಕ್ಕನ್ನು ತಂದೆ, ತಾಯಿಗಳ ಹೊಟ್ಟೆಯೊಳಕ್ಕೆ ಚಾಚಿ ಮೊದಲು ಇದನ್ನೂ ನಂತರ ಅಲ್ಲಿರುವ ಕಾಳುಗಳನ್ನೂ ತಿಂದು ಬೆಳೆಯುತ್ತವೆ.

ಇವುಗಳಲ್ಲಿನ ಒಂದು ಮುಖ್ಯ ಪಂಗಡಕ್ಕೆ " ಕಾಡು ಪಾರಿವಾಳಗಳು " ಸೇರುತ್ತವೆ. ಇವೇ ಬಹು ಪ್ರಭೇದಗಳ ಪೂರ್ವಿಕ. ಸಾಕು ಪಾರಿವಾಳಗಳ ವಿಧಗಳೆಲ್ಲಾ ಇದರಿಂದಲೇ ಉತ್ಪನ್ನವಾದದ್ದು. ಮಾನವ ಪಳಗಿಸಿದ ಪ್ರಾಣಿಗಳಲ್ಲಿ ಇದೂ ಬಹುಶಃ ಅತಿ ಪುರಾತನವಾದದ್ದೆಂದು ತಿಳಿಯುತ್ತದೆ. ಅನೇಕ ಪುರಾತನ ದಂತಕಥೆಗಳಲ್ಲೂ, ಪುರಾಣಗಳಲ್ಲೂ ಅವುಗಳ ವಿವರಣೆಗಳಿವೆ. ಸುದ್ದಿ ಒಯ್ಯಲು ಅವುಗಳನ್ನು ಅನಾದಿ ಕಾಲದಿಂದಲೂ ಬಳಸಲಾಗಿದೆ. ಸಂಶೋಧನೆಗಳಲ್ಲೂ ಅವುಗಳ ಪಾತ್ರ ಮುಖ್ಯವಾದದ್ದು. ಆಹಾರಕ್ಕಾಗಿಯೂ ಲಕ್ಷಾಂತರ ಸಂಖ್ಯೆಯಲ್ಲಿ ಅವುಗಳನ್ನು ಬೆಳೆಸಲಾಗುತ್ತಿದೆ. ಅರೆ ಬಲಿತ ಮರಿಗಳು ಅತ್ಯಂತ ರುಚಿಕರ ಮಾಂಸ ಒದಗಿಸುತ್ತವೆ. ಹಾರಾಟದಲ್ಲಿ ನುರಿತ ವಿಧಗಳನ್ನು ಬೆಳೆಸಿ ಜೂಜಾಡುವುದೂ ಅಲ್ಲಲ್ಲಿ ಹೆಚ್ಚುತ್ತಿದೆ.

ಎರಡನೆಯ ಪಂಗಡಕ್ಕೆ ಭಾರತ ಮತ್ತಿತರ ಪೂರ್ವವಲಯದ ವಿವಿಧ " ಹಣ್ಣು ಪಾರಿವಾಳಗಳ " (ಕುಗ್ಗಲು) ೨೦ ಪ್ರಭೇದಗಳು ಸೇರುತ್ತವೆ. ಅವು ಬರೀ ಹಣ್ಣುಗಳನ್ನು ಮಾತ್ರ ತಿಂದು ಜೀವಿಸುವ ಹಲವು ವರ್ಣಗಳ ವಿವಿಧ ಗಾತ್ರದವು. ಅವುಗಳ ಪಾದ ಅಗಲವಾಗಿದ್ದು ಪೂರ್ಣ ಗರಿಗಳಿಂದಾವೃತವಾಗಿರುತ್ತದೆ. ಕತ್ತು ಅಗಲವಾಗುವಂತಿದ್ದು ತಮ್ಮ ತಲೆಗಿಂತಲೂ ದಪ್ಪನಾದ ಹಣ್ಣುಗಳನ್ನು ಹಾಗೇ ನುಂಗಬಲ್ಲವು. ಎಲ್ಲವೂ ಪೂರ್ಣ ಮರ ವಾಸಿಗಳು, ನೆಲಕ್ಕೆ ಇಳಿಯುವುದೇ ಇಲ್ಲ. ಹಣ್ಣುಗಳನ್ನು ಹುಡುಕಿ ಹಾರುತ್ತಾ, ಹಣ್ಣುಳ್ಳ ಮರಗಳಲ್ಲೇ ವಾಸಿಸುತ್ತವೆ.

ಮೂರನೆಯ ಪಂಗಡಕ್ಕೆ ಮಲಯ, ಫಿಲಿಪೈನ್ಸ್, ಭಾರತ, ಆಸ್ಟ್ರೇಲಿಯಾದಲ್ಲಿನ ' ಚಕ್ರವರ್ತಿ ಪಾರಿವಾಳ 'ಗಳ ೩೬ ಪ್ರಭೇದಗಳು ಸೇರುತ್ತವೆ. ೧–೧ ೧/೨ ಅಡಿ ಉದ್ದವಿರಬಲ್ಲವು. ಹಲವು ವರ್ಣ ಹೊಂದಿರುತ್ತವೆ. ಬಹು ಎತ್ತರದ ಮರಗಳಲ್ಲಿ ಮಾತ್ರ ವಾಸಿಸುತ್ತಾ, ದೂಪ, ಜಾಯಿಕಾಯಿ ಮುಂತಾದ ದಪ್ಪ ಹಣ್ಣುಗಳನ್ನು ಪೂರ್ಣ ನುಂಗುತ್ತವೆ.

ನಾಲ್ಕನೆಯ ಪಂಗಡಕ್ಕೆ ಆಗ್ನೇಯ ಏಷ್ಯಾ ಮತ್ತು ಶಾಂತಿಸಾಗರದ ದ್ವೀಪವಾಸಿಗಳಾದ ವಿವಿಧ ವರ್ಣರಂಜಿತ, " ವರ್ಣಪಾರಿವಾಳಗಳು " ಸೇರುತ್ತವೆ. ೮–೧೦ ಅಂಗುಲ ಉದ್ದ. ಅಚ್ಚ ಹಸಿರು, ಕೆಂಪು, ಕಪ್ಪು, ನೀಲಿವರ್ಣ ಸೇರಿದಂತಹ ಗರಿಗಳಿರುತ್ತವೆ. ಒಟ್ಟು ೩೯ ಪ್ರಭೇದಗಳಿವೆ.

" ಹಲ್ಲು ಕೊಕ್ಕಿನ ಪಾರಿವಾಳಗಳು " ಸಮೋವಾದಲ್ಲಿ (Samoa) ಮಾತ್ರ ವಾಸವಿದ್ದು ಅದೇ ಬೇರೆ ಪಂಗಡವಾಗುತ್ತದೆ. ಸುಮಾರು ೧೨–೧೪ ಅಂಗುಲ

ಉದ್ದದ, ಹಸಿರು, ಕಪ್ಪು, ದೇಹದ ಪಕ್ಷಿ. ಆಲದ ಹಣ್ಣೇ ಮುಖ್ಯ ಆಹಾರ. ಅದರ ಕೆಳಬಾಗಿದ ನೀಳ ದಟ್ಟ ಕೊಕ್ಕಿನ ತುದಿಯಲ್ಲಿ ಎರಡು ಹಲ್ಲಿನಂತಹ ಕಚ್ಚು ಇವೆ. ಮರದಮೇಲೆ ವಾಸಿಸಿ ಗೂಡು ರಚಿಸುವುದರಿಂದ ಸ್ವಲ್ಪ ಮಾತ್ರ ಈಗ ಬದುಕಿವೆ.

"ಶಿಖೆಯ ಪಾರಿವಾಳಗಳು" (Crested Pigeons) ಅತಿ ಸುಂದರ ಪಕ್ಷಿಗಳು. ನ್ಯೂಗಿನಿಯಲ್ಲಿ ಮಾತ್ರ ಇವೆ. ೨–೩ ಅಡಿ ಉದ್ದದ ಬಹು ದಪ್ಪ ಗಾತ್ರದವು. ಅವುಗಳ ಕಾಲುಗಳು ಮಾತ್ರ ಬೋಳಾಗಿರುತ್ತವೆ. ತಲೆಯಮೇಲೆ ಉಣ್ಣೆಯ ಹಲವು ಗರಿಗಳಿರುತ್ತವೆ. ನೆಲವಾಸಿಗಳು, ದಟ್ಟ ಕಾಡುಗಳಲ್ಲಿ ಈಗಲೂ ಹೆಚ್ಚಾಗಿವೆ.

ಈ ಉಪವರ್ಗದ ಪಕ್ಷಿಗಳಲ್ಲಿ 'ಡೋಡೋ' ಹಾಗೂ 'ಪ್ರಯಾಣಿಕ ಪಾರಿವಾಳ' ಈಗ ನಿರ್ನಾಮವಾಗಿವೆ. ಉತ್ತರ ಅಮೇರಿಕಾ ವಾಸಿ. ಪ್ರಯಾಣಿಕ ಪಾರಿವಾಳದ ದುರಂತ ಕಥೆ ಮಾನವನ ದುರ್ನಡತೆಯನ್ನು ಎತ್ತಿ ತೋರುತ್ತದೆ. ಕೇವಲ ಒಂದು ಶತಮಾನದ ಹಿಂದೆ ಪ್ರಪಂಚದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಪಕ್ಷಿ ಪ್ರಭೇದವಿದು. ಆಹಾರಕ್ಕಾಗಿ ದೂರ ಹೋಗುವಾಗ ಅನೇಕ ದಿನಗಳವರೆಗೆ ಸುಮಾರು ೧ ಮೈಲಿ ಅಗಲದಲ್ಲಿ ನಿರಂತರ ಹಾರಾಡಿ ಮುಂದುವರಿಯುತ್ತಿತ್ತೆಂದೂ, ಒಂದು ಅತಿ ದೊಡ್ಡ ಸಂಖ್ಯೆಯ ಹಿಂಡಿನಲ್ಲಿ ೨೦೦ ಕೋಟಿ ಪಕ್ಷಿಗಳಿದ್ದುವೆಂದೂ ನಂಬಲರ್ಹವಾದ ವರದಿ ಇದೆ. ಅವು ಸಾಮೂಹಿಕವಾಗಿ ಒಂದೆಡೆ ರಾತ್ರಿ ತಂಗುತ್ತಿದ್ದವು. ಹಾಗೂ ಕಾಡಿನ ಒಂದೇ ಭಾಗದಲ್ಲಿ ಮರಗಳನ್ನೆಲ್ಲಾ ಆಕ್ರಮಿಸಿ ಮರಿ ಮಾಡುತ್ತಿದ್ದವು. ಅವುಗಳ ಮರಿ ಕೊಬ್ಬಿದ ಮಾಂಸದ ಮುದ್ದೆಯಂತಿದ್ದು ಅತಿ ರುಚಿಯಾಗಿರುತ್ತಿತ್ತು. ವಿಶ್ರಮಿಸುವ ಪಕ್ಷಿಸಾಂದ್ರತೆಯ ಭಾರದಿಂದ ಹಲವೆಡೆ ಮರದ ಕೊಂಬೆಗಳು ಮುರಿದು ಬೀಳುತ್ತಿದ್ದುವಂತೆ.

೧೮೭೮ರಲ್ಲಿ ವಿಸ್‌ಕಾನ್‌ಸಿನ್ ಬಳಿಯ ನೆಲಸು ಸ್ಥಳ ೮೫೦ ಚದರಮೈಲಿ ಪ್ರದೇಶವನ್ನಾಕ್ರಮಿಸಿತ್ತು. ಅವುಗಳನ್ನು ಆಹಾರಕ್ಕಾಗಿ ಸಾಮೂಹಿಕವಾಗಿ ಕೊಂದು ಹೆಚ್ಚಿನ ಹಣಕ್ಕಾಗಿ ವಿವಿಧ ಸ್ಥಳಗಳಿಗೆ ರಫ್ತು ಮಾಡಲಾಗುತ್ತಿತ್ತು. ಮರ ಹತ್ತಲು ಸಾಧ್ಯವಾಗದಿದ್ದಲ್ಲಿ ಮರಗಳನ್ನೇ ಕಡಿದು ಬೀಳಿಸಿ ಎಲ್ಲವನ್ನೂ ಕೊಲ್ಲಲಾಗುತ್ತಿತ್ತು. ಒಂದು ರಾತ್ರಿಯ ಅಂತಹ ಚಟುವಟಿಕೆಯಿಂದ ಸುಮಾರು ೧೨ ಲಕ್ಷ ಪಕ್ಷಿಗಳ ನಾಶವಾಯಿತೆಂದೂ, ಅದರಲ್ಲಿ ಬಹುಭಾಗ ಶುದ್ಧಮಾಡಿ ಸಿದ್ಧಪಡಿಸುವುದರೊಳಗೆ ಕೆಟ್ಟು ಹೋಗಿ ಕೊಳೆತು ಅವುಗಳನ್ನು ತಿನ್ನಲು ಹಂದಿಗಳನ್ನು ತಂದು ಬಿಡಲಾಯಿತೆಂದೂ ವರದಿಯಾಗಿದೆ. ಈ ದುಷ್ಕೃತ್ಯಗಳ ಫಲವಾಗಿ ಆ ಪ್ರಭೇದ ಬಹು ಬೇಗ ಕ್ಷೀಣಿಸಿ, ಅದರ ಕೊನೆಯ ಪಕ್ಷಿ ಸಿನ್‌ಸಿನಾಟಿ ಪ್ರಾಣಿ ಸಂಗ್ರಹಾಲಯದಲ್ಲಿ ೧೯೧೪ರಲ್ಲಿ ಅಸುನೀಗಿತು. ಇದು ಮಾನವ ದೌರ್ಜನ್ಯದ ಸ್ಮಾರಕವಾಗಿ ನಿಂತಿದೆ.

ಬೆಳುವಗಳು (Doves) ಸಣ್ಣ ಗಾತ್ರದವು. ಎಲ್ಲೆಲ್ಲೂ ಕಂಡುಬರುತ್ತವೆ. ಜೊತೆಯಾಗಿ ವಾಸಿಸುವುದೇ ಹೆಚ್ಚು. ಬೂದು ಬೆಳುವ, ಬೆಟ್ಟ ಬೆಳುವ, ಚುಕ್ಕಿ

ಬೆಳುವ ಮುಂತಾದ ಸುಮಾರು ೧೫ ಪ್ರಭೇದಗಳಿವೆ. ಫಿಲಿಪೈನ್ಸ್ ದ್ವೀಪಗಳಲ್ಲಿ 'ರಕ್ತಸ್ರಾವ ಹಳಿದಯುದ' ಬೆಳುವವೊಂದಕ್ಕೆ ಅಚ್ಚ ಬಿಳುಪು, ಎದೆಯ ಬಳಿ ರಕ್ತಸ್ರಾವದಂತಹ ಮಚ್ಚೆಯಿದೆ. ಆಸ್ಟ್ರೇಲಿಯಾದಲ್ಲಿನ ಹಲವು ಪ್ರಭೇದಗಳು ೧೦ – ೧೨ ಅಂಗುಲವಿದ್ದು ವಿವಿಧ ವರ್ಣದ ಹೊಳಪು ರೆಕ್ಕೆ ಹೊಂದಿರುತ್ತವೆ. ಅವುಗಳು ಅಲ್ಲಿಯ ಹಲವು ವಿಷಪೂರಿತ ಗಿಡಗಳ ಹಣ್ಣು ತಿಂದು ಜೀವಿಸುತ್ತವೆ. ಆ ವಿಷ ಅವಕ್ಕೆ ಯಾವ ತೊಂದರೆಯನ್ನೂ ಮಾಡುವುದಿಲ್ಲ. ಅದು ಅದರ ಸ್ನಾಯು ಮತ್ತು ಮಾಂಸಖಂಡಗಳಲ್ಲಿರುವುದಿಲ್ಲ. ಕರುಳು ಮತ್ತು ಮೂಳೆಗಳಲ್ಲಿ ಮಾತ್ರ ಶೇಖರವಾಗುತ್ತದೆ. ಇದರಿಂದ ಮಾಂಸ ರುಚಿಕರವಾಗಿ ಎಲ್ಲರೂ ತಿನ್ನುತ್ತಾರೆ. ಪ್ರಾಣಿಗಳು ಕರುಳು ಮೂಳೆ ವಿಪರೀತವಾಗಿ ತಿಂದರೂ ಅಪಾಯಕಾರಿ.

ಇತ್ತೀಚೆಗೆ ಹಲವು ವರ್ಷಗಳಲ್ಲಿ ಮೊರೀಷಿಯಸ್ ಮತ್ತು ನ್ಯೂಜಿಲೆಂಡ್ ಬಳಿಯ ಎರಡು ಪ್ರಭೇದಗಳು ನಿರ್ನಾಮವಾಗಿವೆ. ಆದರೆ ಅದು ನೈಸರ್ಗಿಕ ಕಾರಣಗಳಿಂದ. ಇನ್ನೂ ಕೆಲವು ಕೊನೆಗೊಳ್ಳಬಹುದೆಂದು ತೋರುತ್ತದೆ.

ಉಪವರ್ಗ ೧೮ : ಸಿಟ್ಟಾಸಿಫಾರ್ಮಿಸ್ (Psittaciformes)
(ಗಿಳಿಗಳು)

ಕುಟುಂಬ ೧

ಪ್ರಭೇದ ೩೧೫

ಕುಟುಂಬ : ಸಿಟ್ಟಾಸಿಡೀ (Psittacidae)

ಪಕ್ಷಿವರ್ಗದಲ್ಲೇ ಅತ್ಯಂತ ಸುಂದರ ವರ್ಣ ಹೊಂದಿರುವ ಉಪವರ್ಗ. ಎಲ್ಲ ವಿಧದ ಗಿಳಿಗಳೂ, ಪ್ಯಾರಕೀಟ್‌ಗಳೂ, ಕಕ್ಕಟೂಗಳೂ ಮತ್ತು ಪ್ರೇಮಪಕ್ಷಿಗಳೂ ಇದಕ್ಕೆ ಸೇರಿವೆ. ಗಾತ್ರದಲ್ಲಿ ಕೇವಲ ೩ ಅಂಗುಲದಿಂದ ೩ ೧/೨ ಅಡಿ ಎತ್ತರವಿರಬಲ್ಲವು.

ಅವುಗಳ ವಿವಿಧ ಮೋಹಕ ವರ್ಣವೇ ಅವುಗಳ ವೈಶಿಷ್ಟ್ಯ. ದಪ್ಪ ತಲೆ, ಗಿಡ್ಡ ಕತ್ತು ಮತ್ತು ದಪ್ಪ ಬುಡದ ಕೆಳಬಾಗಿದ ಕೊಕ್ಕೆಯಂತಹ ಮೊನಚು ಕೊಕ್ಕು ಅವುಗಳಿಗೆ ಸಾಮಾನ್ಯ. ಮೇಲುಕೊಕ್ಕನ್ನು ಅಲುಗಾಡಿಸಬಲ್ಲವು. ಅವುಗಳ ಕಾಲು ದಪ್ಪವಾಗಿದ್ದು ನಾಲ್ಕು ಬೆರಳುಗಳಲ್ಲಿ ಎರಡು ಮುಂದೆ, ಎರಡು ಹಿಂದೆ ಇದ್ದು, ಕೊಂಬೆ ಹಿಡಿಯಲು ಬಹು ಅನುಕೂಲವಾಗಿವೆ. ಕೊಕ್ಕಿನ ಬುಡದ ಮೇಲ್ಭಾಗದಲ್ಲಿ ಮಾಂಸಪದರವಿದ್ದು ಹೊಳ್ಳೆ ಅದರಲ್ಲೇ ಹೊರತೆರೆಯುವುದು. ಕಣ್ಣು ಸಾಮಾನ್ಯ ಗಾತ್ರದವು. ಸುತ್ತಲೂ ಬೋಳಾಗಿರಬಹುದು. ಅವುಗಳಿಗೆ ಪೆಚ್ಚಿನ ಧೂಳು ಗರಿಗಳಿವೆ.

ದಕ್ಷಿಣವಲಯದ ಬಹು ಭಾಗದಲ್ಲೂ, ಉತ್ತರ ವಲಯದಲ್ಲಿ ಉತ್ತರ ಮೆಕ್ಸಿಕೋ ವರೆಗೂ ಕಂಡುಬರುತ್ತವೆ. ಅವುಗಳನ್ನು ೬ ಮುಖ್ಯ ಪಂಗಡಗಳಾಗಿ ವಿಂಗಡಿಸಬಹುದು.

ಅವುಗಳಲ್ಲಿ ದಪ್ಪ ಗಾತ್ರದ, ಮೆಕ್ಸಿಕೋದಿಂದ ದಕ್ಷಿಣ ಅಮೇರಿಕಾವರೆಗೆ ವಾಸವಿರುವ **ಮೆಕಾವ್**ಗಳು (Macow) ಮೊದಲ ಪಂಗಡಕ್ಕೆ ಸೇರಿದವು. ಒಟ್ಟು ೧೫ ಪ್ರಭೇದಗಳಿವೆ. ಅವುಗಳಲ್ಲಿ ಒಂದಕ್ಕೆ ೭ ಅಡಿ ಉದ್ದದ ಬಾಲವಿರುತ್ತದೆ. ಜೊತೆಗೂಡಿ ವಾಸಿಸುತ್ತವೆ. ಕಿರಿಚಲು ಧ್ವನಿಯಲ್ಲಿ ಕೂಗುತ್ತಾ ಕಾಡಿನಲ್ಲಿ ಹಾರಾಡುತ್ತಿರುತ್ತವೆ. ಅತ್ಯಂತ ಉಜ್ವಲವಾದ ವಿವಿಧ ವರ್ಣ ಪಕ್ಷಿಗಳು.

ಪಶ್ಚಿಮ ವಲಯದ ಅಮೆಜಾನ್ ಗಿಳಿಗಳನ್ನೇ ಸಾಧಾರಣವಾಗಿ ಗೂಡುಗಳಲ್ಲಿ ಸಾಕಲಾಗುವುದು. ಇವುಗಳ ಬಾಲ ಮೊಟಕು. ಇವು ವರ್ಣರಂಜಿತ ಪುಕ್ಕವುಳ್ಳವು. ಉಚ್ಚಾರಣೆ ಕಲಿಯುವ ಪಕ್ಷಿಗಳಿವು. ಮಾತನಾಡುವುದರಿಂದ ಪಳಗಿಸಿ ಸಾಕಲಾಗುತ್ತದೆ.

ಇನ್ನೊಂದು ಪಶ್ಚಿಮ ವಲಯ ಪಂಗಡ **ಕೊನ್ಯೂರ್**ಗಳು. ಅಮೆಜಾನ್ ಗಿಳಿಗಿಂತ ಸಣ್ಣ ಹಾಗೂ ತೆಳು ದೇಹದವು. ಬಾಲ ಸ್ವಲ್ಪ ಉದ್ದ. ಅವುಗಳಲ್ಲಿ ಮುಖ್ಯವಾದ ಕೆರೋಲಿನಾ ಪಾರಕೀಟ್ ಪಕ್ಷಿ ಈಗ ನಿರ್ನಾಮವಾಗಿದೆ. ಇದು ೧೯ನೇ ಶತಮಾನದಲ್ಲಿ ಉತ್ತರ ಅಮೇರಿಕಾದ ಬಹು ಭಾಗದಲ್ಲಿ ಹೆಚ್ಚಾಗಿದ್ದು, ಅವುಗಳಿಂದ ಹಣ್ಣುಗಳ ನಷ್ಟವಾಗುತ್ತಿದೆಯೆಂದು ಅತಿಯಾಗಿ ಬೇಟೆ ಮಾಡಿ ಪೂರ್ಣ ನಾಶಪಡಿಸಲಾಯಿತು. ಕಾಗೆಗಳಂತೆ ಯಾವುದಾದರೂ ಒಂದು ಹಕ್ಕಿ ಕೆಳಬಿದ್ದಲ್ಲಿ ಕುತೂಹಲದಿಂದ ಅರಚುತ್ತಾ ಎಲ್ಲಾ ಗುಂಪು ಸೇರಿ ಹಾರಾಡುವ ನಡತೆಯಿದ್ದು, ಅದೇ ಅವುಗಳ ಬೇಟೆಗೆ ಅನುಕೂಲವಾಗಿ, ನಾಶಕ್ಕೆ ಮೂಲವಾಯ್ತು. ಕೆಂಪು ಬಾಲದ **ಬೂದು ಗಿಳಿ** ಆಫ್ರಿಕಾದ ಕಾಡುವಾಸಿ, ಅದರ ಅನುಕರಣ ನಿಪುಣತೆಯಿಂದ ಹೆಚ್ಚು ಬೆಲೆ ಬಾಳುತ್ತದೆ.

ಪ್ರೇಮ ಪಕ್ಷಿಗಳು ಇನ್ನೊಂದು ಪಂಗಡದವು. ಸಣ್ಣ ಗಾತ್ರದ, ದುಂಡು ತಲೆಯ, ನೀಳ ಬಾಲದ ಪಕ್ಷಿಗಳು. ನೈಸರ್ಗಿಕವಾಗಿ ಅವು ದೊಡ್ಡ ಗುಂಪುಗಳಲ್ಲಿ ಚಲಿಸುತ್ತವೆ. ಸುಲಭವಾಗಿ ಪಳಗಿಸಬಹುದು. ಸಾಕಿದಲ್ಲಿ ಅವು ಜೊತೆಗೂಡಿ ಕುಳಿತು ಪರಸ್ಪರ ಪ್ರೇಮ ಸೂಚಿಸುತ್ತಿರುತ್ತವೆ. ಅವು ವಿವಿಧ ಮನಮೋಹಕ ವರ್ಣ ಪಡೆದಿರುವುದರಿಂದ ಅದನ್ನು ಸಾಕುವರು.

ಪ್ಯಾರಕೀಟ್ಗಳು ಇಂಡೋಮಲಯಾದ ಬಳಿಯ ಕಾಡುಗಳಲ್ಲಿರುವ ಮುಖ್ಯ ಪಂಗಡ. ಸಂಘಜೀವಿಗಳು. ದೊಡ್ಡ ಗುಂಪಾಗಿದ್ದು, ಹಣ್ಣು ಕಾಳು ತಿನ್ನುತ್ತವೆ. ನೀಳ ಮೊನಚು ಬಾಲವಿರುತ್ತದೆ. ನೆಲದಮೇಲೆ ಆಹಾರ ಅರಸುತ್ತವೆ. ಆಸ್ಟ್ರೇಲಿಯಾದ 'ಬಡ್ಜರಿಗರ್ 'ಗಳು ಈ ಪಂಗಡದವು. ಸುಲಭವಾಗಿ ಪಳಗುತ್ತವೆ.

ಕಕ್ಕಟೋಗಳಿಗೆ ತಲೆಯಮೇಲೆ ವಿವಿಧ ವರ್ಣದ ಗರಿ ಶಿಖೆಯಿದೆ. ಸಾಮಾನ್ಯ ಗಾತ್ರದ, ವಿವಿಧ ವರ್ಣದ ಹೆಚ್ಚು ಶಬ್ದ ಮಾಡುವ ಪಕ್ಷಿಗಳಿವು. ಗುಂಪಾಗಿ ದೊಡ್ಡ ಮರಗಳ ಮೇಲ್ಭಾಗದಲ್ಲಿ ಅರಚುತ್ತಾ ಹಾರಾಡುತ್ತವೆ. ಅಚ್ಚ ಬಿಳಿ, ಅಚ್ಚ ಕಪ್ಪು ಪ್ರಭೇದಗಳಿವೆ. ಅವುಗಳಲ್ಲಿ ದೊಡ್ಡ ಗಾತ್ರದ್ದು ೨ ೧/೨ ಅಡಿ ಉದ್ದದ ನ್ಯೂಗಿನಿಯ

ಕಪ್ಪು ಕಕ್ಕಟೋ. ಅದರ ಕೊಕ್ಕು ಬಹಳ ಮೊನಚಾಗಿ ಮುಂಚಾಚಿರುತ್ತದೆ. ಅದರಿಂದ ಎಂತಹ ಕಾಯಿಯನ್ನಾದರು ಅದು ಒಡೆದು ತಿರುಳನ್ನು ಹೊರತೆಗೆಯಬಲ್ಲುದು.

ಆಸ್ಟ್ರೇಲಿಯಾದ **ಲೋರಿಕೀಟ್**ಗಳು (Lorikeet) ೧/೨ ಅಡಿಯಿಂದ ೧ ೧/೨ ಅಡಿ ಉದ್ದವಿರುವ ವಿವಿಧ ಹೊಳಪು ಬಣ್ಣದವು. ಏಷ್ಯಾಖಂಡದಲ್ಲೂ ಹಲವು ಪ್ರಭೇದಗಳಿವೆ. ಅವುಗಳ ನಾಲಿಗೆ ತುದಿಯಲ್ಲಿ ಕೂದಲಿನಂತಹ ಗುಚ್ಛವಿದ್ದು ಹಣ್ಣು, ಹೂವುಗಳಲ್ಲಿನ ಜೇನು ನೆಕ್ಕಲು ಸಹಾಯಕವಾಗುತ್ತದೆ. ಅವು ಹೂವು, ಹಣ್ಣುಗಳನ್ನು ಕೊಕ್ಕಿನಿಂದ ಜಜ್ಜಿ ರಸವನ್ನು ನೆಕ್ಕುತ್ತವೆ !

ಗುಜ್ಜ ಗಿಳಿಗಳು (Small Parrots) ಕೇವಲ ೩–೫ ಅಂಗುಲ ಉದ್ದವಿದ್ದು ನ್ಯೂಗಿನಿಯಿಂದ ಸಾಲೋಮನ್ ದ್ವೀಪಗಳವರೆಗೆ ವಾಸಿಸುತ್ತವೆ. ಅವು ಮರದ ಬುಡ ಹಾಗೂ ಕೊಂಬೆಗಳ ಮೇಲೆ ಮರಕುಟುಕಗಳಂತೆ ಹಾರಾಡುತ್ತಿದ್ದು, ತೊಗಟೆ ಸಂದಿಯಲ್ಲಿನ ಹುಳುಗಳನ್ನು ಆರಿಸಿ ತಿನ್ನುತ್ತವೆ. ಅವುಗಳ ಬಾಲ ಗರಿಗಳು ಸೆಡೆದಂತಿದ್ದು ಮುಳ್ಳು ತಂದಿ ಹೊಂದಿರುತ್ತದೆ. ಉಗುರು ಬಲು ನೀಳವಾಗಿದೆ. ಈ ಉಪವರ್ಗದಲ್ಲಿ ಅತ್ಯಂತ ವಿಚಿತ್ರ ಪಕ್ಷಿ ನ್ಯೂಜಿಲೆಂಡಿನ ಹಾರಲಾರದ **ಕಕಾಪೋ**ಗಳು (Kakapo) ೧ ೧/೨ ಅಡಿ ಉದ್ದ ದೇಹದ ವಿವಿಧ ವರ್ಣದ ಈ ಪ್ರಭೇದ ನಿಶಾಚರ ಪಕ್ಷಿಗಳು. ಹಗಲೆಲ್ಲಾ ಪೊಟರೆಗಳಲ್ಲಿ ಅವಿತಿದ್ದು ರಾತ್ರಿ ಹೊರಬೀಳುತ್ತವೆ. ವೇಗವಾಗಿ ಓಡಬಲ್ಲವು. ಹಣ್ಣು, ಜೇನಿಗಾಗಿ ಮರವೇರಿ ಅಲ್ಲಿಂದ ಹಾರಿ ತೇಲಿ ಇಳಿಯುತ್ತವೆ. ಅತ್ಯಲ್ಪ ಸಂಖ್ಯೆ ಮಾತ್ರ ಈಗ ಜೀವಿಸಿದ್ದು ಬಹು ಬೇಗ ನಿರ್ನಾಮವಾಗಬಹುದು. ಅಲ್ಲಿಯ **ಕಿಯಾ** ಮತ್ತು ಕಕಾಗಳು ವಿಚಿತ್ರ ಪಕ್ಷಿಗಳು. ಕಿಯಾ ಕಾಗೆ ಗಾತ್ರದ ಕಂದು ವರ್ಣದ ಪಕ್ಷಿಗಳು. ನೋಡಲು ಹದ್ದಿನಂತಿರುತ್ತವೆ. ಕಲ್ಲು ಪೊಟರೆಗಳಲ್ಲಿ ಮರಿಮಾಡುತ್ತವೆ. ಬೇಸಿಗೆಯಲ್ಲಿ ಅವು ಹುಳು, ಕೀಟ, ಹಣ್ಣು ತಿಂದು ಜೀವಿಸುತ್ತವೆ. ಆದರೆ ಚಳಿಗಾಲದಲ್ಲಿ ಸಾಕು ಕುರಿಗಳ ಬೆನ್ನು ಕೊರೆದು ಕೊಬ್ಬು ತಿನ್ನಲು ಹವಣಿಸುತ್ತವೆ. ಇದರಿಂದಾಗಿ ಅವುಗಳನ್ನು ಹೆಚ್ಚಾಗಿ ನಾಶಮಾಡಲಾಗುತ್ತಿದೆ.

ಪೂರ್ವದಿಂದಲೂ ಈ ಉಪವರ್ಗದ ಪಕ್ಷಿಗಳನ್ನು ಮನುಷ್ಯರು ತಮ್ಮ ಉಲ್ಲಾಸಕ್ಕಾಗಿ ಪಳಗಿಸಿ ಸಾಕುತ್ತಿದ್ದರು. ಇವುಗಳಿಂದ ಇನ್ನಾವ ಪ್ರಯೋಜನವೂ ಇಲ್ಲ. ಹಲವು ಬಹುಬೇಗ ಮತ್ತು ಸುಲಭವಾಗಿ ಮಾನವರ ಮಾತನ್ನೂ ಧ್ವನಿಯನ್ನೂ ಅನುಕರಿಸಬಲ್ಲವು. ಆಫ್ರಿಕಾದ ಕಂದು ಜಾತಿ, ಹಾಗೂ ಅಮೆಜಾನಿನ ವಿವಿಧ ಪ್ರಭೇದಗಳು ಇದಕ್ಕೆ ಹೆಸರುವಾಸಿಯಾದವು. ಅವುಗಳನ್ನು ಎಚ್ಚರಿಕೆಯಿಂದ ಸಾಕಬೇಕು. ಈ ಪಕ್ಷಿಗಳು 'ಆರ್ನಿತೋಸಿಸ್' ಎಂಬ ಸಾಂಕ್ರಾಮಿಕ ರೋಗವನ್ನು ಜನತೆಯಲ್ಲಿ ಹರಡುತ್ತವೆಂದು ತಿಳಿದುಬಂದಿದೆ. ಈಗ ಈ ರೋಗನಿರೋಧಕ ಚುಚ್ಚು ಮದ್ದನ್ನು ಕಂಡುಹಿಡಿಯಲಾಗಿದ್ದು ಪುನಃ ಸಾಕುವುದು ಹೆಚ್ಚಾಗಿದೆ.

ಸಾಮಾನ್ಯವಾಗಿ ಮರ ಪೊಟರೆಗಳಲ್ಲಿ ಗಾತ್ರಕ್ಕನುಗುಣವಾಗಿ ೧ರಿಂದ ೯ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಮೊಟ್ಟೆ ಬಿಳುಪು. ದುಂಡಗಿದ್ದು ಹೊಳಪು ಹೊಂದಿರ

ಬಹುದು. ಕಲ್ಲು ಪೊಟರೆ ಮತ್ತು ಸುರಂಗಗಳಲ್ಲೂ ಮರಿಮಾಡುತ್ತವೆ. ಆಸ್ಟ್ರೇಲಿಯಾದ ಗುಜ್ಜು ಗಿಣಿಗಳು ಹುತ್ತದಲ್ಲಿ ಬಿಲ ಕೊರೆದು ಮೊಟ್ಟೆಯಿಡುತ್ತವೆ. ಕೆಲವು ಪ್ರಭೇದಗಳಲ್ಲಿ ಹೆಣ್ಣು ಮಾತ್ರ ಕಾವು ಕೊಡುತ್ತವೆ. ಆದರೆ ಸಾಮಾನ್ಯವಾಗಿ ಹೆಣ್ಣು – ಗಂಡುಗಳೆರಡೂ ಕಾವು ಕೊಡುತ್ತವೆ. ಮರಿಗಳು ನಗ್ನವಾಗಿ ಜನಿಸಿ, ಬೇಗ ಮೃದು ಪುಕ್ಕ ಹೊದಿಕೆ ಹೊಂದುತ್ತವೆ. ಮರಿಗಳಿಗೆ ಅರೆ ಜೀರ್ಣವಾದ ಆಹಾರವನ್ನು ಕಕ್ಕಿ ತಿನ್ನಿಸುತ್ತವೆ.

ಅವುಗಳಲ್ಲಿ ಸಾಮೂಹಿಕ ನೆಲ ಸ್ಥಾಪನೆಯಲ್ಲಿ ಗೂಡು ರಚಿಸುವುದು ಅರ್ಜೆಂಟೈನಾ ಪ್ರಭೇದ ಮಾತ್ರ. ದೊಡ್ಡ ಮರದ ಮೇಲ್ಭಾಗದಲ್ಲಿ ಅತಿ ವಿಶಾಲವಾದ ಗೂಡು ರಚಿಸಿ, ಅನೇಕ ಜೊತೆಗಳು ಒಂದೇ ಗೂಡಿನಲ್ಲಿ ಮರಿಮಾಡುತ್ತವೆ. ಆದರೆ ಪ್ರತಿ ಜೊತೆಗೂ, ಆ ಗೂಡಿನಲ್ಲಿ ಬೇರೆ ಬೇರೆ ಕಪಾಟುಗಳು ಏರ್ಪಟ್ಟಿರುತ್ತವೆ. ಇತರ ಸಮಯದಲ್ಲಿ ರಾತ್ರಿ ವಿಶ್ರಮಿಸಲೂ ಅದೇ ಗೂಡನ್ನು ಉಪಯೋಗಿಸಿ ಪ್ರತಿ ವರ್ಷವೂ ಅದನ್ನು ಭದ್ರಪಡಿಸುತ್ತಲೇ ಇರುತ್ತವೆ. ಹಲವು ಸಂದರ್ಭಗಳಲ್ಲಿ ಬಾತು ಮತ್ತಿತರ ಪಕ್ಷಿಗಳೂ ಅದರೊಡಗೂಡಿ ಜೀವಿಸುವುದು ಕಂಡುಬಂದಿದೆ.

ಉಪವರ್ಗ ೧೯ : ಕ್ಯುಕುಲಿಫಾರ್ಮಿಸ್ (Cuculiformes)

(ಕೋಗಿಲೆಗಳು)

ಕುಟುಂಬ ೩

ಪ್ರಭೇದ ೩೬

ಕೋಗಿಲೆಗಳು ಅಂಗ ರಚನೆಯಲ್ಲಿ ಗಿಳಿಗಳನ್ನು ಹೋಲುತ್ತವೆ. ಆದರೆ ಕೋಗಿಲೆಗಳ ಮೇಲ್ಕೊಕ್ಕನ್ನು ಗಿಳಿಗಳಂತೆ ಚಲಿಸಲಾಗುವುದಿಲ್ಲ. ಅಲ್ಲದೆ ಕೊಂಡಿಯಂತೆ ಕೆಳಬಾಗಿರುವುದಿಲ್ಲ. ಕೊಕ್ಕಿನ ಬುಡದಲ್ಲಿ ಮಾಂಸ ಬೆಳವಣಿಗೆಯಿಲ್ಲ. ಅವುಗಳಿಗೆ ಮುಂದೆರಡು ಹಿಂದೆರಡು ಬೆರಳುಗಳಿದ್ದರೂ ಗಿಳಿಗಳಂತೆ ಪೂರ್ತಿ ಹಿಡಿಯಲಾರವು. ನೀಳ ಬಾಲದಲ್ಲಿ ಕೇವಲ ೮ – ೧೦ ಗರಿ ಮಾತ್ರ ಇರುತ್ತವೆ. ಇದರಲ್ಲಿ ಮುಖ್ಯವಾದ ಎರಡು ಕುಟುಂಬಗಳಿವೆ. ಮೊದಲನೆಯದಕ್ಕೆ ಹಣ್ಣು ತಿನ್ನುವ ಆಫ್ರಿಕಾದ ಟೌರಾಕೋಗಳೂ, ಎರಡನೆಯದಕ್ಕೆ ಕೀಟಾಹಾರಿಗಳಾದ ಕೋಗಿಲೆಗಳೂ ಸೇರುತ್ತವೆ. ಹೆಣ್ಣು – ಗಂಡುಗಳಲ್ಲಿ ಚಿಕ್ಕ ಪುಟ್ಟ ವ್ಯತ್ಯಾಸವಿರಬಹುದು. ಎಲ್ಲವೂ ಮರವಾಸಿಗಳು.

ಕುಟುಂಬ ೧ : ಮ್ಯೂಸೋಫೇಗಿಡೀ (Musophagidae)

(ಟಾರಕೋಗಳು)

ಟಾರಕೋಗಳು ಆಫ್ರಿಕಾವಾಸಿಗಳು. ಒಟ್ಟು ೧೯ ಪ್ರಭೇದಗಳಿವೆ. ದಟ್ಟಡವಿಯ ಮರದಲ್ಲಿನ ನೀಲಿ ಅಥವಾ ಹೊಳಪು ಹಸಿರು ಮೈ ಹೊಂದಿರುತ್ತವೆ. ರೆಕ್ಕೆ ಮಂಜು ಕೆಂಪು ಬಣ್ಣ. ಬಾಳೇಹಣ್ಣು ಇತರ ಹಣ್ಣುಗಳು, ಹಲವು ಕೀಟ ಅವುಗಳ ಮುಖ್ಯಾಹಾರ.

ಇತರ ಪಕ್ಷಿಗಳ ವಿವಿಧ ಬಣ್ಣ ರೆಕ್ಕೆಗಳ ಎಳೆ ರಚನೆಯಲ್ಲಿನ ವೈಶಿಷ್ಟ್ಯ ಮಾತ್ರ. ಟಾರಕೋ ಗಳ ವರ್ಣ ಸಡಿಲ ವರ್ಣ. ನೀರಿನಲ್ಲಿ ಅದರ ಕೆಂಪು ರೆಕ್ಕೆ ಕದಡಿದರೆ ಬಣ್ಣ ಕರಗಿ ರೆಕ್ಕೆಯಲ್ಲಿ ಬಣ್ಣ ಕಡಮೆಯಾಗಿ, ನೀರು ಕೆಂಪಗಾಗುತ್ತದೆ. ೧ ೧/೨ ಅಡಿ ಉದ್ದ ದೇಹ, ನೀಳ ಬಾಲ, ಸಣ್ಣ ಕೊಕ್ಕಿದ್ದು ತಲೆಯಮೇಲೆ ನೇರ ದಟ್ಟ ಶಿಖೆ ಇರು ತ್ತದೆ. ಹಿಂಬೆರಳನ್ನು ಎತ್ತ ಬೇಕಾದರೂ ತಿರುವಬಲ್ಲವು. ದೂರ ಹಾರಲಾರವು, ನೆಲದಮೇಲೆ ಅಥವಾ ಕೊಂಬೆಗಳ ಮೇಲೆ ವೇಗವಾಗಿ ಓಡಾಡಬಲ್ಲವು. ಮರದ ಮೇಲೆ ಕಡ್ಡಿಗಳಿಂದ ಗೂಡು ರಚಿಸುತ್ತವೆ. ೨–೩ ಬಿಳುಪು ಅಥವಾ ಮಾಸಲು ಹಸಿರು ಮೊಟ್ಟೆಯಿಟ್ಟು, ಗಂಡು–ಹೆಣ್ಣುಗಳೆರಡೂ ಕಾವಿತ್ತು ಮರಿ ಪೋಷಣೆ ಯಲ್ಲೂ ಭಾಗವಹಿಸುತ್ತವೆ. ಅರೆ ಜೀರ್ಣವಾದ ಹಣ್ಣನ್ನು ಕಕ್ಕಿ ಮರಿಗಳಿಗೆ ಉಣಿಸು ತ್ತವೆ. ಮರಿ ಪೂರ್ಣ ಬಲಿತು ಜನಿಸಿದಾಗ ಬೂದು ವರ್ಣದ ಮೃದು ಗರಿ ಹೊದಿಕೆ ಹೊಂದಿರುತ್ತದೆ.

ಕುಟುಂಬ ೨ : ಕ್ಯುಕ್ಯುಲಿಡೀ (Cuculidae)
(ಕೋಗಿಲೆ, ರೋಡ್‌ರನ್ನರ್)

ಈ ಕುಟುಂಬದಲ್ಲಿ ಒಟ್ಟು ೧೭ ಪ್ರಭೇದಗಳು ಉಷ್ಣ ಮತ್ತು ಸಮಶೀತೋಷ್ಣ ವಲಯದ ಪೂರ್ವಾರ್ಧ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ತೆಳ್ಳನೆಯ ದೇಹದ, ಉದ್ದ ಬಾಲದ, ಕೆಳಬಾಗಿದ ಮೊನಚು ಕೊಕ್ಕಿನ, ಗಿಡ್ಡ ಕಾಲಿನ ಪಕ್ಷಿಗಳಿವು. ಚೆನ್ನಾಗಿ ಹಾರಬಲ್ಲವು. ಸಾಮಾನ್ಯವಾಗಿ ಕೀಟಾಹಾರಿಗಳು. ಇಲಿ, ಇತರ ಕಶೇರುಕಗಳು, ಹಣ್ಣು, ಮುಂತಾದುವನ್ನು ತಿನ್ನಬಹುದು. ಕಂಬಳಿಹುಳುಗಳನ್ನು ಆರಿಸಿ ತಿನ್ನುವುದರಲ್ಲಿ ಕೋಗಿಲೆಗಳು ನುರಿತವು. ಇವುಗಳಲ್ಲಿ ೫ ಮುಖ್ಯ ಪಂಗಡಗಳಿವೆ.

ಪೂರ್ವವಲಯದ ಕೋಗಿಲೆಗಳ ೪೨ ಪ್ರಭೇದಗಳ ಈ ಪಂಗಡವು ಬ್ರಿಟನ್ನಿ ನಿಂದ ಜಪಾನಿನವರೆಗೂ ಕಂಡುಬಂದು ಅದರ ಕೂಗೇ ಎಲ್ಲಾ ಜಾಗದಲ್ಲೂ ಹೆಸರು ಸೂಚಕವಾಗಿದೆ. ಆದ್ದರಿಂದ ಈ ಪಕ್ಷಿಗೆ ಎಲ್ಲಾ ಭಾಷೆಗಳಲ್ಲೂ ಅದರ 'ಕಕ್ಕೂ' ಕೂಗಿನ ಸೂಚನೆಯಿದೆ. ಗಂಡು ಮಾತ್ರ ಈ ರೀತಿ ಕೂಗುವುದು. ಹೆಣ್ಣು ನಕ್ಕಂತೆ ಶಬ್ದ ಮಾಡುತ್ತದೆ.

ಅದು ಪಕ್ಷಿ ಕುಲದಲ್ಲಿನ ಮುಖ್ಯ ಪರಾವಲಂಬಿ. ತನ್ನ ಮೊಟ್ಟೆಗಳನ್ನು ಕಾವು ಕೊಟ್ಟು ಮರಿ ಮಾಡುವುದಿಲ್ಲ. ಇತರ ಪಕ್ಷಿಗಳ ಗೂಡಿನಲ್ಲಿ ಮೊಟ್ಟೆಯಿಟ್ಟು ಅವು ತನ್ನ ಮರಿ ಹುಟ್ಟುವಂತೆ ಏರ್ಪಡಿಸುತ್ತದೆ. ಜೇನು ತೋರ್ಕ ಪಕ್ಷಿಗಳು. ನೆಯ್ಗೆ ಪಕ್ಷಿಗಳಲ್ಲಿ ಹಲವು ಮಾತ್ರ ಈ ರೀತಿ ವರ್ತಿಸುವ ಇತರ ಪ್ರಭೇದಗಳು. ಸಾಮಾನ್ಯವಾಗಿ ೪–೫ ಮೊಟ್ಟೆಗಳನ್ನಿಡುತ್ತದೆ. ಅದು ತನ್ನ ಮೊಟ್ಟೆಯಂತೆ ಗಾತ್ರ ಹಾಗೂ ಬಣ್ಣವಿರುವ ಮೊಟ್ಟೆಯನ್ನಿಡುವ ಇತರ ಪಕ್ಷಿಗಳ ಗೂಡನ್ನಾರಿಸಿ, ಪ್ರತಿ ಗೂಡಿನಲ್ಲಿ ಒಂದೇ ಮೊಟ್ಟೆಯಿಡುತ್ತದೆ. ತಾನು ಚುನಾಯಿಸಿರುವ ಸಾಕುಪಕ್ಷಿಗಳು

ಗೂಡು ರಚಿಸಿ ಮೊಟ್ಟೆಯಿಡುವುದನ್ನು ಕಾದಿದ್ದು, ಆ ಪಕ್ಷಿಗಳು ಗೂಡಿನಲ್ಲಿಲ್ಲದಿರುವಾಗ ಒಂದೇ ಮೊಟ್ಟೆಯನ್ನು ಗೂಡಿನಿಂದ ತೆಗೆದು ತಿಂದು ಅಥವಾ ಬಿಸಾಡಿ, ತನ್ನ ಮೊಟ್ಟೆ ಯಿಡುತ್ತದೆ.

ಸಾಮಾನ್ಯವಾಗಿ ಮೊಟ್ಟೆಗೆ ಕಾವಿನ ಅವಧಿ ೧೨–೧೫ ದಿನಗಳು ಮಾತ್ರ. ಅದು ಇತರ ಮೊಟ್ಟೆಗಳೊಡನೆ ಮರಿಯಾಗುತ್ತದೆ. ನಗ್ನಮರಿ ಜನಿಸಿದ ತಕ್ಷಣ ಗೂಡಿನಲ್ಲಿರುವ ಇತರ ಮರಿ ಮೊಟ್ಟೆಗಳನ್ನು ಗೂಡಿನಿಂದ ಹೊರತಳ್ಳಿ ತಾನೊಂದೇ ಉಳಿಯುತ್ತದೆ. ಇತರ ಮರಿಗಳನ್ನು ಕುಕ್ಕಿ ಸಾಯಿಸಿ ಹೊರತಳ್ಳುತ್ತದೆ. ಇದು ಮರಿಯಲ್ಲಿನ ನೈಸರ್ಗಿಕ ವರ್ತನೆ. ಕೋಗಿಲೆ ಒಂದೇ ಗೂಡಿನಲ್ಲಿ ೨ ಮೊಟ್ಟೆಯಿಟ್ಟಿದ್ದ ಪಕ್ಷದಲ್ಲಿ ೨ ಮರಿಗಳೂ ಪರಸ್ಪರ ಒಂದೆರಡು ದಿನ ಜಗಳವಾಡಿ, ತೆಪ್ಪಗಾಗಿ, ಒಟ್ಟಾಗಿ ಬೆಳೆಯುತ್ತವೆ. ಅದಕ್ಕೆ ಬೆಳವಣಿಗೆಗಾಗಿ ಹೆಚ್ಚಿನ ಆಹಾರದ ಅಗತ್ಯವಿರುವುದರಿಂದ ಹೆಚ್ಚು ಮರಿಗಳಿದ್ದಲ್ಲಿ ಅದು ಸರಿಯಾಗಿ ಬೆಳೆಯಲಾಗುವುದಿಲ್ಲ. ಸಾಮಾನ್ಯವಾಗಿ ಮರಿ ಸಾಕುತಂದೆತಾಯಿಗಳಿಗಿಂತ ಹೆಚ್ಚಿನ ಗಾತ್ರವಿರುತ್ತದೆ. ಸಾಕುಪಕ್ಷಿಗಳು ತಮ್ಮ ೪–೫ ಮರಿಗಳಿಗೆ ಸಾಕಾಗುವಷ್ಟು ಆಹಾರವನ್ನು ಒದಗಿಸಬಲ್ಲವು. ಅಷ್ಟು ಆಹಾರವೂ ಈ ಮರಿಯೊಂದಕ್ಕೇ ಬೇಕಾಗುತ್ತದೆ. ಸಾಕುಪಕ್ಷಿಗಳಿಗಿಂತ ಬೆಳೆಯುವ ಮರಿ ಹೆಚ್ಚು ಗಾತ್ರವಿರಬಲ್ಲದು. ಆದರೂ ತನ್ನ ಗೂಡಿನಲ್ಲಿನ ಮರಿ ಪೋಷಣೆಯೇ ಅದಕ್ಕೆ ಮುಖ್ಯ ವಾಗಿದ್ದು ಅನುಮಾನ ಬಂದರೂ ತನ್ನ ಕರ್ತವ್ಯವನ್ನು ತ್ಯಜಿಸುವುದಿಲ್ಲ. ಈ ವರ್ತನೆಯ ಅರಿವೇ ಕೋಗಿಲೆ ಸಂತಾನಾಭಿವೃದ್ಧಿಗೆ ಸಹಾಯಕ. ೨೦–೨೫ ದಿನಗಳ ಅವಧಿಯಲ್ಲಿ ಮರಿ ಚೆನ್ನಾಗಿ ಬೆಳೆದು ಹಾರಿಹೋಗುತ್ತದೆ. ಕೋಗಿಲೆಯಲ್ಲಿ ಗಂಡು ಕರ್ರಗೆ ರಾಜ ಕಾಗೆಯಂತಿರುತ್ತದೆ. ಹೆಣ್ಣು ಸಣ್ಣ ಗಿಡುಗನಂತಿರುತ್ತದೆ. ಪ್ರತಿ ಪ್ರಭೇದವೂ ಒಂದು ನಿರ್ದಿಷ್ಟ ಪಕ್ಷಿ ಪ್ರಭೇದದ ಗೂಡಿನಲ್ಲಿ ಮಾತ್ರ ಮೊಟ್ಟೆಯಿಡುತ್ತದೆ. ಆ ಸಾಕುಪಕ್ಷಿಗಳು ಅದರಂತೆಯೇ ಗಾತ್ರ ಬಣ್ಣ ಹೊಂದಿ ಆದರ ಮೊಟ್ಟೆಗಳು ಒಂದೇ ರೀತಿಯವಾಗಿರುತ್ತವೆ.

ಸಮಶೀತೋಷ್ಣವಲಯದ ಪ್ರಭೇದಗಳು ದೂರ ವಲಸೆ ಹೋಗುತ್ತವೆ. ಯೂರೋಪಿನ ಪ್ರಭೇದಗಳು ಆಫ್ರಿಕಾಕ್ಕೂ, ಏಷ್ಯಾದವು ಜಾವಾ ಮುಂತಾದೆಡೆಯೂ ಹೋಗುವುದು ಸಾಮಾನ್ಯ. ಹೊಳಪು ಮೈ ಕೋಗಿಲೆ ನ್ಯೂಜಿಲೆಂಡಿನಿಂದ ಶಾಂತಿ ಸಾಗರವನ್ನು ದಾಟಿ ಸುಮಾರು ೨೦೦೦ ಮೈಲಿ ದೂರ ವಲಸೆ ಹೋಗುತ್ತದೆ. ಚಳಿಗಾಲದಲ್ಲೆಲ್ಲಾ ಕೊಂಬೆಗಳಲ್ಲಿ ನಿಶ್ಶಬ್ದವಾಗಿ ಅಡಗಿರುತ್ತವೆ. ಆದರೆ ವಸಂತದಲ್ಲಿ ಅವು ಕೂಗುತ್ತಾ ಹಾರಾಡುತ್ತವೆ.

ಎರಡನೆಯ ಪಂಗಡದಲ್ಲಿ ೩೭ ಪ್ರಭೇದಗಳಿವೆ. ಅವುಗಳು ಬೇರೆ ಪಕ್ಷಿ ಗೂಡುಗಳಲ್ಲಿ ಮೊಟ್ಟೆಯಿಡುವುದಿಲ್ಲ. ಅಮೇರಿಕಾ, ಆಫ್ರಿಕಾ ಮತ್ತು ಆಗ್ನೇಯ ಏಷ್ಯಾ ಭಾಗದಲ್ಲಿನವು, ಸಣ್ಣ ಕಡ್ಡಿಗಳಿಂದ ಗೂಡು ರಚಿಸಿ, ಮೊಟ್ಟೆಯಿಟ್ಟು ಗಂಡು–ಹೆಣ್ಣುಗಳೆರಡೂ ಕಾವಿತ್ತು ಮರಿಮಾಡುತ್ತವೆ. ಕೀಟಾಹಾರಿಗಳು, ಆದ್ದರಿಂದ ಉಪಯುಕ್ತ ಪಕ್ಷಿಗಳಿವು.

ಮೂರನೆಯ ಪಂಗಡಕ್ಕೆ ಅರ್ಜೆಂಟೈನಾ, ಪಾಂಪಾಸ್ ಹುಲ್ಲುಗಾವಲುವಾಸಿ ಕೆಳ ಕೊಕ್ಕಿನ, ಶಿಖೆಯಾಂತ **ಗುಯಿರಾ ಕೋಗಿಲೆ** ಅಮೇರಿಕಾದ ಕಪ್ಪು ಅನೀಸ್ ಕೋಗಿಲೆಗಳು ಸೇರುತ್ತವೆ. ಗುಂಪಾಗಿ ವಾಸಿಸುವ ಪಕ್ಷಿ ಪ್ರಭೇದ. ಇವುಗಳಿಗೆ ನಿಯಮಿತ ಪರ್ವಕಾಲವಿರುವುದಿಲ್ಲ. ಇಷ್ಟ ಬಂದಾಗ ಮೊಟ್ಟೆಯಿಡಬಲ್ಲವು. ಮರದ ಮೇಲೆ ಕಡ್ಡಿ – ಎಲೆಗಳಿಂದ ಗೂಡು ರಚಿಸಿ ೪ – ೫ ಮೊಟ್ಟೆಯಿಟ್ಟು, ಹೆಣ್ಣು ಕಾವಿತ್ತು ಮರಿಮಾಡುತ್ತದೆ. ಕೆಲವು ಸಮಯ ಸಾಮೂಹಿಕವಾಗಿ ದೊಡ್ಡ ಗೂಡು ರಚಿಸಿ ಎಲ್ಲಾ ಹೆಣ್ಣುಗಳೂ ಅದರಲ್ಲಿ ಮೊಟ್ಟೆಯಿಡುತ್ತವೆ.

ನಾಲ್ಕನೆಯ ಪಂಗಡದವು **ನೆಲ ಕೋಗಿಲೆಗಳು.** ಅವನ್ನು ಅಮೇರಿಕಾದಲ್ಲಿ ರೋಡ್ ರನ್ನರ್‌ಗಳೆಂದು (Road Runner) ಕರೆಯುವರು. ದಪ್ಪ ಕಾಲಿನ, ಉದ್ದ ಬಾಲದ, ಕಂದು ವರ್ಣದ, ಶಿಖೆ ಹೊಂದಿದ ಪಕ್ಷಿ. ನೆಲದ ಮೇಲಿದ್ದು ೧೫ ಮೈಲಿ ವೇಗದಲ್ಲಿ ಓಡಬಲ್ಲದು. ದೂರ ಹಾರಲಾರದು. ವಲಸೆ ಹೋಗುವುದಂತೂ ಇಲ್ಲ. ಒಟ್ಟು ೧೩ ಪ್ರಭೇದಗಳಿವೆ. ೧೧ ಅಮೇರಿಕಾದವು, ೨ ಮಾತ್ರ ಮಲಯಾ ಮತ್ತು ಇಂಡೋಚೀನದಲ್ಲಿವೆ. ಹಲ್ಲಿ, ಹಾವುರಾಣಿ ಮತ್ತು ಹಾವುಗಳನ್ನು ಕೊಂದು ತಿನ್ನುತ್ತವೆ. ಕಾಲು ಕೊಕ್ಕುಗಳಿಂದ ತಲೆಯನ್ನು ಜಜ್ಜಿ ಸಾಯಿಸಿ ನುಂಗುತ್ತವೆ. ೩ ಮಾತ್ರ ಪರತಂತ್ರ ಜೀವಿಗಳು. ಮಿಕ್ಕವೆಲ್ಲಾ ಗೂಡು ರಚಿಸಿ ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಐದನೆಯ ಪಂಗಡ ಸಾಮಾನ್ಯ ಗಾತ್ರದ ೩೮ ಪ್ರಭೇದಗಳುಳ್ಳ **ಕಾಕಲ್‌ಗಳು** ಆಫ್ರಿಕಾದಿಂದ ಆಸ್ಟ್ರೇಲಿಯಾದವರೆಗೆ ಕುಪ್ಪಳಿಸಿ ಹಾರಾಡುವ ಪಕ್ಷಿಗಳು. ೧ – ೨ ೧/೨ ಅಡಿ ನೀಳ ದೇಹದ, ದೃಢ ವರ್ಣದ, ದಪ್ಪ ಕೆಳಬಾಗಿದ ಕೊಕ್ಕಿನ, ದುಂಡಗಿರುವ ಗಿಡ್ಡ ಬಾಲದ ಪಕ್ಷಿಗಳಿವು. ಹಿಂಬೆರಳಿಗೆ ಮುಂಬೆರಳುಗಳಷ್ಟೇ ಉದ್ದದ ಮೊನಚು ಉಗುರಿರು ತ್ತವೆ. ಪರತಂತ್ರ ಜೀವಿಗಳು ಹುಲ್ಲು ಎಲೆಗಳಿಂದ ನೆಲದ ಮೇಲೆ, ವರ್ತುಲಾಕಾರದ ಗೂಡು ರಚಿಸುತ್ತವೆ. ೪ – ೫ ಮೊಟ್ಟೆಯಿಟ್ಟು ಹೆಣ್ಣು – ಗಂಡುಗಳೆರಡು ಕಾವಿತ್ತು ೧೪ ದಿನಗಳ ಅವಧಿಯಲ್ಲಿ ಮರಿಮಾಡುತ್ತವೆ.

ಉಪವರ್ಗ ೨೦ : ಸ್ಟ್ರಿಜಿಫಾರ್ಮಿಸ್ (Strigiformes)

(ಗೂಬೆಗಳು)

ಕುಟುಂಬ ೨

ಪ್ರಭೇದಗಳು ೧೩೨

ಗೂಬೆಗಳ ಉಪವರ್ಗವಿದು. ಗಿಡ್ಡ ಕತ್ತಿನ, ದಪ್ಪ ತಲೆಯ ದುಂಡು ಪಕ್ಷಿಗಳು. ಅಗಲ ಮುಖದಲ್ಲಿ ಎರಡು ದಪ್ಪ ಕಣ್ಣುಗಳು ಮನುಷ್ಯರಂತೆ ಮುಂದೆ ನೋಡುವಂತಿರು ತ್ತವೆ. ದೃಢವಾದ ದಪ್ಪ ಕೊಕ್ಕು ಮೊನಚಾಗಿ ಕೆಳಬಾಗಿರುತ್ತದೆ. ಮಾಂಸಾಹಾರಿ ಗಳು. ತಾವೇ ಹಿಡಿದ ವಿವಿಧ ಜೀವಂತ ಕಶೇರುಕ ಹಕ್ಕಿ, ಸರೀಸೃಪಗಳನ್ನು ತಿಂದು

ಜೀವಿಸುತ್ತವೆ. ನಿಶಾಚರ ಪಕ್ಷಿಗಳು. ರಾತ್ರಿ ಕಾಲದಲ್ಲಿ ಮಾತ್ರ ಸಂಚಾರ. ಆಹಾರ ಹಿಡಿಯಲು ಸಹಾಯಕವಾಗುವಂತೆ ಮೃದುಗರಿಗಳು ಶಬ್ದವಿಲ್ಲದೆ ಹಾರಾಡಲು ಅನುಕೂಲವಾಗಿದೆ. ದ. ಶೀತವಲಯುವನ್ನುಳಿದು ಪ್ರಪಂಚದ ಉಳಿದ ಎಲ್ಲಾ ಭಾಗಗಳಲ್ಲೂ ಕಂಡುಬರುತ್ತವೆ,

ಕುಟುಂಬ ೧ : ಟೈಟೋನಿಡೀ (Tytonidae)

ಮರದ ಪೊಟರೆ, ಕಲ್ಲು ಬಡುಗಳು ಮತ್ತು ಇತರ ಪಕ್ಷಿಗಳ ಹಳೆಯ ಗೂಡುಗಳಲ್ಲಿ ಮರಿ ಮಾಡುವ, ಹಳ್ಳಿ, ಊರುಗಳ ಪಕ್ಕದಲ್ಲೇ ವಾಸಿಸುವ ಪ್ರಭೇದಗಳಿವು. ಪಾಳುಬಿದ್ದ ಕಟ್ಟಡಗಳಲ್ಲಿ ವಾಸಿಸುವುದು ಹೆಚ್ಚು. ವಿವಿಧ ಶಬ್ದ ಮಾಡುತ್ತದೆ. ಹಳದಿಯಾಕಾರದ ಮುಖ, ಗಿಡ್ಡ ಕಾಲುಗಳು, ಪೂರ್ಣ ಗರಿಯಾವೃತ ಮಧ್ಯ ಬೆರಳಿಗೆ ಬಾಚಣಿಗೆಯಂತಹ ಬೆಳವಣಿಗೆ ಇದೆ. ಹೆಣ್ಣು ಗಂಡಿಗಿಂತ ಗಾತ್ರದಲ್ಲಿ ದೊಡ್ಡದು. ೧–೧ ೧/೨ ಅಡಿ ನೀಳ ದೇಹ. ಸ್ಥಳವಾಸಿಗಳು, ವಲಸೆ ಹೋಗುವುದಿಲ್ಲ. ಗೂಡನ್ನು ಜೀವನವಿಡೀ ವರ್ಷ ವರ್ಷ ಉಪಯೋಗಿಸುತ್ತವೆ. ಜೊತೆಗೂಡುವುದು ಜೀವನವಿಡೀ ಒಂದಾಗಿರಲು. ನ್ಯೂಜಿಲೆಂಡನ್ನುಳಿದು ಇತರ ಎಲ್ಲೆಡೆ ೧೦ ಪ್ರಭೇದಗಳಿವೆ. ಕಂದು ಮೇಲ್ಮೈ, ತಳಭಾಗ ಬಿಳುಪು, ಮೈತುಂಬಾ ಚುಕ್ಕಿ, ಪಟ್ಟಿಗಳಿರಬಹುದು. ಹಲವು ಹುಲ್ಲುಗಾವಲು ವಾಸಿಗಳು. ನೆಲದಲ್ಲೇ ಅವು ಹುಲ್ಲಿನ ಗೂಡುಗಳನ್ನು ರಚಿಸುತ್ತವೆ.

ಇವುಗಳಿಗೆ ಇಲಿ ಸುಂಡಗಳೇ ಮುಖ್ಯಾಹಾರ. ರಾತ್ರಿ ಹುಲ್ಲು ಪೊದರುಗಳಿರುವ ಮೈದಾನಗಳಲ್ಲಿ ಸಂಚರಿಸಿ ಆಹಾರ ಹೊಂಚುತ್ತವೆ. ಶಬ್ದವೇ ಮುಖ್ಯಸೂಚಕ. ದೃಷ್ಟಿ ಸೂಕ್ಷ್ಮವಾದರೂ ಶಬ್ದದಿಂದಲೇ ಬೇಟೆಯಾಡುವುದು ಅಧಿಕ. ೧೦ – ೧೫ ವರ್ಷ ಬದುಕಿರಬಲ್ಲವು.

ಕುಟುಂಬ ೨ : ಸ್ಟ್ರಿಜಿಡೀ (Strigidae)
(ಸಾಮಾನ್ಯ ಗೂಬೆಗಳು)

ಗೂಬೆಗಳ ದೃಷ್ಟಿ ಮತ್ತು ಕಿವಿ ಅತಿ ಸೂಕ್ಷ್ಮ. ಕಣ್ಣು ಹೊರ ತೋರ್ಪಿಗೆ ಕಾಣುವುದಕ್ಕಿಂತ ದಪ್ಪವಾಗಿರುತ್ತದೆ. ತಲೆಯ ಬಹುಭಾಗ ಕಣ್ಣು ಆದ್ದರಿಂದಲೇ ಕಗ್ಗತ್ತಲೆಯಲ್ಲೂ ಚೆನ್ನಾಗಿ ನೋಡಬಲ್ಲವು. ಹಗಲಲ್ಲೂ ಅವು ಚೆನ್ನಾಗಿ ನೋಡಬಲ್ಲವು. ಬೇಕಾದಾಗ ಬೇಟೆಯಾಡಬಲ್ಲವು. ಅವು ಹಗಲು ಕುರುಡೆಂಬ ನಂಬಿಕೆ ಸರಿಯಾದದ್ದಲ್ಲ. ಅವುಗಳ ಕಣ್ಣಿನ ಬಳಿ ಪೊರೆ ಚೆನ್ನಾಗಿ ಕಣ್ಣಿನ ರಕ್ಷಣೆಗೆ ಸಹಕಾರಿಯಾಗಿದೆ. ಅವುಗಳ ಕಿವಿ ಸೂಕ್ಷ್ಮ. ಅವುಗಳ ಅಗಲ ಮುಖ್ಯ ಶಬ್ದಗ್ರಹಿಕೆಗೆ ಸಹಾಯಕವಾಗುವಂತೆ ಕಿವಿಗರಿಯಿಂದ ಪೂರ್ಣಾವೃತವಾಗಿದ್ದರೂ ದಪ್ಪ ಗಾತ್ರವಿದ್ದು ಸೂಕ್ಷ್ಮಶಬ್ದವನ್ನು ಚೆನ್ನಾಗಿ ಗುರುತಿಸಬಲ್ಲವು.

ನಿಶ್ಶಬ್ದವಾಗಿ ಹಾರಾಡುವುದು ಅವುಗಳ ವೈಶಿಷ್ಟ್ಯ. ಅವುಗಳ ಹಾರುಗರಿ ಹಾಗೂ ಪಕ್ಕದ ಗರಿಗಳ ತುದಿಯಲ್ಲಿ ಶಬ್ದವನ್ನು ಸ್ತಬ್ಧಗೊಳಿಸುವ **ಸಾರ್ದಗಳಿದ್ದು** ಶಬ್ದವಾಗದಂತೆ ಏರ್ಪಡಿಸುತ್ತದೆ. ಇದರಿಂದ ಇತರ ಶಬ್ದಗಳು ಅದಕ್ಕೆ ಸ್ಪಷ್ಟವಾಗಿ ತಿಳಿಯಲು ಅನುಕೂಲವಾಗಿದೆ. ಅವುಗಳ ಕತ್ತು ಗಿಡ್ಡವಾಗಿದ್ದಂತೆ ಕಂಡರೂ, ನೀಳವಾಗಿದೆ. ಅವುಗಳ ಮೇಲುಹೊದಿಕೆಯಾದ ಸಡಿಲ ಗರಿಗಳಿಂದ ಆ ರೀತಿ ಕಂಡುಬರುತ್ತದೆ. ಕಣ್ಣು ಗುಡ್ಡೆಗಳೂ ಹೆಚ್ಚಾಗಿ ತಿರುಗಾಡಲಾರವು. ಆದ್ದರಿಂದಲೇ ಅವು ಅತ್ತಿತ್ತ ನೋಡಬೇಕಾದಲ್ಲಿ ಕತ್ತನ್ನು ಪೂರ್ಣ ತಿರುವಿ ನೋಡುತ್ತವೆ. ಹಲವು ಕತ್ತನ್ನು ಪೂರ್ಣ ಹಿಂದೆ ತಿರುವಬಲ್ಲವು.

ತಮ್ಮ ಆಹಾರವನ್ನು ಪೂರ್ಣವಾಗಿ ನುಂಗುತ್ತವೆ. ಅಲ್ಲಿ ಜಠರ ರಸಗಳು ನುಂಗಿದ ಆಹಾರದ ಬಹುಭಾಗವನ್ನು ಜೀರ್ಣಿಸಿಕೊಂಡ ನಂತರ ಜೀರ್ಣವಾಗದ ಮೂಳೆ ಚೂರುಗಳು ಚರ್ಮ ಮುಂತಾದುವನ್ನು ಗುಳಿಗೆ ಮಾಡಿ ಕಕ್ಕುತ್ತವೆ. ಆಹಾರ ಹಿಡಿದದ್ದೆ ಗೂಡಿನಲ್ಲಿ ವಿಶ್ರಮಿಸಿ ತಿಂದು ಜೀರ್ಣಿಸಿ ಕಕ್ಕುತ್ತವೆ. ಆದ್ದರಿಂದ ಅವುಗಳ ವಾಸಸ್ಥಾನದಲ್ಲಿರುವ ಮೂಳೆ ಮುಂತಾದುವುಗಳಿಂದ ಆ ಸ್ಥಳದ ವಿವಿಧ ಪ್ರಾಣಿಗಳನ್ನು ತಿಳಿಯಲು ಸಾಧ್ಯವಿಲ್ಲ.

ಎಲ್ಲವೂ ಪೊದರಂಗಳಿದ್ದಲ್ಲೆ ಗೂಡು ರಚಿಸುವುದು. ಮರ, ಕಲ್ಲುಪೊಟರೆಗಳು ಅಥವಾ ಕಲ್ಲು ಬದುಗಳಲ್ಲಿನ ತೂತು, ಮತ್ತು ಸುರಂಗಗಳು ಅವುಗಳ ಗೂಡಿರುವ ಸ್ಥಳಗಳು. ತಾವೇ ಗೂಡು ರಚಿಸುವುದಿಲ್ಲ. ಬಿಳೀ ವರ್ಣದ ೧ – ೬ ಮೊಟ್ಟೆಗಳನ್ನಿಟ್ಟು ಗಂಡು ಹೆಣ್ಣುಗಳೆರಡೂ ಕಾವು ಕೊಡುತ್ತವೆ.

ಅವು ನಿಶ್ಶಬ್ದ ರಾತ್ರಿ ಸಂಚಾರಿಗಳು. ವಿವಿಧ ಕರ್ಕಶ ಕೂಗು, ಮತ್ತು ಪಾಳುಮನೆ ವಾಸಗಳಿಗೆ ಸಲ್ಲದ ಮೂಢನಂಬಿಕೆಗಳಿವೆ. ಅನೇಕ ದೇಶಗಳ ಕಥೆಗಳಲ್ಲಿ ಅವುಗಳನ್ನು ಕೆಡಕು ಪಕ್ಷಿಗಳಾಗಿ ವಿವರಿಸಲಾಗಿದೆ. ಈಗಲೂ ಅವು ಯಾವುದಾದರೊಂದು ಮನೆಯ ಮೇಲೆ ಕುಳಿತು ಕೂಗಿದಲ್ಲಿ ಆ ಮನೆಯಲ್ಲಿ ಸಾವು ಖಂಡಿತವೆಂದೂ, ಮನೆ ಬಿಡಬೇಕೆಂದೂ ನಂಬುತ್ತಾರೆ. ಆದರೆ ಅಂಗ್ಲ ಸಂಸ್ಕೃತಿಯಲ್ಲೂ ಗ್ರೀಕರ ಪುರಾತನ ಸಂಸ್ಕೃತಿಯಲ್ಲೂ ಅದಕ್ಕೆ ಉತ್ತಮ ಬುದ್ಧಿವಂತ ಪಕ್ಷಿಯೆಂದು ಮನ್ನಣೆ ಕೊಡಲಾಗಿದೆ.

ಒಟ್ಟು ೧೨೨ ಪ್ರಭೇದಗಳುಳ್ಳ ಈ ಕಂಟುಂಬದ ಪ್ರಭೇದಗಳಲ್ಲಿ ಉತ್ತರ ಶೀತವಲಯದ ತಂಡ್ರಾ ಪ್ರದೇಶವಾಸಿ ಮಂಜು ಗೂಬೆ ಮುಖ್ಯವಾದವು. ಅದು ನೆಲದಮೇಲೆ ದಿಬ್ಬಗಳಮೇಲೆ ಗೂಡು ರಚಿಸುತ್ತವೆ. ಹೆಣ್ಣು ಕಾವಿತ್ತು ಮರಿಮಾಡುತ್ತದೆ. ಅನೇಕ ಪಕ್ಷಿಗಳಿಗೆ ಲೆಮ್ಮಿಂಗ್, ಮೊಲ ಮುಂತಾದುವೇ ಆಹಾರ. ಆಹಾರ ಹೆಚ್ಚಾಗಿದ್ದಲ್ಲಿ ೮–೧೦ ಮೊಟ್ಟೆಯಿಡುತ್ತವೆ. ಕಡಮೆಯಾದಂತೆ ಮೊಟ್ಟೆಗಳ ಸಂಖ್ಯೆಯೂ ಕಡಮೆಯಾಗಿ ಅಭಾವವಿದ್ದಲ್ಲಿ ಮೊಟ್ಟೆಯಿಡದೇ ಇರಬಹುದು! ರಾತ್ರಿ ಹಗಲು ಬೇಟೆಯಾಡಬಲ್ಲವು.

ಎರಡನೆಯ ಮುಖ್ಯ ಪಂಗಡದ **ಕೊಂಬು ಗೂಬೆಗಳ** ೧೧ ಪ್ರಭೇದಗಳು ಪ್ರಪಂಚದ ಬಹುಭಾಗದಲ್ಲಿ ಕಂಡುಬರುತ್ತದೆ. ೨ ಅಡಿ ಎತ್ತರವಿರಬಲ್ಲವು. ದಪ್ಪ

ಗಾತ್ರದ ಹಳದಿ ಕಣ್ಣು ಕಿವಿಯ ಮೇಲ್ಭಾಗದಲ್ಲಿ ಕೊಂಬಿನಂತೆ ಬೆಳೆದಿರುವ ಗರಿಯ ಕಂಚು ಇರುತ್ತದೆ. ರಾತ್ರಿ ಮಾತ್ರ ಬೇಟೆ ಹೊರಡುತ್ತವೆಯಾದರೂ ಹಗಲೂ ಹಾರಾಡಬಹುದು.

ಇಲಿ ಮತ್ತಿತರ ಪ್ರಾಣಿಗಳೇ ಮುಖ್ಯಾಹಾರವಾದರೂ ಹಲವು ಪಕ್ಷಿ ಪ್ರಭೇದ ಗಳನ್ನು ಹಿಡಿದು ತಿನ್ನಬಲ್ಲವು. ಆಫ್ರಿಕಾದ **ನೆರಿಯೂ ಗೂಬೆ** ಕಾಡುವಾಸಿ. ಇವು ಗಳ ಕೂಗು ಭಯಾನಕ. ದ. ಆಫ್ರಿಕಾದ **ಚುಕ್ಕೆ ಗೂಬೆ** ದಪ್ಪ ಗಾತ್ರದವು. ಕಲ್ಲು ಬಂಡೆಗಳ ನಡುವೆ ವಾಸ.

ಮೂರನೆಯ ಪಂಗಡದವು **ಕಿರುಬ ಗೂಬೆಗಳು.** ೩೬ ಪ್ರಭೇದಗಳು. ಮನುಷ್ಯ ನಿವಾಸದ ಪಕ್ಕದ ಮರ ಪೊದರುಗಳಲ್ಲೇ ವಾಸಿಸಿ ಮರಿಮಾಡುತ್ತವೆ. ಕೀಟ ಗಳು, ಸಣ್ಣ ಪ್ರಾಣಿಗಳು ಇವುಗಳ ಆಹಾರ.

ದಕ್ಷಿಣ ಯುರೋಪಿಯಾ, ದಕ್ಷಿಣ ಆಫ್ರಿಕ ಮತ್ತು ದ. ಅಮೇರಿಕಾ ವಾಸಿಗಳಾದ ೧೨ ಪ್ರಭೇದಗಳಿವು. ರಾತ್ರಿ, ಸಂಜೆ ಬೇಟೆಯಾಡುವವಾದರೆ ಹಗಲು ಹೊರಬರುತ್ತವೆ. ವೇಗವಾಗಿ ಹಾರಿ ಕೀಟ ಮತ್ತು ಸಣ್ಣ ಪಕ್ಷಿಗಳನ್ನು ಹಿಡಿದು ತಿನ್ನಬಲ್ಲವು. ಮೆಕ್ಸಿಕೋದ **ಚಿಳ್ಳಿ ಗೂಬೆ** ಕೇವಲ ೫ ಅಂಗುಲವಿರುತ್ತದೆ.

ಐದನೆಯ ಮುಖ್ಯ ಪಂಗಡಕ್ಕೆ ೧ ೧/೨ ಅಡಿ ಎತ್ತರದ **ಗಿಡುಗ ಗೂಬೆ**ಗಳು ಸೇರುತ್ತವೆ. ಬಾಲ ಉದ್ದ, ರೆಕ್ಕೆ ನೀಳ ಮತ್ತು ಚೂಪಾಗಿರುತ್ತದೆ. ಹಗಲೇ ಬೇಟೆ ಯಾಡುತ್ತದೆ. ದೃಷ್ಟಿಯೇ ಬೇಟೆಗೆ ಮುಖ್ಯ. ಏಷ್ಯದಿಂದ ನ್ಯೂಜಿಲೆಂಡಿನವರೆಗಿನ ಪ್ರದೇಶದ ೧೮ ಸಣ್ಣ ಗಾತ್ರದ ಪ್ರಭೇದಗಳೆಲ್ಲಾ ಇದಕ್ಕೆ ಸೇರುತ್ತವೆ.

ಕಾಡು ಗೂಬೆಗಳ ಪಂಗಡ - ಒಟ್ಟು ೧೧ ಪ್ರಭೇದ ಹೊಂದಿದೆ. ಈ ಕುಟುಂಬದ ಬಹು ದಪ್ಪ ಗಾತ್ರದ ಪಕ್ಷಿಗಳು ೨ ೧/೨ – ೩ ಅಡಿ ಎತ್ತರವಿರ ಬಹುದು. ಕಾಡು ಇಲಿಗಳು ಅಳಿಲುಗಳು ಮುಖ್ಯಾಹಾರವಾದರೂ ವಿವಿಧ ಕಶೇರುಕ ಗಳನ್ನು, ಪಕ್ಷಿ, ದ್ವಿಚರ, ಮತ್ತು ಸರೀಸೃಪಗಳನ್ನು ತಿನ್ನುತ್ತವೆ. ಅಮೇರಿಕಾದ **ಕನ್ನಡಕ ಗೂಬೆ** ಕಾಡು ಪ್ರಭೇದ. ಮುಖದಲ್ಲಿ ಕನ್ನಡಕ ಧರಿಸಿದಂತಹ ಬಣ್ಣವಿರುತ್ತದೆ. ಏಷ್ಯಾ ಮತ್ತು ಆಫ್ರಿಕದಲ್ಲಿ **ಮೀನು ಗೂಬೆ**ಗಳಿವೆ. ಅವುಗಳ ಕಾಲುಗಳಲ್ಲಿ ಗರಿ ಗಳಿಲ್ಲದೆ ಹುರುಪೆಗಳಿದ್ದು ಬೆರಳುಗಳಲ್ಲಿ ಮುಳ್ಳುಗಳಂತಹ ಹುರುಪೆಗಳಿವೆ. ಇದರಿಂದ ಮೀನು ಜಾರದಂತೆ ಹಿಡಿಯಲು ಅದಕ್ಕೆ ಅನುಕೂಲವಾಗುತ್ತದೆ. ಫ್ಲಾರಿಡಾದಲ್ಲಿ ಕೇವಲ ೯ – ೧೦ ಅಂಗುಲ ಉದ್ದ ದೇಹದ **ಸುರಂಗ ಗೂಬೆ**ಗಳಿವೆ. ನೀಳ ಕಾಲಿನವು. ಹುಲ್ಲು ಗಾವಲುಗಳಲ್ಲಿ ವಾಸಿಸಿ ಸುರಂಗ ಕೊರೆದು ಗೂಡು ರಚಿಸುತ್ತವೆ. ಹಲವು ಒಂದೇ ಎಡೆ ವಾಸಿಸಿರಬಹುದು. ವಿವಿಧ ಕೀಟಗಳು, ಮಿಡತೆಗಳು ಮುಖ್ಯಾಹಾರ. ಆದರೆ ಇಲಿ, ಪಕ್ಷಿಗಳನ್ನೂ ಹಿಡಿದು ತಿನ್ನಬಲ್ಲವು. ನೆಲದ ಮಟ್ಟದಲ್ಲೇ ಹಾರಿ ಬೇಗ ಗೂಡು ಸೇರುತ್ತವೆ. ಮುಚ್ಚಂಜೆಯಲ್ಲೇ ಅದರ ಕಾರ್ಯಾಚರಣೆ ಹೆಚ್ಚು.

ಉಪವರ್ಗ ೨೧ : ಕ್ಯಾಪ್ರಿಮುಲ್‌ಜಿಫಾರ್‌ಮಿಸ್ (Caprimulgiformes)

ಕುಟುಂಬ ೫

ಪ್ರಭೇದ ೯೨

ರಾತ್ರಿ ಅಥವಾ ಮುಬ್ಬೆಳಕಿನಲ್ಲಿ ಸಂಚರಿಸುವ ೫ ಕುಟುಂಬಗಳ ಪಕ್ಷಿ ಪ್ರಭೇದಗಳಿವು. ಅವುಗಳಿಗೆ ಸಣ್ಣ ಕೊಕ್ಕು, ಗಿಡ್ಡ ಕಾಲು, ನೀಳರೆಕ್ಕೆ ಮತ್ತು ಅಗಲ ಬಾಯಿ ಇರುತ್ತವೆ. ಸಾಮಾನ್ಯವಾಗಿ ಹಾರಾಡುವ ಕೀಟಗಳೇ ಮುಖ್ಯಾಹಾರ. ಕಂದು ಬಣ್ಣದ ಅಥವಾ ಕಪ್ಪು ಬಣ್ಣದ ಮೈಮೇಲೆ ಚುಕ್ಕೆ ಪಟ್ಟೆಗಳಿರಬಹುದು. ಶಬ್ದ ಮಾಡದೆ ಹಾರಾಡಲು ಅನುಕೂಲವಾಗುವಂತೆ ಗೂಬೆಗಳಿಗಿರುವಂತಹ ಮೃದು ಗರಿಗಳ ರಚನೆಯಿದೆ.

ಹೆಸರು ಅವುಗಳ ಕರ್ಕಶ ಕೂಗನ್ನು ಸೂಚಿಸುತ್ತವೆ. ಇವುಗಳ ವಿಚಾರದಲ್ಲೂ ಸಾಮಾನ್ಯ ಜನತೆಗೆ ಪೂರ್ಣ ತಿಳುವಳಿಕೆಯಿಲ್ಲದೆ ಮೂಢನಂಬಿಕೆಗಳು ಹೆಚ್ಚಾಗಿವೆ. ಒಂದು ಪ್ರಭೇದ ಆಡುಗಳ ಹಾಲನ್ನು ರಾತ್ರಿ ಕುಡಿಯುತ್ತವೆಂದೂ ನಂಬಲಾಗಿತ್ತು. ಅವುಗಳ ಅಗಲ ಬಾಯಿ ಈ ಊಹೆಗೆ ಆಧಾರವಾಗಿತ್ತು.

ಕುಟುಂಬ ೧ : ಸ್ಟಿಯೊತಾರ್ನಿತಿಡೀ (Steatornithidae)

(ಎಣ್ಣೆ ಪಕ್ಷಿ ಅಥವಾ ಗುವಾಚಾರೊ) (Guvacharo)

ದ. ಅಮೇರಿಕಾದ ವೆನಿಜೂಲ ಬಳಿಯ ವಿಚಿತ್ರ ಪಕ್ಷಿ. ಮರಿಗಳು ಬಹುವಾಗಿ ಕೊಬ್ಬಿದ್ದು, ಅದರಿಂದಲೇ ಅಲ್ಲಿಯ ಮೂಲವಾಸಿಗಳು ಬಹುಕಾಲದಿಂದ ತಮಗೆ ಬೇಕಾದ ಎಣ್ಣೆ ಪಡೆಯುತ್ತಿದ್ದರು. ಅದರ ಕರ್ಕಶ ಕೂಗಿನಿಂದ ಗುವಾಚಾರೊ ಎಂದು ಹೆಸರಿಡಲಾಗಿದೆ. ಹಗಲೆಲ್ಲಾ ಗುಹೆಗಳಲ್ಲಿ ಅಡಗಿದ್ದು ರಾತ್ರಿ ಹೊರಬೀಳುತ್ತವೆ. ಸುಮಾರು ೧ ಅಡಿ ಎತ್ತರದ ಪಕ್ಷಿಗಳು. ರೆಕ್ಕೆ ೨–೨ ೧/೨ ಅಡಿ ಉದ್ದವಿರುತ್ತವೆ. ಕಾಲು ಬಲು ಸಣ್ಣ. ಕೊಂಬೆ ಹಿಡಿಯಲಾರವು. ಆದ್ದರಿಂದ ನೆಲದ ಮೇಲೆ ಕುಳಿತು ವಿಶ್ರಮಿಸುತ್ತವೆ.

ಈ ಕುಟುಂಬದವು ಪೂರ್ಣ ಸಸ್ಯಾಹಾರಿ ಪಕ್ಷಿಗಳು. ವಿವಿಧ ಹಣ್ಣುಗಳೂ, ಎಣ್ಣೆ ಬೀಜಗಳೂ ಇವಕ್ಕೆ ಆಹಾರ. ಎಣ್ಣೆ ಪಾಮ್ ಗಿಡದ ಹಣ್ಣನ್ನು ತಿನ್ನಲು ಬಲು ಇಷ್ಟ. ಮುಂಜಂಜೆಯಲ್ಲಿ ಅದಕ್ಕಾಗಿ ೪೦–೫೦ ಮೈಲಿ ದೂರವಾದರೂ ಹಾರಾಡಿ ತಿನ್ನುತ್ತವೆ. ಮತ್ತು ಬೆಳಗಾಗುವುದರೊಳಗೆ ತಮ್ಮ ಕತ್ತಲೆ ಗುಹೆಗೆ ಹಿಂತಿರುಗುತ್ತವೆ. ಗುಹೆಗಳಲ್ಲೂ ಹಿಂಭಾಗದ ಕಗ್ಗತ್ತಲ ಬಡುಗಳಲ್ಲೇ ವಿಶ್ರಮಿಸುತ್ತವೆ. ತಮ್ಮ ಹಿಕ್ಕೆ ಮತ್ತು ಎಣ್ಣೆ ಪಾಮ್‌ಗಳ ಬೀಜ ಮಿಶ್ರಣದಿಂದಲೇ ದಿಬ್ಬದಂತಹ ಗೂಡು ರಚಿಸಿ ಮೇಲ್ಭಾಗದಲ್ಲಿ ಗುಳಿಮಾಡಿ ಮೊಟ್ಟೆಯಿಡುತ್ತವೆ. ೨–೪ ಮೊಟ್ಟೆಗಳನ್ನಿಟ್ಟು ಹೆಣ್ಣು ಗಂಡುಗಳೆರಡೂ ಕಾವು ಕೊಡುತ್ತವೆ. ಮರಿಗಳು ನಗ್ನವಾಗಿ ಜನಿಸಿ, ತಂದೆತಾಯಿಗಳು ಒದಗಿಸುವ ಎಣ್ಣೆ ಪಾಮ್ ಹಣ್ಣುಗಳನ್ನು ತಿಂದು ಚೆನ್ನಾಗಿ ಕೊಬ್ಬುತ್ತವೆ. ಅವು

ತಮ್ಮ ತಂದೆತಾಯಿಗಳ ಎರಡರಷ್ಟು ಭಾರವಿರಬಲ್ಲವು. ಆಗಲೇ ಅವುಗಳನ್ನು ಹಿಡಿದು ಕೊಂದು ಕೊಬ್ಬು ಕರಗಿಸಿ ಉಪಯೋಗಿಸುವುದು.

ಗುಹೆಗಳ ಕಗ್ಗತ್ತಲೆಯಲ್ಲಿ ದಾರಿ ತಪ್ಪದೆ ಹಾರಾಡಲು ಅವುಗಳಿಗೆ ರಾಡಾರ್‌ನಂತಹ ರಚನೆಯಿದೆ. ಬಾವಲಿಗಳಂತೆ ಅವೂ ಕೂಗುಹಾಕಿ ಮಾರ್ದನಿಯಿಂದ ಅಡಚಣೆಗಳನ್ನು ಕಂಡುಕೊಳ್ಳುತ್ತವೆ. ಆದರೆ ಬಾವಲಿಗಳ ಕೂಗು ಅತಿ ತೀಕ್ಷ್ಣವಾಗಿದ್ದು ನಮಗೆ ಕೇಳಿಸುವುದಿಲ್ಲ, ಈ ಪಕ್ಷಿಗಳ ಕೂಗು ಕೇಳಿಸುತ್ತದೆ. ಈಗ ರಕ್ಷಣೆಗೆ ಒಳಪಡಿಸುವುದರಿಂದ ಅವುಗಳನ್ನು ನೋಡಲು ಸರ್ಕಾರವೇ ಆ ಗುಹೆಗಳಿಗೆ ಪ್ರವಾಸ ಏರ್ಪಡಿಸುತ್ತದೆ.

ಕುಟುಂಬ ೨ : ಪೋಡಾರ್‌ಗಿಡೀ (Podargidae)
(ಕಪ್ಪೆ ಬಾಯಿಯ ಪಕ್ಷಿಗಳು)

ಆಸ್ಟ್ರೇಲಿಯಾದಿಂದ ಉತ್ತರಕ್ಕೆ ಮಲಯಾ, ಫಿಲಿಪೈನ್ಸ್ ಬಳಿ ವಾಸವಿರುವ ೧೨ ಪ್ರಭೇದಗಳಿರುವ ಕುಟುಂಬ. ಅವುಗಳ ಅಗಲವಾದ ಚಪ್ಪಟೆ ಕೊಕ್ಕು ಕೆಳಬಾಗಿರುತ್ತದೆ. ಅವು ಈ ಉಪವರ್ಗದ ಇತರ ಪಕ್ಷಿಗಳಂತೆ ಹಾರಾಡುತ್ತಾ ಕೀಟಗಳನ್ನು ಹಿಡಿದು ತಿನ್ನದೆ, ನೆಲದಮೇಲೆ ಓಡಾಡಿ ದುಂಬಿ, ಚೇಳು, ಕೀಟ ಮರಿಗಳು, ಸಾವಿರಕಾಲು ಹುಳು ಮುಂತಾದುವನ್ನೂ, ಸಣ್ಣ ಇಲಿಗಳನ್ನೂ ಹಿಡಿದು ತಿನ್ನುತ್ತವೆ. ಬಾಯಿ ಬಹಳ ಅಗಲ. ಅವುಗಳ ಕಾಲೂ, ಪಾದವೂ ತೀರಾ ಸಣ್ಣ. ರೆಕ್ಕೆ ಸಾಮಾನ್ಯ. ಆದ್ದರಿಂದ ದೂರ ಹಾರಲಾರವು. ರಾತ್ರಿ ಮಾತ್ರ ಸಂಚರಿಸುವ ನಿಶಾಚರ ಪಕ್ಷಿಗಳು.

೮ ಅಂಗುಲದಿಂದ ೨ ಅಡಿ ನೀಳ ದೇಹವಿರುತ್ತದೆ. ಗರಿ ನುಣುಪು. ಕಂದು ಬಣ್ಣದ ಮೇಲೆ ವಿವಿಧ ರೀತಿಯ ಚುಕ್ಕೆ ಪಟ್ಟೆಗಳಿರಬಹುದು. ಅವುಗಳು ವಿವಿಧ ಋತುಗಳಲ್ಲಿ ವಿವಿಧ ವರ್ಣ ಹೊಂದಬಹುದು. ಯಾವಾಗಲೂ ಮರದ ಮೇಲೆ ಕೊಂಬೆಗಳ ಅಕ್ಷ ಪ್ರದೇಶದಲ್ಲಿ ಗೂಡು ರಚಿಸುತ್ತವೆ. ಕಡ್ಡಿ, ತುಪ್ಪಟ, ಗರಿ, ಕಲ್ಲು ಹೂವು, ಜೇಡರಬಲೆ ಮುಂತಾದುವುಗಳಿಂದ ಗೂಡು ರಚಿಸಬಲ್ಲವು. ೧ – ೨ ಮೊಟ್ಟೆ ಯಿಟ್ಟು, ರಾತ್ರಿ ಹೆಣ್ಣು, ಹಗಲು ಗಂಡು ಕಾವು ಕೂರುತ್ತವೆ.

ಹಗಲಿನಲ್ಲಿ ಕೊಂಬೆಗೆ ಅಂಟಿದಂತೆ ನೇರವಾಗಿ ಕುಳಿತು, ತಲೆ ಮೇಲೆತ್ತಿ, ಕಣ್ಣು ಮುಚ್ಚಿ ನಿದ್ರಿಸುತ್ತವೆ. ಅವುಗಳ ಬಣ್ಣ ವಿಶ್ರಮಿಸುವಾಗ ಮರದ ತೊಗಟೆಯಂತಿದ್ದು, ಕಾಣುವುದೇ ಇಲ್ಲ. ದಕ್ಷಿಣ ಭಾರತದಲ್ಲೂ ಅವು ಕಂಡುಬರುತ್ತವೆ.

ಕುಟುಂಬ ೩ : ನಿಕ್ಟಿಬಿಡೀ (Nyctibiidae)

ಜಮೈಕಾದಿಂದ, ದಕ್ಷಿಣ ಅಮೇರಿಕಾದ ಮಧ್ಯಭಾಗದವರೆಗಿನ ಪ್ರದೇಶವಾಸಿ ಗಳಾದ ೫ ಪ್ರಭೇದಗಳು. ಅವುಗಳ ಕಾಲುಬೆರಳ ಮಧ್ಯೆ ಬಾಚಣಿಗೆಯಂತಹ ಬೆಳವಣಿಗೆಯಿಲ್ಲ. ಹೆಣ್ಣು – ಗಂಡುಗಳೆರಡೂ ಒಂದೇ ಗಾತ್ರ ಮತ್ತು ಬಣ್ಣವಿರುತ್ತವೆ. ಒಣಗಿ ಮುರಿದ ಕೊಂಬೆಯ ತುದಿಯಲ್ಲಿ, ಕೊಂಬೆಗೆ ಸೇರಿದಂತೆ ಸೇರಿ ಕುಳಿತು,

ಕೊಂಬೆಯ ಭಾಗದಂತೆಯೇ ಕಾಣಿಸುತ್ತವೆ. ರಾತ್ರಿ ಅವುಗಳ ಕಣ್ಣು ಬೆಳಕನ್ನು ಪ್ರತಿಬಿಂಬಿಸಿ ಹೊಳೆಯುತ್ತದೆ. ಆಗಾಗ ಹಾರಿ ಹಾರಾಡುತ್ತಿರುವ ಕೀಟಗಳನ್ನು ಹಿಡಿದು ತಿನ್ನುತ್ತವೆ. ಅವು ಸಾಮಾನ್ಯವಾಗಿ ಬೆಕ್ಕು ಕೂಗಿದಂತೆ ಶಬ್ದ ಮಾಡಬಲ್ಲವು. ಮೆಕ್ಸಿಕೋದಲ್ಲಿನ ಒಂದು ಪ್ರಭೇದ ೧ ೧/೨ ಅಡಿಗಿಂತ ಉದ್ದವಾಗಿರುತ್ತದೆ.

ಒಣ ಕೊಂಬೆಯ ಮುರಿದ ತುದಿಯಮೇಲೆ ಒಂದೇ ಮೊಟ್ಟೆಯಿಟ್ಟು ಗಂಡು–ಹೆಣ್ಣುಗಳೆರಡೂ ಕಾವು ಕೂರುತ್ತವೆ. ಮರಿ ಜನಿಸಿದಾಗ ಅವುಗಳಿಗೆ ಬಿಳಿಯ ಮೃದು ಗರಿ ಹೊದಿಕೆಯಿರುತ್ತದೆ. ೫ – ೬ ವಾರಗಳಲ್ಲಿ ಪೂರ್ಣ ಬಲಿತು ಹಾರಬಲ್ಲವು.

ಕುಟುಂಬ ೪ : ಈಗೊತೆಲಿಡೀ (Aegothelidae)

ಆಸ್ಟ್ರೇಲಿಯಾ, ನ್ಯೂಗಿನಿಯಲ್ಲಿನ ದುಂಡು ದೇಹದ ಸಣ್ಣ ಗೂಬೆಗಳಂತಹ ಪಕ್ಷಿಗಳ ೮ ಪ್ರಭೇದಗಳಿವು. ಬಾಲ ಸ್ವಲ್ಪ ಉದ್ದ. ರಾತ್ರಿ ಹಾರಾಡುವ ಪತಂಗಗಳನ್ನು ಹಿಡಿದು ತಿನ್ನುತ್ತವೆ. ಇರುವೆ, ಕೀಟ, ಹುಳುಗಳನ್ನೂ ತಿನ್ನಬಲ್ಲವು. ಗಿಡ್ಡಕಾಲಿನ ದಪ್ಪ ದುಂಡು ತಲೆಯ ಪಕ್ಷಿಗಳು. ಸಾಮಾನ್ಯವಾಗಿ ಕಾಡುವಾಸಿಗಳಾದ ಲಜ್ಜಾ ಪಕ್ಷಿಗಳು. ಕೊಂಬೆಗೆ ಅಡ್ಡಲಾಗಿ ನೇರ ತಲೆಯೆತ್ತಿ ಕುಳಿತಿರುತ್ತದೆ. ಸಿಳ್ಳುಹಾಕುವಂತಹ ಶಬ್ದ ಮಾಡುತ್ತವೆ.

ಮರ ಪೊಟರೆಗಳಲ್ಲಿ ಗೂಡುರಚಿಸಿ ೩ – ೪ ಮೊಟ್ಟೆಯಿಟ್ಟು ಮರಿ ಮಾಡುತ್ತವೆ. ಮರಿ ಜನಿಸಿದಾಗ ಪೂರ್ಣ ಗರಿ ಹೊದಿಕೆ ಹೊಂದಿರುತ್ತದೆ. ಕೆಲವು ವೇಳೆ ವರ್ಷಕ್ಕೆ ಎರಡಾವರ್ತಿ ಮರಿ ಮಾಡುತ್ತವೆ.

ಕುಟುಂಬ ೫ : ಕ್ಯಾಪ್ರಿಮುಲ್‌ಜಿಡೀ (Caprimulgidae)
(ಗುಪ್ಪಟಗಳು)

ಪ್ರಪಂಚದ ಉಷ್ಣ ಮತ್ತು ಸಮಶೀತೋಷ್ಣವಲಯದ ಬಹುಭಾಗದಲ್ಲಿ ಹರಡಿರುವ ೬೭ ಪ್ರಭೇದಗಳು. ನ್ಯೂಜೀಲೆಂಡಿನಲ್ಲಿ ಮಾತ್ರ ಕಂಡುಬರುವುದಿಲ್ಲ. ಹಗಲೆಲ್ಲಾ ವಿಶ್ರಮಿಸಿ ನಿದ್ರಿಸಿ, ರಾತ್ರಿವೇಳೆ ಮಾತ್ರ ಸಂಚರಿಸುತ್ತವೆ. ಕೂಗು ಕರ್ಕಶ. ಹಲವು ಪ್ರಭೇದ ಹಗಲಿರುಳೂ ಚಲಿಸಬಲ್ಲವು. ಕೀಟಗಳೇ ಮುಖ್ಯಾಹಾರ. ಸಣ್ಣ ಪಕ್ಷಿಗಳನ್ನು ತಿನ್ನುತ್ತವೆ. ರಾತ್ರಿ ಸಂಚಾರಿಗಳಿಗೆ ಹಗುರ ಕಂದು ಬಣ್ಣ ಮಾತ್ರವಿದ್ದು, ಮೇಲೆ ಬಿಳುಪು ಅಥವಾ ಕಪ್ಪು ಚುಕ್ಕೆ, ಪಟ್ಟೆಗಳಿರಬಹುದು. ಒಣಮರದ ಮೇಲೆ ಕುಳಿತಾಗ ಅದನ್ನು ಗುರುತುಹಿಡಿಯಲು ಸಾಧ್ಯವಿಲ್ಲ. ನೆಲದ ಮೇಲೆ ಒಣ ಎಲೆಗಳ ಬಳಿ ಕುಳಿತಿದ್ದಾಗ ತೀರ ಸಮೀಪಿಸಿದರೂ ಕಂಡುಹಿಡಿಯಲಾಗುವುದಿಲ್ಲ.

ಕಾಲು ಬಲು ಗಿಡ್ಡ. ಹೆಚ್ಚು ಪ್ರಯೋಜನಕಾರಿಯಲ್ಲ. ಮಧ್ಯ ಕಾಲು ಬೆರಳಿಗೆ ಬಾಚಣಿಗೆಯಂತಹ ಬೆಳವಣಿಗೆ ಇದೆ. ಕೀಟ ಹೆಚ್ಚಾಗಿರುವೆಡೆ ಅವು ಹೆಚ್ಚು. ಹಲವು ಸ್ಥಳವಾಸಿಗಳಲ್ಲಿ ಕೆಲವು ಮಾತ್ರ ವಲಸೆ ಹೋಗುತ್ತವೆ. ದಕ್ಷಿಣ ಆಫ್ರಿಕಾದ

ಬಾವುಟ ರೆಕ್ಕೆಯ ಪ್ರಭೇದ ಪರ್ವಕಾಲದಲ್ಲಿ ಬಾವುಟದಂತಹ ಎರಡು ನೀಳ ಗರಿಗಳನ್ನು ಬೆಳೆಸುತ್ತವೆ. ಪರ್ವಕಾಲವಾದೊಡನೆಯೇ ಅವು ಮುರಿದು ಬೀಳುತ್ತವೆ. ಅವುಗಳಲ್ಲಿ ಉತ್ತರ ಅಮೇರಿಕಾದ **ಪೂರ್‌ವಿಲ್** ಪ್ರಭೇದ ಚಳಿಗಾಲದಲ್ಲಿ ದೀರ್ಘ ನಿದ್ರೆ ಮಾಡುತ್ತವೆ. ಆಗ ಅವುಗಳ ದೇಹದ ಶಾಖ ೧೦೨°ಯಿಂದ ೬೦°ಗೆ ಇಳಿದು ಅವು ಅಚಲವಾಗಿ ಸತ್ತಂತಿರುತ್ತವೆ. ಇದರಿಂದ ಹೆಚ್ಚಿನ ಆಹಾರದ ಅಗತ್ಯವಿಲ್ಲದೆ ಅವು ಚಳಿಗಾಲವನ್ನು ಕಳೆಯುತ್ತವೆ. ಪ್ರತಿ ವರ್ಷವೂ ಚಳಿಗಾಲವನ್ನು ಒಂದೇ ಸ್ಥಳದಲ್ಲಿ ಕುಳಿತು ಕಳೆಯುತ್ತವೆಂದು ಪರೀಕ್ಷೆಯಿಂದ ತಿಳಿದುಬಂದಿದೆ.

ಮರದಮೇಲೆ ಕುಳಿತು ವಿಶ್ರಮಿಸುವವಾದರೂ ನೆಲದಮೇಲೆಯೇ ಮರಿಮಾಡುವುದು. ಬಿದ್ದ ಎಲೆಗಳ ಮೇಲೆ ಅಥವಾ ನೆಲದಮೇಲೆ ಮೊಟ್ಟೆಯಿಡುತ್ತವೆ. ಸಮಶೀತೋಷ್ಣವಲಯದವು ವರ್ಷಕ್ಕೆ ಒಂದೇಸಲ ಎರಡು ಮರಿಮಾಡುತ್ತವೆ. ಹೆಣ್ಣು – ಗಂಡುಗಳೆರಡೂ ೧೫ – ೨೦ ದಿನ ಕಾವು ಕುಳಿತು ಮರಿಮಾಡುತ್ತವೆ. ಮರಿ ಪೂರ್ಣ ಬಲಿತು ಕಂದು ತುಪ್ಪಟ ಹೊದಿಕೆ ಹೊಂದಿರುತ್ತವೆ. ಮೊಟ್ಟೆ ಅಥವಾ ಮರಿಗಳಿಗೆ ಅಪಾಯ ಸೂಚನೆಯಿದ್ದಲ್ಲಿ ಅವನ್ನು ಪಕ್ಷಿಗಳು ಸುರಕ್ಷಿತವಾದ ಕಡಗೆ ಸಾಗಿಸುತ್ತವೆ. ಇದು ಕೆಲವೇ ಪಕ್ಷಿ ಪ್ರಭೇದಗಳಲ್ಲಿ ಕಂಡುಬರುವ ಅಪೂರ್ವ ನಡತೆ.

ಮೈದಾನ ಅಥವಾ ಹುಲ್ಲುಗಾವಲಿನಲ್ಲೂ ಕಾಡಂಚಿನಲ್ಲೂ ವಾಸಿಸುವುದು ಹೆಚ್ಚು. ಕಾಡು ಅಥವಾ ಹಳ್ಳಿ ರಸ್ತೆಗಳಲ್ಲಿ ರಾತ್ರಿ ಕುಳಿತು ಆಹಾರ ಅರಸುತ್ತಿರುತ್ತವೆ. ಪರ್ವಕಾಲದಲ್ಲಿ ರಾತ್ರಿಯೆಲ್ಲಾ ನಿರಂತರವಾಗಿ ಕೂಗುವುದುಂಟು. ಒಂದು ಪಕ್ಷಿ ಎಡೆಬಿಡದೆ ೧೮೮೮ ಸಾರಿ ಕೂಗಿದ್ದನ್ನು ಎಣಿಸಿ ದಾಖಲೆ ಮಾಡಲಾಗಿದೆ.

ಉಪವರ್ಗ ೨೨ : ಎಪೋಡಿಫಾರ್‌ಮಿಸ್ (Apodiformes)

(ಸ್ವಿಫ್ಟ್ ಮತ್ತು ಝೇಂಕಾರ ಪಕ್ಷಿಗಳು) (Swift and Humming Birds)

ಕುಟುಂಬ ೩

ಪ್ರಭೇದ ೩೮೮

ಈ ಉಪವರ್ಗದ ಪಕ್ಷಿಗಳು ಪಕ್ಷಿವರ್ಗದ ಅತ್ಯುತ್ತಮ ಹಾರಾಟಗಾರರು. ಹಾರಾಟವೇ ಮುಖ್ಯವಾದ್ದರಿಂದ ಕಾಲಿಗೆ ಹೆಚ್ಚಿನ ಕೆಲಸವಿಲ್ಲ. ಆದ್ದರಿಂದಲೇ ಕಾಲಿಲ್ಲದ ಪಕ್ಷಿಗಳೆಂದು ಅವುಗಳಿಗೆ ಹೆಸರು. ಅವುಗಳಲ್ಲಿ ರೆಕ್ಕೆಯ ಮೇಲುಮೂಳೆ ಗಿಡ್ಡವಾಗಿ ಅಡಿಯವು ಉದ್ದ ಬೆಳೆಯುತ್ತವೆ. ಇದರಿಂದ ಹಾರಲು ಹೆಚ್ಚು ಶಕ್ತಿ ದೊರಕಿ ರೆಕ್ಕೆ ದೃಢವಾಗಿರುತ್ತದೆ. ೧ – ೬ ನೀಳವಾದ ಬಿಳಿ ಮೊಟ್ಟೆಯಿಡುತ್ತವೆ. ಮರಿ ಜನಿಸಿದಾಗ ನಿಸ್ಸಹಾಯಕ, ಕುರುಡು.

ಕುಟುಂಬ ೧ : ಎಪೋಡಿಡೀ (Apodidae)

(ಸ್ವಿಫ್ಟ್‌ಗಳು)

ಅತ್ಯಂತ ವೇಗವಾಗಿ ಹಾರಬಲ್ಲ ಪಕ್ಷಿಗಳು. ಸಾಮಾನ್ಯವಾಗಿ ೧೦೦ ಮೈಲಿ ವೇಗದಲ್ಲಿ ಹಾರುತ್ತವೆ. ಪೂರ್ವ ಏಷ್ಯಾ ಭಾಗದ ಹಲವು ಪ್ರಭೇದಗಳು ೧೫೦ – ೨೦೦

ವೈಲಿ ವೇಗದಲ್ಲಿ ಹಾರಬಲ್ಲವೆಂದು ತಿಳಿದುಬಂದಿದೆ. ಹಾರುತ್ತಾ ಹಾರಾಡುವ ಕೀಟ ಗಳನ್ನು ಹಿಡಿದು ಭಕ್ಷಿಸುತ್ತವೆ. ದೇಹ ದೃಢವಾಗಿ, ಬಾಲ ಗಿಡ್ಡವಾಗಿರುತ್ತವೆ. ನೀಳ ರೆಕ್ಕೆ ಸ್ವಲ್ಪ ಮೇಲ್ಬಾಗಿರುತ್ತದೆ. ಪೂರ್ಣ ಕಂದು ಅಥವಾ ಬೂದು ಬಣ್ಣವಿರುತ್ತವೆ. ಹೊಟ್ಟೆಯಡಿ ಬಿಳುಪಾಗಿರಬಲ್ಲದು. ಹಲವು ಪ್ರಭೇದಗಳಿಗೆ ಮುಖದ ಬಳಿ ಬೇರೆ ಬಣ್ಣವಿರುತ್ತದೆ. ಕೆಲಕಾಲ ರೆಕ್ಕೆ ಬಡಿದು ನಂತರ ದೀರ್ಘವಾಗಿ ತೇಲುತ್ತದೆ.

ಅವುಗಳ ಗಿಡ್ಡ ಕಾಲು ದೇಹವನ್ನು ಎತ್ತಿ ಹಿಡಿಯಲಾರವು. ಅವು ಯಾವಾಗಲೂ ಕೊಂಬೆ ಹಿಡಿದು ವಿಶ್ರಮಿಸುವುದಿಲ್ಲ. ಮನೆಮಾಡು, ಕಲ್ಲುಮುಖ, ಅಥವಾ ಪ್ರಪಾತ ಮುಖಗಳನ್ನು ತನ್ನ ಉಗುರಿನಿಂದ ಒತ್ತಿ ಹಿಡಿದು, ಬಾಲಊರಿ, ಆಸರೆಹೊಂದಿ, ನೆಟ್ಟಗೆ ವಿಶ್ರಮಿಸುತ್ತವೆ. ಹಲವು ಪ್ರಭೇದಗಳಲ್ಲಿ ನಾಲ್ಕು ಬೆರಳೂ ಮುಂಚಬಿದ್ದು ಹಿಡಿತಕ್ಕೆ ಅನುಕೂಲವಾಗಿದೆ. ಕೆಲವು ಪಕ್ಷಿಗಳಿಗೆ ಬಾಲಗರಿಯ ಮಧ್ಯರೇಖೆ ಮುಳ್ಳಿನಂತೆ ಮುಂದಕ್ಕೆ ಬೆಳೆದಿರುತ್ತದೆ. ಹಲವು ಪ್ರಭೇದಗಳು ಮೇಲಕ್ಕೆ ಹಾರಿ ಬಹುಕಾಲ ತೇಲುತ್ತಾ ವಿಶ್ರಮಿಸುತ್ತವೆಂದು ಇತ್ತೀಚಿಗೆ ತಿಳಿದುಬಂದಿದೆ.

ಅವುಗಳಲ್ಲಿ ಒಟ್ಟು ೬೭ ಪ್ರಭೇದಗಳಿವೆ. ಉಷ್ಣವಲಯ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಅವುಗಳ ವಾಸ ಹೆಚ್ಚು. ಉತ್ತರ ವಲಯದವು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಗೂಡು ರಚನಾ ವೈಶಿಷ್ಟ್ಯದ ಆಧಾರದಿಂದ ೮ ಮುಖ್ಯ ಜಾತಿಗಳನ್ನಾಗಿ ವಿಂಗಡಿಸಲಾಗಿದೆ. ಎಲ್ಲಾ ಪ್ರಭೇದಗಳಲ್ಲೂ ಗೂಡನ್ನು ತಮ್ಮ ಎಂಜಲಿನಿಂದಲೇ ವಿವಿಧ ಸ್ಥಳಗಳಿಗೆ ಅಂಟಿಸುತ್ತದೆ. ಪರ್ವಕಾಲದಲ್ಲಿ ಜೊಲ್ಲುಗ್ರಂಥಿಗಳು ದಪ್ಪವಾಗಿ ಹೆಚ್ಚಿನ ಜೊಲ್ಲನ್ನು ಉತ್ಪನ್ನಮಾಡುತ್ತವೆ. ಗಂಡು ಹೆಣ್ಣುಗಳೆರಡೂ ಸೇರಿ ಗೂಡು ರಚಿಸಿ ೧ – ೬ ಮೊಟ್ಟೆಯಿಟ್ಟು ೨೦ ದಿನಗಳವರೆಗೆ ಕಾವು ಕೊಟ್ಟು ಮರಿಮಾಡುತ್ತವೆ. ಮರಿ ಗಳು ಚೆನ್ನಾಗಿ ಹಾರಾಡುವವರೆಗೂ ಗೂಡಿನಲ್ಲಿದ್ದು ನಂತರ ಹೊರಬೀಳುತ್ತವೆ.

ಎಲ್ಲಾ ಪ್ರದೇಶದಲ್ಲೂ ಕಂಡುಬರುವ **ಮುಳ್ಳು ಬಾಲಗರಿಯ** ೧೮ ಪ್ರಭೇದ ಗಳು ಸಾಮಾನ್ಯವಾದುವು. ಮರದ ಪೊಟರೆಗಳಲ್ಲೇ ಗೂಡು ರಚನೆ ಮತ್ತು ವಾಸ. ಹಲವು ಹೊಗೆಗೂಡುಗಳಲ್ಲೂ ಗೂಡು ರಚಿಸುತ್ತವೆ. ಅನುಪಯುಕ್ತ ಕಾರ್ಖಾನೆ ಗಳಲ್ಲಿನ ದೊಡ್ಡ ಹೊಗೆ ಗೂಡು ಸ್ತಂಭಗಳಲ್ಲಿ ಸಹಸ್ರಾರು ತಂಗಿ, ನೂರಾರು ಗೂಡು ಕಟ್ಟಿರುತ್ತವೆ. ಹಾರಾಡುವಾಗ ಒಣಕಡ್ಡಿಗಳನ್ನು ಮುರಿದು, ಕೊಕ್ಕಿನಲ್ಲಿ ಕಚ್ಚಿ ಕೊಂಡೊಯ್ದು, ಒಳಗೋಡೆಗೆ ಅರ್ಧ ವರ್ತುಲಾಕಾರದ ಚಾಚು ಕೀಟದಂತೆ ತನ್ನ ಜೊಲ್ಲಿನಿಂದ ಅಂಟಿಸಿ ಗೂಡು ರಚಿಸುತ್ತವೆ.

ಪಶ್ಚಿಮವಲಯದ **ಸಾಮಾನ್ಯ ಸ್ವಿಫ್ಟ್** (Common Swift) ಪ್ರಭೇದ ಗಳು ಪ್ರಪಾತಗಳ ಮುಖದಲ್ಲಿ ಮಾತ್ರ ಗೂಡು ರಚಿಸುತ್ತವೆ. ಪ್ರಪಾತ ಮುಖದಲ್ಲಿನ ಬಿರುಕುಗಳ ಬಳಿ, ಹಾರುವಾಗ ಆರಿಸಿಕೊಂಡ ಹುಲ್ಲು, ಕಡ್ಡಿ, ತುಪ್ಪಟ, ಅಥವಾ ಮೃದು ಗರಿಗಳನ್ನು ತನ್ನ ಜೊಲ್ಲಿನಿಂದ ಅರ್ಧ ವರ್ತುಲಾಕಾರದಲ್ಲಿ ಅಂಟಿಸಿ ಗೂಡು ರಚಿಸುತ್ತವೆ. ಹಲವು ಎತ್ತರ ಕಟ್ಟಡಗಳ ಗೋಡೆಯಲ್ಲೂ ಗೂಡು ರಚಿಸುತ್ತವೆ.

ಅಮೇರಿಕಾದ ಮಧ್ಯಭಾಗದಲ್ಲಿನ **ಕಪ್ಪು ಸ್ವಿಫ್ಟ್**ಗಳ ಪ್ರಭೇದಗಳು ಸಮುದ್ರ ಅಥವಾ ಒಳನೀರಿನ ಬಳಿಯ ಎತ್ತರ ಕಲ್ಲು ಪ್ರಪಾತಗಳಲ್ಲಿ ಮಾತ್ರ ಗೂಡು ರಚಿಸುತ್ತವೆ. ಗೂಡಿನ ರಚನೆಯಲ್ಲಿ ಹುಲ್ಲು, ಕಡ್ಡಿ, ಪಾಚಿ, ಜರೀಗಿಡಗಳ ಭಾಗವನ್ನೂ ಮತ್ತು ಮಣ್ಣನ್ನೂ ಉಪಯೋಗಿಸುತ್ತವೆ. ಕೆಲಸಮಯ ಜಲಪಾತಗಳ ಹಿಂದಿನ ಪ್ರಪಾತ ಗೋಡೆಗಳಲ್ಲಿ ಗೂಡು ರಚಿಸುತ್ತವೆ.

ದಕ್ಷಿಣ ಮತ್ತು ಮಧ್ಯ ಅಮೇರಿಕಾದಲ್ಲಿನ **ಕತ್ತರಿ ಬಾಲದ** ೨ ಪ್ರಭೇದಗಳು ಮೃದು ಗರಿಗಳನ್ನೂ ಜೊಲ್ಲನ್ನೂ ಸೇರಿಸಿ ಮೃದುಪದರದ ಕೊಳವೆಯಂತಹ ಗೂಡು ರಚಿಸುತ್ತವೆ. ಗೂಡು ೭ ಅಂಗುಲದಿಂದ ೨ ಅಡಿ ಉದ್ದವಿರಬಹುದು. ಪ್ರಪಾತಗಳ ಮುಖಗಳಿಗೆ ಅಥವಾ ಕೊಂಬೆಗಳಿಗೆ ಗೂಡನ್ನು ಅಂಟಿಸುತ್ತವೆ. ಗೂಡಿನ ತಳಭಾಗದಲ್ಲಿ ಒಳಹೋಗಲು ರಂಧ್ರವಿದ್ದು, ಅಗಲವಾದ ಮಧ್ಯಭಾಗದಲ್ಲಿ ಮೊಟ್ಟೆ ಕೋಣೆಯಿರುತ್ತದೆ.

ಆಫ್ರಿಕಾದ **ಪಾಮ್‌ಸ್ವಿಫ್ಟ್**(Palm Swift) ನ ಗೂಡುರಚನೆ ವಿಚಿತ್ರ. ತೆಂಗು ಮುಂತಾದ ಮರಗಳ ಎಲೆ ಗರಿಗಳ ತಳಭಾಗದಲ್ಲಿ ಮೃದು ಗರಿಗಳನ್ನು ಜೊಲ್ಲಿನಿಂದ ಮೆತ್ತೆಯಂತೆ ಮೊದಲು ಅಂಟಿಸಿ ಅದರ ಮಧ್ಯೆ ತನ್ನ ಎರಡು ಮೊಟ್ಟೆಗಳನ್ನು ಅಂಟಿಸುತ್ತವೆ. ಎಷ್ಟೇ ದೊಡ್ಡ ಬಿರುಗಾಳಿ ಬೀಸಿದರೂ ಆ ಮೊಟ್ಟೆಗಳು ಸಡಿಲವಾಗುವುದಿಲ್ಲ. ಪಕ್ಷಿ ನೇರವಾಗಿ ಎಲೆಗಂಟಿದಂತೆ ಅದರಮೇಲೆ ಕುಳಿತು ಕಾವೀಯುತ್ತದೆ. ಮರಿ ಜನಿಸಿದಾಗ ಪೂರ್ಣ ನಗ್ನವಾಗಿ ನಿಸ್ಸಹಾಯಕವಾಗಿದ್ದರೂ, ತಕ್ಷಣ ಗೂಡಿನ ಮೆತ್ತೆಯನ್ನು ಹಿಡಿದು, ಆದಕ್ಕೆ ಆನಿಸಿ ಮಲಗಿ ರೆಕ್ಕೆ ಬಲಿತು ಹಾರಾಡಲು ಶಕ್ತವಾಗುವವರೆಗೂ ಹಾಗೇ ಇರುತ್ತದೆ.

ಇಂಡೋಚೈನಾದಿಂದ ಆಸ್ಟ್ರೇಲಿಯಾವರೆಗಿನ ೩ ರಿಂದ ೬ ಅಂಗುಲ ಉದ್ದದ ಸಣ್ಣ **ಗುಹೆವಾಸಿ ಸ್ವಿಫ್ಟ್**ಗಳ ಗೂಡು ಅತ್ಯಂತ ಉಪಯುಕ್ತ. ಸಹಸ್ರಾರು ಸಂಖ್ಯೆಯಲ್ಲಿ ವಾಸಿಸುವ ಈ ಪ್ರಭೇದ ತಮ್ಮ ಗೂಡನ್ನು ಪೂರ್ಣವಾಗಿ ತಮ್ಮ ಜೊಲ್ಲಿನಿಂದಲೇ ರಚಿಸುತ್ತವೆ. ದಟ್ಟ ದೇಹದ, ನೀಳ ರೆಕ್ಕೆಯ, ಕಂದು ವರ್ಣದ, ವಿವಿಧ ಮಾದರಿಯ ಪಕ್ಷಿಗಳಿವು. ನೆಲಕ್ಕೆರಗಿದಂತೆ ಹಾರಾಡುತ್ತ ಹುಳು ಜೋಳಗಳನ್ನು ತಿನ್ನುತ್ತವೆ. ಬಟ್ಟಲಿನಾಕಾರದ ಗೂಡುಗಳನ್ನು ತಮ್ಮ ಜೊಲ್ಲಿನಿಂದಲೇ ರಚಿಸಿ ಗೋಡೆಗೆ ಅಂಟಿಸಿ ಮೊಟ್ಟೆಯಿಡುತ್ತವೆ. ಸಮುದ್ರದಡದ ಅಥವಾ ಒಳಭಾಗದ ಪ್ರಪಾತಗಳಲ್ಲಿನ ಗುಹೆಗಳಲ್ಲೇ ಈ ಗೂಡು ರಚಿಸುವುದು.

ಈ ಗೂಡುಗಳು ಬಿಸಿ ನೀರಿನಲ್ಲಿ ಸುಲಭವಾಗಿ ಕರಗುತ್ತವೆ. ಅದು ರುಚಿಕರ ಹಾಗೂ ಉತ್ತಮ ಆಹಾರವಾಗಿ, ಪಾಶ್ಚಿಮಾತ್ಯರೂ, ಜಪಾನ್, ಚೀನಾದವರೂ ಹೆಚ್ಚಾಗಿ ಸಾರು (ಸೂಪ್) ತಯಾರಿಸಲು ಉಪಯೋಗಿಸುತ್ತಾರೆ. ಇಂಡೋಚೀಣಾದಲ್ಲಿ ಪಕ್ಷಿಗಳು ಗೂಡು ಕಟ್ಟಿ ಮುಗಿಸಿದೊಡನೆ ನೀಳ ಬಿದಿರುಗಳನ್ನು, ಏಣಿಗಳನ್ನು ಉಪಯೋಗಿಸಿ ತೆಗೆದುಬಿಡುತ್ತಾರೆ. ಪಕ್ಷಿಗಳಿಗೆ ಪರ್ವಕಾಲದಲ್ಲಿ ಇನ್ನೊಂದು ಗೂಡನ್ನು ರಚಿಸುವಷ್ಟು ಜೊಲ್ಲಿರುವುದರಿಂದ ಎರಡನೇ ಸಲ ಬೇಗ ಗೂಡು ರಚಿಸುತ್ತವೆ. ಅದನ್ನೂ ಕಿತ್ತಲ್ಲಿ ಮೂರನೆ

ಗೂಡಿಗೆ ಜೊಲ್ಲು ಸಾಲದೆ ವಿವಿಧ ಸಾಮಗ್ರಿಗಳನ್ನು ಜೊತೆ ಸೇರಿಸಿ ಕಟ್ಟುತ್ತದೆ. ಅಂತಹ ಗೂಡಿಗೆ ಬೆಲೆ ಕಡಮೆ. ಇವುಗಳನ್ನು ಕರಗಿಸಿ ಅದರಲ್ಲಿನ ಸಸಾರಜನಕಾಂಶ ಹೆಚ್ಚಾಗಿರುವ ಜಿಲಾಟಿನ್ನನ್ನು ಬೇರ್ಪಡಿಸಿ, ಅದನ್ನು ಸಣ್ಣ ಚೂರು ಮಾಡಿ ಒಣಗಿಸಿ ಮಾರಾಟಮಾಡಲಾಗುತ್ತದೆ.

ಕುಟುಂಬ ೨ : ಹೆಮಿಪ್ರಾಕ್‌ನಿಡೀ (Hemiprocnidae)
(ಶಿಖೆ ಸ್ವಿಫ್ಟ್‌ಗಳು)

ಇವು ಆಗ್ನೇಯ ಏಷ್ಯಾದ ೩ ಮುಖ್ಯ ಪ್ರಭೇದಗಳು. ಇವುಗಳಿಗೆ ಕವಲೊಡೆದ ನೀಳ ಬಾಲವೂ, ಶಿಖೆಯೂ ಇರುತ್ತವೆ. ಕಾಲು ಸ್ವಲ್ಪ ನೀಳವಾಗಿ ಮರಗಳ ಕೊಂಬೆಯಲ್ಲಿ ರಾತ್ರಿ ಕುಳಿತು ವಿಶ್ರಮಿಸುತ್ತವೆ. ಗರಿ ಮೃದುವಾಗಿದ್ದು ವಿವಿಧ ಬಣ್ಣವಿರುತ್ತದೆ. ಗಂಡಿಗೆ ಬಣ್ಣ ಹೆಚ್ಚು. ಎರಡು ಪ್ರಭೇದಗಳಿಗೆ ಕಣ್ಣಿನ ಬಳಿ ನೀಳ ಬಿಳುಪು ಗರಿಗಳಿವೆ. ಸಾಮಾನ್ಯವಾಗಿ ಎತ್ತರವಾದ ಮರವಿರುವ ಕಾಡುಗಳಲ್ಲಿ ವಾಸಿಸುತ್ತಾ ಹಾರಾಡುವ ಕೀಟಗಳನ್ನು ಹಿಡಿದು ತಿನ್ನುತ್ತವೆ. ಬೆಳಗ್ಗೆ ಸಂಜೆ ಹೆಚ್ಚು ಕಾಲ ಹಾರಾಡುತ್ತಿರುತ್ತವೆ. ನೀರು ಬೇಕಾದಾಗ ನೀರಿನ ಮಟ್ಟಕ್ಕೆ ಹಠಾತ್ತಾಗಿ ಎರಗಿ ಸರಕ್ಕನೆ ಮೇಲೇರುತ್ತವೆ. ನೀರಿನಲ್ಲಿ ಮುಳುಗಲಾರವು.

ಎತ್ತರವಾದ ಮರಗಳ ಕೊಂಬೆಗಳಿಗೆ ಅಂಟಿಸಿದಂತೆ ಬಹು ಸಣ್ಣ ಗೂಡು ರಚಿಸುತ್ತವೆ. ಕೇವಲ ೧ ಅಂಗುಲ ಅಗಲ ೧/೪ ಅಂಗುಲ ಮಂದವಿದ್ದು ಅದರಲ್ಲಿ ತೊಗಟೆ ಚೂರುಗಳೂ ಹಲವು ಗರಿಗಳೂ ಸೇರಿರಬಹುದು. ಅದರ ಮಧ್ಯಕ್ಕೆ ತಮ್ಮ ಒಂದೇ ಮೊಟ್ಟೆಯನ್ನು ಅಂಟಿಸಿ ಕಾವಿತ್ತು ಮರಿಮಾಡುತ್ತವೆ.

ಕುಟುಂಬ ೩ : ಟ್ರೋಕಿಲಿಡೀ (Trochilidae)
(ಝೇಂಕಾರ ಪಕ್ಷಿಗಳು)

ಪಶ್ಚಿಮ ವಲಯದ ಅತ್ಯಂತ ಮನಮೋಹಕ ವರ್ಣರಂಜಿತ ಸಣ್ಣ ಪಕ್ಷಿಗಳ ೩೧೯ ಪ್ರಭೇದಗಳಿವು. ಅವುಗಳ ವಿವಿಧ ವರ್ಣ ಕಣ್ಣು ಕೋರೈಸುವಂತಿರುತ್ತದೆ. ಅವು ತಮ್ಮ ಬಹು ಸಣ್ಣ ಗಾತ್ರ ಮತ್ತು ರೆಕ್ಕೆಯ ವಿಚಿತ್ರ ರಚನಾ ವೈಶಿಷ್ಟ್ಯವನ್ನವಲಂಬಿಸಿ, ಕೀಟಗಳನ್ನು ಮಾತ್ರ ಉಪಯೋಗಿಸಲು, ಹೂವುಗಳಲ್ಲಿನ ಮಧುವನ್ನು ಹೀರಲು ಅನುಕೂಲತೆ ಹೊಂದಿರುತ್ತವೆ. ಅವುಗಳಲ್ಲಿನ ಆಶ್ಚರ್ಯದಾಯಕಶಕ್ತಿ ಬಹುಶಃ ಹೂವಿನ ಮಧುವಿನಿಂದಲೂ, ಅವುಗಳಲ್ಲಿ ವಾಸಿಸುವ ಕೀಟಗಳಿಂದಲೂ ದೊರಕಬಹುದಾಗಿದೆ. ಹಲವು ಇತರ ಕುಟುಂಬಗಳ ಪ್ರಭೇದಗಳೂ, ಹೂವಿನಲ್ಲಿನ ಜೇನು, ಪರಾಗ ಮತ್ತು ಹೂಭಾಗಗಳನ್ನು ಉಪಯೋಗಿಸಬಲ್ಲವಾದರೂ, ಪೂರ್ಣ ಜೇನನ್ನೇ ಅವಲಂಬಿಸಿರುವುವು ಹಲವು ಮಾತ್ರ. ಅವುಗಳಲ್ಲಿ ಹಾರಾಡುತ್ತಲೇ ಜೇನು ಶೇಖರಿಸುವುವು ಇವಲ್ಲದೆ ಬೇರೆ ಯಾವುವೂ ಇಲ್ಲ.

ವಿವಿಧ ಹೂವುಗಳ ರಚನೆ ಮತ್ತು ಗಾತ್ರ, ವಿವಿಧ ಪ್ರಭೇದಗಳ ಉತ್ಪನ್ನಕ್ಕೆ ಕಾರಣವಾಗಿವೆ. ಅವುಗಳಲ್ಲಿ ಅತ್ಯಂತ ಸಣ್ಣ ಗಾತ್ರದ್ದು ವೆಸ್ಟ್ ಇಂಡೀಸ್ ದ್ವೀಪವಾಸಿ ಜೇನು ನೊಣ ಝೇಂಕಾರ ಪಕ್ಷಿ. ಇದು ೨ ೧/೪ ಅಂಗುಲ ಮಾತ್ರ ಉದ್ದವಿದ್ದು ೨ ಗ್ರಾಂಗಿಂತ ಕಡಮೆ ತೂಕವಿರುತ್ತದೆ. ಅವುಗಳಲ್ಲಿ ಅತಿ ದಪ್ಪ ಗಾತ್ರದವು ಆಂಡೀಸ್ ಪರ್ವತದ ೨೦ ಗ್ರಾಂ ತೂಕ ೮ ೧/೨ ಅಂಗುಲ ನೀಳದವೇ.

ವರ್ಣದಲ್ಲಿಯೇ ಅಲ್ಲದೆ ಕೊಕ್ಕು ಮತ್ತು ನಾಲಗೆಗಳ ರಚನೆಯಲ್ಲೂ ವೈವಿಧ್ಯತೆ ಕಂಡುಬರುತ್ತದೆ. ಹೆಣ್ಣಿಗಿಂತ ಗಂಡಿಗೆ ವಿವಿಧ ಹೊಳಪು ವರ್ಣ ಹೆಚ್ಚು. ಕೊಕ್ಕುಗಳಲ್ಲೂ ಹೆಚ್ಚಿನ ವೈವಿಧ್ಯವಿದೆ. ಹಲವು ನೀಳವಾಗಿ ತೆಳ್ಳಗಿರುತ್ತವೆ. ಒಂದು ಪ್ರಭೇದದ ಕೊಕ್ಕು ಮೇಲ್ಬಾಗಿದೆ. ಕೊಂಡಿಯಂತೆ ಕೆಳಬಾಗಿರುವವು ಕೆಲವು. ಹಲವು ಪಕ್ಷಿಗಳ ಕೊಕ್ಕು ದೇಹಕ್ಕಿಂತ ನೀಳವಾಗಿರಬಲ್ಲವು. ಇವೆಲ್ಲವೂ ಅವುಗಳಿಗೆ ಆಹಾರ ಒದಗಿಸುವ ಹೂ ವೈವಿಧ್ಯತೆಗೆ ಅನುಗುಣವಾದ ಮಾರ್ಪಾಟುಗಳೇ.

ಇನ್ನೊಂದು ಮುಖ್ಯ ಅಂಗ ನಾಲಗೆ. ಅವುಗಳ ನಾಲಗೆ ಬಲು ಉದ್ದ. ಕೊಕ್ಕುಗಳಿಂದ ಮುಂಚಾಚಬಹುದು. ಹಲವು ಪ್ರಭೇದಗಳಿಗೆ ನಾಲಗೆಯ ತುದಿ ಭಾಗ ಕೊಳವೆಯಂತಿದ್ದು ಮಧು ಹೀರಲು ಅನುಕೂಲವಾಗಿರುತ್ತದೆ. ತುದಿಯಲ್ಲಿ ಕೂದಲಿನ ಕುಂಚವಿರಬಹುದು. ಈ ವೈವಿಧ್ಯತೆಗಳಿಂದ ಯಾವುದೇ ವಿಧದ ಹೂವುಗಳಲ್ಲಿನ ಮಧುವನ್ನು ಅವು ಹೀರಬಲ್ಲವು.

ಪ್ರಣಯ ಕಾಲದಲ್ಲಿ ಸಹಾಯಕವಾಗುವಂತೆ ಹಲವು ಪ್ರಭೇದಗಳಿಗೆ ಶಿಖೆ, ಪಂಕ ಅಥವಾ ಗಡ್ಡದಂತಹ ವರ್ಣರಂಜಿತ ಪುಕ್ಕಗಳ ಬೆಳವಣಿಗೆಯಿರುತ್ತದೆ. ಬಾಲವೂ ಗಿಡ್ಡವಾಗಿ, ಅದರ ತುದಿ ದುಂಡಗೆ, ಅಥವಾ ನೀಳವಾಗಿ ಕವಲೊಡೆದಂತಿರಬಹುದು. ಒಂದು ಪ್ರಭೇದಕ್ಕೆ ೨ ನೀಳ ಬಾಲಗರಿಗಳಿವೆ. ತುದಿ ಅಗಲವಾಗಿದ್ದು, ಹಾರಾಡುವಾಗ ಈ ಗರಿಗಳು ಹಿಂದೆ ತೇಲಾಡುತ್ತಾ ಅತ್ಯಂತ ಮೋಹಕವಾಗಿ ಕಾಣಿಸುತ್ತವೆ. ಈ ಪ್ರಭೇದ ಆಂಡೀಸ್ ಪರ್ವತದ ಒಂದು ಕಣಿವೆಯಲ್ಲಿ ಮಾತ್ರ ಹಲವೇ ಸಂಖ್ಯೆಯಲ್ಲಿ ವಾಸವಾಗಿವೆ.

ಹಾರಾಡುವಾಗ ಅವು ಅತಿ ತೀವ್ರವಾಗಿ ರೆಕ್ಕೆ ಬಡಿಯುವುದರಿಂದ ಝೇಂಕಾರ ಶಬ್ದ ಉಂಟಾಗುತ್ತದೆ. ಆದ್ದರಿಂದಲೇ ಅದಕ್ಕೆ ಆ ಹೆಸರು. ರೆಕ್ಕೆಯ ಚಲನೆ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಸಾಮಾನ್ಯವಾಗಿ ಝೇಂಕಾರ ಪಕ್ಷಿ ಗಂಟೆಗೆ ೬೦ ಮೈಲಿ ವೇಗದಲ್ಲಿ ಹಾರಾಡಬಲ್ಲದು. ಚಳಿಗಾಲದಲ್ಲಿ, ಒಂದು ಪ್ರಭೇದ ಮೆಕ್ಸಿಕೋ ಕೊಲ್ಲಿಯನ್ನು ದಾಟಿ ೫೦೦ ಮೈಲಿಗಳಷ್ಟು ದೂರ ವಲಸೆ ಹೋಗುತ್ತದೆ. ಅತ್ತಿತ್ತ ಹಾರಾಡುವುದರಲ್ಲೂ, ಪಕ್ಕದಿಂದ ಪಕ್ಕಕ್ಕೆ, ಮೇಲಿನಿಂದ ಕೆಳಕ್ಕೆ ಹಾಗೂ ತಟಸ್ಥವಾಗಿ ಒಂದೆಡೆಯೇ ತೇಲಾಡುತ್ತಿರುವಂತೆ ನಿಂತಿರುವುದರಲ್ಲಿಯೂ ಯಾವ ಪಕ್ಷಿಯೂ ಇದನ್ನು ಮೀರಿಸುವಂತಿಲ್ಲ. ಇಂದಿನ ಹೆಲಿಕಾಪ್ಟರ್‌ಗಳ ರಚನೆ ಇದರ ಚಲನವನ್ನೇ ಅನುಕರಿಸಿದೆಯೆಂದರೆ ಅತಿಶಯೋಕ್ತಿಯೇನಲ್ಲ.

ಅವು ಹೂವಿನೆಡೆಗೆ ಗುಂಡಿನ ವೇಗದಲ್ಲಿ ಹಾರಿ, ಹೂವಿನ ಬಳಿ ಚಲಿಸದಂತೆ ತಟಸ್ಥವಾಗಿ ಕೆಲಸಮಯ ತೇಲಿ ನಿಂತು, ಮಧು ಹೀರಿ ಹಿಂದಕ್ಕೆ ಸರಿದು, ಪುನಃ ಇನ್ನೊಂದು ಹೂವಿನೆಡೆ ಹಾರುತ್ತವೆ. ಹಿಂದಕ್ಕೆ ಹಾರಬಲ್ಲ ಶಕ್ತಿ ಇರುವುದು ಇವುಗಳಿಗೆ ಮಾತ್ರ. ಒಂದು ಸೆಕೆಂಡಿಗೆ ೫೫ರಿಂದ ೨೦೦ ಸಲ ರೆಕ್ಕೆ ಬಡಿಯಬಲ್ಲವು. ಈ ರೆಕ್ಕೆ ಚಲನೆಯ ಶಕ್ತಿಯಿರುವುದು ಕೀಟಗಳಿಗೆ ಮಾತ್ರ. ಪಕ್ಷಿ ಕುಲದಲ್ಲಿ ಈ ಪಕ್ಷಿಗಳಿಗೆ ಮಾತ್ರ ಆ ಶಕ್ತಿ ಒದಗಿದೆ. ರೆಕ್ಕೆಯ ತ್ವರಿತ ಚಲನೆಯಿಂದಲೇ ಝೇಂಕಾರ ಶಬ್ದವಾಗುತ್ತದೆ. ಈ ಚಲನೆ ಸಾಧ್ಯವಾಗಲು ಅದಕ್ಕೆ ಬಹು ಹೆಚ್ಚಿನ ಸ್ನಾಯುಗಳ ಅನುಕೂಲತೆ ಏರ್ಪಟ್ಟು, ಒಟ್ಟು ತೂಕದ ಶೇ. ೨೫–೩೦ ಭಾಗದಷ್ಟಿರುತ್ತದೆ. ಅವುಗಳ ಮೇಲುಗೈ ಗಿಡ್ಡವಾಗಿ, ನೀಳ ರೆಕ್ಕೆ ಮುಂದಕ್ಕೆ ಬಾಗಿದಂತೆ ಜೋಡಣೆಯಾಗಿರುತ್ತದೆ. ಅದನ್ನು ಅತ್ತಿತ್ತ ತಿರುವಲೂ ಅವಕಾಶವಿದೆ. ಇವೆಲ್ಲದರಿಂದಲೇ ಅವು ಅತ್ಯುತ್ತಮವಾಗಿ ಇಷ್ಟಬಂದಂತೆ ಚಲಿಸಲು ಅನುಕೂಲತೆ ಏರ್ಪಟ್ಟಿರುವುದು. ಅವುಗಳ ಹಗುರ ಸಣ್ಣ ಗಾತ್ರದ ದೇಹ ಇದಕ್ಕೆ ಹೊಂದಾಣಿಕೆಯಾಗಿದೆ.

ಇವುಗಳ ಚಲನೆಗೆ ಹೆಚ್ಚಿನ ಆಹಾರದ ಅಗತ್ಯವಿದೆ. ಅವು ವಲಸೆ ಹೋಗುವಾಗ ಆಹಾರವನ್ನು ಚರ್ಮದಡಿಯಲ್ಲಿ ಕೊಬ್ಬಿನ ಪದರವಾಗಿ ಶೇಖರಿಸಿಟ್ಟುಕೊಂಡಿರುತ್ತವೆ. ಆದ್ದರಿಂದಲೇ ಅತಿ ಶಕ್ತಿದಾಯಕ ಜೇನು ಅದರ ಆಹಾರವಾಗಿರುವುದು. ಅಲ್ಲದೆ ರಾತ್ರಿವೇಳೆಯಲ್ಲಿ ಅವು ವಿಶ್ರಮಿಸುವಾಗ ಅವುಗಳ ದೇಹ ಉಷ್ಣತೆ ಹಠಾತ್ತಾಗಿ ಕಡಮೆಯಾಗುವುದರಿಂದ, ವಿಶ್ರಮಿಸುವ ಸಮಯದಲ್ಲಿ ಆಹಾರ ಉಪಯೋಗ ಕಡಮೆಯಾಗುತ್ತದೆ. ಹೂವಿನ ಮಧ್ಯೆ ಇರಬಹುದಾದ ಸಣ್ಣ ಕೀಟಗಳನ್ನು ಅವು ತಿನ್ನಬಲ್ಲವು. ಅವುಗಳಿಂದ ಹೂವುಗಳಿಗೂ ಅನುಕೂಲವಿದೆ. ತಲೆಗೆ ಪರಾಗ ಅಂಟಿ ಅದರಿಂದ ಹೂವಿನಲ್ಲಿ ಗರ್ಭೋತ್ಪತ್ತಿಗೆ ಅನುಕೂಲವಾಗುತ್ತದೆ. ಕೆಲವು ಪ್ರಭೇದ ಮಾತ್ರ ಕೀಟಾಹಾರಿಗಳು. ಹಾರಾಡುತ್ತಾ ಕೀಟಗಳನ್ನು ಹಿಡಿಯುತ್ತವೆ. ಜೇಡಗಳನ್ನೂ ತಿನ್ನಬಲ್ಲುವು.

ಅವುಗಳ ಅಪೂರ್ವ ಹೊಳಪಿನ ಗರಿ ಬಣ್ಣದ ವೈವಿಧ್ಯತೆಯಿಂದಾಗಿ ಅವುಗಳ ಚರ್ಮಕ್ಕೆ ಹೆಚ್ಚಿನ ಬೆಲೆಕೊಟ್ಟು ಮಹಿಳೆಯರ ಉಡುಪಿನ ಅಲಂಕಾರಕ್ಕಾಗಿ ಉಪಯೋಗಿಸುತ್ತಿದ್ದರು. ೧೯ನೇ ಶತಮಾನದಲ್ಲಿ ಒಂದೇ ವರ್ಷದಲ್ಲಿ ಲಂಡನ್ ವರ್ತಕನೊಬ್ಬ ವೆಸ್ಟ್ ಇಂಡೀಸ್ ದ್ವೀಪಗಳಿಂದ ೪ ಲಕ್ಷ ಚರ್ಮ ಆಮದುಮಾಡಿದ್ದ ! ಈಗ ಅದರ ಉಪಯೋಗ ಪೂರ್ಣ ನಿಂತಿದೆ.

ಇವುಗಳಲ್ಲಿ ಗಂಡು ಬಹುಪತ್ನೀಕ. ಒಂದೇ ಪ್ರಭೇದದ ಗಂಡು ಮಾತ್ರ ಕಾವು ಕೂರಲು ಸಹಕರಿಸುತ್ತದೆ. ಗಂಡು ತನ್ನ ಸ್ಥಳ ವ್ಯಾಪ್ತಿಯನ್ನು ಸ್ಥಾಪಿಸಿ, ವರ್ಣರಂಜಿತವಾದ ಗರಿಗಳನ್ನು ಕೆದರಿ ಹಿಡಿದು, ಹೆಣ್ಣನ್ನು ಆಕರ್ಷಿಸಲು ತೂಗುತ್ತಾ ಹಾರಾಡುತ್ತಿರುತ್ತವೆ. ಆಕರ್ಷಿತವಾದ ಹೆಣ್ಣಿನೊಡನೆ ಹಾರಾಡುತ್ತಿರುವಾಗಲೇ ಸಂಭೋಗ. ಆದ್ದರಿಂದ ಪ್ರತಿ ಗಂಡೂ ಅನೇಕ ಹೆಣ್ಣುಗಳನ್ನು ಹೊಂದುತ್ತದೆ. ಹೆಣ್ಣೇ ಗೂಡು ರಚಿಸುವುದು. ಮರದ ಕೊಂಬೆಗೆ ಅಂಟಿದಂತೆ ಮೃದುಗರಿ, ಸಸ್ಯಭಾಗ ಮತ್ತು ಜೇಡರ

ಬಲೆ ಸೇರಿಸಿ ಬಟ್ಟಲಿನಂತಹ ಗೂಡು ರಚಿಸಿ ೨ ಮೊಟ್ಟೆಯಿಡುತ್ತವೆ. ಕಾವಿನ ಅವಧಿ ೧೪ – ೨೦ ದಿನ. ನಿಸ್ಸಹಾಯಕ ಮರಿ ಬೆಳೆಯಲು ೨೦ – ೨೫ ದಿನಗಳು ಬೇಕು. ಗಂಡುಗಳು ಜಗಳಗಂಟಿಗಳು. ಹಲವು ವೇಳೆ ದೊಡ್ಡ ಗಾತ್ರದ ಪಕ್ಷಿಗಳನ್ನೂ, ನಾಯಿಗಳನ್ನೂ ಕೂಡ ಅಟ್ಟಿಸಿಕೊಂಡು ಹೋಗುತ್ತವೆ.

ಉಪವರ್ಗ ೨೩ : ಕೋಲಿಫಾರ್ಮಿಸ್ (Coliiformes)

ಕುಟುಂಬ ೧

ಪ್ರಭೇದ ೬

ಕೋಲಿಡೀ (Coliidae)

ರೈತನಿಗೆ ವಿನಾಶಕಾರಿಯಾದ ದ. ಆಫ್ರಿಕದ ಪಕ್ಷಿಗಳಿವು. ಸುಮಾರು ೧ ಅಡಿ ಉದ್ದದ ಬಹು ಉದ್ದ ಬಾಲದ, ಶಿಖೆಹೊಂದಿರುವ ಪಕ್ಷಿಗಳು. ಕಂದು ಅಥವಾ ಬೂದು ಬಣ್ಣವಿದ್ದು, ಕೆಂಪುವರ್ಣದ ಕಾಲು, ಮುಖ ಹೊಂದಿರುತ್ತವೆ. ಅವು ಇಲಿಗಳಂತೆ ಮರದಮೇಲೆಲ್ಲಾ ಓಡಾಡುತ್ತವಾದ್ದರಿಂದ ಅವುಗಳನ್ನು 'ಇಲಿಪಕ್ಷಿ'ಗಳೆಂದು ಕರೆಯು ಲಾಗುತ್ತದೆ. ಚಲನೆಯಲ್ಲಿ ತಮ್ಮ ಕೊಕ್ಕನ್ನು ಉಪಯೋಗಿಸುತ್ತವೆ. ನೇರವಾಗಿ ಅಡ್ಡ ಅಥವಾ ತಲೆಕೆಳಕಾಗಿ ಇದ್ದು, ಆಹಾರ ಹೊಂಚುತ್ತವೆ. ಅವುಗಳ ಹಿಂಬೆರಳು ಎರಡು ಕಡೆಗೂ ತಿರುಗಿಸುವಂತಿರುತ್ತವೆ. ಉಗುರು ನೀಳವಾಗಿ ಮೊನಚಾಗಿದೆ. ಮರ ಹತ್ತಲು ಇವು ಸಹಾಯಕ. ಕೊಕ್ಕು ಸಣ್ಣ, ಬುಡ ದಪ್ಪಗೆ, ಮೃದುವಾಗಿರುತ್ತದೆ.

ಸಂಘಜೀವಿಗಳು. ೨೦ – ೩೦ರ ಗುಂಪಾಗಿ ವಾಸಿಸುತ್ತವೆ. ಆಹಾರ ಹುಡುಕು ವಾಗ ಮರದ ಮೇಲಿನಿಂದ, ಪಕ್ಕದ ಮರದ ಬುಡಕ್ಕೆ ತೇಲಿ ಇಳಿದು ಆ ಮರವನ್ನು ಆಹಾರ ಅರಸುತ್ತಾ ಇಲಿಯಂತೆ ಹತ್ತುತ್ತವೆ. ನೆಲದ ಮೇಲೂ ನಡೆಯಬಲ್ಲವು. ದೂಳು ಸ್ನಾನ ಇಷ್ಟ. ವಿಶ್ರಮಿಸುವಾಗ ಗುಂಪಾಗಿ ಒಂದಕ್ಕೊಂದು ಸೇರಿದಂತೆ ಕುಳಿತಿರುತ್ತವೆ. ಹಲವು ಪ್ರಭೇದಗಳು ಕೊಂಬೆಯಲ್ಲಿ ತಲೆಕೆಳಗಾಗಿ ನೇತಾಡಿ ನಿದ್ರಿಸುತ್ತವೆ.

ಹಣ್ಣು, ಹೂವು, ಕಾಯಿ, ಬೀಜ, ಮೊಗ್ಗುಗಳೇ ಮುಖ್ಯ ಆಹಾರ. ಹಣ್ಣು ತೋಟಗಳಿಗೆ ಅವು ಹೆಚ್ಚಿನ ನಷ್ಟ ಉಂಟುಮಾಡುತ್ತವೆ. ಹಣ್ಣುಗಳನ್ನು ಒಂದೆಡೆ ಕುಕ್ಕಿ ತಿರುಳನ್ನೆಲ್ಲಾ ತಿಂದುಬಿಡುತ್ತವೆ, ಎಳೆ ಕೊಂಬೆಗಳಲ್ಲಿನ ಮೊಗ್ಗು ತೊಗಟೆಗಳನ್ನು ಹರಿದು ನಾಶಪಡಿಸುತ್ತವೆ. ಹಲವು ವೇಳೆ ಇತರ ಪಕ್ಷಿಗಳ ನಿಸ್ಸಹಾಯಕ ಮರಿಗಳನ್ನು ತಿನ್ನುತ್ತವೆ.

ಪರ್ವಕಾಲದಲ್ಲಿ ಮರಗಳ ದಟ್ಟ ಎಲೆಗಳ ನಡುವೆ ಪ್ರತಿ ಜೊತೆಯೂ ದೊಡ್ಡ ಗೂಡು ರಚಿಸುತ್ತವೆ. ಕಡ್ಡಿಗಳ ಅಗಲ ವೇದಿಕೆಯ ಮೇಲೆ ಹುಲ್ಲು, ಬೇರು, ತೊಗಟೆ ಗಳಿಂದ ಬಟ್ಟಲಿನಂತಹ ಗೂಡನ್ನು ಹೆಣೆದು ಅದರೊಳಗೆ ಹುಲ್ಲು, ಎಲೆಗಳ ಮೆತ್ತೆ ಏರ್ಪಡಿಸುತ್ತವೆ. ೨ – ೬ ಮೊಟ್ಟೆಯಿಟ್ಟು, ಹೆಣ್ಣು ಗಂಡುಗಳೆರಡೂ ೧೨ – ೧೫ ದಿನಗಳು ಕಾವು ಕೊಟ್ಟು, ನಿಸ್ಸಹಾಯಕ ಮರಿಗಳು ಜನಿಸಲು ಸಹಾಯಕವಾಗುತ್ತವೆ.

ಮರಿಗಳಿಗೆ ಅರ್ಧ ಜೀರ್ಣಿತ ಆಹಾರ ಕಕ್ಕಿ ಉಣ್ಣಿಸುತ್ತವೆ. ಮರಿಗಳು ಹಲವು ದಿನಗಳಲ್ಲೇ ತಮ್ಮ ಕಾಲು, ಕೊಕ್ಕು, ರೆಕ್ಕೆಗಳನ್ನು ಉಪಯೋಗಿಸಿ ಕೊಂಬೆಗಳ ಮೇಲೆಲ್ಲಾ ಹರಿದಾಡಿ ರಾತ್ರಿ ಮಾತ್ರ ಹಿಂತಿರುಗುತ್ತವೆ.

ಉಪವರ್ಗ ೨೪ : ಟ್ರೊಗೋನಿಫಾರ್ಮಿಸ್ (Trogoniformes)

ಕುಟುಂಬ ೧

ಪ್ರಭೇದ ೩೫

ಟ್ರೊಗೋನಿಡಿ (Trogonidae)

ಪ್ರಪಂಚದ ಉಷ್ಣವಲಯದ ಕಾಡುಗಳಲ್ಲೆಲ್ಲಾ ಒಂಟೊಂಟಿಯಾಗಿ ವಾಸಿಸುವ ವರ್ಣರಂಜಿತವಾದ ೩೫ ಪಕ್ಷಿ ಪ್ರಭೇದಗಳಿವು. ಇದರಲ್ಲಿನ ಸುಮಾರು ೨೦ ಪ್ರಭೇದಗಳು ಪಶ್ಚಿಮವಲಯದಲ್ಲಿ ಮೆಕ್ಸಿಕೋದಿಂದ ದಕ್ಷಿಣಕ್ಕೆ ಅರ್ಜೆಂಟೈನಾವರೆಗಿನ ಕಾಡಂಗಳಲ್ಲಿ ವಾಸಿಸುತ್ತವೆ. ೧೨ ಪ್ರಭೇದ ಭಾರತದಿಂದ ಜಾವಾವರೆಗಿನ ಕಾಡುಗಳಲ್ಲಿವೆ. ಆಫ್ರಿಕಾದ ಕಾಡುಗಳಲ್ಲಿ ೩ ಪ್ರಭೇದಗಳಿವೆ.

ಅವುಗಳ ಅಂಗರಚನೆಯಲ್ಲಿ ಅನೇಕ ವೈಚಿತ್ರ್ಯಗಳಿವೆ. ಕಾಲು ಗಿಡ್ಡ, ಪಾದದವರೆಗೂ ಗರಿಗಳಿಂದಾವೃತ. ಬೆರಳುಗಳಲ್ಲಿ ಎರಡು ಮುಂದು, ಎರಡು ಹಿಂದು. ಇತರ ಪಕ್ಷಿಗಳಿಗೆ ಹಿಂಬೆರಳಿದ್ದರೂ ಅದು ನಾಲ್ಕನೆಯ ಬೆರಳು. ಆದರೆ ಇವುಗಳಿಗೆ ಮೂರನೆಯ ಬೆರಳೇ ಹಿಂದೆ ಸರಿದಿರುತ್ತದೆ. ಮುಂದಿನ ಎರಡು ಬೆರಳುಗಳೂ ಬುಡದಲ್ಲಿ ಸೇರಿಕೊಂಡಂತಿರುತ್ತವೆ.

ಅವುಗಳ ಚರ್ಮ ಅತ್ಯಂತ ತೆಳುವಾಗಿದ್ದು ಪುಕ್ಕವೆಲ್ಲಾ ಸಡಿಲವಾಗಿ ಸಿಕ್ಕಿಸಿದಂತಿರುತ್ತದೆ. ಚರ್ಮ ಪೂರ್ಣವಾಗಿ ಹರಿಯದೆ ಸುಲಿಯುವುದಸಾಧ್ಯ. ಅವುಗಳ ವರ್ಣ ವೈವಿಧ್ಯತೆ ಹೆಚ್ಚಿದ್ದು ಸುಂದರ ಪಕ್ಷಿಗಳು. ಸುಮಾರು ೧ ಅಡಿ ಉದ್ದದ ನೀಳ ಚೌಕ ತುದಿ ಬಾಲದವು. ಮೇಲ್ಭಾಗ ಅಚ್ಚ ಹಸಿರು, ದಟ್ಟ ನೀಲಿ ಬಣ್ಣ ಹೊಂದಿ ತಳಭಾಗ ವಿವಿಧ ಬಣ್ಣಗಳಿಂದ ಕೂಡಿರುತ್ತವೆ. ಕೀಟಾಹಾರಿಗಳೇ ಅಲ್ಲದೆ ಅವು ಪೂರ್ಣ ಸ್ಥಳ ವಾಸಿಗಳು. ತಮ್ಮ ಸ್ಥಳದಲ್ಲೂ ಬಹುದೂರ ಹೋಗುವುದಿಲ್ಲ.

ಅವುಗಳ ಗಿಡ್ಡ ಕೊಕ್ಕು ಚಪ್ಪಟೆಯಾಗಿ, ಬಹಳ ಅಗಲವಾಗಿರುತ್ತದೆ. ಬುಡದಲ್ಲಿ ನೀಳ ಕೂದಲು ಗುಚ್ಛವಿರುತ್ತದೆ. ಹಾರಾಡುವಾಗ ಕಾಣುವ ಹುಳು, ಹಣ್ಣುಗಳನ್ನು ಹಿಡಿದುತಂದು ಕೊಂಬೆಯ ಮೇಲೆ ಕುಳಿತು ತಿನ್ನುತ್ತವೆ. ಬಹುದೂರ ಹಾರಲಾರದು. ಎಲ್ಲವೂ ಪೊದರು ಗೂಡಿನವು. ಮರದ ಪೊದರುಗಳಲ್ಲೇ ಮೊಟ್ಟೆಯಿಡುವುದು. ಹುತ್ತಗಳಲ್ಲೂ ಹಲವು ಗೂಡು ರಚಿಸುತ್ತವೆ. ಹಲವು ಕಣಜಗಳ ಗೂಡಿನಲ್ಲಿನ ಕಣಜಗಳನ್ನೂ ಮರಿಗಳನ್ನೂ ಪೂರ್ಣತಿಂದು ಅದನ್ನು ತಮ್ಮ ಗೂಡಿಗಾಗಿ ಉಪಯೋಗಿಸುತ್ತವೆ. ಗೂಡಿನಲ್ಲಿ ೨ – ೪ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ ಕಾವಿಟ್ಟು ಮರಿಮಾಡುತ್ತವೆ. ಮರಿ ಜನಿಸಿದಾಗ ನಿಸ್ಸಹಾಯಕವಾಗಿರುತ್ತದೆ.

ಮೆಕ್ಸಿಕೋ ಬಳಿಯ ಕ್ವೆಟ್ಸೆಲ್‌ಗಳು ಅತ್ಯಂತ ಸುಂದರ ಪಕ್ಷಿಗಳು. ಸಮುದ್ರ ಮಟ್ಟದಿಂದ ೫೦೦೦ ಅಡಿ ಎತ್ತರದಲ್ಲಿರುವ ದಟ್ಟಡವಿಗಳಲ್ಲಿ ವಾಸವಿರುವ ವರ್ಣರಂಜಿತ ಪಕ್ಷಿಗಳಿವು. ಗಂಡಿಗೆ ಪರ್ವಕಾಲದಲ್ಲಿ ೪ ಗರಿಗಳು ನೀಳವಾಗಿ ಹೊಳೆಯುವ ಹಸಿರು ವರ್ಣವಾಗಿರುತ್ತವೆ. ಮಾಯಾಅಲೆರ್ ಜನಾಂಗದವರು ಅದನ್ನು ಆರಾಧಿಸುತ್ತಿದ್ದರು. ಅದು ಗ್ವಾಟೆಮಾಲದ ರಾಷ್ಟ್ರಪಕ್ಷಿಯಾಗಿದೆ.

ಉಪವರ್ಗ ೨೫ : ಕೊರಾಸಿಫಾರ್ಮಿಸ್ (Coraciiformes)

ಕುಟುಂಬ ೭

ಪ್ರಭೇದ ೧೯೨

ಈ ಉಪವರ್ಗದ ಪಕ್ಷಿಗಳಿಗೆ ಮೂರು ಮುಂಬೆರಳುಗಳೂ ಅರ್ಧಭಾಗದವರೆಗೆ ಒಟ್ಟುಗೂಡಿದಂತಿವೆ. ಇವೆಲ್ಲವೂ ಉಷ್ಣ ಮತ್ತು ಸಮಶೀತೋಷ್ಣವಲಯದ ಪಕ್ಷಿಗಳು. ಎಲ್ಲವೂ ದಪ್ಪ ಕೊಕ್ಕಿನ, ವಿವಿಧ ವರ್ಣದ ಪಕ್ಷಿಗಳು. ೪ ಅಂಗುಲದಿಂದ ೫ ಅಡಿ ವರೆಗಿನ ದೇಹ. ಸಾಮಾನ್ಯವಾಗಿ, ಹುಲ್ಲು, ಕೀಟ, ಸರೀಸೃಪ, ದ್ವಿಚರ, ಕಶೇರುಕ ಪ್ರಾಣಿಗಳೇ ಮುಖ್ಯಾಹಾರ. ಹಲವು ಹಣ್ಣು ಕಾಯಿಗಳನ್ನು ತಿನ್ನುವುವು. ನದಿ ದಡದಲ್ಲೇ ಬಿದ್ದ ಮರಗಳನ್ನು ಕೊರೆದು ಗೂಡು ರಚಿಸುತ್ತವೆ. ೨ - ೬ ಮೊಟ್ಟೆ ಯಿಡುತ್ತವೆ. ಮರಿಗಳು ನಿಸ್ಸಹಾಯಕವಾಗಿ ಜನಿಸಿ ಗೂಡಿನಲ್ಲೇ ಬೆಳೆಯುತ್ತವೆ. ಹೂಪೋಗಳಲ್ಲಿ ಮಾತ್ರ ಮರಿಗಳಿಗೆ ಹೊಚ್ಚಡವಿರುತ್ತದೆ.

ಅವು ಪೂರ್ವವಲಯದ ಉಷ್ಣ ಮತ್ತು ಸಮಶೀತೋಷ್ಣವಲಯಗಳಲ್ಲಿ ವಾಸಿಸು ವುದು ಹೆಚ್ಚು. ಬಹು ಪ್ರಭೇದಗಳು ಸ್ಥಳವಾಸಿಗಳು. ಹಲವು ಮಾತ್ರ ವಲಸೆ ಹೋಗುವುವು.

ಕುಟುಂಬ ೧ : ಆಲ್‌ಸೆಡಿನಿಡೀ (Alcedinidae)

(ಮಿಂಚುಳ್ಳಿ)

ಪೂರ್ವವಲಯಗಳಲ್ಲಿ ಆಗ್ನೇಯ ಏಷ್ಯಾದಿಂದ ಆಸ್ಟ್ರೇಲಿಯಾದವರೆಗಿನ ಪ್ರದೇಶ ಗಳಲ್ಲಿ ಹೆಚ್ಚಾಗಿರುವ ಪಕ್ಷಿಗಳಿವು. ೬೦ ಪ್ರಭೇದಗಳಿವೆ. ಪಶ್ಚಿಮವಲಯದಲ್ಲಿ ೬ ಮತ್ತು ಆಫ್ರಿಕಾದಲ್ಲಿ ೧೫ ಪ್ರಭೇದಗಳೂ ಸೇರಿ ಒಟ್ಟು ೮೫ ಪ್ರಭೇದಗಳಿರುವ ಕುಟುಂಬವಿದು. ದುಂಡು ದೇಹದ ಗಿಡ್ಡ ಕತ್ತಿನ ಮತ್ತು ಬಾಲವಿರುವ ದಪ್ಪ ತಲೆಯ ಪಕ್ಷಿಗಳು. ಕೊಕ್ಕು ದಪ್ಪವಾಗಿ ಉದ್ದವಾಗಿರುತ್ತವೆ. ಮುಂಬೆರಳುಗಳೆರಡೂ ಅರ್ಧದ ವರೆಗೆ ಅಂಟಿರುತ್ತದೆ. ಉಜ್ವಲ ವರ್ಣದ ಮೈಯಲ್ಲಿ ಬಿಳಿಯ, ಕೆಂಪಿನ ಅಥವಾ ಇತರ ವರ್ಣದ ಮಚ್ಚೆ ಅಥವಾ ಪಟ್ಟೆಗಳಿರುತ್ತವೆ. ಕೆಲವು ಪ್ರಭೇದಗಳಿಗೆ ಶಿಖೆಯಿದೆ. ಕೊಕ್ಕು ಕೆಂಪು ಅಥವಾ ಹಳದಿ ವರ್ಣವಿರಬಹುದು.

ಇವುಗಳಲ್ಲಿ ಎರಡು ಪಂಗಡಗಳಿವೆ. ಮೊದಲನೆಯ ಪಂಗಡಕ್ಕೆ ಸಾಮಾನ್ಯ ಮಿಂಚುಳ್ಳಿಗಳೆಲ್ಲಾ ಸೇರುತ್ತವೆ. ಎರಡನೆಯದಕ್ಕೆ ದಪ್ಪಗಾತ್ರದ, ಪೂರ್ವವಲಯದ

ಕಾಡು ಪ್ರಭೇದಗಳು ಸೇರಿವೆ. ಇವುಗಳಿಗೆ ಕೊಕ್ಕು ಚಪ್ಪಟೆಯಾಗಿ ದಪ್ಪವಿದ್ದು ಅದರ ಮೊನಚು ತುದಿ ಕೊಕ್ಕೆಯಂತೆ ಕೆಳಬಾಗಿರಬಹುದು. ಸಣ್ಣ ಮೀನು, ಸೀಗಡಿ, ಸರೀಸೃಪ ಗಳು ಮತ್ತು ವಿವಿಧ ಜಲಕೀಟಗಳು ಮುಖ್ಯಾಹಾರ. ನೀರಿನ ಮೇಲೆ ಬಾಗಿರುವ ಅಥವಾ ಪಕ್ಕದಲ್ಲಿರುವ ಮರ ಕೊಂಬೆಗಳಲ್ಲಿ ಕುಳಿತಿದ್ದು ಆಹಾರ ಕಂಡೊಡನೇ ಹಠಾತ್ತಾಗಿ ಎರಗಿ ಮುಳುಗಿ ಹಿಡಿದು ತನ್ನ ಸ್ಥಳಕ್ಕೆ ಹಿಂತಿರುಗಿ ತಿನ್ನುತ್ತವೆ. ನೀರಿನಮೇಲೂ ಹಾರಾಡುತ್ತಾ ಇದ್ದು ಆಹಾರ ಕಂಡದ್ದೇ ಎರಗಿ ಹಿಡಿಯಬಲ್ಲವು.

ಇವುಗಳಲ್ಲೆಲ್ಲಾ ಭಾರತದಿಂದ ಫಿಲಿಪೈನ್ಸ್‌ವರೆಗಿನ ನದಿ, ಕೊಳ, ಝರಿಗಳ ಸಮೀಪ ವಾಸಿಗಳಾದ ೧೦ ಪ್ರಭೇದಗಳು ಗಾತ್ರದಲ್ಲಿ ಸಣ್ಣವಾಗಿದ್ದು, ಹೊಳಪು ವರ್ಣ ಹೊಂದಿರು ವುವು. ಸಣ್ಣ ಮೀನು, ಸೀಗಡಿ, ಕಪ್ಪೆ, ಕಪ್ಪೆಮರಿ ಮತ್ತು ವಿವಿಧ ಕೀಟಗಳನ್ನೂ ತಿನ್ನು ತ್ತವೆ. ದ. ಅಮೇರಿಕಾ, ಜಪಾನುಗಳ ಬಳಿಯ ಪ್ರಭೇದಗಳೂ ಮೀನು, ಸೀಗಡಿ ಯನ್ನು ತಿನ್ನುವವೇ.

ನದೀ ತೀರ ವಾಸಿಗಳೆಲ್ಲಾ ಸುರಂಗ ರಚಿಸಿ ಗೂಡು ಕಟ್ಟುವುವು. ದಡದಲ್ಲಿ ತನ್ನ ಕೊಕ್ಕಿನಿಂದ ಕೆದಕಿ, ಕಾಲುಗಳಿಂದ ಕೆರೆದು ೩ – ೧೦ ಅಡಿ ಉದ್ದ ಸುರಂಗ ರಚಿಸುತ್ತವೆ. ಸುರಂಗದ ತುದಿ ಅಗಲವಾಗಿ ಸಣ್ಣ ಕೋಣೆಯಂತಿರುತ್ತದೆ. ೫ – ೮ ಮೊಟ್ಟೆಯಿಟ್ಟು ಅವುಗಳಿಗೆ ಕಾವಿತ್ತು ಮರಿಮಾಡುತ್ತವೆ. ಗೂಡು ಶುಚಿಯಾಗಿರುವುದಿಲ್ಲ. ಮೀನು ಹುರುಪೆ ಮುಳ್ಳುಗಳಿಂದ ಕೂಡಿ ದುರ್ನಾತ ಬೀರಬಹುದು. ಹೆಣ್ಣು ಗಂಡುಗಳೆರಡೂ ೨೦ – ೨೫ ದಿನಗಳು ಕಾವಿತ್ತು ನಿಸ್ಸಹಾಯಕ ಮರಿ ಜನಿಸಲು ಸಹಾಯಕವಾಗುತ್ತವೆ. ಮರಿಗಳು ಬೆಳೆದು ಮೀನು ಹಿಡಿಯಲು ಶಕ್ತವಾಗುವವರೆಗೆ ಅವು ತಂದೆ ತಾಯಿಯ ಪೋಷಣೆಯಲ್ಲಿರುತ್ತವೆ.

ಕಾಡು ಪಂಗಡದವು ದಪ್ಪಗಾತ್ರದ, ವಿವಿಧ ನಡತೆಯ ಪಕ್ಷಿಗಳು. ಹಲವು ನೀರಿನ ಬಳಿ ಬರುವುದೇ ಇಲ್ಲ, ಹುಲ್ಲುಗಾವಲು ಮುಂತಾದೆಡೆ ವಾಸವಿದ್ದು, ಕೀಟ, ಸರೀಸೃಪ, ಕಪ್ಪೆ ಮುಂತಾದುವನ್ನು ತಿನ್ನುತ್ತವೆ. ಅವುಗಳಲ್ಲಿ ಒಂದು ದಪ್ಪಗಾತ್ರದ ಆಸ್ಟ್ರೇಲಿಯಾ ವಾಸಿ ಕಕ್ಕಬೂರಾ ೧ ೧/೨ ಅಡಿ ಉದ್ದವಿದ್ದು ಗಹಗಹಿಸಿ ನಕ್ಕಂತೆ ಶಬ್ದಮಾಡುತ್ತಾ ಹಾರಾಡುತ್ತವೆ. ನಿಯಮಿತ ಸಮಯಕ್ಕೆ ಸರಿಯಾಗಿ ಸಂಜೆ, ಬೆಳಿಗ್ಗೆ ಅವು ಗುಂಪಾಗಿ ಹಾರಾಡುತ್ತಾ ಶಬ್ದಮಾಡುತ್ತವೆ. ಇವು ಹಾವುರಾಣಿ, ಹಲ್ಲಿ, ಹಾವುಗಳನ್ನೇ ಹಿಂದಿ ನಿಂದ ಹಿಡಿದು ಕುಕ್ಕಿ ಕೊಂದು ತಿನ್ನುತ್ತವೆ. ಸಣ್ಣ ಪಕ್ಷಿಗಳ ಮರಿಗಳನ್ನೂ, ಸಾಕು ಕೋಳಿ, ಬಾತುಗಳ ಮರಿಗಳನ್ನೂ ತಿನ್ನಬಲ್ಲವು.

ಇವುಗಳಲ್ಲಿ ೩೮ ಪ್ರಭೇದಗಳು, ಆಫ್ರಿಕಾದಿಂದ, ಆಸ್ಟ್ರೇಲಿಯಾದವರೆಗಿನ ಕಾಡು ಮೈದಾನಗಳಲ್ಲಿ ವಾಸಿಸುತ್ತವೆ. ಬಿಳೀ ಕತ್ತಿನ ನೀಲವರ್ಣದ ಮಿಂಚುಳ್ಳಿ ನಮ್ಮ ದೇಶ ದಲ್ಲಿ ಸಾಮಾನ್ಯವಾದವು. ೩ ಬೆರಳಿನ, ಹಳದಿ ಮಿಶ್ರಿತ ಕಂದು ಬಣ್ಣದವೂ, ಅಲ್ಲಲ್ಲಿ ಕಂಡುಬರುತ್ತವೆ. ಈ ಸಣ್ಣ ಪ್ರಭೇದಗಳಿಗೆ ಕೀಟಗಳೇ ಮುಖ್ಯಾಹಾರ. ಜೀರುಂಡೆ ಗಳು ದೊರಕಿದಲ್ಲಿ ಕೊಂಡೊಯ್ದು ಕೊಕ್ಕಿನಿಂದ ಜಜ್ಜಿ ತಿನ್ನುತ್ತವೆ.

ಅವುಗಳು ಸಾಮಾನ್ಯವಾಗಿ ನದಿ ಅಥವಾ ಕೊಳದ ದಡದಲ್ಲಿ ಕೊರೆದ ಸುರಂಗದಲ್ಲೇ ಗೂಡು ರಚಿಸುತ್ತವೆ. ಕೆಲವು ಮರದ ಪೊಟರೆಯಲ್ಲಿ ಮರಿಮಾಡುತ್ತವೆ. ಹುತ್ತಗಳಲ್ಲಿಯೂ ಸುರಂಗ ಕೊರೆದು ಗೂಡು ಮಾಡಬಲ್ಲವು. ಗೂಡು ಮಾತ್ರ ಯಾವಾಗಲೂ ದುರ್ನಾತ ಹೊಂದಿರುತ್ತದೆ.

ಈ ಪಕ್ಷಿಗಳು ಸಾಧಾರಣ ಬಣ್ಣವಿದ್ದವೆಂದೂ, ನಹೋವಾವಿನ ಹಡಗಿನಿಂದ ಹೊರಬಿದ್ದಾಗ ನೇರವಾಗಿ ಸೂರ್ಯನೆಡೆಗೆ ಹಾರಿದ್ದರಿಂದ ಎದೆ ಜಾಗ ಕಂದು ಬಣ್ಣವಾಗಿ ಸುಟ್ಟುಹೋಗಿ ಬೆನ್ನುಮಾತ್ರ ಆಕಾಶಬಣ್ಣ ಹೊಂದಿತೆಂದೂ ದಂತಕಥೆ ಇದೆ. ಗ್ರೀಕರಲ್ಲೂ ಇದರ ಗೂಡು ಹಾಳಾಗದಂತೆ ಸಮುದ್ರವನ್ನು ದೇವತೆಗಳು ಶಾಂತಗೊಳಿಸಿದರೆಂದು ನಂಬಿ ಅದರಿಂದ ಶಾಂತಿಯುತ ದಿನಗಳಿಗೆ **ಹಾಲ್ಸಿಯಾನ್** ದಿನಗಳೆಂದೂ ಕರೆಯುತ್ತಾರೆ.

ಕುಟುಂಬ ೨ : ಟೋಡಿಡೀ (Todidae)

(ಟೋಡಿಗಳು)

ಇವು ವೆಸ್ಟ್‌ಇಂಡೀಸ್ ದ್ವೀಪಗಳಲ್ಲಿ ಮಾತ್ರ ವಾಸಿಸುವ ಮಿಂಚುಳ್ಳಿಗಳಂತಹ ೫ ಪ್ರಭೇದಗಳು. ಈ ಪಕ್ಷಿಗಳ ಚಪ್ಪಟೆಯಾದ ಕೊಕ್ಕಿನಂಚಿನಲ್ಲಿ ಅನೇಕ ಕಚ್ಚುಗಳಿವೆ. ಮುಖದಲ್ಲಿ ಒರಟು ಕೂದಲಿರುತ್ತದೆ. ಬೆನ್ನು ಅಚ್ಚ ಹಸಿರು. ಎದೆ ಬಿಳುಪು ಅಥವಾ ಮಾಸಲು ಬಣ್ಣ. ಹೆಚ್ಚಾಗಿ ಶಬ್ದಮಾಡುತ್ತಾ ವಿಶ್ರಮಿಸುವಾಗ ತನ್ನ ಚಪ್ಪಟೆ ಕೊಕ್ಕನ್ನು ಮೇಲಕ್ಕೆತ್ತಿ ಕುಳಿತಿರುತ್ತದೆ. ಕೀಟಾಹಾರಿಗಳು. ಕೀಟಗಳನ್ನು ಹಿಡಿದು ವಿಶ್ರಮಿಸುವ ಕೊಂಬೆಬಳಿ ತಂದು ತಿನ್ನುತ್ತವೆ. ಆದರೆ ಸಾಧು ಪಕ್ಷಿಗಳು. ಸುಲಭವಾಗಿ ಹಿಡಿಯಬಹುದು.

ಜೊತೆಗೂಡಿ ವಾಸಿಸುತ್ತವೆ. ಪರ್ವಕಾಲದಲ್ಲಿ ಗಂಡು ತನ್ನ ಪುಕ್ಕಗಳನ್ನು ನಿಮಿರಿಸಿ ಕುಣಿಯುತ್ತದೆ. ನೆಲದಲ್ಲಿನ ಸುರಂಗದಲ್ಲೇ ಗೂಡು ರಚಿಸುವುದು. ಅದರ ಮುಂದಿನ ಎರಡು ಕಾಲ್ಬೆರಳುಗಳು ಅರ್ಧ ಕೂಡಿದಂತಿವೆ. ಸುರಂಗ ೧ – ೧ ೧/೨ ಅಡಿ ಉದ್ದ. ಅದರ ಕೊನೆಯಲ್ಲಿನ ಕೋಣೆಯಲ್ಲಿ ೩ - ೪ ಮೊಟ್ಟೆಗಳನ್ನಿಟ್ಟು ಗಂಡು ಹೆಣ್ಣುಗಳೆರಡೂ ಕುಳಿತು ಕಾವೀಯುತ್ತವೆ.

ಕುಟುಂಬ ೩ : ಮೊನೋಟಿಡೀ (Momotidae)

(ಮೋಟ್‌ಮೋಟ್‌ಗಳು)

ಮೆಕ್ಸಿಕೋದಿಂದ ಅಮೇಜಾನ್ ದಕ್ಷಿಣ ಭಾಗದವರೆಗಿನ ಉದ್ದಬಾಲದ ಕಾಡುವಾಸಿಗಳಾದ ಎಂಟು ಪ್ರಭೇದಗಳು ಇದಕ್ಕೆ ಸೇರಿವೆ. ಮೃದುಗರಿಗಳುಳ್ಳ, ಪ್ರಕಾಶಮಾನ ನೀಲಿ ಹಸಿರು ಬಣ್ಣಗಳನ್ನು ಹೊಂದಿವೆ. ಆರು ಪ್ರಭೇದಗಳಿಗೆ ಬಾಲಗರಿಗಳಲ್ಲಿನ ಎರಡು ಗರಿ ಉದ್ದವಾಗಿ ಬೆಳೆದು ತುದಿ ತಟ್ಟೆಯಂತೆ ಅಗಲವಾಗಿರುತ್ತದೆ. ಅವುಗಳಿಗೂ ಅಗಲವಾದ ಚಪ್ಪಟೆ ಕೊಕ್ಕಿದ್ದು ಗರಗಸದಂತಹ ಅಂಚು ಇರುತ್ತದೆ.

ಕಾಡಿನಂಚಿನ ಮರ ಕೊಂಬೆಗಳಲ್ಲಿ ಒಂಟಿ ಅಥವಾ ಜೊತೆಗೂಡಿ ತಟಸ್ಥವಾಗಿ ಅವು ಕುಳಿತಿರುತ್ತವೆ. ಬಾಲವನ್ನು ಅತ್ತಿತ್ತ ಅಲುಗಾಡಿಸುತ್ತಾ ದೀರ್ಘಕಾಲ ಒಂದೇ ಕಡೆ ಕುಳಿತಿರಬಲ್ಲವು. ಕೀಟಗಳೇ ಮುಖ್ಯಾಹಾರವಾದರೂ ಹಲ್ಲಿ, ಬಸವನಹುಳು, ಹಣ್ಣು ಮುಂತಾದುವನ್ನು ತಿನ್ನುತ್ತವೆ. ಮಿಂಚುಳ್ಳಿಗಳಂತೆಯೇ ಆಹಾರವನ್ನು ನೆಲೆಯ ಬಳಿ ಒಯ್ದು, ಕುಕ್ಕಿ ಜಜ್ಜಿ ತಿನ್ನುತ್ತವೆ.

ಕಲ್ಲು ಪೊಟರೆಗಳಲ್ಲಿ ಒಂದೆರಡು ಮಾತ್ರ ಗೂಡುಕಟ್ಟುತ್ತವೆ. ಉಳಿದವೆಲ್ಲಾ ತೀರದಲ್ಲಿ ೪ – ೬ ಅಡಿ ಉದ್ದದ ಸುರಂಗ ಕೊರೆದು ೩ – ೪ ಮೊಟ್ಟೆಯಿಡುತ್ತವೆ. ಹೆಣ್ಣು – ಗಂಡುಗಳೆರಡೂ ಕಾವೀಯುತ್ತವೆ. ೧೫ – ೨೨ ದಿನಗಳ ಕಾವಿನವಧಿ. ಇವೂ ಕೊಳಕು ಪಕ್ಷಿಗಳೇ. ಅವುಗಳ ಹಿಕ್ಕೆ ಹಾಗೂ ಆಹಾರದ ಉಳಿಕೆಗಳಿಂದ ಗೂಡು ದುರ್ನಾತ ಬೀರುತ್ತದೆ.

ಕುಟುಂಬ ೪ : ಮೆರೋಪಿಡೀ (Meropidae)
(ಜೇನು ನೊಣ ಭಕ್ಷಕರು)

ಇವು ಮಿಂಚುಳ್ಳಿಗಳ ಸಂತತಿಗೆ ಸೇರಿದವು. ಒಟ್ಟು ೨೪ ಪ್ರಭೇದಗಳಿವೆ. ಉಷ್ಣ ಮತ್ತು ಸಮಶೀತೋಷ್ಣವಲಯಗಳ ಮೈದಾನ ಮತ್ತುಕಾಡುಗಳಲ್ಲಿ ಕಂಡುಬರುವ ಪಕ್ಷಿಸಮೂಹ. ಸಾಮಾನ್ಯ ಗಾತ್ರದವು. ಕಾಲುಗಂಜ್ಜ. ಸಾಮಾನ್ಯ ನೀಳವಾದ ಕೊಕ್ಕು. ಕೆಳಬಾಗಿರುತ್ತದೆ. ಎರಡು ಪ್ರಭೇದಗಳನ್ನುಳಿದು ಮಿಕ್ಕವುಗಳಿಗೆಲ್ಲಾ ಬಾಲಗರಿಗಳೆರಡೂ ನೀಳವಾಗಿ ಬೆಳೆದಿರುತ್ತವೆ. ಸಾಮಾನ್ಯವಾಗಿ ಹಸಿರು ಬಣ್ಣವಿದ್ದು, ಬಾಲ ಮತ್ತು ತಲೆಯ ಬಳಿ ಕೆಂಪು ಮತ್ತು ಹಳದಿ ಬಣ್ಣ ಹೊಂದಿರಬಲ್ಲವು. ಮುಖ್ಯಾಹಾರ ಜೇನು ನೊಣ ಮತ್ತು ಕಣಜಗಳು. ಇತರ ಕೀಟಗಳನ್ನೂ ತಿನ್ನಬಲ್ಲವು. ಆಫ್ರಿಕಾದಲ್ಲಿ ಅತಿ ಉಪದ್ರವಕಾರಿಯಾದ ಮಿಡತೆಗಳನ್ನು ತಿಂದು ಅನುಕೂಲಕರವಾಗಿವೆ. ಇವು ಪೂರ್ವಾರ್ಧಗೋಳದ ವಾಸಿಗಳು.

ಸಂಘಜೀವಿಗಳು. ಜೊತೆಗೂಡಿ ಅಥವಾ ಗುಂಪಾಗಿ, ತಂತಿಗಳು, ಮನೆಮಾಡು, ಮರ ಮುಂತಾದೆಡೆ ಕುಳಿತು ಶಬ್ದಮಾಡುತ್ತಾ ಹುಳುಗಳ ಗುಂಪು ಕಂಡಲ್ಲಿ ಮಧ್ಯೆ ಇಷ್ಟ ಬಂದಂತೆ ಹಾರಾಡಿ, ಸಾಕಷ್ಟು ಹಿಡಿದು ತಿನ್ನುತ್ತವೆ. ಸಮಶೀತೋಷ್ಣವಲಯದವು ವಲಸೆ ಹೋಗುತ್ತವೆ. ೩೦೦ – ೩೫೦ ಪಕ್ಷಿಗಳ ಗುಂಪು ಒಟ್ಟುಗೂಡಿ ವಲಸೆ ಹೋಗು ವುದು ಆಫ್ರಿಕಾ ಖಂಡದಲ್ಲಿ ಸಾಮಾನ್ಯ.

ಅವು ಮರವಾಸಿಗಳಾದರೂ ಗೂಡು ರಚನೆ ಮಾತ್ರ ನೆಲದಲ್ಲಿಯೇ. ಸುರಂಗ ಕೊರೆದು ಗೂಡು ಕಟ್ಟುತ್ತವೆ. ತೀರಗಳಲ್ಲಿ ನೀಳ ಸುರಂಗ ಕೊರೆದು ೨ – ೮ ಮೊಟ್ಟೆ ಯಿಡುತ್ತವೆ. ಇವೂ ಕೊಳಕು ಪಕ್ಷಿಗಳೇ. ತಮ್ಮ ಗೂಡನ್ನು ಶುಚಿಗೊಳಿಸುವುದಿಲ್ಲ. ಸುರಂಗ ಕೊರೆಯುವುದರಿಂದ ಮರಿ ಪೋಷಣೆವರೆಗಿನ ಕಾರ್ಯಗಳನ್ನು ಹೆಣ್ಣು ಗಂಡು ಗಳೆರಡೂ ನಿರ್ವಹಿಸುತ್ತವೆ. ವರ್ಷಕ್ಕೆ ಒಂದೇ ಸಲ ಮರಿ ಮಾಡುವುದು.

೨೨ ದಿನಗಳ ಕಾವಿನವಧಿಯ ನಂತರ ನಗ್ನ ಮರಿ ಜನಿಸಿ, ೪ – ೫ ವಾರಗಳಲ್ಲಿ ಪೂರ್ಣ ಬಲಿಯುತ್ತದೆ.

ಕುಟುಂಬ ೫ : ಕೊರಾಸಿಡೀ (Coraciidae)
(ರೋಲರ್‌ಗಳು)

ಪೂರ್ವಾರ್ಧಗೋಳದ ಪಕ್ಷಿಗಳು. ಪಾರಿವಾಳದ ಗಾತ್ರವಿದ್ದು ಹಾರಾಡುವಾಗ ವಿವಿಧ ರೀತಿಯ ದೊಂಬರಾಟವನ್ನನುಸರಿಸುತ್ತವೆ. ನೆಲವಾಸಿಗಳ ೫ ಪ್ರಭೇದ ಮೆಡಗಾಸ್ಕರ್‌ನಲ್ಲೂ, ಉಳಿದವು ಆಫ್ರಿಕಾದಿಂದ ಆಸ್ಟ್ರೇಲಿಯಾವರೆಗೂ ಕಂಡುಬರುತ್ತವೆ. ನೀಲಿ ವರ್ಣವೇ ಹೆಚ್ಚು. ತಲೆ ದಪ್ಪ, ಕತ್ತು ಗಿಡ್ಡ, ಕೊಕ್ಕು ದೃಢವಾಗಿರುತ್ತದೆ. ಅವುಗಳ ಕಾಲು ಬಲಿಷ್ಠವಾಗಿಲ್ಲವಾದರೂ, ನೀಳರೆಕ್ಕೆ ಚೆನ್ನಾಗಿ ಹಾರಾಡಲು ಅನುಕೂಲವಾಗಿದೆ. ನೆಲದಮೇಲಿರುವಾಗ ಕುಪ್ಪಳಿಸಿ ನೆಗೆದು ಮುಂದುವರಿಯುತ್ತವೆ. ಸಾಮಾನ್ಯವಾಗಿ ಒಂಟಿ ಜೀವಿಗಳು. ಕೀಟ ಹಲ್ಲಿ ಜಾತಿಗಳು ಮತ್ತು ಮಿಡತೆಗಳನ್ನು ತಿನ್ನುತ್ತವೆ.

ಆಫ್ರಿಕಾದ ಒಂದು ಪ್ರಭೇದ ನಸು ನೇರಳೆ ಬಣ್ಣವಿದ್ದು ಕವಲು ಬಾಲ ಹೊಂದಿದೆ. ಉಳಿದವೆಲ್ಲಾ ಚದುರ ಬಾಲದಂಚಿನವೇ. ಜಪಾನ್ – ಕೊರಿಯಾ ಬಳಿಯ ಪ್ರಭೇದ ಹಸಿರು - ನೀಲಿ ಮಿಶ್ರಿತ ಬಣ್ಣ ಹೊಂದಿ, ಕಾಲು ಮತ್ತು ಕೊಕ್ಕು ಅಚ್ಚ ಕೆಂಪು ಬಣ್ಣವಿರುತ್ತವೆ. ಅವುಗಳ ರೆಕ್ಕೆಯಲ್ಲಿ ರೂಪಾಯಿಯಗಲದ ಬಿಳಿಯ ಮಚ್ಚೆಯಿರು ವುದರಿಂದ ಅವನ್ನು ಡಾಲರ್ ಪಕ್ಷಿಗಳೆಂದೂ ಕರೆಯಲಾಗುತ್ತದೆ.

ಅವು ಪರ್ವಕಾಲದಲ್ಲಿ ಹಾರಾಡುವಾಗ ಇದ್ದಕ್ಕಿದ್ದಂತೆ ಲಾಗ ಹೊಡೆದೂ ಸುರುಳಿಯಾಗಿ ಸುತ್ತಿಯೂ ಹಾರಾಡುತ್ತವೆ. ಮರ ಪೊಟರೆಗಳಲ್ಲೇ ಗೂಡು ರಚಿಸು ವುದು ಸಾಮಾನ್ಯ. ಇತರ ಪಕ್ಷಿಗಳ ಗೂಡುಗಳನ್ನೂ ಉಪಯೋಗಿಸಬಲ್ಲವು. ೨–೪ ಮೊಟ್ಟೆ ಯಿಡುತ್ತವೆ. ಹೆಣ್ಣು – ಗಂಡುಗಳೆರಡೂ ೨೦ – ೨೫ ದಿನ ಕಾವಿತ್ತು ಮರಿಮಾಡು ತ್ತವೆ. ನೆಲವಾಸಿಗಳಿಗೆ ಹಳದಿ ಹಸಿರು ವರ್ಣದ ಚುಕ್ಕೆ – ಪಟ್ಟೆಗಳಿರುತ್ತವೆ. ಅವು ಗಳಿಗೆ ನೀಳ ಕಾಲು ಗುಜ್ಜ ರೆಕ್ಕೆ ಮತ್ತು ಉದ್ದನೆಯ ನೀಳ ಬಾಲ ಸಾಮಾನ್ಯ. ಸಂಜೆಯೇ ಹೆಚ್ಚಾಗಿ ಹಾರಾಡಿ ಆಹಾರ ಹೊಂಚುವುದು. ನೆಲ ಪ್ರಭೇದಗಳಿಗೆ ಮಾತ್ರ ಹೆಚ್ಚಿನ ಧೂಳುಗರಿಗಳಿರುತ್ತವೆ. ‘ ಕೋಗಿಲೆ ರೋಲರ್ ’ಗಳಿಗೆ ಶಿಖೆಯಿರುತ್ತದೆ.

ಕುಟುಂಬ ೬ : ಊಪುಪಿಡೀ (Upupidae)
(ಹೂಪೋಗಳು)

ತೆಳುವಾದ ನೀಳ ಕೊಕ್ಕು ಮತ್ತು ಕಾಲಿನ ಎರಡು ಬೆರಳುಂಗಳು ಮಾತ್ರ ಕೂಡಿರು ವುದು ಈ ಕುಟುಂಬದ ವೈಶಿಷ್ಟ್ಯ. ಹೆಣ್ಣು ಗಾತ್ರದಲ್ಲಿ ಬಲು ಸಣ್ಣ. ಒಂದೇ ಜಾತಿಯ ೯ ಪ್ರಭೇದಗಳು ದ. ಯುರೋಪು, ಏಷ್ಯಾ, ಆಫ್ರಿಕಾಗಳಲ್ಲಿ ಹರಡಿವೆ. ಲಘು ಕಂದು ಬಣ್ಣದ ಮೈ, ರೆಕ್ಕೆ ಮತ್ತು ಬಾಲಗಳ ಮೇಲೆ ಅಚ್ಚ ಕಪ್ಪು ಬಣ್ಣದ ಪಟ್ಟೆ

ಗಳು ಮತ್ತು ಕಪ್ಪು ತುದಿಯ ಗರಿಶಿಖೆ, ಅವುಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾದ ವಿವರಣೆ.

ಅಲ್ಲಲ್ಲಿ ಮರ ಬೆಳೆದಿರುವ ಮೈದಾನ ಮತ್ತು ವ್ಯವಸಾಯ ಯೋಗ್ಯ ಪ್ರದೇಶಗಳಲ್ಲಿ ಒಂಟಿ ಅಥವಾ ಜೊತೆಗೂಡಿ ವಾಸಿಸುತ್ತವೆ. ನೆಲದಮೇಲೆಯೇ ಓಡಾಡುತ್ತಿದ್ದು ನೀಳಕೊಕ್ಕಿನಿಂದ ಮಣ್ಣು, ಕಸ, ಸಗಣಿ ಮುಂತಾದುವುಗಳಲ್ಲಿನ ಕೀಟ, ಹುಳು, ಗೆದ್ದಲು ಮೊದಲಾದವನ್ನು ಹುಡುಕಿ ತಿನ್ನುತ್ತವೆ. ಧೂಳು ಸ್ನಾನ ಇಷ್ಟ. ನೀರು ಕುಡಿಯುವುದೇ ಇಲ್ಲ. ಚೆನ್ನಾಗಿ ಹಾರಲೂಬಲ್ಲವು. ಮರಮಾಡು, ಗೋಡೆಬಿರುಕು ಮುಂತಾದೆಡೆ ವಿಶ್ರಮಿಸುತ್ತವೆ.

ಮರಪೊಟರೆಯೇ ಗೂಡಿನ ರಚನೆಗೆ ಮುಖ್ಯ. ಆದರೆ ಗೋಡೆ ಮತ್ತು ಮನೆ ಮಾಡುಗಳಲ್ಲಿನ ಬಿರುಕುಗಳಲ್ಲಿಯೂ ಕಟ್ಟಬಹುದು. ೪–೬ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ೧೬–೧೮ ದಿನ ಕಾವಿತ್ತು ಮರಿಮಾಡುತ್ತವೆ. ಹೆಣ್ಣಿಗೆ ಆ ಕಾಲದಲ್ಲಿ ಆಹಾರ ಸರಬರಾಜಿಗೆ ಗಂಡು ಸಹಾಯಕ. ಮರಿ ಜನಿಸಿದಾಗ ಹೊಚ್ಚಡ ಹೊಂದಿರುತ್ತದೆ. ಅವುಗಳೂ ಮಿಂಚುಳ್ಳಿಗಳಂತೆಯೇ ಕೊಳಕು ಪಕ್ಷಿಗಳು. ಹಿಕ್ಕೆ ಮತ್ತು ಉಳಿದ ಆಹಾರ ಭಾಗ ಹಾಗೇ ಉಳಿದು ಕೊಳೆತು ದುರ್ನಾತ ಬರುತ್ತದೆ. ಹೆಣ್ಣಿನ ಬಾಲದ ಗ್ರಂಥಿಯಿಂದಲೂ ದುರ್ಗಂಧ ವಾಸನೆ ದ್ರವ ಉತ್ಪನ್ನವಾಗುತ್ತದೆ.

ಅವುಗಳನ್ನು ಹಲವೆಡೆಯಲ್ಲಿ ತಿನ್ನುತ್ತಾರೆ. ಈಜಿಪ್ಟಿನ ದೇವಾಲಯ ಹಾಗೂ ಸಮಾಧಿಗಳ ಗೋಡೆಯ ಮೇಲೆ ಅವುಗಳ ಚಿತ್ರ ಕೆತ್ತಲಾಗಿದೆ. ಅವಕ್ಕೆ ಅಮಾನುಷ ಶಕ್ತಿಯಿತ್ತೆಂದು ನಂಬಲಾಗಿತ್ತು, ದೃಷ್ಟಿ ಮತ್ತು ಜ್ಞಾಪಕ ಶಕ್ತಿ ಹೆಚ್ಚಲು ಅದರ ವಿವಿಧಾಂಗಗಳು ಉಪಯುಕ್ತವೆಂದು ನಂಬಲಾಗಿತ್ತು. ಅವು ಈಗಲೂ ಹೆಚ್ಚು ಸಂಖ್ಯೆಯಲ್ಲಿವೆ.

ಕುಟುಂಬ ೭ : ಬ್ಯೂಸಿರೋಟಿಡೀ (Bucerotidae) (ಹಾರನ್‌ಬಿಲ್‌ಗಳು)

ಕೆಳಬಾಗಿದ ಬಹು ದಪ್ಪ ಕೊಂಬಿನ ಕೊಕ್ಕು ಮತ್ತು ತಲೆಯ ಮೇಲೆ ಕೊಂಬಿನ ಶಿರಸ್ತ್ರಾಣ ಈ ಕುಟುಂಬ ಪಕ್ಷಿಗಳಿಗೆ ಸಾಮಾನ್ಯ. ಆಫ್ರಿಕಾ, ಏಷ್ಯಾದಿಂದ, ಫಿಲಿಪೈನ್ಸ್‌ವರೆಗಿನ ಪ್ರದೇಶದಲ್ಲಿನ ಸುಮಾರು ೪–೫ ಅಡಿ ಎತ್ತರವಿರಬಲ್ಲ ಬಹು ದಪ್ಪ ಪಕ್ಷಿ ಪ್ರಭೇದಗಳಿವು. ಒಟ್ಟು ೪೫ ಪ್ರಭೇದಗಳಿವೆ. ಕಪ್ಪು, ಕಂದುಬಣ್ಣದ ಮೈಮೇಲೆ, ಎದೆ, ಬಾಲ ಮತ್ತು ರೆಕ್ಕೆಗಳ ಬಳಿ, ಬಿಳಿಯ ಅಥವಾ ಹಳದಿ ಮಚ್ಚೆಗಳಿರಬಹುದು. ಕೊಕ್ಕು, ಶಿರಸ್ತ್ರಾಣ ಸಾಮಾನ್ಯವಾಗಿ ಕೊಂಬುವರ್ಣವಿದ್ದರೂ, ಹಲವು ಪ್ರಭೇದಗಳಲ್ಲಿ ಅದು ಕಪ್ಪು, ಹಳದಿ ಅಥವಾ ಅಚ್ಚಕೆಂಪು ವರ್ಣವಿರಬಲ್ಲವು. ಅವುಗಳಿಗೆ ಮೇಲೆ ವಿವಿಧ ಮಡಚು ಅಥವಾ ಕಚ್ಚು ಇದ್ದು ಅಂಚಿನಲ್ಲಿ ಗರಗಸದಂತೆ ಹಲ್ಲು ಇರುತ್ತವೆ. ಮಲಯ ಪ್ರಭೇದದಲ್ಲಿ ಮಾತ್ರ ಇದು ಗಟ್ಟಿ ದಂತ. ಇದರಿಂದ ವಿವಿಧ ಸಾಮಾನು

ಗಳನ್ನು ತಯಾರಿಸಲಾಗುತ್ತದೆ. ಉಳಿದ ಪ್ರಭೇದಗಳಲ್ಲಿ ಅವು ಪೂರ್ಣ ಟೊಳ್ಳು, ಅಥವಾ ಮಧ್ಯೆ ಮೃದು ಕಣಗಳಿಂದ ಕೂಡಿರಬಲ್ಲವು.

ಅವುಗಳಿಗೆ ಕಣ್ಣಿನ ಬಳಿ ಬೋಳು ಚರ್ಮವಿದ್ದು ವಿವಿಧ ವರ್ಣವಾಗಿರುತ್ತವೆ. ರೆಪ್ಪೆ ಚೆನ್ನಾಗಿ ಬೆಳೆದಿವೆ. ರೆಕ್ಕೆ ದೃಢವಾಗಿರುವುದರಿಂದ ಚೆನ್ನಾಗಿ ಹಾರಬಲ್ಲವು. ನೀಳ ಬಾಲ ದುಂಡು ಕೊನೆ ಹೊಂದಿವೆ. ಅದರ ದಟ್ಟ ಕಾಲು ಗಿಡ್ಡವಾಗಿದೆ. ಅದರ ಮುಂದಿನ ಮೂರು ಬೆರಳುಗಳು ತಳದಲ್ಲಿ ಕೂಡಿದಂತಿದ್ದು ಅಗಲವಾಗಿದೆ. ಕಾಡು ವಾಸಿಗಳು. ಜೊತೆ ಅಥವಾ ಹಲವು ಪಕ್ಷಿಗಳು ಗುಂಪಾಗಿ ಸಂಚರಿಸುತ್ತವೆ. ಮಧ್ಯಾಹ್ನ ವೇಳೆ ವಿಶ್ರಮಿಸಿ ಬೆಳಗ್ಗೆ – ಸಂಜೆ ಮಾತ್ರ ತಿರುಗಾಡುವುದು ಹೆಚ್ಚು.

ಸರ್ವಭಕ್ಷಕ ಪಕ್ಷಿಗಳಿವು. ಹಣ್ಣು, ವಿವಿಧ ಕೀಟ ಮತ್ತು ಸಣ್ಣ ಪ್ರಾಣಿಗಳು ಮುಖ್ಯಾಹಾರ. ಹಣ್ಣು ತಿನ್ನುವ ಪ್ರಭೇದಗಳು ಮರದ ಮೇಲಿನ ಕೊಂಬೆಗಳ ಮಧ್ಯೆ ಕುಪ್ಪಳಿಸುತ್ತಾ, ಹಣ್ಣು ಕಿತ್ತು ಮೇಲೆಸೆದು ಹಿಡಿದು ನುಂಗುತ್ತವೆ. ಆಹಾರವನ್ನು ಪೂರ್ಣವಾಗಿ ನುಂಗಿ ಜೀರ್ಣವಾಗದ ಹಣ್ಣು ಬೀಜಗಳನ್ನೂ, ಕೀಟಗಳ ಮೇಲ್ಚಿಪ್ಪು ಮತ್ತು ಪ್ರಾಣಿಗಳ ಮೂಳೆಗಳನ್ನೂ ಹೊರಕಕ್ಕುತ್ತವೆ. ಸಣ್ಣ ಪಕ್ಷಿ ಮತ್ತು ಮೊಟ್ಟೆ ಗಳನ್ನೂ ಆಯ್ದು ತಿನ್ನುತ್ತವೆ. ಹಲವೆಡೆ ಹಣ್ಣಿನ ತೋಟಗಳಿಗೆ ಅವು ಉಪದ್ರವಕಾರಿ. ನೆಲದಮೇಲೂ ಅತ್ತಿತ್ತ ಹೊರಳಿದಂತೆ ನಡೆದು ಮಿಡತೆ, ಕೀಟ ಮುಂತಾದುವುಗಳನ್ನು ಹಿಡಿದು ಕುಕ್ಕಿ ಸಾಯಿಸಿ ತಿನ್ನುತ್ತವೆ.

ಅವುಗಳ ಸಂತಾನಾಭಿವೃದ್ಧಿ ವಿಚಿತ್ರ. ಅವು ಜೊತೆಗೂಡಿದ ನಂತರ ಜೀವನ ವಿಡೀ ಒಟ್ಟಾಗಿಯೇ ಇರುತ್ತವೆ. ಕಲ್ಲು ಮತ್ತು ಮರ ಪೊಟರೆಗಳಲ್ಲೇ ಅವು ಗೂಡು ರಚಿಸುವುದು. ಹೆಣ್ಣು ಮೊಟ್ಟೆಯಿಡಲು ಸಿದ್ಧವಾದಾಗ ತೂತಿನೊಳಗೆ ಹೊಕ್ಕು ಕೂರುತ್ತದೆ. ಗಂಡು ಪೊಟರೆಯ ಬಾಯನ್ನು ಮುಚ್ಚಿ, ಹೆಣ್ಣು ಮರಿಯಾಗುವವರೆಗೂ ಹೊರಬಾರದಂತೆ ಮಾಡುತ್ತದೆ! ಹಲವು ಪ್ರಭೇದಗಳಲ್ಲಿ ಗಂಡು ಮಾತ್ರ ಈ ಕಾರ್ಯ ಮಾಡಿದರೂ, ಸಾಮಾನ್ಯವಾಗಿ ಹೆಣ್ಣು ಗಂಡುಗಳೆರಡೂ ಸೇರಿ ಬಾಯನ್ನು ಮುಚ್ಚುತ್ತವೆ! ಆದರೆ ಗಂಡು ಹೊರಗಿನಿಂದ, ಹೆಣ್ಣು ಒಳಗಿನಿಂದ! ಅದಕ್ಕೆ ಉಪಯುಕ್ತ ವಸ್ತುಗಳು ಮಣ್ಣು, ತಮ್ಮ ಹಿಕ್ಕೆ, ಮತ್ತು ಕೆಲಸಮಯ ಜೀರ್ಣಿಸದೆ ತಾವು ವಾಂತಿ ಮಾಡುವ ಆಹಾರಭಾಗ! ಇವುಗಳನ್ನೆಲ್ಲಾ ಮಿಶ್ರಮಾಡಿ ಮೆತ್ತಿ, ಮಧ್ಯೆ ಒಂದು ತೂತನ್ನು ಮಾತ್ರ ಬಿಟ್ಟು ಮುಚ್ಚುತ್ತವೆ. ಈ ಮಧ್ಯ ತೂತಿನಿಂದ ಹೆಣ್ಣು ತನ್ನ ಕೊಕ್ಕನ್ನು ಮಾತ್ರ ಹೊರಚಾಚಲು ಅನುಕೂಲವಾಗುತ್ತದೆ. ಈ ಮಣ್ಣಿನ ಗೋಡೆ ಬಿಸಿಲಿನಲ್ಲಿ ಒಣಗಿ ಇಟ್ಟಿಗೆಯಂತೆ ಗಟ್ಟಿಯಾಗಿ ಮರಗಳಲ್ಲಿನ ಕೋತಿ, ಹಾವು ಮುಂತಾ ದುವುಗಳಿಂದ ಹೆಣ್ಣು ಪಕ್ಷಿಗೂ ಮತ್ತು ಅದರ ಮೊಟ್ಟೆಗಳಿಗೂ ತೊಂದರೆಯಾಗದಂತೆ ರಕ್ಷಿಸುತ್ತದೆ.

೧ ರಿಂದ ೬ ಮೊಟ್ಟೆಗಳಿಟ್ಟು ೨೫ – ೪೦ ದಿನಗಳು ಅವು ಕಾವಿತ್ತು ಮರಿಮಾಡು ತ್ತವೆ. ಕಾವಿನ ಅವಧಿಯಲ್ಲೂ ಮುಂದೆ ೨ – ೩ ವಾರಕಾಲ ಹೆಣ್ಣು ಗೂಡಿನ ಒಳಗೇ

ಇರುತ್ತದೆ. ಅದಕ್ಕೂ, ಮರಿಗಳಿಗೂ ಸಾಕಷ್ಟು ಆಹಾರ ಒದಗಿಸುವುದು ಗಂಡಿನ ಮುಖ್ಯ ಕೆಲಸ. ಹೆಣ್ಣು ಕಾವಿಗೆ ಕೂತಾಗಲೇ ತನ್ನ ಹಳೆಯ ಗರಿಗಳನ್ನು ಉದುರಿಸಿ, ಹೊಸ ಗರಿಗಳನ್ನು ಬೆಳೆಸಿಕೊಳ್ಳುತ್ತದೆ. ಗಂಡು ಸಾಕಷ್ಟು ಆಹಾರ ನುಂಗಿ ಹಿಂತಿರುಗಿ ಬಂದು ಸ್ವಲ್ಪ ಸ್ವಲ್ಪವಾಗಿ ಅದನ್ನು ಕಕ್ಕಿ ಗೂಡಿನೊಳಗಿಟ್ಟು ತಿನ್ನಿಸುತ್ತದೆ. ಮರಿ ಅರ್ಧ ಬೆಳೆದಾಗ ಹೆಣ್ಣು – ಗಂಡುಗಳೆರಡೂ ಗೋಡೆಯ ಮಣ್ಣನ್ನು ಕೊಕ್ಕಿನಿಂದ ಕೆತ್ತಿ ತೆಗೆದು, ಹೆಣ್ಣು ಹೊರಬೀಳುವಂತೇರ್ಪಡಿಸುತ್ತದೆ. ಮರಿಗಳೂ ಆಗ ದೊಡ್ಡದಾದ ಆ ತೂತನ್ನು ಮುಚ್ಚಬಲ್ಲವು.

ಈ ಪಕ್ಷಿಗಳು ಪರಿಶುದ್ಧವಾದವು. ಹೆಣ್ಣು, ಮರಿಗಳೂ ತೂತಿನೆಡೆ ತಮ್ಮ ಬಾಲ ತಿರುವಿ, ಹೊರಗೆ ಬೀಳುವಂತೆ ಹಿಕ್ಕೆ ಹಾಕುತ್ತವೆ. ಹೆಣ್ಣು ಹೊರಬೀಳುವಾಗ ಕೊಬ್ಬಿರುತ್ತದೆ. ಮರಿಗಳೂ ಹಾರಾಡಲು ಶಕ್ತವಾಗುವ ಮುನ್ನವೇ ಹೊರಬಿದ್ದು ಅಡ್ಡಾಡುತ್ತವೆ.

ಆಫ್ರಿಕಾದ ಪ್ರಭೇದಗಳು ೪ – ೫ ಅಡಿ ಎತ್ತರವಿದ್ದು ನೆಲದಲ್ಲೇ ಅಡ್ಡಾಡಿ ವಿವಿಧ ಆಹಾರ ತಿನ್ನುತ್ತವೆ. ಅನೇಕ ವಿನಾಶಕಾರೀ ಕೀಟಗಳನ್ನೂ, ಹಾವುಗಳನ್ನೂ ವಿವಿಧ ಹಲ್ಲಿಗಳನ್ನೂ ಅವು ಕೊಲ್ಲಬಲ್ಲವು. ಇದರಿಂದ ಅಲ್ಲಿಯ ಮೂಲವಾಸಿಗಳು ಅದಕ್ಕೆ ಹೆಚ್ಚಿನ ಗೌರವವೀಯುತ್ತಾರೆ.

ಉಪವರ್ಗ ೨೬ : ಪಿಸಿಫಾರ್ಮಿಸ್ (Piciformes)

ಕುಟುಂಬ ೬

ಪ್ರಭೇದ ೩೭೭

ಉಷ್ಣ ಮತ್ತು ಸಮಶೀತೋಷ್ಣವಲಯದ ಕಾಡು ಮತ್ತು ಪೊದರು ಪ್ರದೇಶಗಳಲ್ಲಿ ವಾಸಿಸುವ ಪಕ್ಷಿಗಳಿವು. ಆದರೆ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಮೆಡಗಾಸ್ಕರ್ ದ್ವೀಪಗಳಲ್ಲಿ ಕಂಡುಬರುವುದಿಲ್ಲ. ಇವುಗಳಲ್ಲಿ ಮುಖ್ಯವಾಗಿ ಹೊರ ಕಾಲ್ಬೆರಳು ಹಿಂತಿರುಗಿಸಲ್ಪಟ್ಟು, ಮುಂದೆ ಚಾಚಿದಂತೆ ಎರಡು, ಹಿಂದೆ ಚಾಚಿದಂತೆ ಎರಡು ಇರುತ್ತವೆ. ಎಲ್ಲವೂ ಮರವಾಸಿಗಳು. ಒಂಟಿಯಾಗಿರುವುದು ಹೆಚ್ಚು. ಕೆಲಸಮಯ ಜೊತೆಗೂಡಿರಬಲ್ಲವು. ಸಾಮಾನ್ಯ ವರ್ಣದಿಂದ ವಿವಿಧ ವರ್ಣರಂಜಿತವಾಗಿರಬಲ್ಲವು. ೪ ಅಂಗುಲದಿಂದ ೬ ಅಡಿ ಗಾತ್ರವಿರುತ್ತವೆ. ದೂರ ವಲಸೆ ಹೋಗುವ ಸ್ಥಳವಾಸಿಗಳು.

ಗೂಡಿನ ರಚನೆ ಪೊದರುಗಳಲ್ಲೇ. ಮರ, ನೆಲ ಅಥವಾ ಹುತ್ತಗಳಲ್ಲಿ ಪೊಟರೆ ರಚಿಸಿ ಮರಿಮಾಡುತ್ತವೆ. ಒಂದು ಪ್ರಭೇದ ಕೋಗಿಲೆಗಳಂತೆ ಇತರ ಪಕ್ಷಿಗಳ ಗೂಡುಗಳಲ್ಲಿ ಮೊಟ್ಟೆಯಿಡುತ್ತವೆ. ಹೆಣ್ಣು – ಗಂಡುಗಳೆರಡೂ ಕಾವು ಕೂರುತ್ತವೆ. ನಿಸ್ಸಹಾಯಕ ಮರಿಗಳು ಜನಿಸಿ ಗೂಡಿನಲ್ಲೇ ಆರೈಕೆ ಪಡೆಯುತ್ತವೆ.

ಕುಟುಂಬ ೧ : ಕಾಪಿಟೋನಿಡೀ (Capitonidae)
(ಬಾರ್‌ಬೆಟ್‌ಗಳು) (Barbet)

ಅವು ಉಷ್ಣವಲಯದ ಕಾಡುಗಳಲ್ಲಿನ ಪಕ್ಷಿಗಳು. ಆಫ್ರಿಕಾದಲ್ಲೇ ಹೆಚ್ಚು. ಒಟ್ಟು ೭೨ ಪ್ರಭೇದಗಳು. ಅದರಲ್ಲಿ ಅರ್ಧ ಭಾಗ ಆಫ್ರಿಕಾದಲ್ಲೂ, ೨೪ ಪ್ರಭೇದಗಳು ಭಾರತದಿಂದ ಫಿಲಿಪೈನ್ಸ್‌ವರೆಗೂ, ಮತ್ತು ೧೨ ಪ್ರಭೇದಗಳು ಅಮೇರಿಕಾದಲ್ಲಿ ಕೋಸ್ಟರೀಕಾದಿಂದ ಬೋರ್ನಿಯೋವರೆಗೂ ಕಂಡುಬರುತ್ತವೆ. ದಪ್ಪ ಕೊಕ್ಕಿನ, ವರ್ಣರಂಜಿತ ಸಣ್ಣ ಪಕ್ಷಿಗಳು. ಸಣ್ಣ ಕತ್ತಿನ ಈ ಪಕ್ಷಿಗಳಿಗೆ ಹೊಳ್ಳೆಯ ಬಳಿ ಗರಿಗಳು ನೀಳ ಮೀಸೆಯಂತಿರುತ್ತವೆ. ಬಾಲ ಗಿಡ್ಡ. ರೆಕ್ಕೆ ಸಾಮಾನ್ಯವಾಗಿದ್ದು ದೂರ ಹಾರಲಾರವು. ಆದ್ದರಿಂದ ಎಲ್ಲಾ ಪ್ರಭೇದಗಳೂ ಸ್ಥಳವಾಸಿಗಳು.

ಹಣ್ಣು, ಕಾಯಿ, ಮೊಗ್ಗು, ಹೂವು ಮತ್ತು ಕೀಟಗಳು ಇವುಗಳಿಗೆ ಮುಖ್ಯಾಹಾರ. ಆದ್ದರಿಂದ ಮರದ ಮೇಲಿರುವುದೇ ಹೆಚ್ಚು. ಕೆಲವು ಸಸ್ಯಾಹಾರಿಗಳಾಗಿದ್ದು, ಮರಿಗಳಿಗೆ ಮಾತ್ರ ಕೀಟ ತಿನ್ನಿಸುತ್ತದೆ. ಮರದ ಮೇಲಿನ ಇರುವೆ ಮತ್ತು ಗೆದ್ದಲು ಕೆಲವಕ್ಕೆ ಇಷ್ಟ. ಅವು ಗೊಂದಲ ಪಕ್ಷಿಗಳು. ಒಂದೆಡೆ ಕುಳಿತು ಗಂಟೆಗಟ್ಟಲೆ ಒಂದೇ ರೀತಿಯಲ್ಲಿ ಕೂಗುತ್ತಿರುತ್ತವೆ. ಕೂಗುವಾಗ ಅವು ಬಾಲ ಮೇಲೆತ್ತಿರುತ್ತವೆ. ಅವುಗಳ ನಿರಂತರ ಕೂಗು ಬೇಸರ ಹುಟ್ಟಿಸುವಂತಿರುತ್ತದೆ. ಭಾರತದಲ್ಲಿನ ಕೆಂಪು ಕತ್ತಿನ ಬಾರ್‌ಬೆಟ್‌ಗಳು ಒಂದೇ ಸ್ಥಳದಲ್ಲಿ ಕುಳಿತು ' ಟುಕ್ – ಟುಕ್ ' ಎಂದು ಕೂಗುತ್ತಿರುತ್ತವೆ. ಕಾಡತ್ತಿ ಅವುಗಳಿಗೆ ಬಲು ಇಷ್ಟ. ಅವು ತಿನ್ನುವುದಕ್ಕಿಂತ ಹಾಳುಮಾಡುವುದು ಹೆಚ್ಚು.

ಒಣಗಿದ ಮರ, ಮಣ್ಣು ಅಥವಾ ಹುತ್ತಗಳಲ್ಲಿ ಸುರಂಗ ಕೊರೆದು, ಹೆಣ್ಣು ಗಂಡುಗಳೆರಡೂ ಸೇರಿ ಗೂಡು ರಚಿಸುತ್ತವೆ. ಪ್ರತಿವರ್ಷವೂ ಅದೇ ಗೂಡನ್ನು ಉಪಯೋಗಿಸುತ್ತವೆ. ಗೂಡಿನಲ್ಲಿ ೨ – ೪ ಮೊಟ್ಟೆಗಳನ್ನಿಟ್ಟು ೧೨ – ೨೦ ದಿನಗಳು ಕಾವಿತ್ತು ಹೆಣ್ಣು ಗಂಡುಗಳೆರಡೂ ಗೂಡಿನಲ್ಲಿ ರಾತ್ರಿ ವಿಶ್ರಮಿಸುತ್ತವೆ. ಬಹು ಶುದ್ಧ ಪಕ್ಷಿಗಳಿವು. ಹಿಕ್ಕೆಯನ್ನು ಬಹುದೂರ ಕೊಂಡೊಯ್ದು ಎಸೆಯುತ್ತವೆ.

ಕುಟುಂಬ ೨ : ಇಂಡಿಕೇಟೋರಿಡೀ (Indicatoridae)
(ಜೇನು ತೋರ್ಕೆ ಪಕ್ಷಿಗಳು)

ಇದರ ಒಟ್ಟು ೧೧ ಪ್ರಭೇದಗಳಲ್ಲಿ ೯ ಸಹರಾ ಮರುಭೂಮಿಯ ದಕ್ಷಿಣಕ್ಕಿರುವ ಪೊದರು ಮೈದಾನಗಳಲ್ಲಿಯೂ, ಒಂದು ಹಿಮಾಲಯದ ತಪ್ಪಲಿನಲ್ಲಿಯೂ, ಇನ್ನೊಂದು ಬೋರ್ನಿಯೋ, ಸುಮಾತ್ರಾ ಕಾಡುಗಳಲ್ಲೂ ವಾಸಿಸುತ್ತವೆ. ೪ – ೮ ಅಂಗುಲ ನೀಳದ ಗುಬ್ಬಚ್ಚಿ ಗಾತ್ರದ ಹಗುರ ವರ್ಣದ ಪಕ್ಷಿಗಳು. ಎಲ್ಲಕ್ಕೂ ಬಾಲದಲ್ಲಿ ಬಿಳಿಯ ಮಚ್ಚೆಯಿದೆ. ಕೊಕ್ಕು ಗಿಡ್ಡ ಮತ್ತು ಮೊಂಡು. ಒಂದು ಪ್ರಭೇದದಲ್ಲಿ ಮಾತ್ರ ಅದು ನೀಳವಾಗಿರುತ್ತದೆ. ರೆಕ್ಕೆ ನೀಳವಾಗಿ ತೆಳ್ಳಗಿರುತ್ತದೆ.

ಈ ಪಕ್ಷಿಗಳಲ್ಲಿ ಎರಡು ವಿಚಿತ್ರ ವರ್ತನೆಗಳು ಕಂಡುಬರುತ್ತವೆ. ಅವು ಜೇನು ಗೂಡು ಕಂಡಲ್ಲಿ ಹಾರಿಬಂದು ಕೋತಿ ಅಥವಾ ಮನುಷ್ಯನೆದುರು ಶಬ್ದ ಮಾಡುತ್ತಾ ಹಾರಾಡಿ ಜೇನುಗೂಡಿನತ್ತ ಕೊಂಡೊಯ್ಯುತ್ತವೆ. ಅಲ್ಲಿ ಅವರು ಜೇನುಗೂಡು ಹರಿದು ತಿಂದಲ್ಲಿ ಅಥವಾ ಕೊಂಡು ಹೋದಲ್ಲಿ ಬಿದ್ದ ಚೂರುಗಳನ್ನು ಹೆಕ್ಕಿ ತಿನ್ನುತ್ತವೆ. ಮತ್ತೊಂದು ವಿಚಿತ್ರ ವರ್ತನೆ ಕೋಗಿಲೆಗಳಂತೆ ಮೊಟ್ಟೆಗಳನ್ನು ಇತರ ಪಕ್ಷಿಗಳ ಗೂಡುಗಳಲ್ಲಿಟ್ಟು ಮರಿಮಾಡಲೇರ್ಪಡಿಸುವುದು.

ವಿವಿಧ ಕೀಟಗಳೇ ಮುಖ್ಯಾಹಾರ. ಕಣಜ, ಜೇನುನೊಣ ಪ್ರಿಯವಾದ ಆಹಾರ. ಹಲವು ಪ್ರಭೇದಗಳು ದಪ್ಪಚರ್ಮ ಮತ್ತು ದುರ್ಗಂಧ ಹೊಂದಿರುತ್ತವೆ. ಇವು ಜೇನುನೊಣ ಮತ್ತು ಕಣಜಗಳ ಕಡಿತದಿಂದ ರಕ್ಷಣೆಯೆಂದು ತೋರುತ್ತದೆ. ಅವು ಬೆಳೆದ ಕೀಟಗಳನ್ನೂ ಗೂಡಿನಲ್ಲಿನ ಮರಿಗಳನ್ನೂ ಹಿಡಿದು ತಿನ್ನುತ್ತವೆ. ಅಲ್ಲದೆ ಅವಕ್ಕೆ ಮೇಣವೂ ಬಲು ಇಷ್ಟ. ಸಾಮಾನ್ಯವಾಗಿ ಅವುಗಳ ಆಹಾರ ವಿಧಾನವನ್ನು ಅರಿತಿರುವ ಜನ ಅವು ತೋರಿಸುವ ಗೂಡಿನಲ್ಲಿನ ಸ್ವಲ್ಪ ಭಾಗವನ್ನು ಅವುಗಳಿಗೆ ಆಹಾರವಾಗಿ ಬಿಟ್ಟಿರುತ್ತಾರೆ. ಅವುಗಳಿಗೆ ಹೊಟ್ಟೆಯಲ್ಲಿ ಹಲವು ಸೂಕ್ಷ್ಮಾಣುಗಳಿದ್ದು ಅವುಗಳ ಸಹಾಯದಿಂದ ಮೇಣವನ್ನು ಜೀರ್ಣಿಸಿಕೊಳ್ಳುತ್ತವೆ.

ಅವು ಇತರ ಪಕ್ಷಿಗೂಡಿನಲ್ಲೇ ಮೊಟ್ಟೆಯಿಡುವುದು. ಒಂದು ಪ್ರಭೇದ ನೊಣಹಾರಿಗಳ ಮತ್ತಿತರ ಸಣ್ಣ ಪಕ್ಷಿಗಳ ಗೂಡಿನಲ್ಲಿ ಮೊಟ್ಟೆಯಿಡುತ್ತವೆ. ಇತರ ಪ್ರಭೇದಗಳು ಪೊಟರೆ ಗೂಡಿನ ಪಕ್ಷಿ ಪ್ರಭೇದಗಳನ್ನು ಹುಡುಕುತ್ತವೆ. ತಮ್ಮ ಮರಿಗಳ ಬೆಳವಣಿಗೆಗೆ ಅಗತ್ಯವಾದ ಎರಡು ಅನುಸರಣೆ ಅವುಗಳಲ್ಲಿ ಕಂಡುಬರುತ್ತವೆ. ತಂದೆ ತಾಯಿಗಳು ಗೂಡಿನಲ್ಲಿ ತಮ್ಮ ಮೊಟ್ಟೆಯಿಡುವಾಗ ಆ ಪಕ್ಷಿಯ ಮೊಟ್ಟೆಗಳನ್ನು ಮೊದಲು ನಾಶಪಡಿಸಿ ಇಡುತ್ತವೆ. ಇದರಿಂದ ತಮ್ಮ ಮರಿಗಳು ಮಾತ್ರ ಅಲ್ಲಿ ಬೆಳೆಯಲನುಕೂಲ. ಜನಿಸಿದ ಮರಿಗಳಿಗೆ ಕೊಕ್ಕಿನ ತುದಿಯಲ್ಲಿ ನೀಳವಾದ ಹಲ್ಲಿನಂತಹ ಕೊಂಡಿಯೊಂದಿರುತ್ತದೆ. ಇದರಿಂದ ಮರಿ ತಾನು ಜನಿಸಿದ ಹಲವೇ ನಿಮಿಷಗಳಲ್ಲಿ ಗೂಡಿನಲ್ಲಿನ ಇತರ ಪಕ್ಷಿಗಳನ್ನು ಕುಕ್ಕಿ ಸಾಯಿಸಿ ಹೊರದೂಡಬಲ್ಲವು. ಈ ಹಲ್ಲು ೩ - ೪ ದಿನಗಳಲ್ಲೇ ಕಳಚಿಬೀಳುತ್ತದೆ ! ನಗ್ನವಾಗಿ ಜನಿಸುವ ಮರಿ ಸಾಕುತಂದೆತಾಯಿಗಳ ಆರೈಕೆಯಿಂದ ಪೂರ್ಣ ಬಲಿತು ಹಾರಿಹೋಗುತ್ತವೆ.

ಕುಟುಂಬ ೩ : ಬುಕ್ಕೊನಿಡೀ (Bucconidae)

ಇವು ಪಶ್ಚಿಮಾರ್ಧಗೋಳದ ೩೦ ಪ್ರಭೇದಗಳು. ಸಾಮಾನ್ಯ ವರ್ಣವೇ, ಪೆಚ್ಚು, ಕಂದು ಅಥವಾ ಬೂದು ಬಣ್ಣದ ಮೈ, ಒಂದೆರಡು ಪ್ರಭೇದಗಳಲ್ಲಿ ಕಪ್ಪು ಪಟ್ಟಿ ಇರಬಹುದು. ಇವೆಲ್ಲಾ ಸಣ್ಣ ಗಾತ್ರದ ದುಂಡು ದೇಹದವು. ದಪ್ಪತಲೆ. ಚಪ್ಪಟೆಯಾದ ದಪ್ಪಕೊಕ್ಕು ಕೆಳಬಾಗಿದ್ದು ಬುಡದಲ್ಲಿ ಕೂದಲು ಹೊಂದಿರುತ್ತವೆ. ಇವು ಸಾಮಾನ್ಯವಾಗಿ ಅಮೆಜಾನ್ ಕಾಡುಗಳಿಂದ ಮೆಕ್ಸಿಕೋವರೆಗೆ ಕಂಡುಬರುತ್ತವೆ.

ಅವುಗಳು ಮರದ ಕೊಂಬೆ ಮೊದಲಾದೆಡೆ ಕುಳಿತು, ದೇಹದ ಮತ್ತು ಕತ್ತಿನ ಪುಕ್ಕಗಳನ್ನೆಲ್ಲಾ ಅಗಲಿಸಿ ವಿಶ್ರಮಿಸುತ್ತವೆ. ಆದ್ದರಿಂದಲೇ ಅವುಗಳಿಗೆ 'ಉಬ್ಬು ಪಕ್ಷಿ' ಗಳೆಂದು ಹೆಸರು. ಹಾರಾಡುತ್ತಾ ಕೀಟಗಳನ್ನು ಹಿಡಿದು ತಿನ್ನುತ್ತವೆ.

ಪೊಟರೆ ಗೂಡು ರಚಿಸುವುವು – ಮೃದು ಮಣ್ಣು ದಡಗಳಲ್ಲಿ ಅಥವಾ ಗೆದ್ದಲು ಹುತ್ತಗಳಲ್ಲಿ ಹೆಣ್ಣು – ಗಂಡುಗಳೆರಡೂ ಕೊರೆದು, ೩ – ೪ ಅಡಿ ಉದ್ದದ ಗೂಡು ರಚಿಸಿ ೨ – ೩ ಮೊಟ್ಟೆಯಿಟ್ಟು ಕಾವೀಯುತ್ತವೆ. ಹಲವು ಪ್ರಭೇದಗಳು ಗೂಡು ಕಾಣದಂತೆ ಹೊರರಂಧ್ರವನ್ನು ಎಲೆ ಕಡ್ಡಿಗಳಿಂದ ಮುಚ್ಚಿಡುತ್ತವೆ.

ಕುಟುಂಬ ೪ : ಗಾಲ್‌ಬುಲಿಡೀ (Galbulidae)

ಈ ಕುಟುಂಬದಲ್ಲಿ ಮೆಕ್ಸಿಕೋದಿಂದ ಬ್ರೆಜಿಲ್‌ವರೆಗಿನ ೧೪ ಪ್ರಭೇದಗಳು ಸೇರಿವೆ. ಸಣ್ಣ ದೇಹದ, ತೆಳುವಾದ ನೀಳ ಕೊಕ್ಕು ಹೊಂದಿರುವ ಝೇಂಕಾರ ಪಕ್ಷಿಗಳಂತೆ ಸುಂದರ ವರ್ಣ ಹೊಂದಿದವು. ಹೆಣ್ಣಿಗೆ ಕತ್ತಿನ ಬಳಿ ಕಂದು ಬಣ್ಣವೂ ಗಂಡಿಗೆ ಕಪ್ಪು ಬಣ್ಣವೂ ಲಿಂಗ ಸೂಚಕ.

ಒಂಟಿ ಜೀವಿಗಳು. ನಿಶ್ಚಲವಾಗಿ ಕುಳಿತಿದ್ದು ತಮ್ಮ ಮುಖ್ಯಾಹಾರವಾದ ಕೀಟ ಹತ್ತಿರ ಬಂದೊಡನೆ ಹಾರಿ ಹಿಡಿದು, ತಮ್ಮ ಮಾಡಿಗೆ ಹಿಂತಿರುಗುತ್ತವೆ. ಕೀಟಾಹಾರಿಯಾಗಿ ಸಣ್ಣ ನೀಳ ಕೊಕ್ಕಿರುವುದರಿಂದ ದಪ್ಪ ಕೀಟಗಳಾದ ಪತಂಗ ಮುಂತಾದುವನ್ನು ಹಿಡಿದು ತಿನ್ನುತ್ತವೆ. ದಪ್ಪ ಗಾತ್ರದ ಕೀಟಗಳನ್ನು ಹಿಡಿದು, ವಿಶ್ರಾಂತಿ ಸ್ಥಾನಕ್ಕೆ ಹಿಂತಿರುಗಿ, ಕೀಟವನ್ನು ಚುಚ್ಚಿ, ಅವುಗಳ ರೆಕ್ಕೆ ಮುರಿದು, ಮೃದು ದೇಹವನ್ನು ಮಾತ್ರ ತಿನ್ನುತ್ತವೆ.

ದಡ ಅಥವಾ ಕಡಿದಾದ ಬೆಟ್ಟದ ತಪ್ಪಲಿನಲ್ಲಿ ಕೊರೆದು ೧ - ೧ ೧/೨ ಅಡಿ ಉದ್ದ ಗೂಡು ರಚಿಸುತ್ತವೆ. ಈ ಸುರಂಗದ ತುದಿಯಲ್ಲೇ ಅಗಲ ಕೋಣೆ ಕೊರೆದು, ಅದರಲ್ಲಿ ೩ - ೪ ಮೊಟ್ಟೆಯಿಡುತ್ತವೆ. ಹೆಣ್ಣು – ಗಂಡುಗಳೆರಡೂ ಕಾವು ಕೂರುತ್ತವೆ. ಕಾವಿನ ಕಾಲಾವಧಿ ೧೮ – ೨೨ ದಿನಗಳು. ಕೊಳಕು ಜೀವಿ. ಗೂಡಿನಲ್ಲಿ ಹಿಕ್ಕೆ, ಉಳಿದ ಆಹಾರ ಮತ್ತು ಅವು ಕಕ್ಕಿ ಉಳಿಯುವ ಆಹಾರದ ಹೆಚ್ಚು ಭಾಗ ಕೊಳೆತು ದುರ್ಗಂಧ ಹೊರಡುತ್ತದೆ. ೩ ವಾರಗಳ ಅವಧಿಯಲ್ಲಿ ಮರಿ ಪೂರ್ಣ ಬೆಳೆದು ಹೊರಬೀಳುತ್ತದೆ.

ಕುಟುಂಬ ೫ : ರಾಂಫಾಸ್‌ಟಿಡೀ (Ramphastidae) (ಟೌಕಾನ್‌ಗಳು)

'ಹಾರನ್‌ಬಿಲ್'ಗಳಂತಿರುವ ಪಕ್ಷಿಗಳಿವು. ಆದರೆ ಶಿರಸ್ತ್ರಾಣವಿರುವುದಿಲ್ಲ. ಇದೊಂದು ಹೊರನೋಟದ ಮುಖ್ಯ ವ್ಯತ್ಯಾಸ. ಅವುಗಳ ೩೭ ಪ್ರಭೇದಗಳು ಅಮೇರಿಕಾದ ಮೆಕ್ಸಿಕೋ ಪ್ರದೇಶದಿಂದ ಬ್ರೆಜಿಲ್‌ವರೆಗೆ ಕಂಡುಬರುತ್ತವೆ. ಅವುಗಳ ದಪ್ಪ ಕೊಕ್ಕು ದೇಹಕ್ಕಿಂತಲೂ ಉದ್ದವಾಗಿದ್ದು ವಿವಿಧ ಬಣ್ಣ ಹೊಂದಿರುತ್ತವೆ. ಹಣ್ಣುಗಳೇ ಮುಖ್ಯಾಹಾರ. ಕೀಟಗಳನ್ನೂ ಸಣ್ಣ ಮರಿಗಳನ್ನೂ ತಿನ್ನಬಲ್ಲವು.

ದಪ್ಪ ಕೊಕ್ಕು ಹೆಚ್ಚು ಉಪಯುಕ್ತವಲ್ಲ. ಹಣ್ಣು ತಿನ್ನುವ ಪಕ್ಷಿಗಳಿಗೆ ಅಷ್ಟು ದೊಡ್ಡ ಕೊಕ್ಕಿನ ಆವಶ್ಯಕತೆಯಿರುವುದಿಲ್ಲ. ಬಹುಶಃ ಶತ್ರುಗಳನ್ನು ಹೆದರಿಸಲು ಮಾತ್ರ ಅದರ ಅಗತ್ಯವಿದೆಯೆಂದು ತೋರುತ್ತದೆ. ಕೊಕ್ಕು ಬಹು ದೊಡ್ಡದಾದರೂ ಹಗುರವಾಗಿ, ಒಳಗಿನ ಟೊಳ್ಳು ಭಾಗದಲ್ಲಿ ಗೋಡೆಗಳಂತಹ ರಚನೆ ಅವುಗಳಿಗೆ ದೃಢತೆ ಯನ್ನೀಯುತ್ತದೆ. ಗಟ್ಟಿಯಾದ ನಾಲಿಗೆ ತೆಳು ಮತ್ತು ನೀಳವಾಗಿದ್ದು ಕೊಕ್ಕಿನ ತುದಿಯವರೆಗೂ ಚಾಚಿರುತ್ತದೆ. ಅದರ ಎರಡು ಪಾರ್ಶ್ವದಲ್ಲೂ ಕೂದಲಿನಂತಹ ಬೆಳವಣಿಗೆಯಿದೆ. ಅವುಗಳು ಹಣ್ಣಿನ ಚೂರು ಹರಿದು, ಕೊಕ್ಕನ್ನು ಮೇಲೆತ್ತಿ ನುಂಗುತ್ತವೆ. ನೀರು ಕುಡಿಯುವಾಗಲೂ ಕೊಕ್ಕನ್ನು ನೀರಿನಲ್ಲಿ ಅದ್ದಿ ಹಿಡಿದು ಹೀರಿ ಮೇಲೆತ್ತಿ ನುಂಗುತ್ತವೆ.

ಅಮೆಜಾನ್ ಕಾಡುಗಳಲ್ಲಿ ಅವು ಬಹು ಹೆಚ್ಚಾಗಿವೆ. ದಪ್ಪ ಗಾತ್ರದವು ಕಾಗೆ ಯಷ್ಟಿರುತ್ತವೆ. ಇವುಗಳಿಗೆ ಕಪ್ಪು ದೇಹ ಮತ್ತು ವಿವಿಧ ವರ್ಣರಂಜಿತ ರೆಕ್ಕೆ ಕೊಕ್ಕು ಗಳಿರುತ್ತವೆ. ಅವುಗಳಲ್ಲಿನ ಸುಣುಪು ಗರಿಗಳ ' ಅರಕಾರಿ ' ಪಂಗಡದ ೧೧ ಪ್ರಭೇದಗಳು ಹೆಚ್ಚು ವರ್ಣ ಹೊಂದಿದವು. ಸಣ್ಣ ಗುಂಪಾಗಿ ಹಾರಾಡುತ್ತಿದ್ದು ರಾತ್ರಿ ಮರ ಪೊಟರೆಗಳಲ್ಲಿ ವಿಶ್ರಮಿಸುತ್ತವೆ. ಅವುಗಳ ಬಣ್ಣ ವೈವಿಧ್ಯತೆ ಇರುವುದು ರಕ್ಷಣೆಗಾಗಿಯೇ. ಅವು ನಿಶ್ಶಬ್ದವಾಗಿ ಚಲಿಸದೇ ಕುಳಿತಿದ್ದಲ್ಲಿ ಮರದಲ್ಲಿನ ಹೂ, ಹಣ್ಣುಗಳಂತೆ ಕಂಡು ಗುರುತು ಹಿಡಿಯಲು ಸಾಧ್ಯವಿಲ್ಲ. ಹಲವು ಹಸಿರು ಬಣ್ಣವಿದ್ದು ಎಲೆಗಳ ಮಧ್ಯೆ ಕಾಣಿಸುವುದೇ ಇಲ್ಲ. ಹಸಿರು ವರ್ಣದ ಟೆಕೋನೆಟ್‌ಗಳೇ ಈ ಕುಟುಂಬದ ಸಣ್ಣ ಪಕ್ಷಿಗಳು.

ಅವು ದೂರ ಹಾರಲಾರವು. ಸ್ವಲ್ಪ ಮೇಲಕ್ಕೆ ಹಾರಿ, ಸ್ವಲ್ಪ ದೂರ ತೇಲಿ ಮುಂದುವರಿಯುತ್ತವೆ. ಹಾರುವಾಗ ಹಲವು ತಮ್ಮ ಬಾಲವನ್ನು ಮೇಲಕ್ಕೆತ್ತಿ ಹಿಡಿದಿರುತ್ತವೆ.

ಮರ ಪೊಟರೆಗಳಲ್ಲೇ ಗೂಡು ರಚಿಸುವುದು. ಕೆಲವು ಗೂಡಿನ ತಳದಲ್ಲಿ ಎಲೆ ಗಳನ್ನು ಹರಡಬಹುದು. ' ಟೊಕೋನೆಟ್ 'ಗಳು ಮಾತ್ರ ಗೂಡನ್ನು ಬಲು ಚೊಕ್ಕಟ ವಾಗಿಟ್ಟಿರುತ್ತವೆ. ಇತರ ಪಕ್ಷಿಗಳು ತಮ್ಮ ಹಿಕ್ಕೆ, ಅರ್ಧ ಜೀರ್ಣಿತ ಆಹಾರ, ಮತ್ತು ಹಣ್ಣು ಬೀಜಗಳಿಂದ ಗೂಡನ್ನು ಕೊಳಕು ಮಾಡುತ್ತವೆ. ೨–೪ ಮೊಟ್ಟೆಗಳೇ ಸಾಮಾನ್ಯ. ಹೆಣ್ಣು – ಗಂಡುಗಳೆರಡೂ ೧೫ – ೧೮ ದಿನ ಕಾವಿತ್ತು ಮರಿಮಾಡು ತ್ತವೆ. ಮರಿಗಳು ನಗ್ನವಾಗಿ ಜನಿಸುತ್ತವೆ. ಕೊಕ್ಕು ಅಗಲ ಹಾಗೂ ಚಪ್ಪಟೆ ಯಾಗಿದ್ದು ನಾಲಗೆ ದಪ್ಪವಿರುತ್ತದೆ. ಪಕ್ಷಿ ಬೆಳೆದಂತೆಲ್ಲಾ ಕೊಕ್ಕು ಬೆಳೆದು ದಪ್ಪ ವಾಗುತ್ತದೆ. ಅಲ್ಲದೆ ಅವುಗಳ ಹಿಮ್ಮಡಿಯ ಬಳಿ ಮಾಂಸದ ಮೆತ್ತೆ ಉತ್ಪನ್ನವಾಗಿ, ವಿಶ್ರಮಿಸುವಾಗ ಪಕ್ಷಿಯ ದೇಹದ ಭಾರವನ್ನು ಅವೇ ಹೊರುತ್ತವೆ. ಮರಿ ಬೆಳೆದಂತೆ ಇದೂ ಕಡಮೆಯಾಗಿ, ಬೆಳೆದ ಪಕ್ಷಿಗಳಲ್ಲಿ ಕಾಣುವುದೇ ಇಲ್ಲ.

ಕುಟುಂಬ ೬ : ಪಿಸಿಡೀ (Picidae)

(ಮರಕುಟಿಕಗಳು)

ನೈಜ ಮರಕುಟುಕಗಳ ೧೭೯ ಪ್ರಭೇದಗಳನ್ನೂ, ಮತ್ತು ಓರೆಕತ್ತು ಮತ್ತು ಪಿಕ್ಯುಲೆಟ್ ಪಕ್ಷಿಗಳ ೩೧ ಪ್ರಭೇದಗಳನ್ನೂ ಈ ಕುಟುಂಬ ಹೊಂದಿದೆ. ಆಸ್ಟ್ರೇಲಿಯಾ, ಶೀತವಲಯ ಮತ್ತು ಮೆಡಗಾಸ್ಕರ್ ದ್ವಿಪಗಳನ್ನುಳಿದು ಇನ್ನೆಲ್ಲಾ ಸ್ಥಳಗಳಲ್ಲೂ ಕಂಡುಬರುತ್ತದೆ. ಮುಖ್ಯವಾಗಿ ಕಾಡುವಾಸಿಗಳು. ಮರವೇ ಜೀವನಾಧಾರವಾದ್ದರಿಂದ ಮರಗಳಿದ್ದೆಡೆ ಮಾತ್ರ ಕಂಡುಬರುತ್ತವೆ.

ಓರೆಕತ್ತು ಬ್ರಿಟನ್ನಿನಿಂದ, ಜಪಾನಿನವರೆಗೆ ಹರಡಿದ್ದು ದಕ್ಷಿಣಕ್ಕೆ ವಲಸೆ ಹೋಗುವ ಮತ್ತು ಆಫ್ರಿಕಾವಾಸಿಯಾದ ಸಣ್ಣ ಗಾತ್ರದ ೨ ಪಕ್ಷಿಪ್ರಭೇದಗಳು. ಅದರಲ್ಲಿ ಆಫ್ರಿಕಾ ಪ್ರಭೇದ ಸ್ವಲ್ಪ ದಪ್ಪಗಾತ್ರವಿದ್ದು, ಎದೆಯ ಬಳಿ ಕೆಂಪು ಬಣ್ಣವಿದೆ. ಅವು ನೆಲದ ಮೇಲೆ ಅಥವಾ ಮರಗಳಲ್ಲಿ ವಿಶ್ರಮಿಸುತ್ತಾ, ಹಾರಾಡುವ ಕೀಟಗಳನ್ನು ಹಿಡಿದು ತಿನ್ನುವ ಕೀಟಾಹಾರಿಗಳು. ಆದರೆ ತಿನ್ನುವಾಗ ತಲೆಯನ್ನು ಪಕ್ಕಕ್ಕೆ ಹೊರಳಿಸುವುದರಿಂದಲೇ ಅವುಗಳಿಗೆ ಓರೆಕತ್ತು ಪಕ್ಷಿಗಳೆಂದು ಹೆಸರಾಗಿದೆ. ಇರುವೆಗಳೇ ಇಷ್ಟಾಹಾರ. ಅವುಗಳ ಬಾಲ ಮೃದುಗರಿಗಳಿಂದ ಕೂಡಿದ್ದು, ವಿಶ್ರಮಿಸುವಾಗ ಇತರ ಪಕ್ಷಿಗಳಂತೆ ಕೊಂಬೆಗೆ ಅಡ್ಡಲಾಗಿ ಕೂರುತ್ತವೆ. ಕೊಕ್ಕು ಗಟ್ಟಿಯಾಗಿಲ್ಲ. ಇತರ ಪಕ್ಷಿಗಳು ಕೊರೆದು, ಅಥವಾ ತಾನಾಗಿ ಸಂಭವಿಸಿದ ಮರದ ಪೊಟರೆಗಳಲ್ಲೇ ಗೂಡು ರಚಿಸುತ್ತವೆ. ೬ – ೮ ಮೊಟ್ಟೆಗಳನ್ನಿಟ್ಟು ೧೨ – ೧೫ ದಿನಗಳ ಅವಧಿಯಲ್ಲಿ ಹೆಣ್ಣು – ಗಂಡುಗಳೆರಡೂ ಕಾವಿತ್ತು, ಮುಂದೆ ೩ –೪ ವಾರಕಾಲ ಮರಿಗಳನ್ನು ಪೋಷಿಸುತ್ತವೆ.

ಪಿಕ್ಯುಲೇಟ್‌ಗಳು ಬಹು ಸಣ್ಣ ಗಾತ್ರದವು. ಅವೂ ಕೊಂಬೆಗೆ ಅಡ್ಡಲಾಗಿಯೇ ಕುಳಿತು ವಿಶ್ರಮಿಸುವುವು. ಇವುಗಳ ೨೯ ಪ್ರಭೇದಗಳಲ್ಲಿ ಅತ್ಯಂತ ದಪ್ಪ ಗಾತ್ರದವು ಕೇವಲ ೫ ಅಂಗುಲ ಮಾತ್ರವಿರುತ್ತವೆ. ಅವು ಹಗುರ ವರ್ಣವಿದ್ದು ಚುಕ್ಕೆ ಹೊಂದಿರುತ್ತವೆ. ಅಮೇರಿಕಾದ ಮಧ್ಯಭಾಗದಲ್ಲಿ ಅವುಗಳ ಪ್ರಭೇದ ಹೆಚ್ಚು. ಆಗ್ನೇಯ ಏಷ್ಯಾದಲ್ಲಿ ೩ ಪ್ರಭೇದಗಳೂ, ಆಫ್ರಿಕಾದಲ್ಲಿ ಒಂದೇ ಪ್ರಭೇದವೂ ಇವೆ. ಎಲ್ಲಾ ಪೂರ್ಣ ಮರವಾಸಿಗಳು, ಕೀಟಾಹಾರಿಗಳು ಮತ್ತು ಒಂಟಿ ಜೀವಿಗಳು.

ಮರಕುಟುಕಗಳು ಮರಗಳಿಂದ ಉತ್ತಮ ಪ್ರಯೋಜನ ಹೊಂದಲು ನುರಿತ ಪಕ್ಷಿಗಳು. ಅವು ಯಾವಾಗಲೂ ನೇರವಾಗಿ ಮರಕ್ಕಂಟಿದಂತೆ ಕುಳಿತಿರುತ್ತವೆ. ಅದಕ್ಕಾಗಿ ಅವುಗಳ ಕಾಲು ಗಿಡ್ಡ, ಎರಡು ಮುಂಬೆರಳು ನೀಳವಾಗಿದ್ದು, ಉದ್ದನೆಯ ಮೊನಚಾಗಿ ಕೆಳಬಾಗಿದ ಉಗುರು ಹೊಂದಿರುತ್ತವೆ. ಬಾಲಗರಿಗಳು ಗಡುಸಾಗಿದ್ದು, ಮರದ ಮೇಲೆ ಊರಿ, ಪಕ್ಷಿಯನ್ನು ಎತ್ತಿ ಹಿಡಿಯಲು ಸಹಾಯಕವಾಗುತ್ತವೆ. ಬೆರಳುಗಳ ಉಗುರು ತೊಗಟೆಯನ್ನು ಹಿಡಿಯಲು ಅನುಕೂಲ.

ಮರಕುಟುಕಗಳ ನೀಳ ಕೊಕ್ಕು ಮೊನಚಾಗಿ ಮತ್ತು ಅತಿ ಗಟ್ಟಿಯಾಗಿರುತ್ತದೆ. ಅದು ಮರ ಕೊರೆಯಲು ಉತ್ತಮ ಉಳಿಯಂತಹ ಸಾಧನ. ಅವುಗಳ ತಲೆ ದೊಡ್ಡದಾಗಿ, ಮೂಳೆಗಳೆಲ್ಲಾ ದಪ್ಪವಾಗಿರುತ್ತವೆ. ಕತ್ತಿನ ಬಳಿಯ ದೃಢ ಸ್ನಾಯುಗಳು ಈ ಉಳಿಯಂತಹ ಕೊಕ್ಕನ್ನು ಮರಕ್ಕೆ ಬಡಿಯಲೂ, ದಪ್ಪ ಮೂಳೆಯ ತಲೆ ಅದರ ನೋವನ್ನು ತಡೆದುಕೊಳ್ಳಲೂ ಸಹಾಯಕ.

ಅವುಗಳ ನಾಲಗೆ ಇನ್ನೊಂದು ವಿಚಿತ್ರ. ಕೊಕ್ಕಿನಿಂದ ಮುಂದೆ ಬಹು ನೀಳವಾಗಿ ಚಾಚಬಲ್ಲವು. ನಾಲಗೆ ತುದಿಯಲ್ಲಿ ಹಿಂದೆ ಬಾಗಿದ ಮುಳ್ಳಿನಂತಹ ಕೂದಲಿದ್ದು, ಅದಕ್ಕೆ ಅಂಟಿನಂತಹ ಜೊಲ್ಲನ್ನು ಸೃಜಿಸಿ ಸವರುತ್ತವೆ. ಮರ ತೊಗಟೆಗಳಲ್ಲಿನ ಸುರಂಗಗಳಲ್ಲಿರುವ ಕೀಟ ಮರಿಗಳನ್ನು ತನ್ನ ನೀಳ ನಾಲಗೆಯಿಂದ ಹೊರಗೆಳೆದು ತಿನ್ನಲು ಇದೇ ಸಹಾಯಕ.

ಮರಕುಟುಕಗಳು ಮರದ ಕೆಳಭಾಗದಲ್ಲಿ ಮೊದಲು ಕುಳಿತು, ಅಲ್ಲಿಂದ ಮರವನ್ನು ಸುತ್ತಿ ಹತ್ತುತ್ತವೆ. ಆಗಾಗ ಪ್ರತಿ ತೂತು ಬಿರುಕುಗಳನ್ನು ಹುಡುಕಿ ಹುಳು ಹುಪ್ಪಟೆಗಳನ್ನು ಅರಸುತ್ತವೆ. ಮರದ ತೊಗಟೆಯ ಒಳಗೆ ಕೀಟ ಸುರಂಗ ಮಾಡಿರುವ ಸುಳಿವು ದೊರೆತರೆ ಕೊಕ್ಕಿನಿಂದ ಆ ಸುರಂಗದವರೆಗೂ ರಂಧ್ರಮಾಡಿ, ತನ್ನ ನೀಳ ನಾಲಗೆಯನ್ನು ಒಳಚಾಚಿ ಹುಳವನ್ನು ಹಿಡಿಯುತ್ತದೆ. ಮರದ ತುದಿಯನ್ನು ತಲುಪಿದೊಡನೆಯೇ ಪಕ್ಕದ ಮರದ ಬುಡಕ್ಕೆ ಹಾರಿ ಪುನಃ ಅದೇ ಕಾರ್ಯವೆಸಗುತ್ತದೆ.

ಅವುಗಳು ಚೆನ್ನಾಗಿ ಹಾರಬಲ್ಲವಾದರೂ ಬಹುದೂರ ಹಾರುವುದಿಲ್ಲ. ಹಾರುವಾಗ ಮೇಲಕ್ಕೆ ಕೆಳಕ್ಕೆ ತೂಗಿದಂತೆ ಹಾರುತ್ತಾ ಮುಂದುವರಿಯುತ್ತವೆ. ಹಲವು ಪ್ರಭೇದಗಳು ನೆಲದಮೇಲಿನ ಇರುವೆಗಳನ್ನು ತಿನ್ನುತ್ತವೆ. ಇವು ಮಾತ್ರ ಚಳಿಗಾಲದಲ್ಲಿ ಆಹಾರ ಅಭಾವವಿದ್ದಾಗ ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಉತ್ತರ ಅಮೇರಿಕಾದ ಒಂದು ಸಣ್ಣ ಗಾತ್ರದ ಪ್ರಭೇದ ಮರ ಕೊರೆದು ಸಾರ ಕುಡಿಯುತ್ತವೆ.

ಶ್ರಮಜೀವಿಗಳು. ಗುಂಪಾಗಿರುವುದಿಲ್ಲ. ಗಲಭೆ ಮಾಡಲಾರವು. ಮರ ಮಾಡುಗಳನ್ನು ಕುಟ್ಟಿ ಶಬ್ದ ಮಾಡುತ್ತವೆ. ಉತ್ತರ ವಲಯದಲ್ಲಿ ಅಮೇರಿಕಾದಿಂದ ಏಷ್ಯಾವರೆಗೆ ಸುಮಾರು ೩೦ ಪ್ರಭೇದಗಳು ಕಂಡುಬರುತ್ತವೆ. ಹಲವು ಕಪ್ಪು ದೇಹದ ಮೈಮೇಲೆ ಬಿಳುಪು ಮಚ್ಚೆ ಹೊಂದಿರುತ್ತವೆ.

ಗಂಡಿಗೆ ತಲೆ ಕೆಂಪಗಿರಬಹುದು. ದಪ್ಪ ಮತ್ತು ಸಣ್ಣ ಗಾತ್ರದ ಪ್ರಭೇದಗಳು ಒಂದೇಕಡೆ ಜೀವಿಸಿದ್ದು, ಸಣ್ಣ ಗಾತ್ರದವು ತುದಿಯ ಸಣ್ಣ ಕೊಂಬೆಗಳಿಂದಲೂ, ದೊಡ್ಡವು ಮರ ಬುಡ ಮತ್ತು ದಪ್ಪ ಗಾತ್ರದ ಕೊಂಬೆಗಳಿಂದಲೂ ಆಹಾರ ಹೊಂದುತ್ತವೆ. ಹಲವು ಪ್ರಭೇದಗಳಿಗೆ ಮೂರೇ ಬೆರಳಿದ್ದು ಹಳದಿ ತಲೆ ಹೊಂದಿರುತ್ತವೆ. ಅವು ಉತ್ತರ ಸಮಶೀತೋಷ್ಣ ವಲಯದಲ್ಲಿ ಹೆಚ್ಚು. **ಕೆಂಪು ತಲೆಯ ಮರಕುಟುಕ** ಅಮೇರಿಕಾದ ಪ್ರಭೇದ. ಅದರಲ್ಲಿನ ಪ್ರಭೇದವೊಂದು ಮರ ಅಥವಾ ಮರದ ಕಂಬಗಳನ್ನು ಕೊರೆದು ತೂತುಮಾಡಿ, ಅದರಲ್ಲಿ ಅಕರಾನ್ಸ್ ಕಾಯಿಗಳನ್ನು

ಶೇಖರಿಸಿಟ್ಟು, ಆಹಾರಾಭಾವವಾಗುವ ಚಳಿಗಾಲದಲ್ಲಿ ಉಪಯೋಗಿಸುತ್ತದೆ. **ರಸ ಹೀರುವ ಮರಕುಟುಕ**ಗಳ ೨ ಪ್ರಭೇದಗಳೂ ಅಮೇರಿಕಾ ದೇಶದವೇ. ಮರಗಳಲ್ಲಿ ತೂತು ಕೊರೆದು ರಸ ಹೊರಟಾಗ ಅದನ್ನು ಹೀರಿ ಕುಡಿಯುತ್ತವೆ. ಅಲ್ಲದೆ ಆ ರಸಕ್ಕೆ ಆಕರ್ಷಿತವಾದ ಕೀಟಗಳನ್ನು ತಿನ್ನುತ್ತವೆ.

ಉತ್ತರ ಮತ್ತು ದಕ್ಷಿಣ ಅಮೇರಿಕಾದ **ಫ್ಲಿಕ್ಕರ್**‌ಗಳು ಸಣ್ಣಗಾತ್ರದ ಇರುವೆ ತಿನ್ನುವ ನೆಲವಾಸಿಗಳು. ಮರದಲ್ಲಿ ತೂತು ಕೊರೆದೇ ಗೂಡು ರಚಿಸುವುದು. ಆಫ್ರಿಕಾದ **ನೆಲಮರಕುಟುಕ** ಮಾತ್ರ ನೆಲದಲ್ಲಿ ಸುರಂಗ ಕೊರೆದು ಗೂಡು ರಚಿಸುತ್ತದೆ.

ಮರಕುಟುಕಗಳ ಗೂಡು ಮರದಲ್ಲಿ ಹಲವು ಅಂಗುಲ ನೇರವಾಗಿ ಕೊರೆದಿದ್ದು, ನಂತರ ೧ – ೨ ಅಡಿ ಆಳವಾಗುತ್ತದೆ. ತಳಭಾಗ ಸ್ವಲ್ಪ ಅಗಲವಾಗಿ, ಅಲ್ಲಿಯೇ ಅವು ೨ – ೩ ಮೊಟ್ಟೆಯಿಟ್ಟು, ೧೨ – ೧೮ ದಿನಗಳು ಕಾವಿತ್ತು ಮರಿಮಾಡುತ್ತವೆ. ಹೆಣ್ಣು ಗಂಡುಗಳೆರಡೂ ಮರಿ ಪೋಷಣೆಯಲ್ಲಿ ಪೂರ್ಣ ಭಾಗವಹಿಸುತ್ತವೆ.

ಈ ಪ್ರಭೇದಗಳಲ್ಲಿ ಅಮೇರಿಕಾದ **ದಂತ ಕೊಕ್ಕಿನ ಮರಕುಟುಕ** ಅತ್ಯಂತ ದಪ್ಪ ಗಾತ್ರದ, ಸುಂದರ ಪಕ್ಷಿ. ದಟ್ಟ ಕಾಡುಗಳಲ್ಲಿ ವಾಸಿಸುತ್ತವೆ. ಇತ್ತೀಚೆಗೆ ಅವು ಕಾಡುನಾಶದಿಂದ ಬಹುಶಃ ಪೂರ್ಣವಾಗಿ ನಶಿಸಿರಬಹುದೆಂದು ಶಂಕಿಸಲಾಗಿದೆ. ಅವು ವಾಸವಿರುವೆಡೆ ದಪ್ಪ ಮರಗಳನ್ನು ಕಡಿದು ತೆಗೆದಿರುವುದೇ ಈ ಪ್ರಭೇದಗಳ ನಾಶಕ್ಕೆ ಮುಖ್ಯ ಕಾರಣವೆಂದು ತೋರುತ್ತದೆ.

ಉಪವರ್ಗ ೨೭ : ಪಸೇರಿಫಾರ್‌ಮಿಸ್ (Passeriformes)

(ಕೊಂಬೆ ಹಿಡಿದು ವಿಶ್ರಮಿಸುವ ಪಕ್ಷಿಗಳು)

ಕುಟುಂಬ ೫೭

ಪ್ರಭೇದ ೫೧೬೦

ಪಕ್ಷಿವರ್ಗದಲ್ಲೇ ಅತ್ಯಂತ ಉನ್ನತ ಮಟ್ಟದ ಅಭಿವೃದ್ಧಿ ಹೊಂದಿರುವ ಹೆಚ್ಚು ವೈವಿಧ್ಯತೆಯುಳ್ಳ ಪಕ್ಷಿಗಳಿವು. ಎಲ್ಲವೂ ಕೊಂಬೆಯಲ್ಲಿ ನೆಲಸಲು ಹೊಂದಿಕೊಂಡಿರುತ್ತವೆ. ಈಗ ಜೀವಂತವಿರುವ ಪಕ್ಷಿ ಸಂಖ್ಯೆಯ ೩/೫ ಭಾಗ ಈ ಒಂದು ಉಪವರ್ಗದವು. ಎಲ್ಲವೂ ಭೂವಾಸಿಗಳು. ಇದಕ್ಕೆ ಸೇರುವ ೫೧೬೦ ಪ್ರಭೇದಗಳನ್ನು ೫೭ ಕುಟುಂಬಗಳಾಗಿ ವಿಂಗಡಿಸಲಾಗಿದೆ.

ಅವುಗಳಲ್ಲಿ ಅತ್ಯಂತ ದಪ್ಪ ಗಾತ್ರದವು ಕಾಗೆಗಳೇ. ಅವನ್ನು ಬಿಟ್ಟರೆ ಮಿಕ್ಕವೆಲ್ಲಾ ಸಣ್ಣ ಗಾತ್ರದವು. ಎಲ್ಲಕ್ಕೂ ನಾಲ್ಕು ಬೆರಳುಗಳಿದ್ದು, ಒಂದು ಮುಂದೆ ೩ ಹಿಂದೆ ಬಾಗಿರುತ್ತವೆ. ಈ ರಚನೆ ಅವು ಕೊಂಬೆ ಹಿಡಿದು ವಿಶ್ರಮಿಸಲು ಅನುಕೂಲ. ಹಿಂಬೆರಳು ದೃಢವಾಗಿದ್ದು ಮುಂದೆ ತಿರುಗಿಸುವಂತಿರುವುದಿಲ್ಲ. ಬೀಜಾಣು ಸ್ಪಷ್ಟವಾಗಿ ವೃದ್ಧಿಯಾಗಿದೆ. ಮರಿ ನಿಸ್ಸಹಾಯಕವಾಗಿ ಕೂದಲಿಲ್ಲದೆ ಜನಿಸಿ ಬೆಳೆಯುತ್ತವೆ.

ಅವುಗಳ ಕತ್ತಿನ ಬಳಿಯ ಶಬ್ದ ಸ್ನಾಯುಗಳಿಂದ ಅವುಗಳನ್ನು ೪ ಮುಖ್ಯ ಉಪ ಪಂಗಡಗಳಾಗಿ ವಿಭಾಗಿಸಿ, ೫ – ೮ ಜೊತೆ ಸ್ನಾಯುಗಳುಳ್ಳವೇ ಅತ್ಯಂತ ಪ್ರಬಲವಾದ ಪ್ರಭೇದಗಳೆಂದು ಪರಿಗಣಿಸಲಾಗಿದೆ. ಇದೊಂದು ಉಪಪಂಗಡಕ್ಕೆ ೪೦೦೦ಕ್ಕೆ ಮೇಲ್ಪಟ್ಟ ಪಕ್ಷಿಪ್ರಭೇದಗಳು ಸೇರಿದ್ದು, ಅವೇ ಪ್ರಪಂಚದಲ್ಲಿ ಪಕ್ಷಿ ಸಮೂಹದ ಅರ್ಧದಷ್ಟಾಗುತ್ತವೆ. ಇವುಗಳ ಸ್ಪಷ್ಟ ಪಂಗಡ ವಿಭಜನೆ ಇನ್ನೂ ಸಾಧ್ಯವಾಗಿಲ್ಲ.

ಕುಟುಂಬ ೧ : ಯೂರಿಲೈಮಿಡೀ (Eurylaimidae)
(ಅಗಲ ಕೊಕ್ಕು ಪಕ್ಷಿಗಳು)

ಇವು ಪೂರ್ವಾರ್ಧಗೋಳದ ೧೪ ಪ್ರಭೇದಗಳು. ಅವುಗಳ ೨ ಮುಂಬೆರಳುಗಳು ತಳದಲ್ಲಿ ಕೂಡಿರುತ್ತವೆ. ಒಂದೇ ಜೊತೆಯ ಶಬ್ದ ಸ್ನಾಯುಗಳೂ, ಕತ್ತಿನ ಬಳಿ ೧೫ ಕಶೇರು ಖಂಡಗಳೂ ಅವುಗಳ ಕುಟುಂಬ ಸೂಚಕ. ಗಿಡ್ಡ ಕೊಕ್ಕು ಬುಡದಲ್ಲಿ ಅಗಲವಾಗಿ ಚಪ್ಪಟೆಯಾಗಿರುತ್ತದೆ. ೫ – ೧೧ ಅಂಗುಲ ಉದ್ದ ದೇಹ, ಗಿಡ್ಡ ಕತ್ತು, ಮೊನಚು ಕೊಕ್ಕಿನ ತುದಿ ಕೊಕ್ಕೆಯಂತೆ ಕೆಳಬಾಗಿರುವುದು ಇವುಗಳಿಗೆ ಸಾಮಾನ್ಯ. ಅಚ್ಚ ನೀಲಿ ಮತ್ತು ಹಸಿರು ವರ್ಣದ ಗರಿಗಳು ಮೃದುವಾಗಿರುತ್ತವೆ. ಗಂಡಿಗೆ ಬಣ್ಣ ಹೆಚ್ಚು.

ಈ ಕುಟುಂಬದಲ್ಲಿ ಎರಡು ಪಂಗಡಗಳಿವೆ. ಮೊದಲನೆಯದಕ್ಕೆ ಆಗ್ನೇಯ ಏಷ್ಯಾದಿಂದ, ಬೋರ್ನಿಯೋವರೆಗಿನ ೭ ಪ್ರಭೇದ ಸೇರುತ್ತವೆ. ಅವುಗಳಿಗೆ ವಿವಿಧ ವರ್ಣವಿದ್ದು, ನೀಳ ಬಾಲ, ಸಾಮಾನ್ಯ ಕೊಕ್ಕು ಇರುತ್ತವೆ. ಶಿಖೆಯಿರುವುದಿಲ್ಲ.

ಎರಡನೆಯ ಪಂಗಡಕ್ಕೆ ಚೈನಾ, ಜಪಾನ್ ಬಳಿಯ ಹಸಿರು ವರ್ಣದ ಗುಜ್ಜ ಬಾಲದ, ಕೊಕ್ಕನ್ನು ಮುಚ್ಚುವಂತಹ ಗರಿ ಶಿಖೆಯಿರುವ, ಅಚ್ಚ ಹಸಿರು ಬಣ್ಣದ ಸಣ್ಣ ಗಾತ್ರದ ಪಕ್ಷಿಗಳ ೩ ಪ್ರಭೇದ ಸೇರುತ್ತವೆ.

ಮರದ ತುದಿ ಅಥವಾ ನೆಲದಮೇಲಿರಬಲ್ಲವು. ಎಲ್ಲಾ ಸ್ಥಳವಾಸಿಗಳೇ. ಅವುಗಳಲ್ಲಿ ಕೇವಲ ೫ ಅಂಗುಲ ಉದ್ದದೇಹದ, ಹಸಿರು ಮೈ ಮತ್ತು ನೀಲಿ ಕಂಠ ವರ್ಣ ಹೊಂದಿರುವ ' ಗ್ರಾವರ್ ಅಗಲ ಕೊಕ್ಕು ' ಕೇವಲ ಹಲವೇ ಪಕ್ಷಿ ಜೀವಿಸಿರುವ ಪ್ರಭೇದ. ೨ ಪ್ರಭೇದ ಬೋರ್ನಿಯೋ ದಟ್ಟ ಕಾಡುಗಳಲ್ಲಿ ಮಾತ್ರ ವಾಸಿಸುತ್ತವೆ.

' ನೀಳ ಬಾಲದ ಅಗಲ ಕೊಕ್ಕು ' ಹಿಮಾಲಯದಿಂದ ಸುಮಾತ್ರಾವರೆಗೆ ಸಾಮಾನ್ಯವಾಗಿ ಕಂಡುಬರುವ ಪ್ರಭೇದ. ಎಲ್ಲಾ ಕೀಟಾಹಾರಿಗಳು. ಗಿಳಿಗಳಂತೆ ಸಣ್ಣ ಗುಂಪುಗಳಾಗಿ ಹಾರಾಡುತ್ತಿರುತ್ತವೆ. ಹಲ್ಲಿ ಮತ್ತು ಕಪ್ಪೆಗಳನ್ನು ತಿನ್ನಬಲ್ಲವು. ' ಹಸಿರು ಅಗಲ ಕೊಕ್ಕು ' ಮಾತ್ರ ಹಣ್ಣು ತಿನ್ನುವ ಪ್ರಭೇದ. ಹೆಚ್ಚು ಗಲಭೆ ಮಾಡದ ಒಂಟಿ ಜೀವಿಗಳು.

ಉತ್ತಮ ಗೂಡು ರಚಿಸಲೂ ನುರಿತವು. ಹುಲ್ಲು, ಬೇರು ಮತ್ತು ನಾರುಗಳಿಂದ ಹಣಚೀಲದಂತಹ ಮಧ್ಯೆ ಪೊಳ್ಳಾದ ಗೂಡು ಹೆಣೆಯುತ್ತವೆ. ಗೂಡು ಎರಡು ತುದಿಗಳಲ್ಲೂ ಕಿರಿದಾಗಿ ಮಧ್ಯೆ ಅಗಲವಾಗುತ್ತದೆ. ಗೂಡನ್ನು ತೆಳ್ಳನೆಯ

ದಾರದಿಂದ ಕೊಂಬೆಗೆ ನೇತುಹಾಕುತ್ತವೆ. ಗೂಡು ಸಾಮಾನ್ಯವಾಗಿ ನದಿ, ಕೆರೆ ಅಥವಾ ಕೊಳಗಳ ನೀರಿನಮೇಲೆ ನೇತಾಡುವಂತಿರುತ್ತವೆ. ಗೂಡಿನ ಮಧ್ಯೆ ಅಗಲವಾಗಿದ್ದು ಪಕ್ಕದ ರಂಧ್ರದ ಮೂಲಕವೇ ಹಕ್ಕಿಗಳು ಒಳನುಗ್ಗುವುದು. ಈ ಗೂಡಿನಲ್ಲಿ ೩ – ೫ ಮೊಟ್ಟೆಯಿಟ್ಟು, ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿ ಮಾಡುತ್ತವೆ. ಪರ್ವಕಾಲದಲ್ಲಿ ಗಂಡುಗಳು ತಮ್ಮ ರೆಕ್ಕೆಯಡಿಯ ವಿವಿಧ ವರ್ಣದ ಗರಿಗಳನ್ನು ತೋರ್ಕೆಗೆ ಏರ್ಪಡಿಸಿ ಹೆಣ್ಣನ್ನು ಆಕರ್ಷಿಸುತ್ತವೆ.

ಕುಟುಂಬ ೨ : ಡೆಂಡ್ರೋಕೋಲಾಪ್ಟಿಡೀ (Dendrocolaptidae)
(ಮರ ತೆವಳು ಪಕ್ಷಿಗಳು)

ಮೆಕ್ಸಿಕೋದಿಂದ, ಅರ್ಜೆಂಟೈನಾವರೆಗೆ ಕಂಡುಬರುವ ಸಣ್ಣ ಗಾತ್ರದ ೪೮ ಪ್ರಭೇದಗಳಿವು. ಸ್ವಲ್ಪ ಅಂಟಿರುವ ಮುಂಬೆರಳುಗಳೂ ೨ ಜೊತೆ ಶಬ್ದಸ್ನಾಯುಗಳೂ ಇವುಗಳಿಗಿದ್ದು ಈ ಉಪವರ್ಗದ ಹಿಂದುಳಿದ ಪಕ್ಷಿಗಳಿವು. ಮರಕುಟಕಗಳಂತೆ ಮರದ ತೊಗಟೆಗಳಿಗೆ ನೇರವಾಗಿ ಕಾಲ್ಬೆರಳು ಉಗುರುಗಳಿಂದ ಅಂಟಿದಂತೆ ಕುಳಿತಿರುತ್ತವೆ. ಎಲ್ಲವೂ ಕಂದು ಬಣ್ಣದವೇ. ಹಲವು ವಿವಿಧ ಕಪ್ಪು, ಬೂದು ಅಥವಾ ಬಿಳುಪು ಪಟ್ಟೆ ಅಥವಾ ಚುಕ್ಕೆ ಹೊಂದಿರುತ್ತವೆ. ಹೊಳ್ಳೆಗಳು ದುಂಡು, ಸಾಮಾನ್ಯ ಉದ್ದದ ಬಾಲ. ದೇಹಕ್ಕೆ ಆಸರೆಯಾಗಿ ಮರಕ್ಕೆ ಆತು ನಿಲ್ಲುತ್ತವೆ.

೫ ಅಂಗುಲದಿಂದ ೧೫ ಅಂಗುಲ ಉದ್ದವಿರುತ್ತವೆ. ಮರದ ತೊಗಟೆ ಸಂದಿಯಿಂದ ತೂತುಗಳಿಂದ ಅಥವಾ ಮೇಲೆ ಬೆಳೆದಿರುವ ಜರೀಗಿಡ ಅಪ್ಪುಗಿಡ ಮುಂತಾದುವುಗಳಲ್ಲಿ ಹುಡುಕಿ ತಮ್ಮ ಮುಖ್ಯಾಹಾರವಾದ ವಿವಿಧ ಕೀಟ, ಮತ್ತು ಮರಿಗಳನ್ನು ಹುಡುಕಿ ತೆಗೆಯಲು ಅನುಕೂಲವಾಗುವಂತಹ ಮೊನಚಾಗಿ ಗಿಡ್ಡವಾಗಿ ನೇರವಾಗಿರುವ ಅಥವಾ ಉದ್ದವಾಗಿ ಕೆಳಬಾಗಿರುವ ಕೊಕ್ಕುಗಳಿವೆ. ಮರಕುಟುಕಗಳಂತೆಯೇ ಮರ ಬುಡಗಳಲ್ಲಿ ಮೊದಲು ಕುಳಿತು ಅಲ್ಲಿಂದ ಮೇಲಕ್ಕೆ ಸುರುಳಿ ಸುತ್ತಿ ಹತ್ತಿ, ಇನ್ನೊಂದು ಮರದ ಬುಡಕ್ಕೆ ಹಾರುತ್ತವೆ. ಅವು ಸಾಮಾನ್ಯವಾಗಿ ಒಂಟಿ ಅಥವಾ ಜೊತೆಗೂಡಿ ವಾಸಿಸುವುವು. ಚೆನ್ನಾಗಿ ಹಾರಬಲ್ಲವಾದರೂ ಸ್ಥಳವಾಸಿಗಳು. ದೂರ ವಲಸೆ ಹೋಗುವುದಿಲ್ಲ.

ಎಲ್ಲವೂ ಪೊಟರೆ ಗೂಡಿನವೇ. ಆದರೆ ಅವುಗಳ ಕೊಕ್ಕು ದೃಢವಾಗಿಲ್ಲದಿರುವುದರಿಂದ ಇತರ ಪಕ್ಷಿಗಳು ತ್ಯಜಿಸಿದ ಗೂಡುಗಳನ್ನೊ, ಸ್ವಾಭಾವಿಕವಾಗಿ ಉತ್ಪನ್ನವಾದ ಮರ ಪೊಟರೆಗಳನ್ನೋ ಆರಿಸಿ, ಹಾಗೆಯೇ ಅಥವಾ ಹಲವು ಚಕ್ಕೆ ಮತ್ತು ಎಲೆಗಳನ್ನು ಒಳಗೆ ಹರಡಿ, ೨ – ೩, ಮೊಟ್ಟೆಯಿಡುತ್ತವೆ. ಮರಿ ಬೆಳೆಯುವುದರಲ್ಲಿ ಅವು ಎಲೆ ಚಕ್ಕೆಗಳನ್ನು ಆಗಾಗ ಬದಲಾಯಿಸಬಹುದು. ೧೭ – ೧೫ ದಿನಗಳು ಹೆಣ್ಣು ಗಂಡು ಗಳೆರಡೂ ಕಾವು ಕೊಡುತ್ತವೆ. ನಿಸ್ಸಹಾಯಕ ಮರಿ ಜನಿಸಿ ಮೂರುವಾರಗಳಲ್ಲಿ ಪೂರ್ಣ ಬೆಳೆಯುತ್ತವೆ.

ಕುಟುಂಬ ೩ : ಫರ್‌ನರಿಡೀ (Furnariidae)

(ಒಲೆ ಪಕ್ಷಿಗಳು.)

ಇವು ದಕ್ಷಿಣ ಅಮೇರಿಕಾದ ದಕ್ಷಿಣಭಾಗದ ವಾಸಿಗಳು. ೫ ರಿಂದ ೧೧ ಅಂಗುಲ ಉದ್ದ ದೇಹದ ೨೧೫ ಪ್ರಭೇದಗಳಿವೆ. ಸಾಮಾನ್ಯ ಕಂದು ಬಣ್ಣದ ಮೇಲ್ಮೈ, ಹಗುರ ವರ್ಣದ ತಳಭಾಗ ಮತ್ತು ಹಳದಿ ಕತ್ತು ಹೊಂದಿರುತ್ತವೆ. ಇವುಗಳ ಹೊಳ್ಳೆ ನೀಳವಾಗಿರುತ್ತವೆ. ಹಲವು ಪ್ರಭೇದಗಳು ಮುಚ್ಚಿದ ಅಗ್ಗಿಷ್ಟಿಕೆಗಳಂತಹ ಗೂಡು ರಚಿಸಿರುವುದರಿಂದ ಅವುಗಳಿಗೆ ಒಲೆ ಪಕ್ಷಿಗಳೆಂದು ಹೆಸರುಬಂದಿದೆ.

ಹೆಚ್ಚು ಪ್ರಭೇದಗಳು ಕಾಡುವಾಸಿಗಳು. ಹಲವು ಸಮುದ್ರತೀರದ ಮರಳು ದಿಣ್ಣೆಗಳಲ್ಲೂ, ಪೊದರು ಮೈದಾನಗಳಲ್ಲೂ, ಹುಲ್ಲುಗಾವಲುಗಳಲ್ಲೂ ವಾಸಿಸುತ್ತವೆ. ಇವು ಕೀಟಾಹಾರಿಗಳು. ಹಲವು ಮಾತ್ರ ಹಣ್ಣು, ಬೀಜ, ಕಾಳು ತಿನ್ನುತ್ತವೆ. ಮರ ಕುಟುಕಗಳಂತೆ ಬಾಲ ಮರ ಹತ್ತುವ ಪ್ರಭೇದಗಳಿಗೆ ಆಸರೆಯೀಯುತ್ತವೆ. ಅನೇಕ ಪ್ರಭೇದ ನೆಲದಮೇಲೆ ವಾಸಿಸಿ, ಲಾರ್ಕ್ ಗುಬ್ಬಚ್ಚಿಗಳಂತೆ ಆಹಾರ ಹುಡುಕಿ ತಿನ್ನುತ್ತವೆ. ಕೊಕ್ಕು ಸಣ್ಣ ಮತ್ತು ನೇರವಾಗಿರುತ್ತದೆ.

ಹೆಣ್ಣು ಗಂಡುಗಳೆರಡೂ ಸೇರಿ ಗೂಡು ರಚಿಸಿ, ೨ – ೬ ಮೊಟ್ಟೆಯಿಟ್ಟು ೧೫ – ೨೦ ದಿನಗಳು ಕಾವಿತ್ತು ಮರಿಮಾಡುತ್ತವೆ. ವಿವಿಧ ರೀತಿಯ ಗೂಡು ರಚಿಸುತ್ತವೆ. ಕೆಲವು ೫ – ೧೦ ಅಡಿ ನೀಳದ ಸುರಂಗ ಕೊರೆದು, ಹುಲ್ಲು ಮೆತ್ತೆ ಏರ್ಪಡಿಸುತ್ತವೆ. ಕಲ್ಲು, ಮರ, ಗೂಡುಗಳಲ್ಲಿನ ಪೊಟರೆಗಳಲ್ಲಿ ಹಲವು ಮರಿಮಾಡುತ್ತವೆ. ಹಲವು ಪ್ರಭೇದಗಳು ನೆಲ ಅಥವಾ ಮರದಮೇಲೆ ಹುಲ್ಲು ಕಡ್ಡಿಗಳಿಂದ ವಿವಿಧ ಗಾತ್ರದ ಗೂಡು ನಿರ್ಮಿಸುತ್ತವೆ. ಒಂದು ಪ್ರಭೇದ ಮರದಮೇಲೆ ಉದ್ದನೆಯ ದಪ್ಪ ಗೂಡನ್ನು ಸಾಮೂಹಿಕವಾಗಿ ರಚಿಸಿ ಅದರಲ್ಲಿ ಹಲವು ಕೋಣೆಗಳೇರ್ಪಡಿಸಿ ಪ್ರತಿಯೊಂದರಲ್ಲಿ ಒಂದು ಜೊತೆ ಮರಿಮಾಡುತ್ತವೆ. ಜೊಂಡು ಬಳಿಯ ಪ್ರಭೇದವೊಂದು ಜೊಂಡು ಚೂರುಗಳಿಂದ ವರ್ತುಲಾಕಾರದ ಗೂಡನ್ನು ರಚಿಸಿ ಮಣ್ಣು ಸವರುತ್ತದೆ. ಬ್ರೆಜಿಲ್ ಉರುಗ್ವೇ ಬಳಿಯ ಸಣ್ಣ ಪಕ್ಷಿಯೊಂದು ವರ್ತುಲಾಕಾರದ ಮಣ್ಣು ಗೂಡುಗಳನ್ನು ಮಳೆಗಾಲದಲ್ಲಿ ರಚಿಸುತ್ತವೆ. ರಚನೆಯಲ್ಲಿ ಹುಲ್ಲು ಕಡ್ಡಿಗಳೂ ಸೇರಿರಬಹುದು. ಮನೆಮಾಡು, ಬೇಲಿ, ಮರ ಎಲ್ಲಿಯಾದರೂ ಗೂಡು ರಚಿಸಬಲ್ಲವು. ಗೂಡು ದೃಢವಾಗಿದ್ದು ಅನೇಕ ವರ್ಷ ಉಪಯುಕ್ತವಾಗುತ್ತವೆ. ಪ್ರತಿವರ್ಷವೂ ಹೊಸ ಗೂಡನ್ನೇ ಅವು ರಚಿಸಿಕೊಳ್ಳುತ್ತವೆ. ಅವು ತ್ಯಜಿಸಿದ ಗೂಡನ್ನು ಇತರ ಪಕ್ಷಿಗಳು ಉಪಯೋಗಿಸಿಕೊಳ್ಳುತ್ತವೆ.

ಕುಟುಂಬ ೪ : ಫಾರ್‌ಮಿಕಾರಿಡೀ (Formicariidae)

(ಇರುವೆ ಪಕ್ಷಿಗಳು)

ಇವೂ ಕೂಡ ಮಧ್ಯ ಮತ್ತು ದ. ಅಮೇರಿಕಾ ವಾಸಿಗಳು. ಅಮೇಜಾನ್ ಕಾಡುಗಳಲ್ಲಿ ಹೆಚ್ಚಾಗಿ ವಾಸಿಸುವ ೨೨೧ ಪ್ರಭೇದಗಳನ್ನೊಳಗೊಂಡ ಕುಟುಂಬ

೪ – ೧೨ ಅಂಗುಲ ಉದ್ದ ದೇಹದ ಸಣ್ಣ ಪಕ್ಷಿಗಳು. ಹಗುರ ಬಣ್ಣ. ಮುಂಬೆರಳು ಗಳು ಸ್ವಲ್ಪ ಅಂಟಿರುತ್ತವೆ. ಕೊಕ್ಕು ಸ್ವಲ್ಪ ನೀಳವಾಗಿ ತುದಿ ಕೆಳಬಾಗಿರುತ್ತದೆ. ಗೂಡು ಗಳ ರಚನೆ ಸರಳ ಹಾಗೂ ಹೆಚ್ಚು ವೈವಿಧ್ಯತೆ ಹೊಂದಿರುವುದಿಲ್ಲ. ಕೆಲವು ಮಾತ್ರ ನೆಲದ ಮೇಲೆ ಅಥವಾ ಪೊಟರೆಗಳಲ್ಲಿ ಮುಚ್ಚಿದ ಗೂಡು ಕಟ್ಟುತ್ತವೆ. ಆದರೆ ಹೆಚ್ಚಾಗಿ ಬಟ್ಟಲಿನಾಕಾರದ ಗೂಡನ್ನು ನೆಲದಮೇಲೆ ಅಥವಾ ಕೊಂಬೆ ಅಕ್ಷದಲ್ಲಿ ಕಟ್ಟುವುದೇ ಹೆಚ್ಚು.

ಕಾಡುವಾಸಿಗಳು. ಇರುವೆ ಹೆಚ್ಚಿರುವ ಪ್ರದೇಶದಲ್ಲೇ ಹೆಚ್ಚು ವಾಸ. ಇರುವೆ ಗೆದ್ದಲುಗಳೇ ಮುಖ್ಯಾಹಾರ. ಕೆಲವು ಇರುವೆ ದಂಡನ್ನು ಹಿಂಬಾಲಿಸಿ, ಅವುಗಳನ್ನೂ ಇತರ ಕೀಟಗಳನ್ನೂ ಹಿಡಿದು ತಿನ್ನುತ್ತವೆ. ಸೈನಿಕ ಇರುವೆಗೆ ಕಾಡಿನಲ್ಲಿನ ಪ್ರಾಣಿಗಳೆಲ್ಲಾ ಹೆದರಿದರೂ, ಈ ಪಕ್ಷಿಗಳು ಮಾತ್ರ ಹೆದರದೆ ಅವುಗಳನ್ನು ತಿನ್ನುತ್ತಾ ಹಿಂಬಾಲಿಸು ತ್ತವೆ. ದೂರ ಹಾರಲಾರದ, ವಲಸೆ ಹೋಗದ ಪಕ್ಷಿಗಳು. ಅನೇಕ ಪ್ರಭೇದ ಗಳು ವಿವಿಧ ಪಕ್ಷಿವರ್ಗ ಪ್ರಭೇದಗಳನ್ನು ಹೋಲುತ್ತಿದ್ದು, ಅವುಗಳಿಗೆ ಅದೇ ಹೆಸರಿಟ್ಟು ಕರೆಯಲಾಗುತ್ತಿದೆ. ಹಲವು ಜೋರಾಗಿ ಕೂಗುತ್ತವೆ.

ಬಟ್ಟಲಿನಾಕಾರದ ಗೂಡು ರಚಿಸಿ, ೨ – ೩ ಮೊಟ್ಟೆಯಿಟ್ಟು, ಹೆಣ್ಣು ಗಂಡು ಗಳೆರಡೂ ಕಾವಿತ್ತು ಮರಿಮಾಡುತ್ತವೆ. ೧೫ – ೧೮ ದಿನಗಳು ಕಾವಿನವಧಿ. ನಿಸ್ಸಹಾಯಕ ಮರಿಗಳು ೧೦ – ೧೨ ದಿನಗಳಲ್ಲೆ ಪೂರ್ಣ ಬೆಳೆದು ಗೂಡು ಬಿಡುತ್ತವೆ.

ಕುಟುಂಬ ೫ : ಕೊನೊಫೋಗಿಡೀ (Conophogidae)
(ಇರುವೆ ಪಿಪ್ಪಿಟ್‌ಗಳು)

ಅಮೇಜಾನ್ ಕಾಡುಗಳಲ್ಲಿ ವಾಸಿಸುವ ಬಹು ಸಣ್ಣ ಗಾತ್ರದ ೧೦ ಪ್ರಭೇದಗಳಿವು. ಕೇವಲ ೫ – ೬ ಅಂಗುಲ ನೀಳದ, ಉದ್ದ ಕಾಲಿನ, ಕಂದು ಅಥವಾ ಪಾಚಿಹಸಿರು ಬಣ್ಣದವು. ದುಂಡು ದೇಹ. ಅವುಗಳ ಗರಿ ಮೃದುವಾಗಿ ನುಣುಪಾಗಿರುತ್ತದೆ. ದೂರ ಹಾರಲಾರದ, ವಲಸೆ ಹೋಗದ ಪಕ್ಷಿಗಳು. ಇರುವೆ ಪಕ್ಷಿಗಳಂತಿದ್ದರೂ ಅವುಗಳ ಕೊಕ್ಕು ಚಪ್ಪಟೆಯಾಗಿರುತ್ತದೆ.

ದಟ್ಟ ಮರಗಳ ಎಲೆ ಮಧ್ಯೆ ವಾಸಿಸುತ್ತವೆ. ಕಡ್ಡಿ ಸಸ್ಯಭಾಗಗಳಿಂದ ಬಟ್ಟಲಿ ನಂತಹ ಗೂಡು ರಚಿಸಿ ಮರಿಮಾಡುತ್ತವೆ. ಅವುಗಳ ಮರಿಮಾಡುವಿಕೆ ಮತ್ತು ನಡತೆ ಇನ್ನೂ ಚೆನ್ನಾಗಿ ಅಧ್ಯಯನವಾಗಿಲ್ಲ.

ಕುಟುಂಬ ೬ : ರೈನೋಕ್ರೈಪ್‌ಟಿಡೀ (Rhinocryptidae)
('ತಪಾಕುಲ' ಪಕ್ಷಿಗಳು) (ಹಿಂಬಾಗ ಮುಚ್ಚದ)

ದ. ಅಮೇರಿಕಾದ ಹುಲ್ಲುಗಾವಲಿನಿಂದ, ಮೆಕ್ಸಿಕೋವರೆಗಿನ ಪ್ರದೇಶವಾಸಿ ಗಳಾದ, ದುಂಡು ದೇಹದ, ಸಣ್ಣ ಗಾತ್ರದ ನೆಲವಾಸಿಗಳಾದ ೨೬ ಪ್ರಭೇದಗಳು ೪

ರಿಂದ ೧೧ ಅಂಗುಲ ಉದ್ದದ ದೇಹ, ದಟ್ಟ ಕಾಲು ಹೊಂದಿದ ಪೂರ್ಣ ನೆಲವಾಸಿ. ಕಂಪ್ಪಳಿಸಿ ಅಥವಾ ಓಡಿ ಚಲಿಸುವುದೇ ಹೆಚ್ಚು. ದೂರ ಹಾರಲಾರವು. ಅವುಗಳ ಕಂದು ಬಣ್ಣದ ಮೈಮೇಲೆ ಬಿಳುಪು ಮಚ್ಚೆ ಅಥವಾ ಚುಕ್ಕೆಗಳೂ, ಎದೆ ಹೊಟ್ಟೆ ಭಾಗದಲ್ಲಿ ಬಿಳುಪು ಕೆಂಪು ಬಣ್ಣಗಳೂ ಇರಬಹುದು. ಅವುಗಳ ಹೊಳ್ಳೆಗಳ ಮೇಲೆ ಮುಚ್ಚಳದಂತಹ ಪೊರೆಯಿದೆ.

ಅವು ಯಾವಾಗಲೂ ಬಾಲವನ್ನು ಮೇಲೆತ್ತಿ ಹಿಡಿದೇ ಚಲಿಸುತ್ತಿರುತ್ತವೆ. ಆದರಿಂದಲೇ ಅದಕ್ಕೆ **ತಪಾಕುಲ** ಎಂದರೆ ಹಿಂಭಾಗ ಮುಚ್ಚದ ಲಜ್ಜಾಹೀನ ಪಕ್ಷಿಗಳೆಂದು ಹೆಸರಿಡಲಾಗಿದೆ ! ಮುಖ್ಯವಾಗಿ ಕೀಟಾಹಾರಿಗಳಾಗಿದ್ದರೂ ಮೊಗ್ಗು ಹಣ್ಣುಗಳನ್ನು ತಿನ್ನುತ್ತವೆ. ಕೋಳಿಯಂತೆ ನೆಲ ಕೆರೆಯುವುದುಂಟು. ಚಟುವಟಿಕೆಯಿಂದ ಕೂಡಿದ ಪಕ್ಷಿಗಳು. ಹುಲ್ಲಿನಲ್ಲಿ ಅವಿತಿರುತ್ತವೆ. ಅಪಾಯವಿದ್ದಲ್ಲಿ ಅತ್ತಿಂದಿತ್ತ ಓಡಾಡಿ, ತಪ್ಪಿಸಿಕೊಳ್ಳುತ್ತವೆ. ಕಾಡುವಾಸಿಗಳು. ಒಂಟಿಯಾಗಿರುತ್ತವೆ. ಹುಲ್ಲುಗಾವಲಿನವೂ ಹಲವು ಪಕ್ಷಿಗಳ ಸಣ್ಣ ಗುಂಪಾಗಿ ಚಲಿಸುತ್ತವೆ. ಒಂದು ಪ್ರಭೇದಕ್ಕೆ ಉಗುರು ಬೆರಳುಗಳಿಗಿಂತ ಎರಡರಷ್ಟು ನೀಳವಾಗಿರುತ್ತದೆ.

ಮರ, ಪೊಟರೆ ಮತ್ತು ಕಲ್ಲು ಸಂದಿಗಳಲ್ಲಿ ಹಲವು ಗೂಡು ರಚಿಸುತ್ತವೆ. **ಬೂದು ಗಾಲಿಟೋ** ಪಕ್ಷಿ ವರ್ತುಲಾಕಾರದ ಗೂಡನ್ನು ಹುಲ್ಲು ಮತ್ತು ಕಡ್ಡಿಗಳಿಂದ ರಚಿಸುತ್ತವೆ. **ಕಂದು ಗಾಲಿಟೋ** ದಡಗಳಲ್ಲಿ ಒಂದು ಅಡಿ ನೀಳದ ಸುರಂಗ ಕೊರೆದು ಗೂಡು ರಚಿಸುತ್ತವೆ. ಮರಿಗಳು ಜನಿಸಿದಾಗ ಅವುಗಳಿಗೆ ಕಂದು ಬಣ್ಣದ ತೆಳು ಹೊದಿಕೆಯಿರುತ್ತದೆ.

ಕುಟುಂಬ ೭ : ಕೊಟಿಂಗಿಡೀ (Cotingidae)
(ಕೊಟಿಂಗಾಗಳು)

ಪಶ್ಚಿಮಾರ್ಧಗೋಳದ ಹೆಚ್ಚು ವೈವಿಧ್ಯತೆ ಹೊಂದಿರುವ ೯೦ ಪ್ರಭೇದಗಳನ್ನೊಳಗೊಂಡಿರುವ ಕುಟುಂಬ. ೩ ಅಂಗುಲದಿಂದ ೧೧/೨ ಅಡಿ ಉದ್ದವಿರುವ, ವಿವಿಧ ವರ್ಣದ ಪಕ್ಷಿಗಳು. ಶಿಖೆ, ವರ್ಣರಂಜಿತ ಚರ್ಮ, ಜೋಲು ಮಾಂಸ, ಅಥವಾ ಕತ್ತಿನ ಬಳಿ ನೇತಾಡುವ ಮಾಂಸದ ಚುಂಗು ಹೊಂದಿರುತ್ತವೆ.

ಒಂಟಿ ಜೀವಿಗಳು. ಪರ್ವಕಾಲದಲ್ಲಿ ಮಾತ್ರ ಜೊತೆಗೂಡಿರುತ್ತವೆ. ಕೆಲವು ಪ್ರಭೇದಗಳು ಸಣ್ಣ ಗುಂಪಾಗಿರಬಲ್ಲವು. ಎಲ್ಲವೂ ಮರವಾಸಿಗಳು. ಒಂದೇ ಪ್ರಭೇದ ನೆಲವಾಸಿ. ಮಧ್ಯ ಅಮೇರಿಕಾದ ಅಮೆಜಾನ್ ಕಾಡುಗಳಲ್ಲಿ ಅವುಗಳ ಸಾಂದ್ರತೆ ಹೆಚ್ಚಾಗಿದ್ದು, ಉತ್ತರಕ್ಕೆ ಮೆಕ್ಸಿಕೋ ತುದಿಯವರೆಗೂ, ದಕ್ಷಿಣಕ್ಕೆ ಅರ್ಜೆಂಟೈನಾವರೆಗೂ ಕಂಡುಬರುತ್ತವೆ. ' ಕೊಟಿಂಗಾ ' ಎಂದರೆ ' ಬಿಳೀ ವರ್ಣ ' ಎಂದರ್ಥ. ಅವುಗಳಲ್ಲಿ ಹಲವು ಪ್ರಭೇದಗಳು ಅಚ್ಚ ಬಿಳುಪಾಗಿರುವುದರಿಂದಲೇ ಈ ಕುಟುಂಬಕ್ಕೆ ಈ ಹೆಸರು ಬಂದಿರುವುದು. ಬೇರೆಯವು ವಿವಿಧ ಅಚ್ಚ ನೀಲಿ, ಹಸಿರು, ಕೆಂಪು ಬಣ್ಣ ಹೊಂದಿ

ಆಕರ್ಷಕವಾಗಿರುತ್ತವೆ. ಗಂಡಿಗೆ ಮಾತ್ರ ಬಣ್ಣ ಹೆಚ್ಚು. ಹೆಣ್ಣೂ ಸಾಧಾರಣ ಹಗುರ ಬಣ್ಣದವು. ಅವುಗಳ ಬಣ್ಣ ಸೈಜವಾದ ವರ್ಣ ದ್ರವ್ಯ. ಅತಿ ಸುಂದರ ಅಪೂರ್ವ ವರ್ಣದ ಪಕ್ಷಿಯೊಂದನ್ನು ಪ್ಯಾರಿಸ್ಸಿನ ಮೇಡೇಮ್ ಪಾಂಪ್‌ಡೂರವರು ಹೆಸರಿಗೆ, ಶ್ರೇಷ್ಠ ಸೌಂದರ್ಯಕ್ಕಾಗಿ ಬಳಸಿದ್ದರಿಂದ ಅದಕ್ಕೆ ಅವರ ಹೆಸರೇ ಇಡಲಾಗಿದೆ.

ಗಂಟೆ ಪಕ್ಷಿಗಳ ೪ ಪ್ರಭೇದಗಳೂ ಹಣ್ಣು ತಿನ್ನುವ ಸಣ್ಣ ಗಾತ್ರದವು. ಆದರಲ್ಲಿನ **ಬಿಳಿಯ ಪ್ರಭೇದಕ್ಕೆ** ತಲೆಯ ಮೇಲೆ ನೇರ ನಿಂತಿರುವ ಕಪ್ಪು ಶಿರಸ್ತ್ರಾಣವಿದ್ದು ಅದನ್ನು ಮೇಲ್ಕೊಕ್ಕಿನ ಮೇಲೆ ಬೆಳೆದಿರುವ ಬಿಳೀ ಗರಿಗಳು ಅಪೂರ್ಣವಾಗಿ ಮುಚ್ಚಿರುತ್ತವೆ.

ಬ್ರೆಜಿಲಿನ ಪ್ರಭೇದಕ್ಕೆ ಬೋಳು ಕೆಂಪು ಮುಖ, ಕತ್ತು ಇದ್ದು ಅಲ್ಲಲ್ಲಿ ಮಾತ್ರ ಗರಿ ಬೆಳೆದಿರಬಹುದು.

ಮೂರು ಜಡೆಯ ಪ್ರಭೇದಕ್ಕೆ ಕೊಕ್ಕಿನ ಮೇಲ್ಭಾಗದಿಂದ ಕೆಳಗೆ ಜೋಲು ಬಿಟ್ಟಿರುವ ಜಡೆಯೂ ಮೂರು ನೀಳ ಜೋಲು ಮಾಂಸವೂ ಇದೆ. ಕತ್ತು ತಲೆ ಪೂರ್ಣ ಬಿಳುಪು. ಮೈಮಾತ್ರ ಕೆಂಚು ಬಣ್ಣವಿರುತ್ತದೆ.

ಪಾಂಪಡೊ ಕೊಟಿಂಗಾಗಳು ಮನಮೋಹಕ ಹೊಳಪು ನೇರಳೇ ಬಣ್ಣ ಹೊಂದಿರುತ್ತವೆ.

ಇದರಲ್ಲಿ ಕಾಗೆ ಗಾತ್ರದ ಕೊಡೆ ಪಕ್ಷಿಗಳು ಅತ್ಯಂತ ವಿಚಿತ್ರವಾದವು. ಅವುಗಳ ತಲೆಯಮೇಲೆ ಒಳಬಾಗಿರುವ ಗರಿಗಳು ಕೊಡೆಯಾಕಾರದಲ್ಲಿ ದಟ್ಟವಾಗಿದ್ದು ಪರ್ವ ಕಾಲದಲ್ಲಿ ಅವನ್ನು ನೀಳವಾಗಿ ನಿಮಿರಿಸುತ್ತವೆ. ಅಲ್ಲದೆ ಪ್ರತಿ ಪಕ್ಷಿಗೂ ಕತ್ತಿನಬಳಿ ಗಾಳಿ ತುಂಬಿ ಅಗಲವಾಗಬಲ್ಲ ಪದರ ಪದರವಾದ ಮಾಂಸದ ಚುಂಗು ನೀಳವಾಗಿ ನೇತಾಡುತ್ತದೆ. ಚುಂಗುಗರಿಗಳಿಂದಾವೃತವಾಗಿರಬಹುದು. ಅವೆಲ್ಲವೂ ಹಣ್ಣು ತಿನ್ನುವ ಮರವಾಸಿಗಳೇ.

ಹೆಣ್ಣು ಕಾಗೆಗಳು ಅನೇಕ ವರ್ಣವಿರುತ್ತವೆ. ಅವುಗಳ ಬಣ್ಣ ಅಚ್ಚ ಕೆಂಪಿನಿಂದ ಕಪ್ಪು ಬಣ್ಣದವರೆಗಿನ ವೈವಿಧ್ಯತೆ ಹೊಂದಿರುತ್ತದೆ. ಬ್ರೆಜಿಲ್ ಪ್ರಾಂತ್ಯದಲ್ಲೇ ಹೆಚ್ಚಾಗಿ ಕಂಡುಬರುತ್ತವೆ.

ಕಲ್ಲು ಹುಂಜವೆಂದು ಹೆಸರಾಂತ ೨ ಪ್ರಭೇದಗಳು ಸೃಷ್ಟಿವೈಚಿತ್ರ್ಯವೆನ್ನಬಹುದು. ದುಂಡು ದೇಹದ ಸಾಮಾನ್ಯ ಗಾತ್ರದ ಪಕ್ಷಿಗಳು. ಕೆಂಪು ಅಥವಾ ಕಿತ್ತಳೆ ಬಣ್ಣ ಹೊಂದಿರುತ್ತವೆ. ರೆಕ್ಕೆ ಕಪ್ಪು, ಬೂದು ಆಥವಾ ಪಟ್ಟೆ ಹೊಂದಿರುತ್ತವೆ. ಅವುಗಳಲ್ಲಿ ಗಂಡಿಗೆ ಕೊಕ್ಕಿನ ತುದಿಯಿಂದ ಹಣೆಯ ಮಧ್ಯದವರೆಗೂ ವರ್ತುಲಾಕಾರದ ಗರಿ ಶಿಖೆಯಿದ್ದು ಸುಂದರವಾಗಿ ಕಾಣುವ ಪಕ್ಷಿಗಳು. ಹೆಣ್ಣು ಶಿಖೆ ಹೊಂದಿರುವುದಿಲ್ಲ. ನೆಲವಾಸಿಗಳು. ಪರ್ವಕಾಲದಲ್ಲಿ ೨೦ – ೨೫ ಪಕ್ಷಿಗಳು ಗುಂಪು ಕೂಡಿ ಗಂಡುಗಳು ಒಂದಾದ ನಂತರ ಒಂದರಂತೆ ಶಿಖೆಯನ್ನು ಅಗಲಿಸಿ ನರ್ತನ ಮಾಡುತ್ತವೆ. ಬಟ್ಟಲಿನಾಕಾರದ ಗೂಡು ಕಡ್ಡಿ, ಹುಲ್ಲು, ಮಣ್ಣುಗಳಿಂದ ರಚಿತವಾಗುತ್ತದೆ.

ಟಿಟೀರಾಗಳ ೩ ಪ್ರಭೇದ ಬ್ರೆಸಿಲ್‌ನಲ್ಲಿ ಕಂಡುಬರುತ್ತದೆ. ಸಣ್ಣ ಗುಂಪುಗಳಾಗಿ ಮರದಲ್ಲಿ ಅಥವಾ ಮೈದಾನ ಪ್ರದೇಶದಲ್ಲಿ ಕಂಡುಬರುತ್ತದೆ. ಹಣ್ಣು, ಕಾಯಿ, ಕೀಟಗಳು ಆಹಾರ. ಕಪ್ಪೆ ವಟಗುಟ್ಟಿದಂ ಶಬ್ದತೆ ಮಾಡುತ್ತವೆ. ಮರದ ಮೇಲ್ಭಾಗದಲ್ಲಿನ ಇತರ ಪಕ್ಷಿಗಳ ಪೊಟರೆ ಗೂಡುಗಳನ್ನು ಆಕ್ರಮಿಸಿಕೊಂಡು ತಾವು ಮರಿಮಾಡುತ್ತವೆ. ಕೊಕ್ಕು ದೃಢವಾಗಿ ಮೇಲ್ಕೊಕ್ಕು ಕೆಳಬಾಗಿರುತ್ತದೆ. ಮರಿ ೩ ವಾರಗಳಲ್ಲಿ ಬೆಳೆದು ಹೊರಬೀಳುತ್ತವೆ. ವರ್ಷಕ್ಕೆ ಹಲವು ಸಾರಿ ಮರಿ ಮಾಡಬಲ್ಲವು.

ಬೆಕಾರ್ಡ್‌ಗಳೂ ಮರವಾಸಿಗಳಾದ ೫–೮ ಅಂಗುಲ ಉದ್ದ ದೇಹದ ಸಣ್ಣ ಪಕ್ಷಿಗಳು. ಹಣ್ಣು ಕೀಟ ಮುಖ್ಯಾಹಾರ. ಝೇಂಕಾರ ಪಕ್ಷಿಗಳಂತೆ ಹಾರಿ ತೇಲುತ್ತಾ ಹುಳುಗಳನ್ನೂ ಹಣ್ಣುಗಳನ್ನೂ ಆರಿಸಿ ತಿನ್ನಬಲ್ಲವು. ವಿವಿಧ ವರ್ಣ ಹೊಂದಿರುತ್ತವೆ. ಮರದಮೇಲೆ ವಿಶಾಲ ಗಾತ್ರದ ವರ್ತುಲಾಕಾರದ ಗೂಡನ್ನು ರಚಿಸಿ, ಪಕ್ಕದಲ್ಲಿ ಒಳ ಹೋಗಲು ರಂಧ್ರವೇರ್ಪಡಿಸಿರುತ್ತವೆ. ಹೆಣ್ಣೇ ಗೂಡು ರಚನೆಯಲ್ಲಿ ಮುಖ್ಯ ಪಾತ್ರವಹಿಸುವುದು. ೨–೫ ಮೊಟ್ಟೆಯಿಟ್ಟು, ಹೆಣ್ಣು ಮಾತ್ರ ೧೮ – ೨೦ ದಿನ ಕಾವು ಕೂತು ಮರಿಮಾಡುತ್ತವೆ.

ಕುಟುಂಬ ೮ : ಪಿಪ್ರಿಡೀ (Pipridae)

(ಮನಾಕಿನ್ ಪಕ್ಷಿಗಳು)

ಪಶ್ಚಿಮಾರ್ಧಗೋಳದ ಉಷ್ಣ ಮತ್ತು ಸಮಶೀತೋಷ್ಣ ವಲಯದ, ಅತ್ಯಂತ ಚಟುವಟಿಕೆಯ ಸಣ್ಣ ಪಕ್ಷಿಗಳಿವು. ಗಂಡುಗಳು ವಿವಿಧ ವರ್ಣ ಹೊಂದಿ ಆಕರ್ಷಕವಾಗಿರುತ್ತವೆ. ಕೇವಲ ೪ – ೫ ಅಂಗುಲ ನೀಳದ, ದುಂಡು ದೇಹದ, ೫೯ ಪ್ರಭೇದಗಳು. ಕೆಲವು ನೀಳ ಬಾಲ ಹೊಂದಿರುತ್ತವೆ. ಅವುಗಳ ಕಾಲು ತೆಳ್ಳಗೆ, ನೀಳವಾಗಿದ್ದು, ರೆಕ್ಕೆ ಗಿಡ್ಡ. ಬೆರಳುಗಳು ತಳದಲ್ಲಿ ಅಂಟಿರುತ್ತವೆ. ಗುಜ್ಜ ಕೊಕ್ಕು ತಳದಲ್ಲಿ ಅಗಲವಾಗಿದ್ದು ಮೇಲ್ಕೊಕ್ಕಿನ ತುದಿ ಮೊನಚಾಗಿ ಕೆಳಬಾಗಿರುತ್ತದೆ.

ಗಂಡು ಹೆಣ್ಣುಗಳಿಗೆ ಬಣ್ಣ ವ್ಯತ್ಯಾಸವಿರುತ್ತದೆ. ಗಂಡುಗಳಿಗೆ ಬಣ್ಣ ಹೆಚ್ಚು. ಹೊಳಪು ಕಪ್ಪು, ಅಥವಾ ಕಂದು ಹಸಿರು ಬಣ್ಣದ ಮೈಮೇಲೆ ಅಚ್ಚ ಹಳದಿ, ಕೆಂಪು ಭಾಗಗಳಿದ್ದು ಆಕರ್ಷಣೀಯವಾಗಿರುತ್ತವೆ. ಹೆಣ್ಣುಗಳು ಮಾಸಲು ಹಸಿರು ಬಣ್ಣವಿರುತ್ತವೆ. ಒಂಟಿ ಅಥವಾ ಸಣ್ಣ ಗುಂಪುಗಳಾಗಿ ಹಾರಾಡುತ್ತಾ ವಿವಿಧ ಕೀಟಗಳನ್ನೂ, ಹಣ್ಣುಗಳನ್ನೂ ತಿನ್ನುತ್ತವೆ. ಸಣ್ಣ ಗಾತ್ರದವನ್ನು ಹಾಗೇ ನುಂಗುತ್ತವೆ. ದೊಡ್ಡದಾಗಿದ್ದಲ್ಲಿ ಅವನ್ನು ಕುಕ್ಕಿ, ಜಜ್ಜಿ, ಚೂರು ಮಾಡಿ ತಿನ್ನುತ್ತವೆ.

ವಿಚಿತ್ರ ಶಬ್ದ ಮಾಡುತ್ತವೆ. ತಮ್ಮ ಸಾಮಾನ್ಯ ಕೂಗಿನ ಜೊತೆಯಲ್ಲಿ ಅರ ಉಜ್ಜಿದಂತೆಯೂ, ಕಡ್ಡಿ ಮುರಿದಂತೆಯೂ ಶಬ್ದ ಮಾಡುತ್ತವೆ. ಅವುಗಳ ಹಲವು ಮುಖ್ಯ ಕೂಗು ರೆಕ್ಕೆಯಲ್ಲಿನ ರೂಪಾಂತರ ಹೊಂದಿರುವ ಹಲವು ಮುಖ್ಯ ಗರಿಗಳಿಂದಾಗುತ್ತವೆ. ಆ ಶಬ್ದ ಮಾಡಬೇಕಾದಾಗ ರೆಕ್ಕೆ ಬಡಿತ ನಮ್ಮ ಕಣ್ಣಿಗೆ ಕಾಣಿಸದಷ್ಟು ವೇಗವಾಗುತ್ತವೆ.

ಪರ್ವಕಾಲದಲ್ಲಿ ಗಂಡು ತನ್ನ ರೆಕ್ಕೆ ಕೆದರಿ, ಇಂಪಾಗಿ ಕೂಗುತ್ತಾ ತನ್ನ ಸ್ಥಾನದಲ್ಲಿ ಚಲಿಸುತ್ತಿರುತ್ತವೆ. ಹಲವು ನೆಲವನ್ನು ಗುಡಿಸಿದಂತೆ ಶುಚಿ ಮಾಡಿ ಅಲ್ಲಿ ತಮ್ಮ ಪ್ರದರ್ಶನವೇರ್ಪಡಿಸುತ್ತವೆ. ಒಂದು ಪ್ರಭೇದದಲ್ಲಿ ಹಲವು ಗಂಡುಗಳು ಒಂದೇ ಪ್ರದೇಶದೊಳಗೆ ತೋರ್ಪಿಗೆ ಸಿದ್ಧವಾಗುತ್ತವೆ. ಹೆಣ್ಣು ಬಂದಾಗ ಅವು ತಮ್ಮ ಕಾರ್ಯಾಚರಣೆಯನ್ನು ತೀವ್ರಗೊಳಿಸುತ್ತವೆ. ಅದಕ್ಕೆ ಇಷ್ಟವಾದ ಗಂಡಿನೊಡನೆ ಸೇರಿ ಸಂಭೋಗಾನಂತರ ಹೆಣ್ಣು ಅಲ್ಲಿಂದ ಹೊರಟುಹೋಗುತ್ತದೆ. ಆದ್ದರಿಂದ ಒಂದೇ ಪರ್ವಕಾಲದಲ್ಲಿ ಗಂಡು ಅನೇಕ ಹೆಣ್ಣುಗಳನ್ನು ಆಕರ್ಷಿಸಿ ಸಂಭೋಗ ಹೊಂದಬಹುದು.

ಹೆಣ್ಣು ತಾನೇ ಗೂಡು ರಚಿಸಿ ಮೊಟ್ಟೆಯಿಟ್ಟು ಮರಿಮಾಡುತ್ತದೆ. ತನ್ನಿಷ್ಟ ಬಂದೆಡೆ ಕೊಂಬೆ ಕವಲುಗಳ ಮಧ್ಯೆ ಹುಲ್ಲು ಮತ್ತು ನಾರುಗಳನ್ನು ಹೆಣೆದು ಸಣ್ಣ ಕುಕ್ಕೆಯಂತಹ ಗೂಡು ರಚಿಸಿ, ೨ ಮೊಟ್ಟೆಯಿಟ್ಟು ೨೦ – ೨೨ ದಿನ ಕಾವಿತ್ತು ಮರಿಮಾಡುತ್ತದೆ. ಅರ್ಧ ಜೀರ್ಣಿತ ಆಹಾರವೇ ಮರಿಗಳಿಗೆ ಮೂಲಾಹಾರ. ೨ ವಾರಗಳಲ್ಲಿ ಮರಿ ಪೂರ್ಣ ಬಲಿಯುತ್ತದೆ. ಎಳಸಾಗಿದ್ದಾಗ ಗಂಡುಗಳೂ ಹೆಣ್ಣುಗಳಂತೆಯೇ ಹಗುರ ವರ್ಣ ಹೊಂದಿರುತ್ತವೆ.

ಕುಟುಂಬ ೯ : ಟೈರನ್ನಿಡೀ (Tyrannidae)
(ಪೀಡಕ ಕೀಟಾಹಾರಿಗಳು)

೩೬೫ ಪ್ರಭೇದಗಳನ್ನೊಳಗೊಂಡ ದೊಡ್ಡ ಕುಟುಂಬ. ಪಶ್ಚಿಮವಲಯದಲ್ಲಿ ಕೆನಡಾದಿಂದ ದಕ್ಷಿಣಕ್ಕೆ ಪೆಟಗೋನಿಯಾವರೆಗೆ ಕಂಡುಬರುತ್ತವೆ. ಉಷ್ಣವಲಯದಲ್ಲಿ ಅವುಗಳ ಪ್ರಭೇದ ಹಾಗೂ ಸಂಖ್ಯೆ ಹೆಚ್ಚು. ಕೆಲವೇ ಪ್ರಭೇದಗಳು ನೆಲವಾಸಿಗಳಾದ ಕೀಟಾಹಾರಿಗಳು. ಉಳಿದವೆಲ್ಲವೂ ಮರವಾಸಿಗಳು. ಹಗುರ ಕಂದು, ಬೂದು, ಹಳದಿ ಬಣ್ಣದ ಪಕ್ಷಿಜಾತಿಗಳು. ಕೆಲವು ಮಾತ್ರ ವಿವಿಧ ವರ್ಣವಿರುತ್ತವೆ. ಸಾಮಾನ್ಯವಾಗಿ ಹೆಣ್ಣು ಗಂಡುಗಳಲ್ಲಿ ವರ್ಣ ವ್ಯತ್ಯಾಸವಿಲ್ಲ. ಆದರೆ ಯಾವಾಗಲೂ ಹಾರಾಡುತ್ತಾ ಹೆಚ್ಚು ಶಬ್ದ ಮಾಡುತ್ತಿರುತ್ತವೆ. ಗಾತ್ರದಲ್ಲಿ ೧೦ – ೧೨ ಅಂಗುಲದವು. ಹಲವು ಇನ್ನೂ ಸಣ್ಣಗಿರುತ್ತವೆ. ದಪ್ಪ ತಲೆಯ, ಚಪ್ಪಟೆಯಾದ, ಮೊನಚು ಕೊಕ್ಕು ಹೊಂದಿರುತ್ತವೆ. ಕೊಕ್ಕಿನ ಬುಡದಲ್ಲಿ ಒರಟು ಕೂದಲಿರಬಹುದು. ಕಾಲು ತೆಳ್ಳಗಿದ್ದು, ಹೆಚ್ಚು ಉದ್ದವಿರುವುದಿಲ್ಲ. ಬಾಲ ದುಂಡಾಗಿ ಅಥವಾ ಸ್ವಲ್ಪ ಕವಲೊಡೆದಂತಿರುತ್ತದೆ. ಅನೇಕ ಪ್ರಭೇದಗಳಲ್ಲಿ ಶಿಖೆಗರಿಗಳಿದ್ದು, ಅವನ್ನು ನಿಮಿರಿಸಬಲ್ಲವಾಗಿರುತ್ತದೆ. ಅದನ್ನು ಪರ್ವಕಾಲದಲ್ಲೂ, ಇತರ ಪಕ್ಷಿಗಳನ್ನು ಹೆದರಿಸಲೂ ಉಪಯೋಗಿಸುತ್ತವೆ.

ಸಾಮಾನ್ಯವಾಗಿ ಹುಲ್ಲು ಮತ್ತು ಕಡ್ಡಿಗಳನ್ನು ಹೆಣೆದು ಮರಗಳಲ್ಲಿ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಫೀಬೀ ಪಕ್ಷಿಗಳು ಸೇತುವೆಯಡಿ ಅಥವಾ ನದೀ ಪಕ್ಕಗಳಲ್ಲಿ ಮಣ್ಣಿನ ತಳದಲ್ಲಿ ಗೂಡು ರಚಿಸುತ್ತವೆ. ಮೇಲೆ ಹುಲ್ಲು ಹಾವಸೆಗಳಿಂದ ಗೂಡು ಹೆಣೆಯುತ್ತವೆ. ಹಲವು ಹಣದಚೀಲದಾಕಾರದ ಅಥವಾ ವರ್ತುಲಾಕಾರದ ಗೂಡು

ರಚಿಸಬಲ್ಲವು. ಇತರ ಪಕ್ಷಿಗಳು ವಿಸರ್ಜಿಸಿದ ಗೂಡುಗಳನ್ನು ಉಪಯೋಗಿಸಬಲ್ಲವು. ಒಂದೆರಡು ಜಾತಿಗಳು ಸುರಂಗ ಗೂಡಿನವು. ಗೂಡನ್ನು ವಿವಿಧ ಸಾಮಗ್ರಿಗಳಿಂದ ಅಲಂಕರಿಸುತ್ತವೆ. ಶಿಖೆಯಾಂತ ಕೀಟಾಹಾರಿ. ಹಾವು ಪೊರೆಗಳನ್ನು ತಂದು ಗೂಡಿಲ್ಲಿಡುತ್ತವೆ! ಹೊಳಪು ಕಾಗದಗಳೂ ಸಾಮಗ್ರಿಗಳೂ ಗೂಡಿನಲ್ಲಿರ ಬಹುದು.

ಬಿಳುಪು ಅಥವಾ ವಿವಿಧ ವರ್ಣ ಅಥವಾ ಚುಕ್ಕೆಯಿಂದ ಕೂಡಿದ ೨–೬ ಮೊಟ್ಟೆಗಳನ್ನಿಟ್ಟು ಮರಿಮಾಡುತ್ತವೆ. ಸಣ್ಣ ಗಾತ್ರದವು ವರ್ಷಕ್ಕೆ ೩–೪ ಸಲ ಮರಿಮಾಡಬಲ್ಲವು. ಹೆಣ್ಣುಗಂಡುಗಳೆರಡೂ ಗೂಡು ರಚನೆಯಲ್ಲಿ ಭಾಗವಹಿಸುತ್ತವೆ. ಹೆಣ್ಣು ಮಾತ್ರ ಕಾವು ಕೂರುತ್ತದೆ. ೧೦–೧೪ ದಿನಗಳ ಕಾವಿನವಧಿ.

ಉ. ಅಮೇರಿಕಾದ **ರಾಜ ಪಕ್ಷಿಗಳು** ಈ ಕುಟುಂಬದ ದಪ್ಪ ಗಾತ್ರದವು. ಕಪ್ಪು ಬೆನ್ನು, ಬಿಳುಪು ಎದೆ ಹೊಂದಿದ ಈ ಸಣ್ಣಪಕ್ಷಿ, ತನಗಿಂತ ೪-೫ ಪಾಲು ದಪ್ಪವಾಗಿರುವ ಪಕ್ಷಿಗಳೊಡನೆಯೂ ತೀವ್ರವಾಗಿ ಜಗಳವಾಡಬಲ್ಲುದು. ಹೆದರಿಕೆಯೇ ಇಲ್ಲದ ಪಕ್ಷಿ. ಉತ್ತರವಲಯದ ಪ್ರಭೇದಗಳು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಅವುಗಳಲ್ಲಿ **ಕತ್ತರಿ ಬಾಲದ** ಪ್ರಭೇದ ಅತ್ಯಂತ ಸುಂದರ ಪಕ್ಷಿ. ಅದರ ನೀಳ ಕಪ್ಪು ಬಿಳುಪು ವರ್ಣ ಮಿಶ್ರಿತ ಬಾಲಗರಿಗಳು ಪಕ್ಕಿ ಹಾರುವಾಗ ಹಿಂದೆ ತೇಲುತ್ತಾ ಆಕರ್ಷಣೀಯವಾಗಿರುತ್ತದೆ. ಸಣ್ಣ ಗಾತ್ರದ **ಕೆಂಪು ಕೀಟಾಹಾರಿ** ಕುಟುಂಬದ ಅತ್ಯಂತ ವರ್ಣರಂಜಿತ ಪಕ್ಷಿ. ಆದರೆ ಅವುಗಳಲ್ಲಿ ಗಂಡು ಮಾತ್ರ ಬಣ್ಣ ಹೊಂದಿರುತ್ತದೆ. ಹೆಣ್ಣು ಸಾಮಾನ್ಯ ವರ್ಣವಿರುತ್ತದೆ.

ಕುಟುಂಬ ೧೦ : ಫೈಟೋಟೋಮಿಡೀ (Phytotomidae)
(ಸಸ್ಯ ಕತ್ತರಿಸುವ ಪಕ್ಷಿಗಳು)

ಗಂಬ್ಬಚ್ಚಿ ಗಾತ್ರದ, ದಕ್ಷಿಣ ಅಮೇರಿಕಾ ಪಕ್ಷಿಕುಟುಂಬ. ಪೆರು ಬಳಿ ಹೆಚ್ಚಾಗಿದೆ. ಕೊಕ್ಕು ಗಿಡ್ಡ, ದೃಢ ಹಾಗೂ ಗರಗಸದಂತಹ ಅಂಚು ಹೊಂದಿರುತ್ತದೆ. ೬–೭ ಅಂಗುಲ ಉದ್ದ ಮಾತ್ರ. ಹೆಣ್ಣು ಗಂಡುಗಳಲ್ಲಿ ವರ್ಣವ್ಯತ್ಯಾಸವಿರುತ್ತದೆ. ಅರ್ಜೆಂಟೈನಾ ಬಳಿಯ ಪ್ರಭೇದದ ಗಂಡು ಕೆಂಚಗಿದ್ದು, ಹೆಣ್ಣು ಸಾಮಾನ್ಯ ಕಂದು ಬಣ್ಣವಿರುತ್ತವೆ. ಮೈದಾನ ಪ್ರದೇಶಗಳ ಪೊದರು ಗಿಡಗಳಲ್ಲೇ ವಾಸಿಸುವುದು. ಹಣ್ಣು ಕಾಯಿ, ಹೀಚು, ಮೊಗ್ಗುಗಳನ್ನೂ, ಹಲವು ಸಮಯ ಸಣ್ಣ ಗಿಡಗಳನ್ನೂ ಗರಗಸದಂತಹ ತಮ್ಮ ಕೊಕ್ಕುಗಳಿಂದ ಕತ್ತರಿಸಿ, ತಿನ್ನುವುದಕ್ಕಿಂತ ನಾಶಪಡಿಸುವುದೇ ಹೆಚ್ಚು. ಆದ್ದರಿಂದ ವ್ಯವಸಾಯ ಪ್ರದೇಶಗಳಲ್ಲಿ ಅವನ್ನು ವಿನಾಶಕಾರಿಯೆಂದು ಪರಿಗಣಿಸಿ ನಾಶಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ದೂರ ಹಾರುವುದಿಲ್ಲ. ಕೊಂಬೆಯಿಂದ ಕೊಂಬೆಗೆ ಹಾರಿ ಆಹಾರ ಹೊಂಚುವುವು. ಸಣ್ಣ ಗುಂಪುಗಳಾಗಿ ಚಲಿಸುತ್ತವೆ. ಕೊಂಬೆಗಳಲ್ಲಿ ಕಡ್ಡಿ ಹುಲ್ಲುಗಳಿಂದ ತೆರೆದ ದುಂಡ

ನೆಯ ಗೂಡು ರಚಿಸಿ ಒಳಗೆ ಹುಲ್ಲಿನ ಮೆತ್ತೆ ಹಾಸುತ್ತದೆ. ೨–೪ ಮೊಟ್ಟೆ. ಹೆಣ್ಣೇ ಕಾವಿಗೆ ಕೂರುವುದಾದರೂ ಮರಿ ಪೋಷಣೆಗೆ ಗಂಡು ಸಹಾಯಕವಾಗುತ್ತದೆ.

ಕುಟುಂಬ ೧೧ : ಆಕ್ಸಿರನ್ಸಿಡೀ (Oxyruncidae)
(ಮೊನಚು ಕೊಕ್ಕಿನ ಪಕ್ಷಿಗಳು)

ಇವೂ ದಕ್ಷಿಣ ಅಮೇರಿಕಾದ ಉತ್ತರ ಭಾಗ ನಿವಾಸಿಗಳು. ಒಂದೇ ಪ್ರಭೇದದ ಹಲವು ವಿಧಗಳಿವೆ. ಮೈ ಬಣ್ಣ ವ್ಯತ್ಯಾಸವೇ ಇವುಗಳ ವಿಂಗಡಣೆಗೆ ಮೂಲ. ಅವುಗಳ ಮೊನಚಾದ ಕೊಕ್ಕು ನೀಳವಾಗಿದ್ದು, ಶಿಖೆಯಿರುತ್ತದೆ. ಹೊಳ್ಳೆಗಳು ನೀಳವಾಗಿ ಮುಚ್ಚಳ ಪದರ ಹೊಂದಿದೆ. ಅವುಗಳ ಹೊಟ್ಟೆಯಡಿ ಭಾಗ ಹಳದಿ, ಹಸಿರು, ಬಿಳುಪು ಬಣ್ಣ ವಿವಿಧ ಚುಕ್ಕೆ ಹೊಂದಿರಬಹುದು. ಸಾಮಾನ್ಯವಾಗಿ ಒಂಟಿ ಜೀವಿಗಳು. ಪರ್ವ ಕಾಲದಲ್ಲಿ ಮಾತ್ರ ಜೊತೆಗೂಡುತ್ತವೆ. ಹಣ್ಣೆ ಮುಖ್ಯಾಹಾರ. ಅವುಗಳ ಜೀವನ, ಗೂಡು ರಚನೆ ಮುಂತಾದವು ಇನ್ನೂ ಚೆನ್ನಾಗಿ ತಿಳಿದುಬಂದಿಲ್ಲ.

ಕುಟುಂಬ ೧೨ : ಪಿಟ್ಟಿಡೀ (Pittidae)
(ಪಿಟ್ಟಾಗಳು)

ನೀಳ ಕಾಲುಂ ಬೆರಳುಗಳುಳ್ಳ, ಗಿಡ್ಡ ಕತ್ತಿನ ದಪ್ಪ ತಲೆಯ ೬–೧೨ ಅಂಗುಲ ಉದ್ದ ದೇಹದ ದುಂಡನೆಯ ಪಕ್ಷಿಗಳು ಅವುಗಳ ದಟ್ಟ ಕೊಕ್ಕು ನೀಳವಾಗಿ ಮೊನಚಾದ ಮೇಲ್ಕೊಕ್ಕಿನ ತುದಿ ಕೆಳಬಾಗಿರುತ್ತದೆ. ಇವುಗಳಿಗೆ ಮುಖ್ಯವಾದದ್ದು ಬಹು ಗಿಡ್ಡ ಬಾಲ. ಕೆಲವು ಪ್ರಭೇದಗಳಿಗೆ ಶಿಖೆ ಅಥವಾ ಕಿವಿಗುಚ್ಛವಿರಬಹುದು. ಗಂಡುಗಳು ವರ್ಣರಂಜಿತ. ಕೆಂಪು, ಕಪ್ಪು, ಹಸಿರು, ಬಿಳುಪು, ನೀಲಿಯ ವಿವಿಧ ವರ್ಣ ಹೊಂದಿರುತ್ತವೆ. ಒಂದೇ ಜಾತಿಯ ೨೩ ಪ್ರಭೇದಗಳನ್ನೊಳಗೊಂಡಿದೆ.

ಆಗ್ನೇಯ ಏಷ್ಯಾ ಮತ್ತು ಮಲೇಷಿಯಾ ಭಾಗಗಳಲ್ಲೇ ಹೆಚ್ಚು. ಆಸ್ಟ್ರೇಲಿಯಾ, ಜಪಾನ್ ಫಿಲಿಪ್ಪೈನ್ಸ್‌ಗಳಲ್ಲೂ ಹಲವು ಪ್ರಭೇದಗಳಿವೆ. ಅತ್ಯಂತ ಮೋಹಕ ವರ್ಣದ ಸ್ಟೀಕ್ಸ್ ಪಿಟ್ಟಾ ಫಿಲಿಪ್ಪೈನ್ಸ್‌ನ ಹಲವು ದ್ವೀಪಗಳ ಕಾಡುಗಳಲ್ಲಿ ಮಾತ್ರ ಕಂಡು ಬರುತ್ತವೆ. ಸಾಮಾನ್ಯವಾಗಿ ಒಂಟಿ ಜೀವಿಗಳು. ಚೆನ್ನಾಗಿ ಹಾರುತ್ತವೆ. ಹಲವು ವಲಸೆ ಹೋಗುವುದುಂಟು.

ಮುಖ್ಯವಾಗಿ ಕೀಟಾಹಾರಿಗಳು. ಇತರ ಸಣ್ಣ ಪ್ರಾಣಿಗಳನ್ನೂ ತಿನ್ನಬಲ್ಲವು. ಗೆದ್ದಲು, ಸಾವಿರಕಾಲು ಹುಳುಗಳು ಕೆಲವು ಪ್ರಭೇದಗಳಿಗೆ ಇಷ್ಟಾಹಾರ. ಆಸ್ಟ್ರೇಲಿಯಾ ಪ್ರಭೇದ ಬಸವನಹುಳ ಮುಂತಾದವುಗಳನ್ನು ತಿನ್ನುತ್ತವೆ. ಆಹಾರ ಅರಸುವಾಗ ನೆಲದಮೇಲೆ ಹೆಚ್ಚಾಗಿದ್ದು ಮರದಲ್ಲಿ ವಿಶ್ರಮಿಸುತ್ತವೆ.

ಕಡ್ಡಿ, ಹುಲ್ಲುಗಳಿಂದ ಗೋಳಾಕಾರದ ಗೂಡು ರಚಿಸಿ, ಒಂದೆಡೆ ಒಳ ಹೋಗುವ ರಂಧ್ರವಿಡುತ್ತದೆ. ನೆಲದಮೇಲೆ ಅಥವಾ ಸಣ್ಣ ಮುಳ್ಳು ಪೊದರುಗಳಲ್ಲೇ ಗೂಡಿನ

ರಚನೆ. ಮೊಟ್ಟೆಗಳು ದುಂಡಗೆ, ಮೆರುಗು ಹೊಂದಿರುತ್ತವೆ. ೨–೭ ಮೊಟ್ಟೆಗಳನ್ನಿಟ್ಟು, ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ.

ಕುಟುಂಬ ೧೩ : ಅಕಾಂತಿಸಿಟ್ಟಿಡೀ (Acanthisittidae)

ನ್ಯೂಜಿಲೆಂಡಿನ ಸಣ್ಣ ಗಾತ್ರದ ಕೀಟಾಹಾರಿಗಳ ನಾಲ್ಕು ಪ್ರಭೇದಗಳು ಇದಕ್ಕೆ ಸೇರುತ್ತವೆ. ಅದರಲ್ಲಿ ಒಂದು ಕೇವಲ ೩ ಅಂಗುಲವಿದ್ದು ಆ ದೇಶದ ಅತ್ಯಂತ ಸಣ್ಣ ಗಾತ್ರದ ಪಕ್ಷಿಯೆಂದು ಪರಿಗಣಿಸಲಾಗಿದೆ. ಉಳಿದ ಮೂರು ೪ ಅಂಗುಲದಷ್ಟಿದ್ದು ಓಡುವಾಗ ಗಿಡ್ಡ ಬಾಲವನ್ನು ಮೇಲೆತ್ತಿ ಹಿಡಿದು ಓಡುತ್ತವೆ. ದೂರ ಹಾರಲಾರವು. ಕೇವಲ ಹಲವು ಗಜ ಹಾರಾಡಿದರೆ ಹೆಚ್ಚು. ಮರ ಪೊಟರೆ, ಕಲ್ಲು ಸಂದಿ, ಅಥವಾ ಸುರಂಗದಲ್ಲಿ ಗೂಡು ರಚಿಸುತ್ತವೆ. ೨–೫ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ. ಪಿಟ್ಟಗಳಂತಿರುವ ಸಣ್ಣ ಗಾತ್ರದ ಪಕ್ಷಿಗಳಿವು.

ಕುಟುಂಬ ೧೪ : ಫಿಲೇಪಿಟ್ಟಿಡೀ (Philepittidae)

ಮೆಡಗಾಸ್ಕರ್ ದ್ವೀಪದಲ್ಲಿನ ಹಿಂದುಳಿದ ೪ ಪ್ರಭೇದಗಳಿವು. ಅಸಿಟೀಗಳ ೨ ಪ್ರಭೇದಗಳೂ ಮತ್ತು ಸೂರ್ಯಪಕ್ಷಿಗಳ ಎರಡು ಪ್ರಭೇದಗಳೂ, ಒಟ್ಟು ೪ ಪ್ರಭೇದಗಳು ಇದಕ್ಕೆ ಸೇರಿವೆ. ದಪ್ಪ ದೇಹದ, ಪಿಟ್ಟಾಗಳನ್ನು ಹೋಲುವ ದಟ್ಟ ಕಾಲಿನ ಪೂರ್ಣ ಮರವಾಸಿಗಳಾದ, ಒಂಟಿ ಜೀವಿಗಳು. ಸಾಮಾನ್ಯವಾಗಿ ಮರಸೇಬು ಆಕಾರದ ನೀಳ ಗೂಡು ರಚಿಸಿ, ಒಳಗೆ ಎಲೆಗಳ ಮೆತ್ತೆ ಹೊದಿಕೆ ಹರಡುತ್ತವೆ. ೨–೩ ಮೊಟ್ಟೆಯಿಡುವುದೇ ಸಾಮಾನ್ಯ. ಸೂರ್ಯಪಕ್ಷಿಗಳು ಬಹಳ ಸಣ್ಣ ಗಾತ್ರವಿದ್ದು, ನೀಳ ಕೆಳಬಾಗಿದ ತೆಳ್ಳಗಿನ ಕೊಕ್ಕು ಹೊಂದಿರುತ್ತವೆ. ಅವೂ ಮಧು ಆಹಾರ ಸೇವಿಸುವುವು. ಒಂಟಿಯಾಗಿ ಅಥವಾ ಜೊತೆಗೂಡಿ ಮಾತ್ರ ಕಂಡುಬರುತ್ತವೆ. ಅವುಗಳ ಜೀವನ ಚರಿತ್ರೆ ಸರಿಯಾಗಿ ತಿಳಿದುಬಂದಿಲ್ಲ.

ಕುಟುಂಬ ೧೫ : ಮೆನ್ಯೂರಿಡೀ (Menuridae)
(ಲೈರ್ ಪಕ್ಷಿಗಳು)

ಆಸ್ಟ್ರೇಲಿಯಾದ ವಿವಿಧ ಜೀವ ವಿಚಿತ್ರಗಳಲ್ಲಿ ಒಂದಾದ ಲೈರ್ ಪಕ್ಷಿಗಳ ಕುಟುಂಬವಿದು. ಗಂಡು ತನ್ನ ಬಾಲವನ್ನು ಅಗಲಿಸಿ ನರ್ತನ ಮಾಡುವಾಗ ಅದು ಗ್ರೀಕರ ತಂತಿ ವಾದ್ಯವಾದ ಲೈರ್‌ನಂತಿದ್ದು ಸುಂದರವಾಗಿರುವುದರಿಂದ ಈ ಹೆಸರು. ಕೋಳಿ ಗಾತ್ರದ ದಟ್ಟ ಕಾಲಿನ, ದಪ್ಪ ದೇಹದ ಪಕ್ಷಿಗಳು. ೨ ಪ್ರಭೇದ ಮಾತ್ರ. ಕಂದು ಬೆನ್ನು, ಬೂದು ಹೊಟ್ಟೆ ಸಾಮಾನ್ಯ. ಕೊಕ್ಕು, ಬಾಲ ನೀಳವಾಗಿರುತ್ತವೆ. ಅವುಗಳ ಒಳಾಂಗ ಮತ್ತು ಮೂಳೆಗಳ ರಚನೆಯ ಆಧಾರದಿಂದ ಅವು ಈ ಉಪವರ್ಗದವೆಂದು ಸ್ಥಿರಪಟ್ಟಿದೆ.

ಅದರ ಬಾಲದಲ್ಲಿ ೧೬ ನೀಳ ಗರಿಗಳಿವೆ. ಅದರಲ್ಲಿ ಎರಡು ಸುಮಾರು ೨ ಅಡಿ ಉದ್ದವಿದ್ದು ಬಿಲ್ಲಿನಂತೆ ಅತ್ತಿತ್ತ ಬಾಗಿದ್ದು, ಕಪ್ಪು ಪಟ್ಟೆ ಹೊಂದಿರುತ್ತವೆ. ಇನ್ನೆರಡು ತೆಳ್ಳಗೆ ನೀಳವಾಗಿ ಇದರ ಬಳಿ ತೇಲಾಡುವಂತಿರುತ್ತವೆ. ಉಳಿದ ೧೨ ಗರಿಗಳಲ್ಲೂ ಎಳೆಗಳು ಹೆಣೆದುಕೊಂಡಿರದೆ ವಿರಳವಾಗಿದ್ದು ಅಗಲಿಸಿದಾಗ ಬಿಳಿಯ ಜಾಲರಿ ಅಲಂಕಾರ ಬಟ್ಟೆಯಂತಿರುತ್ತವೆ. ಹೆಣ್ಣುಗಳಿಗೆ ಮಾತ್ರ ಸಾಮಾನ್ಯ ಬಾಲವಿರುತ್ತದೆ. ಗಂಡಿಗೆ ಈ ರೀತಿಯ ಸುಂದರ ಬಾಲ ಬೆಳೆಯಲು ೩ ವರ್ಷ ಬೇಕಾಗುತ್ತದೆ.

೨ ಪ್ರಭೇದಗಳೂ ಕಾಡು ಮತ್ತು ಪೊದರು ಸ್ಥಳವಾಸಿಗಳು. ಸಾಮಾನ್ಯವಾಗಿ ಒಂಟಿ ಜೀವಿಗಳು. ಹೆಚ್ಚಾಗಿ ಹಾರುವುದಿಲ್ಲ. ನೆಲದಮೇಲೆ ವೇಗವಾಗಿ ನೆಗೆದು ಓಡ ಬಲ್ಲವು. ರಾತ್ರಿ ಕಾಲ ಎತ್ತರವಾದ ಮರಗಳ ಕೊಂಬೆಯಲ್ಲಿಯೇ ವಿಶ್ರಮಿಸುವುದು. ಕೀಟ, ಹುಳು, ಹುಪ್ಪಟೆ, ಮೃದ್ವಂಗಿಗಳು ಇತ್ಯಾದಿಯನ್ನು ಕೋಳಿಯಂತೆ ನೆಲ ಕೆರೆದು, ಅಥವಾ ಕೊಳೆಯುತ್ತಿರುವ ಕೊಂಬೆಗಳನ್ನು ಕುಕ್ಕಿ ಒಡೆದು ಹೊಂಚಿಕೊಳ್ಳುತ್ತವೆ.

ಅವುಗಳು 'ಚೂವು' 'ಚೂವು' ಎಂದು ಕೂಗುವುದಾದರೂ ಇತರ ಎಲ್ಲಾ ಪಕ್ಷಿಗಳ ಕೂಗನ್ನೂ ಅನುಕರಿಸಬಲ್ಲವು. ಈ ಅನುಕರಣಶಕ್ತಿ ಈ ಪ್ರಭೇದಗಳ ವೈಶಿಷ್ಟ್ಯ. ಕಂದುರೆ, ನಾಯಿ, ಬೆಕ್ಕುಗಳ ಕೂಗನ್ನೂ ಹಾಗೂ ಇತರ ಹೊಸ ಶಬ್ದವನ್ನೂ ಅವು ಅನುಕರಿಸಬಲ್ಲವು!

ಗಂಡು ಬಹುಪತ್ನೀಕ. ಸುಮಾರು ೧/೨ ಮೈಲಿ ವ್ಯಾಪ್ತಿಯ ಪ್ರದೇಶದ ಒಡೆ ತನವನ್ನು ತಾನು ಗುರುತಿಸಿಟ್ಟು ಅದರೊಳಗೆ ೬ – ೭ ಸ್ಥಳಗಳಲ್ಲಿ ಒಂದಾದಮೇಲೊಂದ ರಂತೆ ನರ್ತನಮಾಡಿ ವಿಧವಿಧವಾದ ಕೂಗು ಹಾಕಿ ಹೆಣ್ಣನ್ನು ಆಕರ್ಷಿಸುತ್ತದೆ. ಈ ಸುತ್ತಲಿನ ಮಣ್ಣು ಎಲೆ, ಸೊಪ್ಪುಗಳನ್ನು ಗುಡ್ಡೆ ಹಾಕಿ ೨೧/೨ – ೩ ಅಡಿ ಎತ್ತರದ ದಿಬ್ಬದ ನರ್ತನ ಜಾಗವನ್ನು ರಚಿಸಿ ಅದರ ಮೇಲೆಯೇ ನರ್ತಿಸುವುದು.

ಗೂಡನ್ನು ರಚಿಸುವುದೂ, ಮರಿ ಪೋಷಿಸುವುದೂ ಹೆಣ್ಣಿನ ಕೆಲಸ. ದೊಡ್ಡ ಮರದ ಪೊಟರೆ, ಕೊಂಬೆ ಕವಲು ಮುಂತಾದೆಡೆ ಸುಮಾರು ೧ ತಿಂಗಳ ಕಾಲ ದುಡಿದು ಗೋಳಾಕಾರದ ದೊಡ್ಡ ಗೂಡನ್ನು ರಚಿಸಿ, ಅದರ ಒಂದು ಪಕ್ಕಕ್ಕೆ ಒಳದಾರಿ ರಂಧ್ರ ವಿಡುತ್ತದೆ. ಅದರ ಒಳಭಾಗವನ್ನು ತನ್ನ ಹೊಟ್ಟೆ ಎದೆ ಮತ್ತು ತೊಡೆ ಬಳಿಯ ಮೃದು ಗರಿ ಕಿತ್ತು ಹಾಸಿ ಸಿದ್ಧಪಡಿಸುತ್ತದೆ. ಗೂಡಿನಲ್ಲಿ ಒಂದೇ ಮೊಟ್ಟೆಯಿಟ್ಟು, ೩೫ – ೪೦ ದಿನ ಕಾವು ಕೊತು ಮರಿಮಾಡುತ್ತದೆ. ಈ ಉಪವರ್ಗದ ಪಕ್ಷಿಗಳಲ್ಲಿ ಇದರ ಮೊಟ್ಟೆಯೇ ಅತಿ ದಪ್ಪ ಗಾತ್ರದವು ಮತ್ತು ಕಾವು ಕಾಲಾವಧಿ ಅತಿ ದೀರ್ಘವಾದದ್ದು. ನಿಸ್ಸಹಾಯಕ ನಗ್ನ ಮರಿ ಜನಿಸಿ ಅತಿ ಶೀಘ್ರದಲ್ಲಿ ಕಪ್ಪನೆಯ ಮೃದುಗರಿಗಳ ಹೊಚ್ಚಡ ಹೊಂದುತ್ತದೆ.

ಕುಟುಂಬ ೧೬ : ಅತ್ರಿಚಾರ್ನಿತಿಡೀ (Atrichornithidae) (ಪೊದರು ಪಕ್ಷಿಗಳು)

ಇವೂ ಆಸ್ಟ್ರೇಲಿಯಾ ವಾಸಿಗಳು. ಎರಡೇ ಪ್ರಭೇದ. ಅದರಲ್ಲಿ ಬಹುಶಃ ಒಂದು ಈಗ ನಿರ್ನಾಮವಾಗಿರಬಹುದು. ಪೂರ್ಣ ಕಂದು ಬಣ್ಣದ ಸಣ್ಣ ಗಾತ್ರದ

ಪಕ್ಷಿಗಳಿವು. ೮–೯ ಅಂಗುಲ ಉದ್ದವಿರುತ್ತವೆ. ಪೊದರುಗಳ ಮಧ್ಯೆ ವಾಸವಿದ್ದು, ದೂರ ಹಾರಲಾರವು. ನೆಲದಮೇಲೆ ಜೋರಾಗಿ ಓಡಾಡಿ ಪೊದೆ ಹೊಕ್ಕು ಬೇಗ ಮರೆಯಾಗುವ ಸಂಕೋಚ ಪ್ರಕೃತಿಯ ಪಕ್ಷಿಗಳು. ಭುಜದ ಮೂಳೆಗಳು ಎರಡೂ ಒಟ್ಟುಗೂಡಿರುವುದಿಲ್ಲ. ಇದೇ ಈ ಪ್ರಭೇದದ ವೈಶಿಷ್ಟ್ಯ.

ದಟ್ಟ ಕಾಲುಗಳಿಂದ ಕೋಳಿಯಂತೆ ನೆಲ ಕೆರೆದು ಹುಳುಗಳನ್ನು ಹುಡುಕಿ ತಿನ್ನುತ್ತವೆ. ಹೆಣ್ಣು ಗಂಡುಗಳಲ್ಲಿ ಭೇದವಿದೆ. ಹೆಣ್ಣು ಹೆಚ್ಚು ಹಗುರ ಬಣ್ಣವಿದ್ದು, ಗಾತ್ರದಲ್ಲೂ ಸಣ್ಣವಾಗಿರುತ್ತದೆ. ಲೈರ್ ಪಕ್ಷಿಗಳಂತೆಯೇ ಇವೂ ಕೂಡ ಕೇಳಿದ ಎಲ್ಲಾ ಶಬ್ದಗಳನ್ನೂ ಅನುಕರಿಸಬಲ್ಲವು. ಸಾಮಾನ್ಯ ಕೂಗು ಕರ್ಕಶ ಸಿಳ್ಳಿನಂತಿರುತ್ತದೆ.

ನೆಲದಮೇಲೆ ಅಥವಾ ಸಣ್ಣ ಪೊದರುಗಳಲ್ಲಿ, ಒಣ ಎಲೆ ಮತ್ತು ಹುಲ್ಲುಗಳಿಂದ ಗೋಳಾಕಾರದ ಗೂಡು ರಚಿಸಿ, ಒಳಭಾಗವನ್ನು ದಪ್ಪ ರಟ್ಟಿನಂತಹ ವಸ್ತುವಿನಿಂದ ಸವರುತ್ತದೆ. ಬಹುಶಃ ಕೊಳೆಯಲಾರಂಭಿಸಿದ ಒಂದು ಜಾತಿಯ ಮರವನ್ನು ಇದಕ್ಕಾಗಿ ಉಪಯೋಗಿಸುವಂತೆ ತೋರುತ್ತದೆ. ೨ ಮೊಟ್ಟೆಯಿಟ್ಟು, ಹೆಣ್ಣು ಮಾತ್ರ ಕಾವಿತ್ತು ಮರಿಮಾಡುತ್ತದೆ. ಅತಿ ಕಡಮೆ ಸಂಖ್ಯೆಯಾಗಿದ್ದು ಈಗ ಅದರ ವ್ಯಾಪ್ತಿ ರಾಷ್ಟ್ರೀಯ ಸಂರಕ್ಷಣಾ ಕ್ಷೇತ್ರಕ್ಕೊಳಪಟ್ಟಿದೆ.

ಕುಟುಂಬ ೧೭ : ಅಲೌಡಿಡೀ (Alaudidae)
(ಲಾರ್ಕ್‌ಗಳು)

ಇವು ಪೂರ್ವಾರ್ಧಗೋಳದ ಪಕ್ಷಿಗಳು. ದೀರ್ಘವಾಗಿ ಹಾಡುತ್ತಾ ಹಾರಾಡುತ್ತಿರಲು ಪ್ರಸಿದ್ಧಿ ಹೊಂದಿದವು. ಆಫ್ರಿಕಾದಲ್ಲಿ ಅವುಗಳ ಪ್ರಭೇದಗಳು ಹೆಚ್ಚು. ಮೊದಲು ಇವು ಪೂರ್ವಾರ್ಧಗೋಳದಲ್ಲಿ ಮಾತ್ರವಿದ್ದರೂ, ಇತ್ತೀಚೆಗೆ ಅಮೇರಿಕಾ, ಆಸ್ಟ್ರೇಲಿಯಾ ಹಾಗೂ ದ. ಅಮೇರಿಕಾಗಳಲ್ಲೂ ಹರಡಲಾರಂಭಿಸಿವೆ. ಒಟ್ಟು ೭೫ ಪ್ರಭೇದಗಳಿವೆ. ಅವುಗಳ ಕಾಲಿನ ಹಿಂಭಾಗ ದುಂಡಗಿದ್ದು ಪೂರ್ಣವಾಗಿ ಹುರುಪೆ ಆವೃತವಾಗಿರುತ್ತದೆ. ಹಿಂಬೆರಳಿಗೆ ಅತಿ ನೀಳವಾದ ಉಗುರಿರುತ್ತದೆ.

೫–೧೦ ಅಂಗುಲ ಉದ್ದ ದೇಹದ ಮೇಲ್ಭಾಗ ಹೆಚ್ಚು ಬಣ್ಣವಿರುವ ಕಂದು ಬೂದು ಅಥವಾ ಮಾಸಲು ಬಿಳುಪು ಬಣ್ಣದ ಪಕ್ಷಿಗಳು. ಸ್ವಲ್ಪ ತಳಬಾಗಿದ ದೃಢ ಕೊಕ್ಕಿರುತ್ತದೆ. ಹೆಣ್ಣು ಗಂಡುಗಳಲ್ಲಿ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಎಲ್ಲವೂ ಮೈದಾನದ ನೆಲವಾಸಿಗಳು. ಹುಲ್ಲುಗಾವಲು, ವ್ಯವಸಾಯ ಪ್ರದೇಶ, ತೀರಪ್ರದೇಶ ಮುಂತಾದಕಡೆ ಹೆಚ್ಚು. ಅವುಗಳ ಕಂದು ಬಣ್ಣದಿಂದಾಗಿ ಹತ್ತಿರ ಬರುವವರೆಗೂ ಕಾಣಿಸುವುದಿಲ್ಲ. ಕೀಟ, ಹಣ್ಣು, ಹುಳು ಮುಂತಾದುವುಗಳನ್ನೆಲ್ಲಾ ತಿನ್ನಬಲ್ಲವು. ಸಂಘ ಜೀವಿಗಳು. ಹಲವು ಪ್ರಭೇದಗಳು ವಲಸೆ ಹೋಗುತ್ತವೆ.

ಉತ್ತಮ ಹಾಡುಗಾರ ಪಕ್ಷಿಗಳು. ಅವುಗಳ ಸಂಗೀತ ಪ್ರಪಂಚದಲ್ಲೆಲ್ಲಾ ಮೆಚ್ಚುಗೆ ಪಡೆದಿದೆ. ಅವುಗಳ ಮಾಂಸ ರುಚಿಕರವಾಗಿ ಆಹಾರಕ್ಕಾಗಿ ಈಗಲೂ ಸಾವಿರಾರು

ಕೊಲ್ಲಲ್ಪಡುತ್ತಿದ್ದರೂ ಹೆಚ್ಚು ಸಂಖ್ಯೆಯಲ್ಲಿ ಅವು ವೃದ್ಧಿಯಾಗುತ್ತಿರುವುದರಿಂದ ಆ ಜಾತಿಗಳಿಗೆ ಹೆಚ್ಚಿನ ತೊಂದರೆಯುಂಟಾಗಿಲ್ಲ.

ನೆಲದಮೇಲೆ ಬಟ್ಟಲಿನಾಕಾರದ ಗೂಡು ರಚಿಸಿ ೨ – ೬ ಮೊಟ್ಟೆಯಿಡುತ್ತವೆ. ಹೆಣ್ಣೇ ಹೆಚ್ಚಾಗಿ ಕಾವು ಕೂರುವುದು. ಗೂಡು ರಚನೆಯೂ ಹೆಣ್ಣಿನಿಂದಲೇ. ಕಾವು ಕೂತಾಗ ಹೆಣ್ಣಿಗೆ ಆಹಾರ ತಂದುಕೊಡಲೂ ಮರಿ ಪೋಷಣೆಗೂ ಗಂಡು ಸಹಾಯಕ ವಾಗುತ್ತದೆ. ವರ್ಷಕ್ಕೆ ೨ – ೩ ಸಲ ಮರಿಮಾಡುತ್ತವೆ.

ಕುಟುಂಬ ೧೪ : ಹಿರುಂಡಿನಿಡೀ (Hirundinidae)

(ಸ್ವಾಲೋ ಮತ್ತು ಮಾರ್ಟಿನ್‌ಗಳು)

ಜನಪ್ರಿಯ ಪಕ್ಷಿಗಳಿವು. ಧ್ರುವಗಳ ಬಳಿಯಲ್ಲೂ ನ್ಯೂಜಿಲೆಂಡಿನಲ್ಲೂ ಮಾತ್ರ ಅವು ಕಾಣಬರುವುದಿಲ್ಲ. ಅವು ಸ್ವಿಫ್ಟ್‌ಗಳಂತೆ ಹೊರನೋಟಕ್ಕೆ ಕಂಡುಬಂದರೂ ಬಹಳ ವ್ಯತ್ಯಾಸ ಹೊಂದಿರುತ್ತವೆ. ಅವುಗಳ ಬಾಲದಲ್ಲಿ ೧೨ ಗರಿಗಳಿವೆ. ಮತ್ತು ಮುಖದಲ್ಲಿ ಒರಟು ಕೂದಲಿವೆ. ಸ್ವಿಫ್ಟ್‌ಗಳಿಗೆ ೧೦ ಗರಿಗಳೂ ನುಣುಪು ಮುಖವೂ ಇರುತ್ತವೆ. ಸ್ವಾಲೋಗಳು ಸ್ವಿಫ್ಟ್‌ಗಳಷ್ಟು ವೇಗವಾಗಿ ಎತ್ತರಕ್ಕೆ ಹಾರುವುದಿಲ್ಲ. ಅವುಗಳ ದೇಹವೂ ಸ್ವಲ್ಪ ದುಂಡಗಿರುತ್ತದೆ, ಚುಟ್ಟಾಕಾರವಲ್ಲ.

೪ – ೧೦ ಅಂಗುಲ ಉದ್ದದ, ತೆಳ್ಳಗೆ ಉದ್ದನೆಯ ರೆಕ್ಕೆ ಹೊಂದಿದ ಪಕ್ಷಿಗಳು, ನೀಲಿ, ಹಸಿರು, ಕೆಂಚು, ಕಂದು ಬಣ್ಣದ ಮೈ. ಎದೆ ಭಾಗ ಹಗುರ ಬಣ್ಣವಿರುತ್ತದೆ. ಹಲವು ಪ್ರಭೇದಗಳ ರೆಕ್ಕೆ ಹೊಳಪಾಗಿರುತ್ತವೆ. ವಾಯುಜೀವನಕ್ಕೆ ಉತ್ತಮವಾದ ಮೈಕಟ್ಟು. ಒಟ್ಟು ೭೯ ಪ್ರಭೇದಗಳು ಪ್ರಪಂಚದಲ್ಲೆಲ್ಲಾ ಹರಡಿವೆ.

ಕೀಟಾಹಾರಿಗಳು. ಕೀಟಗಳಿಗಾಗಿ ಹಗಲೆಲ್ಲಾ ಹಾರಾಡುತ್ತಾ ಇರುತ್ತವೆ. ಕೀಟ ನಾಶಕಗಳಾದ್ದರಿಂದ ಬಹು ಉಪಯುಕ್ತ ಪಕ್ಷಿಗಳು. ಚಿಲಿಪಿಲಿಗುಟ್ಟುತ್ತಾ ಹಾರಾಡು ತ್ತಿರುತ್ತವೆ. ಮನೆ ಮಾಡುಗಳಲ್ಲಿ, ದೇವಸ್ಥಾನ ಮುಂತಾದೆಡೆ ಗೂಡು ರಚಿಸಲು ಇಷ್ಟ. ಹಲವು ಪ್ರಭೇದ ವಲಸೆ ಹೋಗುತ್ತವೆ. ಅವು ವಸಂತಋತುವಿಗೆ ಮುನ್ನ ವಲಸೆ ಬರುವುದರಿಂದ, ಅವುಗಳ ಬರುವಿಕೆ ಶುಭಸೂಚಕವೆಂದು ನಂಬಲಾಗಿದೆ.

ಉತ್ತರ ಸಮಶೀತೋಷ್ಣವಲಯದಲ್ಲೆಲ್ಲಾ ಸಾಮಾನ್ಯವಾಗಿರುವುದು **ಸ್ವಾಲೋ ಪಕ್ಷಿಗಳು.** ಅವುಗಳಲ್ಲಿನ ವಿಧಗಳಿಗೆ ಗಾತ್ರ ವ್ಯತ್ಯಾಸವಿರಬಹುದು. ಅವು ಸಾಮಾನ್ಯ ವಾಗಿ ಮಲಯಾ, ಫಿಲಿಪೈನ್ಸ್‌ಗಳಿಗೆ ವಲಸೆ ಹೋಗುತ್ತವೆ. ಪೂರ್ವದಿಂದಲೂ ಅವುಗಳ ವಾಸ ಮಾನವ ನಿವಾಸದ ಬಳಿಯೇ ಎಂದು ತೋರುತ್ತದೆ. ಕ್ರಿ.ಪೂ. ೨೦೦೦ಕ್ಕೆ ಹಿಂದಿನ ಅವುಗಳ ಗೂಡಿನ ವರ್ಣನೆಯಿದೆ. ಮಣ್ಣಿನಿಂದ ತೆರೆದ ಬಟ್ಟಲಿನಾಕಾರದ ಗೂಡನ್ನು ಮನೆ, ಮಠಗಳ ಮಾಡುಗಳಿಗೆ ಅಂಟಿಸಿ ರಚಿಸುವುದು ಸಾಮಾನ್ಯ. ಹಲವು ಹೊಗೆ ಕೊಳವೆಗಳೊಳಗೆ ಗೂಡು ಕಟ್ಟುತ್ತವೆ. ಈ ಹಕ್ಕಿ ಗೂಡು ರಚಿಸಿದ ಮನೆಗೆ ಅದೃಷ್ಟ ಬರುತ್ತದೆಂಬ ನಂಬಿಕೆ ಕೊರಿಯ, ಜಪಾನ್‌ಗಳಲ್ಲಿದೆ. ಇದಕ್ಕಾಗಿ ಹೊರ

ಗೋಡೆಗೆ ಪೆಟ್ಟಿಗೆಗಳನ್ನು ಕಟ್ಟಿ, ಅವು ಗೂಡು ಕಟ್ಟಲು ಆಕರ್ಷಿಸಲಾಗುತ್ತದೆ. ಅವುಗಳೂ ಸಹ ತಮ್ಮ ಗೂಡಿನ ಸ್ಥಳಕ್ಕೆ ಹಾಗೂ ಗೂಡಿಗೆ ಪ್ರತಿ ವರ್ಷವೂ ಹಿಂತಿರುಗುತ್ತಿರುತ್ತವೆ. ಹಳೇ ಗೂಡನ್ನು ಸರಿಪಡಿಸುತ್ತವೆ ಅಥವಾ ಸಾಮಾನ್ಯವಾಗಿ ಅದರ ಪಕ್ಕದಲ್ಲೇ ಇನ್ನೊಂದು ಗೂಡು ರಚಿಸುತ್ತವೆ. ಗೂಡು ರಚನೆಗೆ ಹೆಣ್ಣು ಗಂಡುಗಳೆರಡೂ ಸಹಕರಿಸಿ, ಕಡ್ಡಿ ಹುಲ್ಲುಗಳನ್ನು ಸೇರಿಸುತ್ತವೆ. ೪ – ೬ ಮೊಟ್ಟೆಗಳನ್ನಿಟ್ಟು ಹೆಣ್ಣು ಮಾತ್ರ ಕಾವು ಕೂರುತ್ತದೆ. ಕಾವಿನವಧಿ ೧೪ – ೧೬ ದಿನ. ೩ ವಾರಗಳಲ್ಲಿ ಮರಿ ಪೂರ್ಣ ಬೆಳೆದು ಹಾರಾಡುವಂತಾಗುತ್ತದೆ. ಕೆಲವು ಪ್ರಭೇದಗಳು ವರ್ಷಕ್ಕೆ ೨ – ೩ ಸಲ ಮರಿ ಮಾಡಬಲ್ಲವು.

ಯೂರೇಷಿಯಾದ **ಮಾರ್‌ಟಿನ್**ಗಳು ಹಸಿರು ಬೆನ್ನು ಹೊಂದಿರುತ್ತವೆ. ಅವು ಮನೆ ಮಾಡುಗಳಲ್ಲೇ ಗೂಡು ರಚಿಸುವುದು. ಒಳ ಹೋಗಲು ಒಂದೆಡೆ ರಂಧ್ರ ಬಿಟ್ಟು ಮಣ್ಣಿನ ಬಟ್ಟಲಿನಂತಹ ಗೂಡನ್ನು ಮಾಡಿಗೆ ಅಂಟಿಸಿ ರಚಿಸುತ್ತವೆ. ನೋಡಲು ಆಕರ್ಷಕವಾದ್ದರಿಂದ ಜಪಾನಿನಲ್ಲಿ ಹಲವರು ಸಣ್ಣ ಮರಿಗಳನ್ನು ತಂದು ಪೋಷಿಸುತ್ತಾರೆ. ಅವು ಬಲಿತು ವಲಸೆ ಹೋಗಿ ಹಿಂತಿರುಗಿದಾಗ, ತಾವು ಬೆಳೆದ ಸ್ಥಳಕ್ಕೇ ತಪ್ಪದೆ ಹಿಂತಿರುಗಿ ಆ ಮನೆಯ ಗೋಡೆ, ಮಾಡುಗಳಲ್ಲಿಯೇ ಗೂಡು ರಚಿಸುತ್ತವೆ.

ಹಲವು **ಮರ ಪೊಟರೆ ವಾಸಿಗಳು.** ಉ. ಅಮೇರಿಕಾದ ಪ್ರಭೇದ ಸ್ವಾಭಾವಿಕ ಮರ ಪೊಟರೆ ಅಥವಾ ಇತರ ಪಕ್ಷಿಗಳ ಗೂಡಿನಲ್ಲಿ, ಹುಲ್ಲು, ಮೃದುಗರಿಗಳಿಂದ ಮೆತ್ತನೆಯ ಗೂಡು ರಚಿಸುತ್ತವೆ. ಅವುಗಳಿಗೆ ಗೂಡಿನ ವಸತಿ ಸೌಕರ್ಯವೇರ್ಪಡಿಸಿದಲ್ಲಿ ಬಹುಬೇಗ ವೃದ್ಧಿಯಾಗಿ ಹೆಚ್ಚುತ್ತವೆ. ಹಲವು ನಿಂತ ದೋಣಿ, ಹಡಗು ಮತ್ತಿತರ ಯಂತ್ರಗಳಲ್ಲೂ ಗೂಡು ರಚಿಸಬಲ್ಲವು.

ಉತ್ತರ ಶೀತವಲಯದಂಚಿನಲ್ಲಿ ನೆಲ ಕೊರೆದು ಸುರಂಗ ರಚಿಸುವ **ದಡ ಸ್ವಾಲೋ** ಪ್ರಭೇದವಿದೆ. ಕಡಿದಾದ ನದೀದಡದಲ್ಲಿ ೩ – ೪ ಅಡಿ ನೀಳ ಸುರಂಗ ರಚಿಸುತ್ತವೆ. ಸಂಘಜೀವಿಗಳಾದ್ದರಿಂದ ಹಲವು ಒಂದೇ ಎಡೆಯಲ್ಲಿ ಗೂಡು ರಚಿಸುತ್ತವೆ.

ಆಫ್ರಿಕಾದ **ನದಿಮಾರ್‌ಟಿನ್**ಗಳು ಕೆಂಪು ಕೊಕ್ಕು ಮತ್ತು ಕಣ್ಣಿನ, ಕಪ್ಪು ದೇಹದ ಪಕ್ಷಿಗಳು. ಅವೂ ನದೀದಡದ ಸುರಂಗವಾಸಿಗಳೇ.

ಕುಟುಂಬ ೧೯ : ಕಾಂಪಿಫೀಗಿಡೀ (Campephegidae)

(ಮಿನಿವೆಟ್ ಮತ್ತು ಕೋಗಿಲೆ ಕಳಿಂಗ ಪಕ್ಷಿಗಳು)

ಇವು ಕಂಬಳಿಹುಳು ಮತ್ತಿತರ ಹುಳುಗಳನ್ನು ತಿನ್ನುವುವು. ಅದರಿಂದಲೇ ಕುಟುಂಬದ ಹೆಸರು. ಪೂರ್ವಾರ್ಧಗೋಳದ ಉಷ್ಣ ಮತ್ತು ಸಮಶೀತೋಷ್ಣ ವಲಯ ವಾಸಿಗಳು. ಆಫ್ರಿಕಾದಿಂದ ಜಪಾನ್, ಆಸ್ಟ್ರೇಲಿಯಾವರೆಗೆ ಕಂಡುಬರುತ್ತವೆ. ಸಾಮಾನ್ಯವಾಗಿ ಮರವಾಸಿಗಳು. ೫ – ೧೫ ಅಂಗುಲ ದೇಹದ ವಿವಿಧ ಅಂತರ ಹೊಂದಿರುವ ಒಟ್ಟು ೭೦ ಪ್ರಭೇದಗಳಿವೆ. ದಟ್ಟ ಮೊನಚಾದ ತುದಿ ಕೆಳಬಾಗಿದ ಕೊಕ್ಕು,

ಹೊಳ್ಳೆಗಳ ಬಳಿ ಒರಟು ಕೂದಲು, ಚೂಪಾದ ರೆಕ್ಕೆ ತುದಿ, ದುಂಡು ತುದಿಯ ನೀಳ ಬಾಲ ಈ ಪಕ್ಷಿಗಳಿಗೆ ಸಾಮಾನ್ಯ. ಬೆನ್ನಿನ ತಳಭಾಗದಲ್ಲಿ ಹಗುರ ವರ್ಣದ ದಟ್ಟ ಗರಿಗಳಿವೆ. ಈ ಗರಿಗಳು ಸುಲಭವಾಗಿ ಕಳಚಿಬರುತ್ತವೆ.

ಹಲವು ಪ್ರಭೇದಗಳು ಸಾಮಾನ್ಯ ವರ್ಣದವು. ಕಂದು ಕಪ್ಪು ಅಥವಾ ಬಿಳುಪು ಮೇಲ್ಬಣ್ಣವೂ, ಕಪ್ಪು ಬಿಳುಪು ಪಟ್ಟೆಯ ತಳಭಾಗವೂ ಇರುವುದೇ ಹೆಚ್ಚು. **ಮಿನಿವೆಟ್**ಗಳು ಮಾತ್ರ ಅಚ್ಚ ಕೆಂಪು ಕಪ್ಪು ವರ್ಣದವು. ಎಲ್ಲವೂ ಕೀಟಾಹಾರಿಗಳು. ಹಣ್ಣು ಕಾಯಿಗಳನ್ನೂ ತಿನ್ನಬಲ್ಲವು. ಉಷ್ಣವಲಯದವು ಸ್ಥಳವಾಸಿಗಳು. ಸಮಶೀತೋಷ್ಣ ವಲಯದವು ಮಾತ್ರ ವಲಸೆ ಹೋಗುತ್ತವೆ. ಮುಖ್ಯವಾಗಿ ಎಲ್ಲಾ ಪ್ರಭೇದಗಳೂ ಸಂಘಜೀವಿಗಳು. ಗುಂಪುಕೂಡಿ ಬಾಳುತ್ತವೆ.

ಮರದಮೇಲಿನ ಕೊಂಬೆ ಕವಲುಗಳಲ್ಲಿ ಸಣ್ಣ ತೆರೆದ ಬಟ್ಟಲಿನಾಕಾರದ ಗೂಡನ್ನು ಹುಲ್ಲು ಕಡ್ಡಿಗಳಿಂದ ರಚಿಸಿ ಒಳಗಡೆ ಜೇಡರಬಲೆ, ಕಲ್ಲು ಹೂವು ಮುಂತಾದುವನ್ನು ಹಾಸಿ ಮೆತ್ತೆ ರಚಿಸುತ್ತವೆ. ೨–೫ ಬಿಳಿ, ಹಸಿರು, ಅಥವಾ ನೀಲಿ ವರ್ಣದ ಮೊಟ್ಟೆಗಳನ್ನಿಟ್ಟು ೨ ವಾರದಲ್ಲಿ ಮರಿಮಾಡುತ್ತವೆ. ಹೆಣ್ಣು ಗಂಡುಗಳೆರಡೂ ಗೂಡು ರಚನೆಯಲ್ಲೂ ಮರಿ ಪೋಷಣೆಯಲ್ಲೂ ಭಾಗವಹಿಸುತ್ತವೆ.

ಕೊರಸಿನಾ ಜಾತಿಯ ೪೧ ಪ್ರಭೇದಗಳು ಆಫ್ರಿಕಾದಿಂದ ಆಸ್ಟ್ರೇಲಿಯಾವರೆಗೆ ಕಂಡುಬರುತ್ತವೆ. ಬೂದು ಬಣ್ಣದ ೮–೧೪ ಅಂಗುಲ ಗಾತ್ರದ ಪಕ್ಷಿಗಳು. ದಟ್ಟ ಕಾಡು ಮರಗಳಲ್ಲಿರುತ್ತವೆ. ಏರಿ ಇಳಿದಂತೆ ಹಾರಾಡುವುದು ಕೋಗಿಲೆಯ ಹಾರಾಟವನ್ನು ಹೋಲುತ್ತದೆ. **ಕಾಂಪಿಫೇಗ** ಜಾತಿಯ ಆಫ್ರಿಕಾವಾಸಿಗಳಾದ ಹೊಳಪು ಕಪ್ಪು ವರ್ಣದ ಪಕ್ಷಿಗಳ ಗಂಡಿಗೆ ಭುಜದಬಳಿ ಕೆಂಪು ಮಚ್ಚೆಯಿರಬಹುದು. **ಟ್ರಿಲ್ಲರ್**ಗಳು ಏಷ್ಯಾ, ಆಸ್ಟ್ರೇಲಿಯಾ ವಾಸಿಗಳಾದ ಸಣ್ಣ ಗಾತ್ರದ ಪಕ್ಷಿಗಳು. ಗಂಡು ಬಿಳುಪು–ಕಪ್ಪು, ಹೆಣ್ಣು ಕಂದು. ಆಸ್ಟ್ರೇಲಿಯಾದ ಒಂದು ಪ್ರಭೇದಕ್ಕೆ ವರ್ಷಕ್ಕೆ ಎರಡಾವರ್ತಿ ಹೊಸಗರಿ ಹುಟ್ಟುತ್ತದೆ.

ನೆಲಕೋಗಿಲೆ – ಕಳಿಂಗ ಪಕ್ಷಿ ಆಸ್ಟ್ರೇಲಿಯಾವಾಸಿ, ಈ ಕುಟುಂಬದ ದಪ್ಪ ಗಾತ್ರದ ಪಕ್ಷಿ. ಆಹಾರಕ್ಕೆ ಮಾತ್ರ ನೆಲದಮೇಲೆ ಅಡ್ಡಾಡುತ್ತಿದ್ದು, ತಂಗುವುದೂ, ಗೂಡು ರಚಿಸುವುದೂ ಮರದ ಮೇಲೆಯೇ. **ಮಿನಿವೆಟ್**ಗಳು ತೆಳ್ಳನೆಯ ಗಿಡ್ಡ ಪಕ್ಷಿಗಳು. ಆಫ್‌ಘಾನಿಸ್ಥಾನದಿಂದ ಫಿಲಿಪೈನ್ಸ್‌ವರೆಗಿನ ಕಾಡುಗಳಲ್ಲಿರುವ ಮರವಾಸಿಗಳು ಗುಂಪಾಗಿರುತ್ತವೆ. ಭಾರತದಲ್ಲಿನ ಕೆಂಪು ಮಿನಿವೆಟ್ ೮ ಅಂಗುಲ ಗಾತ್ರದವು. **ಬೂದು ಮಿನಿವೆಟ್**ಗಳು ಸಮಶೀತೋಷ್ಣವಲಯದವು.

ಕುಟುಂಬ ೨೦ : ಡೈಕ್ರೂರಿಡೀ (Dicruridae)
(ರಾಜ ಕಾಗೆಗಳು) (Dronges)

ಪೂರ್ವಾರ್ಧಗೋಳದಲ್ಲಿ ಆಫ್ರಿಕಾದಿಂದ ದ. ಏಷ್ಯಾ, ಇಂಡಿಯಾ, ಚೈನಾ, ಆಸ್ಟ್ರೇಲಿಯಾವರೆಗೆ ಹರಡಿ ಕಂಡುಬರುವ ಪಕ್ಷಿ ಕುಟುಂಬ. ಕಾಡು, ಪೊದರು ಭೂಮಿ

ಮತ್ತು ಮೈದಾನಗಳೆಲ್ಲೆಡೆಯೂ ವಾಸಿಸುತ್ತವೆ. ಅವುಗಳಿಗೆ ದಟ್ಟ ಮೊನಚು ಕೊಕ್ಕಿದ್ದು ಮೇಲ್ಕೊಕ್ಕಿನ ತುದಿ ಕೆಳಬಾಗಿರುತ್ತದೆ. ಕೊಕ್ಕಿನಲ್ಲಿ ಒಂದು ಕಚ್ಚಿದ್ದು ಭುಜದ ಬಳಿ ಒರಟು ಕೂದಲಿನ ಗುಚ್ಛವಿರುತ್ತದೆ. ಹಲವು ವಲಸೆ ಹೋಗುತ್ತವೆ. ೬–೧೬ ಅಂಗುಲ ಉದ್ದ ದೇಹ, ಕಾಲು ಗಿಡ್ಡ, ಪಾದ ಗಟ್ಟಿಯಾಗಿದ್ದು ಕೊಂಬೆ ಹಿಡಿಯಲು ಅನುಕೂಲ. ಸಾಮಾನ್ಯವಾಗಿ ಕಪ್ಪು ಮತ್ತು ಹಸಿರು ಬಣ್ಣ. ಒಂದೇ ಜಾತಿ ಹಗುರ ಬೂದು. ತಲೆ ಅಥವಾ ಕತ್ತಿನ ಬಳಿ ಶಿಖೆ ಅಥವಾ ವಿವಿಧ ಗರಿ ಗುಚ್ಛವಿರಬಹುದು. ಭಾರತದಲ್ಲಿನ ಕಾಡು ಪ್ರಭೇದ ಒಂದಕ್ಕೆ ಬಾಲದ ಎರಡು ಗರಿಗಳು ಒಂದು ಅಡಿ ನೀಳ ಬೆಳೆದು ತುದಿ ತಟ್ಟೆಯಂತೆ ಅಗಲವಾಗಿರುತ್ತದೆ. ಒಣಕೊಂಬೆ, ತಂತಿ, ಮೊದಲಾದವು ಗಳ ಮೇಲೆ ಕುಳಿತು ತನ್ನ ಆಹಾರವಾದ ಕೀಟಗಳನ್ನು ಹುಡುಕುತ್ತಾ ಕಂಡಾಗ ಹಾರಿ ಹಿಡಿದು ತಿನ್ನುತ್ತವೆ. ದಪ್ಪವಾಗಿದ್ದಲ್ಲಿ ಕಾಲಿನಿಂದ ಹಿಡಿದು ಕೊಕ್ಕಿನಿಂದ ಚೂರಾಗಿ ಹರಿದು ತಿನ್ನುತ್ತವೆ. ಹೆಚ್ಚು ಶಬ್ದ ಮಾಡುತ್ತಿರುತ್ತವೆ.

ಕ್ರೂರ ವರ್ತನೆಯವು. ತಮ್ಮ ಸರಹದ್ದನ್ನು ರಕ್ಷಿಸಲು ಹೋರಾಡಲು ಸದಾ ಸಿದ್ಧ. ತಮಗಿಂತ ದಪ್ಪ ಗಾತ್ರದವನ್ನೂ ಲಕ್ಷಿಸುವುದಿಲ್ಲ. ಭಾರತದಲ್ಲಿ ೧ ಅಡಿ ಉದ್ದದ ಹೊಳಪು ದೇಹದ ಕಪ್ಪು ಪಕ್ಷಿಗಳು ಬಹು ಸಾಮಾನ್ಯ. ಮರದಮೇಲೆ ಕೊಂಬೆಗಳ ನಡುವೆ ತಟ್ಟೆಯಾಕಾರದ ಕಡ್ಡಿ ಮತ್ತು ಎಲೆಗಳ ಗೂಡು ರಚಿಸಿ, ೨–೫ ಮೊಟ್ಟೆ ಯಿಟ್ಟು ಹೆಣ್ಣೆ ಕಾವಿತ್ತು ಮರಿಮಾಡುತ್ತದೆ. ಮರಿ ಪೋಷಣೆಯಲ್ಲಿ ಗಂಡೂ ಪಾತ್ರ ವಹಿಸುತ್ತದೆ. ಕೋಗಿಲೆಗಳು ಇವುಗಳ ಗೂಡನ್ನೂ ತಮ್ಮ ಮೊಟ್ಟೆಯಿಡಲು ಬಳಸುತ್ತವೆ.

ನ್ಯೂಗಿನಿಯ ಬೆಟ್ಟ ಪ್ರಭೇದ ಅತಿ ಹಿಂದುಳಿದದ್ದು. ಅದನ್ನೇ ಬೇರೆ ಜಾತಿ ಯಾಗಿ ಪರಿಗಣಿಸಲಾಗಿದೆ. ಉಳಿದ ೧೯ ಪ್ರಭೇದಗಳು ಎಲ್ಲೆಡೆ ಸಾಮಾನ್ಯವಾಗಿ ಕಂಡುಬರುತ್ತವೆ.

ಕುಟುಂಬ ೨೧ : ಓರಿಯೋಲಿಡೀ (Oriolidae)

(ಪೂರ್ವಾರ್ಧಗೋಳದ ಓರಿಯೋಲ್‌ಗಳು)

ಯೂರೋಪು ಮತ್ತು ಏಷ್ಯಾ ವಾಸಿಗಳಾದ ಸ್ವರ್ಣ ಅಥವಾ ಹಳದಿ ಮಿಶ್ರಿತ ವಿವಿಧ ಬಣ್ಣಗಳ ಪಕ್ಷಿ ಕುಟುಂಬ. ಉಷ್ಣ ಮತ್ತು ಸಮಶೀತೋಷ್ಣವಲಯದವು. ಇವುಗಳಿಗೆ ೧೦ ಪ್ರಾಥಮಿಕ ಗರಿಗಳಿದ್ದು, ಪಶ್ಚಿಮಾರ್ಧಗೋಳದವಕ್ಕೆ ೯ ಮಾತ್ರ ಇರು ತ್ತವೆ. ಎಲ್ಲವೂ ಕಾಡಿನ ಮರವಾಸಿಗಳು. ೯–೧೨ ಅಂಗುಲ ನೀಳ ದೇಹದ, ಸುಂದರ ವರ್ಣದ ೧೨ ಬಾಲ ಪುಕ್ಕಗಳುಳ್ಳ ಪಕ್ಷಿಗಳು. ಹೊಳ್ಳೆಯ ಬಳಿ ಬಹು ಸಣ್ಣ ಒರಟು ಕೂದಲುಗಳಿವೆ. ಹೆಣ್ಣು ಗಂಡುಗಳಿಗೆ ವರ್ಣ ಭೇದವುಂಟು. ಗಂಡಿಗೆ ಹೆಚ್ಚು ವರ್ಣವಿದ್ದು ಹಳದಿ, ಕಪ್ಪು ಬಣ್ಣ ಹೊಂದಿ, ಕೆಂಪು ಕೊಕ್ಕಿರುತ್ತದೆ. ಹೆಣ್ಣು ಹಗುರ ವರ್ಣ, ಮಾಸಲು ಹಸಿರು ಹೆಚ್ಚು.

ಉತ್ತಮ ಹಾರಾಟಗಾರರು, ಮರಕುಟುಕನಂತೆ ಮೇಲೆ ಕೆಳಗೆ ಹಾರುತ್ತವೆ. ಹಲವು ಉತ್ತಮವಾಗಿ ವಿವಿಧ ಶಬ್ದಗಳನ್ನೂ, ಇತರ ಪಕ್ಷಿ ಕೂಗನ್ನೂ ಅನುಕರಿಸಬಲ್ಲವು. ಒಂಟಿ ಅಥವಾ ಜೊತೆಯಾಗಿ ಮಾತ್ರ ಇರುತ್ತವೆ. ಕೀಟಾಹಾರಿಗಳು. ಕಂಬಳಿಹುಳುಗಳನ್ನು ತಿನ್ನಬಲ್ಲವು. ಹುಳುಗಳನ್ನು ಕೊಂಬೆಯುಮೇಲೆ ಕುಕ್ಕಿ, ಮುಳ್ಳು ಬರುವಂತೇರ್ಪಡಿಸಿ ತಿನ್ನುತ್ತವೆ. ಹಣ್ಣು ಕಾಯಿಗಳನ್ನೂ ತಿನ್ನಬಲ್ಲವು.

ಎತ್ತರ ಮರಗಳ ಅಡ್ಡ ಕೊಂಬೆಗಳಲ್ಲಿ ತೂಗು ತೊಟ್ಟಿಲುಗಳಂತಹ ಗೂಡನ್ನು ತೊಗಟೆ, ಹುಲ್ಲುಗಳಿಂದ ಹೆಣೆದು ರಚಿಸುತ್ತವೆ. ೨–೫ ಬಿಳಿ ವರ್ಣದ, ಕಂದು ಕಪ್ಪು ಚುಕ್ಕಿಯ ಮೊಟ್ಟೆಯಿಡುತ್ತವೆ. ಹೆಣ್ಣೇ ಕಾವಿಗೆ ಕೂರುವುದು. ಆಗ ಗಂಡು ಅದಕ್ಕೆ ಆಹಾರ ಒದಗಿಸುತ್ತದೆ. ಕಾವಿನ ಕಾಲಾವಧಿ ೧೫ – ೧೮ ದಿನ.

ಆಸ್ಟ್ರೇಲಿಯಾ, ನ್ಯೂಗಿನಿಯ ಎರಡು ಪ್ರಭೇದಗಳು ಅತ್ತಿ ಹಣ್ಣನ್ನು ಹೆಚ್ಚಾಗಿ ತಿನ್ನುತ್ತವೆ. ಹಳದಿ ಹಸಿರು ಬಣ್ಣದ ಮೈ, ಕಪ್ಪು ತಲೆಭಾಗವಿರುತ್ತವೆ. ಕೊಕ್ಕು ಸ್ವಲ್ಪ ಹೆಚ್ಚಾಗಿ ಕೆಳಬಾಗಿರುತ್ತದೆ. ಸಂಘಜೀವಿಗಳು. ಗುಂಪಾಗಿರುವುದೇ ಹೆಚ್ಚು.

ಕುಟುಂಬ ೨೨ : ಕೋರ್‌ವಿಡೀ (Corvidae)
(ಕಾಗೆಗಳು ಮತ್ತು ಜೇಗಳು)

ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತಹ ೧೦೦ ಪಕ್ಷಿ ಪ್ರಭೇದಗಳುಳ್ಳ ಕುಟುಂಬ. ಪುರಾಣ ಕಥೆಗಳಲ್ಲಿ ವರ್ಣಿತವಾದ ಮತ್ತು ಉಪಯುಕ್ತವಾದ ಹೆಚ್ಚು ಪಕ್ಷಿ ಪ್ರಭೇದಗಳು ಇದಕ್ಕೆ ಸೇರಿದವು. ಅಂಟಾರ್‌ಕ್ಟಿಕಾ, ನ್ಯೂಜಿಲೆಂಡ್, ದಕ್ಷಿಣ ಅಮೇರಿಕಾದ ದಕ್ಷಿಣಾರ್ಧವನ್ನುಳಿದು ಪ್ರಪಂಚದ ಇತರೆಲ್ಲೆಡೆ ಕಂಡುಬರುತ್ತವೆ. ಸಾಮಾನ್ಯ ಅಥವಾ ದಪ್ಪ ಗಾತ್ರದ ಸರ್ವ ಭಕ್ಷಕಗಳಿವು. ದಟ್ಟ ಕೊಕ್ಕುಗಳಿಗೆ ಕಚ್ಚು ಇರುವುದಿಲ್ಲ. ಕಾಲು ಪಾದಗಳೂ ದೃಢವಾಗಿ ಬೆಳೆದಿರುತ್ತವೆ. ಕಾಲಿನ ಮುಂಭಾಗ ಹುರುಪೆಗಳಿಂದಾವೃತವಾಗಿ ಹಿಂಭಾಗ ನುಣ್ಣಗಿರುತ್ತದೆ. ಕಾಡು ಪೊದರು ಮೈದಾನ ಎಲ್ಲೆಡೆ ವಾಸಿಸುವ ಪ್ರಭೇದಗಳನ್ನೊಳಗೊಂಡಿದೆ.

ಕಾಗೆಗಳೇ ಎಲ್ಲೆಡೆ ವಾಸಿಸುವ ಕಠಿಣ ಶರೀರದವು. ಜೇಗಳು ಕೆಲವೆಡೆ ಮಾತ್ರ ಇರುತ್ತವೆ. ಪ್ರಪಂಚದ ಬಹು ಭಾಗದಲ್ಲಿ ಸರ್ವೇ ಸಾಮಾನ್ಯವಾಗಿ ತಮ್ಮ 'ಕಾಕಾ' ಎಂಬ ಕೂಗಿನಿಂದ ಎಲ್ಲರಿಗೂ ತಿಳಿದಿರುವ ಪಕ್ಷಿ ಜಾತಿ ಕಾಗೆ. ದಪ್ಪ ದೇಹದ, ದಟ್ಟ ಕೊಕ್ಕು ಕಾಲುಗಳ, ಕಪ್ಪು ವರ್ಣದ ಜಲಗಾರ ಪಕ್ಷಿಗಳವು.

ಈ ಉಪವರ್ಗದ ದಪ್ಪ ಗಾತ್ರದ ಪಕ್ಷಿಗಳಾದ **ರೇವನ್** ಕಾಗೆ ೨ – ೧/೨ ಅಡಿಯಿರುತ್ತವೆ. ಉತ್ತರ ಶೀತವಲಯದಲ್ಲಿ ಕಾಡು ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತವೆ. ಕಾಗೆಗಳಲ್ಲಿನ ವೈಶಿಷ್ಟ್ಯ ಮಾನವರೊಡಗೂಡಿ ಜೀವಿಸುವುದೇ. ವಿವಿಧ ಆಹಾರವನ್ನು ಸೇವಿಸಬಲ್ಲುವಾಗಿ, ಮನೆಗಳ ಪಕ್ಕ ವಾಸವಿರುತ್ತವೆ. ವ್ಯವಸಾಯದಲ್ಲಿ ನಷ್ಟಮಾಡಿಸಿದರೂ, ಹುಳು ಹುಪ್ಪಟೆಗಳನ್ನು ತಿಂದು ಅವುಗಳ ಹಾವಳಿಯನ್ನು ಬಹಳ ಕಡಮೆ ಮಾಡುತ್ತವೆ.

ಕಾಗೆಗಳು ಬಹಳ ಬುದ್ಧಿವಂತ ಪಕ್ಷಿಗಳು. ಬೇಗ ಕಲಿಯಬಲ್ಲವು. ಅವುಗಳಲ್ಲಿ ಒಂದು ನಿರ್ದಿಷ್ಟ ಭಾಷೆಯಿದೆ. ವಿವಿಧ ಕೂಗು ವಿವಿಧ ಭಾವನೆಗಳನ್ನು ಸೂಚಿಸುತ್ತದೆ. ಕೆಲವು ಶಬ್ದಗಳನ್ನೂ ಉಚ್ಚರಿಸಬಲ್ಲವು. ಇತರ ಪಕ್ಷಿಗಳ ಮೊಟ್ಟೆ ಮರಿಗಳನ್ನು ಕದ್ದು ತಿನ್ನುವ ವಿನಾಶಕಾರಕ ನಡತೆಯಿಂದ ದ್ವೇಷಕ್ಕೊಳಗಾಗಿವೆ. ಇದರಿಂದ ಕೆಲವೆಡೆ ಬೇಟೆಗಾರರು ಕಂಡಲ್ಲಿ ಕೊಲ್ಲುತ್ತಾರೆ. ಇಂಗ್ಲೆಂಡಿನಲ್ಲಿ ಅವು ಚಳಿಗಾಲದಲ್ಲಿ ವಿಶ್ರಮಿಸುವೆಡೆಯಲ್ಲಿ ಡೈನಾಮಿಟ್ ಇಟ್ಟು ಕೊಲ್ಲಲಾಗುತ್ತಿದೆ. ಆದರೂ ಅವು ಚೆನ್ನಾಗಿ ವರ್ಧಿಸುತ್ತಿವೆ.

ವರ್ಷಕ್ಕೆ ಒಂದೇಸಲ ಮರಿಮಾಡುವುವು. ಮರದಲ್ಲೇ ಗೂಡು ರಚಿಸುವುದು ಹೆಚ್ಚು. ಕೆಲವು ಕಲ್ಲು ಪ್ರಪಾತಗಳ ಬಡುಗಳಲ್ಲಿ ರಚಿಸಬಲ್ಲವು. ಅಗಲವಾಗಿ ತೆರೆದ ಗೂಡು, ಕಡ್ಡಿಗಳಿಂದ ರಚಿತ. ಹೆಣ್ಣೇ ಕಾವೀಯುವುದು. ಗಂಡು ಅದಕ್ಕೆ ಆಹಾರ ಒದಗಿಸುತ್ತದೆ. ಕಾವು ಕಾಲಾವಧಿ ೧೮ರಿಂದ ೨೨ ದಿನ. ಮರಿ ಬಲಿಯಲು ೩ ವಾರ ಬೇಕಾಗುತ್ತದೆ. **ರುಕ್** ಪ್ರಭೇದ ಸಾಮೂಹಿಕವಾಗಿ ಒಂದೆಡೆಯೇ ಗೂಡುಗಳನ್ನು ರಚಿಸುತ್ತವೆಯಾದ್ದರಿಂದ ಅಂತಹ ಸ್ಥಳಗಳಿಗೆ **ರುಕ್ಕರಿ** ಎಂದು ಹೆಸರು. **ಜಾಕ್‌ಡಾ**ಗಳೂ ಇದಕ್ಕೇ ಸೇರಿದವು. ಯೂರೋಪ್ ಮತ್ತು ಮಧ್ಯ ಏಷ್ಯಾದಲ್ಲಿ ಸಣ್ಣ ಗಾತ್ರದ ಹೊಳಪು ಕಪ್ಪು ಮೈಯ ನೀಳವಾದ ತೆಳು ಕೊಕ್ಕಿನ 'ಚೌ' ಪ್ರಭೇದಗಳಿವೆ. ಕೊಕ್ಕು ಅಚ್ಚ ಕೆಂಪು ಅಥವಾ ಹಳದಿ ವರ್ಣವಾಗಿರುತ್ತದೆ. ಕಲ್ಲು ಪ್ರಪಾತದಲ್ಲೇ ಗೂಡು ರಚಿಸುತ್ತವೆ. ಯಾವಾಗಲೂ ಹಾರಾಡುತ್ತಾ ವಿವಿಧವಾಗಿ ದೊಂಬರಾಟ ಪ್ರದರ್ಶನ ನೀಡುತ್ತವೆ. **ನಟ್‌ಕ್ರಾಕರ್**‌ಗಳು ಯೂರೇಷಿಯಾ ಮತ್ತು ಉ. ಅಮೇರಿಕಾ ವಾಸಿಗಳು. ಕಾಡಿನಲ್ಲಿದ್ದು ಎಲ್ಲಾ ವಿಧದ ಆಹಾರವನ್ನೂ ಉಪಯೋಗಿಸುವ ಸರ್ವ ಭಕ್ಷಕಗಳು. ಆದರೆ ಪೈನ್ ಕಾಯಿಗಳೇ ಮುಖ್ಯಾಹಾರ. ಕಾಲಿನಿಂದ ಹಿಡಿದು ದಟ್ಟ ಕೊಕ್ಕಿನಿಂದ ಚಿಪ್ಪು ಒಡೆದು ಒಳಗಿನ ತಿರುಳನ್ನು ತಿನ್ನುತ್ತವೆ. ಹೆಚ್ಚು ಕಾಯಿಗಳು ದೊರೆತಾಗ ಅವನ್ನು ಕಿತ್ತು ನೆಲದಲ್ಲಿ ಹೂತಿಟ್ಟು ಬೇಕಾದಾಗ ಮರೆಯದೆ ಆ ಸ್ಥಳಕ್ಕೆ ಹಿಂತಿರುಗಿ ತೆಗೆದು ತಿನ್ನುತ್ತವೆ.

ಜೇಗಳು ಇನ್ನೊಂದು ಮುಖ್ಯ ಪಂಗಡ. ಹೆಚ್ಚು ವರ್ಣರಂಜಿತ ಪಕ್ಷಿಗಳು. ಮಧ್ಯ ಮತ್ತು ದ. ಅಮೇರಿಕಾದಲ್ಲಿ ಬಹು ಹೆಚ್ಚಿನ ಪ್ರಭೇದ ಕಂಡುಬರುತ್ತವೆ. ಉತ್ತರ ವಲಯ ವಾಸಿಗಳೇ ಹೆಚ್ಚು. ವಲಸೆ ಹೋಗುತ್ತವೆ. ಆದ್ದರಿಂದ ಅವು ಗುಂಪಾಗಿರುತ್ತವೆ. ಜೇಗಳೂ ಅಗಲವಾದ ತೆರೆದ ತಟ್ಟೆಯಂತಹ ಗೂಡು ರಚಿಸುತ್ತವೆ. ೫–೭ ಮೊಟ್ಟೆ ಸಾಮಾನ್ಯ. ಆದರೆ ಇದರಲ್ಲಿ ಗಂಡೂ ಕಾವಿಗೆ ಕೂರುತ್ತದೆ.

ಈ ಕುಟುಂಬದಲ್ಲಿ ಹಲವು ಜಾತಿ ವಲಸೆ ಹೋಗುತ್ತವೆ. ಆದರೆ ೨೦೦–೪೦೦ ಮೈಲಿ ದೂರ ಹೋಗುವುದು ಹೆಚ್ಚು. ಕಾಗೆಗಳು ೨೦ ವರ್ಷ ಬದುಕಿರಬಲ್ಲವು. ಗಾತ್ರ ಕಡಮೆಯಾದಂತೆ ವಯಸ್ಸಿನ ಮಿತಿಯೂ ಕಡಮೆಯಾಗುತ್ತದೆ. ಜೇಗಳಲ್ಲಿ **ಮ್ಯಾಗ್‌ಪೈ** ಒಂದು ಮುಖ್ಯ ಪ್ರಭೇದ. ಬಿಳುಪು ಕಪ್ಪು ವರ್ಣದ, ನೀಳ ಬಾಲ ಪಕ್ಷಿಗಳು ಸಣ್ಣ ಗುಂಪಾಗಿರುತ್ತವೆ. ಇತರ ಪಕ್ಷಿಗಳ ಮೊಟ್ಟೆ ಇಷ್ಟಾಹಾರ. ಒಣಗಿದ ಅಥವಾ

ಎಲೆ ಉದುರಿದ ಮರಗಳ ಕೊಂಬೆ ಕವಲಿನಲ್ಲಿ ೧ – ೩ ಅಡಿ ಅಗಲದ ಗೂಡನ್ನು ದಪ್ಪ ಕಡ್ಡಿಗಳಿಂದ ರಚಿಸುತ್ತವೆ. ಗಂಡು ಸಾಮಗ್ರಿ ಒದಗಿಸುತ್ತದೆ. ಹೆಣ್ಣು ಗೂಡು ರಚಿಸುತ್ತದೆ. ಗೂಡನ್ನು ಪ್ರತಿ ವರ್ಷವೂ ಉತ್ತಮಪಡಿಸಿ ಉಪಯೋಗಿಸುತ್ತಿರುತ್ತವೆ. ಹೆಣ್ಣು ಮಾತ್ರ ಕಾವಿಗೆ ಕೂರುವುದು.

ಕುಟುಂಬ ೨೩ : ಕಲಾಯ್‌ಡೀ (Callaeidae)
(ಜೋಲು ಮಾಂಸ ಪಕ್ಷಿಗಳು)

ನ್ಯೂಜಿಲೆಂಡಿನ ಮೂರು ಮುಖ್ಯ ಪಕ್ಷಿಜಾತಿಗಳು. ಅದರಲ್ಲಿ ಒಂದು **ಹೂಯು** ಇತ್ತೀಚೆಗೆ ನಿರ್ನಾಮಗೊಂಡಿದೆ. ದಟ್ಟ ಉದ್ದನೆಯ ಕಾಲೂ, ಪಾದಗಳೂ, ಕೆನ್ನೆಯ ಬಳಿ ವಿವಿಧ ವರ್ಣದ ಬೋಳು ಜೋಲು ಮಾಂಸ ಮಚ್ಚೆಯೂ ಇವುಗಳಿಗಿರುವ ಮುಖ್ಯ ರಚನೆ. ಹೂಯು ಅವುಗಳಲ್ಲಿ ಮುಖ್ಯವಾಗಿದ್ದದ್ದು. ಹೆಣ್ಣುಗಂಡುಗಳ ಕೊಕ್ಕು ಬೇರೆಬೇರೆಯಾಗಿರುತ್ತವೆ. ಬಿಳುಪು ವರ್ಣದ ಕೊಕ್ಕುಗಳು ಗಂಡಿಗೆ ನೀಳವಾಗಿ ನೆಟ್ಟಗೆ ಉಳಿಯಂತೆ ಮೊನಚಾಗಿರುತ್ತದೆ. ಹೆಣ್ಣಿಗೆ ತೆಳುವಾಗಿ ಬಹಳ ಮೊನಚಾಗಿ ಕೆಳಬಾಗಿರುತ್ತದೆ. ಅವು ಜೊತೆಗೂಡಿಯೇ ಆಹಾರ ಅರಸುತ್ತವೆ. ಹೊಳಪು ಕಪ್ಪ ಬಣ್ಣದ ಮೈ ಗಂಡು ಮರ ಕೊಂಬೆಗಳಲ್ಲಿ ತನ್ನ ಉಳಿಯಂತಹ ಕೊಕ್ಕಿನಿಂದ ತೂತು ಕೊರೆಯುತ್ತದೆ. ಹೆಣ್ಣು ತನ್ನ ನೀಳ ತೆಳು ಕೊಕ್ಕನ್ನು ಒಳಚಾಚಿ ಹುಳುಗಳನ್ನು ಹೊರಕ್ಕೆಳೆದುತಂದು ಎರಡೂ ಸೇರಿ ತಿನ್ನುತ್ತಿದ್ದವು. ಅವುಗಳ ನೀಳ ಬಾಲಗರಿಗಳು ಬಿಳುಪು ತುದಿ ಹೊಂದಿದ್ದು ಮಾವೋರಿಗಳ ಕಿರೀಟ ಅಲಂಕಾರಕ್ಕೆ ಉಪಯೋಗಿಸಲ್ಪಡುತ್ತಿದ್ದುವು. ಅದಕ್ಕಾಗಿ ಮಾವೋರಿಗಳೂ, ಇತರರೂ ಹೆಚ್ಚಾಗಿ ಬೇಟೆಯಾಡಿ ೧೯೦೮ರ ವೇಳೆಗೆ ಅವು ನಿರ್ನಾಮವಾದವು.

ಜೇನು ಬೆನ್ನಿನ ಪಕ್ಷಿ ಎರಡನೆಯ ಮುಖ್ಯ ಜಾತಿ. ಹೊಳಪು ಕಪ್ಪು ಬಣ್ಣದ ಮೈ ಹೆಣ್ಣು ಗಂಡುಗಳಲ್ಲಿ ಭೇದವಿಲ್ಲ. ನೀಳ ಮೊನಚು ಕೊಕ್ಕು ಎರಡಕ್ಕೂ ಸಾಮಾನ್ಯ. ೯ – ೧೦ ಅಂಗುಲ ದೇಹದವು ನೆಲದಮೇಲೆ ಪೊದರುಗಳಲ್ಲಿ ಕುಪ್ಪಳಿಸುತ್ತಾ ತಮ್ಮ ಮುಖ್ಯಾಹಾರವಾದ ಕೀಟಗಳನ್ನು ಅರಸಿ ತಿನ್ನುತ್ತಿರುತ್ತವೆ. ಕಲ್ಲುಪೊಟರೆ ಅಥವಾ ಮರ ಜರೀ ಗಿಡಗಳ ಎಲೆ ತಳದಲ್ಲಿ ಬಟ್ಟಲಿನಾಕಾರದ ಗೂಡು ರಚಿಸಿ ೨ – ೩ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಸಣ್ಣ ದ್ವೀಪಗಳಲ್ಲಿನ ದಟ್ಟಡವಿಗಳಲ್ಲಿ ಮಾತ್ರ ಈಗ ಅವು ಜೀವಿಸಿವೆ.

ಕೊಕಾಕೋ ಮೂರನೆಯ ಜಾತಿ. ಕಾಡುಗಳಲ್ಲಿ ಮಾತ್ರ ಈಗ ಕಂಡುಬರುತ್ತವೆ. ಕಾಗೆಯಂತಹ ಮೈ, ದಪ್ಪ ಗಿಡ್ಡ ಕೊಕ್ಕು ಕೆಳಬಾಗಿರುತ್ತದೆ. ಕೊಕ್ಕಿನಡಿ ಜೋಲು ಮಾಂಸ ಮಚ್ಚೆ ನೀಲಿಯಾಗಿ ಕಂಡುಬರುತ್ತದೆ. ಹೆಚ್ಚಾಗಿ ಹಣ್ಣು ಸೇವಿಸುತ್ತವೆ.

ಕುಟುಂಬ ೨೪ : ಗ್ರಾಲ್ಲಿನಿಡೀ (Grallinidae)
(ಮಣ್ಣು ಗೂಡು ರಚನೆಯ ಪಕ್ಷಿಗಳು)

ಆಸ್ಟ್ರೇಲಿಯಾ, ನ್ಯೂಗಿನಿಯ ೪ ಪ್ರಭೇದಗಳು **ಮಣ್ಣುಲಾರ್ಕ್**ಗಳು ಅತ್ಯಂತ ಸಣ್ಣ ಗಾತ್ರದವು. **ಮ್ಯಾಗ್‌ಪೈಲಾರ್ಕ್** ೧೧ – ೧೨ ಅಂಗುಲವಿರುತ್ತವೆ. ಸಾಮಾನ್ಯವಾಗಿ ಕಪ್ಪು – ಬಿಳುಪು ಮಿಶ್ರಿತ ವರ್ಣವುಳ್ಳವು. ನದಿ, ಕೊಳ, ದಡವಾಸಿಗಳು, **ಪಾಪುವನಾ** ಮಣ್ಣುಲಾರ್ಕ್‌ಗಳು ನ್ಯೂಗಿನಿಯ ಬಳಿಯ ಕಾಡುಜರಿಗಳ ತೀರದ ಒಂಟಿ ವಾಸಿಗಳು. ಆಸ್ಟ್ರೇಲಿಯಾ ಪ್ರಭೇದ ೪೦೦ – ೫೦೦ರ ಗುಂಪಾಗಿ ಕೂಡಿದ್ದರೂ ಬೇರೆ ಬೇರೆ ಗೂಡು ರಚಿಸಿ ವಾಸಿಸುತ್ತವೆ. ಜೊತೆಗೂಡಿದಂದಿನಿಂದ ಜೀವನವಿಡೀ ಜೊತೆಯಾಗಿರುತ್ತವೆ. ತಮ್ಮ ವಾಸಸ್ಥಳವನ್ನು ಜಗಳವಾಡಿ ರಕ್ಷಿಸುತ್ತವೆ. ಹಾಡುವಾಗಲೂ ಜೊತೆಗೂಡಿಯೇ ಹಾಡುತ್ತವೆ. ಹೆಣ್ಣು ಪ್ರಾರಂಭಿಸಿ, ಗಂಡು ಮುಂದುವರಿಸುತ್ತದೆ.

ಎತ್ತರವಾದ ಮರದ ಕೊಂಬೆಗಳಲ್ಲಿ ತೆರೆದ ಬಟ್ಟಲಿನಾಕಾರದ ಮಣ್ಣಿನ ಗೂಡುಗಳನ್ನು ಕೂದಲು, ಗರಿ, ಹುಲ್ಲು ಸೇರಿಸಿ ರಚಿಸುತ್ತವೆ. ಗುಂಪಾಗಿದ್ದು, ಕುಪ್ಪಳಿಸುವ ಅಭ್ಯಾಸದವು. ೨ – ೪ ಮೊಟ್ಟೆಯಿಡುತ್ತವೆ. ಮಳೆಗಾಲದಲ್ಲಿ ಗೂಡು ಕರಗುವುದರಿಂದ ಪ್ರತಿವರ್ಷವೂ ಹೊಸತಾಗಿ ಗೂಡು ರಚಿಸುತ್ತವೆ. ಮೃದ್ವಂಗಿಗಳನ್ನೂ, ಕೀಟಗಳನ್ನೂ ತಿನ್ನುವ ಉಪಯುಕ್ತ ಪಕ್ಷಿಗಳಿವು. **ಗ್ರೇ ಜಂಪರ್** ಪಕ್ಷಿಗಳು ಕಾಡು ಮತ್ತು ಪೊದರುಗಳಲ್ಲಿ ಗುಂಪಾಗಿ ವಾಸಿಸುತ್ತವೆ. ಕೊಂಬೆ ನೆಲಗಳಮೇಲೆ ಕುಪ್ಪಳಿಸಿ ಚಲಿಸುತ್ತವೆ. ಮುಖ್ಯ ಕೀಟಾಹಾರ. **ಬಿಳಿ ರೆಕ್ಕೆಯ ಚೌ** ನಾಲ್ಕನೆಯ ಪ್ರಭೇದ. ಕೀಟ, ಹಣ್ಣು, ಕಾಯಿಗಳನ್ನು ತಿನ್ನಲು ಗುಂಪಾಗಿ ತಿರುಗುತ್ತವೆ. ಕೊಂಬೆಯಿಂದ ಕೊಂಬೆಗೆ ನೆಗೆದು ಚಲಿಸುತ್ತವೆ.

ಕುಟುಂಬ ೨೫ : ಕ್ರಾಕ್ಟಿಸಿಡೀ (Cracticidae)
(ಆಸ್ಟ್ರೇಲಿಯಾ ಕಟುಕ ಪಕ್ಷಿಗಳು ಮತ್ತು ಗಂಟೆ ಮ್ಯಾಗ್‌ಪೈಗಳು)

ಇವೂ ಆಸ್ಟ್ರೇಲಿಯಾ ವಾಸಿಗಳಾದ ೧೦ ಪ್ರಭೇದಗಳನ್ನೊಳಗೊಂಡ ಕುಟುಂಬ ಸಮಶೀತೋಷ್ಣವಲಯ ವಾಸಿಗಳಾದ ಬೂದು ಕಟುಕ ಪಕ್ಷಿಗಳು. ಹಲ್ಲಿ, ಓತಿ, ಕೀಟ ಮುಂತಾದುವನ್ನು ಹಿಡಿದು, ಮುಳ್ಳುಗಳಿಗೆ ಚುಚ್ಚಿ ನೇತುಹಾಕಿ ಬೇಕಾದಾಗ ಉಪಯೋಗಿಸುತ್ತವೆ. ಉತ್ತಮ ಸಂಗೀತಗಾರ ಪಕ್ಷಿಗಳಿವು. ವರ್ಷವಿಡೀ ಕೂಗುತ್ತಿರುತ್ತವೆ. ಇವುಗಳಿಗೆ ದಟ್ಟ ಕೊಕ್ಕಿದ್ದು, ಮೇಲ್ಕೊಕ್ಕಿನ ತುದಿ ಮುಂಚಾಚಿ ಕೊಕ್ಕೆಯಂತೆ ಕೆಳಬಾಗಿರುತ್ತದೆ.

ಜೊತೆಗೂಡಿದಲ್ಲಿ ಜೀವನವಿಡೀ ಒಟ್ಟಿಗಿರುತ್ತವೆ. ಕೊಂಬೆಕವಲಿನಲ್ಲಿ ಕಾಗೆಯಂತೆಯೇ ದಪ್ಪ ಕಡ್ಡಿಗಳ ಸರಳಗೂಡು ರಚಿಸಿ ೩ – ೫ ವಿವಿಧ ವರ್ಣದ ಚುಕ್ಕೆಯ ಮೊಟ್ಟೆಯಿಡುತ್ತವೆ. ೨೦ – ೨೫ ದಿನ ಕಾವಿನವಧಿ.

ಗಂಟೆ ಮ್ಯಾಗ್‌ಪೈ ೧ - ೨ ಅಡಿ ನೀಳ ದೇಹದ, ಕಪ್ಪು ಬಿಳುಪು ಮಿಶ್ರ ವರ್ಣದ ಗಿಡ್ಡ ಬಾಲದ ಪಕ್ಷಿಗಳು. ಎಲ್ಲವೂ ಉತ್ತಮ ಹಾಡುಗಾರರು. ಘಂಟಾ ನಾದದಂತಹ ಶಬ್ದ ಮಾಡುವುದರಿಂದ ಅವುಗಳಿಗೆ ಈ ಹೆಸರು ಬಂದಿರುವುದು. ೬–೧೦ ರ ಕುಟುಂಬ ಒಟ್ಟಾಗಿ ವಾಸಿಸುತ್ತವೆ. ಹಣ್ಣುಗಳನ್ನೂ ಇತರ ಪಕ್ಷಿಗಳ ಮೊಟ್ಟೆಗಳನ್ನೂ ತಿನ್ನುತ್ತವಾದ್ದರಿಂದ ಇತರರ ದ್ವೇಷಕ್ಕೆ ಕಾರಣವಾಗಿವೆ.

ಗೂಡಿನ ರಚನೆ ಮತ್ತು ಕಾವೀಯುವುದು ಹೆಣ್ಣಿನ ಕಾರ್ಯ. ಗಂಡು ಮರಿ ಪೋಷಣೆಗೆ ಮಾತ್ರ ಸಹಾಯಕ. ಎತ್ತರವಾದ ಕೊಂಬೆ ಕವಲುಗಳಲ್ಲಿ ಆಳ ಬಟ್ಟಲಿನಾಕಾರದ ಗೂಡು ರಚಿಸಿ ಮೊಟ್ಟೆಯಿಡುತ್ತವೆ. ಲೋಹ ತಂತಿಗಳನ್ನೂ ಗೂಡಿನ ರಚನೆಗಾಗಿ ಉಪಯೋಗಿಸಲು ಇಚ್ಛಿಸುತ್ತವೆ. ಒಂದು ಗೂಡು ೧೩ ೩/೪ ಪೌಂಡು ತೂಕವಿದ್ದು ಅದರಲ್ಲಿ ೨೪೬ ವಿವಿಧ ತಂತಿ ಚೂರುಗಳಿದ್ದವೆಂದೂ, ಅದರಲ್ಲಿ ೪ ಅಂಗುಲದಿಂದ ೪ ಅಡಿಯ ಉದ್ದದ ಮುಳ್ಳು ತಂತಿಯ ಚೂರುಗಳ ಮೊತ್ತ ೩೩೮ ಅಡಿ ಇತ್ತೆಂದೂ ತಿಳಿದು ಬಂದಿದೆ.

ಕುಟುಂಬ ೨೬ : ಟೈಲೊನೋರಿಂಕಿಡೀ (Ptilonorhynchidae)

(ಕುಂಜ ಪಕ್ಷಿಗಳು)

ಪರ್ವಕಾಲದಲ್ಲಿ ತೋರ್ಕೆಗಾಗಿ ಗಂಡು ಪಕ್ಷಿಗಳು ರಚಿಸುವ ವಿಶಾಲ ಕುಂಜವಿಹಾರ ಈ ೧೯ ಪ್ರಭೇದಗಳ ವಿಚಿತ್ರ ವೈಶಿಷ್ಟ್ಯ ! ಅವು ನ್ಯೂಗಿನಿಯಿಂದ ಉತ್ತರ ಆಸ್ಟ್ರೇಲಿಯಾ ವರೆಗಿನ ಪ್ರದೇಶದಲ್ಲಿ ಕಂಡುಬರುವುವು. ಬಹು ಪ್ರಭೇದಗಳಲ್ಲಿ ವ್ಯತ್ಯಾಸವಿದೆ. ಹಲವು ಗಂಡು ಪಕ್ಷಿಗಳು ವರ್ಣರಂಜಿತ, ಆದರೆ ಯಾವುದಕ್ಕೂ ದಿವ್ಯ ಪಕ್ಷಿಗಳಂತಹ ಸುಂದರ ಬಾಲಗರಿಗಳಿರುವುದಿಲ್ಲ. ಕುಂಜ ಪಕ್ಷಿಗಳೂ ವರ್ಗದಲ್ಲಿ ಮನುಷ್ಯರನ್ನುಳಿದು ಉತ್ತಮ ಪ್ರಣಯಿಗಳು. ದಿವ್ಯ ಪಕ್ಷಿಗಳು ತಮ್ಮ ಮೋಹಕ ಬಾಲಗರಿಗಳನ್ನು ತೋರ್ಪಡಿಸಿ ನರ್ತಿಸಿ ಇನಿಯಳನ್ನು ಮೆಚ್ಚಿಸುತ್ತವೆ. ಕುಂಜ ಪಕ್ಷಿ ಉತ್ತಮ ಕಲಾವಿದ. ಉತ್ತಮ ಕಲಾಕುಂಜ ವಿಹಾರಗಳನ್ನು ರಚಿಸಿ, ಅಲಂಕರಿಸಿ ಇನಿಯಳನ್ನು ಮೆಚ್ಚಿಸಲು ಪ್ರಯತ್ನಿಸುತ್ತದೆ.

ಕುಂಜಗಳ ಈ ಕಲಾಪೂರ್ಣ ರಚನೆ ಗಂಡು ತನ್ನ ಇನಿಯಳನ್ನು ಆಕರ್ಷಿಸಲು ಮಾತ್ರ ಸಹಾಯಕ. ಸಂಭೋಗ ಈ ವಿಹಾರದಲ್ಲೇ. ಸಂಭೋಗಾನಂತರ ಹೆಣ್ಣು ಬೇರೆಡೆ ಹೋಗಿ ಗೂಡು ರಚಿಸುತ್ತದೆ. ಅವುಗಳ ಗೂಡು ರಚನೆಯನ್ನನುಸರಿಸಿ ೪ ಪಂಗಡಗಳನ್ನು ವಿಂಗಡಿಸಲಾಗಿದೆ. ಕುಂಜವಿಹಾರ ರಚಿಸುವುವು, ವಿಹಾರ ರಚಿಸುವವು, ವರ್ಣರಂಜಿತ ಕಂಬ ರಚಿಸುವವು, ಮತ್ತು ಸಾಲು ಬೀದಿ ರಚಿಸುವವು.

ಮೊದಲನೆಯದು ಹಿಂದುಳಿದವು. ೨ ಪ್ರಭೇದಗಳು ಮಾತ್ರವಿದೆ. ಬೆಕ್ಕಿನಂತೆ ಕೂಗುತ್ತವೆ. ಆದ್ದರಿಂದಲೇ ಬೆಕ್ಕು ಪಕ್ಷಿಗಳೆಂದು ಹೆಸರು. ಅವುಗಳಿಗೆ ದಟ್ಟ ಕೊಕ್ಕಿದ್ದು, ಹೆಚ್ಚಾಗಿ ಮರವಾಸಿಗಳು. ಗಂಡು ವಿಹಾರ ರಚಿಸುವುದಿಲ್ಲ. ಹೆಣ್ಣು ಬಟ್ಟಲಿನಂತಹ ಗೂಡು ರಚಿಸಿ ೨ – ೩ ಮೊಟ್ಟೆಯಿಟ್ಟು ಮರಿಮಾಡುತ್ತದೆ.

ಎರಡನೆಯವು ಸಾಮಾನ್ಯ ವಿಹಾರ ರಚಿಸುತ್ತವೆ. ಹೆಣ್ಣು ಗಂಡುಗಳಿಗೆ ವ್ಯತ್ಯಾಸ ವಿಲ್ಲ. ಅವುಗಳ ಕೊಕ್ಕುಗಳ ಅಂಚು ಗರಗಸದಂತಿದ್ದು ಎಲೆ ಕತ್ತರಿಸಲು ಅನುಕೂಲ. ಕಾಡಿನಲ್ಲಿ ೩ – ೫ ಅಡಿ ಅಗಲ ಪ್ರದೇಶವನ್ನು ಚೊಕ್ಕಟಗೊಳಿಸಿ, ಆ ಸ್ಥಳದಲ್ಲಿ ಒಂದೇ ಜಾತಿಯ ಎಲೆಗಳನ್ನು ಕತ್ತರಿಸಿ ದಟ್ಟವಾಗಿ ಹರಡುತ್ತದೆ. ಎಲೆ ಒಣಗಿದಂತೆಲ್ಲ ತೆಗೆದು ಹೊಸ ಎಲೆಗಳನ್ನಿಡುತ್ತವೆ. ಈ ಕುಂಜದ ಬಳಿ ಅತ್ತಿತ್ತ ಸುಳಿದಾಡಿ ಕುಳಿತು ವಿವಿಧವಾಗಿ ಹಾಡುತ್ತಾ ಹೆಣ್ಣನ್ನು ಆಕರ್ಷಿಸುವುದೇ ಗಂಡಿನ ಮುಖ್ಯ ಕಾರ್ಯ. ಇತರ ಶಬ್ದ ಗಳನ್ನೂ ಅನುಕರಿಸಬಲ್ಲವು. ಸ್ವರ್ಣ ಶಿಖೆಯ ಪ್ರಭೇದ ನ್ಯೂಗಿನಿಯ ಕಾಡುಗಳ ಮಧ್ಯೆ ಜರೀಗಿಡಗಳ ಎಲೆಗಳನ್ನು ದಟ್ಟವಾಗಿ ಹರಡಿ, ಅವುಗಳ ಅಂಚಿನಲ್ಲಿ ಸುತ್ತಲೂ ಜೀರುಂಡೆಗಳ ವರ್ಣರಂಜಿತ ರೆಕ್ಕೆ, ರಾಳದ ಚೂರು, ಮತ್ತು ಬಸವನ ಹುಳುಗಳ ಗೂಡು ಗಳನ್ನು ಹರಡಿ ಅಲಂಕರಿಸುತ್ತದೆ. ಮತ್ತು ವಿಹಾರದ ಸುತ್ತಲೂ ಬಿದಿರು ಎಲೆ, ಮತ್ತು ಜೊಂಡುಗಳನ್ನು ಜೋತುಬಿಟ್ಟು ಏಕಾಂತವೇರ್ಪಡಿಸಿ, ಒಳಗಡೆ ವಿವಿಧ ವರ್ಣದ ತೊಗಟೆ ಮತ್ತು ಕಾಯಿಗಳನ್ನು ಹರಡಿ ಅಲಂಕರಿಸುತ್ತದೆ. ಗಂಡು ಪರ್ವಕಾಲವಿಡೀ ಇದನ್ನು ಅಲಂಕರಿಸುತ್ತಾ ಹಾಡುತ್ತಾ ಹೆಣ್ಣನ್ನು ಆಕರ್ಷಿಸುತ್ತದೆ.

ಆಸ್ಟ್ರೇಲಿಯಾದ ಸ್ವರ್ಣ ಕುಂಜ ಪಕ್ಷಿ ಮೂರನೆಯ ಪಂಗಡಕ್ಕೆ ಸೇರಿದ್ದು, ಕೇವಲ ೯ ಅಂಗುಲ ಗಾತ್ರದ ಸಣ್ಣ ಪಕ್ಷಿಯಾದರೂ, ಅತಿ ದೊಡ್ಡ ವಿಹಾರ ರಚಿಸುತ್ತದೆ. ಕೆಲವು ಸಮಯ ಡೇರೆಯಂತಹ ವಿಹಾರ ಮಧ್ಯ ಭಾಗ ೯ ಅಡಿ ಎತ್ತರವಿರಬಲ್ಲದು! ನ್ಯೂಗಿನಿ ಯಲ್ಲಿ ಇತರ ೪ ಪ್ರಭೇದಗಳಿವೆ. ಇವು ನರ್ತನವಾಡುವೆಡೆ ಮೃದುವಾಗಿರಲು ಹಾಪಸೆ ಗಳನ್ನು ತಂದು ನೆಡುತ್ತವೆ. ಇವು ಅತ್ಯಂತ ವಿರಳ ಪಕ್ಷಿಗಳು. ಅವು ಮರದಡಿಯ ಸುತ್ತಲೂ ಕಡ್ಡಿ ಕೊಂಬೆಗಳನ್ನು ಶೇಖರಿಸಿ ೪ – ೬ ಅಡಿ ಎತ್ತರ ಜೋಡಿಸುತ್ತವೆ. ಅಲ್ಲಿಯ ಪಕ್ಕದ ಮರಬುಡದಲ್ಲೂ ಹೀಗೆಯೇ ಇನ್ನೊಂದು ಜೋಡಣೆ ಏರ್ಪಡಿಸಿ ಇವೆರ ಡಕ್ಕೂ ಹೊಂದಿದಂತೆ ಮಾಡು ಹೊದಿಸುತ್ತವೆ. ಇವುಗಳನ್ನು ವರ್ಷಂಪ್ರತಿ ದುರಸ್ತು ಮಾಡಿ ಉಪಯೋಗಿಸುತ್ತಿರುತ್ತವೆ. ಈ ಮಾಡು ಮಧ್ಯ ಭಾಗವನ್ನು ಹಾವಸೆ, ಆರ್‌ಕಿಡ್ ಇತರ ಹೂವು ಮತ್ತು ಜರೀಗಿಡದ ಎಲೆಗಳಿಂದ ಅಲಂಕರಿಸುತ್ತವೆ. ಹೂವು ಬಾಡಿದಲ್ಲಿ ಬಿಸಾಡಿ ಹೊಸ ಹೂವನ್ನು ತಂದಿರಿಸುತ್ತಿರುತ್ತವೆ.

ಇವುಗಳಲ್ಲಿ ನಾಲ್ಕನೆಯ ಪಂಗಡವೇ ಅತ್ಯಂತ ಬುದ್ಧಿವಂತಿಕೆಯ ಮುಂದುವರಿದ ಪಕ್ಷಿ ಪ್ರಭೇದಗಳು. ಮೂರನೆಯ ಪಂಗಡದವಂತೆ ಅತ್ಯಂತ ದೊಡ್ಡದಾಗಿರದಿದ್ದರೂ ರಚನಾತ್ಮಕ ಕೌಶಲ್ಯ ಹೊಂದಿದವು. ೨ ಪ್ರಭೇದಗಳು ಬಣ್ಣ ಹಚ್ಚಲು ಉಪಕರಣಗಳನ್ನೂ ಬಳಸುವುದುಂಟು. ೪ – ೫ ಅಡಿ ಅಗಲ ತೆರವು ಪ್ರದೇಶವನ್ನು ಚೊಕ್ಕಟಮಾಡಿ ಹಲವು ಅಂಗುಲ ದಪ್ಪವಾಗಿ ಕಡ್ಡಿ ಕೊಂಬೆಗಳನ್ನು ಹರಡಿ ತುಳಿದು ಸಮ ಮಾಡುತ್ತವೆ. ಇವುಗಳ ಮಧ್ಯೆ ಕಡ್ಡಿಗಳನ್ನು ನೆಟ್ಟು ಹೆಣೆದು ಎರಡು ಗೋಡೆಗಳನ್ನು ರಚಿಸಿ ಅವುಗಳಿಗೆ ಕಮಾನು ಕಟ್ಟುತ್ತವೆ. ೬ – ೮ ಅಂಗುಲ ದಪ್ಪದ ನೆಲದಮೇಲೆ ೨ – ೩ ಅಡಿ ಉದ್ದದ ೧ ೧/೨ ಅಡಿ ಎತ್ತರ ಗೋಡೆ ರಚಿಸಬಲ್ಲವು! ಗೋಡೆಗಳ ಮಧ್ಯೆ ತಾನು ಸುಲಭವಾಗಿ

ಹಾದುಹೋಗುವಷ್ಟು ಅಂತರವಿಟ್ಟು ಬಿಳಿಯ ಮೂಳೆ, ಎಲೆ, ಚಿಪ್ಪು, ಹೂವು ಮತ್ತು ಹರಳುಗಳನ್ನು ತಂದು ಹರಡಿ ಅಲಂಕರಿಸುತ್ತವೆ. ಎರಡು ಪ್ರಭೇದಗಳು ಇದ್ದಿಲು ಮತ್ತಿತರ ವರ್ಣವನ್ನು ಅಗೆದು ಜೊಲ್ಲಿನೊಡನೆ ಸೇರಿಸಿ ವಿವಿಧ ಬಣ್ಣ ಸೃಜಿಸಿ ಗೋಡೆಯ ಒಳಭಾಗಕ್ಕೆ ಬಳಿಯುತ್ತವೆ. ಬಣ್ಣ ಬಳಿಯಲು ಎಲೆ ಕುಚ್ಚು ಅಥವಾ ಮರದ ತೊಗಟೆ ಉಪಯೋಗಿಸುತ್ತವೆ.

ಅವುಗಳಲ್ಲೆಲ್ಲಾ ಗಂಡು ಹೆಚ್ಚು ವರ್ಣರಂಜಿತವಾಗಿದ್ದು, ಹೆಣ್ಣು ಸಾಮಾನ್ಯ ಹಗುರ ಬಣ್ಣ ಹೊಂದಿರುತ್ತದೆ. ಅವುಗಳಲ್ಲಿ ದಪ್ಪ ಗಾತ್ರದವು. ೧ ೧/೪ ಅಡಿಯ ೪ನೆಯ ಪಂಗಡಕ್ಕೆ ಸೇರಿದ ಆಸ್ಟ್ರೇಲಿಯಾ ವಾಸಿ ಬೂದು ಕುಂಜ ಪಕ್ಷಿ. ಮೊದಲ ಮೂರೂ ಒಂಟಿ ಜೀವಿಗಳು. ನಾಲ್ಕನೆಯದು ೪ – ೬ ಪಕ್ಷಿಗಳ ಗುಂಪಾಗಿ ಸಂಚರಿಸಬಹುದು. ಮುಖ್ಯವಾಗಿ ಕೀಟಾಹಾರಿಗಳಾದರೂ ಹಣ್ಣು ಕಾಯಿಗಳನ್ನು ಹೆಚ್ಚಾಗಿ ತಿಂದು ಫಸಲಿಗೂ ನಷ್ಟ ಮಾಡುತ್ತವೆ.

ಸಂಭೋಗಾನಂತರ ಇವುಗಳಲ್ಲಿ ಹೆಣ್ಣು ಬೇರೆಡೆ ಹೋಗಿ, ತೆರೆದ ಬಟ್ಟಲಿನಾಕಾರದ ಸಣ್ಣ ಗೂಡನ್ನು ಕಡ್ಡಿ ಎಲೆಗಳಿಂದ ರಚಿಸಿ, ೨ ಮೊಟ್ಟೆಯಿಟ್ಟು ತಾನೇ ಪೂರ್ಣ ಕಾವು ಕೊತು ಮರಿ ಮಾಡುತ್ತದೆ.

ಕುಟುಂಬ ೨೭ : ಪ್ಯಾರಡೈಸಿಡೀ (Paradisaeidae)
(ದಿವ್ಯ ಪಕ್ಷಿಗಳು)

ಪ್ರಪಂಚದ ಅತಿ ಸುಂದರ, ಮೋಹಕ ಪಕ್ಷಿಗಳು. ಹೆಣ್ಣನ್ನಾಕರ್ಷಿಸಲು ವಿವಿಧ ವರ್ಣದ, ವಿವಿಧ ಮಾದರಿಯ ಗರಿ ರಚನೆ ಈ ಕುಟುಂಬದಲ್ಲೇ ಅತ್ಯಂತ ಉನ್ನತ ಮಟ್ಟವನ್ನು ಮುಟ್ಟಿದೆ. ಒಟ್ಟು ೪೩ ಪ್ರಭೇದಗಳಿವೆ. ಕುಂಜ ಪಕ್ಷಿಗಳೇ ಹತ್ತಿರದ ನೆಂಟರು. ಇವೆಲ್ಲವೂ ನ್ಯೂಗಿನಿಯ ಮತ್ತು ಪಕ್ಕದ ದ್ವೀಪವಾಸಿಗಳು. ೪ ಪ್ರಭೇದ ಆಸ್ಟ್ರೇಲಿಯಾದವು. ಪ್ರಪಂಚದ ಇನ್ನಾವೆಡೆಯೂ ಅವು ಕಂಡುಬರುವುದಿಲ್ಲ. ಅನೇಕ ಪ್ರಭೇದಗಳು ಇತ್ತೀಚೆಗೆ ಕಂಡುಹಿಡಿದವು. ಅವುಗಳೆಲ್ಲದರ ಜೀವನ ಚರಿತ್ರೆ ಇನ್ನೂ ಪರಿಪೂರ್ಣವಾಗಿ ತಿಳಿದುಬಂದಿಲ್ಲ.

ನ್ಯೂಗಿನಿಯ ಮೂಲನಿವಾಸಿಗಳು ಅತಿ ಪುರಾತನ ಕಾಲದಿಂದಲೂ ಅವುಗಳ ವಿವಿಧ ವರ್ಣದ ಗರಿಗಳನ್ನು ಅಲಂಕಾರಕ್ಕಾಗಿ ಉಪಯೋಗಿಸುತ್ತಿದ್ದರು. ಅವುಗಳ ಉಪಯೋಗ ಸುಮಾರು ೪೦೦ – ೫೦೦ ವರ್ಷಗಳಿಂದಲೂ ಜನತೆಗೆ ತಿಳಿದುಬಂದಿತ್ತು. ೧೫೨೨ರಲ್ಲಿ ಸುಂದರ ಪಕ್ಷಿಗಳ ಚರ್ಮವನ್ನು ಪೋರ್ಚುಗೀಸರು ತಂದು ಅವುಗಳು ಸ್ವರ್ಗ ಪಕ್ಷಿಗಳೆಂದು ಭಾವಿಸಿದ್ದರು. ಆದ್ದರಿಂದಲೇ ಅವುಗಳಿಗೆ 'ಸ್ವರ್ಗ' ಅಥವಾ 'ದಿವ್ಯ ಪಕ್ಷಿ'ಗಳೆಂದು ಹೆಸರಿಡಲಾಯಿತು. ೧೮೨೪ರಲ್ಲಿ ಫ್ರೆಂಚ್ ಪ್ರಯಾಣಿಕನೊಬ್ಬ ಈ ಪಕ್ಷಿಗಳ ಎರಡು ಪ್ರಭೇದಗಳನ್ನು ಹಿಡಿದು ತಂದಾಗಲೇ ಅವುಗಳ ನೆಲೆ ಮತ್ತು ವಿವರಣೆ ಪೂರ್ಣವಾಗಿ ತಿಳಿದದ್ದು. ೧೮೬೮ರಲ್ಲಿ ಖ್ಯಾತ ವಿಜ್ಞಾನಿ ವ್ಯಾಲೇಸ್ ಎರಡು ಪ್ರಭೇದ

ಗಳ ಪಕ್ಷಿಗಳನ್ನು ಹಿಡಿದು ಅವನ್ನು ಸರಿಯಾಗಿ ವಿವರಿಸಿ ಯುರೋಪಿಗೆ ಜೀವಂತವಾಗಿ ಹಿಡಿದು ತಂದ. ಆಗ ಹೆಂಗಸರ ಉಡುಪಿನ ಅಲಂಕಾರಕ್ಕಾಗಿ ಅದಕ್ಕೆ ಹೆಚ್ಚಿನ ಬೇಡಿಕೆ ಯಿತ್ತು. ೧೮೮೦ರಿಂದ ೧೯೧೦ರ ವೇಳೆಗೆ ಸುಮಾರು ೫೦,೦೦೦ ಪಕ್ಷಿ ಚರ್ಮಗಳನ್ನು ಯುರೋಪಿಗೆ ಆಮದುಮಾಡಲಾಯಿತು. ಆದರೆ ೧೯೨೦ರ ವೇಳೆಗೆ ಈ ಪಕ್ಷಿಗಳ ಸಂಖ್ಯೆ ಬಹಳ ಕಡಮೆಯಾಗುತ್ತಿದ್ದುದು ತಿಳಿದುಬಂದು ಅವುಗಳಿಗೆ ರಕ್ಷಣೆ ನೀಡಲಾಯಿತು.

ಸಣ್ಣ ದೇಹದ ೬ ಪ್ರಭೇದ ಒಂದೇ ಜಾತಿಗೆ ಸೇರಿದ್ದು ಸಾಮಾನ್ಯವಾಗಿ ಕಂಡು ಬರುತ್ತವೆ. ಬಾಲದ ಕೊನೆಯ ಗರಿಗಳು ನೀಳವಾಗಿ ಬೆಳೆದು ವಿವಿಧ ಆಕಾರ ಮತ್ತು ಬಣ್ಣ ಹೊಂದುತ್ತವೆ. ದೇಹ ವರ್ಣವೂ ವಿವಿಧವಾಗಿದ್ದು ಅತ್ಯಂತ ಆಕರ್ಷಕವಾಗಿರು ತ್ತದೆ. ಕೊಂಬೆಯಮೇಲೆ ಅಡಗಿ ಕುಳಿತು, ಬಾಲ ಪುಕ್ಕಗಳನ್ನು ಅಗಲಿಸಿ ಎತ್ತಿ ಅಲುಗಾಡಿಸಿ ತೋರ್ಪಿಗೆ ಏರ್ಪಡಿಸುತ್ತವೆ. ಒಂದು ಪ್ರಭೇದ ಅಲುಗಾಡಿಸುತ್ತಾ ಕೊಂಬೆಯಲ್ಲಿ ಪುಕ್ಕವನ್ನು ಮೇಲೆಮಾಡಿ ತಲೆಕೆಳಕಾಗಿ ಜೋತುಬೀಳುತ್ತದೆ. ನ್ಯೂಗಿನಿಯಲ್ಲಿನ ಒಂದು ಕಾಡು ಪ್ರಭೇದದ ಬಾಲಗರಿ ನೀಳವಾದ ಹುರಿಯಂತೆ ಮುಂದೆ ಚಾಚಿ ಬೆಳೆದಿರುತ್ತದೆ. ಅವುಗಳಲ್ಲಿ ಕೇವಲ ೬ ಅಂಗುಲದ ಸಣ್ಣ ಪಕ್ಷಿಗೆ ಅಚ್ಚ ಕೆಂಪು ಬೆನ್ನು, ಮತ್ತು ಬಿಳುಪು ಎದೆ ಭಾಗವಿದ್ದು ಅದರ ಎರಡು ಬಾಲಗರಿಗಳು ನೀಳವಾಗಿ ಬೆಳೆದು ಹಸಿರು ಹೊಳಪು ವರ್ಣ ಹೊಂದಿ ಒಳಬಾಗಿದಂತೆ ಸುತ್ತಿರುತ್ತವೆ. ಈ ಪ್ರಭೇದ ಒಂದು ಮಾತ್ರ ಮರ ಪೊಟರೆಗಳಲ್ಲಿ ಗೂಡು ರಚಿಸುವುದು.

'ವಿಲ್ಸನ್' ಮತ್ತು 'ಮನೋಹರ' ಜಾತಿಗಳೆರಡೂ ೧೫ ಅಡಿ ಅಗಲದ ಕುಂಜ ವಿಹಾರ ಸ್ಥಳಗಳನ್ನು ಏರ್ಪಡಿಸುತ್ತವೆ. ಮತ್ತು ಪಕ್ಕದ ಸಣ್ಣ ಗಿಡಗಳ ಕೊಂಬೆಗಳಲ್ಲಿ ಕುಳಿತು ಹಾರಾಡುತ್ತಾ ಗರಿಗಳನ್ನಗಲಿಸಿ ನರ್ತನ ಮಾಡುತ್ತವೆ. ಅನೇಕ ಪಕ್ಷಿಪ್ರಭೇದ ಗಳಿಗೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯ ರಾಜ ರಾಣಿಯರ ಹೆಸರಿಡಲಾಗಿದೆ. **ರಾಜಕುಮಾರಿ ಸ್ಟೀವನೀ** ಪ್ರಭೇದಕ್ಕೆ ಹೊಳಪು ಕಪ್ಪು ಮೈ ಬಣ್ಣವಿದ್ದು, ನೀಳ ವರ್ಣ ರಜಿಂತ ಬಾಲ, ಹಾಗೂ ಕತ್ತಿನ ಬಳಿ ಅಗಲವಾಗಬಲ್ಲ ಗರಿಗಂಚ್ಚವಿದೆ. **ರಿಬ್ಬನ್ ಬಾಲದ** ಪ್ರಭೇದಕ್ಕೆ ಬಾಲಗರಿಗಳೆರಡು ೩ ಅಡಿ ಉದ್ದವಿರುತ್ತವೆ. **ಕುಡುಲು ಕೊಕ್ಕಿನ** ಪ್ರಭೇದ ಕಾಗೆ ಗಾತ್ರವಿರುತ್ತವೆ. ಅದರ ಕತ್ತಿನ ಬಳಿ ನೀಳ ಹೊಳಪು ಗರಿ ಗಳನ್ನು ಪಂಕದಂತೆ ತಲೆಯಮೇಲೆ ಎತ್ತಿ ಹಿಡಿದು ಬಾಲವಗಲಿಸಿ ಎತ್ತಿ ನರ್ತಿಸುತ್ತವೆ. **ಆರುಗರಿಯ** ಪಕ್ಷಿಗೆ ತಲೆಯ ಇಕ್ಕೆಡೆಯಲ್ಲೂ ತಂತಿಯಂತಹ ಸುತ್ತಿರುವ ಗರಿ ಬೆಳೆದು, ಪ್ರತಿಯೊಂದರ ತುದಿಯಲ್ಲೂ ಅಗಲವಾದ ತಟ್ಟೆಗಳಂತಿರುತ್ತವೆ. **ಸಾಕ್ಸನಿ ರಾಜ** ಪಕ್ಷಿಯ ತಲೆಯ ಬಳಿ ಎರಡು ನೀಳ ಪಟ್ಟಿ ಪಟ್ಟಿಯ ಗರಿ ಸಿಕ್ಕಿಸಿದಂತೆ ಬೆಳೆದು ಹಿಂದೆ ತೇಲುತ್ತದೆ. ಈ ವರ್ಣ ಮತ್ತು ಬೆಳವಣಿಗೆಯೆಲ್ಲಾ ಗಂಡುಗಳಿಗೆ ಮೀಸಲು. ಹೆಣ್ಣು ಗಳಿಗೆ ಬಣ್ಣ ಕಡಮೆ ಇರುತ್ತದೆ. ಈ ವಿವಿಧ ಬೆಳವಣಿಗೆಗಳೂ ಇರುವುದಿಲ್ಲ.

ಗಂಡು ಬಹುಪತ್ನೀಕ. ಆದ್ದರಿಂದ ಗೂಡಿನ ರಚನೆ, ಮರಿ ಮಾಡುವುದು ಎಲ್ಲಾ ಹೆಣ್ಣಿನ ಕಾರ್ಯ. **ರೈಫಲ್ ಹಕ್ಕಿಗಳು** ನ್ಯೂಗಿನಿ ಮತ್ತು ಆಸ್ಟ್ರೇಲಿಯಾವಾಸಿ

ಗುಂಡು ಚಲಿಸುವಂತಹ ಶಬ್ದಮಾಡುತ್ತದೆ. ಈ ವಿಚಿತ್ರ ಬೆಳವಣಿಗೆಗಳು ಬಹುಶಃ ಪ್ರಭೇದಗಳ ಮಿಲನವಾಗಿ ಕುಟುಂಬ ವೃದ್ಧಿಯಾಗದೆ ನಪುಂಸಕತ್ವ ಬಾರದಂತೆ ವ್ಯತ್ಯಾಸ ಎತ್ತಿ ತೋರ್ಪಡಿಸಲು ಸಹಕಾರಿಯೆಂದು ನಂಬಲಾಗಿದೆ.

[library stamp]

ಕುಟುಂಬ ೨೮ : ಪಾರಿಡೀ (Paridae)
(ಟಿಟ್‌ಮೈಸ್‌ಗಳು)

ಹೊಳಪು ಕಣ್ಣಿನ, ವಿವಿಧ ವರ್ಣದ ಸಣ್ಣ ಪಕ್ಷಿಗಳ ೬೫ ಪ್ರಭೇದಗಳಿವು. ಮರ ಕೊಂಬೆಗಳಲ್ಲಿನ ಸಣ್ಣ ಕೀಟಗಳನ್ನು ಹುಡುಕುತ್ತಾ ಚಟುವಟಿಕೆಯಿಂದ ತಿರುಗಾಡುತ್ತಿರುತ್ತವೆ. ಅತಿ ಸುಲಭವಾಗಿ ಪಳಗಿಸಬಹುದು. ಉತ್ತರವಲಯದಲ್ಲಿ ಅವುಗಳು ಹೆಚ್ಚಾಗಿದ್ದು ಆಫ್ರಿಕಾದಿಂದ ಎಲ್ಲೆಡೆ ಹರಡಿವೆ. ಆಸ್ಟ್ರೇಲಿಯಾ ಮತ್ತು ಸುತ್ತಲಿನ ದ್ವೀಪಗಳಲ್ಲಿ ಮಾತ್ರ ಹೆಚ್ಚಾಗಿರುವುದಿಲ್ಲ.

೩ರಿಂದ ೬ ಅಂಗುಲ ಉದ್ದವಿರುತ್ತವೆ. ಹೆಣ್ಣು ಗಂಡುಗಳಿಗೆ ಹೆಚ್ಚಿನ ವ್ಯತ್ಯಾಸವಿಲ್ಲ. ಕಪ್ಪು, ಕಂದು, ಹಳದಿ ನೀಲಿ ಹಗುರ ವರ್ಣಗಳೇ ಹೆಚ್ಚು. ಗಿಡ್ಡ ದಟ್ಟನೆಯ ಕೊಕ್ಕು ಹೊಂದಿರುತ್ತವೆ. ಶಾಸ್ತ್ರ ಹೇಳಲು ಕಲಿಸುವ ಪಕ್ಷಿಪ್ರಭೇದವಿದೇ. ಜಪಾನಿನಲ್ಲಿ ಅವುಗಳ ಬಳಕೆ ಹೆಚ್ಚು. ಗಿರಾಕಿಯು ಕೈಯಿಂದ ಹಣ ತೆಗೆದು ಗಲ್ಲಾ ಪೆಟ್ಟಿಗೆಯೊಳಕ್ಕಿಟ್ಟು, ಮೇಲಿನ ಪೆಟ್ಟಿಗೆಯೊಳಗಿನಿಂದ ಭವಿಷ್ಯ ಬರೆದ ಪತ್ರ ಒಂದನ್ನು ಹೊರ ತೆಗೆದು, ಅದರ ಮೇಲಣ ಹೊಚ್ಚಡ ಕಾಗದ ಹರಿದು ಓದಲು ಕೊಡುತ್ತವೆ.

ಕೀಟಾಹಾರಿಗಳು. ಆದರೆ ಸಣ್ಣ ಹಣ್ಣು, ಕಾಯಿ, ಬೀಜಗಳನ್ನೂ ತಿನ್ನುತ್ತವೆ. ಪರ್ವಕಾಲ ಬಿಟ್ಟು, ಉಳಿದ ಸಮಯದಲ್ಲೆಲ್ಲಾ ಗುಂಪಾಗಿ ಅಲೆದಾಡುತ್ತಿರುತ್ತವೆ. ಹಲವು ಜಾತಿಗಳಿಗೆ ತಲೆಯಮೇಲೆ ಗರಿ ಶಿಖೆಯಿರುತ್ತದೆ. ಕಪ್ಪುತಲೆಯ, ನೀಳ ಬಾಲದ, ಸುಲ್ತಾನ್ ಜಾತಿ ಪ್ರಭೇದಗಳು ಯೂರೋಪ್ ಏಷ್ಯಾಖಂಡಗಳಲ್ಲೆಲ್ಲಾ ಕಂಡುಬರುತ್ತವೆ. ಗೂಡಿನಲ್ಲೇ ಹೆಣ್ಣು ಗಂಡುಗಳು ವಿಶ್ರಮಿಸುವುದು ಸಾಮಾನ್ಯ.

ಬಹು ಪ್ರಭೇದಗಳು ಪೊಟರೆ ಗೂಡಿನವು. ತಾವೇ ತೂತು ಕೊರೆದು ಅಥವಾ ಇತರ ಪಕ್ಷಿಗಳು ಮಾಡಿರುವ ಗೂಡಿನಲ್ಲಿ ಮರಿಮಾಡುತ್ತವೆ. ಹೆಣ್ಣೇ ಗೂಡು ರಚಿಸುವುದು. ಗಂಡು ಸಹಾಯಕ ಪಕ್ಷಿ. ಒಂದೆರಡು ಪ್ರಭೇದಗಳಲ್ಲಿ ಹೆಣ್ಣು – ಗಂಡುಗಳೆರಡೂ ಸೇರಿ ರಚಿಸುತ್ತವೆ. ಹೆಣ್ಣು ಮಾತ್ರ ಕಾವು ಕೊಡುವುದು. ಗಂಡು ಆಹಾರ ಒದಗಿಸುತ್ತವೆ. ವರ್ಷಕ್ಕೆ ಒಂದೇಸಲ ಮರಿಮಾಡುವುದು. ಪೂರ್ಣ ಬಿಳುಪಾದ ೫ – ೧೫ ಮೊಟ್ಟೆಯಿಡುತ್ತದೆ. ಮರಿಗಳು ಸಾಯುವುದು ಹೆಚ್ಚು, ಆದ್ದರಿಂದ ೪ ವರ್ಷ ಸಾಮಾನ್ಯವಾಗಿ ಶೇಕಡ ೧ – ೨ ಭಾಗ ಮಾತ್ರ ಜೀವಿಸುತ್ತವೆ. ೮ ವರ್ಷಕ್ಕೆ ಮೇಲ್ಪಟ್ಟು ಜೀವಿಸಿರುವ ದಾಖಲೆಯಿಲ್ಲ.

ಇನ್ನೊಂದು ಪಂಗಡಕ್ಕೆ ನೀಳ ಬಾಲದ ೧೨ ಪ್ರಭೇದಗಳು ಸೇರುತ್ತವೆ. ೩ ಅಂಗುಲದಿಂದ ೬ ೧/೨ ಅಂಗುಲದವರೆಗಿನ ಪ್ರಭೇದಗಳಿವು. ಇವುಗಳೆಲ್ಲಾ ಹಗುರ

ವರ್ಣದವು. ಕಂದು ಬಣ್ಣವೇ ಜಾಸ್ತಿ. ಚೀಲದಂತಹ ಸುಂದರ ಗೂಡು ರಚಿಸಿ ಪಕ್ಕದಲ್ಲಿ ಒಳಹೋಗಲು ರಂಧ್ರವಿಡುತ್ತವೆ. ಹುಲ್ಲು, ಮೃದುಗರಿ, ಜೇಡರಬಲೆ ಮತ್ತು ಕಲ್ಲು ಹೂವು ಹಾವಸೆ ಮುಂತಾದುವುಗಳಿಂದ ಒಳಭಾಗದಲ್ಲಿ ಮೆತ್ತೆ ರಚಿಸಿ ೭–೧೨ ಮೊಟ್ಟೆಯಿಡುತ್ತವೆ. ಹೆಣ್ಣೇ ಕಾವು ಕೂರುವುದು. ಗಂಡು ಆಗ ಆಹಾರ ಒದಗಿಸುತ್ತದೆ.

ಮೂರನೆಯ ಪಂಗಡಕ್ಕೆ ೮ ಪ್ರಭೇದ ಸೇರುತ್ತವೆ. ಅವೆಲ್ಲವೂ ನೀಳ ಜೋತಾಡುವ ಗೂಡು ರಚಿಸುವುವು. ಅವುಗಳ ಹೊರ ರಂಧ್ರದಿಂದ ಒಳಕ್ಕೆ ಹೋಗಲು ಸುರಂಗವೇರ್ಪಟ್ಟಿರುತ್ತದೆ. ಆದರೆ ಉ. ಅಮೇರಿಕಾದ ಏಕೈಕ ಪ್ರಭೇದ ಮುಳ್ಳು ಕಡ್ಡಿಗಳ ಗೋಳಾಕಾರದ ಗೂಡು ರಚಿಸುತ್ತವೆ. ಇವು ೪–೫ ಮೊಟ್ಟೆ ಮಾತ್ರ ಇಡುತ್ತವೆ. ಆದರೆ ವರ್ಷಕ್ಕೆ ಎರಡಾವರ್ತಿ ಮರಿ ಮಾಡಬಲ್ಲವು. ಇವುಗಳಲ್ಲಿ ಗಂಡು ಹಲವು ಗೂಡುಗಳನ್ನು ರಚಿಸುತ್ತದೆ. ಅದರಲ್ಲಿ ಹೆಣ್ಣು ತನಗಿಷ್ಟವಾದ ಗೂಡನ್ನು ಮಾತ್ರ ಚುನಾಯಿಸುತ್ತದೆ.

ಕುಟುಂಬ ೨೯ : ಸರ್‌ತಿಯಿಡಿ (Certhiidae)
(ತೆವಳುವ ಪಕ್ಷಿಗಳು)

ಬಹು ಸಣ್ಣ ಗಾತ್ರದ ಕಂದು ಬಣ್ಣದ ಪಕ್ಷಿಗಳು ಮರದ ಮೇಲೆಲ್ಲಾ ತೆವಳುವಂತೆ ಹರಿದಾಡುತ್ತಿರುತ್ತವೆ. ಮೇಲ್ಭಾಗದಲ್ಲಿ ಚುಕ್ಕೆ ಪಟ್ಟೆಗಳಿದ್ದು ತಳಭಾಗ ಬಿಳುಪು, ನೀಳ ತೆಳು, ಕೆಳಬಾಗಿದ ಕೊಕ್ಕು, ತೊಗಟೆ ಮಧ್ಯೆ ಹುಳುಗಳನ್ನು ಅರಸಿ ತಿನ್ನಲು ಅನುಕೂಲ. ಬಾಲಗರಿ ನೀಳವಾಗಿ, ಮೊನಚಾದ ದೃಢ ತುದಿ ಹೊಂದಿದ್ದು, ಪಕ್ಷಿಯನ್ನು ಆಸರೆಕೊಟ್ಟು ಎತ್ತಿಹಿಡಿಯಲು ಸಹಾಯಕವಾಗಿದೆ. ಉತ್ತರ ಸಮಶೀತೋಷ್ಣ ವಲಯ ವಾಸಿಗಳಾದ ೫ ಪ್ರಭೇದ ಇದಕ್ಕೆ ಸೇರಿವೆ.

ಸಾಮಾನ್ಯವಾಗಿ ಒಂಟಿ ಜೀವಿಗಳು. ತೊಗಟೆಯಲ್ಲಿನ ಮೊಟ್ಟೆ, ಮರಿ, ಹುಳುಗಳೇ ಆಹಾರ. ಕೊಂಬೆಯಡಿಯಲ್ಲೂ ನೊಣ ಅಂಟಿದಂತೆ ಅಂಟಿ ಚಲಿಸಬಲ್ಲವು. ಆದರೆ ತಲೆಕೆಳಕಾಗಿ ಚಲಿಸುವುದಿಲ್ಲ. ಮರದ ಬುಡಕ್ಕೆ ಹಾರಿ ಕುಳಿತು, ನಿಧಾನವಾಗಿ ಆಹಾರ ಹುಡುಕುತ್ತಾ ಮೇಲೇರುತ್ತವೆ. ಪುನಃ ಇನ್ನೊಂದು ಮರದ ಬುಡಕ್ಕೆ ಹಾರಿ ಕುಳಿತು ಹಾಗೆಯೇ ಮಾಡುತ್ತವೆ. ಕೆಲಸಮಯ ಹಿಮ್ಮೊಗನಾಗಿ ಹಲವಡಿ ಬಿದ್ದಂತೆ ರೆಕ್ಕೆ ಬಡಿಯುತ್ತಾ ಇಳಿದು ಕುಳಿತು ಮೇಲೇರುತ್ತವೆ.

ಮಂಚದಾಕಾರದ ಗೂಡು ರಚಿಸುತ್ತವೆ. ಸತ್ತ ಮರಗಳ ಸಡಿಲ ತೊಗಟೆಗಳಡಿಯೇ ಗೂಡು ರಚಿಸುವುದು ಸಾಮಾನ್ಯ. ಹುಲ್ಲು, ತೊಗಟೆ ಮತ್ತು ಹಾವಸೆಗಳಿಂದ ಗೂಡನ್ನು ಹೆಣೆದು, ಒಳಗೆ ಮೃದು ತೊಗಟೆ, ಜೇಡರಬಲೆ ಮುಂತಾದವುಗಳಿಂದ ಮೆತ್ತನೆಯ ಹಾಸು ರಚಿಸಿ ೬–೯ ಮೊಟ್ಟೆಯಿಟ್ಟು, ಹೆಣ್ಣು ಗಂಡುಗಳೆರಡೂ ಕಲೆತು ಕಾವಿತ್ತು ಮರಿ ಪೋಷಿಸುತ್ತವೆ. ಕಾವಿನವಧಿ ೧೫ ದಿನಗಳು.

ಕುಟುಂಬ ೩೦ : ಸಿಟ್ಟಿಡೀ (Sittidae)

(ನಟ್ ಹಾಚಸ್ ಪಕ್ಷಿಗಳು)

ಮರದಮೇಲೆ ತಲೆ ಕೆಳಗಾಗಿ ಚಲಿಸುವ ದೊಂಬರ ಪಕ್ಷಿಗಳಿವು. ತೊಗಟೆ ಸಂದಿಗಳಲ್ಲಿ ಕಂಡುಬರುವ ಸಣ್ಣ ಕೀಟಗಳೇ ಆಹಾರ. ಕೆಲವು ಕಾಯಿಗಳನ್ನು ತೊಗಟೆ ಬಿರುಕಿನಲ್ಲಿ ಸಿಕ್ಕಿಸಿ, ಕೊಕ್ಕಿನಿಂದ ಕುಕ್ಕಿ ಒಡೆದು ತಿರುಳನ್ನು ತಿನ್ನುತ್ತವೆ. ಉತ್ತರ ವಲಯದ ದಟ್ಟ ಅಡವಿಗಳಲ್ಲಿ ವಾಸಿಸುವ ೧೫ ಪ್ರಭೇದಗಳಿವು. ಮೇಲ್ಭಾಗ ಕಂದು ಅಥವಾ ಮಾಸಲು ನೀಲಿಯಾಗಿದ್ದು, ಹೊಟ್ಟೆ ಭಾಗ ಬಿಳುಪು. ಕೊಕ್ಕು ತೆಳು ಮತ್ತು ನೀಳವಾಗಿ ಮೊನಚಾಗಿರುತ್ತದೆ. ಮರ ಹತ್ತಲು ಗಿಡ್ಡ ಕಾಲುಗಳೇ ಮುಖ್ಯ ಆಧಾರ. ಬಾಲ ಸಹಾಯಕವಲ್ಲ.

೧೧ ಪ್ರಭೇದಗಳು ಪೂರ್ವಾರ್ಧಗೋಳದಲ್ಲೂ ನಾಲ್ಕು ಪಶ್ಚಿಮಾರ್ಧಗೋಳದಲ್ಲೂ ಕಂಡುಬರುತ್ತವೆ. ನೀಲಿ ಬೆನ್ನಿನ, ನೇರಳೆ ವರ್ಣದ ಹೊಟ್ಟೆಯ ಪ್ರಭೇದ ಭಾರತದಿಂದ ಫಿಲಿಪೈನ್ಸ್‌ವರೆಗಿನ ಕಾಡುಗಳಲ್ಲಿ ವಾಸಿಸುತ್ತವೆ. ಹಿಮಾಲಯಾ ಮತ್ತು ಆಗ್ನೇಯ ಯುರೋಪಿನಲ್ಲಿನ ಎರಡು ಪ್ರಭೇದಗಳು ಪೂರ್ಣ ಕಲ್ಲು ಪ್ರಪಾತ ವಾಸಿಗಳು.

ಒಂಟಿ ಅಥವಾ ಜೊತೆಯಾಗಿದ್ದು ಯಾವಾಗಲೂ ಆಹಾರ ಹುಡುಕುತ್ತಿರುವ ಅತಿ ಚಟುವಟಿಕೆಯ ಸಾಧು ಪಕ್ಷಿಗಳು. ಎಲ್ಲವೂ ಸ್ಥಳವಾಸಿಗಳು. ಕೂಗುಧ್ವನಿ ಘಂಟಾನಾದದಂತಿರುತ್ತದೆ. ಎಲ್ಲವೂ ಪೊಟರೆಗಳಲ್ಲಿ ಗೂಡು ರಚಿಸುವವು. ಹೆಣ್ಣು–ಗಂಡುಗಳೆರಡೂ ಸೇರಿ ಪೊಟರೆಯಲ್ಲಿ ಹುಲ್ಲು, ಹಾವಸೆ ಮುಂತಾದವುಗಳಿಂದ ಮೆತ್ತೆ ರಚಿಸುತ್ತವೆ. ಮುಂದೆ ಗೂಡಿನ ದ್ವಾರವನ್ನು ಮಣ್ಣು ಮೆತ್ತಿ ಕಿರಿದಾಗಿಸುತ್ತದೆ. ೪ ರಿಂದ ೧೦ ಬಿಳುಪು ವರ್ಣದ ಮೈಮೇಲೆ ಕಂದು ಕೆಂಪು ಚುಕ್ಕೆಗಳುಳ್ಳ ಮೊಟ್ಟೆಗಳನ್ನಿಟ್ಟು, ಹೆಣ್ಣು ಮಾತ್ರ ಕಾವು ಕೂರುತ್ತವೆ. ಗಂಡು ಕಾವೀಯುವ ಹೆಣ್ಣಿಗೂ ಮರಿಗಳಿಗೂ ಆಹಾರ ಒದಗಿಸಲು ಸಹಾಯಕವಾಗುತ್ತವೆ.

ಇವುಗಳ ಜೊತೆಗೆ ಇನ್ನೂ ೧೫ ಅನಿರ್ದಿಷ್ಟ ಜಾತಿಯ ಪಕ್ಷಿಗಳನ್ನು ಸೇರಿಸಲಾಗಿದೆ. ಎಲ್ಲವೂ ಪೂರ್ವಾರ್ಧಗೋಳ ವಾಸಿಗಳೇ. ಮೊನಚಾಗಿ ಕೆಳಬಾಗಿದ ತೆಳು ಕೊಕ್ಕು ಹೊಂದಿರುವ ಸಣ್ಣ ಗಾತ್ರದ ಪಕ್ಷಿಗಳು. ಅವುಗಳ ಬಾಲ ಇವುಗಳಂತೆಯೇ ಮೃದುವಾಗಿದ್ದರೂ, ಹೆಚ್ಚಾಗಿ ಕೆಳಮುಖನಾಗಿ ಓಡಾಡುವುದಿಲ್ಲ. ಯುರೋಪಿನಿಂದ ಆಸ್ಟ್ರೇಲಿಯಾವರೆಗಿನ ಕಾಡುಪ್ರದೇಶಗಳಲ್ಲಿ ಕಂಡುಬರುತ್ತವೆ. ಕೆಲವು ತರಹದ ಕೀಟಗಳನ್ನು ಮಾತ್ರವಲ್ಲದೆ ತಮ್ಮ ನಾಲಗೆ ತುದಿಯಲ್ಲಿನ ಕೂದಲು ಗುಚ್ಛದಿಂದ ಹೂವುಗಳಲ್ಲಿನ ಮಧುವನ್ನೂ ಸೇವಿಸುತ್ತವೆ.

ಕುಟುಂಬ ೩೧ : ಟಿಮಾಲಿಯಿಡೀ (Timaliidae)

(ಗಲಭೆ ಪಕ್ಷಿಗಳು)

ಅತ್ಯಂತ ವೈವಿಧ್ಯತೆಯುಳ್ಳ ಪೂರ್ವಾರ್ಧಗೋಳದ ಪಕ್ಷಿ ಕುಟುಂಬ. ೨೮೦ ಪ್ರಭೇದಗಳನ್ನೊಳಗೊಂಡಿದೆ. ಬಹು ಸಣ್ಣ ಗಾತ್ರದಿಂದ ಕಾಗೆಯಷ್ಟು ದಪ್ಪವಿರ

ಬಲ್ಲವು. ಬಣ್ಣದಲ್ಲೂ ಹೆಚ್ಚಿನ ವೈವಿಧ್ಯತೆಯಿದೆ. ಗೂಡು ರಚನೆಯಲ್ಲೂ ಬಟ್ಟಲಿನಾಕಾರ ದಿಂದ ಗೋಳಾಕಾರದವರೆಗಿನ ವ್ಯತ್ಯಾಸ ಕಂಡುಬರುತ್ತದೆ. ಆದರೆ ಅವು ಬಹುತೇಕ ವಾಗಿ ನೆಲವಾಸಿಗಳು, ಮತ್ತು ಹೆಚ್ಚು ಶಬ್ದ ಮಾಡುತ್ತಿರುವ ಕೀಟಾಹಾರಿ ಪಕ್ಷಿಗಳು.

ದಟ್ಟ ಉದ್ದನೆಯ ಕಾಲೂ, ಮೃದು ಗರಿಗಳೂ ಎಲ್ಲಕ್ಕೂ ಸಾಮಾನ್ಯ. ಹೆಚ್ಚು ದೂರ ಹಾರಲಾರವು. ಕೊಕ್ಕು ದೃಢವಾಗಿ ಗಿಡ್ಡವಿರಬಹುದು, ಅಥವಾ ತೆಳು ನೀಳ ವಾಗಿರಬಹುದು. ಮೇಲ್ಕೊಕ್ಕು ಕೆಲವಕ್ಕೆ ಮುಂಚಾಚಿ ಕೊಕ್ಕೆಯಂತೆ ಕೆಳಬಾಗಿರ ಬಹುದು. ಆಫ್ರಿಕಾದಿಂದ ಆಸ್ಟ್ರೇಲಿಯಾವರೆಗಿನ ಉಷ್ಣವಲಯದ ಕಾಡುಗಳಲ್ಲಿ ಹೆಚ್ಚು.

ಇದರಲ್ಲಿ ಹಲವು ಪಂಗಡಗಳಿವೆ. ನೆಲವಾಸಿ ಪಂಗಡಗಳು ಹೆಚ್ಚಾಗಿ ಮಲಯಾ, ಆಸ್ಟ್ರೇಲಿಯಾಗಳಲ್ಲಿ ಕಂಡುಬರುತ್ತವೆ. ಅವು ವಿವಿಧ ವರ್ಣದ ತೆಳು ನೀಳ ಕಾಲಿನ, ನೀಳ ಕತ್ತಿನ ಮೃದುಗರಿ ಹೊಂದಿದವು. ಕಾಡು ನೆಲಪ್ರದೇಶಗಳಲ್ಲಿ ವಾಸಿಸುತ್ತಾ ನೆಲದ ಮೇಲೆ ಓಡಾಡುವುದೇ ಹೆಚ್ಚು. ಆಸ್ಟ್ರೇಲಿಯಾದ **ಕೋಗಿಲೆ ತ್ರಷ್**‌ಗಳು ಒಂಟಿ ಅಥವಾ ಜೊತೆಗೂಡಿರುತ್ತವೆ. ಪೊದರುಗಳ ಮಧ್ಯೆ, ನೆಲದಮೇಲೆ ತೆರೆದ ಬಟ್ಟಲಿ ನಂತಹ ಅಥವಾ ವರ್ತುಲಾಕಾರದ ಗೂಡು ರಚಿಸಿ ೨–೩ ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಕಾಡುವಾಸಿ ಪಂಗಡಕ್ಕೆ ಸುಮಾರು ೩೦ ಪ್ರಭೇದ ಸೇರುತ್ತವೆ. ೬–೮ ಅಂಗುಲ ನೀಳ ದೇಹದ ಕಂದು ವರ್ಣದ ಪಕ್ಷಿಗಳಿವು. ಇವು ಫಿಲಿಪೈನ್ಸ್‌ನಿಂದ ಆಫ್ರಿಕಾವರೆಗೆ ಹರಡಿವೆ. ತೆಳುವಾದ ನೀಳ ಕೊಕ್ಕು ತುದಿಯಲ್ಲಿ ಮೊನಚಾಗಿ ಕೆಳಬಾಗಿರುತ್ತದೆ. ಕಾಡು, ಪೊದರುಗಳಲ್ಲಿದ್ದು, ಅವುಗಳ ಮಧ್ಯೆ ಗೋಳಾಕಾರದ ಎಲೆ, ಹುಲ್ಲುಗಳ ಗೂಡು ರಚಿಸಿ ೨–೪ ಮೊಟ್ಟೆಯಿಟ್ಟು ಮರಿಮಾಡುತ್ತವೆ.

ಕುಡುಗಲು ಪಕ್ಷಿ (Scimitar bird) ಪಂಗಡಕ್ಕೆ ೩೭ ಪ್ರಭೇದ ಸೇರುತ್ತವೆ. ಭಾರತದಿಂದ ಆಸ್ಟ್ರೇಲಿಯಾವರೆಗಿನ ೭–೧೦ ಅಂಗುಲ ಗಾತ್ರದ, ನೀಳ ಕೆಳಬಾಗಿದ ಕೊಕ್ಕಿನ ಸಾಮಾನ್ಯ ಕಂದು ವರ್ಣದ ಪಕ್ಷಿಗಳು ನೆಲವನ್ನು ಕೊಕ್ಕಿನಿಂದ ಕೆದಕಿ ಆಹಾರ ಹೊಂಚುತ್ತವೆ. ಎಲ್ಲವೂ ಗೋಳಾಕಾರದ ಗೂಡು ರಚಿಸಿ ೨–೩, ಹೆಚ್ಚು ಚುಕ್ಕೆ ಹೊಂದಿದ ಬಿಳುಪು ಮೊಟ್ಟೆಯಿಟ್ಟು ಮರಿಮಾಡುತ್ತವೆ.

ನಾಲ್ಕನೆಯದು ಸಣ್ಣ ಗಾತ್ರದ ಪಕ್ಷಿ ಪಂಗಡ. ೩೭ ಪ್ರಭೇದಗಳಿವೆ. ಅವು ಹೆಚ್ಚು ವರ್ಣರಂಜಿತ, ನೀಳಕಾಲು ಮತ್ತು ದಟ್ಟ ಗಿಡ್ಡ ಕೊಕ್ಕಿರುತ್ತದೆ. ಸಾಮಾನ್ಯವಾಗಿ ಸಣ್ಣ ಗುಂಪುಗಳಾಗಿ ಚಲಿಸಿ ವಾಸಿಸುತ್ತವೆ. ಹೆಚ್ಚಾಗಿ ಮರವಾಸಿಗಳು. ಗಂಟೆಯಾಕಾರದ ಮಾಡು ಹೊಚ್ಚಡದ, ಅಥವಾ ಆಳ ಬಟ್ಟಲಿನಾಕಾರದ ಗೂಡು ರಚಿಸಿ ೨–೪ ಮೊಟ್ಟೆ ಯಿಡುತ್ತವೆ.

ನಗುವ ತ್ರಷ್‌ಗಳ (Laughing Thrush) ಪಂಗಡ ಐದನೆಯದು. ಇದು ದಪ್ಪ ಗಾತ್ರದ, ವಿವಿಧ ವರ್ಣದ ೧೪೦ ಪ್ರಭೇದಗಳನ್ನೊಳಗೊಂಡಿದೆ. ೪–೧೨

ಅಂಗುಲ ನೀಳವಿರುತ್ತವೆ. ಭಾರತದಿಂದ ಮಲಯಾವರೆಗಿನ ಪ್ರದೇಶದಲ್ಲಿ ಹೆಚ್ಚು ವರ್ಣರಂಜಿತ ಸುಂದರ ಪಕ್ಷಿ ಪ್ರಭೇದಗಳಿವೆ. ಇವು ನಗುವಂತೆ ಶಬ್ದ ಮಾಡುತ್ತಾ ಹಾರಾಡುತ್ತಿರುತ್ತವೆ. ಕಾಡು ಮತ್ತು ಹೊಲ ತೋಟಗಳಲ್ಲೂ ವಾಸಿಸುತ್ತವೆ. ಮರ ವಾಸಿಗಳು. ನೆಲದಮೇಲೆ ಆಹಾರ ಹುಡುಕುತ್ತವೆ. ಕೀಟಾಹಾರಿಗಳಾದರೂ ಬೀಜ ಕಾಳು ಹಣ್ಣು ತಿನ್ನುತ್ತವೆ. ಪೊದರುಗಳಲ್ಲಿ ಬಟ್ಟಲಿನಾಕಾರದ ಅಥವಾ ಗೋಳಾಕಾರದ ಗೂಡು ರಚಿಸುತ್ತವೆ.

ಮಧ್ಯ ಮತ್ತು ಪೂರ್ವ ಏಷ್ಯಾದ ೧೨ – ೧೪ ಪ್ರಭೇದ ಆರನೆಯ ಪಂಗಡಕ್ಕೆ ಸೇರುತ್ತವೆ. ಅವುಗಳ ಗಿಡ್ಡ ಕೊಕ್ಕು ಗಿಳಿಗಳಂತೆ ಚಪ್ಪಟೆಯಾಗಿರುತ್ತದೆ. ೫೦ – ೬೦ರ ಗುಂಪು ಹುಲ್ಲುಗಾವಲು ಮತ್ತು ಮೈದಾನಗಳಲ್ಲಿನ ಪೊದರುಗಳಲ್ಲಿ ಅಡ್ಡಾಡುತ್ತಿರುತ್ತವೆ. ವಿವಿಧ ಕೋನಗಳಲ್ಲಿ ಹಾರಾಡುತ್ತಾ ಶಬ್ದ ಮಾಡುತ್ತಾ ಇರುತ್ತವೆ. **ಗಡ್ಡದ ಟೀಲ್** ಜೊಂಡುಗಳ ಮಧ್ಯೆ ವಾಸಿಸುವ ಪ್ರಭೇದ. ಜೊಂಡು, ಹುಲ್ಲುಗಳ ನಡುವೆ ಗರಿ, ಕೂದಲು, ಸಸ್ಯಗಳಿಂದ ಹೆಣ್ಣು ಗಂಡುಗಳೆರಡೂ ಸೇರಿ ಗೂಡು ರಚಿಸುತ್ತವೆ. ಬಟ್ಟಲಿನಾಕಾರವೇ ಹೆಚ್ಚು. ೪ – ೭ ಮೊಟ್ಟೆಯಿಟ್ಟು ಹೆಣ್ಣು – ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ.

ಪಶ್ಚಿಮ ಆಫ್ರಿಕಾದ ಬೋಳು ತಲೆಯ **ಪಿಕತಾರ್‌ಟಿನೀ** ಎಂಬ ಪ್ರಭೇದ ನಿರ್ನಾಮವಾಗಿತ್ತೆಂದು ಊಹಿಸಲಾಗಿತ್ತು. ಅವುಗಳ ಬೋಳುತಲೆ ಚರ್ಮ, ನೀಲಿ ಮತ್ತು ಕೆಂಪು ಅಥವಾ ಅಚ್ಚ ಹಳದಿ ವರ್ಣವಿರುತ್ತವೆ. ದಟ್ಟ ಕಾಡುಗಳ ನಡುವಣ ಕಲ್ಲುಗುಡ್ಡಗಳಲ್ಲಿ ವಾಸಿಸುವ ಪಕ್ಷಿಗಳು. ಹಲವು ಗುಂಪಾಗಿ ಸಂಚರಿಸುತ್ತವೆ. ಹಲ್ಲಿ, ಕಪ್ಪೆ, ಕೀಟಗಳನ್ನು ತಿನ್ನುತ್ತವೆ. ಕಲ್ಲಿಗೆ ಅಂಟಿದಂತೆ ಮಣ್ಣು ಗೂಡುಗಳನ್ನು ರಚಿಸಿ, ಮೃದು ಪುಕ್ಕ ಮತ್ತು ನಾರುಗಳಿಂದ ಮೆತ್ತೆ ಸೇರಿಸಿ, ಕಂದು ಚುಕ್ಕೆಯ ಕೆನೆವರ್ಣದ ೨ ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಕುಟುಂಬ ೩೨ : ಪಿಕ್‌ನೋನೋಟಿಡೀ (Pycnonotidae) (ಬುಲ್‌ಬುಲ್ ಪಕ್ಷಿಗಳು) (Bulbuls)

ಆಫ್ರಿಕಾದಿಂದ ಏಷ್ಯಾಖಂಡದಾದ್ಯಂತ ಕಂಡುಬರುವ ಸಂಗೀತಕ್ಕೆ ಹೆಸರಾಂತ ಪಕ್ಷಿ ಪ್ರಭೇದವಿದು. ಹಳ್ಳಿ ಪಟ್ಟಣಗಳ ಪಕ್ಕದ ವ್ಯವಸಾಯ ಪ್ರದೇಶಗಳಲ್ಲೂ ಹೆಚ್ಚಾಗಿ ವಾಸಿಸುತ್ತವೆ. ಸಂಘಜೀವಿಗಳು. ಗುಂಪಾಗಿ ವಾಸಿಸುತ್ತಾ ಅತಿ ಚಟುವಟಿಕೆಯಿಂದಿರುತ್ತವೆ. ಗಲಭೆ ಹೆಚ್ಚು. ೧೯ ಪ್ರಭೇದಗಳನ್ನೊಳಗೊಂಡಿದೆ. ಕತ್ತಿನ ಬಳಿ ಕಾಂಡವಿಲ್ಲದ ಕೂದಲಿನಂತಹ ಗರಿಯುಳ್ಳ ಪ್ರದೇಶವಿರುತ್ತದೆ. ಬಾಲ ಸಾಮಾನ್ಯ ನೀಳವಾಗಿ ಕೆಳಭಾಗವು ಕವಲೊಡೆದಿರುತ್ತದೆ. ಬಣ್ಣ ಬೂದು, ಕಂದು, ಮಾಸಲು ಹಸಿರು, ಅಥವಾ ಕಪ್ಪು ವರ್ಣದ ವಿವಿಧ ಅಂತರ ಹೊಂದಿರುತ್ತವೆ. ಕೆಲವಕ್ಕೆ ಗರಿ ಶಿಖೆಯಿದೆ. ಗಂಡು ಹೆಣ್ಣುಗಳಲ್ಲಿ ವರ್ಣಭೇದವಿಲ್ಲದಿದ್ದರೂ, ಗಾತ್ರದಲ್ಲಿ ಗಂಡು ಸ್ವಲ್ಪ ದಪ್ಪವಿರುತ್ತದೆ.

ಅವು ಗಲಭೆ ಪಕ್ಷಿಗಳಂತಿದ್ದರೂ, ಕಾಲು ಅಷ್ಟು ನೀಳವಿರುವುದಿಲ್ಲ. ಕೊಕ್ಕಿನ ತಳದಲ್ಲಿ ಒರಟು ಕೂದಲಿವೆ. ಕತ್ತಿನ ಕೂದಲು ಗರಿಗಳು ಈ ಕುಟುಂಬದ ವೈಶಿಷ್ಟ್ಯ. ಕಾಡುವಾಸಿಗಳು. ಹಲವು ಪೊದರು ಮೈದಾನಗಳಲ್ಲಿರಬಲ್ಲವು. ಆಫ್ರಿಕಾ ಮೆಡಗಾಸ್ಕರ್‌ನಲ್ಲಿ ಅವುಗಳ ಬಹುತೇಕ ಪ್ರಭೇದಗಳಿವೆ.

ಕೆಂಪು ಕೆನ್ನೆಯ ಬುಲ್‌ಬುಲ್ ಭಾರತದಿಂದ ಚೈನಾ ಮಲೇಷಿಯಾವರೆಗೆ ಕಂಡುಬರುತ್ತವೆ. ಮಾನವರ ಸಮೀಪವಾಸಿಗಳಿವು. ಹಣ್ಣು ಮುಖ್ಯಾಹಾರ. ತೋಟ ಹೊಲದಲ್ಲೆಲ್ಲಾ ಹಾರಾಡುತ್ತಿರುತ್ತವೆ. ಮಳೆ ಬಂದು ಸ್ವಲ್ಪ ನೀರು ನಿಂತಿದ್ದಲ್ಲಿ ಸ್ನಾನ ಮಾಡಲು ಇಷ್ಟ. ಕೀಟಗಳನ್ನು ತಿನ್ನುತ್ತವೆ. ಹಣ್ಣು ರುಚಿಕರವಾಗಿದ್ದಲ್ಲಿ ಮಿತಿಯಿಲ್ಲದೆ ತಿನ್ನುತ್ತವೆ. ಆದರಿಂದ ತೋಟದಲ್ಲಿ ನಷ್ಟವಾಗಬಹುದು. ಸಂಘಜೀವಿಗಳು. ಪರ್ವಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಅಪಾಯವಿದ್ದಲ್ಲಿ ಒಟ್ಟುಗೂಡಿ ನಿವಾರಿಸಲು ಪ್ರಯತ್ನಿಸುತ್ತವೆ.

ಮರ, ಪೊದರುಗಳ ಕೊಂಬೆಗಳಲ್ಲಿ ಹುಲ್ಲು ನಾರುಗಳಿಂದ ತೆರೆದ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಗೂಡನ್ನು ಹಾವಸೆ, ಎಲೆ, ಹುಲ್ಲುಗಳಿಂದ ಮುಚ್ಚಿ ಸುಲಭವಾಗಿ ಕಾಣಿಸದಂತೆ ಮಾಡುತ್ತವೆ. ೩ – ೫ ಮೊಟ್ಟೆಗಳಿಡುವುದು ಸಾಮಾನ್ಯ. ಹೆಣ್ಣು ಮಾತ್ರ ಕಾವಿಗೆ ಕೂರುತ್ತದೆ. ಗಂಡು ಆಹಾರ ಹೊಂಚಲು ಸಹಕರಿಸುತ್ತದೆ. ಹಲವು ಪ್ರಭೇದಗಳು ವರ್ಷಕ್ಕೆ ಎರಡಾವರ್ತಿ ಮರಿಮಾಡುತ್ತವೆ.

ಆಫ್ರಿಕಾದ **ಹಸಿರು ಬುಲ್‌ಬುಲ್** ಮತ್ತು **ಕಂದು ಬುಲ್‌ಬುಲ್** ಪಕ್ಷಿಗಳಲ್ಲಿ ಹೆಣ್ಣು ಸಣ್ಣ ಗಾತ್ರವಿರುತ್ತದೆ. ಅಲ್ಲದೆ ಅವು ಬಾಲವನ್ನೂ, ಒಂದು ರೆಕ್ಕೆಯನ್ನೂ ಆಗಾಗ ಅಲುಗಾಡಿಸುತ್ತಿರುತ್ತವೆ.

ಕುಟುಂಬ ೩೩ : ಕ್ಲೋರೋಪ್ಸಿಡೀ (Chloropseidae)
(ಎಲೆ ಪಕ್ಷಿಗಳು. Leaf birds)

ಮೂರು ಜಾತಿಯ ೧೪ ಪ್ರಭೇದಗಳುಳ್ಳ ಆಗ್ನೇಯ ಏಷ್ಯಾ ಕುಟುಂಬವಿದು. ಇವು ಎಲ್ಲಾ ವಿಧದಲ್ಲೂ ಬುಲ್‌ಬುಲ್ ಪಕ್ಷಿಗಳನ್ನು ಹೋಲುತ್ತವೆ. ಆದರೆ ಇವುಗಳಲ್ಲಿ ಗಂಡು ಹೆಣ್ಣಿಗೆ ಭೇದವಿದ್ದು, ಗಂಡು ಹೆಚ್ಚು ಬಣ್ಣವಿರುತ್ತವೆ. ೭ – ೮ ಅಂಗುಲ ನೀಳ. ಹಸಿರು ಮೈ ಬಣ್ಣದ ಮೇಲೆ ವಿವಿಧ ಕಪ್ಪು, ಕೆಂಪು ಬಣ್ಣವಿರುತ್ತವೆ. ಪರ್ವಕಾಲವನ್ನುಳಿದು ಮಿಕ್ಕ ಸಮಯದಲ್ಲಿ ಸಣ್ಣ ಗುಂಪಾಗಿ ಚಲಿಸುತ್ತವೆ. ಕೀಟ, ಕಾಳು ತಿಂದರೂ ಹಣ್ಣು, ಜೇನು ಮುಖ್ಯಾಹಾರ. ಬದನಿಕೆ ಹಣ್ಣು ಇಷ್ಟವಾದ್ದರಿಂದ ಅದನ್ನು ಹರಡಲು ಇದು ಒಂದು ಮುಖ್ಯ ಕಾರಣವಾಗಿದೆ. ಉತ್ತಮ ಹಾಡುಗಾರರು. ಸಾಕಲು ಉತ್ತಮವಾದವು. ಸಣ್ಣ ಬಟ್ಟಲಿನಾಕಾರದ ಗೂಡು ರಚಿಸುತ್ತವೆ.

ನಾಲ್ಕು ಪ್ರಭೇದ ಅಯೋರಾ ಪಕ್ಷಿಗಳೂ ೫ – ೬ ಅಂಗುಲ ದೇಹದ ಹಳದಿ, ಅಥವಾ ಹಸಿರು ಮಿಶ್ರಿತ ಹಳದಿ ಮೈಮೇಲೆ ವಿವಿಧ ಕಪ್ಪು, ಬಿಳುಪು ಬಣ್ಣ ಹೊಂದಿರು

ತ್ತವೆ. ಮರವಾಸಿಗಳು. ಪೂರ್ಣ ಕೀಟಾಹಾರಿಗಳು. ಸಾಮಾನ್ಯವಾಗಿ ಒಂಟಿ ಅಥವಾ ಸಣ್ಣ ಗುಂಪುಗಳಾಗಿರುತ್ತವೆ. ಭಾರತದಿಂದ ಮಲಯಾವರೆಗೆ ಕಂಡುಬರುತ್ತವೆ. ಪರ್ವಕಾಲದಲ್ಲಿ ಗಂಡು ಮೇಲಕ್ಕೆ ಹಾರಿ, ಪುಕ್ಕಗಳನ್ನೆಲ್ಲಾ ಅಗಲಿಸಿ ಚೆಂಡಿನಾಕಾರವಾಗುತ್ತದೆ. ಅಲ್ಲಿಂದ ಅದು ಶಿಳ್ಳು ಹಾಕಿದಂತೆ ಶಬ್ದಮಾಡುತ್ತಾ ತನ್ನ ಗೂಡಿಗೆ ಹಾರಾಡುತ್ತದೆ. ಹುಲ್ಲನ್ನು ಹೆಣೆದು, ಜೇಡರಬಲೆ ಸೇರಿಸಿ, ಸಣ್ಣ ಬಟ್ಟಲಿನಾಕಾರದ ಗೂಡು ರಚಿಸುತ್ತದೆ. ಇವುಗಳಲ್ಲಿ ೨ – ೪ ಮೊಟ್ಟೆ ಸಾಮಾನ್ಯ.

ನೀಲ ಪಕ್ಷಿಗಳು ಇನ್ನೊಂದು ಮುಖ್ಯ ಜಾತಿ. ಎರಡು ಪ್ರಭೇದಗಳೂ ಭಾರತದಿಂದ ಮಲಯಾ, ಫಿಲಿಪೈನ್ಸ್‌ವರೆಗೆ ಕಂಡುಬರುತ್ತವೆ. ಗಂಡು ದಟ್ಟ ನೀಲಿ ವರ್ಣದ ಮೈ ಮತ್ತು ಕಪ್ಪು ತಳಭಾಗ ಹೊಂದಿರುತ್ತದೆ. ಹೆಣ್ಣು ಸಾಮಾನ್ಯ ವರ್ಣ. ಅವೂ ಮರವಾಸಿಗಳೇ. ದಟ್ಟ ಸೊಪ್ಪುಗಳ ನಡುವೆ ವಾಸಿಸುತ್ತಾ ಮುಖ್ಯವಾಗಿ ಹಣ್ಣುಗಳನ್ನು ತಿನ್ನುತ್ತವೆ, ಒಂಟಿಯಾಗಿ ಅಥವಾ ಜೊತೆಗೂಡಿ ಸಂಚರಿಸುತ್ತಾ ಸಣ್ಣ ಕಾಡು ಅತ್ತಿ ಹಣ್ಣನ್ನು ತಿನ್ನುತ್ತವೆ. ತಟ್ಟೆಯಾಕಾರದ ಗೂಡುಗಳನ್ನು ಸಣ್ಣ ಮರ ಅಥವಾ ಪೊದರುಗಳಲ್ಲಿ ರಚಿಸಿ ೨ ಮಾಸಲು ಹಸಿರು ಬಣ್ಣದ ಮೊಟ್ಟೆಯಿಟ್ಟು, ಮರಿ ಮಾಡುತ್ತವೆ.

ಕುಟುಂಬ ೩೪ : ಸಿನ್‌ಕ್ಲಿಡೀ (Cinclidae)
(ಡಿಪ್ಪರ್ ಪಕ್ಷಿಗಳು)

ಇವು ಈ ಉಪವರ್ಗದ ನೈಜ ನೀರುಪಕ್ಷಿಗಳು. ಬೆಟ್ಟದ ತಿಳಿನೀರಿನ ಜರಿಗಳ ಬಳಿ ವಾಸವಿದ್ದು ನೀರಿನಲ್ಲಿ ಆಗಾಗ ಮುಳುಗಿ ಎದ್ದು ತಿರುಗಾಡುತ್ತಿರುತ್ತವೆ. ಇವು ೪ ಪ್ರಭೇದಗಳು ಮಾತ್ರ. ಎಲ್ಲವೂ ಕಂದು ಬಣ್ಣದ ಮೈ, ವಿವಿಧ ವರ್ಣಗಳ ಮಚ್ಚೆ ಹೊಂದಿರುತ್ತವೆ. ಕಂದುವರ್ಣದ ಸಣ್ಣ ಗಾತ್ರದ ಅಮೇರಿಕಾ ಪ್ರಭೇದ, ಬಿಳಿ ಕತ್ತಿನ ಪ್ರಭೇದ, ಬಿಳಿ ತಲೆಯ ಪ್ರಭೇದ ಮತ್ತು ಸಾಮಾನ್ಯ ಕಂದು ವರ್ಣದ ಪ್ರಭೇದ. ಈ ನಾಲ್ಕು ಮಾತ್ರ ಈ ಕುಟುಂಬಕ್ಕೆ ಸೇರಿದ್ದು, ಅಲಾಸ್ಕಾದಿಂದ ಪನಾಮಾವರೆಗೂ, ಸೈಬೀರಿಯಾದಿಂದ ಫಾರ್ಮೋಸಾವರೆಗೂ ಹರಡಿರುವ ಉ. ಸಮಶೀತೋಷ್ಣ ವಲಯದ ಪಕ್ಷಿಗಳು.

ಅವುಗಳ ಮೃದು ಗರಿಗಳಡಿ ಮೆತ್ತನೆಯ ತುಪ್ಪಟಗರಿಗಳ ಹೊದಿಕೆಯಿದೆ. ಅಲ್ಲದೆ ಬಾಲಗ್ರಂಥಿ ಈ ಉಪವರ್ಗದ ಪಕ್ಷಿಗಳಲ್ಲೇ ಅತಿ ದೊಡ್ಡದಾಗಿ ಬೆಳೆದದ್ದು. ಪಕ್ಷಿ ಮುಳುಗಿದರೂ ನೀರಿನಿಂದ ನೆನೆಯದಂತೆ ಏರ್ಪಡಿಸುವುದು ಅದರ ಉತ್ಪನ್ನವೇ. ಹೊಳ್ಳೆಯ ಮುಚ್ಚಳ ಮತ್ತು ಕಣ್ಣಿಗೆ ಮೂರನೆಯ ಅಡ್ಡ ರೆಪ್ಪೆಯ ಬೆಳವಣಿಗೆ ಅವುಗಳ ವೈಶಿಷ್ಟ್ಯ. ನೀರಿನಲ್ಲಿ ಮುಳುಗಿದರೂ ಇವೆಲ್ಲವೂ ಸಹಾಯಕ.

ದಟ್ಟ ನೀಳ ಕಾಲು, ಪಾದ ಹೊಂದಿವೆ. ಜಾಲಾಂಗುಲವಿಲ್ಲ. ೨೦ ಅಡಿ ಆಳದವರೆಗೂ ನೀರಿನಲ್ಲಿ ಮುಳುಗಿ ಈಜಬಲ್ಲವು. ಈಜಲು ರೆಕ್ಕೆಯೇ ಸಹಾಯಕ, ಮುಳುಗಿದ್ದ

ತಳದಲ್ಲೇ ನಡೆಯುತ್ತಾ ಆಹಾರ ಹೊಂಚಿಕೊಳ್ಳುತ್ತವೆಂದು ತಿಳಿದುಬಂದಿದೆ! ನೀರಿನ ಮೇಲ್ಭಾಗದಲ್ಲೇ ವೇಗವಾಗಿ ಹಾರಾಡುತ್ತವೆ. ಒಂಟಿ ಜೀವಿಗಳು. ಚಳಿಗಾಲದಲ್ಲೂ, ಚಳಿಯನ್ನು ಲೆಕ್ಕಿಸದೆ ಚಟುವಟಿಕೆಯಿಂದ ಓಡಾಡುತ್ತಿರುತ್ತವೆ.

ಜಲಕೀಟಗಳೂ, ಅವುಗಳ ಮರಿಗಳೂ ಮುಖ್ಯಾಹಾರ. ಸಣ್ಣ ಮೀನು ಮರಿಗಳನ್ನು ತಿನ್ನುತ್ತವೆ. ಮೋಹಕ ಶಬ್ದ ಮಾಡುತ್ತವೆ. ಹಾವಸೆಯ ದಪ್ಪ ಗೋಳಾಕಾರದ ಗೂಡು ರಚಿಸಿ, ಒಳಗೆ ಹುಲ್ಲು ಎಲೆಗಳಿಂದ ಮೆತ್ತೆ ಒದಗಿಸುತ್ತದೆ. ನೀರಿನ ಸಮೀಪದಲ್ಲಿನ ಬೇರು, ಕಲ್ಲು ಪೊಟರೆಗಳಲ್ಲೇ ಗೂಡು ರಚಿಸುವುದು. ೪ – ೭ ಅಚ್ಚ ಬಿಳುಪು ಮೊಟ್ಟೆಯಿಟ್ಟು, ಹೆಣ್ಣು ಮಾತ್ರ ಕಾವಿಗೆ ಕುಳಿತು ೧೫ - ೧೬ ದಿನಗಳಲ್ಲಿ ಮರಿ ಮಾಡುತ್ತವೆ. ವರ್ಷಕ್ಕೆ ಎರಡಾವರ್ತಿ ಮರಿಮಾಡುತ್ತವೆ.

ಕುಟುಂಬ ೩೫ : ಟ್ರೋಗ್ಲೋಡೈಟಿಡಿ (Troglodytidae)
(ವ್ರೆನ್‌ಗಳು)

ತೀಕ್ಷ್ಣ ಶಬ್ದ ಮಾಡಬಲ್ಲ ಬಹು ಸಣ್ಣ ಗಾತ್ರದ ಕಂದು ವರ್ಣದ ಪಕ್ಷಿಗಳು. ಪಾಶ್ಚಾತ್ಯ ದೇಶಗಳ ಸಾಂಸ್ಕೃತಿಕ ಕಥೆಗಳಲ್ಲಿ ಹೆಚ್ಚಾಗಿ ವರ್ಣಿಸಲಾದ ಪಕ್ಷಿ. ಅದು ಅತಿ ಬುದ್ಧಿವಂತ ಪಕ್ಷಿಯೆಂದು ಪರಿಗಣಿಸಲಾಗಿದೆ. ಹಿಂದೆ ಪಕ್ಷಿಗಳ ರಾಜನನ್ನು ಆರಿಸಲು ಯಾರು ಬಹು ಎತ್ತರ ಹಾರುತ್ತಾರೆಂಬ ಸ್ಪರ್ಧೆ ಏರ್ಪಡಿಸಲಾಯಿತಂತೆ. ಆಗ ಹದ್ದು ಬಹು ಎತ್ತರ ಹಾರಿ, ತನ್ನ ಹಕ್ಕನ್ನು ತಿಳಿಸುವಷ್ಟರಲ್ಲಿ ಅದರ ಬೆನ್ನ ಮೇಲೆ ತಿಳಿಯದಂತೆ ಅಡಗಿ ಕುಳಿತಿದ್ದ ಸಣ್ಣ ವ್ರೆನ್ ಸ್ವಲ್ಪ ಮೇಲೆ ಹಾರಿ ತಾನೇ ರಾಜನೆಂದು ಘೋಷಿಸಿತಂತೆ! ಅವು ಅಮೇರಿಕಾ ಮೂಲವಾಸಿಗಳೆಂದೂ ಅಲಾಸ್ಕಾ ಮೂಲಕ ಯೂರೇಷಿಯಾಕ್ಕೆ ಬಂದು ಎಲ್ಲೆಡೆ ಹರಡಿವೆಯೆಂದೂ ನಿರ್ಧರಿಸಲಾಗಿದೆ.

ಒಟ್ಟು ೫೯ ಪ್ರಭೇದಗಳು ಕೆನಡಾದಿಂದ ದಕ್ಷಿಣಕ್ಕೆ ಆಫ್ರಿಕಾವರೆಗೂ ಕಂಡುಬರುತ್ತವೆ. ಮಧ್ಯ ಮತ್ತು ದಕ್ಷಿಣ ಅಮೇರಿಕಾದಲ್ಲಿ ಪ್ರಭೇದಗಳು ಹೆಚ್ಚು. ಎಲ್ಲಾ ಪ್ರಭೇದಗಳೂ ಸಾಮಾನ್ಯವಾಗಿ ಒಂದೇರೀತಿಯವಾಗಿದ್ದು ಹೆಚ್ಚಿನ ವೈವಿಧ್ಯತೆ ಹೊಂದಿರುವುದಿಲ್ಲ. ೬ ಅಂಗುಲ ದೇಹ ಸಾಮಾನ್ಯ. ಕೆಲವು ಮಾತ್ರ ೯ ಅಂಗುಲ ವಿರುತ್ತವೆ. ಎಲ್ಲವೂ ಕಂದು ವರ್ಣದ ಮೈಮೇಲೆ ವಿವಿಧ ಬಿಳುಪು ಕಪ್ಪು ಚುಕ್ಕೆ ಪಟ್ಟೆ ಹೊಂದಿರುತ್ತವೆ. ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸವಿಲ್ಲ. ಕೊಕ್ಕು ಮೊನಚಾಗಿ ತೆಳ್ಳಗಿದ್ದು, ಗಿಡ್ಡ ಅಥವಾ ನೀಳವಾಗಿರಬಹುದು. ನೀಳ ದಟ್ಟ ಕಾಲು, ಮತ್ತು ಸಣ್ಣ ದುಂಡಗಿನ ರೆಕ್ಕೆಯಿದ್ದು ಬಹುದೂರ ಹಾರಲಾರವು. ಅವು ತಮ್ಮ ಮೊಟಕು ಬಾಲವನ್ನು ಯಾವಾಗಲೂ ಮೇಲೆತ್ತಿ ಹಿಡಿದು ಚಲಿಸುತ್ತವೆ.

ಬಹುವಾಗಿ ನೆಲವಾಸಿಗಳು. ಪೊದರುಗಳಲ್ಲಿ ತಮ್ಮ ಮುಖ್ಯಾಹಾರ ಕೀಟಗಳನ್ನು ಹುಡುಕಿ ತಿನ್ನುತ್ತವೆ. ವಿವಿಧ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತವೆ. ಪಾಪಾಸ್‌ಕಳ್ಳಿ ಮತ್ತು ಬಂಡೆ ವ್ರೆನ್‌ಗಳು ಮರಳುಗಾಡಿನ ವಾತಾವರಣಕ್ಕೆ

ಹೊಂದಿಕೊಂಡವು. ಕೆಲವು ಜೌಗು ಪ್ರದೇಶದ ಜೊಂಡಿನ ಮಧ್ಯೆ ವಾಸಿಸುತ್ತವೆ. ಕೆಲವು ಕಾಡುವಾಸಿಗಳೂ ಇವೆ. ಎಲ್ಲೇ ಕಾಣದಂತೆ ಅಡಗಿದ್ದರೂ ನಿರಂತರವಾಗಿ ಕೂಗುವುದರಿಂದ ಅವುಗಳನ್ನು ಸುಲಭವಾಗಿ ಪತ್ತೆಹಚ್ಚಬಹುದು. ಒಂದೇ ಹಾಡನ್ನು ಹೆಣ್ಣು ಪ್ರಾರಂಭಿಸಿ ಗಂಡು ಮುಗಿಸುತ್ತದೆ.

ದಪ್ಪ ಗೋಳಾಕಾರದ ಗೂಡು ರಚಿಸುತ್ತವೆ. ಗೂಡು ರಚಿಸುವುದು ಗಂಡೇ. ಅದು ತನ್ನ ಗಡಿಯೊಳಗೆ ಹಲವು ಗೂಡು ರಚಿಸಿಟ್ಟಿರುತ್ತದೆ! ಹೆಣ್ಣು ಅವುಗಳಲ್ಲಿ ಚೆನ್ನಾಗಿ ರಚಿತವಾದ ಗೂಡನ್ನು ಮೆಚ್ಚಿ ಮೊಟ್ಟೆಯಿಡುತ್ತದೆ. ಹೆಣ್ಣು ತನಗಿಷ್ಟವಾದಂತೆ ಒಳಗೆ ಮೆತ್ತೆ ಏರ್ಪಡಿಸುತ್ತದೆ. ಇತರ ಖಾಲಿ ಗೂಡುಗಳು ಹಾಗೇ ಇದ್ದು, ಒಂದರಲ್ಲಿ ಗಂಡು ಪಕ್ಷಿ ವಿಶ್ರಮಿಸುತ್ತದೆ. ಹಲವು ಪೊಟರೆ ಗೂಡಿನವು. ಮನೆ ವ್ರೆನ್ ಪ್ರಭೇದ ಮನೆ ಮಾಡುಗಳ ಬಳಿಯೂ ಗೂಡು ರಚಿಸುತ್ತದೆ. ಎಲ್ಲವೂ ವರ್ಷಕ್ಕೆ ಎರಡು ಮೂರಾವರ್ತಿ ಮರಿಮಾಡಬಲ್ಲವು. ಹಲವು ಬಹುಪತ್ನೀಕ. ಕಾವೀಯುವುದು ಹೆಣ್ಣು ಮಾತ್ರ. ಗಂಡು ಮರಿ ಪೋಷಣೆಗೆ ಸಹಾಯಕ. ೨ – ೧೦ ಮೊಟ್ಟೆಯಿಡುವುದು ಸಾಮಾನ್ಯ. ಪಾಪಾಸ್‌ಕಳ್ಳಿ ಪ್ರಭೇದ ಪಾಪಾಸ್‌ಕಳ್ಳಿಯ ಪೊದರುಗಳ ಮುಳ್ಳಿನ ನಡುವೆ ಮಾತ್ರ ಗೂಡು ರಚಿಸುತ್ತವೆ. ಇದರಿಂದ ಮರಿಗಳಿಗೆ ಪೂರ್ಣ ರಕ್ಷಣೆ ದೊರಕುತ್ತದೆ. ಅವೆಲ್ಲವೂ ಒಂಟಿಯಾಗಿಯೇ ವಾಸವಿರುವವು. ವರ್ಷಕಾಲದಲ್ಲಿ ಮಾತ್ರ ಸಣ್ಣ ಗುಂಪುಗಳು ಕಾಣುತ್ತವೆ.

ಕುಟುಂಬ ೩೬ : ಮಿಮಿಡೀ (Mimidae)

(ಬೆಕ್ಕು ಪಕ್ಷಿ, ಅಣಕ ಪಕ್ಷಿಗಳು)

ಇವೆಲ್ಲವೂ ಪಶ್ಚಿಮಾರ್ಧಗೋಳದವು. ಒಟ್ಟು ३೧ ಪ್ರಭೇದಗಳನ್ನೊಳಗೊಂಡಿದೆ. ಉತ್ತಮ ಹಾಡುಗಾರಿಕೆಯ ಮತ್ತು ಅನುಕರಣೆಯ ಅಣಕ ಪಕ್ಷಿಗಳು. ನಡತೆಯಲ್ಲೂ, ಬಣ್ಣದಲ್ಲೂ ವ್ರೆನ್‌ಗಳಂತಿದ್ದು, ತ್ರಷ್‌ಗಳಂತೆ ತೆರೆದ ಬಟ್ಟಲು ಗೂಡು ರಚಿಸುತ್ತವೆ. ಉ. ಅಮೇರಿಕಾದ ೫ ಸಂಸ್ಥಾನಗಳ ರಾಷ್ಟ್ರಪಕ್ಷಿಯಾಗಿದೆ. ಮನೆಯಮೇಲೆ, ತಂತಿ ಕಂಬ ಮುಂತಾದೆಡೆ ಕುಳಿತು ಹಾಡುತ್ತಾ ಇರುತ್ತವೆ. ಹಗಲೆಲ್ಲಾ ಸಾಮಾನ್ಯವಾಗಿ ಹಾಡುತ್ತವೆ. ಬೆಳದಿಂಗಳ ದಿನಗಳಲ್ಲಿ ಕೆಲಸಮಯ ರಾತ್ರಿಯೂ ಹಾಡುತ್ತವೆ. ಅವು ಸುಮಾರು ३೦ ವಿವಿಧ ಜಾತಿಯ ಪಕ್ಷಿಗಳ ಕೂಗನ್ನು ಅನುಕರಿಸುತ್ತವೆ! ಹೊಸದಾಗಿ ಕೇಳಿಕೊಂಡ ಹಾಡನ್ನು ಕಲಿತು ಜ್ಞಾಪಕದಿಂದ ಹಾಡುತ್ತವೆ.

ಸಣ್ಣ ಮರ, ಪೊದರುಗಳಲ್ಲಿ ದಪ್ಪ ಕಡ್ಡಿಗಳಿಂದ ಬಟ್ಟಲಿನಾಕಾರದ ದಟ್ಟ ಗೂಡು ರಚಿಸಿ ಒಳಗೆ ಹುಲ್ಲು ಮತ್ತು ಸಣ್ಣ ಬೇರುಗಳಿಂದ ಮೆತ್ತೆ ಒದಗಿಸುತ್ತದೆ. ಗೂಡು ರಚನೆಯಲ್ಲಿ ಹೆಣ್ಣು ಗಂಡುಗಳೆರಡೂ ಸಹಕರಿಸುತ್ತವೆ. ३ – ೬ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ಕಾವು ಕೂತು ೧೪ – ೧೫ ದಿನಗಳಲ್ಲಿ ಮರಿಮಾಡುತ್ತದೆ. ವರ್ಷಕ್ಕೆ ೨ – ३ ಸಲ ಮರಿಮಾಡಬಲ್ಲವು.

ಅಮೇರಿಕಾದಲ್ಲಿ ಸಾಮಾನ್ಯವಾಗಿ ಕಾಣುವ ಅಣಕು ಪಕ್ಷಿ ತೆಳ್ಳನೆಯ, ದಪ್ಪ ಕೊಕ್ಕಿನ ಬೂದು ಕಂದು ಬಣ್ಣದ ಮೇಲ್ಮೈ ಹಗುರ ತಳಭಾಗದ ಪಕ್ಷಿ. ಮೆಕ್ಸಿಕೋ ಪ್ರಭೇದ ಅಚ್ಚ ನೀಲಿ ವರ್ಣದವು.

ಬೂದು ಬಣ್ಣದ ಸಣ್ಣ ಗಾತ್ರದ ಬೆಕ್ಕು ಪಕ್ಷಿಗೆ ಕಪ್ಪು ಟೊಪ್ಪಿಗೆಯಿದೆ. ಬೆಕ್ಕಿನಂತೆ ಕೂಗುವುದರಿಂದ ಆ ಹೆಸರು. ಅಣಕಮಾಡಲಾರದು. ಆದರೆ ಅದರ ಹಾಡು ಇಂಪಾಗಿರುತ್ತದೆ. ಸುಲಭವಾಗಿ ಪಳಗುತ್ತದೆ. ಇವೂ ಬಟ್ಟಲಿನಾಕಾರದ ಗೂಡು ರಚಿಸಿ ೪ – ೬ ನೀಲ ಹಸಿರು ವರ್ಣದ ಮೊಟ್ಟೆಯಿಟ್ಟು ೧೪ ದಿನಗಳು ಕಾವಿತ್ತು ಮರಿಮಾಡುತ್ತವೆ. ಮುಖ್ಯಾಹಾರ ಕೀಟಗಳು. ಆದರೆ ಹಣ್ಣು ಮತ್ತು ಕಾಯಿಗಳನ್ನೂ ತಿನ್ನುತ್ತವೆ. ಇವುಗಳು ಸಣ್ಣ ಗುಂಪಾಗಿದ್ದು ಸ್ವಲ್ಪ ದೂರ ವಲಸೆ ಹೋಗುತ್ತವೆ.

ಮೂರನೆಯ ಪಂಗಡ **ತ್ರಾಷರ್ಸ್**ಗಳು ಸ್ವಲ್ಪ ದಪ್ಪಗಾತ್ರದ, ನೀಳ ಬಾಲದವು. ಕಂದು ಮೇಲ್ಮೈ ಮತ್ತು ಹಗುರ ತಳಭಾಗ ಹೊಂದಿರುತ್ತವೆ. ಒಟ್ಟು ೧೭ ಪ್ರಭೇದಗಳಿವೆ. ಹೆಚ್ಚಾಗಿ ಪೊದರು, ಕಾಡುಗಳಲ್ಲೇ ವಾಸ. ಎರಡು ಪ್ರಭೇದ ಪಾಪಾಸ್‌ಕಳ್ಳಿಗಳ ನಡುವೆ ಗೂಡು ರಚಿಸುತ್ತವೆ. ಅವುಗಳಲ್ಲಿ ಬಹು ದಪ್ಪನೆಯ ಪಕ್ಷಿಯ ಗಾತ್ರ ೧೨ ಅಂಗುಲ ಗಾತ್ರ ಮಾತ್ರ. ವೆಸ್ಟ್‌ಇಂಡೀಸ್ ದ್ವೀಪವಾಸಿಗಳಾದ ೪ ಪ್ರಭೇದಗಳಲ್ಲಿ ಎರಡು ನಿರ್ಮೂಲವಾಗುವಂತಿದೆ.

ಇವುಗಳಲ್ಲಿ ಅತ್ಯಂತ ವಿಚಿತ್ರ ಪಕ್ಷಿ, ಸಣ್ಣ ಗಾತ್ರದ **ನಡುಗುವ ಪಕ್ಷಿ** ! ಅವು ಯಾವಾಗಲೂ ನಡುಗುವಂತೆ ಮೈಯಾಡಿಸುತ್ತಿರುತ್ತದೆ. ಕಾರಣ ಇದುವರೆಗೂ ಸರಿಯಾಗಿ ತಿಳಿದುಬಂದಿಲ್ಲ.

ಕುಟುಂಬ ೩೭ : ಟರ್‌ಡಿಡೀ (Turdidae)

(ತ್ರಷ್‌ಗಳು)

ಪ್ರಪಂಚದ ಅತ್ಯಂತ ಇಂಪು ಇಂಚರದ ಪಕ್ಷಿ ಸಮೂಹವಿದು. ಹಲವು ಸುಂದರ ವರ್ಣದ ಪಕ್ಷಿಗಳೂ ಹೌದು. ನ್ಯೂಜಿಲೆಂಡ್, ಅಂಟಾರ್ಕ್‌ಟಿಕಾ, ಉತ್ತರ ಧ್ರುವ ಮತ್ತು ಹಲವು ದ್ವೀಪಗಳನ್ನುಳಿದು ಇತರೆಲ್ಲೆಡೆ ಕಂಡುಬರುತ್ತವೆ. ಪೂರ್ವಾರ್ಧಗೋಳದ ಉಷ್ಣ ಮತ್ತು ಸಮಶೀತೋಷ್ಣವಲಯದಲ್ಲಿ ಹೆಚ್ಚು ಪ್ರಭೇದಗಳಿವೆ. ಕೀಟಾಹಾರಿ ಪಕ್ಷಿಗಳಿವು. ಇವು ಮುಂದಿನ ಎರಡು ಕುಟುಂಬದವಕ್ಕಿಂತ ದಪ್ಪಗಾತ್ರದವು. ಕಾಲು ನೀಳವಾಗಿದ್ದು ಹುರುಪೆಯಿರುವುದಿಲ್ಲ. ಕೀಟಾಹಾರಿಗಳಾದರೂ ಹಾರುತ್ತಿರುವ ಕೀಟಗಳನ್ನು ಅಟ್ಟಿಸಿ ಹಿಡಿಯುವುದಿಲ್ಲ. ನೆಲ ಹಾಗೂ ಮರದಮೇಲೆ ಆಹಾರ ಹೊಂಚುತ್ತವೆ. ಹೆಚ್ಚಾಗಿ ಹಣ್ಣು, ಕಾಯಿಗಳನ್ನು ಸೇವಿಸಬಲ್ಲವು. ಮರ ಮತ್ತು ಪೊದರುಗಳಲ್ಲಿ ಬಟ್ಟಲಿನಾಕಾರದ ಗೂಡು ರಚಿಸುವುವು. ಹಲವು ನೆಲದಮೇಲೂ ಪೊಟರೆಗಳಲ್ಲೂ ಗೂಡು ರಚಿಸಬಲ್ಲವು. ಮರಿಗಳಿಗೆ ಮಚ್ಚೆ ಗರಿಗಳಿವೆ.

ಉತ್ತಮವಾಗಿ ಹಾರಾಡಬಲ್ಲವಾದ್ದರಿಂದ ಹೆಚ್ಚು ಪ್ರದೇಶದಲ್ಲಿ ಹರಡಿವೆ. ಆದರೆ ಹಲವು ದ್ವೀಪಗಳಲ್ಲಿನ ಪ್ರಭೇದಗಳು ಅವುಗಳಿಗೆ ಅಗತ್ಯವಾದ ವಾತಾವರಣ ನಾಶದಿಂದ

ಈಗ ಸಂಪೂರ್ಣವಾಗಿ ನಿರ್ನಾಮವಾಗಿವೆ. ಒಟ್ಟು ೩೦೬ ಪ್ರಭೇದಗಳಿವೆ. ೫ - ೧೨ ಅಂಗುಲ ಉದ್ದ ದೇಹವಿರಬಹುದು. ರಾಬಿನ್‌ಗಳು ಉತ್ತರ ಅಮೇರಿಕಾದ ಎಲ್ಲೆಡೆಯೂ ಕಂಡುಬರುತ್ತವೆ. ಹುಲ್ಲು ಮತ್ತು ನಾರುಗಳ ಜೊತೆಗೆ ಮಣ್ಣು ಸೇರಿಸಿ ಸಣ್ಣ ಬಟ್ಟಲಿನಾಕಾರದ ಗೂಡು ರಚಿಸಿ, ೪ ಮೊಟ್ಟೆಯಿಟ್ಟು, ಹೆಣ್ಣು ಮಾತ್ರ ಕಾವೀಯುತ್ತದೆ. ವರ್ಷಕ್ಕೆ ಎರಡಾವರ್ತಿ ಮರಿಮಾಡಬಲ್ಲವು.

ಕೀಟ ಮತ್ತು ವಿವಿಧ ಹಣ್ಣು ಕಾಯಿಗಳನ್ನು ತಿನ್ನುತ್ತವೆ. ಕೊಳೆತು ಮಾಗುತ್ತಿರುವ ಹಣ್ಣುಗಳನ್ನು ಹೆಚ್ಚಾಗಿ ತಿಂದು ಅದರಲ್ಲಿನ ಮಾದಕವಸ್ತುಗಳಿಂದ ಮತ್ತು ಹಿಡಿದಂತೆ ವರ್ತಿಸುವುದೂ ಕಂಡುಬಂದಿದೆ. ಅವುಗಳನ್ನು ಆಹಾರಕ್ಕಾಗಿ ಹೆಚ್ಚಾಗಿ ಕೊಲ್ಲಲಾಗುತ್ತಿತ್ತು. ೧೯೧೦ರಿಂದೀಚೆಗೆ ಅದು ಪೂರ್ಣ ನಿಂತಿದೆ. ಆದರೆ ಈಗ ಎಲ್ಲೆಲ್ಲೂ ಡಿ.ಡಿ.ಟಿ. ಮೊದಲಾದ ಕ್ರಿಮಿನಾಶಕಗಳ ಬಳಕೆಯಿಂದ ಅವು ನಾಶಗೊಳ್ಳುತ್ತಿವೆ. ಇದನ್ನು ತಡೆಗಟ್ಟದಿದ್ದಲ್ಲಿ ಹುಳುಗಳ ಜೊತೆಗೆ ಇವುಗಳಿಗೂ ಕ್ರಿಮಿನಾಶಕಗಳು ಮಾರಕವಾಗುತ್ತವೆ.

ಪೂರ್ವಾರ್ಧಗೋಳದಲ್ಲಿ ಕಪ್ಪು ಪಕ್ಷಿಗಳು ಸಾಮಾನ್ಯ. ಆಫ್ರಿಕಾ, ಯೂರೋಪ್ ಮತ್ತು ಮಧ್ಯ ಏಷ್ಯಾದಲ್ಲಿವೆ. ಪೂರ್ಣ ಕಪ್ಪು ದೇಹ. ಹಳದಿ ಕೊಕ್ಕು ಹೊಂದಿರುತ್ತವೆ. ಅವುಗಳನ್ನು ಯೂರೋಪಿನಲ್ಲಿ ರುಚಿಕರವೆಂದು ತಿನ್ನಲು ಅಪೇಕ್ಷಿಸುತ್ತಾರೆ. ಯೂರೋಪಿನಲ್ಲಿ ಸುಮಾರು ೭ ಪ್ರಭೇದಗಳಿವೆ. ಅವೆಲ್ಲವೂ ವಲಸೆ ಹೋಗುವವೇ, ಹಣ್ಣು ಕಾಯಿ ಹೆಚ್ಚಾಗಿದ್ದೆಡೆ ಗುಂಪಾಗಿ ಸೇರುತ್ತವೆ.

ಉ. ಅಮೇರಿಕಾದ ೫ ತ್ರಷ್ ಪ್ರಭೇದಗಳು ಒಂದೇರೀತಿಯ ಕಂದು ವರ್ಣದ ಮೇಲ್ಮೈ ಮತ್ತು ಬಿಳುಪು ತಳಭಾಗ ಹೊಂದಿರುತ್ತವೆ. ಇವೆಲ್ಲವೂ ಸಾಮಾನ್ಯವಾಗಿ ಕಾಡುವಾಸಿಗಳು. ಉತ್ತಮ ಇಂಚರ ಹೊಂದಿರುವುವು. ಎಲ್ಲವೂ ಹುಲ್ಲು ನಾರುಗಳೊಂದಿಗೆ ಮಣ್ಣು ಸೇರಿಸಿ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ೩-೪ ಮೊಟ್ಟೆಗಳನ್ನಿಟ್ಟು, ಹೆಣ್ಣು ಮಾತ್ರ ಕಾವಿತ್ತು ಮರಿಮಾಡುತ್ತವೆ. ಮಧ್ಯ ಅಮೇರಿಕಾ ಕಾಡು ಪ್ರಭೇದ ಎದೆಯುಬಳಿ ಬಿಳೀ ಮಚ್ಚೆ ಇಲ್ಲದ ಸ್ಥಳವಾಸಿ. ಅಮೇರಿಕಾದ ಮೂರು ಕಪ್ಪು ಪಕ್ಷಿ ಪ್ರಭೇದಗಳ ಎದೆಯ ಬಳಿ ಕೆಂಪು ವರ್ಣವಿದೆ. ಪೊಟರೆಗಳಲ್ಲೇ ಬಟ್ಟಲಿನಾಕಾರದ ಗೂಡು ರಚಿಸಿ ೨-೩ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ಕಾವು ಕುಳಿತು ಮರಿಮಾಡುತ್ತದೆ.

ಒಂಟಿ ಪಕ್ಷಿಗಳು ಬೇರೆ ಪಂಗಡಕ್ಕೆ ಸೇರುತ್ತವೆ. ಉಷ್ಣವಲಯ ವಾಸಿಗಳೇ ಹೆಚ್ಚು. ಮೆಕ್ಸಿಕೋದಿಂದ ಬ್ರೆಜಿಲ್‌ವರೆಗೆ ಕಂಡುಬರುತ್ತವೆ. ಕಾಡುವಾಸಿಗಳು. ದೇಹ ಮಾಸಲು ಕಂದು ಬಣ್ಣ, ಕಪ್ಪು ಕೊಕ್ಕು ಮತ್ತು ಬಿಳಿ ಮಚ್ಚೆ, ನೀಳ ಬಾಲವಿರುತ್ತವೆ. ಎಲ್ಲವೂ ಉತ್ತಮ ಸಂಗೀತಗಾರ ಪಕ್ಷಿಗಳು. ಪನಾಮಾ ಮತ್ತು ಕೋಸ್ಟರೀಕಾ ಬಳಿಯ ಒಂದು ಸಣ್ಣ ಪ್ರಭೇದ ಕಾಡು ನೆಲಗಳಲ್ಲಿ ಕುಪ್ಪಳಿಸಿ, ತೆವಳಿ ಚಲಿಸುತ್ತವೆ. ಅವುಗಳ ಒಂದು ಬಾಲ ಗರಿ ಬಹು ಗಿಡ್ಡ. ಇದರಂತೆಯೇ ಇರುವ ೬ ಪ್ರಭೇದಗಳು ಹಿಮಾಲಯದಿಂದ ಚೈನಾವರೆಗಿನ ಕಾಡುಗಳಲ್ಲಿ ವಾಸಿಸುತ್ತವೆ, ಅವುಗಳಿಗೆ ಬಣ್ಣ ಹೆಚ್ಚು. ಹೆಣ್ಣು ಗಂಡುಗಳಿಗೆ ಬಣ್ಣ ಭೇದವಿದೆ.

ಯೂರೇಷಿಯಾದಿಂದ ಆಫ್ರಿಕಾದವರೆಗೆ ೮ ಕಲ್ಲು ತ್ರಷ್ ಜಾತಿಗಳಿವೆ. ೮-೯ ಅಂಗುಲ ನೀಳ ಮೈ ನೀಲಿ ಕೆಂಪು ಬಣ್ಣಗಳ ವಿವಿಧ ಮಿಶ್ರಣ. ಇರುವುದು ಒಂಟಿ ಅಥವಾ ಜೊತೆಯಾಗಿಮಾತ್ರ. ಕೆಂಪು ಎದೆಯ ಪ್ರಭೇದ ಪೂರ್ವ ಏಷ್ಯಾ ವಾಸಿ. ಅದು ಸಮುದ್ರ ತೀರದಲ್ಲೇ ಇದ್ದು ಜಲಸಸ್ಯಗಳ ನಡುವೆ ಹುಳು ಹುಪ್ಪಟೆ ಅರಸಿ ತಿನ್ನುತ್ತವೆ. ದಡದ ಬಳಿಯ ಕಲ್ಲು ಪೊಟರೆಗಳಲ್ಲೇ ಗೂಡು ರಚಿಸುವುದು. ರಾಬಿನ್‌ಗಳೂ ಬ್ರಿಟಿಷ್ ಪಕ್ಷಿಗಳು.

ವಲಸೆ ಹೋಗುವ ೨೦ ಪ್ರಭೇದಗಳು ಅಮೇರಿಕಾ, ಯೂರೇಷಿಯಾ, ಆಫ್ರಿಕಾಗಳಲ್ಲಿನ ಮೈದಾನ, ಮರಳುಗಾಡು ಮುಂತಾದಕಡೆ ವಾಸಿಸಿ ದಕ್ಷಿಣಕ್ಕೆ ವಲಸೆ ಹೋಗುತ್ತವೆ. ವಲಸೆ ಹೋಗುವಾಗ ಅವು ದುಂಡಗಾಗಿ ಕೊಬ್ಬಿರುವುದರಿಂದ ತಿನ್ನಲು ಉಪಯುಕ್ತವಾಗಿವೆ. ಪೂರ್ವಾರ್ಧಗೋಳದ ಹಲವು ಪ್ರಭೇದಗಳು ಹೆಚ್ಚು ಗಲಭೆ ಪಕ್ಷಿಗಳು. ಯಾವಾಗಲೂ ಶಬ್ದ ಮಾಡುತ್ತಿರುತ್ತವೆ. 'ಚಟ್' 'ಚಟ್' ಶಬ್ದ ಮಾಡುತ್ತಾ ತಿರುಗಾಡುವ ೨ ಪ್ರಭೇದ ಪೊದರುವಾಸಿ ಹಾಗೂ ಸ್ಥಳವಾಸಿ. ಹೆಸರಾಂತ **ನೈಟಿಂಗೇಲ್** ಮತ್ತು **ದಯಾಲ್ ತ್ರಷ್**‌ಗಳು ಉತ್ತಮ ಹಾಡುಗಾರ ಪಕ್ಷಿಗಳು, ಭಾರತ ವಾಸಿಗಳು.

ಕುಟುಂಬ ೩೮ : ಸಿಲ್‌ವಿಯಡೀ (Sylviidae)
(ವಾರ್‌ಬ್ಲರ್ ದರ್ಜಿ ಪಕ್ಷಿಗಳು) (Warblers)

ತೆಳು ನೀಳ ಕಾಲು ಕೊಕ್ಕು ಹೊಂದಿರುವ ಸಣ್ಣಗಾತ್ರದ ಸುಮಾರು ೪೦೦ ಪ್ರಭೇದಗಳುಳ್ಳ ಕುಟುಂಬ. ಹೆಣ್ಣು ಗಂಡುಗಳಿಗೆ ವ್ಯತ್ಯಾಸವಿರುವುದಿಲ್ಲ. ಮರಿಗಳಿಗೆ ಮಚ್ಚೆ ಕೂದಲಿರುವುದಿಲ್ಲ. ಕಾಲು ಹುರುಪೆ ಹೊಂದಿರಬಹುದು. ಇದರಲ್ಲಿ ವಿವಿಧ ಬಗೆಯ ಪಕ್ಷಿ ಸೇರಿದ್ದು ೪ ಮುಖ್ಯ ಪಂಗಡಗಳಾಗಿ ವಿಂಗಡಿಸಬಹುದು. ಈ ವ್ಯತ್ಯಾಸವೂ ಪ್ರಾಮುಖ್ಯವಾದದ್ದಲ್ಲ. ಅವುಗಳ ಚರ್ಯೆ ಮತ್ತು ನಡತೆಯಲ್ಲಿ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಎಲ್ಲವೂ ಮುಖ್ಯವಾಗಿ ಕೀಟಾಹಾರಿಗಳು. ಹೆಚ್ಚಾಗಿ ಮರವಾಸಿಗಳು. ಹಲವು ಮಾತ್ರ ಪೊದರು ಹಾಗೂ ಮೈದಾನಗಳಲ್ಲಿರುತ್ತವೆ. ಸಮಶೀತೋಷ್ಣ ವಲಯದ ಹಲವು ಪ್ರಭೇದಗಳು ವಲಸೆ ಹೋಗುತ್ತವೆ. ಉಳಿದವೆಲ್ಲಾ ಸ್ಥಳವಾಸಿಗಳೇ. ಬಟ್ಟಲಿನಾಕಾರದ ಅಥವಾ ಗೋಳಾಕಾರದ ಗೂಡು ರಚಿಸುತ್ತವೆ. ಹೆಣ್ಣು ಮಾತ್ರ ಅಥವಾ ಹೆಣ್ಣು ಗಂಡುಗಳೆರಡೂ ಕಾವೀಯುತ್ತವೆ. ಗಂಡು ಮರಿಪೋಷಣೆಯಲ್ಲಿ ಯಾವಾಗಲೂ ಸಹಾಯಕ.

ನಿಜ ವಾರ್‌ಬ್ಲರ್‌ಗಳು ದೊಡ್ಡ ಪಂಗಡವಾಗುತ್ತವೆ. ಸುಮಾರು ೩೦೦ ಪ್ರಭೇದಗಳು ಇದಕ್ಕೆ ಸೇರಿದವು. ಸಿಲ್‌ವಿಯಾ ಜಾತಿಯವು ಅತ್ಯಂತ ಚಟುವಟಿಕೆಯ ಕೀಟಾಹಾರಿಗಳು. ಮನೆ ತೋಟಗಳಲ್ಲೂ ಟಿಕ್ - ಟಿಕ್ ಶಬ್ದ ಮಾಡುತ್ತಾ ಕೀಟಗಳನ್ನು ಅರಿಸುತ್ತವೆ. ಉತ್ತಮ ಹಾಡುಗಾರ ಪಕ್ಷಿಗಳಿವು. ಸಣ್ಣ ಪೊದರುಗಳಲ್ಲೇ ಬಟ್ಟಲಿನಾ

ಕಾರದ ಗೂಡು ರಚಿಸುತ್ತವೆ. ಗಂಡು ಹಲವು ಗೂಡುಗಳನ್ನು ರಚಿಸುವುದು ಸಾಮಾನ್ಯ. ೪ – ೫ ಮೊಟ್ಟೆಯಿಟ್ಟು ಹೆಣ್ಣು – ಗಂಡುಗಳೆರಡೂ ಕಾವೀಯುತ್ತವೆ.

ಫಿಲ್ಲೋಸ್ಕೋಪಸ್ ಜಾತಿಯವು ಹಲವು ವ್ಯತ್ಯಾಸವಿರುವ ಪಕ್ಷಿ ಜಾತಿ. ೩೦ ಪ್ರಭೇದಗಳಿವೆ. ಯುರೋಪಿನ ಉತ್ತರ ಸಮಶೀತೋಷ್ಣವಲಯದವು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಅವನ್ನು ಎಲೆ ಅಥವಾ ಪೊದರು ವಾರ್‌ಬ್ಲರ್ ಎಂದೂ ಕರೆಯಲಾಗುತ್ತದೆ. ೪ – ೫ ಅಂಗುಲದ, ಮಾಸಲು ಹಸಿರು ಅಥವಾ ಬೂದು ಕಂದು ಮಿಶ್ರ ಬಣ್ಣದವು. ಮರದ ಎಲೆಗಳ ಮಧ್ಯೆ ಓಡಾಡಿ ಆಹಾರ ಹೊಂಚುತ್ತಿದ್ದರೂ, ಸಣ್ಣ ಪೊದರುಗಳಲ್ಲೇ ಗೂಡು ರಚಿಸುವುದು. ಗೋಳಾಕಾರದ ಗೂಡು ರಚಿಸಿ, ಒಳ ಹೋಗಲು ಒಂದೆಡೆ ರಂಧ್ರ ಬಾಗಿಲಿಟ್ಟಿರುತ್ತವೆ. ೬ – ೭ ಮೊಟ್ಟೆಯಿಡುತ್ತವೆ. ವರ್ಷಕ್ಕೆ ಎರಡು ಸಲ ಮರಿಮಾಡಬಲ್ಲವು.

ಲೋಕಸ್ಟೆಲ್ಲಾ ಜಾತಿಯವು ಮಿಡತೆಗಳಂತೆ ಶಬ್ದ ಮಾಡುತ್ತವೆ. ಲಜ್ಜಾ ಪ್ರಕೃತಿಯ ಪಕ್ಷಿಗಳು. ಹುಲ್ಲುಗಾವಲು, ಜೌಗು ಭೂಮಿಗಳಲ್ಲೇ ವಾಸ. ನೆಲದಮೇಲೆ ಅಥವಾ ಬಹು ಸಣ್ಣ ಪೊದರಿನಲ್ಲಿ ಅವು ಬಟ್ಟಲಿನಂತಹ ಗೂಡು ರಚಿಸಿ ೪ – ೭ ಮೊಟ್ಟೆಯಿಟ್ಟು ಮರಿಮಾಡುತ್ತವೆ. **ಆಕ್ರೋಕಿಫೇಲಸ್** ಜಾತಿ ಯಾವಾಗಲೂ ಜೊಂಡು ವಾಸಿಗಳು. ಆಳವಾದ ಬಟ್ಟಲಿನಾಕಾರದ ನೀಳ ಗೂಡು ರಚಿಸಿ ಜೊಂಡುಗಳಲ್ಲಿ ಜೋತುಬಿಡುತ್ತದೆ. ಹೆಣ್ಣೇ ಗೂಡು ರಚಿಸುವುದು. ೪ – ೬ ಹಸಿರು ಅಥವಾ ಹಗುರ ನೀಲಿ ವರ್ಣದ ಮೊಟ್ಟೆಯಿಟ್ಟು, ಕಾವಿತ್ತು ಮರಿಮಾಡುತ್ತದೆ. **ಸಿಸ್‌ಟಿಕೋಲ** ಜಾತಿಯ ೭೫ ಪ್ರಭೇದ ಎಲ್ಲೆಡೆ ಹರಡಿರುತ್ತವೆ. ಹೆಚ್ಚಾಗಿ ಆಫ್ರಿಕಾ ಯುರೋಪಿನ ಪ್ರಭೇದಗಳು ಸಣ್ಣ ಗಾತ್ರದ ಕಂದು ವರ್ಣದ ಬಿಳಿಯ ಅಥವಾ ಕಪ್ಪು ಪಟ್ಟೆಯ ಮೇಲ್ಮೈ ಮತ್ತು ಹಗುರ ತಳಭಾಗ ಹೊಂದಿರುವವು. ಪಂಕ ಬಾಲದ ವಾರ್‌ಬ್ಲರ್ ಇದಕ್ಕೆ ಸೇರಿದ್ದು. ತೆರೆದ ಬಟ್ಟಲು, ನೀಳ ಹಣಚೀಲ ಅಥವಾ ಗೋಳಾಕಾರದ ಗೂಡು ರಚಿಸುತ್ತವೆ. ಒಳಗೆ ಮೆತ್ತೆ ಒದಗಿಸುತ್ತವೆ. ಇವುಗಳಲ್ಲಿ ದರ್ಜಿ ವಾರ್‌ಬ್ಲರ್‌ಗಳು ರಚಿಸುವ ಗೂಡು ವಿಚಿತ್ರವಾದದ್ದು. ಇವು ಇಂಡಿಯಾದಿಂದ ಫಿಲಿಪ್ಪೈನ್ಸ್ ವರೆಗೆ ಕಂಡುಬರುತ್ತವೆ. ಕೇವಲ ೪ ಅಂಗುಲ ಉದ್ದದ ಸಾಮಾನ್ಯ ಕಂದು ಬಣ್ಣದ, ಬಿಳೀ ತಳಭಾಗದ ಪಕ್ಷಿಗಳಿವು. ಬಾಲವನ್ನು ವ್ರೆನ್‌ಗಳಂತೆ ಮೇಲೆತ್ತಿಹಿಡಿದು ಚಲಿಸುತ್ತವೆ. ಎರಡು ಮೂರು ನೀಳ ಎಲೆಗಳನ್ನು ಜೋಡಿಸಿ ಅಂಚನ್ನು ನಾರು ಹತ್ತಿಯಿಂದ ಹೊಲೆದು ಆಳ ತೊಟ್ಟಿಲಿನಂತಾಗಿಸಿ, ಅದರೊಳಗೆ ಹತ್ತಿ ನಾರು ತುಂಬಿ ಗೂಡು ರಚಿಸುತ್ತವೆ. ಹೊಲಿಯಲು ದಾರ ಜೇಡರಬಲೆ, ನಾರು ಅಥವಾ ರೇಷ್ಮೆಯಾಗಿರಬಹುದು. ಕೊಕ್ಕಿನಿಂದ ಎಲೆಯಂಚಿನಲ್ಲಿ ಮೊದಲು ತೂತು ಮಾಡಿ, ದಾರ ಪೋಣಿಸಿ ಹೊರಗೆ ಗಂಟು ಹಾಕುತ್ತದೆ. ಸ್ವಲ್ಪ ಉದ್ದನೆಯ ೩ – ೬ ಮೊಟ್ಟೆಯಿಟ್ಟು ಮರಿಮಾಡುತ್ತವೆ.

ರೆಗ್ಯುಲಸ್ ಜಾತಿಯ ೫ ಕಿಂಗ್‌ಲೆಟ್ ಪ್ರಭೇದಗಳು ಎರಡನೆಯ ಪಂಗಡದವು. ೪ – ೫ ಅಂಗುಲ ಸಣ್ಣ ದೇಹದ ಮಾಸಲು ಹಸಿರು, ಹಳದಿ ಅಥವಾ ಕಂದು ವರ್ಣದ

ಪಕ್ಷಿಗಳು. ತಲೆಯಮೇಲೆ ಕೆಂಪು ಅಥವಾ ಹಳದಿ ಮಚ್ಚೆಯಿರುತ್ತದೆ. ಅತಿ ಚಟುವಟಿಕೆಯಿಂದ ಎಲೆ ಅಡಿಭಾಗದ ಕೀಟಗಳು ಮತ್ತು ಅವುಗಳ ಮೊಟ್ಟೆಗಳನ್ನು ಹುಡುಕಿ ತಿನ್ನುತ್ತವೆ. ಪರ್ವಕಾಲದಲ್ಲಿ ಗುಂಪು ಕೂಡಿರಬಹುದು. ನೀಳ ಜೋತಾಡುವ ಸುಂದರ ಹಣಚೀಲದಂತಹ ಗೂಡು ರಚಿಸುತ್ತವೆ. ಹಾವಸೆ ನಾರು ಮತ್ತು ಜೇಡರ ಬಲೆಗಳನ್ನು ಹೆಣೆದು ಗೂಡು ರಚಿಸಿ ಒಳಗಡೆ ಮೃದುಗರಿ, ತುಪ್ಪಟ ಮುಂತಾದುವನ್ನು ಹರಡಿ ಮೆತ್ತೆ ಏರ್ಪಡಿಸುತ್ತವೆ. ಹೆಣ್ಣೇ ಗೂಡು ರಚಿಸುವುದು. ೭ – ೧೨ ಮೊಟ್ಟೆಯಿಟ್ಟು ೧೪ – ೧೬ ದಿನ ಕಾವಿತ್ತು ಮರಿಮಾಡುತ್ತದೆ.

ಮೂರನೆಯ ಪಂಗಡದವು ಕಣಜ ಭಕ್ಷಕಗಳು. ಉತ್ತರ ಅಮೇರಿಕಾದಿಂದ ಅರ್ಜೆಂಟೈನಾವರೆಗಿನ ೮ ಪ್ರಭೇದಗಳನ್ನೊಳಗೊಂಡಿದೆ. ೪ – ೫ ಅಂಗುಲ ಉದ್ದದ ಸಣ್ಣ ಪಕ್ಷಿಗಳು. ತೆಳುವಾದ ನೀಳ ಕೊಕ್ಕಿರುತ್ತದೆ. ಸಾಮಾನ್ಯ ಕಂದು ಬಣ್ಣದವು. ನೀಳ ಬಾಲದಲ್ಲಿ ಬಿಳುಪು ಪಟ್ಟೆಯಿದೆ. ಯಾವಾಗಲೂ ಚಟುವಟಿಕೆಯಿಂದ ಹಾರಾಡುತ್ತಾ ಬಾಲವನ್ನು ಮೇಲಕ್ಕೂ ಕೆಳಕ್ಕೂ, ಪಕ್ಕದಿಂದ ಪಕ್ಕಕ್ಕೂ ಅಲುಗಾಡಿಸುತ್ತಿರುತ್ತವೆ. ಎಲೆ ಅಡಿಯಲ್ಲಿ ಅಡಗಿರುವ ಹುಳುಗಳನ್ನು ಹಾರಿಸಿ ಹಿಡಿಯುತ್ತವೆ. ಉತ್ತಮ ಹಾಡುಗಾರ ಹಕ್ಕಿ ಹಾಗೂ ಅಣಕವಾದಿಗಳು. ಪುಷ್ಪಗಳಿಂದಲೂ ನಾರಿನಿಂದಲೂ ಹೆಣೆದ ಸಣ್ಣ ಗೂಡು ರಚಿಸುತ್ತವೆ. ಹೊರಭಾಗವನ್ನು ಹಾವಸೆ ಮುಂತಾದುವುಗಳಿಂದ ಮುಚ್ಚಿ ಕಾಣಿಸದಂತೇರ್ಪಡಿಸುತ್ತವೆ. ೪ – ೫ ಮೊಟ್ಟೆಯಿಟ್ಟು ಗಂಡು ಹೆಣ್ಣುಗಳೆರಡೂ ೧೩ – ೧೪ ದಿನ ಕಾವಿತ್ತು ಮರಿಮಾಡುತ್ತವೆ. ಮರಿಗಳಿಗೆ ಕೀಟಗಳೇ ಆಹಾರ.

ಕೊನೆಯದು ಹಿಂದುಳಿದ **ವ್ರೆನ್‌ವಾರ್ಬ್ಲರ್‌**ಗಳದು. ಸುಮಾರು ೮೦ ಪ್ರಭೇದಗಳಿವೆ. ಈಸ್ಟ್‌ಇಂಡೀಸ್‌ನಿಂದ ಆಸ್ಟ್ರೇಲಿಯಾ ನ್ಯೂಜಿಲೆಂಡ್‌ವರೆಗೆ ಕಂಡುಬರುತ್ತವೆ.

ಉಳಿದ ಮೂರು ಪಂಗಡದಂತಿರದೆ ವಿವಿಧ ವರ್ಣರಂಜಿತ ಪಕ್ಷಿಗಳಿವು. ಅವುಗಳಿಗೆ ನೀಳ ಬಾಲವಿರುತ್ತದೆ. ಬಾಲವನ್ನು ಯಾವಾಗಲೂ ಮೇಲಕ್ಕೆತ್ತಿ ಹಿಡಿದಿರುತ್ತವೆ. ಹಲವು ಉತ್ತಮ ಹಾಡುಗಾರ ಪಕ್ಷಿಗಳು. ಪೊದರು, ಜೌಗು ಪ್ರದೇಶವಾಸಿಗಳು. ಪರ್ವಕಾಲದಲ್ಲಿ ಸಣ್ಣ ಗುಂಪುಗಳಾಗಿರುತ್ತವೆ. ಕೆಲವು ಮಾತ್ರ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಉಳಿದವೆಲ್ಲಾ ರಚಿಸುವುದು ಗೋಳಾಕಾರದ ಗೂಡನ್ನು. ೨ – ೫ ಮೊಟ್ಟೆಯಿಡುತ್ತವೆ. ಗೂಡಿನ ಒಳಗೆ ಗರಿ ತುಪ್ಪಟಗಳ ಮೆತ್ತೆಯಿರುತ್ತದೆ. ಇವುಗಳಲ್ಲಿ ಕುತೂಹಲಕಾರಕ ಪಕ್ಷಿ **ಎಮುವ್ರೆನ್‌**. ೪ – ೫ ಅಂಗುಲ ದೇಹವಿದ್ದು, ಮೇಲ್ಭಾಗ ಕಪ್ಪು ಮಚ್ಚೆ ಹೊಂದಿ ತಳಭಾಗದಲ್ಲಿ ನೀಲಿ ಹಳದಿ ಬಣ್ಣವಿರುತ್ತದೆ. ಅದರ ನೀಳ ಭಾಗದಲ್ಲಿ ಜರಿಯಂತಹ ನೀಳಗರಿಗಳಿರುತ್ತವೆ. ದೂರ ಹಾರುವಾಗ ನೇರವಾಗಿಟ್ಟು ಕುಪ್ಪಳಿಸಿ ಚಲಿಸುವಾಗ ಮೇಲೆತ್ತಿ ಹಿಡಿದಿರುತ್ತದೆ.

ಕುಟುಂಬ ೩೯ : ಮಸ್ಸಿಕಪಿಡೀ (Muscicapidae)

(ಹಾರಾಡುತ್ತಾ ಕೀಟ ಹಿಡಿಯುವ ಪಕ್ಷಿಗಳು)

ಇವು ಪೂರ್ವಾರ್ಧಗೋಳದವು. ಪೂರ್ಣ ಕೀಟಾಹಾರಿಗಳು. ಕೀಟಗಳನ್ನು ಎಲೆಗಳಿಂದ ಆರಿಸಿ ನೆಲದಲ್ಲಿ ಹುಡುಕಿ, ಅಥವಾ ಹಾರುವವನ್ನು ಹಿಡಿದು ತಿನ್ನುತ್ತವೆ. ಅವುಗಳಿಗೆ ಅಗಲ ಚಪ್ಪಟೆ ಕೊಕ್ಕಿದ್ದು, ಮಧ್ಯ ಭಾಗದಲ್ಲಿ ಕಚ್ಚು ಇರುತ್ತದೆ. ತಳದಲ್ಲಿ ಒರಟು ಕೂದಲಿದ್ದು ಹಾರುವ ಹುಳು ಹಿಡಿಯಲು ಸಹಾಯಕವಾಗುತ್ತದೆ. ಎಲ್ಲಾ ಮರವಾಸಿಗಳು. ಆದ್ದರಿಂದ ಕಾಲು, ಪಾದ ದೃಢವಾಗಿರುವುದಿಲ್ಲ. ಮರಿಗಳು ಮಚ್ಚೆ ಗರಿ ಹೊಂದಿರುತ್ತವೆ.

ವರ್ಣ ವೈವಿಧ್ಯತೆ ಹೆಚ್ಚು. ಹಲವು ಸಾಮಾನ್ಯ ಕಂದು ಬೂದು ವರ್ಣವಿರುತ್ತವೆ. ಹಲವಕ್ಕೆ ಶಿಖೆಯಿರುತ್ತದೆ. ಕೆಲವು ವರ್ಣರಂಜಿತ ಜೋಲು ಮಾಂಸ ಹೊಂದಿರುತ್ತವೆ. ಸಾಮಾನ್ಯ ವರ್ಣದವಲ್ಲಿ ಹೆಣ್ಣು ಗಂಡುಗಳಿಗೆ ವ್ಯತ್ಯಾಸವಿರುವುದಿಲ್ಲ. ಆದರೆ ವಿವಿಧ ವರ್ಣರಂಜಿತ ಪ್ರಭೇದಗಳಲ್ಲಿ ಹೆಚ್ಚಿನ ವ್ಯತ್ಯಾಸವಿರುತ್ತದೆ. ಉತ್ತಮ ಹಾಡುಗಾರ ಪಕ್ಷಿಗಳಲ್ಲಿ ಎಲ್ಲವೂ ಸಾಮಾನ್ಯವಾಗಿ ತುಂಡರಿಸಿದ ಎಲೆ, ಹಾವಸೆ, ಕಲ್ಲು ಹೂವು ನಾರುಗಳಿಂದ ಮರದ ಕೊಂಬೆಗಳಲ್ಲಿ ಬಟ್ಟಲಿನಂತಹ ಗೂಡು ರಚಿಸುತ್ತವೆ. ಕೆಲವು ಮಾತ್ರ ಕಲ್ಲು ಅಥವಾ ಮರಪೊಟರೆಗಳಲ್ಲಿ ಗೂಡು ರಚಿಸಬಲ್ಲವು. ಗೂಡು ರಚನೆಗೆ ಗಂಡು ಹೆಣ್ಣುಗಳೆರಡೂ ಸಹಕರಿಸುತ್ತವಾದರೂ, ಹೆಣ್ಣು ಜಾಸ್ತಿ ಕೆಲಸ ಮಾಡುತ್ತದೆ. ೨–೭ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಆಫ್ರಿಕಾದಿಂದ ಇಂಡಿಯಾ ಆಸ್ಟ್ರೇಲಿಯಾದಲ್ಲೆಲ್ಲಾ ಹೆಚ್ಚಾಗಿವೆ. ಉತ್ತರವಲಯದವು ವಲಸೆ ಹೋಗುವುವು. ಒಟ್ಟು ೩೭೮ ಪ್ರಭೇದಗಳಿದ್ದು, ಅವುಗಳನ್ನು ನಾಲ್ಕು ಪಂಗಡಗಳಾಗಿ ವಿಂಗಡಿಸಲಾಗಿದೆ. ಕಂದು ವರ್ಣದ ಚುಕ್ಕಿ ಮತ್ತು ಅಗಲ ಕೊಕ್ಕುಳ್ಳವು. ಸಾಮಾನ್ಯ ಪ್ರಭೇದಗಳು ೫ ಅಂಗುಲ ಉದ್ದವಿದ್ದು ಯೂರೋಪು ಏಷ್ಯಾದ ಎಲ್ಲಾ ಭಾಗದಲ್ಲೂ ಕಂಡುಬರುತ್ತವೆ. ಮನೆಗಳ ಬಳಿಯೂ ಗೂಡು ರಚಿಸಬಲ್ಲವು. ತೋಟ ಹೊಲ ಮೊದಲಾದಕಡೆ ವಾಸಿಸುತ್ತವೆ. ಇತರ ಪಕ್ಷಿಗಳು ತ್ಯಜಿಸಿದ ಗೂಡುಗಳಲ್ಲೂ ಅಥವಾ ಹಾವಸೆ, ಜೇಡರ ಬಲೆ, ಎಲೆಗಳಿಂದ ರಚಿಸಿದ ತಮ್ಮ ಗೂಡಿನಲ್ಲೂ ಮೊಟ್ಟೆಯಿಟ್ಟು, ಹೆಣ್ಣೇ ಹೆಚ್ಚಾಗಿ ಕಾವೀಯುತ್ತದೆ. ಗಂಡು ಅದಕ್ಕೆ ಆಹಾರ ಒದಗಿಸಲೂ, ಮರಿ ಪೋಷಣೆಗೂ ಸಹಾಯಕವಾಗುತ್ತದೆ.

ನಾರ್‌ಸಿಸಸ್ ಕೀಟಾಹಾರಿ ಜಪಾನ್ ಫಾರ್‌ಮೋಸಾದಲ್ಲಿದ್ದು ಫಿಲಿಪೈನ್ಸ್‌ಗೆ ವಲಸೆ ಹೋಗುವ ಸುಂದರ ಪಕ್ಷಿಗಳು. ಇಂಪಾದ ನಾದ ಮಾಡುತ್ತವೆ. ಜಪಾನಿನ ಸಣ್ಣಗಾತ್ರದ ನೀಲ ಕೀಟಾಹಾರಿಯೂ ಉತ್ತಮ ಹಾಡುಗಾರಿಕೆಯ ಪ್ರಭೇದ. ಗಂಡೇ ಉತ್ತಮವಾಗಿ ಹಾಡುವುದು. ಆಫ್ರಿಕಾದಲ್ಲಿ ಸುಮಾರು ೧೦೦ಕ್ಕೆ ಮೇಲ್ಪಟ್ಟ ಪ್ರಭೇದಗಳಿವೆ. ಅವುಗಳಲ್ಲಿ ಕಪ್ಪು ಕತ್ತಿನ ಕೆಂಪು ಜೋಲು ಮಚ್ಚೆಯ ಪ್ರಭೇದ ಮುಖ್ಯವಾದದ್ದು. ಅವು ಆವೇಶಗೊಂಡಾಗ ಬೆನ್ನಿನ ಗರಿಗಳನ್ನೆಲ್ಲಾ ಉಬ್ಬಿಸಿ ಹಿಡಿಯುತ್ತವೆ. ಇವುಗಳ

ಗೂಡಿನಲ್ಲಿ ಕೋಗಿಲೆ ಮತ್ತು ಜೇನುತೋರ್ಕೆ ಪಕ್ಷಿಗಳು ಮೊಟ್ಟೆಯಿಟ್ಟು ಮರಿಮಾಡ ಲೇರ್ಪಡಿಸುತ್ತವೆ.

ಪ್ಯಾರಡೈಸ್ ಕೀಟಾಹಾರಿ ಭಾರತದಿಂದ ಫಿಲಿಪೈನ್ಸ್, ಆಸ್ಟ್ರೇಲಿಯಾವರೆಗಿನ ಅತಿ ಸುಂದರ ವರ್ಣದ ಪಕ್ಷಿಗಳು. ನೀಲಿ ಕೆಂಪು ಬಿಳುಪು ಕಪ್ಪು ವರ್ಣವಿರುತ್ತವೆ. ಹೆಣ್ಣು ಹಗುರ ವರ್ಣ. ಗಂಡು ಮಾತ್ರ ವರ್ಣರಂಜಿತ. ಅವುಗಳ ಚಪ್ಪಟೆ ಕೊಕ್ಕು ತಳದಲ್ಲಿ ಅಗಲವಾಗಿದ್ದು ಒರಟು ಕೂದಲಿನ ಗುಚ್ಛ ಹೊಂದಿದೆ. ಎಲ್ಲವೂ ಚಟುವಟಿಕೆಯ ಬುದ್ಧಿವಂತ ಸುಂದರ ಪಕ್ಷಿಗಳು. ಗಂಡಿನ ಬಾಲದ ಎರಡು ಗರಿ ನೀಳವಾಗಿರುತ್ತವೆ. ಒಂಟಿಯಾಗಿರುವುದೇ ಹೆಚ್ಚು. ಎಲೆಗಳ ಮಧ್ಯೆ ಆಹಾರ ಹುಡುಕುತ್ತಾ, ಕೀಟಗಳು ಹೊರಹಾರಿದಲ್ಲಿ ಹಾರಿ ಹಿಡಿದು ತಿನ್ನುತ್ತವೆ. ಪರ್ವಕಾಲದಲ್ಲಲ್ಲದೆ ಇತರ ವೇಳೆಗಳಲ್ಲಿ ಹಲವು ಪಕ್ಷಿಗಳು ಗುಂಪಾಗಿರುತ್ತವೆ. ಕಪ್ಪು ಹಣೆಯ ನೀಲಿ ಪ್ರಭೇದ ಗಿಡ್ಡ ಬಾಲದವಾದರೂ ಸುಂದರ ಪಕ್ಷಿ. ಸಣ್ಣ ಹುಲ್ಲು, ಹಾವಸೆ, ಕಲ್ಲು ಹೂವು ಮತ್ತು ಜೇಡರ ಬಲೆ ಸೇರಿಸಿ ಕೊಂಬೆ ಕವಲುಗಳಲ್ಲಿ ಆಳವಾದ ಬಟ್ಟಲಿನಾಕಾರದ ಗೂಡು ರಚಿಸಿ, ೨ – ೪ ನಸುಗೆಂಪು ವರ್ಣದ ಮೊಟ್ಟೆಯಿಡುತ್ತವೆ. ಜಪಾನಿನ ಕಪ್ಪು ಪ್ರಭೇದದ, ಕಣ್ಣಿನ ಸುತ್ತಲೂ ನೀಲಿ ವರ್ಣದ ಜೋಲುಮಾಂಸದ ಮಚ್ಚೆ ಇರುವ ಅತಿ ಸುಂದರ ಪಕ್ಷಿ.

ಪಂಕಬಾಲದ ಪಂಗಡ ಆಗ್ನೇಯ ಏಷ್ಯಾದಿಂದ ಆಸ್ಟ್ರೇಲಿಯಾವರೆಗಿನ ಪ್ರದೇಶದಲ್ಲಿ ಕಂಡುಬರುತ್ತದೆ. ಅವುಗಳಿಗೆ ದುಂಡಾದ ಬಾಲಗರಿಗಳಿದ್ದು ಪಂಕದಾಕಾರವಾಗಿ ಹರಡಿ ಹಿಡಿಯುತ್ತವೆ. ಚಲಿಸುವಾಗ ಬಾಲಗರಿಗಳನ್ನು ಮೇಲಕ್ಕೂ, ಕೆಳಕ್ಕೂ, ಪಕ್ಕದಿಂದ ಪಕ್ಕಕ್ಕೂ ಆಡಿಸುತ್ತಾ, ಅದನ್ನು ಹರಡಿ ಮುಚ್ಚುತ್ತಿರುತ್ತವೆ. ಕಾಡು ಅಂಚಿನ ಪೊದರು ಪ್ರದೇಶಗಳಲ್ಲೂ, ಜರಿ, ಸಮುದ್ರತೀರ ಮುಂತಾದಕಡೆಯೂ ವಾಸವಿರುತ್ತವೆ. ಹೆಣ್ಣು ಗಂಡುಗಳಿಗೆ ವ್ಯತ್ಯಾಸವಿರುವುದಿಲ್ಲ. ಎಲ್ಲಾ ಕಂದು ಬೂದು ಬಣ್ಣದವು. ಬಾಲ ಅಲುಗಾಡಿಸುವ ಪ್ರಭೇದವೊಂದು ಆಸ್ಟ್ರೇಲಿಯಾದಲ್ಲೆಲ್ಲಾ ಕಂಡುಬರುತ್ತದೆ. ಉಳುವ ಎತ್ತುಗಳ ಮೇಲೆ ಕುಳಿತು ಹಾರುವ ಕೀಟಗಳನ್ನೂ ಹಿಡಿದು ತಿನ್ನುತ್ತಿರುತ್ತವೆ. ಹುಲ್ಲು ಕಡ್ಡಿಗಳ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಗೂಡಿನಿಂದ ನೀಳವಾಗಿ ಹಲವು ಹುಲ್ಲು ಗುಚ್ಛ ತೇಲುತ್ತಿರುತ್ತದೆ.

ನಾಲ್ಕನೆಯ ಪಂಗಡ ದಪ್ಪ ತಲೆಯ ಸಂಗೀತಗಾರ ಪಕ್ಷಿಗಳು. ಕಂದು ಅಥವಾ ಮಾಸಲು ಹಸಿರು ಮೇಲ್ಮೈ, ಬಿಳುಪು ಅಥವಾ ಹಳದಿ ವರ್ಣದ ತಳಭಾಗ ಹೊಂದಿರುತ್ತವೆ. ಕತ್ತು ಬಿಳುಪು. ತಲೆ ಹಳದಿ ಅಥವಾ ಕಪ್ಪು. ಮಲಯಾ, ಜಾವಾ, ಆಸ್ಟ್ರೇಲಿಯಾಗಳಲ್ಲಿ ಹೆಚ್ಚು. ಇವುಗಳಿಗೆಲ್ಲಾ ದಪ್ಪ ತಲೆಯಿದ್ದು, ದಟ್ಟ ಕೊಕ್ಕಿನ ಮೇಲ್ತುದಿ ಕೊಕ್ಕೆಯಂತೆ ಕೆಳಬಾಗಿರುತ್ತದೆ. ಸುಮಾರು ೮೦ ಪ್ರಭೇದಗಳಿವೆ. ಕಾಡುಗಳ ತಳಭಾಗದಲ್ಲೂ, ಪೊದರುಗಳಲ್ಲೂ ವಾಸ. ಚಟುವಟಿಕೆಯಿಂದಿದ್ದು ಅಗಲ ಬಟ್ಟಲಿನಾಕಾರದ ಗೂಡು ರಚಿಸಿ ೨ – ೩ ಮೊಟ್ಟೆಯಿಟ್ಟು ಮರಿಮಾಡುತ್ತವೆ.

ಕುಟುಂಬ ೪೦ : ಪ್ರೂನೆಲ್ಲಿಡೀ (Prunellidae)

ಪೂರ್ವಾರ್ಧಗೋಳದ ಯೂರೇಷಿಯಾ ಪ್ರದೇಶದಲ್ಲಿನ ಸಣ್ಣ ಗಾತ್ರದ ಗುಬ್ಬಚ್ಚಿಯಂತಹ ೧೨ ಪ್ರಭೇದಗಳನ್ನೊಳಗೊಂಡ ಕುಟುಂಬ. ಅವುಗಳ ನೇರ ಕೊಕ್ಕು ತೆಳುವಾಗಿ ಮೊನಚಾಗಿರುತ್ತದೆ. ದುಂಡಾಕೃತಿಯು, ಹಗುರ ಕಂದು, ಬೂದು ವರ್ಣದ ಶೀತವಲಯ ವಾಸಿಗಳು ಎತ್ತರ ಬೆಟ್ಟಪ್ರದೇಶ ಮತ್ತು ಪ್ರಸ್ಥಭೂಮಿಗಳಲ್ಲಿ ಹೆಚ್ಚಾಗಿರುತ್ತವೆ. ತ್ರಷ್‌ಗಳಿಗೆ ಸಂಬಂಧಿಸಿವೆ. ಮರಿಗಳಿಗೆ ಮಚ್ಚೆಗರಿಗಳಿವೆ. ಆದರೆ ಅವುಗಳ ನೀಳ ದಟ್ಟ ಕಾಲಿನ ಮುಂಭಾಗದಲ್ಲಿ ಹುರುಪೆಗಳಿವೆ. ಇಂಪು ನಾದವಿದ್ದರೂ ತಗ್ಗು ಧ್ವನಿ. ಸಾಮಾನ್ಯವಾಗಿ ಕೀಟಾಹಾರಿಗಳು. ಆದರೆ ಚಳಿಗಾಲದಲ್ಲಿ ಹಣ್ಣು ಕಾಯಿ ತಿನ್ನುತ್ತವೆ.

ಆಫ್ರಿಕಾದ ಅಟ್ಲಾಸ್ ಬೆಟ್ಟದಿಂದ ಮಂಚೂರಿಯಾ – ಜಪಾನ್ ಬೆಟ್ಟ ಪ್ರದೇಶದಲ್ಲೂ ಕಂಡುಬರುತ್ತವೆ. ಚಳಿಗಾಲದಲ್ಲಿ ಕಾಡುಗಳ ಒಳಕ್ಕೆ ವಲಸೆ ಹೋಗುತ್ತವೆ. ನೆಲವಾಸಿಗಳಾಗಿದ್ದು ಕುಪ್ಪಳಿಸಿ, ಸ್ವಲ್ಪ ದೂರ ಓಡಿ ಚಲಿಸುತ್ತವೆ. ಎಲೆ, ಹುಲ್ಲು, ಬೇರುಗಳಿಂದ ಕಲ್ಲು ಪೊಟರೆಗಳಲ್ಲಿ ಗೂಡು ರಚಿಸಿ ೩ – ೫ ಮೊಟ್ಟೆಯಿಟ್ಟು ಹೆಣ್ಣು ಗಂಡುಗಳೆರಡೂ ೧೫ ದಿನ ಕಾವಿತ್ತು ಮರಿಮಾಡುತ್ತವೆ. ಎರಡುಸಲ ಮರಿಮಾಡಬಲ್ಲವು. ಡನ್‌ಕಾಕ್ ಪ್ರಭೇದ ಮಾತ್ರ ಸಮಶೀತೋಷ್ಣವಲಯದ ಪೊದರು ಪ್ರದೇಶಗಳಲ್ಲಿ ವಾಸಿಸುತ್ತವೆ. ಇವೂ ನೆಲವಾಸಿಗಳೇ ಹೆಣ್ಣು ಮಾತ್ರ ಕಾವೀಯುತ್ತದೆ. ಆಗಾಗ ತನ್ನ ಆಹಾರವನ್ನು ಹುಡುಕಲು ಹೋಗುತ್ತವೆ. ಗಂಡು ಸಹಕರಿಸುವುದಿಲ್ಲ.

ಕುಟುಂಬ ೪೧ : ಮೋಟಾಸಿಲ್ಲಿಡೀ (Motacillidae)

(ಪಿಪಿಟ್ ಮತ್ತು ಬಾಲವಾಡಿಸುವ ಪಕ್ಷಿಗಳು)

ಮೈದಾನಪ್ರದೇಶ ವಾಸಿಗಳಾದ, ತೆಳು ದೇಹದ ನೆಲವಾಸಿಗಳು. ಚೆನ್ನಾಗಿ ಓಡಬಲ್ಲವು. ಕುಪ್ಪಳಿಸುವುದಿಲ್ಲ. ನೇರ ಕೊಕ್ಕು ತೆಳುವಾಗಿ ಮೊನಚಾಗಿರುತ್ತದೆ. ನೆಲದ ಮೇಲೆಯೇ ಓಡಾಡುತ್ತಾ ತನಗೆಟಕುವ ಕೀಟಗಳನ್ನು ಹಿಡಿದು ತಿನ್ನುತ್ತವೆ. ಒಟ್ಟು ೫೪ ಪ್ರಭೇದಗಳುಂಟು.

ಪಿಪಿಟ್‌ಗಳು (Pipits) ಸಣ್ಣ ಗಾತ್ರದ ಗಲಭೆ ಮಾಡುವ ಪಕ್ಷಿಗಳು. ಚುಕ್ಕೆ ಕಂದು ಅಥವಾ ಪಟ್ಟೆ ಹೊಂದಿರುತ್ತವೆ. ೩ ಜಾತಿಯಿವೆ. ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸವಿಲ್ಲ. **ಬಾಲವಾಡಿಸುವ** (Wagtails) ಪಕ್ಷಿಗಳಲ್ಲಿ ಗಂಡು ಹೆಚ್ಚು ವರ್ಣ ರಂಜಿತವಾಗಿರುತ್ತವೆ. ಎರಡು ಜಾತಿಯಿವೆ. ಎಲ್ಲವೂ ಚೆನ್ನಾಗಿ ಹಾಡಬಲ್ಲವು. ಅನೇಕವು ವಲಸೆ ಹೋಗುತ್ತವೆ.

ಎಲ್ಲಕ್ಕೂ ನೀಳ ಕಾಲುಗಳಿದ್ದು ಬಹುಭಾಗ ಹುರುಪೆ ಹೊಂದಿರುತ್ತವೆ. ಮೊದಲ ರೆಕ್ಕೆ ಗರಿಗಳು ಇವುಗಳಿಗೆ ೯ ಮಾತ್ರವಿರುವುದು ಒಂದು ವೈಶಿಷ್ಟ್ಯ.

ಪಿಪಿಟ್‌ಗಳ ಒಂದು ಪ್ರಭೇದ ಯೂರೇಷಿಯಾ ಮತ್ತು ಆಫ್ರಿಕಾಗಳಲ್ಲಿ ಹೆಚ್ಚಾಗಿವೆ. ಚಳಿಗಾಲದಲ್ಲಿ ಅವು ಗುಂಪಾಗಿ ವಲಸೆ ಹೊರಟು ನೆಲದಲ್ಲೇ ರಾತ್ರಿ ವೇಳೆ

ವಿಶ್ರಮಿಸುತ್ತವೆ. ಉತ್ತ ಭೂಮಿಯಲ್ಲೂ, ಹುಲ್ಲುಗಾವಲಲ್ಲೂ ಕೀಟಗಳನ್ನು ಹುಡುಕು ತ್ತಿರುತ್ತವೆ. ಹಲವು ಸಾಧಾರಣವಾಗಿ ಬಾಲವಾಡಿಸಬಲ್ಲವು. ಸುಲಭವಾಗಿ ಕಾಣಿಸ ದಂತಹ ಸ್ಥಳಗಳಲ್ಲಿ ನೆಲದಮೇಲೆ ಹುಲ್ಲು ಹೆಣೆದ ಬಟ್ಟಲಿನಾಕಾರದ ಗೂಡು ರಚಿಸಿ, ೩–೭ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ಕಾವೀಯುತ್ತದೆ. ಗಂಡು ಅದಕ್ಕೂ ಮರಿ ಗಳಿಗೂ ಆಹಾರ ಒದಗಿಸಲು ಸಹಾಯಕ. ಹಲವುಸಲ ಮರಿಮಾಡಬಲ್ಲವು. ಇದರಲ್ಲಿನ ಒಂದು ಆಫ್ರಿಕಾ ಪ್ರಭೇದಕ್ಕೆ ಹಿಂಬೆರಳು ಅತಿ ನೀಳವಾಗಿದ್ದು ಉದ್ದನೆಯ ಮೊನಚು ಉಗುರು ಹೊಂದಿರುತ್ತದೆ. ಹಳದಿ ಕತ್ತಿನ ಪ್ರಭೇದದ ಬೆರಳು ೨ ಅಂಗುಲ ನೀಳವಿದ್ದು ಪಾದದ ಅಳತೆ ದೇಹಕ್ಕೆ ಅರ್ಧದಷ್ಟಿರುತ್ತದೆ.

ಬಾಲವಾಡಿಸುವ ಪಕ್ಷಿಗಳು ನದಿ, ಕೆರೆ ತೀರಗಳಲ್ಲೂ, ಜೌಗು ಪ್ರದೇಶದಲ್ಲೂ ವಾಸಿಸುತ್ತವೆ. ಒಂದು ಜಾತಿ ಸಮಶೀತೋಷ್ಣವಲಯ ವಾಸಿಗಳು ವಲಸೆ ಹೋಗುತ್ತವೆ. ಇನ್ನೊಂದು ಸಾಮಾನ್ಯ ವರ್ಣದ ಜಾತಿ ಎಲ್ಲೆಡೆ ಕಂಡುಬರುತ್ತವೆ. ಬೂದು ಬಣ್ಣದ ಮೇಲ್ಮೈ, ಬಿಳುಪು ಮಂಖ ಹೊಟ್ಟೆಯಿದ್ದು, ಕತ್ತು ಕಪ್ಪಾಗಿರುತ್ತದೆ. ಎಲ್ಲಾ ಮೈದಾನ ಪ್ರದೇಶದಲ್ಲೂ ಇದು ಸಾಮಾನ್ಯವಾಗಿ ಕಂಡುಬರುತ್ತದೆ. ಭಾರತದ ಬಹುಭಾಗದಲ್ಲಿ ಕಾಣಿಸುತ್ತದೆ. ಪರ್ವಕಾಲದಲ್ಲಲ್ಲದೆ ಇತರ ಕಾಲದಲ್ಲಿಯೂ ಅವು ಗುಂಪಾಗಿರುತ್ತವೆ. ಎಲ್ಲವೂ ನೆಲದಲ್ಲೇ ಗೂಡು ರಚಿಸುತ್ತವೆ. ಗೂಡು ಕಾಗದ, ಬೇರು, ಕೂದಲು, ಪುಕ್ಕ ಮುಂತಾದವುಗಳಿಂದ ರಚಿತವಾಗಿರುತ್ತದೆ. ಇತರ ಪಕ್ಷಿಗಳ ಗೂಡುಗಳನ್ನೂ ಉಪ ಯೋಗಿಸಬಲ್ಲವು. ೪–೭ ಮೊಟ್ಟೆಯಿಟ್ಟು ಹೆಣ್ಣುಗಂಡುಗಳೆರಡೂ ಕಾವಿತ್ತು ಮರಿ ಮಾಡುತ್ತವೆ. ವರ್ಷಕ್ಕೆ ಅನೇಕಾವರ್ತಿ ಮರಿಮಾಡಬಲ್ಲವು.

ಕುಟುಂಬ ೪೨ : ಬಾಂಬಿಸಿಲ್ಲಿಡೀ (Bombycillidae)
(ಮಯಣ ರೆಕ್ಕೆಯ ಪಕ್ಷಿಗಳು)

೪ ಹೆಚ್ಚು ವೈವಿಧ್ಯತೆಯ ಪಕ್ಷಿಜಾತಿಗಳನ್ನೊಳಗೊಂಡಿರುವ ಕುಟುಂಬವಿದು. ೬–೯ ಅಂಗುಲ ನೀಳದ ಹಣ್ಣು ತಿನ್ನುವ ಪಕ್ಷಿಗಳಿವು. ಗಿಡ್ಡ ಕಾಲಿನ, ಅಗಲ ಕೊಕ್ಕಿನ, ೧೦ ಪ್ರಥಮ ಗರಿಗಳಿರುವ ಪಕ್ಷಿಗಳು. ಮೂರು ಜಾತಿಗಳಿಗೆ ರೇಷ್ಮೆಯಂತಹ ಮೃದುಗರಿ ಗಳಿರುತ್ತವೆ. ಎಲ್ಲವೂ ಉತ್ತರವಲಯ ವಾಸಿಗಳು. ಮಯಣ ರೆಕ್ಕೆಯ ಪ್ರಭೇದಗಳು ಎರಡು ಗೋಳಗಳಲ್ಲೂ ಕಂಡುಬರುತ್ತವೆ. ರೇಷ್ಮೆಗರಿಯ ಜಾತಿಗಳು ಮಧ್ಯ ಅಮೇರಿಕಾ ವಾಸಿಗಳು. ಮೂರನೆಯದು ಆಗ್ನೇಯ ಏಷ್ಯಾದವು ಮತ್ತು ನಾಲ್ಕನೆಯದು ವೆಸ್ಟ್ ಇಂಡೀಸ್ ದ್ವೀಪವಾಸಿ.

ಮಯಣ ರೆಕ್ಕೆಯ ೩ ಪ್ರಭೇದಗಳೂ ಒಂದನ್ನೊಂದು ಹೋಲುತ್ತವೆ. ಸಣ್ಣ ಗಾತ್ರದ ಮೃದುಗರಿಗಳ ಹಗುರ ಕಂದು ವರ್ಣದವು. ಬಾಲದ ತುದಿ ಹಳದಿ ಅಥವಾ ಕೆಂಪಾಗಿರುತ್ತದೆ. ಹೆಣ್ಣು ಗಂಡುಗಳಲ್ಲಿ ಬಣ್ಣ ಭೇದವಿಲ್ಲ. ತಲೆಯಲ್ಲಿ ಶಿಖೆಯಿರುತ್ತದೆ. ಅವುಗಳ ರೆಕ್ಕೆ ಗರಿಗಳ ತುದಿಯಲ್ಲಿ ಮಯಣ ಬೊಟ್ಟುಗಳಂತಹ ವಸ್ತು ಉತ್ಪನ್ನವಾಗು

ವುದರಿಂದ ಅವುಗಳಿಗೆ ಈ ಹೆಸರು. ಅದರ ಉಪಯೋಗ ತಿಳಿದುಬಂದಿಲ್ಲ. ಸಮ ಶೀತೋಷ್ಣವಲಯದ ಕಾಡುಗಳಲ್ಲಿ ವಾಸವಿವೆ. ಸಂಘಜೀವಿಗಳು. ದೊಡ್ಡ ಗುಂಪುಗಳಾಗಿ ವಾಸಿಸಿ ವಲಸೆ ಹೋಗುತ್ತವೆ. ಅವುಗಳಿಗೆ ನಿರ್ದಿಷ್ಟ ನೆಲೆಯಿಲ್ಲ. ಇಷ್ಟಬಂದೆಡೆ ಇರು ತ್ತವೆ. ವಿವಿಧ ಹಣ್ಣು ಮತ್ತು ಕಾಯಿಗಳನ್ನು ತಿನ್ನುತ್ತವೆ. ಹಲವು ಕೀಟಗಳನ್ನೂ ತಿನ್ನಬಲ್ಲವು. ಹಣ್ಣುಗಳನ್ನೂ ಬೇಗ ಜೀರ್ಣಿಸಿಕೊಳ್ಳುತ್ತವೆ. ಹಾಡುಗಾರ ಪಕ್ಷಿಗಳಲ್ಲ. ಶಬ್ದವಿಲ್ಲದ ಸಾಧು ಪಕ್ಷಿಗಳು. ಕೊಂಬೆಗಳಲ್ಲಿ ಹುಲ್ಲು ಕಡ್ಡಿಗಳಿಂದ ಬಟ್ಟಲಿನಾಕಾರದ ಗೂಡು ರಚಿಸಿ ನಾರು, ಕೂದಲು ಮತ್ತು ಗರಿಗಳ ಹೊದಿಕೆ ಏರ್ಪಡಿಸುತ್ತದೆ. ಗೂಡಿನ ರಚನೆಯಲ್ಲಿ ಎರಡೂ ಭಾಗವಹಿಸಿದರೂ, ಹೆಣ್ಣೇ ಹೆಚ್ಚಾಗಿ ಕಾವಿಗೆ ಕೂರುವುದು. ಗಂಡು ಅದಕ್ಕೂ ಮರಿಗಳಿಗೂ ಆಹಾರ ಒದಗಿಸುತ್ತದೆ. ೩-೫ ಮೊಟ್ಟೆಯಿಟ್ಟು ಮರಿಮಾಡುತ್ತವೆ.

ರೇಷ್ಮೆ ಗರಿಗಳ ಕೀಟಾಹಾರಿಗಳು ಉ. ಅಮೇರಿಕಾ ಮಧ್ಯಭಾಗದಿಂದ ಮೆಕ್ಸಿಕೋವರೆಗೆ ಕಂಡುಬರುತ್ತವೆ. ಇವುಗಳೂ ಬಹುವಿಧದಲ್ಲಿ ಮಯಣ ರೆಕ್ಕೆ ಪಕ್ಷಿಗಳನ್ನು ಹೋಲುತ್ತಿದ್ದರೂ ಹೆಚ್ಚಾಗಿ ಕೀಟಾಹಾರಿಗಳು. ಕೀಟಗಳನ್ನು ಹಾರಾಡುತ್ತಾ ಹಿಡಿದು ತಿನ್ನುತ್ತವೆ. ಬಾಲ ನೀಳವಾಗಿದ್ದು ಗಂಡು ಹೆಣ್ಣುಗಳಿಗೆ ವರ್ಣ ವ್ಯತ್ಯಾಸವಿದೆ. ಇವೂ ಸಂಘಜೀವಿಗಳೇ. ಶಿಖೆಯಿರುತ್ತದೆ. ಮರ, ಪೊದರುಗಳಲ್ಲಿ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಇವುಗಳಲ್ಲಿ ಗಂಡು ಗೂಡು ರಚಿಸುವುದು. ೨ – ೩ ಮೊಟ್ಟೆ ಯಿಟ್ಟು ಮರಿಮಾಡುತ್ತವೆ.

ಹಿಪೋಕೋಲಿಯಸ್ ಮೂರನೆಯ ಪಂಗಡದ್ದು. ಅರೇಬಿಯಾ ಆಫ್‌ಘಾನಿ ಸ್ಥಾನದಿಂದ ಇಂಡಿಯಾವರೆಗೆ ಕಾಣಬರುವ ಹಗುರ ನೀಲಿ – ಬೂದು ವರ್ಣದ ಪಕ್ಷಿ ಗಳು. ಸಣ್ಣ ಗುಂಪಾಗಿ ಪೊದರು ಪ್ರದೇಶಗಳಲ್ಲಿ ಅಡ್ಡಾಡುತ್ತಿರುತ್ತವೆ. ವಿವಿಧ ಹಣ್ಣೇ ಆಹಾರ. ಚೆನ್ನಾಗಿ ಹಾರಾಡಬಲ್ಲವು. ೪ – ೫ ಬಿಳುಪು ಮೊಟ್ಟೆಯಿಡುತ್ತವೆ. ಗೂಡಿನ ರಚನೆಯೆಲ್ಲಾ ಉಳಿದೆರಡು ಪಂಗಡದಂತೆಯೇ ಇರುತ್ತವೆ.

ಹಿಸ್‌ಪಾನಿಯೋಲಾದ **ಪಾಮ್ ಚಾಟ್** ಪಕ್ಷಿಗಳು ನಾಲ್ಕನೆಯ ಪಂಗಡದವು. ಸಂಘಜೀವಿಗಳು ಮತ್ತು ಹಣ್ಣು ಮುಖ್ಯಾಹಾರ. ಒರಟು ಗರಿಗಳಿದ್ದು, ಮೇಲ್ಭಾಗ ಹಗುರ ಕಂದು ಮತ್ತು ತಳಭಾಗ ಹಳದಿ–ಬಿಳುಪು ವರ್ಣದಲ್ಲಿ ಕಪ್ಪು ಮಚ್ಚೆ ಹೊಂದಿರು ತ್ತದೆ. ಕಾಲು ಬೆರಳುಗಳೂ ದಟ್ಟವಾಗಿ, ಕೊಕ್ಕು ಹೆಚ್ಚು ನೀಳವಾಗಿ ಹಾಗೂ ದಪ್ಪ ವಾಗಿರುತ್ತದೆ. ಅವು ಸಾಮೂಹಿಕ ಗೂಡು ರಚಿಸುತ್ತವೆ. ಇದೇ ಈ ಪಂಗಡದ ವೈಶಿಷ್ಟ್ಯ. ತೆಂಗಿನ ಜಾತಿಯ ಮರಗಳಲ್ಲಿ, ಎಲೆಗಳ ಬುಡದಲ್ಲಿ ಸಾಮೂಹಿಕ ದಪ್ಪ ಗೂಡನ್ನು ಕಡ್ಡಿಗಳಿಂದ ರಚಿಸುತ್ತವೆ. ೨, ೩ ಅಥವಾ ೨೦ ಜೊತೆಗಳು ಒಟ್ಟಾಗಿ ಗೂಡು ರಚಿಸುತ್ತವೆ. ಆದರೆ ಪ್ರತಿ ಜೋತೆಗೂ ಅದರೊಳಗೆ ಬೇರೆ ಬೇರೆ ಪ್ರತ್ಯೇಕ ಕೋಣೆಗಳಿದ್ದು, ಪ್ರತಿಯೊಂದಕ್ಕೂ ಪ್ರತ್ಯೇಕ ಹೊರದ್ವಾರವಿರುತ್ತದೆ. ಒಳಭಾಗದಲ್ಲಿ ತೊಗಟೆ ಹುಲ್ಲು ಹರಡಿ ಮೆತ್ತೆ ರಚಿಸಿ ೨ – ೪ ಮೊಟ್ಟೆಗಳನ್ನಿಟ್ಟು ಮರಿಮಾಡುತ್ತದೆ. ಹಣ್ಣೇ ಮುಖ್ಯಾಹಾರ.

ಕುಟುಂಬ ೪೩ : ಆರ್ಟ್ಯಮಿಡೀ (Artamidae)
(ಕಾಡು ಸ್ವಾಲೋಗಳು)

ಭಾರತದಿಂದ ಫಿಜಿ, ಆಸ್ಟ್ರೇಲಿಯಾವರೆಗಿನ ೧೦ ಪ್ರಭೇದಗಳು. ಆಸ್ಟ್ರೇಲಿಯಾದಲ್ಲೇ ೬ ಪ್ರಭೇದಗಳಿವೆ. ಹಗುರ ವರ್ಣದ ನೀಳ ರೆಕ್ಕೆಯ ದಟ್ಟ ದೇಹದ ಪಕ್ಷಿಗಳಿವು. ಪೂರ್ಣ ಕೀಟಾಹಾರಿಗಳು. ಹಾರಾಡುವ ಕೀಟಗಳನ್ನು ಹಿಡಿದು ತಿನ್ನುತ್ತವೆ. ಗರಿ ನಯವಾಗಿವೆ. ಗಿಡ್ಡ ಕತ್ತು, ದಟ್ಟ ಕೊಕ್ಕು ನೀಳವಾಗಿ, ತುದಿ ಸ್ವಲ್ಪ ಕೆಳಬಾಗಿರುತ್ತದೆ. ಹೆಣ್ಣು ಗಂಡುಗಳಿಗೆ ಭೇದವಿಲ್ಲ. ಗಿಡ್ಡ ಬಾಲ ಚದುರ ತುದಿ ಹೊಂದಿದೆ. ಇವುಗಳ ವೈಶಿಷ್ಟ್ಯ – ಬಕ ಗಿಣಿಗಳಿಗಿರುವಂತೆ ಧೂಳು ಪುಕ್ಕಗಳಿದ್ದು ಆಗಾಗ ಅದರ ಧೂಳನ್ನು ಗರಿಗಳಿಗೆ ಸವರಿಕೊಳ್ಳುವುದು. ಈ ರೀತಿಯ ಗರಿಗಳು ಈ ಉಪವರ್ಗದಲ್ಲಿ ಇನ್ನಾವ ಪಕ್ಷಿಗೂ ಇರುವುದಿಲ್ಲ.

ಈ ಉಪವರ್ಗದವು ಅತ್ಯುತ್ತಮ ಹಾರಾಡುವ ಪಕ್ಷಿಗಳು. ದೀರ್ಘ ಕಾಲ ಹಾರಿ ಗಾಳಿಯಲ್ಲಿ ತೇಲಾಡಲು ನುರಿತ ಪಕ್ಷಿಗಳಿವು. ಸಂಘಜೀವಿಗಳು. ಗುಂಪಾಗಿಯೇ ವಾಸಿಸುತ್ತವೆ. ಗುಂಪಾಗಿ ಕುಳಿತು ವಿಶ್ರಮಿಸುತ್ತಾ ತಮಗೆ ಇಷ್ಟವಾದಂತೆ ಹಾರಿ ಕೀಟಗಳನ್ನು ಹಿಡಿದು ತಿಂದು ಹಿಂತಿರುಗುತ್ತವೆ. ಬೆಳಗ್ಗೆ ಸಂಜೆ ಮಾತ್ರ ಹೆಚ್ಚು ಚಟುವಟಿಕೆಯಿಂದಿರುತ್ತವೆ. ಹಾರಾಡುವ ಕೀಟಗಳ ಅಭಾವವಿದ್ದಾಗ ಮಾತ್ರ ನೆಲಕ್ಕಿಳಿದು ಆಹಾರ ಹುಡುಕುತ್ತವೆ. ಗುಂಪಾಗಿ ಗಲಭೆ ಮಾಡುತ್ತಿರುವ ಜಾತಿಯಿದು. ತಂತಿಗಳಮೇಲೆ ಸಹಸ್ರಾರು ವಿಶ್ರಮಿಸುತ್ತಿರುತ್ತವೆ. ರಾತ್ರಿ ಕೊಂಬೆಗಳಲ್ಲಿ ಒಂದಕ್ಕೊಂದು ಸೇರಿದಂತೆ ಕುಳಿತು ವಿಶ್ರಮಿಸುತ್ತವೆ. ಸ್ಥಳಾಭಾವವಿದ್ದಲ್ಲಿ ಒಂದರಮೇಲೊಂದು ಸೇರಿದಂತೆ ತಲೆ ಮೇಲೆಮಾಡಿ ಕುಳಿತು ವಿಶ್ರಮಿಸುತ್ತವೆ.

ಕೊಂಬೆಗಳ ಮೇಲೆ ತಟ್ಟೆಯಂತಹ ಅಗಲ ಗೂಡನ್ನು ಕಡ್ಡಿ ಹುಲ್ಲುಗಳಿಂದ ಗಂಡು ಹೆಣ್ಣುಗಳೆರಡೂ ಸೇರಿ ರಚಿಸಿ ೨–೪ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಮೊಟ್ಟೆ ಬಿಳುಪು ಅಥವಾ ಬೂದು ಬಣ್ಣವಿದ್ದು ಅಗಲ ಭಾಗದಲ್ಲಿ ಕಂದು ವರ್ಣದ ಚುಕ್ಕೆ ಹೊಂದಿರುತ್ತವೆ.

ಕುಟುಂಬ ೪೪ : ವಾಂಗಿಡೀ (Vangidae)
(ವಾಂಗ ಶ್ರೈಕ್‌ಗಳು)

ಮೆಡಗಾಸ್ಕರಿನ ೧೨ ಪ್ರಭೇದಗಳಿವು. ಸಾಮಾನ್ಯವಾಗಿ ಹೊಳಪು ಕಪ್ಪು ವರ್ಣದ ಮೇಲ್ಭಾಗ ಮತ್ತು ಬಿಳುಪು ಹೊಟ್ಟೆಯ, ೫–೧೨ ಅಂಗುಲ ಉದ್ದದ ಪಕ್ಷಿಗಳು. ದಟ್ಟ ನೀಳ ನೇರ ಕೊಕ್ಕಿನ, ದಟ್ಟ ಗಿಡ್ಡ ಕಾಲಿನ, ಗಿಡ್ಡ ಬಾಲದವು. ಎಲ್ಲಾ ಮರವಾಸಿಗಳು ಮತ್ತು ಕೀಟಾಹಾರಿಗಳು. ಒಂದು ಪ್ರಭೇದ ಎಲೆಗಳಡಿ ಹುಳು ಹುಡುಕಲು ತಲೆಕೆಳಗಾಗಿ ಕೊಂಬೆ ಹಿಡಿದು ನಿಲ್ಲಬಲ್ಲವು. ಟೊಪ್ಪಿಗೆಯ ಪಕ್ಷಿ ಕೊಕ್ಕಿನಮೇಲೆ ಶಿರಸ್ತ್ರಾಣ ಹೊಂದಿರುತ್ತದೆ. ಒಂಟಿ ಜೀವಿಗಳು. ಅಲ್ಲದೆ ಬಹು ನಿಧಾನ ಚಲನೆಯವು;

ಅವು ಗೂಡನ್ನು ಕೊಂಬೆಯಲ್ಲಿ ಕಡ್ಡಿಗಳಿಂದ ಬಟ್ಟಲಿನಾಕಾರದಲ್ಲಿ ಕಟ್ಟುತ್ತವೆ. ಇವುಗಳ ವಿಚಾರ ಪೂರ್ಣವಾಗಿ ತಿಳಿದುಬಂದಿಲ್ಲ.

ಕುಟುಂಬ ೪೫ : ಲಾನಿಡೀ (Lanidae)
(ಶ್ರೈಕ್‌ಗಳು)

ಈ ಉಪವರ್ಗದಲ್ಲಿನ ಅತಿ ಧೈರ್ಯದ ದರೋಡೆ ಪಕ್ಷಿಗಳಿವು. ಹದ್ದು, ಗೂಬೆಗಳಂತಹ ಸ್ವಭಾವ ಹೊಂದಿದವು. ಕೀಟಾಹಾರಿಗಳಾದರೂ, ಕಪ್ಪೆ, ಸರೀಸೃಪ, ಇಲಿ ಮತ್ತು ತಮ್ಮಷ್ಟೇ ಗಾತ್ರದ ಪಕ್ಷಿಗಳನ್ನೂ ಹಿಡಿದು ತಿನ್ನುತ್ತವೆ. ಆದರೆ ಇವುಗಳಿಗೆ ಉಗುರು ಮುಖ್ಯ ಆಯುಧವಲ್ಲ. ಕೊಕ್ಕೇ ಮುಖ್ಯ. ಆಹಾರವನ್ನು ಹಿಡಿದು ಚೂಪಾದ ಕೊಂಬೆ ತುದಿ ಅಥವಾ ಮುಳ್ಳುಗಳಿಗೆ ಚುಚ್ಚಿ ನೇತುಹಾಕಿದ್ದು ಬೇಕಾದಾಗ ಹರಿದು ತಿನ್ನುತ್ತವೆ !

೭ – ೧೦ ಅಂಗುಲ ಉದ್ದದ ದೇಹದ ದಪ್ಪ ತಲೆಯ, ದಟ್ಟ ನೀಳ ಕೊಕ್ಕಿನವು. ಕೊಕ್ಕಿನ ಮೇಲ್ತುದಿ ನೀಳವಾಗಿ ಮೊನಚಾಗಿದ್ದು ಕೆಳಬಾಗಿರುತ್ತದೆ. ಕಾಲು ದಟ್ಟವಾಗಿ ಉಗುರು ಚೂಪು. ಸಾಮಾನ್ಯವಾಗಿ ಗಂಡು ಹೆಣ್ಣುಗಳಲ್ಲಿ ಬಣ್ಣ ಭೇದವಿಲ್ಲ. ಮುಖ್ಯವಾಗಿ ಪೂರ್ವಾರ್ಧಗೋಳದವು. ಆಫ್ರಿಕಾದಲ್ಲಿ ಹೆಚ್ಚು ಪ್ರಭೇದಗಳಿವೆ. ಇದರಲ್ಲಿ ೩ ಪಂಗಡಗಳಿವೆ.

ಪೊದರು ಶ್ರೈಕ್‌ಗಳ ೩೯ ಪ್ರಭೇದಗಳೂ **ಶಿರಸ್ತ್ರಾಣ ಶ್ರೈಕ್‌ಗಳ** ೯ ಪ್ರಭೇದಗಳೂ ಆಫ್ರಿಕಾದಲ್ಲಿ ಮಾತ್ರ ಇವೆ. **ನಿಜಶ್ರೈಕ್‌ಗಳ** ೨೫ ಪ್ರಭೇದ ಆಫ್ರಿಕಾದಿಂದ ಆಸ್ಟ್ರೇಲಿಯಾವರೆಗೆ ಕಂಡುಬರುತ್ತದೆ. ಪಶ್ಚಿಮಾರ್ಧಗೋಳದಲ್ಲಿ ೨ ಪ್ರಭೇದ ಕಂಡುಬರುತ್ತವೆ.

ಅವು ವಾಸವಿರುವೆಡೆ ಧೈರ್ಯದಿಂದ ಎಲ್ಲರಿಗೂ ಕಾಣಿಸುವಂತಹ ತೆರಹು ಸ್ಥಳದಲ್ಲೇ ಕುಳಿತಿರುತ್ತದೆ. ಉತ್ತಮ ಹಾರಾಟ ಮಾಡಬಲ್ಲವು. ನಿಶ್ಶಬ್ದವಾಗಿ ಕುಳಿತು ಆಹಾರ ಕಂಡೊಡನೆ ಅದನ್ನು ಹಿಡಿಯುತ್ತವೆ. ಸಣ್ಣ ಗಾತ್ರವಿದ್ದಲ್ಲಿ ಕೊಕ್ಕಿನಲ್ಲೇ ಕಚ್ಚಿ ಹಿಡಿಯುತ್ತವೆ. ದಪ್ಪವಾದಲ್ಲಿ ಕಾಲಿನಿಂದ ಹಿಡಿದು ಕೊಂಡೊಯ್ಯುತ್ತವೆ. ಕೆಲವು ಸಮಯ ಹಾರಾಡುತ್ತಾ ಆಹಾರ ಹುಡುಕಿ ಗಿಡುಗನಂತೆ ಎರಗಿ ಹಿಡಿಯುತ್ತವೆ.

ಅವುಗಳ ಮುಖ್ಯಾಹಾರ ವಿವಿಧ ದಪ್ಪನೆಯ ಕೀಟಗಳು. ಕಾಲಿನಿಂದ ಒತ್ತಿ ಹಿಡಿದು ಕೊಕ್ಕಿನಿಂದ ಚೂರಾಗಿ ಹರಿದು ತಿನ್ನುತ್ತವೆ. ದಪ್ಪವಾಗಿದ್ದಲ್ಲಿ ಅವನ್ನು ಮುಳ್ಳುಗಳಿಗೆ ಚುಚ್ಚಿ ನೇತುಹಾಕಿ ಮುಂದೆ ಹರಿದು ತಿನ್ನುತ್ತವೆ. ತಮಗೆ ಬೇಕಾದ್ದಕ್ಕಿಂತ ಹೆಚ್ಚಾಗಿ ಕೊಲ್ಲುತ್ತವೆ. ಸಣ್ಣ ಪಕ್ಷಿಗಳ ಸಮೂಹ ಸಿಕ್ಕಿಬಿದ್ದಲ್ಲಿ ಮೊದಲು ಎಲ್ಲವನ್ನೂ ಮೊದಲು ಕೊಂದು ನಂತರ ಅವನ್ನು ತಿನ್ನಲಾರಂಭಿಸುತ್ತವೆ. ತಮ್ಮ ವ್ಯಾಪ್ತಿಯಲ್ಲಿ ಮುಳ್ಳು ಪೊದರನ್ನು ಚುನಾಯಿಸಿಟ್ಟು ಹೆಚ್ಚಾದ ಆಹಾರವನ್ನೆಲ್ಲಾ ಚುಚ್ಚಿ ಶೇಖರಿಸಿಡುತ್ತವೆ. ಮುಂದೆ ಆಹಾರ ಅಭಾವವಿದ್ದಾಗ ಅವನ್ನು ಸ್ವಲ್ಪಸ್ವಲ್ಪವಾಗಿ ತಿನ್ನುತ್ತವೆ.

ಒಂಟಿ ಜೀವಿಗಳು. ವಲಸೆ ಹೋಗುವುದಾದರೂ ಹೆಚ್ಚು ಸಂಖ್ಯೆಯಲ್ಲಿ ಒಟ್ಟಿ
ಸೇರುವುದಿಲ್ಲ. ವರ್ಷಕಾಲದಲ್ಲಿ ಕಡ್ಡಿಗಳ ದಪ್ಪ ಬಟ್ಟಲಿನಾಕಾರದ ಗೂಡನ್ನು ಕೊಂಬೆ
ಗಳಲ್ಲಿ ರಚಿಸಿ ಹುಲ್ಲು, ಕೂದಲು, ಗರಿಗಳಿಂದ ಒಳಗಡೆ ಮೆತ್ತೆ ಏರ್ಪಡಿಸುತ್ತವೆ. ೩ – ೬
ಮಾಸಲು ಬಣ್ಣದ ಕಂದು ಚುಕ್ಕೆಯ ಮೊಟ್ಟೆಯಿಡುತ್ತವೆ. ಹೆಣ್ಣೇ ಕಾವೀಯುವುದು.
ಗಂಡು ಆಹಾರ ಒದಗಿಸುತ್ತದೆ. ವರ್ಷಕಾಲದಲ್ಲಿ ನಿಶ್ಶಬ್ದವಾಗಿದ್ದರೂ ಇತರ ಸಮಯ
ದಲ್ಲಿ ಕೀರಲು ಧ್ವನಿಯಲ್ಲಿ ಕೂಗುತ್ತಿರುತ್ತವೆ.

ಆಫ್ರಿಕಾ ಪೊದರು ಪ್ರಭೇದಗಳು ಹೆಚ್ಚು ಬಣ್ಣವಿದ್ದು ಗಂಡು ಹೆಣ್ಣುಗಳಿಗೆ ಭೇದ
ವಿರುತ್ತದೆ. ಇತರ ಪಕ್ಷಿಗಳ ಗೂಡಿನಲ್ಲಿನ ಮೊಟ್ಟೆ ಮರಿಗಳನ್ನು ಅಪಹರಿಸುತ್ತವೆ.
ಕೀಟಾಹಾರಿಗಳಾದರೂ, ಕಪ್ಪೆ, ಇಲಿ, ಹಲ್ಲಿಗಳನ್ನೂ ತಿನ್ನುತ್ತವೆ. ಗೂಡುರಚನೆ ಮರಿ
ಮಾಡುವುದೆಲ್ಲಾ ಸಾಮಾನ್ಯ ಶ್ರೈಕ್‌ಗಳಂತೆಯೇ.

ಶಿರಸ್ತ್ರಾಣ ಪ್ರಭೇದ ದಟ್ಟ ವರ್ಣ ಹೊಂದಿದವು. ಅವುಗಳ ಶಿಖೆಯ ಗರಿಗಳು
ಹೊಳ್ಳೆಯಿಂದ ಮುಂದಕ್ಕೂ ಹರಡಿರುತ್ತವೆ. ಸಂಘಜೀವಿಗಳು. ಸಹರಾದ ದಕ್ಷಿಣ
ಭಾಗದ ಕಾಡುಗಳಲ್ಲಿ ವಾಸಿಸುತ್ತವೆ. ಪೂರ್ಣ ಕೀಟಾಹಾರಿಗಳು. ಮರದ ಮೇಲ್ಭಾಗ
ದಲ್ಲೇ ಹೆಚ್ಚು ಗಲಭೆ ಮಾಡುತ್ತಾ ಗುಂಪಾಗಿ ಸಂಚರಿಸುತ್ತವೆ. ಕೊಕ್ಕುಗಳನ್ನು ಸೇರಿಸಿ
ನಿರಂತರವಾಗಿ ಶಬ್ದಮಾಡುತ್ತವೆ. ಹಲವು ಜೊತೆ ಒಟ್ಟಾಗಿ ಗೂಡು ರಚಿಸಿ ಮೊಟ್ಟೆ
ಯಿಟ್ಟು ಮರಿಮಾಡುತ್ತವೆ. ಎತ್ತರದ ಮರದ ಕೊಂಬೆಗಳಲ್ಲಿ ಬಟ್ಟಲಿನಾಕಾರದ ಗೂಡು
ರಚಿಸುವುದು ಸಾಮಾನ್ಯ.

ಕುಟುಂಬ ೪೬ : ಸ್ಟರ್ನಿಡೀ (Sturnidae)
(ಸ್ಟಾರ್‌ಲಿಂಗ್‌ಗಳು)

ಒಟ್ಟು ೧೧೬ ಪ್ರಭೇದಗಳನ್ನೊಳಗೊಂಡ ಮುಖ್ಯವಾಗಿ ಪೂರ್ವಾರ್ಧಗೋಳದ
ಕುಟುಂಬ. ಅಲ್ಲಿಂದ ಹೆಚ್ಚಾಗಿ ವೃದ್ಧಿಸಿ ಅಮೇರಿಕಾದಲ್ಲೂ ಹರಡಿದೆ. ದ. ಅಮೇರಿಕಾ
ದಲ್ಲಿ ಮಾತ್ರ ಅವು ಹೆಚ್ಚಾಗಿಲ್ಲ. ಅವು ಚಟುವಟಿಕೆಯ ಸಾಧಾರಣ ಗಾತ್ರದ ದಟ್ಟ
ಕಾಲು, ಪಾದದವು. ಹಲವು ಕುಪ್ಪಳಿಸುತ್ತವೆ. ಆದರೆ ಅನೇಕ ಪ್ರಭೇದ ಅಲುಗಾಡುತ್ತಾ
ನಡೆಯುತ್ತವೆ. ಉತ್ತಮ ಹಾರಾಟಗಾರರು. ಹತ್ತು ಪ್ರಥಮ ಗರಿಗಳಲ್ಲಿ ಕೊನೆಯದು
ಗಿಡ್ಡವಾಗಿರುತ್ತದೆ. ಬಾಲ ಗಿಡ್ಡ, ತುದಿ ಚದುರ, ದುಂಡು ಅಥವಾ ಚೂಪಾಗಿರ
ಬಹುದು.

ಕಪ್ಪು ಅಥವಾ ದಟ್ಟಕಂದು ಹೊಳಪು ವರ್ಣದವು ಹೆಚ್ಚು. ಸಾಮಾನ್ಯ ಕಂದು,
ಬಿಳುಪು, ಹಳದಿ ಮತ್ತು ಬೂದು ಬಣ್ಣದವೂ ಇರಬಲ್ಲವು. ಹಲವು ಶಿಖೆ ಹೊಂದಿವೆ.
ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸವಿರಬಹುದು ಅಥವಾ ಇಲ್ಲದಿರಬಹುದು. ವರ್ಷಕ್ಕೊಂದಾ
ವರ್ತಿ ಗರಿ ಉದುರಿಸುತ್ತವೆ. ಋತುಮಾನಕ್ಕೆ ಹೊಂದಿದಂತೆ ಅವುಗಳಲ್ಲಿ ವರ್ಣ ವ್ಯತ್ಯಾಸ
ವಾಗುತ್ತದೆ. ಹಲವು ಪ್ರಭೇದಗಳು ಮಾತ್ರ ಕಾಡುವಾಸಿಗಳು. ಉಳಿದವೆಲ್ಲಾ ಮೈದಾನ,

ಪೊದರುಗಳಲ್ಲೂ, ಮತ್ತು ವ್ಯವಸಾಯ ಪ್ರದೇಶದಲ್ಲೂ ವಾಸಿಸುತ್ತವೆ. ಕೀಟ ಮತ್ತು ಹಣ್ಣು ಮುಖ್ಯಾಹಾರ. ಮಾನವ ನಿವಾಸದ ಬಳಿಯವು ಎಲ್ಲಾ ವಿಧದ ಆಹಾರವನ್ನೂ ತಿನ್ನಬಲ್ಲವು.

ಸಾಮಾನ್ಯ ಸ್ಟಾರ್‌ಲಿಂಗ್ ಪೂರ್ಣ ಕೀಟಾಹಾರಿ. ಬೂದು ಸ್ಟಾರ್‌ಲಿಂಗ್ ಜಪಾನ್‌ನಲ್ಲಿ ರಕ್ಷಣೆಗೆ ಒಳಗಾಗಿದ್ದು, ಬತ್ತದ ಕಾಂಡ ಕೊರೆಯುವ ಪತಂಗ ಹುಳುಗಳನ್ನು ಮಾತ್ರ ಆರಿಸಿ ತಿಂದು ಅನುಕೂಲ ಮಾಡುತ್ತವೆ. ಉಪದ್ರವಕಾರೀ ಕೀಟಗಳನ್ನೇ ಹೆಚ್ಚಾಗಿ ಅವು ತಿನ್ನುವುದರಿಂದ ಮನುಷ್ಯನಿಗೆ ಉಪಯುಕ್ತ ಪಕ್ಷಿ ಕುಟುಂಬ. ಪರ್ವ ಕಾಲದಲ್ಲಿ ಬೋಳುತಲೆಯಾಗಿ ವರ್ಣರಂಜಿತ ಚರ್ಮ ಹೊಂದುವ ಆಫ್ರಿಕಾದ ಪ್ರಭೇದ ವಿನಾಶಕಾರೀ ಮಿಡತೆಯನ್ನೇ ತಿಂದು ಅನುಕೂಲ ಮಾಡುವುದರಿಂದ ಅದಕ್ಕೆ ಪೂರ್ಣ ರಕ್ಷಣೆ ದೊರೆತಿದೆ.

ಸಂಘಜೀವಿಗಳು. ದೊಡ್ಡ ಗುಂಪಾಗಿ ವಲಸೆ ಹೋಗುತ್ತವೆ. ಬೆಳಗ್ಗೆ ಹೊರ ಹೊರಟಾಗ ಮತ್ತು ಸಂಜೆ ವಿಶ್ರಮಿಸುವುದಕ್ಕೆ ಮುಂಚೆ, ದೀರ್ಘಕಾಲ ಶಿಸ್ತಿನಿಂದ ಹಾರಾಡುತ್ತವೆ. ಗೊಂದಲ ಪಕ್ಷಿಗಳು. ಯಾವಾಗಲೂ ಚಿಲಿಪಿಲಿಗುಟ್ಟುತ್ತಿರುತ್ತವೆ. ಹಲವು ಉತ್ತಮ ಅನುಕರಣೆಯ ಪ್ರಭೇದಗಳೂ ಇದರಲ್ಲಿವೆ. ಭಾರತದಿಂದ ಸಿಲೋನ್ ವರೆಗಿನ **ಕಾಡು ಮೈನಾ** ಪಕ್ಷಿಗಳು ಅವುಗಳಲ್ಲಿ ಉತ್ತಮವಾದವು. ೧೨–೧೫ ಅಂಗುಲ ಉದ್ದದ ಕಪ್ಪು ಮೈ, ಕೆಂಪು ಕೊಕ್ಕು ಮತ್ತು ಕಾಲು ಹೊಂದಿವೆ, ತಲೆಯಬಳಿ ಸುಂದರಾಕಾರದ ಹಳದಿ ಜೋಲು ಮಾಂಸ ಪಟ್ಟೆಯಿದೆ. ಉತ್ತಮವಾಗಿ ಧ್ವನಿಯನ್ನು ಅನುಕರಿಸಬಲ್ಲವು. ಕಾಡಿನಲ್ಲಿ ೧೫–೨೦ರ ಗುಂಪಾಗಿ ಹಣ್ಣು ಹುಡುಕುತ್ತಾ ಸಂಚರಿಸುತ್ತಿರುತ್ತವೆ. ಮೈನಾಗಳು ೯–೧೦ ಅಂಗುಲದ ಕಂದು ಕಪ್ಪು ವರ್ಣದವು. ರೆಕ್ಕೆಯಲ್ಲಿ ಬಿಳಿಯ ಮಚ್ಚೆಯಿರುತ್ತದೆ. ನೆಲದಮೇಲೆ ಆಹಾರ ಹೊಂಚಬಲ್ಲವು. ಅದರ ಇನ್ನೂ ಮೂರು ಪ್ರಭೇದ ನ್ಯೂಗಿನಿಯ ಬಳಿಯಿಂದೆ.

ಆಫ್ರಿಕಾದಲ್ಲಿ ಈ ಕುಟುಂಬದ ಹೆಚ್ಚಿನ ಪ್ರಭೇದಗಳಿವೆ. ವಿವಿಧ ನೀಳ ಬಾಲದ ಮತ್ತು ವರ್ಣದ ಪ್ರಭೇದಗಳು ಅಲ್ಲಿ ಹೆಚ್ಚು. ಮರವಾಸಿಗಳೂ ನೆಲವಾಸಿಗಳೂ ಸೇರಿ ಕೀಟ ಮತ್ತು ಹಣ್ಣು ತಿಂದು ಜೀವಿಸುತ್ತವೆ. ಹೆಚ್ಚಾಗಿ ಪೊಟರೆ ಗೂಡಿನವು. ತಾವೇ ರಚಿಸಿದ ಅಥವಾ ಇತರ ಪಕ್ಷಿಗಳು ತ್ಯಜಿಸಿದ ಪೊಟರೆಗಳಲ್ಲಿ ಹೆಣ್ಣು ಗಂಡುಗಳೆರಡೂ ಸೇರಿಯೇ ಗೂಡು ರಚಿಸುತ್ತವೆ. ಮನೆ ಮಾಡುಗಳಲ್ಲೂ ಕಲ್ಲು ಬದುಗಳಲ್ಲೂ ಹಲವು ಗೂಡು ರಚಿಸಬಲ್ಲವು. ಮೊಟ್ಟೆ ಸಾಮಾನ್ಯವಾಗಿ ಮಾಸಲು ಹಸಿರು. ಕೆಲವು ಮಾತ್ರ ಬಿಳುಪು ಮತ್ತು ಚುಕ್ಕೆ ಹೊಂದಿರಬಹುದು. ದಕ್ಷಿಣ ಶಾಂತಿಸಾಗರ ದ್ವೀಪವಾಸಿ.

ಹೊಳಪು ಸ್ಟಾರ್‌ಲಿಂಗ್ ಮರ ಕೊಂಬೆ ತುದಿಯಲ್ಲಿ ಜೋತಾಡುವ ನೀಳ ಗೂಡು ರಚಿಸುತ್ತವೆ. ಆಫ್ರಿಕಾದ **ಜೋಲು ಮಾಂಸ ತಲೆಯ** ಪ್ರಭೇದಗಳು ಕಡ್ಡಿ–ಹುಲ್ಲಿನ ಗೋಳಾಕಾರದ ದೊಡ್ಡ ಗೂಡು ರಚಿಸುತ್ತವೆ. ಹಲವು ಜೊತೆ ಒಂದಕ್ಕೊಂದು

ಅಂಟಿದಂತೆ ಗೂಡನ್ನು ಮುಳ್ಳು ಪೊದರುಗಳಲ್ಲಿ ರಚಿಸಬಹುದು. **ನಸುಗೆಂಪು ಸ್ಟಾರ್** ಆಹಾರ ಹೆಚ್ಚಾಗಿದ್ದ ಕಡೆ ಅವಸರದಿಂದ ಕಲ್ಲು ಗೋಡೆಗಳ ಪೊಟರೆಗಳಲ್ಲಿ ಕಡ್ಡಿ ಹುಲ್ಲುಸೇರಿದ ಗೂಡು ರಚಿಸಿ ೫–೬ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ಕಾವಿಗೆ ಕೂತು ಮರಿಮಾಡುತ್ತದೆ. **ಸಾಮಾನ್ಯ ಸ್ಟಾರ್‌ಲಿಂಗ್‌ಗಳು** ಸಾಮೂಹಿಕವಾಗಿ ಒಂದೇ ಸ್ಥಳದಲ್ಲಿ ಗೂಡುಗಳನ್ನು ರಚಿಸಬಲ್ಲವು. ಕೆಲವು ಬೇರೆ ಬೇರೆ ಗೂಡು ರಚಿಸುತ್ತವೆ. ಹಲವು ಕಡ್ಡಿ ಹುಲ್ಲು ಚೂರಿನಿಂದ ತಟ್ಟೆಯಾಕಾರದ ಗೂಡು ರಚಿಸಿ ४–೫ ಮೊಟ್ಟೆ ಯಿಟ್ಟು ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ. ವರ್ಷಕ್ಕೆ ೨–೩ ಸಲ ಮರಿಮಾಡಬಲ್ಲವು. ಆದರೆ ಇವೆಲ್ಲವೂ ಕೊಳಕು ಪಕ್ಷಿಗಳು. ಗೂಡಿನಲ್ಲೇ ಮರಿ, ತಂದೆ, ತಾಯಿ ಹಿಕ್ಕೆ ಹಾಕಿ ಗೂಡು ದುರ್ನಾತ ಬೀರುತ್ತವೆ.

ಸಾಮಾನ್ಯ ಸ್ಟಾರ್‌ಲಿಂಗ್‌ಗಳು ಮಾನವನಿಂದ ಹರಡಲ್ಪಟ್ಟ ಕಶೇರುಕ ವರ್ಗದವು. ಗುಬ್ಬಚ್ಚಿ, ಇಲಿ, ದಪ್ಪಿಲಿಗಳಂತೆ ಇವೂ ಮಾನವರಿಂದಲೇ ತಿಳಿದೋ ತಿಳಿಯದೆಯೋ ಹರಡಲ್ಪಟ್ಟದ್ದು. ೧೮೭೦ರಿಂದ ೧೯೦೦ರ ಅವಧಿಯಲ್ಲಿ ಈ ಸಾಮಾನ್ಯ ಸ್ಟಾರ್ ಲಿಂಗ್‌ಗಳನ್ನು ಅಮೇರಿಕಾದಲ್ಲಿ ಪಳಗಿಸಲು ಅನೇಕ ಪ್ರಯತ್ನಗಳಾದವು. ಅವುಗಳಲ್ಲಿ ೧೮೯೦ರಲ್ಲಿ ನ್ಯೂಯಾರ್ಕಿನ ಮಧ್ಯೆ ಪಾರ್ಕ್‌ನಲ್ಲಿ ಬಿಡಲಾದ ೧೦೦ ಪಕ್ಷಿಗಳು ಕೂಡಲೇ ವೃದ್ಧಿಸಲಾರಂಭಿಸಿದವು. ಕ್ರಮೇಣ ಹೆಚ್ಚುತ್ತಾ ಹೊಸಹೊಸ ಜಾಗಗಳಿಗೆ ವಲಸೆ ಹೊರಟು, ಅನುಕೂಲವಿದ್ದೆಡೆ ನೆಲೆಸಿ ವೃದ್ಧಿಸಿ ೧೯४೦ರ ವೇಳೆಗೆ ಕೋಟ್ಯಂತರ ಅಮೇರಿಕಾದ ಎಲ್ಲೆಡೆ ಹರಡಿವೆ. ಕೀಟಾಹಾರಿಗಳಾದ್ದರಿಂದ ಉಪದ್ರವಕಾರಿ ಕೀಟಗಳ ನಾಶಕ್ಕಾಗಿ ಈ ಕಾರ್ಯ ಕೈಗೊಂಡಿದ್ದರೂ, ಅವು ವಿವಿಧ ಕಾಳು, ಹಣ್ಣುಗಳನ್ನೂ ತಿನ್ನಲಾರಂಭಿಸಿ ಉಪದ್ರವಕಾರಿಯಾಗಿವೆ. ಇತರ ಪಕ್ಷಿಗಳ ಬೆಳವಣಿಗೆಗೂ ಅವು ಅಡ್ಡಿ ಯಾಗಿವೆ. ಅಲ್ಲದೆ ದೊಡ್ಡ ಪಟ್ಟಣಗಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ವಲಸೆ ಬಂದು ಎಲ್ಲಾ ಮರ ಮನೆಗಳಲ್ಲಿ ಕುಳಿತು ವಿಶ್ರಮಿಸಿ ತಮ್ಮ ಹಿಕ್ಕೆಯಿಂದ ಹೆಚ್ಚು ಗಲೀಜು ಮಾಡಿ ತೊಂದರೆಪಡಿಸುತ್ತವೆ. ಅವುಗಳನ್ನು ನಾಶಪಡಿಸಲು ಅನೇಕ ಕಾರ್ಯಕ್ರಮ ಕೈಗೊಂಡು ಈಗ ಸ್ವಲ್ಪ ಕಡಮೆ ಸಂಖ್ಯೆಯಲ್ಲಿವೆ.

ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡಿನಲ್ಲೂ ಇವುಗಳ ವಿವಿಧ ಪ್ರಭೇದಗಳನ್ನು ತಂದುಬಿಟ್ಟು ಇದೇರೀತಿಯ ತೊಂದರೆ ಉತ್ಪನ್ನವಾಗಿದೆ. ವಾಂಕೂವರ್ ಮತ್ತು ಬ್ರಿ. ಕೊಲಂಬಿಯಾಗಳಲ್ಲಿ ಮೈನಾಗಳು ಅತಿಯಾಗಿ ಹೆಚ್ಚುತ್ತಿವೆ.

ಇವುಗಳಲ್ಲಿ ಇನ್ನೂ ಹಿಂದುಳಿದಿರುವ ಕೆಂಪು ಮತ್ತು ಹಳದಿ ಕೊಕ್ಕಿನ, ಉಣ್ಣೆ ಹಕ್ಕಿಗಳು (ಆಕ್ಸ್‌ಪೆಕ್ಕರ್) ಆಫ್ರಿಕಾ ವಾಸಿಗಳು. ಅವು ದಪ್ಪ ದೇಹದ ಇತರ ಪ್ರಾಣಿ ಗಳಮೇಲೆ ಕುಳಿತು ವಾಸಿಸುತ್ತಾ, ಮೈಮೇಲಿನ ಉಣ್ಣೆ ಮತ್ತಿತರ ಕೀಟಗಳನ್ನು ತಿಂದು ಜೀವಿಸುತ್ತವೆ. ಉಣ್ಣೆಯನ್ನು ಎಳೆದಾಗ ಆಗುವ ಗಾಯದಿಂದ ಬಂದ ರಕ್ತವನ್ನು ಹೀರುತ್ತವೆ. ಮರಕುಟುಕ ಮರ ಹತ್ತಿ ಸುತ್ತಿ ತಿರುಗುವಂತೆ, ದೊಡ್ಡ ದೇಹದ ಕಾಡು ಹಾಗೂ ಸಾಕುಪ್ರಾಣಿಗಳ ಮೈ ಏರಿ ಸುತ್ತುವರಿದು ಉಣ್ಣೆ ಹುಡುಕುತ್ತವೆ. ಉಣ್ಣೆ

ತೆಗೆಯುವುದರಿಂದ ಪ್ರಾಣಿಗಳಿಗೂ ಉಪಯುಕ್ತ. ಅಲ್ಲದೆ ಎಚ್ಚರಿಕೆಯಿಂದಿದ್ದು ಅಪಾಯವಿದ್ದಲ್ಲಿ ಕೂಗಿ ಸೂಚನೆ ಕೊಡುತ್ತವೆ.

ಪೊಟರೆ ಗೂಡಿನವು, ಉದ್ದ ಮರದಲ್ಲಿ ಅಥವಾ ಮಾಡಿನಡಿಯಲ್ಲಿ ಗೂಡಂ ರಚಿಸುತ್ತವೆ. ಸಣ್ಣ ತೆರವು ಗೂಡು ಕಡ್ಡಿ ಹುಲ್ಲುಂಗಳಿಂದ ರಚಿಸಿ ಒಳಗೆ ಕೂದಲುಂ ಹರಡಿ ೩ – ೫ ಬಿಳುಪು ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಕುಟುಂಬ ೪೭ : ಮೆಲಿಫಾಗಿಡೀ (Meliphagidae)

(ಜೇನು ಭಕ್ಷಕಗಳು Bee - eaters)

ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನ ೧೬೦ ಪ್ರಭೇದಗಳು. ಸಣ್ಣ ಗಾತ್ರದ ಸಾಮಾನ್ಯ ಅಥವಾ ವಿವಿಧ ವರ್ಣದ, ದಟ್ಟ ಗಿಡ್ಡ ಕಾಲುಗಳ ಪಕ್ಷಿ. ಹಗುರ ವರ್ಣವಾದಲ್ಲಿ ಮಾಸಲು ಕಂದು, ಹಸಿರು ಅಥವಾ ಬೂದು ಹಳದಿಯಾಗಿರಬಹುದು. ದಟ್ಟ ವರ್ಣವಾದಲ್ಲಿ ಕಪ್ಪು ಕೆಂಪು ಬಿಳುಪುಗಳ ವಿವಿಧ ಪಟ್ಟೆ, ಮಚ್ಚೆ ಹೊಂದಿರಬಲ್ಲವು. ಕಾಡು ಪೊದರುಗಳಲ್ಲಿ ವಾಸಿಸಿ ಜೇನು ತಿನ್ನುತ್ತವೆ. ಅದಕ್ಕೆ ಅನುಕೂಲವಾಗುವಂತೆ ನೀಳ ಕೊಕ್ಕು ತೆಳುವಾಗಿ ಕೆಳಬಾಗಿರುತ್ತದೆ. ನಾಲಿಗೆ ನೀಳವಾಗಿ ತುದಿಯಲ್ಲಿ ಬ್ರಷ್‌ನಂತಹ ಕೂದಲು ಗುಚ್ಛವಿರುತ್ತದೆ. ನಾಲಗೆಯನ್ನು ಕೊಳವೆಯಂತೆ ಸುರುಳಿ ಸುತ್ತಬಲ್ಲವು. ಇದರಿಂದ ಹೂವಿನ ಮಧು ಹೀರಲು ಅನುಕೂಲ.

ನೀಲಗಿರಿ ತೈಲ (ಯೂಕಲಿಪ್ಟಸ್) ತೋಟಗಳಲ್ಲಿನ ಶಿರಸ್ತ್ರಾಣ ಹೊಂದಿದ ಜೇನು ಭಕ್ಷಕ, ಮಾಸಲು ಹಸಿರು ಬಣ್ಣದವು. ಕತ್ತು ತಲೆಯಂಬಳಿ ಹಳದಿ ಗರಿಗಳ ಮಚ್ಚೆಯಿದೆ. ಹಲವು ವಿಧದ ಹೂಗಳು ಅವುಗಳಿಂದಲೇ ಪರಾಗದಾನ ಹೊಂದುವಂತೆ ರಚಿತವಾಗಿವೆ. ಗುಂಪಾಗಿ ಸಂಚರಿಸುತ್ತಾ ಮಧು ಹೀರುತ್ತವೆ. ಅತ್ಯಂತ ಗಲಭೆಮಾಡಿ ಉತ್ತಮ ಹೂಗಳಿಗಾಗಿ ತಮ್ಮತಮ್ಮಲ್ಲಿಯೇ ಜಗಳವಾಡುತ್ತಾ ಕೂಗಾಡುವ ಪಕ್ಷಿ ಪ್ರಭೇದಗಳಿವು. ಮರ ಕೊಂಬೆಗಳಲ್ಲಿ ತೆರೆದ ಬಟ್ಟಲಿನಂತಹ ಸಣ್ಣ ಗೂಡನ್ನು ಕಡ್ಡಿ, ಹುಲ್ಲುಗಳಿಂದ ರಚಿಸಿ ಒಳಗೆ ಕೂದಲಿನ ಮೆತ್ತೆ ಏರ್ಪಡಿಸಿ ೨ – ೩ ಮೊಟ್ಟೆಯಿಟ್ಟು ಮರಿ ಮಾಡುತ್ತವೆ.

ಶಾಂತಿಸಾಗರದ್ವೀಪಗಳಲ್ಲಿ ಇನ್ನೊಂದು ಗುಂಪಿದೆ. ೪ – ೬ ಅಂಗುಲ ಉದ್ದದ ವಿವಿಧ ದಟ್ಟ ವರ್ಣಗಳಿವು. ಗಂಡು ಹೆಚ್ಚು ವರ್ಣರಂಜಿತ. ಕೆಲವು ಪ್ರಭೇದದಲ್ಲಿ ಎರಡೂ ಉತ್ತಮ ವರ್ಣ ಹೊಂದಿರುತ್ತವೆ. ಹೆಣ್ಣೇ ಗೂಡು ರಚನೆಯಲ್ಲಿ ಹೆಚ್ಚು ಪಾತ್ರವಹಿಸುವುದು. ಗಂಡು ಅದಕ್ಕೂ ಮರಿಗಳಿಗೂ ಆಹಾರ ಒದಗಿಸುತ್ತದೆ.

ಜೋಲು ಮಾಂಸದ ಬೋಳು ಪಕ್ಷಿಗಳು ಆಸ್ಟ್ರೇಲಿಯಾದವು ಬೂದು ವರ್ಣದ ದಪ್ಪ ಗಾತ್ರದವು. ಹೆಚ್ಚು ಗಲಭೆಮಾಡುತ್ತವೆ. ಒಂದು ಪ್ರಭೇದಕ್ಕೆ ಪೂರ್ಣ ಬೋಳು ಕಪ್ಪು ತಲೆಯೂ, ಕತ್ತಿನ ಬಳಿ ಬಿಳಿ ಕೂದಲು ಗುಚ್ಛವೂ ಇದೆ. ಹಣ್ಣಿ ತೋಟಗಳಲ್ಲಿ ಹೆಚ್ಚಾಗಿದ್ದು ಹಣ್ಣುಗಳನ್ನು ತಿಂದು ನಾಶಪಡಿಸುತ್ತವೆ. ಇವೆಲ್ಲಕ್ಕೂ

ಕಣ್ಣಿನಬಳಿ ಜೋಲು ಮಾಂಸದ ವಿವಿಧ ವರ್ಣದ ಮಚ್ಚೆ ಹೊಂದಿ, ಹಣ್ಣು, ಜೇನು ಕುಡಿಯುತ್ತವೆ. ದಪ್ಪ ಗಾತ್ರದ ಉತ್ತಮ ರುಚಿಕರ ಮಾಂಸ ಪಕ್ಷಿಗಳಾಗಿದ್ದು ಸಾಮೂಹಿಕವಾಗಿ ಕೊಲ್ಲಲ್ಪಡುತ್ತಿದ್ದುವು. ಈಗ ರಕ್ಷಣೆಗೆ ಒಳಗಾಗಿವೆ.

ಉತ್ತಮ ಹಾಡುಗಾರರೂ ಇವೆ. **ಟುಯಿ್** ನ್ಯೂಜಿಲೆಂಡಿನ ಉತ್ತಮ ಹಾಡುಗಾರ ಪಕ್ಷಿ. ಅದರ ಕತ್ತಿನ ಇಕ್ಕೆಡೆಗಳಲ್ಲೂ ಬಿಳಿ ಗರಿ ಮಚ್ಚೆ ಇದೆ. **ಗಂಟೆಪಕ್ಷಿ** ೯ ಅಂಗುಲ ಉದ್ದದ ಕಾಡುವಾಸಿ. ಅವುಗಳ ಇಂಚರ ಘಂಟಾನಾದದಂತೆ ಬಹು ದೂರ ಕೇಳಿಸುತ್ತದೆ. **ಹೊಲಿಗೆ ಪಕ್ಷಿ** ೬ – ೭ ಅಂಗುಲ ನೀಳವಿದ್ದು 'ಟಿಕ್ ಟಿಕ್' ಎಂಬ ಕಲ್ಲು ಕುಟ್ಟಿದ ಶಬ್ದ ಮಾಡುತ್ತವೆ. ಗಂಡು ಹೊಳಪು ಕಪ್ಪು ಮೇಲೆ ಹೊಂದಿರುತ್ತದೆ. ಎದೆ ಮತ್ತು ರೆಕ್ಕೆಯಡಿಯಲ್ಲಿ ಹಳದಿ ಪಟ್ಟೆಯಿಂದೆ. ಮರ ಪೊಟರೆಯಲ್ಲಿ ಗೂಡು ರಚಿಸುವವು. ೫ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಪೂರ್ಣ ಮಧು ಆಹಾರಿಗಳು. ಮರಿಗಳಿಗೂ ಮಧುವನ್ನೇ ಉಣಿಸುತ್ತವೆ.

ದಕ್ಷಿಣ ಆಫ್ರಿಕಾದ ಎರಡು ಪ್ರಭೇದಗಳನ್ನು ಈ ಕುಟುಂಬಕ್ಕೆ ಸೇರಿಸಲಾಗಿದೆ. ಅವು ದಕ್ಷಿಣ ತುದಿಯಲ್ಲಿ ಮಾತ್ರ ಕಂಡುಬರುತ್ತವೆ. ರಚನೆ ಮತ್ತು ಚಲನೆಯಲ್ಲಿ ಈ ಕುಟುಂಬ ಪಕ್ಷಿಗಳನ್ನು ಹೋಲುವಂತಿದ್ದರೂ, ಅತಿ ಸಣ್ಣ ದೇಹದ ನೀಳ ಬಾಲ, ಕೊಕ್ಕು ಹೊಂದಿರುವ ಪಕ್ಷಿಗಳಿವು. ನಾಲಗೆ ರಚನೆ ಇವುಗಳಂತೆಯೇ ಇದ್ದು ಮಧುವೇ ಮುಖ್ಯಾಹಾರ. ಆದರೆ ಹಲವು ಬಗೆಯ ಕೀಟಗಳನ್ನೂ ತಿನ್ನುತ್ತವೆ. ಅವುಗಳ ನೀಳ ಬಾಲ ಸೇರಿ ೧೬ – ೧೭ ಅಂಗುಲ ನೀಳವಿರಬಲ್ಲವು. ಅವೂ ಬಟ್ಟಲಿನಾಕಾರದ ಗೂಡು ರಚಿಸಿ ಒಳಗಡೆ ಸಸ್ಯಭಾಗಗಳ ಮೆತ್ತೆ ಏರ್ಪಡಿಸಿ, ೨ ಮೊಟ್ಟೆಯಿಟ್ಟು ಮರಿಮಾಡುತ್ತವೆ.

ಕುಟುಂಬ ೪೮ : ನೆಕ್ಟ್ಯಾರಿನಿಡೀ (Nectariniidae)

(ಸೂರ್ಯಪಕ್ಷಿಗಳು Sun-birds)

ಇವು ಪೂರ್ವಾರ್ಧಗೋಳದವು. ಪಶ್ಚಿಮಾರ್ಧಗೋಳದ ಝೇಂಕಾರ ಪಕ್ಷಿಗಳನ್ನು ಹೋಲುತ್ತವೆ. ಅವುಗಳಂತೆಯೇ ವಿವಿಧ ವರ್ಣರಂಜಿತ, ಸಣ್ಣ ಗಾತ್ರದ ಸುಂದರ ಪಕ್ಷಿಗಳು. ಆದರೆ ಝೇಂಕಾರ ಪಕ್ಷಿಗಳಷ್ಟು ನುರಿತ ಹಾರಾಟಗಾರರಲ್ಲ. ಅವು ಹೂವಿನ ಬಳಿ ಕುಳಿತು ಆಹಾರ ಹೊಂದುತ್ತವೆ. ದಪ್ಪ ಗಾತ್ರದ ಹೂ ತಳದಲ್ಲಿ ತಮ್ಮ ಕೊಕ್ಕುಗಳಿಂದ ತೂತು ಕೊರೆದು ಮಧು ಹೀರುತ್ತವೆ. ಹಲವು ಹಾರುತ್ತಾ ತೇಲಿ ಕೀಟಗಳನ್ನೂ ಹಿಡಿದು ತಿನ್ನುತ್ತವೆ. ಅವುಗಳ ನೀಳ ಕೊಕ್ಕು ತೆಳುವಾಗಿ ಗರಗಸದಂತಹ ಕಚ್ಚು ಹೊಂದಿರಬಲ್ಲವು. ಆದರೆ ಅವುಗಳ ನಾಲಗೆ ವಿಚಿತ್ರ ರಚನೆ ಹೊಂದಿವೆ. ತುದಿಯ ಅರ್ಧ ಭಾಗ ಜೋಡು ಕೊಳವೆಯಂತಿದ್ದು, ತುದಿಯಲ್ಲಿ ೨ ಅಥವಾ ೩ ಕವಲಾಗಿರುತ್ತದೆ.

ಒಟ್ಟು ೧೦೪ ಪ್ರಭೇದಗಳಿವೆ. ಎಲ್ಲಾ ೯ ಅಂಗುಲಕ್ಕಿಂತ ಕಡಮೆ ಉದ್ದವಿರುವುವು. ಹಿಂದೆರಡು ಪ್ರಭೇದಗಳಲ್ಲಿ ಮಧ್ಯ ಬಾಲ ಪುಕ್ಕ ೨ – ೩ ಅಂಗುಲ ನೀಳವಾಗಿ ಬೆಳೆದಿರಬಲ್ಲದು, ಹೆಣ್ಣು ಗಂಡುಗಳಲ್ಲಿ ಹೆಚ್ಚಿನ ವ್ಯತ್ಯಾಸವಿದ್ದು, ಗಂಡುಗಳು ಮಾತ್ರ ವರ್ಣ

ರಂಜಿತ. ಆಫ್ರಿಕಾದಲ್ಲಿ ಹೆಚ್ಚು. ಏಷ್ಯಾ, ಮಲಯಾ, ಆಸ್ಟ್ರೇಲಿಯಾ ಮತ್ತು ಶಾಂತಿ ಸಾಗರದ ಹಲವು ದ್ವೀಪಗಳಲ್ಲಿ ವಾಸಿಸುತ್ತವೆ. ಎಲ್ಲವೂ ಸ್ಥಳವಾಸಿಗಳು.

ನೀಳವಾಗಿ ಜೋತಾಡುವ ಹಣಚೀಲದಾಕಾರದ ಗೂಡು ರಚಿಸುತ್ತವೆ. ಮಿಕ್ಕವುಗಳ ಗೂಡು ಹೊರಭಾಗದಲ್ಲಿ ಹರುಕಲಾಗಿರುತ್ತದೆ. ತಳಭಾಗದಲ್ಲಿ ತುಪ್ಪಟ, ಮೃದು ಪುಕ್ಕಗಳ ಮೆತ್ತೆ ರಚಿಸಿ ಮೇಲ್ತುದಿಯುಬಳಿ ಒಳಹೋಗಲು ಬಾಗಿಲಿಟ್ಟಿರುತ್ತದೆ.

ಗೂಡು ರಚನೆಯಲ್ಲಿ ಹೆಣ್ಣು ಮುಖ್ಯ ಭಾಗವಹಿಸುವುದು. ಕಾವೀಯುವುದೂ ಅದೇ. ಬಿಳಿ ಅಥವಾ ಮಾಸಲು ಬಣ್ಣದ ಚುಕ್ಕೆಯುಳ್ಳ ೨ ಮೊಟ್ಟೆಯಿಟ್ಟು, ೧೩–೧೪ ದಿನ ಕಾವಿತ್ತು ಮರಿಮಾಡುತ್ತವೆ.

ಮಧ್ಯಪ್ರಾಚ್ಯದಲ್ಲಿ ಜೇಡನನ್ನು ತಿನ್ನುವ ೯ ಪ್ರಭೇದಗಳಿವೆ. ಅವು ಹಸಿರು–ಹಳದಿ ಸಾಮಾನ್ಯ ಬಣ್ಣ ಹೊಂದಿದವು. ಹೆಣ್ಣು ಗಂಡುಗಳಲ್ಲಿ ಹೆಚ್ಚಿನ ಭೇದವಿಲ್ಲ. ೬–೮ ಅಂಗುಲ ಉದ್ದ ದೇಹ. ಅತಿ ನೀಳ ತಳಬಾಗಿದ ಕೊಕ್ಕು ಹೊಂದಿರುವ ಕೀಟಾಹಾರಿಗಳು. ಮಧುವನ್ನೂ ಹೀರಬಲ್ಲವು. ಒಂದು ಪ್ರಭೇದ ಬಾಳೆ ಹೂವುಗಳನ್ನೂ ಕೊರೆದು ಮಧು ಹೀರುತ್ತವೆ. ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಆದರೆ ಆ ಬಟ್ಟಲನ್ನು ಅಗಲ ಎಲೆಗಳ ತಳಭಾಗದಲ್ಲಿ ಅಂಟಿಕೊಳ್ಳುವಂತೆ ಜೇಡರ ಬಲೆ ದಾರದಿಂದ ಹೊಲಿಯುತ್ತವೆ! ಒಳಹೋಗಲು ರಂಧ್ರ ಪಕ್ಕದಲ್ಲಿರುತ್ತದೆ. ಹೆಣ್ಣು ಗಂಡುಗಳೆರಡೂ ಸೇರಿ ಗೂಡು ರಚಿಸಿ ಮರಿ ಪೋಷಿಸುತ್ತವೆ.

ಕುಟುಂಬ ೪೯ : ಡಿಕಾಯಿಡೀ (Dicaeidae)

(ಹೂವು ಕೊರೆಯುವುವು)

ಆಸ್ಟ್ರೇಲಿಯಾ ಮತ್ತು ಮಧ್ಯಪ್ರಾಚ್ಯದ ಬಹು ಸಣ್ಣ ಗಾತ್ರ ಪಕ್ಷಿಗಳಿವು. ೩ರಿಂದ ೬ ಅಂಗುಲ ನೀಳವಿರುತ್ತವೆ. ಒಟ್ಟು ೬ ಜಾತಿಯ ೫೪ ಪ್ರಭೇದಗಳನ್ನೊಳಗೊಂಡಿದೆ. ಸೂರ್ಯಪಕ್ಷಿಗಳಂತೆಯೇ ನೀಳ ಕೊಳವೆಯಾಕಾರ ನಾಲಗೆ, ಕಚ್ಚು ಇರುವ ಕೊಕ್ಕು ಇದ್ದರೂ, ಗಿಡ್ಡವಾಗಿ ದಟ್ಟ ಕೆಳಬಾಗಿದವು. ತೆಲು ನೀಳವಲ್ಲ. ಅನೇಕ ಜೇನು ಭಕ್ಷಕ ಮತ್ತು ಸೂರ್ಯಪಕ್ಷಿಗಳಿಗಿರುವಂತಹ ಬೋಳು ಮಾಂಸ ಮುಚ್ಚೆ ಇರುವುದಿಲ್ಲ. ಒಂದೇ ಒಂದು ಪ್ರಭೇದಕ್ಕೆ ಶಿಖೆಯಿದೆ.

ವರ್ಣರಂಜಿತ ಪಕ್ಷಿಗಳಿಗೆ ಕೆಲವಕ್ಕೆ ಮಾತ್ರ ತಳಭಾಗದಲ್ಲಿ ಪಟ್ಟೆಗಳಿವೆ. ಹಣ್ಣು ಮತ್ತು ಕಾಯಿಗಳೇ ಮುಖ್ಯಾಹಾರ. ಮಧು ಕೀಟಗಳನ್ನೂ ಹಲವು ಹೆಚ್ಚಾಗಿ ಸೇವಿಸುತ್ತವೆ. ಬದನಿಕೆಯ ಹಣ್ಣು ಬಹು ಇಷ್ಟ. ಅದನ್ನು ಹರಡಲೂ ಇವೇ ಮುಖ್ಯ ಕಾರಣ. ಅದರ ಬೀಜ ಅಂಟಾಗಿರುವುದರಿಂದ ಕೊಕ್ಕುಗಳಿಗೆ ಅಂಟಿಕೊಳ್ಳುತ್ತದೆ. ಅದನ್ನು ಕೊಂಬೆಗಳಿಗೆ ಉಜ್ಜಿ ಸಡಿಲಿಸುವಾಗ ಬೀಜ ಕೊಂಬೆಗೆ ಅಂಟಿ ಅಲ್ಲೇ ಬೆಳೆಯುತ್ತದೆ.

ಇವು ಮರವಾಸಿಗಳು. ಪೊದರುಗಳಲ್ಲಿ ಹಣ್ಣಿದ್ದಾಗ ಅಲ್ಲೂ ಚಲಿಸುತ್ತಿರುತ್ತವೆ. ಒಂಟಿ ಅಥವಾ ಜೊತೆಗೂಡಿ ಚಲಿಸುತ್ತವೆ. ಸಾಮಾನ್ಯವಾಗಿ ಸೂರ್ಯಪಕ್ಷಿಗಳಂತೆಯೇ

ನೀಳ ಹಣಚೀಲದಾಕಾರದ ಜೋಲು ಗೂಡು ರಚಿಸುತ್ತವೆ. ಸಸ್ಯಭಾಗ, ನಾರುಗಳಿಂದ ಜೇಡರಬಲೆ ಹೆಣೆದು ರಚಿಸಿ ಒಳಗಡೆ ಮೆತ್ತೆ ಏರ್ಪಡಿಸುತ್ತದೆ. **ಬದನಿಕೆ** ಪಕ್ಷಿಯ ಗೂಡು ಮರಸೇಬು ಆಕಾರವಿರುತ್ತದೆ. ಹೆಣ್ಣೇ ಗೂಡು ರಚಿಸಿ, ಕಾವೀಯುವುದು. ಗಂಡು ಮರಿಗಳಿಗೆ ಆಹಾರ ಒದಗಿಸುತ್ತದೆ.

ಆಸ್ಟ್ರೇಲಿಯಾ, ಟಾಸ್‌ಮೇನಿಯಾ ವಾಸಿಗಳಾದ ೭ ದುಂಡನೆಯ ಪಕ್ಷಿ ಪ್ರಭೇದ ಗಳಿಗೆ **ವಜ್ರಪಕ್ಷಿಗಳೆಂದು** ಹೆಸರಿದೆ. ಅವುಗಳಿಗೆ ಬಹು ಗಿಡ್ಡ ದಟ್ಟ ಕೊಕ್ಕಿದ್ದು ಅಂಚುಗಳಲ್ಲಿ ಕಚ್ಚು ಇರುವುದಿಲ್ಲ. ಪೂರ್ಣ ಕೀಟಾಹಾರಿಗಳು. ಬುಡ, ಕೊಂಬೆ, ಎಲೆ ಗಳಲ್ಲಿ ಹುಡುಕಿ ತಿನ್ನುತ್ತವೆ. ಸುರಂಗ ಪೊಟರೆಗಳಲ್ಲಿ ತೊಗಟೆ ಹುಲ್ಲುಗಳಿಂದ ಗೋಳಾಕಾರದ ಗೂಡು ರಚಿಸುತ್ತವೆ. ನೆಲದಲ್ಲಿ ತಾವೇ ೧ ೧/೨ – ೨ ಅಡಿ ಉದ್ದದ ಸುರಂಗ ಕೊರೆದು ಪೊಟರೆ ರಚಿಸುತ್ತವೆ. ಈ ದಪ್ಪ ಗಾತ್ರದ ಗೂಡು ರಚಿಸಲು ಹೆಣ್ಣು ಗಂಡುಗಳೆರಡೂ ಸಹಕರಿಸಿ, ಕಾವೀಯುತ್ತವೆ. ೩ – ೫ ಮೊಟ್ಟೆ ಸಾಮಾನ್ಯ.

ಕುಟುಂಬ ೫೦ : ಜೌಸ್ಟಿರೋಪಿಡೀ (Zosteropidae)
(ಬಿಳೀ ಕಣ್ಣಿನ ಪಕ್ಷಿಗಳು White-eyes)

ಇವು ಪೂರ್ವಾರ್ಧಗೋಳದ ಮಧು ಭಕ್ಷಕ ಪಕ್ಷಿಗಳ ನಾಲ್ಕನೆಯ ಕುಟುಂಬ. ಹಳದಿ–ಹಸಿರು ಮೈ ವರ್ಣವಿರುವ ೪ – ೫ ಅಂಗುಲ ದೇಹದವು. ಅವುಗಳ ಕಣ್ಣಿನ ಸುತ್ತಲೂ ಬಿಳುಪುಗರಿಯ ವರ್ತುಲಾಕಾರದ ಪಟ್ಟಿಯಿರುವುದರಿಂದಲೇ ಈ ಹೆಸರು. ಜೇನು ಭಕ್ಷಕಗಳಂತೆ ಅವುಗಳ ನಾಲಿಗೆ ತುದಿಯಲ್ಲಿ ಕೂದಲು ಗುಚ್ಛವಿದೆ. ನಾಲಿಗೆ ಕೊಳವೆಯಂತಿಲ್ಲ. ಒಂದೇ ಪ್ರಭೇದಕ್ಕೆ ಬಿಳುಪು ವಲಯಕ್ಕೆ ಬದಲು ಹಳದಿ ವಲಯವಿದೆ. ಸಾಮಾನ್ಯ ನೀಳದ ಕೊಕ್ಕು ತೆಳುವಾಗಿ ಬಹು ಸ್ವಲ್ಪವೇ ಕೆಳಬಾಗಿದೆ. ಒಟ್ಟು ೮೫ ಪ್ರಭೇದಗಳನ್ನೊಳಗೊಂಡಿವೆ.

ಸಹರಾ ಮರುಭೂಮಿಯ ದಕ್ಷಿಣ ಭಾಗದಿಂದ ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡಿನಲ್ಲೆಲ್ಲಾ ಈ ಕುಟುಂಬ ಹರಡಿದೆ. ಸಾಮಾನ್ಯವಾಗಿ ಸ್ಥಳವಾಸಿಗಳೇ. ಅತಿ ಚಳಿಯಾದಲ್ಲಿ ಬೆಚ್ಚಗಿರುವ ಪ್ರದೇಶದೆಡೆ ಹೋಗಬಲ್ಲವು. ಸಂಘಜೀವಿಗಳು. ಎಲ್ಲವೂ ಮರವಾಸಿಗಳು. ಕೆಲವು ಪೂರ್ಣ ಮಧು ಭಕ್ಷಕಗಳು. ಸಾಮಾನ್ಯವಾಗಿ ಕೀಟ ಹಣ್ಣು ಕಾಯಿಗಳನ್ನು ತಿನ್ನುವವೇ ಜಾಸ್ತಿ. ಬಟ್ಟಲಿನಾಕಾರದ ಗೂಡನ್ನು, ನಾರು, ಬೇರು ಮುಂತಾದವುಗಳಿಂದ ಜೇಡರಬಲೆ ಸೇರಿಸಿ ಹೆಣೆದು ರಚಿಸುತ್ತವೆ. ೨ – ೪ ಮೊಟ್ಟೆ ಯಿಟ್ಟು ೧೦ – ೧೨ ದಿನ ಕಾವಿತ್ತು ಮರಿಮಾಡುತ್ತವೆ.

ಕುಟುಂಬ ೫೧ : ವಿರಿಯೋನಿಡೀ (Vireonidae)
(ವಿರಿಯೋಗಳು Vireos)

ಪಕ್ಷಿವರ್ಗದಲ್ಲಿ ಅತ್ಯಂತ ಉನ್ನತ ಮಾರ್ಪಾಟು ಹೊಂದಿರುವ ಬೀಜಾಹಾರಿಗಳ ೬ ಕುಟುಂಬಗಳಲ್ಲಿ ಇವು ಮೊದಲನೆಯ ವರ್ಗ. ಇವುಗಳಿಗೆ ಕಾರ್ಯಾಚರಣೆಯ

ಪ್ರಥಮ ಪುಕ್ಕಗಳು ೯ ಮಾತ್ರ ಇರುತ್ತವೆ. ಆದರೆ ಈ ಕುಟುಂಬದಲ್ಲಿ ಹತ್ತನೆಯದು ಕುರುಡು ಇರುತ್ತದೆ. ೪–೬ ಅಂಗುಲ ದೇಹದ ಸಣ್ಣ ಗಾತ್ರದ ಹಳದಿ - ಹಸಿರು ಹಗುರ ವರ್ಣ ಪಕ್ಷಿಗಳು. ಒಟ್ಟು ೪೨ ಪ್ರಭೇದಗಳಿವೆ. ಪೂರ್ಣ ಪಶ್ಚಿಮಾರ್ಧ ಗೋಳದವು, ಕೆನಡಾದಿಂದ ಅರ್ಜೆಂಟೈನಾವರೆಗೆ ವಾಸವಿರುತ್ತವೆ. ಸಮಶೀತೋಷ್ಣ ವಲಯ ವಾಸಿಗಳು. ದಕ್ಷಿಣಕ್ಕೆ ವಲಸೆ ಹೋಗುತ್ತವೆ.

ಮರದಲ್ಲಿನ ಎಲೆ ಮಾಡುಗಳ ಹೊರ ವಲಯದಲ್ಲಿ ಕುಪ್ಪಳಿಸಿ ಹಾರಾಡುತ್ತಾ ಕೀಟಗಳನ್ನು ಹುಡುಕಿ ತಿನ್ನುತ್ತವೆ. ಕೀಟಾಭಾವವಿದ್ದಲ್ಲಿ ಹಣ್ಣು ಕಾಯಿಗಳನ್ನೂ ತಿನ್ನುತ್ತವೆ. ಉತ್ತಮ ಹಾಡುಗಾರಿಕೆಯ ಪಕ್ಷಿಗಳು. ದಿನವಿಡೀ ಹಾಡುತ್ತಿರುತ್ತವೆ. ಒಂದೇ ದಿನದಲ್ಲಿ ೨೨,೧೯೭ ಸಲ ಒಂದು ಪಕ್ಷಿ ಹಾಡಿದ್ದು ದಾಖಲಾಗಿದೆ.

ಮರದಲ್ಲೇ ಗೂಡು ರಚಿಸುವುದು. ಎಲ್ಲವೂ ಬಟ್ಟಲಿನಾಕಾರದ ಗೂಡನ್ನು ನಾರು, ಜೇಡರಬಲೆ, ರೇಷ್ಮೆ ಹುಲ್ಲುಗಳನ್ನೂ ಹೆಣೆದು ರಚಿಸಿ, ಎರಡು ಕೊಂಬೆಗಳ ನಡುವೆ ತೂಗುಹಾಕುತ್ತವೆ. ಇದು ಈ ಕುಟುಂಬದ ವೈಶಿಷ್ಟ್ಯ. ಹೆಣ್ಣೇ ಗೂಡು ರಚಿಸುವುದು. ಗಂಡು ಸಹಾಯಕ, ಮತ್ತು ಮರಿಗಳಿಗೆ ಆಹಾರ ಒದಗಿಸುತ್ತವೆ. ಹಲವು ಗೂಡಿನಲ್ಲಿ ಕುಳಿತು ಕಾವೀಯುವಾಗಲೂ ಹಾಡುತ್ತಲೇ ಇರುತ್ತವೆ. ಇವುಗಳಲ್ಲಿ ಚುಕ್ಕೆ ಷ್ರೈಕ್ ವಿರಿಯೋಗಳೂ ಷ್ರೈಕ್ ವಿರಿಯೋಗಳೂ ದಪ್ಪ ಗಾತ್ರದವು. ನೀಳ ದಟ್ಟ ಕೊಕ್ಕು ಹೊಂದಿವೆ. ದಪ್ಪ ಕೀಟಗಳೇ ಮುಖ್ಯಾಹಾರ. ಅವನ್ನು ಕಾಲಿನಿಂದ ಒತ್ತಿ ಹಿಡಿದು, ಕೊಕ್ಕಿನಿಂದ ಹರಿದು ತಿನ್ನುತ್ತವೆ. ಅವೂ ತೂಗು ಗೂಡು ರಚಿಸಿ ೨–೩ ಮೊಟ್ಟೆಯಿಡುತ್ತವೆ.

ಕುಟುಂಬ ೫೨ : ಡ್ರಿಪಾನಿಡಿಡೀ (Drepanididae)
(ಹವಾಯಿಯ ಜೇನು ಕ್ರೀಪರ್‌ಗಳು Honeycreepers)

೪ರಿಂದ ೯ ಅಂಗುಲ ಉದ್ದದ, ಸಾಮಾನ್ಯ ಹಸಿರು, ಬೂದು ಅಥವಾ ಕೆಂಪು ಹಳದಿ, ಕಪ್ಪು ವರ್ಣಗಳ ೨೨ ಹವಾಯಿನ ಪ್ರಭೇದಗಳು. ಅವುಗಳಲ್ಲಿ ಮುಖ್ಯವಾಗಿ ವಿವಿಧಾಕಾರದ ಕೊಕ್ಕು ಬೆಳವಣಿಗೆಯೇ ಮುಖ್ಯ. ತೆಳು ನೀಳ ಮತ್ತು ಕೆಳಬಾಗಿರ ಬಹುದು. ಆದರಿಂದ ಮಧು ಹುಡುಕಲೂ ಹೊಂಚಲೂ ಸಹಾಯಕ. ಹಲವು ದಟ್ಟ ಗಿಡ್ಡವಾಗಿ ಕಾಯಿ, ಕಾಳು ತಿನ್ನಲು ಅನುಕೂಲವಾದದ್ದು. ಒಂದು ಪ್ರಭೇದಕ್ಕೆ ಮರಕುಟುಕನಂತಹ ದಟ್ಟ ನೇರ ಕೊಕ್ಕಿದ್ದು ತೊಗಟೆ ಮಧ್ಯದಲ್ಲಿ ಕೀಟಗಳನ್ನು ಹುಡುಕಿ ತಿನ್ನಲು ಸಹಾಯಕವಾಗಿದೆ. ಅಕೇಪಾ ಪಕ್ಷಿಗೆ ಕೊಕ್ಕಿನ ತುದಿ ಎರಡು ಕಡೆಗೂ ತಿರುಗಿದ್ದು ಮೊಗ್ಗು ಬಿಚ್ಚಲು ಅನುಕೂಲವಾಗಿದೆ.

ಅವುಗಳಲ್ಲಿ ಮುಖ್ಯವಾಗಿ ಎರಡು ಪಂಗಡಗಳಿವೆ. ಮೊದಲನೆಯ ಹಿಂದುಳಿದ ಪಂಗಡಕ್ಕೆ ದಪ್ಪ ಚರ್ಮದ ಜೇನು ಕ್ರೀಪರ್ ಸೇರುತ್ತವೆ. ಹೆಣ್ಣು ಗಂಡುಗಳಲ್ಲಿ ವ್ಯತ್ಯಾಸವಿರುವುದಿಲ್ಲ. ಶಿಖೆಯ ಗರಿಗಳು ನೇರವಾಗಿರುತ್ತವೆ. ಸಣ್ಣ ಗುಂಪುಗಳಾಗಿ

ಕಾಡಿನಲ್ಲೆಲ್ಲಾ ಹಾರಾಡುತ್ತಿರುತ್ತವೆ. ದಪ್ಪ ಹೂವು ಗಿಡಗಳಲ್ಲಿ ಕುಳಿತು ಹೂವುಗಳ ತಳದಲ್ಲಿ ಕೊರೆದು ತೂತುಮಾಡಿ ಜೇನು ಕುಡಿಯುತ್ತವೆ. ದೂರ ಚಲಿಸುತ್ತವೆ.

ಎರಡನೆಯ ಪಂಗಡದಲ್ಲಿ ಹಸಿರು ಗರಿ ಬಣ್ಣದವೇ ಹೆಚ್ಚು. ಹೆಣ್ಣು ಗಂಡುಗಳಿಗೆ ವ್ಯತ್ಯಾಸವಿದ್ದು, ಗಂಡು ಹೆಚ್ಚು ವರ್ಣರಂಜಿತ. ತಲೆ ಗರಿಗಳು ಮೃದು. ಅವು ಕೀಟ, ಹಣ್ಣು ಕಾಳುಗಳನ್ನು ತಿನ್ನುವುವು. ಸ್ಥಳವಾಸಿಗಳು.

ಹುಲ್ಲು ಅಥವಾ ಪೊದರುಗಳಲ್ಲಿ ಬಟ್ಟಲಿನಾಕಾರದ ಹುಲ್ಲಿನ ಗೂಡು ರಚಿಸಿ ೨-೪ ಬಿಳೀ ಮೊಟ್ಟೆಗಳನ್ನಿಟ್ಟು ಹೆಣ್ಣು ಗಂಡುಗಳೆರಡೂ ಕಾವಿತ್ತು ಮರಿಮಾಡುತ್ತವೆ. ಸರಿಯಾದ ಅನುಕೂಲ ವಾತಾವರಣದ ನಾಶವಾದಲ್ಲಿ ಬಹುಬೇಗ ಪ್ರಭೇದಗಳು ನಾಶವಾಗುತ್ತವೆಂಬ ವಾದಕ್ಕೆ ಈ ಕುಟುಂಬ ಉತ್ತಮ ಉದಾಹರಣೆ. ೨೨ ಪ್ರಭೇದಗಳಲ್ಲಿ ಅಲ್ಲಿನ ಕಾಡು ನಾಶದಿಂದ ೯ ಈಗಾಗಲೇ ನಿರ್ನಾಮವಾಗಿದೆ. ಇನ್ನೂ ೧೦ ಬಹು ಸಣ್ಣ ಸಂಖ್ಯೆಯಲ್ಲಿ ಹಲವು ಪ್ರದೇಶದಲ್ಲಿ ಮಾತ್ರವಿದೆ. ಎಚ್ಚರಿಕೆ ವಹಿಸದಿದ್ದಲ್ಲಿ ಅವೂ ಬಹುಬೇಗ ನಿರ್ನಾಮವಾಗಬಲ್ಲವು.

ಕುಟುಂಬ ೫೩ : ಪಾರುಲಿಡೀ (Parulidae)

(ಮರ ವಾರ್‌ಬ್ಲರ್‌ಗಳು ಮತ್ತು ಬಾಳೇಕೈಟ್‌ಗಳು.)

ವರ್ಷಕಾಲದಲ್ಲಿ ಮಾತ್ರ ವಿವಿಧ ವರ್ಣರಂಜಿತಗರಿ ಹೊಂದಿ ಬಹು ಸುಲಭವಾಗಿ ಗುರುತಿಸಲಾಗುವ ಈ ಪಕ್ಷಿಕುಟುಂಬ ಬೇರೆ ಸಮಯದಲ್ಲಿ ಹಗುರ ವರ್ಣದ ಗರಿ ಹೊಂದುತ್ತವೆ. ಎಲ್ಲಾ ಪಶ್ಚಿಮವಲಯದ, ೯ ಪ್ರಾಥಮಿಕ ಗರಿ ಹೊಂದಿರುವುವು, ೧೧೯ ಪ್ರಭೇದಗಳುಳ್ಳವು. ಇವುಗಳನ್ನೂ ಎರಡು ಪಂಗಡಗಳಾಗಿ ವಿಂಗಡಿಸಲಾಗಿದ್ದು, ಮೊದಲನೆಯದಕ್ಕೆ ಕೀಟಾಹಾರಿಗಳಾದ ಅಮೇರಿಕಾವಾಸಿ ೧೧೯ ಪ್ರಭೇದಗಳೂ ಮತ್ತು ಎರಡನೆಯದಕ್ಕೆ ವೆಸ್ಟ್‌ಇಂಡೀಸ್, ಮಧ್ಯ ಮತ್ತು ದ. ಅಮೇರಿಕಾದ ಮಧು ಭಕ್ಷಕ ಬನಾನಾಕ್ವೈಟ್‌ಗಳ ೧೦ ಪ್ರಭೇದಗಳೂ ಸೇರಿವೆ.

ಮರ ವಾರ್‌ಬ್ಲರ್‌ಗಳು ಸಣ್ಣ ಗಾತ್ರದ, ನೀಳ ಮೊನಚು ಕೊಕ್ಕಿನ ದುಂಡು ಬಾಲದವು. ಎಲ್ಲಕ್ಕೂ ಕೊಕ್ಕಿನ ಕೆಳಭಾಗದಲ್ಲಿ ಸಣ್ಣ ಒರಟು ಕೂದಲಿವೆ. ಹಾರುವ ಕೀಟಗಳನ್ನು ಹಾರುತ್ತಾ ಹಿಡಿದು ತಿನ್ನುತ್ತವೆ. ಸಣ್ಣ ಹಣ್ಣು ಕಾಯಿಗಳನ್ನೂ ತಿನ್ನಬಲ್ಲವು. ಹೆಚ್ಚು ಹಳದಿ ವರ್ಣದವು. ಕೆಲವಕ್ಕೆ ಹಸಿರು ಸೇರಿರಬಹುದು. ಗಂಡು, ಹೆಣ್ಣು ವರ್ಣ ಹೊಂದಿರುತ್ತವೆ. ಎಲ್ಲವೂ ದಕ್ಷಿಣಕ್ಕೆ ವಲಸೆ ಹೋಗುತ್ತವೆ. ವಿವಿಧ ಪ್ರಭೇದಗಳಲ್ಲಿ ಸಂಪರ್ಕವಾಗಿ ಹೊಸ ಮಿಶ್ರ ಪ್ರಭೇದ ಉತ್ಪನ್ನವಾಗುವುದು ಈ ಕುಟುಂಬದ ವೈಶಿಷ್ಟ್ಯ. ಇದರಿಂದ ಇದ್ದಕ್ಕಿದ್ದಂತೆ ವಿವಿಧ ವರ್ಣದ ಹೊಸ ಪ್ರಭೇದ ಅಥವಾ ವಿಧಗಳು ಉತ್ಪನ್ನವಾಗುತ್ತಿರುತ್ತವೆ.

ಅವು ಉತ್ತಮ ಹಾಡುಗಾರರಲ್ಲ. ಧ್ವನಿ ಸಣ್ಣ. ಹಲವು ಪ್ರಭೇದಗಳು ಸೇರಿ ವಲಸೆ ಹೋದರೂ ತಮಗಿಷ್ಟವಾದ ನಿರ್ದಿಷ್ಟ ಸ್ಥಳದಲ್ಲಿ ಪೊದರು ಭೂಮಿಗಳಿಂದ

ಉತ್ತರ ಭಾಗದ ಪೈನ್ ಮರ ಪ್ರದೇಶಗಳವರೆಗೆ ಹರಡಿದ್ದು ವಾಸಿಸುತ್ತವೆ. ಕೆಲವು ಪ್ರಭೇಧಗಳ ಗೂಡುಗಳಲ್ಲಿ ಇತರ ಪಾರಜೀವಕ ಪಕ್ಷಿಗಳು ಮೊಟ್ಟೆಯಿಡುವುದುಂಟು.

ನೆಲದಮೇಲೆ ಅಥವಾ ಮರಗಳಲ್ಲಿ ಬಟ್ಟಲಿನಾಕಾರದ ಗೂಡನ್ನು ರಚಿಸುತ್ತವೆ. ಒಲೆಪಕ್ಷಿ ನೆಲದಮೇಲೆ ದುಂಡು ಒಲೆಯಾಕಾರದ ಗೂಡು ರಚಿಸುತ್ತವೆ. ಹಲವು ಪೊಟರೆ ಗೂಡಿನವು. ಹೆಣ್ಣೇ ಮುಖ್ಯವಾಗಿ ಗೂಡು ರಚಿಸುವುದು. ಗಂಡು ಸಹಕರಿಸ ಬಹುದು. ವಲಸೆ ಹೋಗುವ ಪ್ರಭೇದಗಳು ೪ – ೫ ಮೊಟ್ಟೆಯಿಡುವುವು. ವರ್ಷಕ್ಕೆ ಒಂದುಸಲ ಮಾತ್ರ ಮರಿ ಮಾಡುತ್ತವೆ. ಹೆಣ್ಣೇ ಕಾವೀಯುವುದು.

ರಾತ್ರಿಯೇ ಅವು ವಲಸೆ ಹೋಗುವುದರಿಂದ ಹೆಚ್ಚು ನಷ್ಟ ಹೊಂದುತ್ತವೆ. ಅನೇಕಸಲ ಬಿರುಗಾಳಿಯಿಂದ ಬಹುದೂರ ಒಯ್ಯಲ್ಪಟ್ಟು ನಶಿಸುವುದುಂಟು. ಮಂಜು ಮಬ್ಬುಗಳಿಂದ ಅವು ಕೆಳಗೆ ಹಾರುವಂತಾಗಿ ಎತ್ತರ ಕಟ್ಟಡಗಳಿಗೆ ಡಿಕ್ಕಿ ಹೊಡೆದು ಸಾಯುತ್ತವೆ. ಅಲ್ಲದೆ ರಾತ್ರಿ ಹಾರುವಾಗ ವಿಮಾನ ಮೈದಾನಗಳ, ಸಮುದ್ರ ತೀರ ಬೆಳಕು ಮನೆಗಳ ದೀಪಗಳಿಗೆ ಆಕರ್ಷಿತವಾಗಿ ಹೆಚ್ಚು ಸಂಖ್ಯೆಯಲ್ಲಿ ನಶಿಸುವುದುಂಟು.

ಮೊದಲನೆಯ ಪಂಗಡ ಅರ್ಜೆಂಟೈನಾವರೆಗೆ ಕಂಡುಬರುತ್ತದೆ. ಉಷ್ಣವಲಯ ವಾಸಿಗಳು. ಹಲವು ಸಾಧಾರಣ ಬಣ್ಣದವು. ಕೆಲವು ವಿವಿಧ ಗಟ್ಟಿ ಬಣ್ಣ ಹೊಂದಿರು ತ್ತವೆ. ಹೆಣ್ಣು ಗಂಡುಗಳಲ್ಲಿ ಭೇದವಿಲ್ಲ. ನೆಲದಮೇಲೆ ಅಥವಾ ಬಳಿ ವರ್ತುಲಾ ಕಾರದ ದುಂಡು ಗೂಡು ರಚಿಸುತ್ತವೆ. ಗಂಡು ಗೂಡು ರಚನೆಯಲ್ಲಿ ಆಸಕ್ತಿವಹಿಸುತ್ತದೆ. ೨ – ೩ ಮೊಟ್ಟೆಯಿಡುತ್ತದೆ. ಮರಿಮಾಡಲು ೧೩ – ೧೬ ದಿನ ಕಾವಿನವಧಿ.

ಎರಡನೆಯ ಪಂಗಡ ತಗ್ಗು ಪ್ರದೇಶದ ಕಾಡುವಾಸಿಗಳು. ಅವುಗಳ ನಾಲಿಗೆ ಇಬ್ಭಾಗವಾಗಿ ಕೂದಲುಗುಚ್ಛ ಹೊಂದಿ ಮಧು ಹೀರಲು ಸಹಾಯಕ. ವಿವಿಧ ವರ್ಣ ರಂಜಿತ ಪಕ್ಷಿಗಳು. ಅವು ತಮ್ಮ ನೀಳ ತಳಬಾಗಿದ ಕೊಕ್ಕಿನಿಂದ ಬಾಳೆ ಹೂಗಳ ತಳ ಭಾಗ ಕುಕ್ಕಿ ಹರಿದು ಮಧುವೀಂಟುತ್ತವೆ. ಒಂಟಿ ಅಥವಾ ಜೊತೆಯಾಗಿಮಾತ್ರವಿರು ತ್ತವೆ. ಕೀಟಗಳನ್ನು ತಿನ್ನುತ್ತವೆ. ನೆಲದ ಸಮೀಪ ಸಣ್ಣ ಪೊದರುಗಳಲ್ಲಿ ವರ್ತುಲಾ ಕಾರದ ದುಂಡು ಗೂಡು ರಚಿಸಿ ೨ – ೩ ಮೊಟ್ಟೆಯಿಡುತ್ತವೆ. ಗಂಡು ಗೂಡು ರಚನೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಹೆಣ್ಣುಮಾತ್ರ ಕಾವೀಯುತ್ತವೆ. ಗಂಡು ತನಗೆ ವಿಶ್ರಮಿಸಲು ಅನುಕೂಲವಾದ ಬೇರೆ ಗೂಡನ್ನು ರಚಿಸುತ್ತದೆ.

ಕುಟುಂಬ ೫೪ : ಇಕ್‌ಟೆರಿಡೀ (Icteridae)

(ಇಕ್‌ಟೆರಿಡ್‌ಗಳು Ichterids)

ಇವೂ ಪಶ್ಚಿಮಾರ್ಧಗೋಳದ ಪಕ್ಷಿಗಳು. ೯೪ ಪ್ರಭೇದಗಳನ್ನೊಳಗೊಂಡಿದೆ. ಹೆಚ್ಚು ವೈವಿಧ್ಯತೆಯಿರುವ ಪಕ್ಷಿಸಮೂಹ. ಹಳದಿ ವರ್ಣವೇ ಪಕ್ಷಿಗಳಲ್ಲಿ ಹೆಚ್ಚಾಗಿರು ವುದು. ೬ – ೨೧ ಅಂಗುಲ ಉದ್ದದ ಸಣ್ಣ ಅಥವಾ ಸಾಮಾನ್ಯ ಗಾತ್ರದ ಪಕ್ಷಿಗಳು. ರೆಕ್ಕೆ ನೀಳವಾಗಿ ನೇರ ದಟ್ಟ ಕೊಕ್ಕು ಮೊನಚಾಗಿ, ತಳದಲ್ಲಿ ಒರಟು ಕೂದಲಿಲ್ಲದೆ

ದುಂಡು ಬಾಲದಂಚು ಹೊಂದಿರುತ್ತವೆ. ಕೊಕ್ಕು ಹೆಚ್ಚು ವೈವಿಧ್ಯತೆ ಹೊಂದಿರುತ್ತವೆ. ಗಿಡ್ಡ, ನೀಳ, ಕೆಳಬಾಗಿ ತೆಳವು ಎಲ್ಲಾ ವಿಧವಾಗಿರುತ್ತವೆ. ಹೆಚ್ಚಾಗಿ ಉಷ್ಣವಲಯವಾಸಿಗಳು. ಹಲವು ಮಾತ್ರ ಸಮಶೀತೋಷ್ಣವಲಯದಲ್ಲಿದ್ದು ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಅವು ಎಲ್ಲಾ ವಿಧವಾದ ವಾತಾವರಣಕ್ಕೂ ಹೊಂದಿದಂತಿವೆ. ಬಹು ಪ್ರಭೇದಗಳು ಮರವಾಸಿಗಳು. ಹಲವು ಮೈದಾನದಲ್ಲಿರುತ್ತವೆ. ಕೆಲವು ಪ್ರಭೇದ ಮರಳುಕಾಡಿನಲ್ಲೂ ವಾಸಿಸಬಲ್ಲವು. ಸಾಮಾನ್ಯವಾಗಿ ಎಲ್ಲವೂ ಕೀಟಾಹಾರಿಗಳು. ಹಲವು ಕಾಳು, ಬೀಜಗಳನ್ನೂ ತಿನ್ನುತ್ತವೆ. ಓರಿಯೋಲ್‌ಗಳು ಹಣ್ಣನ್ನು ಮಾತ್ರ ತಿನ್ನುತ್ತವೆ. ಹಾಗೂ ಮಧು ಕುಡಿಯುವುವು. ಗ್ರ್ಯಾಕಲ್‌ಗಳು ಸರ್ವಭಕ್ಷಕಗಳು. ಇತರ ಪಕ್ಷಿಗಳ ಗೂಡಿನಿಂದ ಮೊಟ್ಟೆ ಮತ್ತು ಮರಿಗಳನ್ನು ಕದ್ದು ತಿನ್ನುವುದರಲ್ಲಿ ನಿಸ್ಸೀಮರು. ಕಪ್ಪೆ, ಮೀನುಮರಿ, ಸರೀಸೃಪಗಳನ್ನು ತಿನ್ನಬಲ್ಲವು.

ನೆಲವಾಸಿಗಳೂ ಚೆನ್ನಾಗಿ ಹಾರುತ್ತವೆ. ನೆಲದಲ್ಲಿ ವೇಗವಾಗಿ ಸಂಚರಿಸುತ್ತವೆ. ಕುಪ್ಪಳಿಸುವುದಿಲ್ಲ. ಹೆಚ್ಚಾಗಿ ಸಂಘಜೀವಿಗಳು. ದೊಡ್ಡ ಗುಂಪಾಗಿರುತ್ತವೆ. ಓರಿಯೋಲ್‌ಗಳು ಉತ್ತಮ ಹಾಡುಗಾರ ಪಕ್ಷಿಗಳು. ಹಲವು ಗುಂಪಾಗಿ ಒಂದೇ ಸ್ಥಳದಲ್ಲಿ ಗೂಡು ರಚಿಸುತ್ತವೆ.

ಹೆಣ್ಣೇ ಗೂಡು ರಚನೆಯಲ್ಲಿ ಹೆಚ್ಚಾಗಿ ಅಥವಾ ಪೂರ್ತಿ ಭಾಗವಹಿಸುವುದು. ಹಲವು ಗಂಡುಗಳು ಬಹುಪತ್ನೀಕ. ಗೂಡು ರಚನೆಯಲ್ಲಿ ಅಥವಾ ಮರಿಪೋಷಣೆಯಲ್ಲಿ ಆಸಕ್ತಿ ಹೊಂದುವುದಿಲ್ಲ. ಹಸು ಪಕ್ಷಿಗಳು ಇತರರ ಗೂಡಿನಲ್ಲೇ ಕೋಗಿಲೆಯಂತೆ ಮೊಟ್ಟೆಯಿಟ್ಟು ಮರಿಮಾಡಲೇರ್ಪಡಿಸುತ್ತವೆ. ಬಟ್ಟಲಿನಾಕಾರದ ಗೂಡು ರಚಿಸುವುದೇ ಸಾಮಾನ್ಯವಾದರೂ, ಓರಿಯೋಲ್ ಮುಂತಾದವು ನೀಳವಾಗಿ ಜೋತಾಡುವ ಸುಂದರ ಗೂಡು ರಚಿಸುತ್ತವೆ. ಮೊಟ್ಟೆ ಬಿಳುಪು, ಹಗುರ ಹಸಿರು ಅಥವಾ ನೀಲಿಯಾಗಿ ಮೇಲೆ ಕಪ್ಪು ಡೊಂಕು ಗೆರೆಗಳಿರುತ್ತವೆ. ೨–೭ ಮೊಟ್ಟೆ ಸಾಮಾನ್ಯ.

ಓರಿಯೋಲ್‌ಗಳ (Oriole) ೩೦ ಪ್ರಭೇದ ಇವರಲ್ಲಿ ಮುಖ್ಯವಾದದ್ದು. ಗಂಡು ವರ್ಣರಂಜಿತ ಹಾಗೂ ಉತ್ತಮ ಹಾಡುಗಾರ ಪಕ್ಷಿ. ಜೊತೆಗೂಡಿದಲ್ಲಿ ಒಟ್ಟಾಗಿದ್ದರೂ ಗೂಡು ರಚನೆಯಲ್ಲಿ ಗಂಡು ಹೆಚ್ಚು ಭಾಗವಹಿಸುವುದಿಲ್ಲ. ಹೆಣ್ಣು ಗೂಡು ನೇಯ್ದು ೪–೬ ಮೊಟ್ಟೆಯಿಟ್ಟು ಕಾವಿತ್ತು ಮರಿಮಾಡುವಾಗ ಪಕ್ಕದಲ್ಲೇ ಇದ್ದರೂ, ಹಾಡುತ್ತಾ ಕೀಟಗಳನ್ನು ಅಟ್ಟಿಸಿ ಹಾರುತ್ತಾ ಕಾಲಕಳೆಯುತ್ತವೆ. ನೀಳ ಚೀಲದಂತಹ ಗೂಡು ಮೇಲೆ ಸಣ್ಣಗಿದ್ದು ತಳಭಾಗದಲ್ಲಿ ಅಗಲವಾಗಿ, ಪೂರ್ಣ ನಾರಿನಿಂದ ಹೆಣೆದಿರುತ್ತವೆ.

ಕಾಕಿಕ್ ಮತ್ತು ಓರೋಪೆಂಡೋಲಾಗಳ ಗೂಡು ಇನ್ನೂ ಆಶ್ಚರ್ಯಕರವಾಗಿರುತ್ತದೆ. ಉದ್ದ ಹುಲ್ಲುಗಳಿಂದ ೩–೬ ಅಡಿ ಉದ್ದದ ಗೂಡು ರಚಿಸಿ ತಳಭಾಗದ ಕೋಣೆಗಳಲ್ಲಿ ಮಾತ್ರ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಗುಂಪಾಗಿದ್ದು ಹೆಚ್ಚು ಗಲಭೆ ಮಾಡುತ್ತಿರುತ್ತವೆ. ಬಹು ಎತ್ತರ ಮರದ ದಪ್ಪ ಕೊಂಬೆಯಲ್ಲಿ ಹೆಣ್ಣು

ಗಳು ನೂರಾರು ತೂಗು ಗೂಡುಗಳನ್ನು ರಚಿಸುತ್ತವೆ. ಗಂಡುಗಳು ಮೇಲ್ಭಾಗದಲ್ಲಿ ಕುಳಿತು ಅವುಗಳಿಗೆ ಕಾವಲಿರುತ್ತವೆ. ಇವುಗಳಲ್ಲೂ ಗಂಡು ಬಹುಪತ್ನೀಕ. ಕೆಲವು ಪ್ರಭೇದಗಳಲ್ಲಿ ಗಂಡುಗಳ ಸಂಖ್ಯೆ ಕಡಮೆಯಿದ್ದಾಗ ಮಾತ್ರ ಹೀಗಾಗುತ್ತದೆ.

ಕೆಂಪು ರೆಕ್ಕೆ ಪಕ್ಷಿಗಳು ಕೆನಡಾದಿಂದ ಮಧ್ಯ ಅಮೇರಿಕಾದವರೆಗೆ ವಲಸೆ ಹೋಗುತ್ತವೆ. ಇವುಗಳಲ್ಲಿ ಹೆಣ್ಣು ಗಂಡುಗಳೆರಡೂ ಸಂಖ್ಯೆಯಲ್ಲಿ ಸಮವಾಗಿದ್ದಾಗ ಅವು ಜೊತೆಗೂಡಿರುತ್ತವೆ. ಹೆಣ್ಣುಗಳು ಹೆಚ್ಚಾದಲ್ಲಿ ಗಂಡು ಬಹುಪತ್ನೀಕವಾಗು ತ್ತದೆ. ಹೆಣ್ಣೇ ನೆಲದಮೇಲೆ ಹುಲ್ಲಿನಲ್ಲಿ ಬಟ್ಟಲಿನಾಕಾರದ ಹುಲ್ಲಿನ ಗೂಡು ರಚಿಸಿ ಮೊಟ್ಟೆಯಿಟ್ಟು, ಕಾವೀಯುವುದು. ಗಂಡು ಮರಿ ಪೋಷಣೆಗೆ ಸಹಾಯಕ. ಬಹು ಬೇಗ ವೃದ್ಧಿಸಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಭೇದಗಳಿವು. ಒಂದು ಬೃಹತ್ ಗುಂಪಿನಲ್ಲಿ ೫೦ಲಕ್ಷ ಪಕ್ಷಿಗಳಿದ್ದುವೆಂದು ನಿಗಧಿಮಾಡಲಾಯಿತು. ಅವು ಹೆಚ್ಚು ಕೀಟ ಗಳನ್ನು ತಿಂದು ಅನುಕೂಲವೇರ್ಪಡಿಸಿದರೂ, ಕಾಳು ಮೇದು ನಷ್ಟಪಡಿಸುತ್ತವೆ. ಹಾಗೆ ಹೆಚ್ಚಿನ ಸಂಖ್ಯೆಯಾದಾಗ ಗುಂಡಿಕ್ಕಿ ಕೊಂದು ಕಡಮೆಮಾಡುವುದು ವಾಡಿಕೆ ಯಾಗಿದೆ. ದ. ಕೆನಡಾ ವಾಸಿ **ಬೊಬೋಲಿಂಕ್**ಗಳು ಇನ್ನೊಂದು ಮುಖ್ಯ ಜಾತಿ. ಅವು ದಕ್ಷಿಣಕ್ಕೆ ವಲಸೆ ಹೋಗಿ ಮೊಳೆಯುತ್ತಿರುವ ಬತ್ತ ಬೀಜವನ್ನೂ ಪುನಃ ಬಲಿ ಯುತ್ತಿರುವ ಕಾಳನ್ನೂ ತಿಂದು ಅತಿ ಹೆಚ್ಚಿನ ನಷ್ಟವೇರ್ಪಡಿಸುತ್ತಿತ್ತು. ಬತ್ತ ಪಕ್ಷಿ ಗಳೆಂದೇ ಅದಕ್ಕೆ ಹೆಸರಿಡಲಾಗಿತ್ತು. ಅವುಗಳಲ್ಲೂ ಹೆಣ್ಣು ನೆಲದಲ್ಲಿ ಜೊಂಡಿನ ನಡುವೆ ಹುಲ್ಲಿನಿಂದ ಬಟ್ಟಲಿನಾಕಾರದ ಗೂಡು ರಚಿಸಿ ಮರಿಮಾಡುತ್ತವೆ. ವಲಸೆ ಹೊರಟಾಗ ಅತಿ ಹೆಚ್ಚಾಗಿ ಕೊಬ್ಬಿದ್ದು ರುಚಿಕರವಾಗಿರುತ್ತವಾದ್ದರಿಂದ ಹೆಚ್ಚಾಗಿ ಕೊಂದು ಆಹಾರ ವಾಗಿ ಉಪಯೋಗಿಸಲಾಗುತ್ತಿತ್ತು. ಈಗ ರಕ್ಷಣೆ ದೊರೆತಿದೆ.

'ಮೈದಾನ ಲಾರ್ಕ್'ಗಳು ಉಪಯುಕ್ತ ಪಕ್ಷಿಗಳು. ಮೈದಾನ ಪ್ರದೇಶದಲ್ಲಿ ವಾಸಿಸುತ್ತಾ ಉದುರಿದ ಕಾಳನ್ನೂ ಕಳೆ ಹುಲ್ಲಿನ ಬೀಜಗಳನ್ನೂ ತಿಂದು ನಷ್ಟಮಾಡದೆ ಕೀಟಗಳನ್ನು ನಾಶಪಡಿಸಿ ಅನುಕೂಲ ಮಾಡುತ್ತವೆ. ಹೆಚ್ಚು ಸಂಖ್ಯೆಯಲ್ಲಿರುವುದಿಲ್ಲ. ದಿನವೆಲ್ಲಾ ಹಾಡುತ್ತಲೇ ಇರುತ್ತವೆ. ಮೈದಾನದ ನೀಳ ಹುಲ್ಲು ಜೊಂಡುಗಳ ನಡುವೆ ಕಾಣದಂತೆ ಬಟ್ಟಲಿನಾಕಾರದ ಗೂಡು ರಚಿಸಿ ಮರಿಮಾಡುತ್ತವೆ. ಹೆಣ್ಣೇ ಇಷ್ಟವಾದ ಗಂಡನ್ನು ಚುನಾಯಿಸಿ ಕೂಡುತ್ತದೆ.

ಹಸು ಪಕ್ಷಿಗಳು (Cow birds) ಹಿಂಸಾತ್ಮಕ ಕ್ರೂರ ಪಕ್ಷಿಗಳು. ಪೂರ್ವಾರ್ಧ ಗೋಳದ ಕೋಗಿಲೆಗಳಂತೆ ವರ್ತಿಸುತ್ತವೆ. ಯಾವಾಗಲೂ ಹಸುಗಳ ಹಿಂದೆಯೇ ತಿರುಗಾಡುತ್ತಿರುವುದರಿಂದ ಆ ಹೆಸರು ಬಂದಿದೆ. ದಪ್ಪ ಗಾತ್ರದ ಒಂದು ಪ್ರಭೇದ ಮಾತ್ರ ಕಾಡೆಮ್ಮೆ ದನಗಳಮೇಲೆ ಕುಳಿತು ಉಣ್ಣೆ ತಿನ್ನುತ್ತವೆ. ಉಳಿದವು ಬೆಳ್ಳಕ್ಕಿ ಗಳಂತೆ ಅವುಗಳ ಬಳಿಯಿದ್ದು ಅವು ಚಲಿಸುವಾಗ ಹಾರಾಡುವ ಕೀಟಗಳನ್ನು ತಿನ್ನು ತ್ತವೆ. ಕೆಲವು ಇತರ ಪಕ್ಷಿಗಳು ಬಿಟ್ಟಿರುವ ಗೂಡನ್ನು ಉಪಯೋಗಿಸುತ್ತವೆ. ಅಲ್ಲದೆ ಅವು ಕೋಗಿಲೆಗಳಂತೆ ಪೂರ್ಣವಾಗಿ ಒಂದೊಂದೇ ಮೊಟ್ಟೆಯಿಡಲು ಕಲಿತಿಲ್ಲ. ಸಮಂಜಸ

ವಾದ ಗೂಡು ಸಿಕ್ಕದಿದ್ದಲ್ಲಿ ನೆಲದಮೇಲೆಯೇ ಮೊಟ್ಟೆಯಿಟ್ಟು ಹಾಳಾಗುತ್ತವೆ ! ಅವುಗಳ ಮೊಟ್ಟೆ ೨೦೦ ವಿವಿಧ ಪ್ರಭೇದಗಳ ಗೂಡುಗಳಲ್ಲಿ ಕಂಡುಬಂದಿವೆ. ಪ್ರತಿ ಹೆಣ್ಣೂ ೪ – ೫ ಮೊಟ್ಟೆಗಳನ್ನು ಗೂಡಿಗೆ ಒಂದರಂತಿಡುತ್ತವೆ. ಆದರೆ ಕೋಗಿಲೆಗಳಂತೆ ತನ್ನ ಮೊಟ್ಟೆಗೆ ಬದಲಾಗಿ ಗೂಡಿನಲ್ಲಿನ ಒಂದು ಮೊಟ್ಟೆ ತೆಗೆಯುವುದಿಲ್ಲ. ಎಲ್ಲಾ ಮೊಟ್ಟೆಗಳನ್ನೂ ಕೆಲವುಸಲ ತಳ್ಳಬಹುದು. ಮರಿಗಳೂ ಇತರ ಪ್ರಭೇದ ಮರಿಗಳನ್ನು ಗೂಡಿನಿಂದ ತಳ್ಳುವುದಿಲ್ಲ. ಅವುಗಳೊಡನೆಯೇ ಬೆಳೆಯುತ್ತವೆ.

ಕುಟುಂಬ ೫೫ : ತ್ರೌಪಿಡೀ (Thraupidae)
(ಟಿನಾಗರ್ ಪಕ್ಷಿಗಳು Tinagars)

ಅಮೇರಿಕಾ ಖಂಡಗಳ ಉಷ್ಣ ಮತ್ತು ಸಮಶೀತೋಷ್ಣವಲಯ ವಾಸಿಗಳಾದ ೨೨೨ ಪ್ರಭೇದಗಳನ್ನೊಳಗೊಂಡ ಕುಟುಂಬವಿದು. ೪ ಪ್ರಭೇದಗಳು ಮಾತ್ರ ವಲಸೆ ಹೋಗುವುವು. ಉಳಿದವೆಲ್ಲಾ ಸ್ಥಳವಾಸಿಗಳು. ಹೆಣ್ಣು ಗಂಡುಗಳೆರಡೂ ಪೂರ್ಣ ವರ್ಣರಂಜಿತವಾಗಿದ್ದು, ಹಲವು ಪ್ರಭೇದಗಳಲ್ಲಿ ಮಾತ್ರ ಗಾತ್ರ ಹಾಗೂ ಬಣ್ಣ ವ್ಯತ್ಯಾಸ ಕಂಡುಬರುತ್ತದೆ. ದುಂಡು ದೇಹದ ೫ – ೮ ಅಂಗುಲ ಉದ್ದದ ಸಣ್ಣ ಪಕ್ಷಿಗಳಿವು. ರೆಕ್ಕೆ ೯ ಪ್ರಥಮ ಗರಿ ಹೊಂದಿ ಗಿಡ್ಡವಾಗಿ ದುಂಡಗಿರುತ್ತವೆ. ಎಲ್ಲಕ್ಕೂ ಕೊಕ್ಕುಗಳ ಬುಡದಲ್ಲಿ ಒರಟು ಕೂದಲಿರುತ್ತವೆ. ಇದೇ ಹಿಂದಿನ ಕುಟುಂಬಕ್ಕೂ ಇವುಗಳಿಗೂ ಇರುವ ಮುಖ್ಯ ವ್ಯತ್ಯಾಸ.

ಮೊದಲ ಪಂಗಡಕ್ಕೆ ೧೯೧ ಪ್ರಭೇದ ಸೇರುತ್ತವೆ. ಕೊಕ್ಕು ದಪ್ಪ, ಸಾಮಾನ್ಯ ನೀಳವಿರುತ್ತವೆ. ಮೇಲ್ಕೊಕ್ಕಿನ ಮೇಲ್ಭಾಗ ಸ್ವಲ್ಪ ಬಾಗಿದ್ದು, ಕೊಕ್ಕಿನ ತುದಿಯಂಚಲಿ ಕಚ್ಚು ಇರುತ್ತದೆ. ನಾಲಗೆ ಸಾಮಾನ್ಯವಾದದ್ದು. ನಾಲ್ಕು ಪ್ರಭೇದಗಳು ಉತ್ತರ ಸಮಶೀತೋಷ್ಣವಲಯ ವಾಸಿಗಳು. ದಕ್ಷಿಣಕ್ಕೆ ವಲಸೆ ಹೋಗುತ್ತವೆ. ಹೆಚ್ಚು ಗಲಭೆಯಿಲ್ಲದೆ ಮರಗಳ ದಟ್ಟ ಎಲೆಗಳ ಮಧ್ಯೆ ವಾಸಿಸುವುವು. ಹಾರಾಡುವ ಕೀಟಗಳನ್ನೂ, ಹಣ್ಣು, ಕಾಯಿಗಳನ್ನು ತಿನ್ನುತ್ತವೆ. ಹಾಡುಗಾರಿಕೆಯ ಪಕ್ಷಿಗಳಲ್ಲದಿದ್ದರೂ ಇಂಪು ನಾದ ಮಾಡಬಲ್ಲವು. ಇವು ಬಟ್ಟಲಿನಾಕಾರದ ಗೂಡು ರಚಿಸಿ ೩ – ೫ ನೀಲಿ ಬಣ್ಣದ ಚುಕ್ಕೆಯುಳ್ಳ ಮೊಟ್ಟೆಯಿಟ್ಟು ಹೆಣ್ಣು ಮಾತ್ರ ಕಾವಿತ್ತು ಮರಿಮಾಡುತ್ತವೆ. ಕಾವಿನ ಅವಧಿ ೧೪ – ೧೫ ದಿನ. ಗಂಡು ಆಹಾರ ಒದಗಿಸಲು ಸಹಾಯಕ.

ಮಕಮಲ್ ಟಿನಾಗರ್‌ಗಳ ೮ ಪ್ರಭೇದ ಮೆಕ್ಸಿಕೋದಿಂದ ಅರ್ಜೆಂಟೈನಾವರೆಗೆ ಕಂಡುಬರುತ್ತದೆ. ಉತ್ತಮ ಹಾಡುಗಾರ ಪಕ್ಷಿ. ಹಲವು ಜೊತೆಗಳು ಗುಂಪಾಗಿ ಒಂದೇ ಕೊಂಬೆಯಲ್ಲಿ ಒಂದಕ್ಕೊಂದು ಹೊಂದಿದಂತೆ ಗೂಡು ರಚಿಸುತ್ತವೆ. ಗೂಡು ರಚಿಸುವುದೂ ಮತ್ತು ಕಾವೀಯುವುದೂ ಹೆಣ್ಣೇ.

ನೀಲಿ ಟಿನಾಗರ್‌ಗಳು ಸಾಮಾನ್ಯ ದಪ್ಪ ಗಾತ್ರದವು. ಹೆಣ್ಣು ಗಂಡುಗಳಿಗೆ ವ್ಯತ್ಯಾಸವಿಲ್ಲ. ಮರವಾಸಿಗಳು. ಹಣ್ಣು ಕಾಯಿ ಮತ್ತು ಮುಖ್ಯವಾಗಿ ಕೀಟಗಳನ್ನು

ಹಿಡಿದು ತಿನ್ನುತ್ತವೆ. ಪರ್ವಕಾಲವನ್ನು ಬಿಟ್ಟು ಉಳಿದ ಸಮಯದಲ್ಲಿ ಗುಂಪಾಗಿ ವಾಸಿಸು ತ್ತವೆ. ಅವೂ ಬಟ್ಟಲಿನಾಕಾರದ ಗೂಡು ರಚಿಸಿ ೨–೩ ಮೊಟ್ಟೆಯಿಡುತ್ತವೆ.

ಟೆಂಗಾರಾ ಜಾತಿಯಲ್ಲಿ ಒಟ್ಟು ೪೮ ಪ್ರಭೇದಗಳಿವೆ. ಎಲ್ಲಾ ಉಷ್ಣವಲಯದವು. ಹೆಣ್ಣು ಗಂಡುಗಳಿಗೆ ಭೇದವಿಲ್ಲ. ಎಲ್ಲಾ ಹಣ್ಣು ಮತ್ತು ಕೀಟಾಹಾರಿಗಳು. ಅವು ಗಳಲ್ಲಿ ಸ್ವರ್ಣ ಮುಖದ ಪ್ರಭೇದ ಮೆಕ್ಸಿಕೋದಿಂದ ಅಮೆಜಾನ್‌ವರೆಗಿರುವುದು. ಹೆಣ್ಣೇ ಗೂಡು ರಚಿಸಿ ಕಾವಿತ್ತು ಮರಿಮಾಡುವುದು. ಈ ಪಂಗಡದಲ್ಲಿ ವಿವಿಧ ಅಪೂರ್ವ ಪ್ರಭೇದಗಳು ಸೇರಿವೆ. ಹಲವು ಈಗ ನಿರ್ನಾಮವಾಗಿರಬಹುದು.

ಯುಫೋನಿಯಾ ಅಥವಾ **ಟೆನಾಗ್ರ** ಜಾತಿ ಒಟ್ಟು ೨೪ ಪ್ರಭೇದಗಳನ್ನೊಳ ಗೊಂಡಿದೆ. ಅತಿ ಸಣ್ಣ ಪಕ್ಷಿಗಳಿವು. ೪ ಅಂಗುಲ ನೀಳ ದೇಹ, ದಟ್ಟ ಸಣ್ಣ ಕೊಕ್ಕು ಹೊಂದಿರುವುವು. ಜೊತೆಗೂಡಿ ಅಥವಾ ಸಣ್ಣ ಗುಂಪಾಗಿ ಹಣ್ಣು ಅರಸುತ್ತಾ ತಿರುಗಾಡುತ್ತವೆ. ಬದನಿಕೆಯ ಹಣ್ಣು ಇಷ್ಟವಾದ ಆಹಾರ. ಇವುಗಳು ಗೋಳಾ ಕಾರದ ಗೂಡು ರಚಿಸುತ್ತವೆ. ಹೆಣ್ಣೇ ಗೂಡು ರಚಿಸಿ ಕಾವೀಯುವುದು. ತಂದೆ ತಾಯಿಗಳು ಆಹಾರ ಕಕ್ಕಿ ಉಣಿಸುತ್ತವೆ.

ಕ್ಲೋರೋಫೋನಿಯಾ ಜಾತಿಯುವು ೫–೬ ಅಂಗುಲ ನೀಳದ ದಪ್ಪ ಗಾತ್ರದವು. ಉತ್ತಮ ವರ್ಣರಂಜಿತ ಪಕ್ಷಿಗಳು. ಎತ್ತರ ಪ್ರದೇಶದ ಕಾಡುಗಳಲ್ಲಿ ಮಾತ್ರ ವಾಸಿಸುತ್ತವೆ. ಇನ್ನೆಲ್ಲಾ ವಿಧದಲ್ಲೂ ಇತರ ಪಕ್ಷಿಗಳನ್ನು ಹೋಲುತ್ತವೆ.

ಡಾಕ್ನೀ ಉಪಕುಟುಂಬಕ್ಕೆ ೨೮ ಜೇನು ಕ್ರೀಪರ್ ಪಕ್ಷಿಗಳು ಸೇರಿವೆ. ಇವು ಗಳಿಗೆ ತೆಳುವಾದ ನೀಳ ಕೊಕ್ಕು ಮತ್ತು ಕೂದಲ ಗುಚ್ಛದ ನಾಲಿಗೆ ಇದೆ. ಇವು ತಮ್ಮ ನೀಳ ಮೊನಚು ಕೊಕ್ಕಿನಿಂದ ಹೂವಿನ ತಳಭಾಗದಲ್ಲಿ ತೂತು ಕೊರೆದು ಜೇನು ಹೀರು ತ್ತವೆ. ಸಣ್ಣ ಹಣ್ಣು, ಕೀಟಗಳನ್ನೂ ತಿನ್ನಬಲ್ಲವು. ಗಂಡು ಮರಿ ಪೋಷಣೆಯಲ್ಲಿ ಮಾತ್ರ ಸಹಾಯಕ. ಆದರೆ ಮರಿಗೆ ನೇರ ತಿನಿಸು ಕೊಡುತ್ತವೆ. ಅರ್ಧ ಜೀರ್ಣಿತವಲ್ಲ. ಹಲವು ವೆಸ್ಟ್‌ಇಂಡೀಸ್ ಪ್ರಭೇದಗಳು ಹಣ ಚೀಲದಾಕಾರದ ಗೂಡು ರಚಿಸು ತ್ತವೆ. ಇವುಗಳಲ್ಲಿ **ಡಿಗ್ಲಾಸಸ್**ಗಳು ಅತಿ ನೀಳ ಕೊಕ್ಕು ಹೊಂದಿದವು. ಅವುಗಳ ಮೇಲ್ಕೊಕ್ಕು ನೀಳವಾಗಿ ಮೇಲಕ್ಕೆ ಬಾಗಿರುತ್ತದೆ. ಅದರಿಂದ ಹೂವನ್ನು ಹಿಡಿದು ಸೂಜಿಯಂತಹ ನೇರ ಕೆಳಕೊಕ್ಕಿನಿಂದ ಚುಚ್ಚಿ ಹರಿದು, ನಾಲಿಗೆ ಚಾಚಿ ಜೇನು ಹೀರುತ್ತವೆ. ಕೀಟಗಳನ್ನೂ ಹಿಡಿಯಬಲ್ಲವು. ಇವು ಪೆರು ಬೊಲೀವಿಯಾ ಪ್ರದೇಶವಾಸಿಗಳು.

ಇವಲ್ಲದೆ ಹಿಂದುಳಿದಿರುವ ಮೂರು ಪ್ರಭೇದಗಳಿವೆ. ಅವುಗಳಲ್ಲಿ **ಸ್ವಾಲೋ ಟೆನಾಗರ್** ಪೊಟರೆ ಗೂಡಿನವು. ಮರದ ಪೊಟರೆಗಳಲ್ಲಿ ಮರಿ ಮಾಡುತ್ತವೆ. ಅವುಗಳ ಅಗಲ ಚಪ್ಪಟೆ ಕೊಕ್ಕು ನೀಳವಾಗಿ ತುದಿಯಲ್ಲಿ ಕೊಕ್ಕೆಯಂತೆ ಕೆಳಬಾಗಿರುತ್ತದೆ. ಕತ್ತಿನ ಬಳಿ ಅಗಲವಾಗುವ ಚೀಲವಿದೆ. ಹಣ್ಣು ತಿಂದಂತೆ ಅದು ದಪ್ಪನಾಗಿ ಬೆಳೆಯುತ್ತವೆ.

ತ್ರಷ್ ಟೆನಾಗರ್ಗಳು ನೆಲವಾಸಿಗಳು. ನೆಲದಮೇಲೆ ಕುಪ್ಪಳಿಸುತ್ತಾ ಕೀಟ ಹಿಡಿದು ತಿನ್ನುತ್ತವೆ. ಗಂಡು ಗೂಡು ರಚನೆಯಲ್ಲೂ ಮರಿ ಪೋಷಣೆಯಲ್ಲೂ

ಸಹಕರಿಸುತ್ತವೆ. ಮೂರನೆ **ಟೂಪ್ಪಿಗೆಯ ಟನಾಗರ್** ಕಿತ್ತಳೆ ಹಳದಿ ವರ್ಣದ ಮಕಮಲ್‌ನಂತಹ ಗರಿಶಿಖೆ ಹೊಂದಿರುತ್ತದೆ. ಕೊಕ್ಕು ಗಿಡ್ಡವಾಗಿ ಕೆಳಬಾಗಿರುತ್ತದೆ. ಆಂಡೀಸ್ ಪರ್ವತವಾಸಿ.

ಕುಟುಂಬ ೫೬ : ಫ್ರಿಂಜಿಲ್ಲಿಡೀ (Fringilliadae)

(ಪಶ್ಚಿಮಾರ್ಧಗೋಳದ ಬೀಜ ಭಕ್ಷಕಗಳು Seed eaters)

ಪಕ್ಷಿವರ್ಗದಲ್ಲಿ ಅತ್ಯುನ್ನತ ಮಟ್ಟದ ಪ್ರಭೇದಗಳಿರುವ ಕುಟುಂಬ. ೬೯೦ ಪ್ರಭೇದಗಳು ಇದುವರೆಗೆ ವರ್ಣಿತವಾಗಿವೆ. ಎಲ್ಲಕ್ಕೂ ದೃಢ ದಟ್ಟ ಸಣ್ಣ ಕೊಕ್ಕಿದ್ದು, ಕಾಳು ತಿನ್ನಲು ಅನುಕೂಲವಾಗಿದೆ. ಎಲ್ಲವೂ ಗುಬ್ಬಚ್ಚಿ ಮತ್ತು ಅವುಗಳ ಜೊತೆಯವು. ಅಂಟಾರ್‌ಕ್ಟಿಕಾ ಪ್ರದೇಶವನ್ನು ಬಿಟ್ಟು ಪ್ರಪಂಚದ ಇತರೆಲ್ಲೆಡೆ ವಾಸಿಸುತ್ತವೆ. ಅವುಗಳಲ್ಲಿ ಪೂರ್ವಾರ್ಧಗೋಳದ ಮತ್ತು ಪಶ್ಚಿಮಾರ್ಧಗೋಳದ ಜಾತಿ ಪ್ರಭೇದಗಳನ್ನು ಬೇರೆ ಬೇರೆ ಕುಟುಂಬವಾಗಿ ಪರಿಗಣಿಸಿ ವಿವರಿಸಲಾಗಿದೆ. ಈ ಕುಟುಂಬದಲ್ಲಿ ಪಶ್ಚಿಮಾರ್ಧಗೋಳದವು ಕೆಲವೇ ಪೂರ್ವಾರ್ಧಗೋಳದವು ಸೇರಿವೆ.

೯ ಪ್ರಥಮ ರೆಕ್ಕೆ ಗರಿಗಳುಳ್ಳ ೩೧೫ ಪ್ರಭೇದಗಳಿವೆ. ಎಲ್ಲವೂ ಬೀಜ ಕಾಳು ತಿನ್ನುವುವು. ಎಲ್ಲವೂ ನೆಲದಮೇಲೆ ಅಥವಾ ಅದರ ಬಳಿ ಆಹಾರ ಅರಸುವುವು. ನೆಲಸಿನಲ್ಲಿ ಕುಳಿತು ಹಾಡುತ್ತವೆ. ಹಾರುವಾಗ ಸಾಮಾನ್ಯವಾಗಿ ಹಾಡುವುದಿಲ್ಲ. ಚೆನ್ನಾಗಿ ಹಾರಾಡುತ್ತವೆ. ಸಮಶೀತೋಷ್ಣವಲಯದವು ವಲಸೆ ಹೋಗುತ್ತವೆ. ಸಂಘಜೀವಿಗಳು. ಗುಂಪಾಗಿ ಜೀವಿಸುತ್ತವೆ. ಕೊಕ್ಕಿನ ಬಳಿ ಒರಟು ಕೂದಲಿರುತ್ತದೆ. ಜೊತೆಗೂಡಿ ಬೇರೆಬೇರೆ ಗೂಡು ರಚಿಸುತ್ತವೆ. ಗೂಡು ನೆಲದ ಪೊದರು ಅಥವಾ ಮರದ ಮೇಲೆ ಬಟ್ಟಲಿನಾಕಾರದವು. ಕೆಲವು ಮಾತ್ರ ಗೋಳಾಕಾರದ ಅಥವಾ ಪೊಟರೆ ಗೂಡು ರಚಿಸುತ್ತವೆ. ಏಕಪತ್ನೀಕ ಮತ್ತು ತಾವೇ ಕಾವಿತ್ತು ಮರಿಮಾಡುವ ಕುಟುಂಬ.

ಇವುಗಳನ್ನು ಮೂರು ಉಪಪಂಗಡಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ದರಲ್ಲಿ ದುಂಡು ದೇಹದ, ದಟ್ಟ ಕೊಕ್ಕಿನ ೩೫ ಪ್ರಭೇದಗಳಿವೆ. ಕಾಡುವಾಸಿಗಳು. ಎಲ್ಲವೂ ಸಾಮಾನ್ಯ ಕಂದು ಬಣ್ಣವಾದರೂ ಹಲವು ಗಂಡುಗಳು ವರ್ಣರಂಜಿತ. ಸಂಘ ಜೀವಿಗಳಲ್ಲ. ಗೂಡು ರಚನೆಯಲ್ಲಿ ಭಾಗವಹಿಸುವುದು ಹೆಣ್ಣೇ. ಗಂಡು ಗೂಡು ಕಟ್ಟಲೂ ಹೆಣ್ಣಿಗೆ ಆಹಾರ ಒದಗಿಸಲೂ, ಮರಿ ಸಾಕಲೂ, ಸಹಾಯಕ. ಕೆನಡಾದಿಂದ ಅರ್ಜೆಂಟೈನಾ ವರೆಗಿರುತ್ತವೆ.

ಕಾರ್‌ಡಿನಲ್‌ಗಳು ಕೆಂಪು ದೇಹದ ಶಿಖೆ ಹೊಂದಿರುವುವು. ನೀಲಿ ಮತ್ತು ಕೆಂಪು **ಗ್ರಾಸ್‌ಬೀಕ್** (Grosbeak)ಗಳಲ್ಲಿ ಮಾತ್ರ ಗಂಡು ಕಾವಿತ್ತು ಮರಿ ಪೋಷಿಸು ತ್ತದೆ. **ಬಂಟಿಂಗ್** (Bunting)ಗಳ ೬ ಪ್ರಭೇದಗಳು ವಿವಿಧ ವರ್ಣ ಹೊಂದಿದ ಅತಿ ಸಣ್ಣ ಗಾತ್ರದ ಪ್ರಭೇದಗಳು. ಅವುಗಳಲ್ಲಿ ಉತ್ತರ ವಲಯದ ಮೂರು ಪ್ರಭೇದಗಳು ವಲಸೆ ಹೋಗುವುವು.

ಗುಬ್ಬಚ್ಚಿಗಳ ಜಾತಿಗೆ ೧೧ ದಪ್ಪ ದೇಹದ ಸಾಮಾನ್ಯ ವರ್ಣದ ಪಕ್ಷಿ ಪ್ರಭೇದಗಳು ಸೇರುತ್ತವೆ. ದಟ್ಟ ಕೊಕ್ಕಿರುವುವು ಕಾಳು ತಿನ್ನುವವಾದರೂ ಹೆಚ್ಚಾಗಿ ಹಣ್ಣು ಕಾಯಿ ತಿನ್ನುವುವು. ನೆಲದಬಳಿ ಅಥವಾ ಮೇಲೆ ಹೆಣ್ಣು ದೊಡ್ಡ ಬಟ್ಟಲಿನಾಕಾರದ ಗೂಡು ರಚಿಸಿ ೨ ಮೊಟ್ಟೆಯಿಟ್ಟು ಕಾವಿತ್ತು ಮರಿಮಾಡುತ್ತದೆ. ವರ್ಷಕ್ಕೆ ಹಲವು ಸಲ ಮರಿ ಮಾಡಬಲ್ಲವು.

ಎರಡನೆಯ ಪಂಗಡದವು ಡಾರ್‌ವಿನ್ ಕಂಡುಹಿಡಿದ ಗಾಲಾಪೋಗಸ್ ದ್ವೀಪದ **ಫಿಂಚ್**ಗಳು. ಸಣ್ಣ ಗಾತ್ರದ ೧೪ ಪ್ರಭೇದಗಳಿವು. ೪ – ೮ ಅಂಗುಲ ದೇಹ, ಸಾಮಾನ್ಯ ಕಂದು ಬೂದು ವರ್ಣ. ಒಂದು ಪ್ರಭೇದದಲ್ಲಿ ಮಾತ್ರ ಗಂಡು ಕಪ್ಪು. ಹೆಣ್ಣು ಗಂಡುಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಅವುಗಳ ಕೊಕ್ಕಿನ ರಚನೆಯಲ್ಲಿ ಹೆಚ್ಚಿನ ವೈವಿಧ್ಯತೆಯಿದೆ. ದಪ್ಪ ಗಾತ್ರದ ಕೊಕ್ಕಿನವು ಬೀಜಾಹಾರಿಗಳು. ತೆಳು ನೀಳ ಕೊಕ್ಕಿನವು ಕೀಟಾಹಾರಿಗಳು. ಕೆಳಬಾಗಿದ ಕೊಕ್ಕಿನ, ಇಬ್ಭಾಗ ನಾಲಗೆಯವು ಹೂವಿನ ಮಧು ಭಕ್ಷಕಗಳು. ಇವು ಪಾಪಾಸುಕಳ್ಳಿಯ ಹೂವು ಹಣ್ಣು ತಿನ್ನುತ್ತವೆ. ಇವುಗಳಲ್ಲಿನ ಮರಕಂಟುಕ ಫಿಂಚ್ ಅತ್ಯಂತ ಬುದ್ಧಿವಂತ ಪಕ್ಷಿ. ದಟ್ಟ ಕೊಕ್ಕಿನಿಂದ ಮರದಲ್ಲಿ ತೂತು ಮಾಡಿದರೂ, ಒಳಗಿರುವ ಹುಳು ಹೊರತೆಗೆಯಲು ನೀಳ ನಾಲಗೆಯಿಲ್ಲದಿರುವುದರಿಂದ, ನೀಳ ಕಡ್ಡಿ ಅಥವಾ ಮುಳ್ಳನ್ನು ತಂದು ತೂತಿನಲ್ಲಿನ ಕೀಟಕ್ಕೆ ಚುಚ್ಚಿ ಹೊರಕ್ಕೆಳೆದು ತಿನ್ನುತ್ತವೆ ! ವಿವಿಧ ಸಾಧನ ಉಪಯುಕ್ತತೆಯಲ್ಲಿ ನಿಪುಣತವು. ಇವೂ ಮತ್ತು ಬಣ್ಣಬಳಿಯಲು ಕುಂಚ ಉಪಯೋಗಿಸುವ ಕುಂಚ ಪಕ್ಷಿಗಳೂ ಗೋಳಾಕಾರದ ಗೂಡು ರಚಿಸಿ ನುಸುಗೆಂಪಿನ ಚುಕ್ಕೆಗಳ ಬಿಳೀ ಮೊಟ್ಟೆಯಿಟ್ಟು, ಹೆಣ್ಣು ಮಾತ್ರ ಕಾವಿತ್ತು ಮರಿಮಾಡುತ್ತವೆ. ಗಂಡು ಅದಕ್ಕೆ ಆಹಾರ ಒದಗಿಸಲೂ ಮರಿ ಪೋಷಿಸಲೂ ಸಹಾಯಕ. ಒಂದೇ ಜಾತಿಯಿಂದ, ಒಂದೆಡೆಯೇ ವೃದ್ಧಿಗೊಂಡಿದ್ದರೂ ಆಹಾರಕ್ಕನುಗುಣವಾಗಿ ಜೀವಿಗಳು ವಿಕಾಸ ಹೊಂದಿ ಬೇರೆಬೇರೆ ಪ್ರಭೇದಗಳೇರ್ಪಡುತ್ತವೆಂಬುದಕ್ಕೆ ಇದು ಉತ್ತಮ ನಿದರ್ಶನ.

ಮೂರನೆಯ ಪಂಗಡ ೨೬೬ ಪ್ರಭೇದಗಳನ್ನುಳ್ಳ ಅಮೇರಿಕಾದಲ್ಲೆಲ್ಲಾ ಹರಡಿರುವ ಬೀಜಾಹಾರಿಗಳು. ಉಷ್ಣ ಮತ್ತು ಸಮಶೀತೋಷ್ಣವಲಯದಲ್ಲಿ ಹೆಚ್ಚು. ೨ ಜಾತಿ ಶೀತವಲಯವಾಸಿ ೪ – ೮ ಅಂಗುಲ ದೇಹದ ಹಗುರ ಬೂದು ಕಂದು ವರ್ಣದ, ಬಿಳುಪು – ಕಪ್ಪು ಚುಕ್ಕೆ – ಗೆರೆಗಳ ಸಣ್ಣ ಪಕ್ಷಿಗಳು. ಎಲ್ಲವೂ ನೆಲವಾಸಿಗಳು. ಹುಲ್ಲುಗಾವಲು, ಪೊದರು ಭೂಮಿ ಮತ್ತು ಕಾಡುನೆಲಗಳಲ್ಲೇ ಇರುತ್ತವೆ, ನೆಲದ ಮೇಲಿರುವ ವಿವಿಧ ಬೀಜಗಳೇ ಮುಖ್ಯಾಹಾರ. ಹಣ್ಣು, ಕಾಯಿ, ಮೊಗ್ಗು ಹಾಗೂ ಸ್ವಲ್ಪ ಕೀಟಗಳನ್ನೂ ತಿನ್ನುತ್ತವೆ. ಮರಿಗಳಿಗೆ ಕೀಟಗಳೇ ಪೂರ್ಣಾಹಾರ. ಬಿಳೀ ಕತ್ತಿನ, ಬಿಳೀ ತಲೆಯ ಗುಬ್ಬಚ್ಚಿಗಳು ಇಂಪಾಗಿ ಹಾಡುತ್ತವೆ. ಸಮಶೀತೋಷ್ಣವಲಯ ವಾಸಿಗಳು ವಲಸೆ ಹೋಗುತ್ತವೆ. **ಬೀಜಾಹಾರಿ** ಪಕ್ಷಿಗಳು ಸಣ್ಣಗಾತ್ರದ ಸಂಘ ಜೀವಿಗಳು. ಪಕ್ಕಪಕ್ಕದಲ್ಲೇ ಗೂಡು ರಚಿಸುತ್ತವೆ. ಹೆಣ್ಣು ನೆಲದಲ್ಲಿ ಬಟ್ಟಲಿನಾಕಾರದ ಗೂಡು

ರಚಿಸಿ ೨ - ೩ ಮೊಟ್ಟೆಯಿಡುತ್ತವೆ. ಮರಿಗಳಿಗೆ ಆಹಾರ ಕಕ್ಕಿ ಉಣಿಸುವುದು ಅವುಗಳ ವೈಶಿಷ್ಟ್ಯ. ಮೆಕ್ಸಿಕೋ ಪ್ರದೇಶದಲ್ಲಿ ಹಳದಿ ವರ್ಣದ ಕತ್ತಿನ ೪ **ಗ್ರಾಸ್ ಕ್ವೈಟ್** ಪ್ರಭೇದಗಳಿವೆ. ಗೋಳಾಕಾರದ ಗೂಡು ರಚಿಸುತ್ತವೆ. **ಕೇಸರಿಫಿಂಚ್** ದ. ಅಮೇರಿಕಾ ಪ್ರಭೇದ ಪೊಟರೆ ಗೂಡಿನವು. ಮರ ಪೊಟರೆ, ಗೂಡಿನಲ್ಲಿನ ತೂತು ಅಥವಾ ಕಲ್ಲು ಪೊಟರೆಗಳಲ್ಲಿ ಹುಲ್ಲು, ಗರಿ ತುಂಬಿ ಗೂಡು ರಡಿಸಿ ಮರಿ ಮಾಡುತ್ತವೆ.

ಚಾಫಿಂಚ್ (Chaffinch)ಗಳು ಯುೂರೇಪಿಯಾದವು. ಹೆಣ್ಣು ಗಂಡು ಗಳೇ ಬೇರೆ ಬೇರೆ ಗುಂಪುಗಳಾಗಿ ವಲಸೆ ಹೋಗುತ್ತವೆ.

ಬ್ರಾಂಬ್‌ಲಿಂಗ್‌ಗಳೂ ಸಣ್ಣ ಗಾತ್ರದ ಕೋಟ್ಯಾಂತರ ಸಂಖ್ಯೆಯಲ್ಲಿ ಗುಂಪಾಗಿ ವಲಸೆ ಹೋಗುವುವು.

ಬಂಟಿಂಗ್‌ಗಳು ಅಫ್ರಿಕಾವರೆಗೂ ಮೈದಾನ, ಕಲ್ಲು ಗುಡ್ಡವಾಸಿಗಳಾಗಿರುವ ಹಲವು ಪ್ರಭೇದಗಳು. ಎಲ್ಲವೂ ಬಟ್ಟಲಿನಾಕಾರದ ಸಣ್ಣ ಗೂಡು ರಚಿಸಿ ೩ - ೬ ಮೊಟ್ಟೆಯಿಟ್ಟು ಮರಿ ಮಾಡುತ್ತವೆ. ಗೂಡು ರಚನೆ ಮತ್ತು ಕಾವೀಯುವುದು ಹೆಣ್ಣು ಮಾತ್ರ. ಮರಿ ಪೋಷಣೆಗೆ ಗಂಡು ಸಹಾಯಕ.

ಕುಟುಂಬ ೫೭ : ಪ್ಲೊಸಿಯಿಡೀ (Ploceidae)

(ಪೂರ್ವಾರ್ಧಗೋಳ ಉತ್ಪನ್ನ ಬೀಜಾಹಾರಿಗಳು)

ಪೂರ್ವಾರ್ಧಗೋಳದ ೩೭೫ ಪ್ರಭೇದಗಳು ಇದಕ್ಕೆ ಸೇರಿವೆ. ಎಲ್ಲಾ ಬೀಜಾ ಹಾರಿಗಳು. ೩ ಮುಖ್ಯ ಪಂಗಡಗಳನ್ನೊಳಗೊಂಡಿವೆ. ಅವುಗಳ ೧೦ನೆಯ ಪ್ರಥಮ ಗರಿ ಬಹು ಸಣ್ಣದಾಗಿರುತ್ತವೆ. ಗಿಡ್ಡ ಕಾಲು, ಮೇಲ್ಕೊಕ್ಕು ಸ್ವಲ್ಪ ಉದ್ದ. ಇವುಗಳಿಗೆ ಕೊಕ್ಕಿನಡಿ ಒರಟು ಕೂದಲುಗಳಿರುವುದಿಲ್ಲ. ಇವುಗಳ ಕಾಲು ಗಿಡ್ಡವಾಗಿ ಉಗುರು ಸೇರಿದ ಮಧ್ಯ ಬೆರಳಿಗಿಂತ ನೀಳವಾಗಿರುವುದಿಲ್ಲ. ಈ ಮೂರು ಈ ಕುಟುಂಬಕ್ಕೂ ಹಿಂದಿನದಕ್ಕೂ ಇರುವ ಮುಖ್ಯ ವ್ಯತ್ಯಾಸಗಳು.

ಗೋಲ್ಡ್‌ಫಿಂಚ್‌ಗಳ ಪಂಗಡದಲ್ಲಿ ೧೧೨ ಪ್ರಭೇದಗಳೂ, ಮಯಣ ಕೊಕ್ಕು ಪಂಗಡದಲ್ಲಿ ೧೦೭ ಪ್ರಭೇದಗಳೂ, ಮತ್ತು ನೇಯ್ಗೆ ಫಿಂಚ್‌ಗಳಲ್ಲಿ ೧೫೬ ಪ್ರಭೇದ ಗಳೂ ಇವೆ.

ಗೋಲ್ಡ್‌ಫಿಂಚ್ ಮತ್ತು ಅದರ ಸಂಬಂಧಿಕ ಪಕ್ಷಿಪ್ರಭೇದಗಳು ಮುಳ್ಳು ಪೊದರು ಬೀಜ ತಿನ್ನುವುದರಿಂದ ಆ ಹೆಸರು ಹೊಂದಿವೆ. ಹೆಚ್ಚಾಗಿ ಉತ್ತರವಲಯದಲ್ಲಿ ಉತ್ಪನ್ನವಾಗಿ ಈಸ್ಟ್‌ಇಂಡೀಸ್, ಆಸ್ಟ್ರೇಲಿಯಾ ಮತ್ತು ಶಾಂತಿಸಾಗರದ್ವೀಪಗಳನ್ನುಳಿದು ಉಳಿದೆಲ್ಲೆಡೆ ಹರಡಿವೆ. ಇವೆಲ್ಲವೂ ಹೆಚ್ಚಾಗಿ ಮರವಾಸಿಗಳು. ಹಾರಾಡುವಾಗ ಹಾಡುತ್ತಿರುತ್ತವೆ. ಗುಂಪಾಗಿ ವಲಸೆ ಹೋಗುತ್ತವೆ. ಮರಕೊಂಬೆಗಳಲ್ಲಿ ಬಟ್ಟಲಿ ನಾಕಾರದ ಗೂಡು ರಚನೆ ಸಾಮಾನ್ಯ. ಹೆಣ್ಣೇ ಕಾವೀಯುವುದು. ಗಂಡು ಹೆಣ್ಣಿಗೂ

ಮರಿಗಳಿಗೂ ಆಹಾರ ಒದಗಿಸುತ್ತದೆ. ಆದರೆ ಕೊಳಕು ಜೀವಿಗಳು. ಗೂಡು ಶುಚಿಯಾಗಿರುವುದಿಲ್ಲ.

ಹಲವು ವಿವಿಧ ವರ್ಣವಿದ್ದು. ಚುಕ್ಕಿ ಅಥವಾ ಪಟ್ಟೆ ಹೊಂದಿರುತ್ತವೆ. ಕೆಲವು ಪ್ರಭೇದಗಳು ಮಾತ್ರ ಪೂರ್ಣ ವರ್ಣ ಹೊಂದಿದವು. ಹೆಣ್ಣು ಗಂಡುಗಳು ಒಂದೇ ರೀತಿ, ಅಥವಾ ಗಂಡು ವರ್ಣರಂಜಿತವಾಗಿರುತ್ತವೆ. ಹಲವು ಕಂದು ವರ್ಣದವು. ಉತ್ತರ ಶೀತವಲಯದ ಕಾಡಂಚಿನ ಪ್ರದೇಶದಲ್ಲಿ ವಾಸಿಸುತ್ತವೆ. ಅಮೇರಿಕಾ ಖಂಡಗಳಲ್ಲಿ ೩೨ ಪ್ರಭೇದಗಳು ಈಗ ವೃದ್ಧಿಗೊಂಡಿವೆ. ಈ ಪಂಗಡದ ಅತಿ ದೊಡ್ಡ ಗಾತ್ರದವು ೮ ಅಂಗುಲ ನೀಳವಾಗಿವೆ.

ಕ್ರಾಸ್‌ಬಿಲ್‌ಗಳ ಕೊಕ್ಕು, ಒಂದರಮೇಲೊಂದು ಹಾಯ್ದಂತಿದ್ದು ಪೈನ್‌ಕಾಯಿಗಳನ್ನು ಅಗಲಿಸಿ ಒಳಗಿನ ತಿರುಳು ಕೆರೆದು ತಿನ್ನುವಂತಿರುತ್ತದೆ. ಅವು ಇತರ ಕಾಳುಗಳನ್ನೂ ತಿನ್ನಬಲ್ಲವು. ಮರಿಗಳಿಗೆ ಕೀಟಗಳೇ ಆಹಾರ.

ಕೆನರಿ ಪಕ್ಷಿಗಳು ಸಾಕಲನುಕೂಲವಾದವು. ಅವು ಉತ್ತಮ ಹಾಡುಗಾರಿಕೆಯ ವರ್ಣರಂಜಿತ ಪಕ್ಷಿಗಳು.

ಮಯಣ ಕೊಕ್ಕಿನ ಪಂಗಡದವೂ ಸಾಕಲನುಕೂಲವಾದವು, ವಿವಿಧ ವರ್ಣರಂಜಿತ ಪಕ್ಷಿಗಳಿವು. ಹಾಡಲಾರವು. ಆಫ್ರಿಕಾದಿಂದ ಆಸ್ಟ್ರೇಲಿಯಾವರೆಗೆ ಒಟ್ಟು ೧೦೭ ಪ್ರಭೇದಗಳು ಕಂಡುಬರುತ್ತವೆ. ೬ ಅಂಗುಲ ಮೀರದ ದೇಹದ ದಟ್ಟ ಕೊಕ್ಕಿನ ಸಣ್ಣ ಪಕ್ಷಿಗಳು. ಸ್ಥಳವಾಸಿಗಳು ವಲಸೆ ಹೋಗುವುದು ಕಡಮೆ. ಮೈದಾನ, ಪೊದರು ಮತ್ತು ಕಾಡಂಚಿನಲ್ಲೆ ಹೆಚ್ಚು ವಾಸ. ಎಲ್ಲ ನೆಲದ ಮೇಲೆ ಹುಲ್ಲು ಬೀಜ ಮುಂತಾದವನ್ನು ಹುಡುಕಿ ತಿನ್ನುವುವು. ಸಂಘಜೀವಿಗಳು. ಎರಡು ಮೂರು ಪ್ರಭೇದಗಳು ಸೇರಿ ಸಣ್ಣ ಗುಂಪಾಗಿ ತಿರುಗಾಡುತ್ತವೆ. ಒಟ್ಟಾಗಿ ಹತ್ತಿರ ಹತ್ತಿರವೇ ಗೂಡು ರಚಿಸುತ್ತವೆ. ಗೋಳಾಕಾರದ ಗೂಡಿಗೆ ಒಂದು ಪಾರ್ಶ್ವದಲ್ಲಿ ಮಧ್ಯೆ ಒಳಹೋಗಲು ದ್ವಾರವಿರುತ್ತದೆ. ಹಲವು ಗಂಡು ವಿಶ್ರಾಂತಿ ಗೂಡುಗಳನ್ನೂ ರಚಿಸುತ್ತವೆ. ೪ – ೧೦ ಬಿಳುಪು ವರ್ಣದ ಮೊಟ್ಟೆಯಿಡುತ್ತವೆ. ಗಂಡು ಗೂಡು ರಚನೆಯಲ್ಲೂ ಮರಿ ಪೋಷಣೆಯಲ್ಲೂ ಸಹಾಯಕ. ಅವುಗಳು ಗೂಡಿನಿಂದ ಹಿಕ್ಕೆ ತೆಗೆಯುವುದಿಲ್ಲವಾದರೂ ತೆಳುವಾಗಿರುವುದರಿಂದ ಬೇಗ ಒಣಗಿ ಪುಡಿಯಾಗಿ ದುರ್ನಾತ ಬೀರುವುದಿಲ್ಲ. ಮರಿಗಳ ಬಾಯಿಯ ಒಳಭಾಗ ಕೆಂಪು ಬಣ್ಣವಿರುತ್ತದೆ. ಒಂದು ವರ್ಷದಲ್ಲೇ ಸಂತಾನಾಭಿವೃದ್ಧಿಗೆ ಸಿದ್ಧವಾಗುತ್ತದೆ. ಆಫ್ರಿಕಾದ ಒಂದು ಪ್ರಭೇದ ಗೆದ್ದಲುಗಳನ್ನೂ ತಿನ್ನುತ್ತವೆ.

ಕೆಂಪು ಅವದಾವತ್ (Avdavath) ಗಳು ಭಾರತದವು. ಅಹಮದಾಬಾದಿನಿಂದ ಮೊದಲು ಯೂರೋಪಿಗೆ ರವಾನಿಸಲಾಗಿದ್ದು ಅಹಮದಾಬಾದ್ ಅವದಾವತ್ ಆಗಿದೆ. ಗುಂಪಾಗಿ ಹಾರಾಡುತ್ತಿದ್ದು ಅವನ್ನು ಸುಲಭವಾಗಿ ಹಿಡಿದು ಸಾಕಬಹುದು. ಇವು ವರ್ಷಕ್ಕೆ ಅನೇಕಸಲ ಮರಿಮಾಡಬಲ್ಲವು.

ಮುನಿಯಾ (Muniya) ಗಳು ವರ್ಷಕ್ಕೆ ೫ ಸಲ ಮರಿ ಮಾಡಿದ ದಾಖಲೆ ಯಿಂದೆ.

ಮಾನಿಕಿನ್ (Mannikin) ಪಕ್ಷಿಗಳು ದೊಡ್ಡ ಗುಂಪಾಗಿ ವಾಸಿಸುತ್ತಾ ಫಿಲಿಪೈನ್ ಮತ್ತು ಮಲಯಾದಲ್ಲಿನ ಬತ್ತ ಗದ್ದೆಗಳಿಗೆ ಹೆಚ್ಚು ನಷ್ಟವುಂಟುಮಾಡುತ್ತವೆ. **ಗೌಲ್‌ಡಿಯನ್** ಫಿಂಚ್ ಅತ್ಯಂತ ಆಕರ್ಷಕ ವರ್ಣ ಹೊಂದಿರುವುದು. ಅದರ ಬಾಲ ಮಾತ್ರ ಚದುರವಾಗಿರದೆ, ನೀಳವಾಗಿ ಮೊನಚಾಗಿರುತ್ತದೆ. **ಗಿಣಿಫಿಂಚ್** ಪ್ರಭೇದ ಗಳೂ (೯) ಮೊನಚು ಬಾಲದವೇ. ವಿವಿಧ ವರ್ಣ ಹೊಂದಿರುತ್ತವೆ.

ಮೂರನೆಯ ಪಂಗಡ ಪಕ್ಷಿಗಳು ಉತ್ತಮ ಗೂಡು ರಚನಾ ಕೌಶಲ್ಯ ಹೊಂದಿರು ವುವು. ಅವುಗಳಲ್ಲಿ **ಒಫೇಲೋ ವೀವರ್ಸ್**, ಗುಬ್ಬಚ್ಚಿ ವೀವರ್ಸ್, ಸಾಮಾನ್ಯ ವೀವರ್ಸ್ ಮತ್ತು ವಿಧವೆ ವೀವರ್ಸ್‌ಗಳೆಂಬ ನಾಲ್ಕು ಉಪಪಂಗಡಗಳಿವೆ. ಅದರಲ್ಲಿ ಮೂರನೆಯ ಪಂಗಡಕ್ಕೆ ಗುಬ್ಬಚ್ಚಿಗಳು ಸೇರಿವೆ. ಹಲವು ಪ್ರಭೇದಗಳು ಒಂಟಿಜೀವಿಗಳಾದರೂ ಹೆಚ್ಚಾಗಿ ಸಂಘಜೀವಿಗಳು. ಅತ್ಯಂತ ಆಶ್ಚರ್ಯಕರ ಗೂಡುಗಳನ್ನು ನೇಯ್ದು ರಚಿಸು ತ್ತವೆ. ಕೆಲವು ಪ್ರಭೇದಗಳಲ್ಲಿ ಬೃಹದಾಕಾರದ ಸಾಮೂಹಿಕ ಗೂಡು ರಚಿಸಲ್ಪಡುತ್ತದೆ. ಕೆಲವು ಹುಲ್ಲು ಕಡ್ಡಿಗಳ ಜೋಡಣೆಯ ಸಾಮಾನ್ಯ ಗೂಡನ್ನು ರಚಿಸುತ್ತವೆ. ನಾಲ್ಕನೆಯ ಉಪಪಂಗಡದವು ಪರೋಪಜೀವಿಗಳು. ಇತರ ಪಕ್ಷಿಗಳ ಗೂಡಿನಲ್ಲಿ ಮೊಟ್ಟೆಯಿಟ್ಟು ಮರಿಮಾಡಲೇರ್ಪಡಿಸುತ್ತವೆ.

ಮೊದಲನೆಯ ಉಪಪಂಗಡಕ್ಕೆ ಮೂರು ಪ್ರಭೇದ ಸೇರಿವೆ. ೮ – ೧೦ ಅಂಗುಲ ಉದ್ದದ, ಕಂದು, ಬೂದು ಬಣ್ಣದ ಮೈ ಹೊಂದಿದವು. ಆಫ್ರಿಕಾದಲ್ಲಿನ ಹುಲ್ಲು ಗಾವಲುಗಳಲ್ಲಿ ಸಣ್ಣ ಗುಂಪಾಗಿ ಹಾರಾಡುತ್ತಾ ಹುಲ್ಲು ಬೀಜ ಮತ್ತು ಕೀಟಗಳನ್ನು ಹಿಡಿದು ತಿನ್ನುತ್ತವೆ. ಎತ್ತರ ಕೊಂಬೆಗಳಲ್ಲಿ ಎರಡು ಮೂರು ಕೋಣೆಗಳುಳ್ಳ ದೊಡ್ಡ ಗೂಡು ರಚಿಸಿ ಪ್ರತಿ ಕೋಣೆಯಲ್ಲೂ ಒಂದೊಂದು ಮರಿ ಮಾಡುತ್ತದೆ. ಒಂದು ಕೊಂಬೆಯಲ್ಲಿ ಅಂತಹ ಹಲವು ಗೂಡು ರಚನೆಯಾಗಿ, ಅವುಗಳ ರಕ್ಷಣೆಗಾಗಿ ಸುತ್ತಲೂ ಮುಳ್ಳು ಸಿಕ್ಕಿಸಿಡಬಹುದು.

ಎರಡನೆಯ ಉಪಪಂಗಡ ೩೫ ಪ್ರಭೇದಗಳನ್ನೊಳಗೊಂಡಿವೆ. ಅದರಲ್ಲಿ ಗುಬ್ಬಚ್ಚಿ ಮಾನವ ನಿವಾಸದ ಬಳಿಯೆಲ್ಲಾ ಹರಡಿದ್ದು ಅದರ ಹೆಸರೇ ಈ ಕುಟುಂಬಕ್ಕೆ ಸೂಚಕವಾಗಿದೆ, ೧೮೫೨ರಲ್ಲಿ ಅದನ್ನು ಅಮೇರಿಕಾಕ್ಕೆ ಮೊದಲು ತರಲಾಯಿತು. ಆಗ ಆ ಖಂಡದಲ್ಲಿ ಎಲ್ಲೆಡೆ ಹರಡಿದ್ದ ಫಿಲಿಪೈನ್ಸ್‌ನ ಮರಗುಬ್ಬಚ್ಚಿಗಳು ಇನ್ನೊಂದು ಮುಖ್ಯ ಪ್ರಭೇದ. ಚೈನಾ, ಕೊರಿಯಾ, ಜಪಾನ್‌ಗಳಲ್ಲಿನ ಮರಗುಬ್ಬಚ್ಚಿಯು ಪ್ರಭೇದ ಎಲ್ಲೆಡೆ ಸಾಮಾನ್ಯವಾಗಿದ್ದು, ಹೆಣ್ಣು ಗಂಡುಗಳಲ್ಲಿ ಭೇದವಿರುವುದಿಲ್ಲ. ಅವು ಬತ್ತ ಕೊಯಲಿಗೆ ಸಿದ್ಧವಾದಾಗ ಕೋಟ್ಯಾಂತರ ಸಂಖ್ಯೆಯಲ್ಲಿ ಆಗಮಿಸುತ್ತವೆ. ಅವುಗಳನ್ನು ಹಿಮ್ಮೆಟ್ಟಿಸಲು ಸರ್ವ ಪ್ರಯತ್ನ ಮಾಡಲಾಗುವುದಲ್ಲದೆ, ಲಕ್ಷಾಂತರ ಸಂಖ್ಯೆಯಲ್ಲಿ ಬಲೆ ಹಾಕಿ ಹಿಡಿದು ಆಹಾರಕ್ಕಾಗಿ ಉಪಯೋಗಿಸಲಾಗುತ್ತದೆ. ಜಪಾನಿನಲ್ಲೇ ವರ್ಷಕ್ಕೆ

೫೦ ಲಕ್ಷಕ್ಕೆ ಮೇಲ್ಪಟ್ಟು ಪಕ್ಷಿಗಳು ಕೊಲ್ಲಲ್ಪಟ್ಟು ಮಾರಾಟವಾಗುತ್ತವೆ ! ಹತ್ತು ಪಕ್ಷಿಗಳನ್ನು ಹುಲ್ಲಿನಿಂದ ಹೆಣೆದ ಒಂದು ಸರವಾಗಿ ಮಾರುತ್ತಾರೆ. ಅಲ್ಲಿಯ ಉಪಾಹಾರ ಗೃಹಗಳಲ್ಲಿ ಕೆಂಡದಮೇಲೆ ಚೆನ್ನಾಗಿ ಸುಟ್ಟು ಸೋಯಾಬೀನಿನ ಸಾಸ್ ಸವರಿ ತಿನ್ನುವುದು ಎಲ್ಲರಿಗೂ ಇಷ್ಟ. ಸಮಶೀತೋಷ್ಣವಲಯದ ೪ – ೫ ಸಾವಿರ ಅಡಿ ಎತ್ತರ ಬೆಟ್ಟ ಪ್ರದೇಶದಲ್ಲಿ **ಹಿಮಫಿಂಚ್**ಗಳು ವಾಸಿಸುತ್ತವೆ. ಹೆಣ್ಣು ಗುಬ್ಬಚ್ಚಿಯಂತಿರುವ ಅವು ಎಲ್ಲೆಲ್ಲೂ ಸಾಮಾನ್ಯವಾಗಿ ಕಂಡುಬರುತ್ತವೆ. ಇವೆಲ್ಲವೂ ಸಾಮಾನ್ಯವಾಗಿ ಮನೆಮಾಡುಗಳಡಿಯ ತೂತುಗಳಲ್ಲಿ ಹುಲ್ಲು ಗರಿ ತುಪ್ಪಟಗಳನ್ನು ತುಂಬಿಟ್ಟು ಗೂಡು ಮಾಡಿಕೊಳ್ಳುತ್ತವೆ. ೪ – ೬ ಚುಕ್ಕಿಯ ಬಿಳಿ ಮೊಟ್ಟೆಗಳನ್ನಿಟ್ಟು ಹೆಣ್ಣು ಮಾತ್ರ ೧೨ – ೧೪ ದಿನ ಕಾವಿತ್ತು ಮರಿಮಾಡುತ್ತದೆ. ವರ್ಷಕ್ಕೆ ೨ ಸಲ ಮರಿಮಾಡಬಲ್ಲವು.

ಮೂರನೆಯ ಉಪಪಂಗಡದವು ಅತ್ಯಂತ ವಿಸ್ಮಯಕಾರಕ ಗೂಡು ರಚಿಸಬಲ್ಲ, ನೇಯ್ಗೆ ಗುಬ್ಬಚ್ಚಿಗಳ ಪಂಗಡ. ಅವುಗಳಲ್ಲಿ ಆಫ್ರಿಕಾದ ಸಾಮೂಹಿಕವಾಸಿ ಪ್ರಭೇದವೊಂದು ಬಹು ದಪ್ಪ ಗೂಡು ರಚಿಸುತ್ತವೆ. ಎತ್ತರವಾದ ದಪ್ಪ ಮರ ಕೊಂಬೆಯಲ್ಲಿ ೧೦ ಅಡಿ ಎತ್ತರ ೧೫ ಅಡಿ ಅಗಲವಿರುವ ಗೂಡು ರಚಿಸಬಲ್ಲವು. ಸುಮಾರು ೨೦೦ – ೩೦೦ ಜೊತೆ ಒಟ್ಟಾಗಿ ಸೇರಿ ಮೊದಲು ನೀರು ಒಳಹೋಗದಂತೆ ಹುಲ್ಲಿನಲ್ಲಿ ಹೆಣೆದು ಮಾಡು ರಚಿಸುತ್ತವೆ. ನೇತಾಡುವಂತೆ ಮಧ್ಯೆ ದಪ್ಪವಾಗಿ ಅಡಿಯಲ್ಲಿ ನೀಳ ನೇತಾಡುವ ಕೊಳವೆಯಾಕಾರದ ಗೂಡನ್ನು ಅದಕ್ಕೆ ಹೆಣೆದು ಜೋತುಬಿಡುತ್ತವೆ. ಅವುಗಳಲ್ಲಿ ೨ – ೪ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಆ ಮರದಲ್ಲೇ ವರ್ಷವಿಡೀ ವಾಸವಿದ್ದು ಕೀಟ, ಹುಲ್ಲು ಬೀಜ ಹುಡುಕಿ ತಿಂದು, ರಾತ್ರಿ ಅಲ್ಲೇ ವಿಶ್ರಮಿಸುತ್ತವೆ.

ಸಾಮಾನ್ಯ ನೇಯ್ಗೆ ಪಕ್ಷಿಗಳ ೧೧೯ ಪ್ರಭೇದಗಳು ಆಫ್ರಿಕಾ, ಏಷ್ಯಾಖಂಡ ವಾಸಿಗಳು. ಗಂಡು ಹಳದಿ – ಕಪ್ಪು ವರ್ಣದವು. ಹೆಣ್ಣು ಸಾಮಾನ್ಯ ಗುಬ್ಬಚ್ಚಿಯಂತಿರುತ್ತದೆ. ಕೆಲವು ಮಾತ್ರ ಜೊತೆಗೂಡಿ ದೂರದೂರ ಒಂಟಿ ಗೂಡು ರಚಿಸುತ್ತವೆ. ಆದರೆ ಸಾಮಾನ್ಯವಾಗಿ ಹಲವು ಸಾವಿರ ಜೊತೆಗಳು ಸಾಮೂಹಿಕವಾಗಿ ಒಂದೇ ಸ್ಥಳದಲ್ಲಿ ಜೋತಾಡುವ ಹೂಜಿಯಾಕಾರದ ಸಹಸ್ರಾರು ಗೂಡು ರಚಿಸುತ್ತವೆ. ಒಳ ಪ್ರವೇಶ ಮೇಲ್ಭಾಗದ ರಂಧ್ರದಿಂದ ಅಥವಾ ಜೋತಾಡುವ ಕೊಳವೆಯ ಮೂಲಕ. **ಹಳ್ಳಿ ನೇಯ್ಗೆ ಪಕ್ಷಿ** ಆಫ್ರಿಕಾದಲ್ಲೆಲ್ಲಾ ಸಾಮಾನ್ಯವಾಗಿ ಕಂಡುಬರುತ್ತದೆ. ಒಂದೇ ಮರದಲ್ಲಿ ಅನೇಕ ಜೊತೆ ಗೂಡು ರಚಿಸುತ್ತವೆ. ಗಂಡು ಮೊದಲು ತೆಂಗು ಜಾತಿ ಗಿಡದ ಎಲೆಯನ್ನು ಹರಿದು ಅದರ ಚೂರಿನಿಂದ ಗೂಡು ಮೇಲ್ಭಾಗ ಹೆಣೆದು ಹೂಜಿಯಾಕಾರದ ಗೂಡು ರಚಿಸುತ್ತದೆ. ಹೆಣ್ಣು ಒಳಭಾಗಕ್ಕೆ ಮೆತ್ತೆ ಹೊದಿಕೆ ಏರ್ಪಡಿಸುತ್ತದೆ. ಕೆಲವು ವೇಳೆ ಹೆಣ್ಣು ಹೆಚ್ಚು ಸಂಖ್ಯೆಯಿದ್ದಲ್ಲಿ, ಗಂಡು ಹಲವು ಗೂಡು ರಚಿಸಿ ಬಹುಪತ್ನೀಕವಾಗುತ್ತದೆ.

ಭಾರತದ **ಬಾಯಾ ನೇಯ್ಗೆ ಪಕ್ಷಿ**ಗಳ ಗೂಡೂ ಅದರಂತೆಯೇ ರಚಿತವಾದದ್ದು. ಅವೂ ತಲೆಕೆಳಗಾದ ಹೂಜಿಯಾಕಾರದಲ್ಲಿದ್ದು, ಕೆಳ ಕೊಳವೆಯು

ಮೂಲಕವೇ ಪ್ರವೇಶರಂಧ್ರವೇರ್ಪಡಿಸಿರುತ್ತವೆ. ೧೦ರಿಂದ ೫೦ ಅಂತಹ ಗೂಡು ಗಳು ಒಂದೇ ಮರ ಅಥವಾ ಮುಳ್ಳು ಪೊದರುಗಳಿಂದ ಜೋತಾಡಂತಿರಬಹುದು. ಇದರಲ್ಲೂ ಗಂಡೇ ಗೂಡು ರಚನೆ ಪ್ರಾರಂಭಿಸುವುದು. ಹೆಣ್ಣು ಹೊದಿಕೆ ಹೊಂದಿಸು ತ್ತದೆ. ಗಂಡು ಅನೇಕ ಗೂಡು ರಚಿಸಿ ಬಹುಪತ್ನೀಕವಾಗುತ್ತದೆ.

ಕೆಂಪು ಕೊಕ್ಕಿನ ಕೊಯಿಲಾಗಳು ಆಫ್ರಿಕಾದಲ್ಲಿ ಕೋಟಿ ಸಂಖ್ಯೆಯ ಗುಂಪಾಗಿ ಹುಲ್ಲುಗಾವಲಲ್ಲಿ ಕೂಡಿ ಸಂಚರಿಸುತ್ತಿದ್ದು, ಕಾಳು ಕಟ್ಟುವಾಗ ಅತಿ ಹೆಚ್ಚಿನ ನಷ್ಟಮಾಡುತ್ತವೆ. ಬೆಂಕಿಯಿಂದ ಹಾಗೂ ವಿಮಾನದಿಂದ ಮಾರಕದ್ರವ ಎರಚು ವುದರಿಂದ ಲಕ್ಷಾಂತರ ಪಕ್ಷಿಗಳನ್ನು ನಾಶಪಡಿಸಲಾಗುತ್ತದೆ. ಅನುಕೂಲ ವಾತಾವರಣ ಹಾಗೂ ಆಹಾರವಿದ್ದೆಡೆ ಅವು ಗೂಡು ರಚಿಸಿ ಸಂತಾನಾಭಿವೃದ್ಧಿ ಪ್ರಾರಂಭಿಸುತ್ತವೆ. ಅಂಡಾಕಾರದ ಸರಳ ಗೂಡುಗಳನ್ನು ಗಂಡು ಹೆಣೆದು, ಕಾವು ಕೂರುವುದರಲ್ಲಿ ತಾನೂ ಸಹಕರಿಸುತ್ತದೆ. ೧೨–೧೩ ದಿನಗಳಲ್ಲಿ ಮರಿಯಾಗಿ ಮರಿ ಇನ್ನೂ ೧೦–೧೨ ದಿನ ಗಳಲ್ಲಿ ಗೂಡು ಬಿಟ್ಟು ಹಾರಾಡಲು ಸಿದ್ಧವಿರುತ್ತವೆ.

ಬಿಷಪ್ ಮತ್ತು ವಿಡಾ ನೇಯ್ಗೆ ಪಕ್ಷಿಗಳು ಆಫ್ರಿಕಾದವೇ. ಜೊಂಡುಗಳ ನಡುವೆ ಗೂಡು ಅಂಡಾಕಾರದ ಹುಲ್ಲು ಹೆಣೆದ ಗೂಡು ರಚಿಸುತ್ತವೆ. ಅವು ಬಹು ಪತ್ನೀಕ ಪಕ್ಷಿ ಪ್ರಭೇದಗಳೇ. ವಿಡಾ ಪಕ್ಷಿಗಳು ಸಣ್ಣ ಗಾತ್ರದವು. ಪರ್ವಕಾಲದಲ್ಲಿ ಗಂಡು ವರ್ಣರಂಜಿತವಾಗಿ ನೀಳ ಬಾಲ ಗರಿ ಹೊಂದುತ್ತವೆ. ಬಹುಪತ್ನೀಕ. ೪–೧೨ ಹೆಣ್ಣು ಹೊಂದಿರಬಲ್ಲವು.

ವಿಧವೆ ಪಕ್ಷಿಗಳಲ್ಲಿ ಗಂಡು ಪರ್ವಕಾಲದಲ್ಲಿ ಮೋಹಕ ವರ್ಣದ ಬಾಲ ಹೊಂದುತ್ತವೆ. ಎಲ್ಲವೂ ಬಹುಪತ್ನೀಕ. ಆದರೆ ಗೂಡು ರಚಿಸಿದ ಪರೋಪಜೀವಿ! ಗಂಡು ಪರ್ವಕಾಲದಲ್ಲಿ ನರ್ತನ ವೇದಿಕೆ ರಚಿಸಿ ನರ್ತಿಸುತ್ತವೆ. ಮಧ್ಯೆ ನೀಳ ಗಂಚ್ಚ ಹುಲ್ಲು ಬಿಟ್ಟು ಸುತ್ತಲೂ ೪–೫ ಅಡಿ ಜಾಗ ಮಟ್ಟ ಮಾಡಿ, ತನ್ನ ಬಾಲ ಹರಡಿ ವಿವಿಧವಾಗಿ ಕೂಗುತ್ತಾ ನರ್ತಿಸುತ್ತದೆ. ಹಲವು ವೇಳೆ ೨೦೦ ಅಡಿಯಷ್ಟು ಮೇಲೆ ಹಾರಿ ತೇಲುತ್ತಾ ಬಾಲವನ್ನಗಲಿಸಿ ಕೆಳಗಿಳಿಯುತ್ತವೆ. ಅವು ಮಯಣ ಕೊಕ್ಕು ಪ್ರಭೇದಗಳ ಗೂಡಿನಲ್ಲಿ ಮಾತ್ರ ಮೊಟ್ಟೆಯಿಡುತ್ತವೆ. ಪ್ರತಿ ಪ್ರಭೇದ ಒಂದು ಅಥವಾ ಎರಡು ಪ್ರಭೇದಗಳ ಗೂಡಿನಲ್ಲಿ ಮಾತ್ರ ಮೊಟ್ಟೆಯಿಡುತ್ತವೆ. ಅವುಗಳ ಮೊಟ್ಟೆಯೂ ಬಿಳುಪಾಗಿ ಚುಕ್ಕಿ ಹೊಂದದೆ, ಮಯಣ ಕೊಕ್ಕು ಪ್ರಭೇದಗಳ ಮೊಟ್ಟೆ ಯಂತಿರುತ್ತವೆ. ಸಾಮಾನ್ಯವಾಗಿ ಅದು ಅತಿಥೇಯ ಪಕ್ಷಿಗಳ ಮೊಟ್ಟೆಗಳನ್ನು ನಾಶ ಮಾಡದೆ ಪ್ರತಿ ಗೂಡಿನಲ್ಲೂ ತನ್ನ ಒಂದೇ ಮೊಟ್ಟೆಯನ್ನಿಡುತ್ತದೆ.

Sparrow Yellow Throuted ಕಾಡುಗುಬ್ಬಚ್ಚಿ
Sun Fowl ಬೆಟ್ಟುಕೋಳಿ ; ಗೆಜ್ಜಲುಕೋಳಿ
Sand grouse ಮರಳುವಕ್ಕಿ
Sand grouse (painted) ಕಲ್ಲುಗೌಜಲ ಹಕ್ಕಿ
Swallow ಕವಲು ತೋಕೆ
Shearwater ತಿರಂಗಕಾರ
Stork (white) ಬಿಳೀ ಕೊಕ್ಕರೆ
Stork (white necked) ಬಿಳೀ ಕತ್ತಿನ ಕೊಕ್ಕರೆ ; ಕಂಚುಗಾರ ಕುಕ್ಕ,
Starling ಕಬ್ಬಕ್ಕಿ
Teal ದಾಸಗೋರೆ, ಚರಲೆ
Tailor Bird ಸಿಂಪಿಗ ಹಕ್ಕಿ
Tit ಟುವ್ವಿ, ಪಿದ್ದಿ
Tern ಕಡಲ ಹಕ್ಕಿ
Turkey ಟರ್ಕಿ ಕೋಳಿ
TreeCreeper ಹಂಬಕ್ಕಿ
Tree pie ಬಿಳೀ ಕೋಗಿಲೆ ; ಕಳ್ಳ ಹಕ್ಕಿ ; ಮರ ಹಕ್ಕಿ
Vulture ರಣಹದ್ದು
Vulture (king) ದೊಡ್ಡ ರಣಹದ್ದು
Weaver bird ಗೀಜಗ
Wagtail (ಬೆಟ್ಟಹಕ್ಕಿ) ಕುಂಡೆಕುಸುಕ, ದಾಸರ ಹಕ್ಕಿ (ಸಿಪಿಲೆ)
Wader ನೀರಕ್ಕಿ
Wren ಕಿರು ರೆಕ್ಕೆ
Warbler ಉಲಿಯಕ್ಕಿ, ಬಟಾಣಿ ಹಕ್ಕಿ
Woodcock ಕಾಡುಕೋಳಿ
Woodpecker ಮರಕುಟುಕ
Water hen ನೀರುಕೋಳಿ

ಕಿಟೆಲ್‌ರ ಕೋಶದಲ್ಲಿ ಉಕ್ತವಾಗಿರುವ ಪಕ್ಷಿನಾಮಗಳು

ಅಜನ ಪತ್ರೆ	ಅಮಳ್ವಕ್ಕಿ	ಆಡೇಲು
ಅಭ್ರಕ	ಅಸಿತಖಗ	ಆಳಂಕೂಗಿನ ಹಕ್ಕಿ

ಉಚ್ಚ ಪುಚ್ಚ
ಉಡುಪ
ಉರುಳಿಗ
ಉಲಿವ
ಉಲೂಕ
ಎಣೆವಕ್ಕಿ
ಎಲರುಣಿತಗೆಯಂ
ಎಳೆ
ಒರಲೆ
ಕಂಕ
ಕಕ್ಕರಿ
ಕಕೂಟ
ಕಕೊಂಚೆ
ಕನ್ನಡವಕ್ಕಿ
ಕಪೋತ
ಕಬ್ಬಕ್ಕಿ
ಕರ್ಬಕ್ಕಿ
ಕರಾಟ
ಕರೇಲಕ್ಕಿ
ಕರೀ ಕಾಗಿ
ಕರಿ ಗುಬ್ಬಿ
ಕರಿಯ ಹಕ್ಕಿ
ಕಲಂಬ
ಕಲವಿಂಕ
ಕಲಹಂಸ
ಕಲ್ಲಂಚೆ
ಕಲಾಪಿ
ಕಲಿಂಗ
ಕಲ್ಲು ಹೋಳಂಕ
ಕವಿ
ಕಾಕ
ಕಾಕಾರಿ
ಕಾಗೆ
ಕಾಡ ತುಂಬೆ
ಕಾಡುಕೊಕ್ಕರೆ
ಕಾಡುಕೋಳಿ
ಕಾಡು ಬಕ
ಕಾಬುರಲೆ
ಕಿಕಿ
ಕಿಕೀದಿವ
ಕಿಡರ ಪಕ್ಷಿ
ಕಿರಶಾರು
ಕಿರೀಟಚಾಪ
ಕಿರುಟಿಗ (ಕಿರುಟಿಗೆ)
ಕಿರುಪಕ್ಷಿ
ಕಿಲರ್ವಕ್ಕಿ
ಕೀಚಕ್ಕಿ
ಕೀಚುಬಾಂಡ ಹಕ್ಕಿ
ಕೀರ
ಕುಕ್ಕುಟಿ
ಕುಕಿಲ
ಕುಕ್ಕಿಲ್
ಕುಕ್ಷಿಕ
ಕುಕ್ಕು
ಕುಕ್ಕುಟ
ಕುಕ್ಕುಭ
ಕುಟರ
ಕುತಾಕು
ಕುರರ (ಕುರವಕ್ಕಿ)
ಕುರರಿ
ಕುರವಿ
ಕುರಿಗಿಲ್
ಕ್ರುಂಚ
ಕ್ಷುದ್ರಪಕ್ಷಿಕ
ಕೂಕಲಮೂಗ ಪಕ್ಷಿ
ಕೂಕಲು
ಕೂರಿ
ಕೃಕರ
ಕೃಷ್ಣ ಕಾಕ
ಕೃಕವಾಕು
ಕೆಂಗಣ್ಣ
ಕೆಂಗಣ್ಣಕ್ಕಿ
ಕೆಂಗಣ್ಣಲರ್ವಕ್ಕಿ
ಕೆಂಪುಗಿಳಿ
ಕೆಂಪುಲಾವಗ
ಕೆಂಬೂತ
ಕೇಕಿ
ಕೇರ
ಕೊಕ್ಕರಿ
ಕೊಟ್ಟುಕ
ಕೊರಕಂಚೆ
ಕೊಳದ ಹಕ್ಕಿ
ಕೊಳರ್ವಕ್ಕಿ
ಕೋಕ
ಕೋಕಿಲ, ಕೋಗಿಲ
ಕೋಗಿಲೆ
ಕೋಟ
ಕೋಯಿಷ್ಟಿ
ಕೌಣಿಕ
ಕ್ರೋಶ
ಕ್ರೌಂಚ
ಖಗ
ಖಗೇಶ್ವರ
ಗಕ್ಕು
ಗರುಡ
ಗವುಜಲ

ಗಿಂಚಲು
ಗಿಜಗಾರ
ಗಿಡುಗ
ಗಿಣಿ
ಗಿರೇಚಾಟ
ಗಿಳಿ
ಗೀಜಗ
ಗುಬ್ಬಚ್ಚಿ
ಗುಂಬ್ಬಿ
ಗುವ್ಮ್ರ
ಗುಂವ್ಮ್ರವಕ್ಕಿ
ಗುರಭಿ
ಗೂಕ
ಗೂಗೆ
ಗೃಧ್ರ
ಗೃಹಬಲಿ
ಗೆಜೆವಕ್ಕಿ
ಗೆಡವಕ್ಕಿ
ಗೆನಗಾ
ಗೇಹೇನದಿ
ಗೇಹೇಳೂರ
ಗೊರವಂಕ
ಚಂಚುಕ
ಚಕ್ಕ
ಚಕ್ಕವಕ್ಕಿ
ಚಕ್ರಪಕ್ಷಿ
ಚಕ್ರಯಂಂಗ
ಚಕ್ರವಾಕ
ಚಕೋರ
ಚಚ್ಚುಕ
ಚಟಕ
ಚಾದಗೆವಕ್ಕಿ

ಚಿತ್ರಾವಿಹಂಗ
ಚಿನಕುರಳಿ
ಚಿಲಕೆ
ಚಿಲ್ಲ
ಚೆಂಬೂತ
ಜಕ್ಕವಕ್ಕಿ
ಜಕ್ಕಿ
ಜಡ್ಡು
ಜಡ್ಡುವಕ್ಕಿ
ಜಲಪಕ್ಷಿ
ಜಾನಾಚಾರ್ಯ
ಜೀವಂಜೀವ
ಜೊನ್ನದ ಪಕ್ಕಿ
ಜೊನ್ನವಕ್ಕಿ
ಜೋಡುವಕ್ಕಿ
ಡೇಗೆ
ತವಪಕ್ಷಿ
ತಿತ್ತಿರಿ
ತುಂಬಿ
ತೇಣಿ
ತೇಣಿವಕ್ಕಿ
ದಂಪತಿವಕ್ಕಿ
ದೃಷದಾಶನ
ದ್ರೋಣ
ಧ್ವಾಂಕ್ಷ
ಧ್ವಾಂಕ್ಷಾರಾತಿ
ಧೂಮ್ಯಾಟ
ನವಿಲು
ನಿರ್ನಾಕ್ಕಿ
ನಿರ್ಮೋಳಾತಿ
ನಿಶಾಟನ
ನೀರ್ಕುಟಕ

ನೀರ್ಗಾಗೆ
ನೀಲಕಂಠ
ನೀಲಿಕೆ
ನೀಳಜ
ನೃಪಖಗ
ನೆಲಯುಕ್ಕ
ಪಂಜರಪಕ್ಷಿ
ಪಂಡಿತವಕ್ಕಿ
ಪಂಸೆ
ಪಕ್ಷಿಜ್ಯೇಷ್ಠ
ಪಡಿಯಂಜಿವಕ್ಕಿ
ಪತಂಗ
ಪತತ
ಪತ್ರಿ
ಪನ್ನಗಾರಿ
ಪಕಡೆ
ಪರಪುಟ್ಟ
ಪರಮೆ
ಪರ್ವತಹಕ್ಕಿ
ಪರೇಷ್ಟಿ
ಪಸುಂಬ
ಪ್ರಚಲಾಕಿ
ಪಾರಾವತ
ಪಾರಿವ
ಪಾರಿವಾಳ
ಪಾಲೆ
ಪ್ರಾಚಿಕೆ
ಪಿಂಗಲಿ
ಪಿಕ
ಪಿಕಲಾರಿ
ಪಿಕ್ಕುಳಿಕೆ
ಪುರುಪಕ್ಷ

ಪುರುಳಿ
ಪುಷ್ಕರಾಹ
ಪೇಚಕ
ಪೊಕ್ಕುಳ
ಪೊಕ್ಕುಲಿವಕ್ಕಿ
ಪೊಣರ್ವಕ್ಕಿ
ಬಂಭಕ
ಬಲಾಕ
ಬಲಿಭುಜ್
ಬರ್ಹಿ
ಬಿಂಗ
ಬಿಸಕಂಠ
ಬಿಸಲ್
ಬಿಸುಲ್ವಕ್ಕಿ
ಬೆಚ್
ಬೆಟ್ಟಕ್ಕಿ
ಬೆಳ್ಳಕ್ಕಿ
ಭರದ್ವಾಜ
ಭಾಸ
ಭುಜ್
ಭೃಂಗ
ಮದ್ಗು
ಮಯೂರ
ಮರಕುಟುಕ
ಮಲ್ಲರಿ
ಮುಂಜಕ್ಷಯು
ಮುಣ್ಣು ಮುಳುಕ
ಮೈನಾ
ಮ್ವೈನಾಗ್
ಮೋರ
ಯಂಕ್ಷ

ರಕ್ತಚ್ಛದ
ರಥಾಂಗ
ಲಟ್ಯೈ
ಲಾವಕ
ಲಾವಿಗೆ ಹಕ್ಕಿ
ಲೋಹಪೃಷ್ಠ
ವಕ
ವಲಿಯುನ ಹಕ್ಕಿ
ವಸಂತದೂತ
ವಾಯಸ
ವಾಯಸಾರಾತಿ
ವ್ಯಾಕುಲಿ
ವ್ಯಾಘ್ರಾಟಿ
ವಿಷವಂತ್ರಿಪೀಡನ
ವೃಷಭವಾಹಿನಿ
ಶಕುಂತ
ಶತಪತ್ರ
ಶತಪತ್ರಕ
ಶರವೈರಿ
ಶಶಾದನ
ಶ್ಯಾಮಕಂಠ
ಶಿಖರಿ
ಶಿವ
ಶುಕ
ಶೃಂಗಿಣಿ
ಶ್ಯೇನ
ಶ್ವೇತಗರುಡ
ಸರ್ಪಾರಿ
ಸರಕುಟವಕ್ಕಿ
ಸಕುನವಕ್ಕಿ
ಸಲಕಿ ಬಾಯಿ ಹಕ್ಕಿ

ಸಾರಸ
ಸುಕ
ಸೃಪಾಟಿ
ಸೋಗೆ
ಸೋರೆಹಕ್ಕಿ
ಸ್ತೋಕಕ
ಸೌರಭೇಯಿ
ಹಂಗಶಕುನದ ಹಕ್ಕಿ
ಹಂಜರವಕ್ಕಿ
ಹದಗ
ಹದ್ದು
ಹರಡೆ
ಹರಡೇಹಕ್ಕಿ
ಹರಿ
ಹಸುಬ
ಹ್ರಸ್ವಿ
ಹಾರೀತ
ಹಾತ
ಹಾಲವಕ್ಕಿ
ಹಾಲುವಕ್ಕಿ
ಹಾಲುವಾಣ
ಹಾಲೆ ಹಕ್ಕಿ
ಹಿಂಗುರು
ಹಿಗಿಲಿ
ಹುಂಜ
ಹೃಸ್ಕಿ
ಹೆಗ್ಗಾರ
ಹೆಟ್ಟಿಗೆ
ಹೆಡ್ಡೇಮೂಗಕ್ಕಿ
ಹೊಗೆ
ಹೊರಸು

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಭಂಡಾರ
ಬೆಂಗಳೂರು-19

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥಭಂಡಾರ
ಬೆಂಗಳೂರು-೧೯

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೦